ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ

(ಪಿಎಚ್.ಡಿ) ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಕಾವೇರಿ ಪಿ. ಸಾಗರ

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಸಹಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೨

502

ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ

(ಪಿಎಚ್.ಡಿ) ಡಾಕ್ಟರ್ ಆಫ್ ಫಿಲಾಸಫಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಕಾವೇರಿ ಪಿ. ಸಾಗರ

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಸಹಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

ಪ್ರಮಾಣ ಪತ್ರ

ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಡಾ. ಶಿವಾನಂದ ಎಸ್. ವಿರಕ್ತಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 5/11/2012
ಸ್ಥಳ : ವಿದ್ಯಾರಣ್ಯ

(ಕಾವೇರಿ ಪಿ. ಸಾಗರ)
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ದೃಢೀಕರಣ ಪತ್ರ

ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಕಾವೇರಿ ಪಿ. ಸಾಗರ** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 5/11/12
ಸ್ಥಳ : ವಿದ್ಯಾರಣ್ಯ

(ಡಾ. ಶಿವಾನಂದ ಎಸ್. ವಿರಕ್ತಮಠ)
ಮಾರ್ಗದರ್ಶಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

೧.೦. ಪ್ರಸ್ತಾವನೆ

"ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ". ಸಮೂಹ ಮಾಧ್ಯಮಗಳಲ್ಲಿ ದೂರದರ್ಶನವು ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿರುವುದಕ್ಕೆ, ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳು ಮತ್ತು ಜಾಹೀರಾತುಗಳು ಪ್ರಮುಖ ಕಾರಣಗಳಾಗಿವೆ ಎನ್ನಬಹುದು. ಈ ಧಾರಾವಾಹಿಗಳನ್ನು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಪರಿಗಣಿಸಿದರೆ, ಇಂದು ದೂರದರ್ಶನದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅಂದಿನ ಕಾಲಘಟ್ಟದಲ್ಲಿ ಇದ್ದ ಜನಪ್ರಿಯತೆಗಿಂತ ಹೆಚ್ಚಿನ ಜನಪ್ರಿಯತೆ ದೂರದರ್ಶನ ಇಂದು ಪಡೆಯುತ್ತಿದೆ. ಅಂದಿನ ಕಾಲದಲ್ಲಿ ಪ್ರಸಾರವಾಗುತ್ತಿರುವಂತಹ ಧಾರಾವಾಹಿಗಳಲ್ಲಿ ಒಂದು ಸಾಮಾಜಿಕ ಕಳಕಳಿಯನ್ನು ಹೊಂದಿರುವ ವಿಷಯವನ್ನು ಕುರಿತು ಚಿತ್ರಿಸಿದರೂ ಕೂಡ ಧಾರಾವಾಹಿಗಳು ಬುದ್ಧಿಜೀವಿಗಳ ಸೂಕ್ಷ್ಮವಾದ ವಿರೋಧಕ್ಕೆ ಒಳಗಾಗುತ್ತಿದ್ದವು. ಆದರೆ ಇಂದು ಪ್ರಸಾರಗೊಳ್ಳುತ್ತಿರುವ ಧಾರಾವಾಹಿಗಳು ಒಂದು ಸಾಮಾಜಿಕ ಕಳಕಳಿಯನ್ನು ಹೊಂದಿರುವುದಕ್ಕಿಂತ ಆಧುನಿಕತೆಯ ವಾಹಕವಾಗಿ, ಸಮಾಜ ಎಂದರೆ ಹೀಗೆ ಇರಬೇಕು, ಮಹಿಳೆಯರೆಂದರೆ ಹೀಗೆಯೇ ಇರಬೇಕೆಂಬ ನೀತಿಯನ್ನು ಪರೋಕ್ಷವಾಗಿ ಸಮಾಜದಲ್ಲಿ ನೆಲೆಯೂರುವಂತೆ ಮಾಡುತ್ತಿವೆ. ದೂರದರ್ಶನವು ಇಂದು ಯಾರ ವಿರೋಧಕ್ಕೂ ಕಿವಿಗೊಡದೆ ತಾನು ನಡೆದದ್ದೆ ದಾರಿ ಎಂಬಂತೆ ಮುಂದುವರೆಯುತ್ತಿದೆ. ದಿನನಿತ್ಯ ಸಾವಿರಾರು ಜನರನ್ನು ತಲುಪುವ ದೂರದರ್ಶನದಲ್ಲಿ ಪ್ರಸಾರಗೊಳ್ಳುತ್ತಿರುವ ಕಾರ್ಯಕ್ರಮಗಳು ಮತ್ತು ಧಾರಾವಾಹಿಗಳು ಒಂದು ವರ್ಗದ, ಒಂದು ಸಮುದಾಯದವರ ಮನಸ್ಥಿತಿಯನ್ನು ಮತ್ತು ಯೋಚನಾಶಕ್ತಿಯನ್ನೇ ಬದಲಾಯಿಸಿಬಿಡುವಂತಹ ಸಾಮರ್ಥ್ಯ ಹೊಂದಿರುತ್ತದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ದೂರದರ್ಶನವು ಇಂದು ಪ್ರತಿಯೊಬ್ಬರ ಮನೆಯಲ್ಲಿಯೂ ಕಂಡುಬರುವಂತಹ ಸಾಧನ ವಾಗಿದೆ. ಒಂದು ಕಾಲದಲ್ಲಿ ಕೇವಲ ಮೇಲ್ವರ್ಗದವರ ಮತ್ತು ಉಳ್ಳವರ ಸ್ವತ್ತಾಗಿದ್ದ ಟಿವಿ ಇಂದು ಯಾವುದೇ ಮಾನದಂಡವಿರದೆ ಬಡವ-ಶ್ರೀಮಂತ ಶಿಕ್ಷಿತ-ಅಶಿಕ್ಷಿತ, ಜಾತಿ, ಅಂತಸ್ತು ಇವುಗಳೆಲ್ಲವನ್ನೂ ದಾಟಿ ಕೆಲವೊಂದು ಬಡಕುಟುಂಬಗಳನ್ನು ಹೊರತುಪಡಿಸಿದರೆ ಉಳಿದಂತೆ

ಎಲ್ಲರ ಮನೆಯಲ್ಲಿಯೂ ಸ್ಥಾಪಿತವಾಗಿರುವುದನ್ನೂ ಕಾಣುತ್ತೇವೆ. ಇಂದು ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳ ನಿರ್ಮಾಣವನ್ನು ಗಮನಿಸಿದರೆ ಅವು ಮುಕ್ತವಾಗಿ ಆಗುವುದಿಲ್ಲ. ಯಾವುದೇ ಒಂದು ವಸ್ತುವಿನ ಉತ್ಪಾದನೆ ಮಾಡುವಾಗ ಆ ವಸ್ತುವಿಗೆ ಸಂಬಂಧಿಸಿದಂತಹ ಬಂಡವಾಳ, ಮಾರುಕಟ್ಟೆ, ತಂತ್ರಜ್ಞಾನ, ವಿಜ್ಞಾನ ಅದರ ಪ್ರಯೋಜನಗಳು ಮತ್ತು ಪರಿಣಾಮಗಳನ್ನು ಕುರಿತು ಚಿಂತನೆ ಮಾಡಿ ಉತ್ಪಾದಿಸಬೇಕಾಗುತ್ತದೆ. ಹಾಗೆಯೇ ಧಾರಾವಾಹಿಗಳನ್ನು ನೋಡುವವರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಾಣ ಮಾಡಬೇಕಾಗುತ್ತದೆ. ನಿರ್ಮಾಣಗೊಳ್ಳುತ್ತಿರುವ ಧಾರಾವಾಹಿಗಳು ಹಲವು ಕಥಾವಸ್ತುವನ್ನಿಟ್ಟುಕೊಂಡು ನಿರ್ಮಾಣಗೊಳ್ಳುತ್ತವೆ. ಅದರಲ್ಲಿ ಚಿತ್ರಿತವಾಗುವ ಧಾರಾವಾಹಿಗಳಲ್ಲಿ ಮಹಿಳೆಯರನ್ನು ಮತ್ತೆ ಅದೇ ಎರಡನೇ ದರ್ಜೆಯವಳನ್ನಾಗಿಯೇ ಚಿತ್ರಿಸಲಾಗುತ್ತಿದೆ. ಕಾಲ ಬದಲಾದರೂ ಕೂಡ ಹೆಣ್ಣನ್ನು ಸಾಂಪ್ರದಾಯಿಕವಾಗಿ ಕಟ್ಟಿಕೊಟ್ಟಿರುವ ಸ್ಥಿರ ಮಾದರಿಯ ಪಾತ್ರಗಳಾದ ತಾಯಿ, ಮಗಳು, ಸೋದರಿ, ಹೆಂಡತಿ, ಯುವತಿ ಹೀಗೆ ಅಸಹಾಯಕ ಮತ್ತು ಸಾಂಪ್ರದಾಯಿಕ ಸ್ಥಿರ ಮಾದರಿಯ ಮಹಿಳಾ ಚಿತ್ರಣವನ್ನೇ ನೀಡುತ್ತಿವೆ. ಈ ಒಂದು ಧಾರಾವಾಹಿಗಳಲ್ಲಿ ಮಹಿಳೆಯರನ್ನು ಚಿತ್ರಿಸುವವರೆಲ್ಲರೂ ಪುರುಷರೇ ಆಗಿರುವುದರಿಂದ ಹೆಣ್ಣನ್ನು ವಸ್ತುವಿನಂತೆ ಕೌಟುಂಬಿಕ ಪಾತಳಿಯಲ್ಲಿಯೇ ಕಾಣುವ ಮನೋಭಾವವನ್ನು ಮೂಡಿಸುತ್ತಿದ್ದಾರೆ.

ಸಮೂಹ ಮಾಧ್ಯಮಗಳು ಹೆಣ್ಣನ್ನು ಹೆಚ್ಚು ಹೆಚ್ಚು ಅಶ್ಲೀಲವಾಗಿ, ತುಂಡು ಬಟ್ಟೆಗಳಲ್ಲಿ ತೋರಿಸುವ ಮೂಲಕ ಅವಳನ್ನು ಭೋಗದ ವಸ್ತುವಿನಂತೆ ಕಾಣುವ ಮನಸ್ಥಿತಿಯನ್ನು ಸೃಷ್ಟಿಸುವಲ್ಲಿಯೂ ಕೂಡಾ ಹಿಂದೆ ಸರಿಯುವುದಿಲ್ಲ. ಇದು ನಮ್ಮ ಸಮಾಜ ವ್ಯವಸ್ಥೆಯಲ್ಲಿ ಜಾರಿಯಲ್ಲಿರುವ "ಸೆಕ್ಸಿಸ್ಟ್" ಆದ ದೃಷ್ಟಿಕೋನವನ್ನೇ ಇಲ್ಲಿ ಬಿಂಬಿಸಲಾಗುತ್ತದೆ. ಹಾಗೆಯೇ ಧಾರಾವಾಹಿಗಳಲ್ಲಿಯೂ ಕೂಡಾ ಹೆಣ್ಣು ಕೇವಲ ಒಬ್ಬ ಪಾತ್ರದಾರಳು. ಅವಳ ಉಡುಗೆ-ತೊಡುಗೆಯಿಂದ ಹಿಡಿದು ಅವಳಿಗೆ ಭಾಷೆಯನ್ನು ರೂಪಿಸುವವರು ಪುರುಷರೇ ಆಗಿದ್ದಾರೆ. ಹೀಗೆ ನಟನೆಯ ಹೆಸರಿನಲ್ಲಿ ಅವಳ ಪಾತ್ರ ಗೌಣವೇ ಆಗಿರುತ್ತದೆ. ಧಾರಾವಾಹಿಗಳು ಸಮಾಜದಲ್ಲಿರುವುದನ್ನೇ ಸ್ಥಿರೀಕರಿಸುತ್ತವೆ. ಧಾರಾವಾಹಿಗಳಲ್ಲಿ ತೋರಿಸುವುದನ್ನು ಸಮಾಜ ಒಪ್ಪಿಕೊಂಡು ದೃಢೀಕರಿಸುತ್ತದೆ. ಸಮಾಜದಲ್ಲಿ ಸ್ಥಾಪಿತವಾಗಿರುವ ಲಿಂಗತಾರತಮ್ಯವನ್ನು ಮತ್ತು ಲಿಂಗಶ್ರೇಣೀಕರಣವನ್ನು ನಿರ್ಮೂಲನಗೊಳಿಸಿ ಸಮಾನತೆಯನ್ನು ಸ್ಥಾಪಿಸಬೇಕಾದ ಸಮೂಹ ಮಾಧ್ಯಮಗಳು ಪ್ರಸ್ತುತ ದಿನಗಳಲ್ಲಿ ತನ್ನ ಗುರಿ, ಉದ್ದೇಶಗಳನ್ನು ಮರೆತು ತನ್ನ ದಿಕ್ಕನ್ನು ಬದಲಿಸಿಕೊಂಡಿರುವುದರ ಜೊತೆಗೆ ಸಮಾಜಕ್ಕೆ ಧಾರಾವಾಹಿಗಳ ಮೂಲಕ ದಿಕ್ಕು ತಪ್ಪಿಸುತ್ತಿರುವುದನ್ನು ಕಾಣಬಹುದು. ಇದು ಸಮಾಜವನ್ನು ರೋಗಗ್ರಸ್ತವಾದ ಸ್ಥಿತಿಗೆ ದೂಡಲು ಕಾರಣವಾಗುತ್ತಿದೆ. ಹೀಗೆ ಅನಾರೋಗ್ಯಕರ ವಾತಾವರಣವನ್ನು ಈ ಧಾರವಾಹಿಗಳು ಸೃಷ್ಟಿಸುತ್ತಾ ಬರುತ್ತಿವೆ.

ಪ್ರಸ್ತುತ ದಿನಗಳನ್ನು ಪರಿಗಣಿಸಿದರೆ ಸಮೂಹ ಮಾಧ್ಯಮಗಳು ಇಂದು ವಿಸ್ತಾರವಾದ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಕ್ಕೆ ಹೋಲಿಸಿ ನೋಡಿದರೆ, ಇಪ್ಪತ್ತನೆಯ ಶತಮಾನದಲ್ಲಿ ಅತ್ಯಂತ ಜನಪ್ರಿಯತೆಯನ್ನು ಪಡೆದು ಕೊಳ್ಳುತ್ತಿವೆ. ಈ ಮಾಧ್ಯಮದಲ್ಲಿ ದೂರದರ್ಶನವೂ ಕೂಡ ಒಂದು. ಈ ಎಲ್ಲಾ ಸಮೂಹ ಮಾಧ್ಯಮಗಳು ಮುಖ್ಯವಾಗಿ ಸಂವಹನ ಕ್ರಿಯೆಯನ್ನು ಪ್ರತಿಪಾದಿಸುತ್ತವೆ. ಸಂವಹನದ ಮೂಲ ಉದ್ದೇಶ, ಇಬ್ಬರ ನಡುವೆ ಸಂವಹನವನ್ನು ಏರ್ಪಡಿಸುವುದೇ ಆಗಿದೆ. "ಸಂವಹನ" ಎಂಬ ಪದವು ಇಂಗ್ಲೀಷನ ಕಮ್ಯೂನಿಕೇಶನ್ (communication) ಪದದ ಸಮಾನಾರ್ಥದಲ್ಲಿ ಉಪಯೋಗಿಸಲಾಗುತ್ತದೆ. ಇಂಗ್ಲೀಷ್ ಪದದ ಮೂಲ communies ಅದರ ಅರ್ಥ ಸಮಾನ ವಾಗಿರುವ ಅಂಶಗಳನ್ನು ಕಂಡುಕೊಳ್ಳುವುದು, ಇರುವುದನ್ನು ಹಂಚಿಕೊಳ್ಳುವುದು ಎಂದು ಅರ್ಥೈಸಬಹುದು. ಜನಾಭಿಪ್ರಾಯ, ಸಮಾಚಾರ, ತಿಳುವಳಿಕೆ, ಭಾವನೆಗಳನ್ನು ಸಂಕೇತ-ಪ್ರತೀಕಗಳ ಮೂಲಕ ವಿನಿಮಯ ಮಾಡಿಕೊಳ್ಳುವುದು ಸಂವಹನವಾಗಿದೆ.

ಸಂವಹನವನ್ನು ಕುರಿತು ವಿದ್ವಾಂಸರು ನಿರ್ವಚಿಸಿದ ಅರ್ಥ, ವ್ಯಾಖ್ಯೆಗಳನ್ನು ಗಮನಿಸುವುದಾದರೆ 'ಸಂವಹನ ಇಬ್ಬರು ವ್ಯಕ್ತಿಗಳ ಮಧ್ಯ ನಡೆಯುವ ವಿಚಾರಗಳ ವಿನಿಮಯ, ಭಾವನೆಗಳ ವಿನಿಮಯ ಪರಸ್ಪರರ ಬಗ್ಗೆ ಅರಿತುಕೊಳ್ಳುವುದು. ಸಂವಹನ ಎಂದಾಗ ಅದು ಕೇವಲ ಪುರುಷರ ನಡುವೆ ನಡೆಯುವ ಕ್ರಿಯೆ ಆಗಿದೆ. ಇದು ವಾಸ್ತವ ಬದುಕಿಗೆ ಸಮೀಕರಿಸಿ ನೋಡಿದಾಗ ಮಹಿಳೆಯರು ಈ ಸಂವಹನ ಕ್ರಿಯೆಯಲ್ಲಿ ಪಾಲ್ಗೊಳ್ಳುವುದು ಕಡಿಮೆ ಎಂದು ಹೇಳಬಹುದು. ಇಲ್ಲಿ ಸಂವಹನ ಮತ್ತು ಸಂಪರ್ಕವೇರ್ಪಡುವ ವ್ಯಕ್ತಿಗಳು ಪುರುಷರೇ ಆಗಿರುತ್ತಾರೆ. ಸಂವಹನ ಮತ್ತು ಸಂಪರ್ಕವೇರ್ಪಡುವಲ್ಲಿ ಮಹಿಳೆಯರಿಗೆ ಸ್ಥಾನವಿಲ್ಲ. ಪುರುಷ ನಿರ್ಮಿಸಿದ ಈ ಸಂವಹನ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಭಾಷೆ ಇಲ್ಲದ ಹಾಗೆ ನಿರ್ವಚಿಸಲಾಗಿದೆ. ಭಾವನೆಗಳನ್ನು, ವಿಚಾರಗಳನ್ನು ಹಂಚಿಕೊಳ್ಳುವ ಸಂವಹನ ಮಹಿಳೆಯರ ಬದುಕಿನಲ್ಲಿ ಎಷ್ಟರಮಟ್ಟಿಗೆ ಅಳವಡಿಕೆಯಾಗಿದೆ ಎಂಬ ಪ್ರಶ್ನೆಗೆ ಬಹುಶಃ ಉತ್ತರ ಸಿಗಲಿಕ್ಕಿಲ್ಲ. ನಮ್ಮ ಸಮಾಜದಲ್ಲಿ ಪುರುಷನ ಪಡಿಯಚ್ಚಾಗಿ, ಅವನ ಮೂಲಕವೇ ಗುರುತಿಸಿಕೊಳ್ಳುವ, ಸಂದರ್ಭಗಳಿರುವಾಗ, ಮಹಿಳೆಗೆ ಯಾವುದೇ ಮಾತು ಇಲ್ಲ, ಯಾವುದೇ ಭಾಷೆ ಇಲ್ಲ, ಮಹಿಳೆಗೆ ಇರುವ ಭಾಷೆ ಅದುವೇ ಮೌನದ ಭಾಷೆ, ಗುಲಾಮನ ಭಾಷೆ, ವಿಚಾರ ವಿನಿಮಯಗಳಿಲ್ಲ, ಭಾವನೆಗಳನ್ನು ಹಂಚಿಕೊಳ್ಳಲು ಒಂದು ಮಾಧ್ಯಮವಿಲ್ಲ. ಇಂತಹ ಪರಿಸ್ಥಿತಿಗಳಿರುವುದರಿಂದ ಸಂವಹನ ಕೇವಲ ಏಕಾಕಾರವಾದ ಅರ್ಥಕೊಡುವ ಮಾಧ್ಯಮವಾಗಿ ನಿಲ್ಲುತ್ತದೆ ಮತ್ತು ಪುರುಷನಿಗೆ ಸೀಮಿತವಾದ ಅರ್ಥವನ್ನು ಅದು ಪ್ರತಿಪಾದಿಸುತ್ತದೆ. ಮಹಿಳೆಯರ ವಿಷಯಕ್ಕೆ ಬಂದರೆ ಅಲ್ಲಿ ಮೌನ ಮನೆಮಾಡಿರುತ್ತದೆ. ಇದೇ ಧೋರಣೆಯನ್ನು ಸಮೂಹ ಮಾಧ್ಯಮಗಳೂ ಕೂಡಾ ಅನುಸರಿಸಿಕೊಂಡು ಬರುತ್ತಲಿರುವುದನ್ನು ಕಾಣಬಹುದು.

ಸಮೂಹ ಮಾಧ್ಯಮಗಳು ಸಂವಹನವನ್ನೇರ್ಪಡಿಸುವ ಮಾಧ್ಯಮಗಳಾಗಿವೆ. ಈ ಸಂವಹನದಲ್ಲಿ ಮಹಿಳೆಯರು ಮಾಯವಾಗುತ್ತಿದ್ದಾರೆ. ಸಮೂಹ ಮಾಧ್ಯಮಗಳಲ್ಲಾಗುತ್ತಿರುವ ಬೆಳವಣಿಗೆಗಳಿಂದ ಮಹಿಳೆಯರು ಇನ್ನೂ ಹೆಚ್ಚಿನ ದಮನಕ್ಕೆ, ತಾರತಮ್ಯಕ್ಕೆ ಒಳಗಾಗುತ್ತಿರುವುದು ತೀರಾ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಮಾಧ್ಯಮಗಳು ಅದರಲ್ಲೂ ದೂರದರ್ಶನ ದಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಇದ್ದರೂ, ಅಲ್ಲಿ ಪುರುಷರ ಪ್ರಾಬಲ್ಯ ಹೆಚ್ಚಾಗಿರುತ್ತದೆ. ಧಾರಾವಾಹಿಗಳ ವಿಷಯಕ್ಕೆ ಬಂದರೆ, ಧಾರಾವಾಹಿಗಳ ಕಥಾವಸ್ತು ಹೆಣ್ಣಿನ ಸುತ್ತಮುತ್ತಲೂ ನಡೆಯುತ್ತಿರುತ್ತದೆ. ಅವಳ ಕಥೆಯನ್ನೇ ಕೇಂದ್ರವಾಗಿಟ್ಟುಕೊಂಡು ನಿರ್ಮಾಣ ಮಾಡಲಾಗುತ್ತದೆ, ಆದರೆ ಅಲ್ಲಿ ಪುರುಷ ನಿರ್ದೇಶಕರು ನೋಡುವ ದೃಷ್ಟಿಕೋನವೇ ಇರುವುದರಿಂದ ಸಮಾಜದಲ್ಲಿ ಅಸ್ತಿತ್ವವಿರುವ ಮೌಲ್ಯಗಳನ್ನೇ ಬಿತ್ತುವ ಪ್ರಯತ್ನಗಳು ಇಲ್ಲಿ ನಡೆದಿರುತ್ತವೆ. ಇಂತಹ ಸಂದೇಶಗಳನ್ನು ಹೊತ್ತು ತರುವ ಧಾರಾವಾಹಿಗಳನ್ನು ವೀಕ್ಷಿಸುವ ಮಹಿಳೆಯರ ಮನೋಲೋಕದ ಮೇಲೆ ಬೀರುವ ಪರಿಣಾಮಗಳೆಂತವು? ಯಾವ ವಿಷಯಗಳು ಪ್ರಾಧಾನ್ಯತೆ ಪಡೆದುಕೊಳ್ಳುತ್ತವೆ? ಯಾಕೆ ಪಡೆದುಕೊಳ್ಳುತ್ತವೆ? ಅದರ ಹಿಂದಿರುವ ಉದ್ದೇಶ ಮತ್ತು ರಾಜಕಾರಣ ಏನು? ಅರ್ಧಗಂಟೆಯ ಧಾರಾವಾಹಿ ವೀಕ್ಷಿಸುವ ವೀಕ್ಷಕರ ಮೇಲೆ ಅದು ಬೀರುವ ಪ್ರಭಾವ ಎಂತಹದು? ಎಂಬಿತ್ಯಾದಿ ಪ್ರಶ್ನೆಗಳು ಮೊದಲು ಹುಟ್ಟಿಕೊಳ್ಳುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಉದ್ದೇಶ ನನ್ನ ಅಧ್ಯಯನದ್ದಾಗಿದೆ. ಸಮಾಜದ ಸ್ವಾಸ್ಥ್ಯವನ್ನು ತಪ್ಪು ದಾರಿಗೆ ಎಳೆಯುತ್ತಿರುವ ಈ ಬಗೆಯ ಧಾರಾವಾಹಿಗಳ ಕುರಿತು ಅನೇಕ ತೆರನಾದ, ಚಿಂತನೆಗಳು, ಚರ್ಚೆಗಳು, ಅಧ್ಯಯನಗಳು ನಡೆಯಬೇಕಾಗಿರುವುದನ್ನು ಈ ಅಧ್ಯಯನ ಗಮನಿಸಿ ಆ ನಿಟ್ಟಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಲು ಬಯಸುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸಂಶೋಶಧನೆಯು ತನ್ನ ಮಿತಿಯೊಳಗೆ ಕೆಲ ಹೊಸ ಹೊಳಹುಗಳನ್ನು ಹುಟ್ಟುಹಾಕುವಲ್ಲಿ ಒಂದು ಮಾದರಿ ಪ್ರಯತ್ನವನ್ನು ಮಾಡಲು ಬಯಸಿದೆ.

೧.೧. ಅಧ್ಯಯನದ ಉದ್ದೇಶ

ಸಮೂಹ ಮಾಧ್ಯಮಗಳಲ್ಲಿ ಹೆಚ್ಚಿನ ಶ್ರೋತೃಗಣವನ್ನು ಹೊಂದಿರುವ ಮಾಧ್ಯಮ ದೂರದರ್ಶನ. ಈ ಮಾಧ್ಯಮ ಪ್ರಾರಂಭವಾದ ಹೊಸತರಲ್ಲಿ ಸುದ್ದಿ, ಸಂದರ್ಶನ. ನಾಟಕ, ರೂಪಕ, ಕ್ರೀಡೆ, ಸಂಗೀತ, ನೃತ್ಯಗಳನ್ನು ಒಳಗೊಂಡಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿತ್ತು. ದಿನಗಳು ಉರುಳಿದಂತೆ ದೂರದರ್ಶನದಲ್ಲಿ ಹೆಚ್ಚಿನ ನವ್ಯತೆಯನ್ನು ಅಳವಡಿಸಿ ಕೊಳ್ಳಲಾಯಿತು, ಜನಪ್ರಿಯತೆಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಹೆಚ್ಚು ಹೆಚ್ಚು ವೀಕ್ಷಕರನ್ನು ಸೆಳೆಯುವ ಪ್ರಯತ್ನಕ್ಕಾಗಿ ಕಾರ್ಯಕ್ರಮಗಳಲ್ಲಿ ಹೊಸತನವನ್ನು ತರಲಾಯಿತು. ಇದೇ ಸಮಯದಲ್ಲಿ ಚಲನಚಿತ್ರ, ಚಿತ್ರಗೀತೆಗಳೊಂದಿಗೆ ಕೌಟುಂಬಿಕ ಧಾರಾವಾಹಿಗಳನ್ನು ಪ್ರಸಾರ ಮಾಡಲು ಪ್ರಾರಂಭಿಸಿದರು. ಹೀಗೆ ಪ್ರಸಾರಗೊಂಡ ಸುಮಾರು ಧಾರಾವಾಹಿಗಳು ಆ ಕಾಲಘಟ್ಟದಲ್ಲಿ ಹೆಚ್ಚು ವೀಕ್ಷಕರನ್ನು ಅದರಲ್ಲಿಯೂ ಮಹಿಳಾ ವೀಕ್ಷಕರನ್ನು ಹಿಡಿದಿಡುವ ಪ್ರಯತ್ನಗಳು

ನಡೆದವು ಅದರಲ್ಲಿ ಯಶಸ್ಸನ್ನು ಸಹ ಪಡೆದುಕೊಂಡವು ಇದೇ ಮಾದರಿಯನ್ನು ಅನುಸರಿಸಿ ಕೊಂಡು ಅನೇಕ ಧಾರಾವಾಹಿಗಳು ಇಂದು ಪ್ರಸಾರವಾಗುತ್ತಿವೆ. ಹೀಗೆ ಪ್ರಸಾರಗೊಳ್ಳುವ ಧಾರಾವಾಹಿಗಳು ಸುಮಾರು ಆರುನೂರು, ಏಳುನೂರು ಕಂತುಗಳವರೆಗೂ ಪ್ರಸಾರಗೊಳ್ಳುತ್ತಿವೆ. ಒಂದು ಕಾಲಘಟ್ಟದಲ್ಲಿ ಚಲನಚಿತ್ರಗಳು ಪಡೆದುಕೊಳ್ಳುತ್ತಿರುವ ಜನಪ್ರಿಯತೆಯನ್ನು ಇಂದು ಧಾರಾವಾಹಿಗಳು ಪಡೆದುಕೊಳ್ಳುತ್ತಿವೆ. ಧಾರಾವಾಹಿಗಳು ಪಡೆದುಕೊಳ್ಳುತ್ತಿರುವ ಜನಪ್ರಿಯತೆಗೆ ಕಾರಣವಾಗಿರುವ ಮುಖ್ಯ ಅಂಶಗಳು ಯಾವವು? ಎಂಬುದರ ಕುರಿತು ವಿಸ್ತಾರವಾದ ಮಾಹಿತಿಯನ್ನು ಪಡೆದುಕೊಂಡು ವಿಶ್ಲೇಷಣೆ ಮಾಡುವ ಉದ್ದೇಶ ಹೊಂದಿದೆ.

ಪ್ರಸ್ತುತ ಅಧ್ಯಯನದ ವಿಷಯವು ಕೆಲವೊಂದು ನಿರ್ದಿಷ್ಟವಾದ ಗುರಿ ಮತ್ತು ಉದ್ದೇಶಗಳನ್ನು ಹೊಂದಿದ್ದು. ಅವುಗಳನ್ನು ಹೀಗೆ ವಿವರಿಸಲಾಗಿದೆ :

೧. ಧಾರಾವಾಹಿಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವ ಉದ್ದೇಶ ಈ ಅಧ್ಯಯನಕ್ಕಿದೆ.

೨. ಧಾರಾವಾಹಿಗಳು ಒಂದು ವರ್ಗದವರು ಒಪ್ಪಿಕೊಂಡರೇ, ಇನ್ನೊಂದು ವರ್ಗದವರು ಏಕೆ ನಿರಾಕರಿಸುತ್ತಾರೆ ಎಂಬುದನ್ನು ಚರ್ಚಿಸುವುದು.

೩. ಧಾರಾವಾಹಿಗಳ ಮೂಲ ಆಶಯ ಏನು? ಯಾರನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ನಿರ್ಮಾಣಗೊಳ್ಳುತ್ತವೆ ಎಂಬುದನ್ನು ವಿಶ್ಲೇಷಿಸುವುದು.

೪. ಧಾರಾವಾಹಿಗಳಲ್ಲಿ ಪ್ರತಿನಿಧಿತವಾದ ಕುಟುಂಬ, ವಿವಾಹ, ಸಂಪ್ರದಾಯ, ಆಚರಣೆಗಳ ನಿರ್ವಚನವನ್ನು ಅರ್ಥೈಸಿಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

೫. ಧಾರಾವಾಹಿಗಳಲ್ಲಿ ಮಹಿಳೆಯರನ್ನು ಮತ್ತು ಮಹಿಳಾ ಪಾತ್ರಗಳನ್ನು ಕಟ್ಟಿಕೊಡುವ ಬಗೆಯನ್ನು ಇಲ್ಲಿ ವಿವರಿಸುವುದು.

೬. ಮೇಲ್ವರ್ಗ, ಮಧ್ಯಮವರ್ಗ ಮತ್ತು ಕೆಳವರ್ಗದ ಮಹಿಳೆಯರು ನೋಡುವಂತಹ ಧಾರಾವಾಹಿಗಳು ಯಾವುವು? ಈ ಎಲ್ಲಾ ವರ್ಗದ ಮಹಿಳೆಯರ ಮನೋಲೋಕದ ಮೇಲೆ ಧಾರಾವಾಹಿಗಳು ಬೀರುವ ಪ್ರಭಾವ ಎಂತದ್ದು ಎಂಬುದನ್ನು ತಿಳಿದುಕೊಳ್ಳುವ ಉದ್ದೇಶ ಈ ಅಧ್ಯಯನಕ್ಕಿದೆ.

೭. ಸಾಂಪ್ರಾದಾಯಿಕ ಮೌಲ್ಯಗಳಾದ ಮತ್ತು ಸಮಾಜದಲ್ಲಿರುವ ಸ್ಥಿರಮಾದರಿಯ ಸ್ವರೂಪಗಳಾದ ಯುವತಿ, ತಾಯಿ, ಗೃಹಿಣಿ, ಹೆಂಡತಿ, ಪಾತ್ರವನ್ನೇ ಸ್ಥಿರೀಕರಿಸುವುದನ್ನು ಈ ಅಧ್ಯಯನವು ಋಜುವಾತುಗೊಳಿಸುತ್ತದೆ. ಈ ಧಾರಾವಾಹಿಗಳಲ್ಲಿ ಮೂಡಿಬರುವ ಇಂತಹ ಸ್ಥಿರಮಾದರಿಯ ಪಾತ್ರಗಳನ್ನು ವಿಶ್ಲೇಷಿಸಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಕ್ಷೇತ್ರಕಾರ್ಯ ಮಾಡುವುದರ ಮೂಲಕ ದೊರೆತ ಮಾಹಿತಿಗಳನ್ನು ವಿಶ್ಲೇಷಣೆ ಮಾಡಿ, ಪರಿಶೀಲಿಸಿ, ಪರಾಮರ್ಶನ, ಚರ್ಚೆಗಳ ಮೂಲಕ ಅಧ್ಯಯನ ಕೈಗೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಸಂಶೋಧನೆಯ ವಿಷಯವಾದ "ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟವಾದ ಚೌಕಟ್ಟನ್ನು ಹಾಕಿಕೊಳ್ಳಲಾಗಿದ್ದು. ವಿಷಯಕ್ಕೆ ಸಂಬಂಧಪಟ್ಟಂತೆ (ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಮತ್ತು ಧಾರಾವಾಹಿಗಳಿಂದಲೇ ಜನಪ್ರಿಯತೆಯನ್ನು ಪಡೆದುಕೊಂಡಿರುವಂತಹ ಕನ್ನಡ ಚಾನೆಲ್‌ಗಳಾದ, ಉದಯ, ಈಟೀವಿ ಕನ್ನಡ. ಸುವರ್ಣ, ಝೀ ಕನ್ನಡ ಮತ್ತು ಹಿಂದಿ ಚಾನೆಲ್‌ಗಳಾದ ಸ್ಟಾರ್‌ಪ್ಲಸ್ ಮತ್ತು ಕಲರ್ಸ ಚಾನಲ್‌ಗಳಲ್ಲಿ ಪ್ರಸಾರಗೊಳ್ಳುವ ದೈನಿಕ ಧಾರಾವಾಹಿಗಳನ್ನು ಅಧ್ಯಯನದ ವ್ಯಾಪ್ತಿಯನ್ನಾಗಿ ಆಯ್ದುಕೊಳ್ಳಲಾಗಿದೆ.)

೧.೨.೧. ಪ್ರಸಾರದ ಅವಧಿ (ಅವಧಿಯ ಚೌಕಟ್ಟು)

ಕನ್ನಡ ಅಥವಾ ಹಿಂದಿ ವಾಹಿನಿಯಲ್ಲಿ ಯಾವುದೇ ಒಂದು ಧಾರಾವಾಹಿ ಪ್ರಸಾರವಾದರೆ, ಆ ಧಾರಾವಾಹಿ ಸುಮಾರು ಒಂದರಿಂದ ಮೂರು ವರ್ಷ ಅಥವಾ ಅದಕ್ಕೂ ಮೇಲ್ಪಟ್ಟ ವರ್ಷಗಳ ಅವಧಿಯಲ್ಲಿ ಪ್ರಸಾರಗೊಳ್ಳುತ್ತದೆ, ತೀರಾ ಇತ್ತೀಚಿನ ದಿನಗಳಲ್ಲಿ ಪ್ರಸಾರದ ವ್ಯಾಪ್ತಿ ಹೆಚ್ಚಾಗುತ್ತಲೇ ಹೋಗುತ್ತಿರುವುದನ್ನು ಗಮನಿಸಬೇಕಾದ ಸಂಗತಿಯಾಗಿದೆ. ಕೆಲವೊಂದು ಅನಿವಾರ್ಯ ಕಾರಣಗಳಿಂದ ಧಾರಾವಾಹಿಗಳು ಬೇಗ ಮುಗಿಯಲೂಬಹುದು. ಹೀಗೆ ಸಮಯದ ಮಿತಿಯನ್ನು ಮೀರುವ, ಅವಕಾಶಗಳು ಮತ್ತು ಸಾಧ್ಯತೆಗಳು ಎರಡು ಈ ಧಾರಾವಾಹಿಗಳಿಗಿವೆ. ಆದರೆ ನನ್ನ ಅಧ್ಯಯನಕ್ಕೆ ಹೀಗೆ ಸಮಯದ ಮಿತಿಯನ್ನು, ಮೀರುವ ಸಾಧ್ಯತೆಯಾಗಲಿ, ಅವಕಾಶಗಳಾಗಲಿ ಇಲ್ಲದಿರುವುದರಿಂದ ಒಂದು ನಿರ್ದಿಷ್ಟವಾದ ಸಮಯದ ಚೌಕಟ್ಟು ಸಂಶೋಧನೆಗೆ ಹಾಕಿಕೊಳ್ಳಬೇಕಾದ ಅನಿವಾರ್ಯತೆಯಿಂದಾಗಿ, ಅಧ್ಯಯನದ ಚೌಕಟ್ಟಿಗನುಗುಣವಾಗಿ, ಪ್ರಸಾರಗೊಳ್ಳುವ ಧಾರಾವಾಹಿಗಳನ್ನು ೨೦೦೯ ಜನವರಿಯಿಂದ, ೨೦೧೧ ಡಿಸೆಂಬರ್‌ವರೆಗೆ ಈ ಕಾಲಾವಧಿಯಲ್ಲಿ ಪ್ರಸಾರಗೊಂಡಂತಹ ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಷಣೆ ಮಾಡಲಾಗುವುದು.

೧.೨.೨. ಆಯ್ದ ಧಾರಾವಾಹಿಗಳ ವಿವರ

ಒಂದು ದಿನದಲ್ಲಿ ಸುಮಾರು ಐವತ್ತರಿಂದ ಅರವತ್ತು ಧಾರಾವಾಹಿಗಳು ಪ್ರಸಾರ ಗೊಳ್ಳುತ್ತಿರುತ್ತವೆ. ಕೆಲವೊಂದು ಧಾರಾವಾಹಿಗಳು ಮರುಪ್ರಸಾರಗೊಳ್ಳುತ್ತಿರುತ್ತವೆ. ಹೀಗೆ ಪ್ರಸಾರಗೊಳ್ಳುವ ಧಾರಾವಾಹಿಗಳಲ್ಲಿ ಭಿನ್ನ ಮಾದರಿ ವಿಷಯಗಳಿರುವ ಧಾರಾವಾಹಿಗಳಿದ್ದು ಅವುಗಳಲ್ಲಿ **ಹಾಸ್ಯ ಪ್ರಧಾನ, ಭಕ್ತಿಪ್ರಧಾನ, ಐತಿಹಾಸಿಕ ಪ್ರಧಾನ, ಮಕ್ಕಳ ಧಾರಾವಾಹಿ, ವ್ಯಕ್ತಿ ಪ್ರಧಾನವಾದ ಧಾರಾವಾಹಿ, ಕೌಟುಂಬಿಕ ಪ್ರಧಾನ ಮಾದರಿಯ ಧಾರಾವಾಹಿಗಳನ್ನು ಕಾಣಬಹುದು.** ಇವುಗಳಲ್ಲಿ ಅಧ್ಯಯನದ ಉದ್ದೇಶಕ್ಕಾಗಿ ಭಿನ್ನ ಕಥಾವಸ್ತುವಿರುವ, ಭಿನ್ನ ದೃಷ್ಟಿಕೋನವನ್ನು ಹೊಂದಿರುವಂತಹ **ಕೌಟುಂಬಿಕ ಧಾರಾವಾಹಿಗಳನ್ನು ಮತ್ತು ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ, ದೇವದಾಸಿ ಪದ್ಧತಿಯ ವಿಷಯವನ್ನು ಕಥಾವಸ್ತುವನ್ನಿಟ್ಟುಕೊಂಡು ನಿರ್ಮಿಸಿದಂತಹ**

ಧಾರಾವಾಹಿಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಇವುಗಳ ಜೊತೆಗೆ ಇತ್ತೀಚಿನ ದಿನಗಳಲ್ಲಿ ಧಾರಾವಾಹಿಗಳಂತೆ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿರುವ ರಿಯಾಲಿಟಿ ಶೋಗಳನ್ನು ಇಲ್ಲಿ ವಿವರಿಸಿ, ವಿಶ್ಲೇಷಣೆಯ ಮೂಲಕ ಚರ್ಚಿಸಲಾಗುವುದು.

ಕನ್ನಡ ವಾಹಿನಿಗಳಾದ ಝಿ ಕನ್ನಡ, ಸುವರ್ಣ, ಉದಯ ಮತ್ತು ಈಟಿವಿ ಕನ್ನಡ ವಾಹಿನಿಗಳಲ್ಲಿ ಪ್ರತಿಯೊಂದು ವಾಹಿನಿಯಿಂದಲೂ ಭಿನ್ನ ಮಾದರಿಯ ಕಥೆಯಿರುವ ಧಾರಾವಾಹಿಗಳನ್ನು ಆಯ್ದುಕೊಳ್ಳಲಾಗಿದೆ. ಅದೇ ರೀತಿಯಾಗಿ ಹಿಂದಿ ವಾಹಿನಿಗಳಾದ ಸ್ಟಾರ್‌ಪ್ಲಸ್ ಮತ್ತು ಕಲರ್ಸ ಚಾನೆಲನಲ್ಲಿ ಪ್ರಸಾರವಾಗುವ ಧಾರಾವಾಹಿಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ.

ಝೀ ಕನ್ನಡದಲ್ಲಿ ಜೋಗುಳ. ಗೆಜ್ಜೆಪೂಜೆ(ಮುಗಿದಿವೆ)

ಸುವರ್ಣವಾಹಿನಿಯಲ್ಲಿ ಅವಲಕ್ಕಿ ಪವಲಕ್ಕಿ. ಇದ್ರೆ ಇರಬೇಕು ನಿನ್ನ ಹಾಂಗ. ಲಕುಮಿ (ಮುಗಿದಿವೆ).

ಈಟಿವಿ ಕನ್ನಡದಲ್ಲಿ ಚಿತ್ರಲೇಖ

ಉದಯವಾಹಿನಿಯಲ್ಲಿ ಕಲ್ಯಾಣಿ. ಈ ಧಾರಾವಾಹಿಗಳನ್ನು ಅಧ್ಯಯನದ ಆಕರಗಳನ್ನು ಆಯ್ದುಕೊಳ್ಳಲಾಗಿದೆ.

ಹಿಂದಿ ಚಾನೆಲಗಳಾದ ಸ್ಟಾರ್‌ಪ್ಲಸ್‌ನಲ್ಲಿ. ಸಾಥ ನಿಭಾನಾ ಸಾಥಿಯಾ.ದಿಯಾ ಔರ ಬಾತಿ ಹಮ್, ಕ್ಯೂಂಕಿ ಸಾಸ್ ಭಿ ಕಭೀ ಬಹು ಥೀ, ಕಹಾನಿ ಘರಘರ ಕೀ, ಕಸೌಟಿ ಜಿಂದಗಿ ಕೀ.

ಕಲರ್ಸ್ ಚಾನಲನಲ್ಲಿ ಪ್ರಸಾರವಾಗುವ ನಾ ಆನಾ ದೇಶ್ ಮೇರೆ ಲಾಡೋ(ಮುಗಿದಿದೆ). ಬಾಲಿಕಾ ವಧು. ಈ ಧಾರಾವಾಹಿಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ.

ಆಯ್ದುಕೊಂಡ ಧಾರಾವಾಹಿಗಳಲ್ಲಿ ಭಿನ್ನ ಮಾದರಿಯ ಕಥಾವಸ್ತುವನ್ನು ಹೊಂದಿರುವಂತಹ ಧಾರಾವಾಹಿಗಳಿದ್ದು, ನನ್ನ ಉದ್ದೇಶ ಈ ಧಾರಾವಾಹಿಗಳಲ್ಲಿ ಕುಟುಂಬ, ಮಹಿಳೆ, ಸಂಪ್ರದಾಯ ಆಚರಣೆಗಳು ಯಾವ ರೀತಿಯಾಗಿ ಚಿತ್ರಿಸಲಾಗಿದೆ? ಯಾಕೆ ಹೀಗೆ ಚಿತ್ರಿಸಲಾಗಿದೆ? ಕುಟುಂಬ ಮತ್ತು ಮಹಿಳೆಯ ನಿರ್ವಚನವನ್ನು ಹೇಗೆ ಮಾಡಲಾಗಿದೆ? ಯಾಕೆ ಮಾಡಲಾಗಿದೆ? ಇವುಗಳನ್ನು ಕುರಿತ ವಿಶ್ಲೇಷಣೆ ಮತ್ತು ಚರ್ಚೆಯನ್ನು ಕೈಗೊಂಡಿದ್ದೇನೆ. ಧಾರಾವಾಹಿಗಳಲ್ಲಿ ಹಲವು ಮಾದರಿಯ ಧಾರಾವಾಹಿಗಳು ಪ್ರಸಾರವಾಗುತ್ತಿದ್ದು, ಈ ಧಾರಾವಾಹಿಗಳಲ್ಲಿ ನಾನು **ಕೌಟುಂಬಿಕ ಧಾರಾವಾಹಿಗಳಿಗೆ** ಹೆಚ್ಚಿನ ಒಲವನ್ನು ನೀಡಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದೇನೆ.

೧.೩. ಅಧ್ಯಯನದ ವೈಧಾನಿಕತೆ

ಈ ಮೊದಲೇ ವಿವರಿಸಿದಂತೆ ಸಂಶೋಧನೆಯ ವಿಷಯವು ಇಂದು ಕನ್ನಡ ವಾಹಿನಿಗಳಲ್ಲಿ ಪ್ರಸಾರಗೊಳ್ಳುತ್ತಿರುವ, ಧಾರಾವಾಹಿಗಳನ್ನು ಮತ್ತು ಅವುಗಳ ಮಾದರಿಗಳ ಕುರಿತು ಅಧ್ಯಯನ

ಮಾಡಲಾಗುತ್ತಿದೆ. ಅದರಂತೆಯೇ ಕನ್ನಡದಲ್ಲಿ ಹೆಚ್ಚು ಜನಪ್ರಿಯತೆಗಳಿಸುತ್ತಿರುವ ಈ ಧಾರಾವಾಹಿಗಳ ಒಟ್ಟು ನೋಟವನ್ನು ತಿಳಿದುಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.ಪ್ರಸ್ತುತ ದಿನಗಳನ್ನು ಗಣನೆಗೆ ತೆಗೆದುಕೊಂಡರೆ ಸಮೂಹ ಮಾಧ್ಯಮಗಳು ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿರುವುದರಿಂದ ಈ ಮಾಧ್ಯಮದ ಕುರಿತು ಸಾಕಷ್ಟು ಚರ್ಚೆಗಳು, ಅಧ್ಯಯನಗಳು ಮತ್ತು ಸಂಶೋಧನೆಗಳು ನಡೆಯಬೇಕಾದ ಅವಶ್ಯಕತೆಯನ್ನು ವ್ಯಕ್ತಪಡಿಸುತ್ತದೆ. ಆದರೆ ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳು ಮತ್ತು ಅಲ್ಲಿ ಕಟ್ಟಿಕೊಡುವ ಅಥವಾ ಚಿತ್ರಿಸುವ ಮಹಿಳಾ ಪಾತ್ರಗಳ ಕುರಿತು ಕೆಲವೊಂದು ಬಿಡಿ ಲೇಖನಗಳಲ್ಲಿ ಚರ್ಚಿಸಲಾಗಿದೆಯೇ ಹೊರತು ಸಂಪೂರ್ಣವಾದ ಅಧ್ಯಯನಗಳು ನಡೆದಿಲ್ಲಾ. ಈ ಕುರಿತು ಸಾಕಷ್ಟು ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ. ಒಂದು ದಿನದಲ್ಲಿ ಅರ್ಧಗಂಟೆ ಪ್ರಸಾರವಾಗುವ ಧಾರಾವಾಹಿಗಳು ಹೇಗೆ ಸಮಾಜದಲ್ಲಿ ಸಂಚಲನವನ್ನುಂಟು ಮಾಡುತ್ತವೆ? ಧಾರಾವಾಹಿಗಳು ಯಾರನ್ನು ಕೇಂದ್ರೀಕರಿಸಿ ಪ್ರಸಾರವಾಗುತ್ತವೆ? ಉದ್ದೇಶಿತ ವೀಕ್ಷಕರು ಯಾರು? ಅವರ ಲಿಂಗ, ವರ್ಗ, ವಯೋಮಾನ, ವೃತ್ತಿ ಮತ್ತು ಅವರ ಅಭಿರುಚಿಗಳನ್ನು ಕುರಿತು ವಿವರಿಸುವ ಧಾರಾವಾಹಿಗಳು ಹೇಗೆ ಜನಪ್ರಿಯತೆ ಪಡೆದುಕೊಳ್ಳುತ್ತಿವೆ? ಮೂಲ ಆಶಯ ಏನು? ಈ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳುವ ಉದ್ದೇಶ ಮತ್ತು ಹಂಬಲಗಳಿದ್ದು, ಅಧ್ಯಯನವನ್ನು ಮಹಿಳಾ ಅಧ್ಯಯನ, ಸ್ತ್ರೀವಾದ ಮತ್ತು ಇದಕ್ಕೆ ಪೂರಕವಾಗುವ ಸಹಜ್ಞಾನ ಶಿಸ್ತುಗಳ ದೃಷ್ಟಿಕೋನಗಳಿಗೆ ಅನುಸಾರವಾಗಿ, ನಿರ್ದಿಷ್ಟವಾದ ಚೌಕಟ್ಟಿನೊಳಗೆ ಅಧ್ಯಯನ ಕೈಗೊಳ್ಳುವ ಉದ್ದೇಶ ನನ್ನದಾಗಿದೆ.

೧.೩.೦. ಸ್ತ್ರೀವಾದ, ಮಹಿಳಾ ಅಧ್ಯಯನ ಮತ್ತು ಲಿಂಗಸಂಬಂಧಿ ದೃಷ್ಟಿಕೋನಗಳ ಅಳವಡಿಕೆ

'ಹೆಣ್ಣು' ಎಂಬ ಜೀವಿಯು ಮೂಲದಲ್ಲಿ ರೂಪಿಸಲ್ಪಟ್ಟವಳು. "ಹೆಣ್ಣು ನಿರ್ದಿಷ್ಟವಾದ ಸಾಮಾಜಿಕ ಪ್ರಕ್ರಿಯೆಗಳಿಂದ ಆಗುತ್ತಾಳೆಯೇ ವಿನಾಃ ಯಾರೂ ಹೆಣ್ಣಾಗಿಯೇ ಹುಟ್ಟುವುದಿಲ್ಲ"ವೆಂದು ಸ್ತ್ರೀವಾದಿ ಚಿಂತಕಿ ಸಿಮೋನ್ ದಿ ಬೋವಾ ವ್ಯಾಖ್ಯಾನಿಸುತ್ತಾಳೆ. ಹೆಣ್ಣು ಯಾವ ಸ್ತರದಲ್ಲಿ ನೋಡಿದರೂ ಅವಳಿಗೆ "ರೂಪ" ಕೊಡಲಾಗಿದೆಯೇ ಹೊರತು ಅವಳೇ ಆಗಿರುವುದಿಲ್ಲ. "ರೂಪ" ಪಡೆಯುವುದು ಪುರುಷನ ಮೂಲಕ, ಪುರುಷ ನಿರ್ವಚಿಸುವ ದೃಷ್ಟಿಕೋನಗಳಿಗೆ ಪೂರಕವಾಗಿರುವಂತಹ ಧೋರಣೆಗಳಲ್ಲಿಯೇ ರೂಪಿತಳಾಗುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆ ಮಾಡಿಕೊಂಡು ಬಂದಿರುವ ಈ ವ್ಯವಸ್ಥೆಯಲ್ಲಿ ಹೆಣ್ಣಿನ ದೇಹ, ಮನಸ್ಸು ಮತ್ತು ಲೈಂಗಿಕತೆಯನ್ನು ತನ್ನ ಅಧೀನವಾಗಿಸಿಕೊಂಡಿದ್ದಾನೆ. ಸಾಂಸ್ಕೃತಿಕವಾಗಿ ರೂಢಿಯಲ್ಲಿರುವ ಸಾಮಾಜಿಕ ಚಿಂತನೆಗಳೆಲ್ಲವೂ ಮಹಿಳೆಯರ ಭಾವನಾತ್ಮಕತೆಗೇ ನೀಡಿರುವ ಮಹತ್ವ ಆಕೆಯ ಬೌದ್ಧಿಕತೆಗೆ ನೀಡಿಲ್ಲವಾಗಿದೆ. ಆದ್ದರಿಂದ ಹೆಣ್ಣಿನ ಅಸ್ತಿತ್ವವೇನಿದ್ದರೂ ಭಾವನಾತ್ಮಕ ಸಂಬಂಧಗಳಲ್ಲಿ ಮಾತ್ರ ಈ ಸಂಬಂಧಗಳು ಕುಟುಂಬದೊಂದಿಗೆ ನಿವರ್ಚನಗೊಂಡಿದ್ದರಿಂದ ಹೆಣ್ಣನ್ನು ತಾಯ್ತನದ ವೈಭವೀಕರಣದಲ್ಲಿ ಅಂದರೆ ಸಂತಾನದ ರಕ್ಷಣೆ ಮಾಡುವ ತಾಯಿಯಾಗಿ ವೈಭವೀಕರಿಸಲಾಗಿದೆ.

ಮತ್ತೊಮ್ಮೆ ಗಂಡಿನ ಲೈಂಗಿಕ ಬಯಕೆಯನ್ನು ಪೂರೈಸುವ ಹೆಣ್ಣಾಗಿ ನಿರ್ವಚನಗೊಳಿಸಲಾಗುತ್ತದೆ. ಹೆಣ್ಣಿನ ಆಂತರ್ಯದಲ್ಲಿರುವ ಭಾವನೆಗಳು, ವಿಚಾರ, ಅಭಿಪ್ರಾಯಗಳ ಬಗ್ಗೆ ನಮೂದಾಗುವುದಿಲ್ಲ. ಹೆಣ್ಣಿನೆಡೆಗೆ ಕೇವಲ ಭ್ರಮಾತ್ಮಕವಾಗಿ ಚಿಂತಿಸುವ ಚಿಂತನೆಗಳೇ ಕಂಡುಬರುತ್ತವೆ. ಆಂತರ್ಯದಲ್ಲಿ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸುವ ರಾಜಕಾರಣ ನಡೆದಿರುತ್ತದೆ. ಹೀಗೆ ಪುರುಷ ಪ್ರಧಾನ ವ್ಯವಸ್ಥೆಯು ನಡೆಸಿಕೊಂಡು ಬರುತ್ತಲಿರುವ ಈ ಪುರುಷ ರಾಜಕಾರಣವನ್ನು ಮುರಿದು ಕಟ್ಟುವ ಕಾರ್ಯವನ್ನು ಸ್ತ್ರೀವಾದಿ ಚಿಂತಕಿಯರು ಮತ್ತು ಮಹಿಳಾ ಅಧ್ಯಯನಕಾರರು ಮಾಡಿಕೊಂಡು ಬರುತ್ತಿದ್ದಾರೆ. ಸ್ತ್ರೀವಾದಿಗಳು ಪ್ರಬಲವಾಗಿ ವಿರೋಧಿಸುವ ವಿಷಯಗಳಲ್ಲಿ ಲೈಂಗಿಕತಾವಾದವೂ ಒಂದಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನೆಡೆಗೆ ಲೈಂಗಿಕ ದೃಷ್ಟಿಕೋನವನ್ನೇ ಕಟ್ಟಲಾಗುತ್ತದೆ. ಹೆಣ್ಣಿಗೆ ವಿವಾಹ ವ್ಯವಸ್ಥೆಯ ಬಂಧನದಲ್ಲಿ ಕಟ್ಟಿಹಾಕುವ ಮೂಲಕ ಆಕೆಯ ಲೈಂಗಿಕತೆಯನ್ನು ಹತ್ತಿಕ್ಕುವ ಅವಳ ದೇಹದ ಮೇಲೆ ಆಕ್ರಮಣ ಮಾಡುವ ಪಾರಮ್ಯದ ವ್ಯವಸ್ಥೆಯನ್ನು ಪ್ರಶ್ನೆ ಮಾಡುವುದರ ಮೂಲಕ ಇಲ್ಲಿನ ಪುರುಷ ವಿಶ್ಲೇಷಣೆಯನ್ನು ನಡೆಸಲಾಗಿದೆ.

ಮನಃಶಾಸ್ತ್ರದ ಪಿತಾಮಹನೆಂದು ಪ್ರಖ್ಯಾತರಾದ ಸಿಗ್ಮಂಡ ಫ್ರಾಯ್ಡರ ಮನೋವಿಶ್ಲೇಷಣಾ ಸಿದ್ಧಾಂತವು ಮಾನವ ಸಮಾಜದಲ್ಲಿನ ವ್ಯಕ್ತಿಗಳ ಮನಃಸ್ಥಿತಿಯನ್ನು ಕುರಿತು ಸಂಶೋಧಿಸುವಾಗ ಸಾಂಪ್ರದಾಯಿಕ ಚಿಂತನಾ ವಿಧಾನಗಳನ್ನು ಅನುಸರಿಸುತ್ತಾನೆ. ಅವನು ಪ್ರತಿಪಾದಿಸುವ "ಶಿಶ್ನ ಕೇಂದ್ರಿತ" ಚಿಂತನೆಯನ್ನು ಸ್ತ್ರೀವಾದಿ ಚಿಂತಕಿಯರಾದ ಕೆರೆನ್‌ಹಾರ್ನಿ, ಈಗ್ಲಿ ಮೊದಲಾದವರು ವಿಮರ್ಶಿಸುತ್ತಾ, ಹೆಂಗಸರಿಗೆ "ಶಿಶ್ನ ಈರ್ಷೆ" ಇರುವುದಾದರೆ, ಅದಕ್ಕೆ ಪ್ರತಿಯಾಗಿ ಗಂಡಸರಿಗೆ "ಗರ್ಭ ಈರ್ಷೆ"ಯಿರುವುದನ್ನು ಪ್ರತಿಪಾದಿಸುತ್ತಾರೆ. ಈ ಮೂಲಕ ಮಹಿಳಾ ಮನಸ್ಸಿನ ಮೇಲಾಗುವ ಸಾಮಾಜಿಕ ಲೈಂಗಿಕತೆಯ ಪರಿಣಾಮವನ್ನು ಬೆಳಕಿಗೆ ತರುತ್ತಾರೆ.

ಸಾಂಪ್ರದಾಯಿಕವಾಗಿ ನಡೆದ ಸಂಶೋಧನೆಗಳೆಲ್ಲವೂ ಲೈಂಗಿಕತಾವಾದಿಯಾದ ಸಂಶೋಧನೆಗಳಾಗಿದ್ದು ವಾಸ್ತವದಲ್ಲಿ ಪ್ರಧಾನಲಿಂಗೀಯ ಪರವಾದ ಸಂಶೋಧನೆಗಳೇ ಆಗಿವೆ. ಏಕಲಿಂಗೀಯ ಪುರುಷ ಚಿಂತನೆಗಳನ್ನೇ ಸಾರ್ವತ್ರೀಕರಣಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀವಾದಿಗಳು ಮಂಡಿಸುವ ಸಿದ್ಧಾಂತಗಳನ್ನು, ಅದರ ಪ್ರಸ್ತುತತೆಯನ್ನು ವಿವರಿಸಿಕೊಳ್ಳುವುದರ ಮೂಲಕ ಧಾರಾವಾಹಿಗಳಲ್ಲಿ ಅಡಗಿರುವ "ಪುರುಷ ಕೇಂದ್ರಿತ" ಚಿಂತನೆಗಳನ್ನು ಮುರಿದು ಕಟ್ಟುವ ಪ್ರಯತ್ನವನ್ನು ಮುಂದಿನ ಭಾಗದಲ್ಲಿ ಮಾಡಲಾಗಿದೆ. ಸ್ತ್ರೀವಾದಿ ಚಿಂತನೆಯು ಈ ಕಾರಣಗಳಿಗಾಗಿ ಲೈಂಗಿಕವಾದಿಯಲ್ಲದ ಚಿಂತನೆಯಾಗಿರುತ್ತದೆ ಎಂಬ ಸತ್ಯಾಂಶವನ್ನು ಇಡೀ ಪ್ರಬಂಧದ ಉದ್ದಕ್ಕೂ ಅಳವಡಿಸಿಕೊಳ್ಳಲಾಗಿದೆ.

ಸ್ತ್ರೀವಾದಿ ಸಂಶೋಧನಾ ವೈಧಾನಿಕತೆ

ಇಲ್ಲಿಯವರೆಗೆ ನಡೆದು ಬಂದಿರುವ ಸಂಶೋಧನಾ ವಿಧಾನಗಳೆಲ್ಲವೂ ಸಾಂಪ್ರದಾಯಿಕ ಸಂಶೋಧನಾ ವಿಧಾನಗಳಾಗಿವೆ. ಸಂಶೋಧನೆಗಳನ್ನು ಅಳವಡಿಸಿಕೊಂಡಾಗ ನಿರೀಕ್ಷಿತ

ಫಲಿತಾಂಶಗಳನ್ನು ಪಡೆಯುವ ಸಾಧ್ಯತೆಗಳಿರುವುದಿಲ್ಲ. ಈ ತಾತ್ವಿಕತೆಯನ್ನು ಅನುಸರಿಸಿಕೊಂಡು ರೂಪಿತವಾಗಿರುವ ಸಮಾಜ ಮಹಿಳೆಯ ಬದುಕನ್ನು ವ್ಯವಸ್ಥಿತವಾಗಿ ನಿರಾಕರಿಸುತ್ತಾ ಬಂದಿದೆ. ಇದು ಧಾರಾವಾಹಿಗಳಲ್ಲಿ ಕಟ್ಟಿಕೊಡಲಾಗುವ ಸ್ಥಿರಮಾದರಿಯ ಪಾತ್ರಗಳನ್ನು ನಿರ್ವಚನಗೊಳ್ಳುವಾಗ ಎದುರಾಗುತ್ತದೆ. ಇಲ್ಲಿ ಅಡಗಿರುವ ಕಾಣದ ಕೈಗಳ ರಾಜಕಾರಣವನ್ನು ಬಿಡಿಸಿಕೊಳ್ಳಲು ಸ್ತ್ರೀವಾದಿಗಳು ಸಾಕಷ್ಟು ಬಗೆಯ ಅಧ್ಯಯನಗಳನ್ನು ನಡೆಸಿದ್ದಾರೆ.

ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯಲ್ಲಿ ಸೂಚಿಸಿರುವ ಲಿಂಗಸೂಕ್ಷ್ಮತೆ, ಲೈಂಗಿಕ ದ್ವಿದಾಭಾವ, ಲಿಂಗಪಾತ್ರಗಳ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು. ಪ್ರಸ್ತುತ ಅಧ್ಯಯನದ ಅಗತ್ಯವಾಗಿದೆ. ಹಾಗಾಗಿ ಸಾಂಪ್ರದಾಯಿಕವಾದ ಸಮಾಜ ವ್ಯವಸ್ಥೆಯಲ್ಲಿ ಮನೆ ಮಾಡಿರುವ ಸ್ಥಿರಮಾದರಿಗಳಾದ ಹೆಂಡತಿ, ತಾಯಿ, ವೈಧವ್ಯ ಮುಂತಾದವುಗಳನ್ನು ವಿಶ್ಲೇಷಿಸಲು ಸ್ತ್ರೀವಾದಿ ಚಿಂತನೆಯು ನೆರವಾಗುತ್ತದೆ. ಇಲ್ಲಿನ ಪ್ರತಿಯೊಂದು ಹಂತವು ಕೂಡಾ ಸ್ತ್ರೀಯರ ಪರವಾದ ಅಸ್ತಿತ್ವ, ಸಾಮಾಜಿಕ ಹೊಣೆಗಾರಿಕೆ ಹಾಗೂ ಭವಿಷ್ಯದ ಸಬಲೀಕರಣದ ನಡೆಗಳಲ್ಲಿ ಹೇಗೆ ಇರಬೇಕೆಂದು ಕಾಳಜಿಪೂರ್ವಕವಾಗಿ ಗ್ರಹಿಸುತ್ತದೆ. ಮಹಿಳಾ ಅಧ್ಯಯನದಲ್ಲಿ ಕಂಡುಕೊಳ್ಳಲಾದ ಸ್ತ್ರೀಪರವಾದ ಅನೇಕ ತಾತ್ವಿಕ ಮಹಿಳಾ ಸಮಾನತೆಯ ಆಶಯಗಳನ್ನು ಇಲ್ಲಿ ಅಳವಡಿಸಿಕೊಂಡು ಲಿಂಗ ಸಮಾನತೆಯನ್ನು ಆಚರಿಸಿಕೊಂಡು ಹೋಗುವ ಸಾಮಾಜಿಕ ಸ್ವಾಸ್ಥ್ಯವನ್ನು ಇಲ್ಲಿನ ವಿಶ್ಲೇಷಣೆ ಬಯಸುತ್ತದೆ. ಇಡೀ ಅಧ್ಯಯನವು ಇಂತಹ ಬೃಹತ್ತಾದ ಉದ್ದೇಶವನ್ನು ಹೊಂದಿ ದೂರದರ್ಶನದ ಧಾರಾವಾಹಿಗಳನ್ನು ಹಾಗೂ ರಿಯಾಲಿಟಿ ಶೋಗಳನ್ನು ವಿಶ್ಲೇಷಿಸುತ್ತಾ ಅಲ್ಲಿ ಅಡಗಿಕೊಂಡಿರುವ ಮಹಿಳಾ ವಿರೋಧಿ ಹಿತಾಸಕ್ತಿಗಳನ್ನು ಅನಾವರಣ ಮಾಡಲು ಬಯಸುತ್ತದೆ.

ಸಂಶೋಧನೆಯ ವಿಷಯವನ್ನು ಮಹಾಪ್ರಬಂಧದ ಸ್ವರೂಪದಲ್ಲಿ ಮಂಡಿಸುವ ಉದ್ದೇಶದಿಂದ ಕೆಳಗಿನ ಸಂಶೋಧನಾ ವಿಧಾನಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

೧.೩.೧. ಪ್ರಶ್ನಾವಳಿ

ಧಾರಾವಾಹಿಗಳ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳೆಯರು ಹೊಂದಿರುವ ದೃಷ್ಟಿಕೋನ ಎಂತದ್ದು? ಧಾರಾವಾಹಿಗಳನ್ನು ಯಾಕೆ ನೋಡುತ್ತಾರೆ? ಧಾರಾವಾಹಿಗಳನ್ನು ಕುರಿತು ಅವರು ಹೊಂದಿರುವ ಅಭಿಪ್ರಾಯವೇನು? ನೋಡುಗರ ಮನಸ್ಸಿನಲ್ಲಿ ಧಾರಾವಾಹಿಗಳು ಬೀರುವ ಪ್ರಭಾವ ಎಂತಹದು? ವರ್ಗ, ಲಿಂಗ, ವಯೋಮಾನದ ಆಧಾರದ ಮೇಲೆ ನೋಡುವ ಧಾರಾವಾಹಿಗಳನ್ನು ತಿಳಿಯುವ ಪ್ರಯತ್ನವನ್ನು ಈ ಪ್ರಶ್ನಾವಳಿಯ ಮೂಲಕ ಕಂಡುಕೊಳ್ಳುವ ಉದ್ದೇಶ ಹೊಂದಿದ್ದೇನೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ರಚಿತ ಮತ್ತು ಅರಚಿತ ಪ್ರಶ್ನಾವಳಿಗಳ ಮೂಲಕ ಆಯ್ದುಕೊಂಡ ಜಿಲ್ಲೆಗಳಲ್ಲಿನ ಮಾಹಿತಿದಾರರ ಅಭಿಪ್ರಾಯಗಳನ್ನು ಸಂಗ್ರಹಿಸುವ, ಪುರುಷ ಮಾನದಂಡ ಅಥವಾ ಪುರುಷ ಪ್ರಧಾನ ಮಾಧ್ಯಮ(malegaze)ದ ಕುರಿತು ಈ ಮಹಿಳೆಯರಿಗೆ ಎಷ್ಟರಮಟ್ಟಿಗಿನ ತಿಳುವಳಿಕೆ ಇದೆ? ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಕ್ಷೇತ್ರಕಾರ್ಯದಲ್ಲಿ ಮಾಡಲಾಗಿದೆ.

೧.೩.೨. ಅವಲೋಕನ ವಿಧಾನ

ಆಯ್ಕೆ ಮಾಡಿಕೊಂಡಿರುವ ಜಿಲ್ಲೆಗಳಾದ ಯಾದಗಿರಿ ಮತ್ತು ಗುಲಬರ್ಗಾ ಪ್ರದೇಶಗಳಲ್ಲಿ ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಂಡಂತಹ ಮಾಹಿತಿದಾರರ ಜೊತೆಯಲ್ಲಿ ಕೆಲವು ದಿನ ಉಳಿದುಕೊಂಡು ಅವರು ಧಾರಾವಾಹಿಗಳ ಕುರಿತು ಹೊಂದಿರುವ ಒಟ್ಟಾರೆಯಾದ ಗ್ರಹಿಕೆಯನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಜೊತೆಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕೆಲವು ಬಾರಿ ಅಂಕಿ ಅಂಶಗಳು ಕೊಡುವ ತಿಳುವಳಿಕೆಗಿಂತಲೂ ಹೆಚ್ಚು ವಿಷಯಗಳನ್ನು ಸಹಭಾಗಿ ಅವಲೋಕನದಿಂದ ತಿಳಿಯಬಹುದಾಗಿದ್ದು ಆ ಪ್ರಯತ್ನವನ್ನು ಕೂಡ ಇಲ್ಲಿ ಮಾಡಲಾಗಿದೆ.

೧.೩.೩. ಮಾಹಿತಿದಾರರ ಆಯ್ಕೆಯ ವಿಧಾನ

ಇಲ್ಲಿ ಒಟ್ಟು ಇನ್ನೂರು(೨೦೦) ಜನ ಮಹಿಳೆಯರನ್ನು ಮಾಹಿತಿದಾರರಾಗಿ ಗುರುತಿಸಿ ಕೊಳ್ಳಲಾಗಿದೆ. ಇನ್ನೂರು ಮಾಹಿತಿದಾರರಲ್ಲಿ ಎಂಭತ್ತು (೮೦)ಜನ ಮಾಹಿತಿದಾರರನ್ನು ಯಾದಗಿರಿ ಜಿಲ್ಲೆಯ ಗ್ರಾಮೀಣ ಪ್ರದೇಶಗಳಾದ ಮೂಡಬಾಳ, ಮುದ್ನಾಳ, ಭೀಮರಾಯನಗುಡಿ, ಚಪೇಟ್ಲಾ ಗ್ರಾಮ ಮತ್ತು ಗೋಗಿಪೇಠ ಈ ಭಾಗದ ಮಹಿಳೆಯರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಗೃಹಿಣಿಯರು, ಕೃಷಿಚಟುವಟಿಕೆಯಲ್ಲಿ ತೊಡಗಿಸಿಕೊಂಡವರು, ಕುಂಬಾರಿಕೆ, ನೇಯ್ಗೆ ಮತ್ತು ದೇಶಿ ವೈದ್ಯ ಪದ್ಧತಿಯನ್ನು ಅಳವಡಿಸಿಕೊಂಡು ಬಂದಿರುವಂತಹ ಮಹಿಳೆಯರು ಇಲ್ಲಿ ಮಾಹಿತಿದಾರರಾಗಿದ್ದಾರೆ.

ನಗರ ಪ್ರದೇಶಗಳ ಮಾಹಿತಿದಾರರಾಗಿ ಗುಲಬರ್ಗಾ ನಗರವನ್ನು ಆಯ್ಕೆ ಮಾಡಿಕೊಂಡಿದ್ದು, ಇಲ್ಲಿ ಒಟ್ಟು ನೂರ ಇಪ್ಪತ್ತು(೧೨೦) ಮಾಹಿತಿದಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ, ಇಟ್ಟಂಗಿ ಭಟ್ಟಿಯಲ್ಲಿ ಕೆಲಸ ಮಾಡುವವರು, ವ್ಯಾಪಾರಸ್ಥರು, (ಬಟ್ಟೆ, ತರಕಾರಿ, ಪಾತ್ರೆ ಮಾರುವವರು) ಗೃಹಿಣಿಯರು, ಉದ್ಯೋಗಸ್ಥ ಮಹಿಳೆಯರು ಮತ್ತು ಕಾಲೇಜು ವಿದ್ಯಾರ್ಥಿನಿಯರನ್ನು ಇಲ್ಲಿ ಸಂದರ್ಶಿಸಲಾಗಿದೆ.

ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಈ ಮಹಿಳೆಯರು ೨೦ ರಿಂದ ೬೫ ವರ್ಷ ವಯಸ್ಸಿನವರಾಗಿದ್ದಾರೆ.

ಗ್ರಾಮೀಣ : ಕುಂಬಾರಿಕೆ, ಕೃಷಿ, ನೇಯ್ಗೆ, ದೇಶಿವೈದ್ಯ=೮೦ **ನಗರ:** ಗೃಹಿಣಿಯರು, ಅಸಂಘಟಿತ ಕಾರ್ಮಿಕರು, ಉದ್ಯೋಗಸ್ಥ ಮಹಿಳೆಯರು, ಕಾಲೇಜು ವಿದ್ಯಾರ್ಥಿ/ನಿಯರು=೧೨೦

೧.೩.೪. ಮಾಹಿತಿಯ ಆಕರಗಳು

ಅ. ಮೂಲ ಆಕರಗಳು : ದೂರದರ್ಶನಗಳಲ್ಲಿ ಭಿತ್ತಿಗೊಂಡಿರುವ ಧಾರಾವಾಹಿಗಳನ್ನು ಮೂಲ ಆಕರವನ್ನಾಗಿ ಇಟ್ಟುಕೊಂಡ ಈ ಅಧ್ಯಯನ ಇವುಗಳನ್ನು ವೀಕ್ಷಿಸುತ್ತಿರುವ ನೋಟಕರನ್ನು

ಕೂಡ ಮೂಲ ಆಕರವನ್ನಾಗಿ ಇಟ್ಟುಕೊಳ್ಳಲಾಗಿದೆ. ಇದನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿದ್ದು, ಮುಖ್ಯವಾಗಿ ಪ್ರಶ್ನಾವಳಿಗಳು ಹಾಗೂ ಸಂದರ್ಶನಗಳ ವೈಧಾನಿಕತೆಗಳನ್ನು ಇಲ್ಲಿ ಅನ್ವಯಿಸಲಾಗಿದೆ.

ಬ. ಆನುಷಂಗಿಕ ಆಕರಗಳು : ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ದಿನಪತ್ರಿಕೆಗಳು, ವರದಿಗಳು, ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ, ಷಾಣ್ಮಾಸಿಕ ಮೊದಲಾದವುಗಳನ್ನು ಗಮನಿಸಿ ಪೂರಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಸಂಶೋಧನಾ ಪ್ರಬಂಧ/ಮಹಾಪ್ರಬಂಧಗಳನ್ನು ಅಧ್ಯಯನ ಮಾಡಿ ವಿಷಯಕ್ಕೆ ಸಂಬಂಧಿಸಿದ ಇನ್ನಿತರ ಅಕಾಡೆಮಿಕ ಮಾಹಿತಿಯನ್ನು ಗ್ರಂಥ ಭಂಡಾರಗಳ ಪುಸ್ತಕ ಪ್ರಪಂಚದ ಸಹಾಯದಿಂದ ಪಡೆದುಕೊಳ್ಳಲಾಗಿದೆ.

೧.೫. ಅಧ್ಯಾಯಗಳ ವಿಭಾಗೀಕರಣ

ಪ್ರಬಂಧವನ್ನು ಒಟ್ಟು ಆರು ಅಧ್ಯಾಯಗಳಲ್ಲಿ ವಿಭಾಗೀಕರಿಸಲಾಗಿದೆ. ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆಯನ್ನು ಕುರಿತಾಗಿದ್ದು, ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಈ ವಿಷಯಕ್ಕೆ ಪೂರಕವಾಗಿ ನಡೆದ ಇದುವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಈ ಅಧ್ಯಾಯದಲ್ಲಿ ಮಾಡುವ ಉದ್ದೇಶ ಹೊಂದಲಾಗಿದೆ.

ಎರಡನೇ ಅಧ್ಯಾಯವು ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣದ ಸೈದ್ಧಾಂತಿಕ ವಿಶ್ಲೇಷಣೆಯನ್ನು ವಿವರಿಸುವದಾಗಿದ್ದು, ಮಾಧ್ಯಮದ ಚಾರಿತ್ರಿಕ ನೋಟ, ದೂರದರ್ಶನದ ಪ್ರಾರಂಭ ಮತ್ತು ಉಗಮದ ಹಿನ್ನೆಲೆಯನ್ನು ಇಲ್ಲಿ ವಿವರಿಸಿಕೊಳ್ಳುವುದು. ಆಯ್ದುಕೊಂಡ ಕನ್ನಡ ಮತ್ತು ಹಿಂದಿ ಧಾರಾವಾಹಿಗಳಲ್ಲಿ ಪ್ರತಿನಿಧಿತವಾಗಿರುವ ಮಹಿಳೆ, ಕುಟುಂಬ, ಸಂಪ್ರದಾಯ, ಆಚರಣೆಗಳು, ಮಹಿಳೆಯ ಪಾತ್ರವನ್ನು ಕುರಿತು ಚರ್ಚೆ ಮಾಡುವುದಾಗಿದೆ.

ಅಧ್ಯಾಯ ಮೂರು ಆಯ್ದುಕೊಂಡ ಧಾರಾವಾಹಿಗಳ ವಿವರ, ವಿಶ್ಲೇಷಣೆಯ ಮೂಲಕ ಚರ್ಚೆ ಮಾಡುವುದಾಗಿದ್ದು, ಅಧ್ಯಯನಕ್ಕಾಗಿ ಆಯ್ದುಕೊಂಡಿರುವಂತಹ ಧಾರಾವಾಹಿಗಳಲ್ಲಿ ಕೌಟುಂಬಿಕ ಮಾದರಿಯ ಧಾರಾವಾಹಿಗಳು ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಯ ಕಥಾವಸ್ತುವಾಗಿ ಹೊಂದಿರುವಂತಹ ಧಾರಾವಾಹಿಗಳಾಗಿ ವಿಭಾಗೀಕರಿಸಲಾಗಿದ್ದು, ಕೌಟುಂಬಿಕ ಮಾದರಿಯ ಧಾರಾವಾಹಿಗಳಾಗಿ ಕಲ್ಯಾಣಿ (ಉದಯ) ಅವಲಕ್ಕಿ ಪವಲಕ್ಕಿ, ಇದ್ರ ಇರಬೇಕು ನಿನ್ನ ಹಾಂಗ, ಕೃಷ್ಣ ರುಕ್ಮಿಣಿ (ಸುವರ್ಣ) ಚಿತ್ರಲೇಖ (ಈಟಿ.ವಿ. ಕನ್ನಡ) ಕ್ಯೂಂಕಿ ಸಾಸ್ ಭಿ ಕಭಿ ಬಹು ಥೀ, ಕಹಾನಿ ಘರ ಘರ ಕೀ, ಕಸೌಟಿ ಜಿಂದಗೀ ಕೀ, ಸಾಥ ನಿಭಾನಾ ಸಾಥಿಯಾ ದಿಯಾ, ದಿಯಾ ಔರ ಬಾತಿ ಹಮ್ (ಸ್ಟಾರ್ ಪ್ಲಸ್) ಈ ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ಧಾರಾವಾಹಿಗಳಲ್ಲಿ ನಿರ್ವಚನಗೊಳ್ಳುವ ಹೆಣ್ಣಿನ ಚಿತ್ರಣ,

ವಿವಾಹ, ಕುಟುಂಬವನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಬಾಲ್ಯವಿವಾಹದ ವಸ್ತು ವನ್ನಿಟ್ಟುಕೊಂಡು ಚಿತ್ರಿತವಾಗಿರುವ ಧಾರಾವಾಹಿಗಳಾದ ಲಕುಮಿ (ಸುವರ್ಣ) ಬಾಲಿಕಾ ವಧು (ಕಲರ್ಸ್) ಈ ಧಾರಾವಾಹಿಗಳನ್ನು ವಿಶ್ಲೇಷಣೆ ಮಾಡಿಲಾಗಿದೆ. ಸಾಮಾಜಿಕ ಅನಿಷ್ಟ ಪದ್ಧತಿಯಾದ ದೇವದಾಸಿ ಪದ್ಧತಿಯ ವಿಷಯವನ್ನಿಟ್ಟುಕೊಂಡು ಪ್ರಸಾರವಾದ ಗೆಜ್ಜೆಪೂಜೆ (ಝೀ ಕನ್ನಡ)ಯ ವಿಶ್ಲೇಷಣೆ ಮಾಡಲಾಗಿದೆ. ಹೆಣ್ಣು ಶಿಶು ಹತ್ಯೆಯನ್ನು ಬಿಂಬಿಸುವಂತಹ ಧಾರಾವಾಹಿ ನಾ ಆನಾ ದೇಶ್ ಮೇರೆ ಲಾಡೊ (ಕಲರ್ಸ್) ಈ ಧಾರಾವಾಹಿಗಳನ್ನು ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಪ್ರಸ್ತುತ ದಿನಗಳಲ್ಲಿ ಬಹು ಚರ್ಚೆಗೆ ಒಳಗಾಗುತ್ತಿರುವ ಇತ್ತೀಚಿನ ದಶಕಗಳಲ್ಲಿ ಹೆಚ್ಚು ಪ್ರಾತಿನಿಧ್ಯವನ್ನು ಪಡೆದುಕೊಳ್ಳುತ್ತಿರುವ ಬಾಡಿಗೆ ತಾಯಿಯ ಕಲ್ಪನೆಯನ್ನು ಇಟ್ಟುಕೊಂಡು ಪ್ರಸಾರವಾದಂತಹ ಧಾರಾವಾಹಿ ಜೋಗುಳ(ಝೀ ಕನ್ನಡ)ವನ್ನು ಅಧ್ಯಯನಕ್ಕಾಗಿ ಆಯ್ದುಕೊಂಡಿದ್ದೇನೆ. ಕಥೆಯನ್ನು ವಿವರಿಸಿ, ವಿಶ್ಲೇಷಣೆ ಇಲ್ಲಿ ಮಾಡಲಾಗಿದೆ.

ಮುಂದಿನ ಅಧ್ಯಾಯದಲ್ಲಿ ಧಾರಾವಾಹಿಗಳು ಪಡೆಯುತ್ತಿರುವ ಜನಪ್ರಿಯತೆಯಂತೆಯೇ ಇಂದು ರಿಯಾಲಿಟಿ ಶೋ ಪಡೆದುಕೊಳ್ಳುತ್ತಿರುವ ಜನಪ್ಪಿಯತೆಯನ್ನು ಕುರಿತು ವಿಸ್ತಾರವಾದ ಚರ್ಚೆಯನ್ನು ಅಧ್ಯಾಯ ನಾಲ್ಕರಲ್ಲಿ ಮಾಡಲಾಗಿದ್ದು; ರಿಯಾಲಿಟಿ ಶೋಗಳು ಪ್ರಸಾರವಾದ ಹಿನ್ನೆಲೆ, ಭಾರತದಲ್ಲಿ ಮತ್ತು ಕನ್ನಡದಲ್ಲಿ ಪ್ರಸಾರಗೊಂಡ ಹಿನ್ನೆಲೆಯನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ರಿಯಾಲಿಟಿ ಶೋಗಳು ಹೊಂದಿರುವ ಉದ್ದೇಶ, ಉದ್ದೇಶಿತ ವೀಕ್ಷಕರು. ಈ ಕಾರ್ಯಕ್ರಮಗಳ ಪ್ರಸಾರದ ಅವಧಿಯನ್ನು ಕುರಿತು ವಿವರಣೆ ನೀಡಲಾಗಿದೆ. ಈ ರಿಯಾಲಿಟಿ ಶೋಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡು ಪ್ರಸಾರವಾದಂತಹ ಕನ್ನಡದ ಬದುಕು ಜಟಕಾಬಂಡಿ (ಝೀ ಕನ್ನಡ) ಕಥೆಯಲ್ಲ ಜೀವನ (ಸುವರ್ಣ) ಮತ್ತು ಇದು ಯಾರು ಬರೆದ ಕಥೆಯೋ (ಕಸ್ತೂರಿ) ಈ ರಿಯಾಲಿಟಿ ಶೋಗಳಲ್ಲಿ ಪ್ರಸಾರವಾದ ಕೆಲವು ಸಂಚಿಕೆಗಳ ವಿವರ ನೀಡುವುದರ ಜೊತೆಗೆ ವಿಶ್ಲೇಷಣೆ ಕೈಗೊಂಡಿದ್ದೇನೆ. ಈ ರಿಯಾಲಿಟಿ ಶೋಗಳಲ್ಲಿ ಮಹಿಳಾ ನಿರೂಪಕಿಯರನ್ನೇ ಯಾಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ? ಇದರ ಹಿಂದಿರುವ ಕಾರಣವೇನು? ಎಂಬುದನ್ನು ತಿಳಿದುಕೊಳ್ಳುವ ಉದ್ದೇಶ ಹೊಂದಲಾಗಿದೆ. ಈ ರಿಯಾಲಿಟಿ ಶೋಗಳಿಗೂ ವಾಸ್ತವ ಬದುಕಿಗೂ ಇದರ ನಡುವೆ ಇರುವ ಭಿನ್ನತೆಯ ಚರ್ಚೆಯನ್ನು ಇಲ್ಲಿ ಕೈಗೊಳ್ಳಲಾಗಿದೆ.

ಅಧ್ಯಾಯ ಐದು ಕ್ಷೇತ್ರಕಾರ್ಯ ಮಾಹಿತಿಯ ವಿವರಣೆಯಾಗಿದ್ದು; ಧಾರಾವಾಹಿಗಳು ಅಂದರೇನು? ಧಾರಾವಾಹಿಗಳು ಬೇಕೆ, ಬೇಡವೇ? ಧಾರಾವಾಹಿಗಳು ಸಮಾಜದಲ್ಲಿ ಬದಲಾವಣೆ ತರಬಹುದೇ? ಧಾರಾವಾಹಿಗಳಲ್ಲಿ ಮಹಿಳೆಯರ ಪ್ರತಿನಿಧೀಕರಣ ಹೇಗಿದೆ? ಈ ಧಾರಾವಾಹಿಗಳನ್ನು ಕುರಿತು ಮಹಿಳೆಯರು ಹೊಂದಿರುವ ಒಟ್ಟಾರೆ ದೃಷ್ಟಿಕೋನ ಎಂತಹದ್ದು? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಉದ್ದೇಶದಿಂದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿತ್ತು. ಕ್ಷೇತ್ರಕಾರ್ಯಕ್ಕಾಗಿ ಯಾದಗಿರಿ ಮತ್ತು ಗುಲಬರ್ಗಾ

ಜಿಲ್ಲೆಗಳಿಂದ ಒಟ್ಟು ೨೦೦ ಮಹಿಳೆಯರನ್ನು ಮಾಹಿತಿದಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದು, ರಚಿತ ಮತ್ತು ಅರಚಿತ ಪ್ರಶ್ನಾವಳಿಯೊಂದಿಗೆ, ಸಹಭಾಗಿ ಅವಲೋಕನದ ಮೂಲಕ ಸಂದರ್ಶನವನ್ನು ಕೈಗೊಳ್ಳಲಾಗಿದೆ. ಸಂದರ್ಶನಕ್ಕಾಗಿ ಆಯ್ದುಕೊಂಡಿರುವಂತಹ ಮಾಹಿತಿದಾರರ ಲಿಂಗ, ವೃತ್ತಿ, ವರ್ಗ, ವಯೋಮಾನದ ಆಧಾರದ ಮೇಲೆ ಆಯ್ಕೆ ಮಾಡಿಕೊಂಡು ಸಂದರ್ಶನ ಮಾಡಲಾಗಿದೆ. ಸಂದರ್ಶನ ಮಾಡಿದ ಮಾಹಿತಿದಾರರಲ್ಲಿ ಲಿಂಗ, ವೃತ್ತಿ, ವಯೋಮಾನ, ವರ್ಗದ ಆಧಾರದ ಮೇಲೆ ವಿಶೇಷವಾಗಿರುವಂತಹ ಐದು ಸಂದರ್ಶನದ ಮಾಹಿತಿಯನ್ನು ಈ ಅಧ್ಯಾಯದಲ್ಲಿ ದಾಖಲಿಸಿದ್ದೇನೆ. ಸಂದರ್ಶನದಲ್ಲಿ ಬಳಸಲಾದ ಆಡುನುಡಿಗಳ ವಿಶೇಷವಾದ ಪ್ರಾದೇಶಿಕ ವಿಶಿಷ್ಟತೆಯನ್ನು ಹೊಂದಿದ ಪದಸೂಚಿಯನ್ನು ಕೊನೆಯಲ್ಲಿ ನೀಡಲಾಗಿದೆ. ಮಾಹಿತಿದಾರರು ಧಾರಾವಾಹಿಗಳನ್ನು ಕುರಿತು ಹೊಂದಿರುವಂತಹ ದೃಷ್ಟಿಕೋನವನ್ನು ಅರಿಯುವ ಪ್ರಯತ್ನ ಈ ಭಾಗದಲ್ಲಿ ಮಾಡಲಾಗಿದೆ. ಅಂತಿಮವಾಗಿ ಧಾರಾವಾಹಿಗಳಲ್ಲಿ ಪ್ರತಿನಿಧೀಕರಣಗೊಂಡಿರುವ ಕೌಟುಂಬಿಕ ಮಹಿಳಾ ಪಾತ್ರಗಳು ಹೇಗೆ ರೂಪುಗೊಂಡಿವೆ. ಕುಟುಂಬ, ಸಂಪ್ರದಾಯ, ಆಚರಣೆಗಳು ಹೆಣ್ಣಿನ ಜೀವನದಲ್ಲಿ ಹೇಗೆ ಚಿತ್ರಿತವಾಗಿವೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಸಮಾರೋಪದ ಅಧ್ಯಾಯದಲ್ಲಿ ಇಡೀ ಅಧ್ಯಯನದ ಫಲಿತಗಳನ್ನು ಮತ್ತು ಅಧ್ಯಯನದ ಮುಂದಿನ ಸಾಧ್ಯತೆಗಳನ್ನು ವಿವರಣಾತ್ಮಕವಾಗಿ ವಿವರಿಸಲಾಗಿದೆ. ಕೊನೆಯ ಅನುಬಂಧದಲ್ಲಿ ಆಯ್ದ ಧಾರಾವಾಹಿಗಳು ಮತ್ತು ರಿಯಾಲಿಟಿ ಶೋಗಳ ಛಾಯಾಚಿತ್ರಗಳನ್ನು ಕೊಡಲಾಗಿದೆ. ಮಾಹಿತಿದಾರರ ವಿವರ, ಪ್ರಶ್ನಾವಳಿಯ ಮಾದರಿ ಮತ್ತು ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ಅವಗಾಹನೆಗಾಗಿ ಕೊಡಲಾಗಿದೆ.

೧.೬. ಇಲ್ಲಿಯವರೆಗೂ ನಡೆದ ಅಧ್ಯಯನದ ಸಮೀಕ್ಷೆ

"ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ" ಎಂಬ ವಿಷಯದ ಬಗೆಗೆ ನನ್ನ ಗಮನಕ್ಕೆ ಬಂದಿರುವ ಅಧ್ಯಯನಗಳು, ಸಂಶೋಧನಾ ಲೇಖನಗಳು, ಪತ್ರಿಕಾ ಲೇಖನಗಳ ಸಾಹಿತ್ಯ ಸಮೀಕ್ಷೆಯನ್ನು ಈ ಕೆಳಗಿನಂತೆ ಅಧ್ಯಯನ ಮಾಡಲಾಗಿದೆ.

ಮೊದಲಿಗೆ "ಸಂವಹನ ಮಾಧ್ಯಮಗಳು" ಎಂಬ ಪುಸ್ತಕದಲ್ಲಿ ಬಿ.ಎಸ್. ಚಂದ್ರಶೇಖರ್ (೨೦೦೩) ಅವರು ಸಂವಹನ ಮಾಧ್ಯಮಗಳನ್ನು ಹತ್ತು ಅಧ್ಯಾಯಗಳಲ್ಲಿ ವಿವರಿಸುತ್ತಾರೆ. ಸಮೂಹ ಸಂವಹನ ಮಾಧ್ಯಮ, ಹುಟ್ಟು, ಬೆಳವಣಿಗೆ, ವಿಕಾಸಗಳನ್ನು ಪ್ರಾರಂಭದ ಕಾಲಘಟ್ಟದಿಂದ ಹಿಡಿದು ಇಲ್ಲಿಯವರೆಗೂ ಆದಂತಹ ಅಭಿವೃದ್ಧಿ, ಬದಲಾವಣೆಯ ಒಟ್ಟು ರೂಪುರೇಷೆಗಳನ್ನು ಈ ಪುಸ್ತಕದಲ್ಲಿ ವಿವರವಾಗಿ ವಿಶ್ಲೇಷಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಟೆಲಿವಿಷನ್ ಮತ್ತು ಉಪಗ್ರಹ ಟೆಲಿವಿಷನ್ ಎಂಬ ಅಧ್ಯಾಯಗಳಲ್ಲಿ, ಟೆಲಿವಿಷನ್ ಕುರಿತು ವಿಸ್ತಾರವಾದ ಮಾಹಿತಿಯನ್ನು ಒದಗಿಸಿದ್ದಾರೆ. ಟೆಲಿವಿಷನ್ ಎಂದರೆ ೧೯೯೧ರವರೆಗೂ

ದೂರದರ್ಶನವೇ ಆಗಿದ್ದು, ಪರಿಸ್ಥಿತಿ ಬದಲಾಗಿ, ದೂರದರ್ಶನ ಹತ್ತರದಲ್ಲಿ ಅಥವಾ ನೂರರಲ್ಲಿ ಒಂದು ಚಾನೆಲ್ಲಾಗಿದೆ ಎಂದು ಗುರುತಿಸುತ್ತಾರೆ.

ಒಟ್ಟು ಮಾಧ್ಯಮ ಮತ್ತು ಆ ಮಾಧ್ಯಮದ ಒಂದು ಭಾಗವನ್ನು ಪ್ರತ್ಯೇಕಿಸಲು ಬೇರೆ ಬೇರೆ ಪದಗಳು ಅಗತ್ಯವಾಗಿದೆ. ರೇಡಿಯೋ ಪದವನ್ನು ಕನ್ನಡ ಎರವಲು ತೆಗೆದುಕೊಂಡಿರುವಂತೆ ಟೆಲಿವಿಷನ್ ಪದವನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಟೆಲಿವಿಷನ್ ಪದದಷ್ಟೆ ಅದರ ಸಂಕ್ಷೇಪ ರೂಪ ಟಿ.ವಿ ಅಥವಾ ಟಿ.ವಿ ಬಳಕೆ ಸಾಮಾನ್ಯವಾಗಿದೆ. ಟಿ.ವಿ ಉಚ್ಚಾರಣೆಗೆ ಹತ್ತಿರವಿರುವ ಟೀವಿ ಪದವನ್ನು ಇಲ್ಲಿ ಬಳಸಲಾಗಿದೆ ಇದೇ ರೀತಿ ಈಗಾಗಲೇ ಶಬ್ದಭಂಡಾರಕ್ಕೆ ಚಾನೆಲ್ ಪದವನ್ನು ಅದೇ ರೂಪದಲ್ಲಿ ಉಳಿಸಿಕೊಳ್ಳಲಾಗಿದೆ" ಎಂದು ವಿವರಿಸಿದ್ದಾರೆ.

ಮುಂದಿನ ಚರ್ಚೆಗಳಲ್ಲಿ ಟೆಲಿವಿಷನ್ ತಂತ್ರಜ್ಞಾನ, ಉಗಮ, ಬೆಳವಣಿಗೆ, ಕೇಬಲ್, ಉಪಗ್ರಹ ಟೆಲಿವಿಷನ್‌ಗಳ ಕುರಿತು ಮಾಹಿತಿ ನೀಡುತ್ತಾರೆ, ಪಾಶ್ಚಾತ್ಯ ದೇಶಗಳಲ್ಲಿ ಅಸ್ತಿತ್ವ ಪಡೆದುಕೊಂಡ ನಂತರದ ದಿನಗಳಲ್ಲಿ ಭಾರತಕ್ಕೆ ಬಂದ ಮೊದಲ ಘಟ್ಟವನ್ನು ವಿವರಿಸಿದ್ದಾರೆ, ಬೆಳವಣಿಗೆಯ ವಿವಿಧ ಮಜಲುಗಳು, ದೂರದರ್ಶನದ ಜನನ, ದೂರದರ್ಶನ ಪ್ರಾರಂಭವಾದ ಮೊದಲ ಹಂತದಲ್ಲಿ ತಯಾರಿಸಲಾದ ಕಾರ್ಯಕ್ರಮಗಳ ಕುರಿತು ಮಾಹಿತಿ ಇದೆ. ದೂರದರ್ಶನ ಅಥವಾ ಟೆಲಿವಿಷನ್ ಎಂಬ ವಿಶಾಲವಾದ ವ್ಯಾಪ್ತಿಯೊಳಗೆ ಪ್ರವೇಶ ಮಾಡುವಾಗ ಎದುರಾಗುವ ಪ್ರತಿಯೊಂದು ವಿಷಯದ ಕುರಿತ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ದೂರದರ್ಶನ ಪಾಶ್ಚಾತ್ಯರಿಂದ ಆಮದಾಗಿರುವ ಸರಕು ಎಂಬುದು ಗೊತ್ತಿರುವ ವಿಷಯ. ಹಾಗೆ ಬಂದ ದೂರದರ್ಶನಕ್ಕೆ ಕಾರ್ಯಕ್ರಮಗಳ ರೂಪುರೇಷೆಗಳನ್ನು ಪಶ್ಚಿಮ ದೇಶದಿಂದಲೇ ಆಮದು ಮಾಡಿಕೊಳ್ಳುವುದು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಅನಿವಾರ್ಯವಾಗಿತ್ತು. ಆದರೆ ಭಾರತ ದೇಶ ಮಾತ್ರ ವಿದೇಶದಿಂದ ಕಾರ್ಯಕ್ರಮಗಳನ್ನು ಪಡೆಯದೆ ನಮ್ಮ ದೇಶದಲ್ಲೇ ನಮ್ಮ ಭಾಷೆಗಳಲ್ಲೇ ಕಾರ್ಯಕ್ರಮಗಳನ್ನು ಸಿದ್ಧ ಮಾಡಲು ನಿರ್ಧರಿಸಿತು. ಇದು ಒಂದು ದಿಟ್ಟ ಹೆಜ್ಜೆಯೇ ಸರಿ ಎನ್ನುತ್ತಾರೆ.

ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ವಿಶಿಷ್ಟ ರೀತಿಯಲ್ಲಿಯೂ ಎಲ್ಲ ವಯೋಮಾನದವರಿಗೂ, (ಮಹಿಳೆ, ಮಕ್ಕಳು, ಪುರುಷರು, ಕಾರ್ಮಿಕರು, ರೈತರು)ತಲುಪುವಂತಹ ಕಾರ್ಯಕ್ರಮಗಳ ಪ್ರಸಾರವನ್ನು ಮಾಡಲಾಗುತ್ತಿತ್ತು. ಇದರೊಂದಿಗೆ ಸುದ್ದಿ, ಸಂದರ್ಶನ, ನಾಟಕ, ರೂಪಕ, ಕ್ರೀಡೆ, ನೃತ್ಯ, ಸಂಗೀತಗಳಿಗೂ ಆದ್ಯತೆ ನೀಡಿ ಪ್ರಸಾರ ಮಾಡಲಾಗುತ್ತಿತ್ತು. ಇದರೊಂದಿಗೆ ಸಾಮಾಜಿಕ ಕಳಕಳಿಯನ್ನು ತೋರುವ ಉದ್ದೇಶದಿಂದ ಜನಸಂಖ್ಯೆಯನ್ನು ನಿಯಂತ್ರಿಸುವ ಕುಟುಂಬಯೋಜನೆಯ ಕಾರ್ಯಕ್ರಮಗಳಾದ ನಿರೋಧ, ಮಾಲಾ ಡಿ.ಕಾಪರ್ ಟಿ, ಮೊದಲಾದ ಯೋಜನೆಗಳ ಕುರಿತು ಜಾಹೀರಾತು ಪ್ರಸಾರ ಮಾಡಲಾಗುತ್ತಿತ್ತು. ವಿಜ್ಞಾನ, ಪರಿಸರ ಕಾರ್ಯಕ್ರಮಗಳು, ವಿಜ್ಞಾನಕ್ಕೆ ಸಂಬಂಧಿಸಿದ ಭಾಷಣ, ಸಂದರ್ಶನ, ಚರ್ಚೆಗಳ

ರೂಪದಲ್ಲಿ ಕೇಳಿ–ತಿಳಿ ಎನ್ನುವ ಶಿಕ್ಷಣ ತತ್ವವನ್ನು ಅನುಸರಿಸಲಾಗುತ್ತಿತ್ತು. ಮನರಂಜನೆಯ ಕಾರ್ಯಕ್ರಮಗಳು ಕೂಡ ಪ್ರಸಾರವಾಗತೊಡಗಿದವು ಮನರಂಜನೆಯ ಕಾರ್ಯಕ್ರಮಗಳಲ್ಲಿ ಮೊಟ್ಟಮೊದಲು ಕೌಟುಂಬಿಕ ಟೀವಿ ಧಾರವಾಹಿಗಳು ಪ್ರಸಾರವಾಗತೊಡಗಿದವು. ಟೀವಿ ಧಾರವಾಹಿಗಳು ನೋಡುಗರನ್ನು ಅದರಲ್ಲೂ ಮಹಿಳಾ ವೀಕ್ಷಕರನ್ನು ಹಿಡಿದಿಡುವ ಪ್ರಯತ್ನದಲ್ಲಿ ಯಶಸ್ವಿಯಾಗಿ. ಅತಿ ಹೆಚ್ಚು ಮಹಿಳಾ ವಿಕ್ಷಕರನ್ನು ಹೊಂದಿರುವಂತಹ ಮಾಧ್ಯಮವಾಯಿತು. ಪಶ್ಚಿಮದೇಶಗಳಿಂದ ಆಮದಾಗಿರುವಂತಹ ಕಾರ್ಯಕ್ರಮಗಳಾಗಿದ್ದು ೧೯೫೦ರಿಂದ ಇಲ್ಲಿಯವರೆಗೂ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿದೆ ಎಂದು ವಿವರಿಸುತ್ತಾರೆ.

ಧಾರಾವಾಹಿಯ ಪ್ರಸಾರದ ಅವಧಿಯನ್ನು ಅದು ಭಾರತದಲ್ಲಾದ ಬದಲಾವಣೆಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಸಿನಿಮಾದಲ್ಲಿ ಒಂದು ಮುಖ್ಯವಾದ ಕಥೆ ಇರುತ್ತದೆ, ಅದು ಮುಂದೆ ಜಟಿಲವಾಗುತ್ತಾ ಪರಾಕಾಷ್ಠೆಯನ್ನು ತಲುಪಿದ ಮೇಲೆ ಕತೆ ಎತ್ತಿದ ಒಂದು ಸಮಸ್ಯೆಗೆ ಪರಿಹಾರದ ಸೂಚನೆ ಇರುತ್ತದೆ. ಆದರೆ ಧಾರಾವಾಹಿಗಳು ಹಾಗಲ್ಲ, ಧಾರಾವಾಹಿಗೆ ಒಂದು ಕಥೆಯಿರುವುದಿಲ್ಲ. ಇಲ್ಲಿ ಹಲವು ಕಥೆಗಳು ಏಕಕಾಲದಲ್ಲಿ ಘಟಿಸುತ್ತಿರುತ್ತವೆ. ಒಂದು ಕತೆ ಇನ್ನೊಂದು ಕಥೆಗೆ ಎಳೆದುಕೊಂಡು ಹೋಗುತ್ತದೆ. ಹೊಸಪಾತ್ರಗಳು ಬರುತ್ತಲೇ ಇರುತ್ತವೇ, ಹಾಗೆಯೇ ಮುಂಚೆ ಮುಖ್ಯವೆನಿಸಿದ ಪಾತ್ರಗಳು ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗಬಹುದು. ಧಾರಾವಾಹಿಯನ್ನು ಬೇಕಾದಲ್ಲಿಂದ ನೋಡಬಹುದು. ಕಥೆ ಎಲ್ಲಿ ಪ್ರಾರಂಭವಾಯಿತು ಎಂದು ಯೋಚಿಸಬೇಕಾಗಿಲ್ಲ. ಹಾಗೆಯೇ ನೋಡುವುದನ್ನು ಯಾವಾಗ ಬೇಕಾದರೂ ನಿಲ್ಲಿಸಬಹುದು; ಕಥೆ ಹೇಗೆ ಮುಗಿಯುತ್ತದೆ ಎನ್ನುವುದು ಮುಖ್ಯವಾಗುವುದಿಲ್ಲ ಎಂದು ವಿವರಿಸುತ್ತಾರೆ.

ಮುಂದುವರೆಯುತ್ತ ಲೇಖಕರು ಧಾರಾವಾಹಿಗಳು ಪ್ರಾರಂಭದ ಕಾಲ ಘಟ್ಟದಲ್ಲಿ ದೇಶದ ಅಭಿವೃದ್ಧಿ ಪರ ಕೌಟುಂಬಿಕ ಟಿವಿ ಧಾರಾವಾಹಿಗಳನ್ನು ನಿರ್ಮಿಸಲಾಗಿತ್ತಿತ್ತು, ಈ ಧಾರಾವಾಹಿಗಳು ವಯಸ್ಕ ಶಿಕ್ಷಣ, ಕುಟುಂಬ ಯೋಜನೆಗಳ ಬಗ್ಗೆ ದೂರದರ್ಶನದ ಮೂಲಕ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದವು ಎಂದು ವಿವರಿಸುತ್ತಾರೆ,

ಹೀಗೆ ಪ್ರಾರಂಭವಾದ ಧಾರಾವಾಹಿಗಳು, ಯಶಸ್ಸು ಮತ್ತು ಜನಪ್ರಿಯತೆಯನ್ನು ಪಡೆದುಕೊಳ್ಳುವುದನ್ನು ಅರಿತುಕೊಂಡು ಇನ್ನಷ್ಟು ಹೊಸ ಧಾರಾವಾಹಿಗಳನ್ನು ಪ್ರಸಾರ ಮಾಡಲು ದೂರದರ್ಶನ ಮುಂದಾಯಿತು. ಮೊದಲ ಪ್ರಯತ್ನವಾಗಿ "ಹಂಲೋಗ್"ದಂತಹ ಸಾಮಾಜಿಕ ಕಳಕಳಿಯನ್ನು ಹೊಂದಿರುವಂತಹ, ಕುಟುಂಬ ಯೋಜನೆಯ ಮಹತ್ವವನ್ನು ಹೇಳುವ ಧಾರಾವಾಹಿಯನ್ನು ಪ್ರಸಾರ ಮಾಡಲಾಯಿತು. ಇದು ಧಾರಾವಾಹಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ. ಒಂದೂವರೆ ವರ್ಷ, ವಾರಕ್ಕೆ ಎರಡು ದಿನ ಪ್ರಸಾರವಾದ ಧಾರಾವಾಹಿ ಇದಾಯಿತು. "ಹಂಲೋಗ್" ಯಶಸ್ವಿಯಾದ ನಂತರ ಚಿತ್ರ ನಿರ್ಮಾಪಕರಾದ ರಮೇಶಸಿಪ್ಪಿ ತಯಾರಿಸಿದ "ಬುನಿಯಾದ" ಹಂಲೋಗ್ ನಂತರ ಪ್ರಸಾರವಾಗಿ

ಜನಪ್ರಿಯತೆಯನ್ನು ಕಂಡುಕೊಂಡಿತು. ಮುಂದೆ ಅನೇಕ ಸಾಮಾಜಿಕ ಕಳಕಳಿಯ ಧಾರಾವಾಹಿಗಳನ್ನು ದೂರದರ್ಶನ ಪ್ರಸಾರ ಮಾಡಿತು.

ಸಾಮಾಜಿಕ ವಿಷಯಗಳನ್ನು ಹೊರತುಪಡಿಸಿ ಭಿನ್ನ ರೀತಿಯ ಪ್ರಯತ್ನವಾಗಿ ಭಕ್ತಿಪ್ರಧಾನ ಧಾರವಾಹಿಗಳ ನಿರ್ಮಾಣಕ್ಕೆ ಕೈಹಾಕಿದರು. ಮೊದಲ ಪ್ರಯತ್ನವಾಗಿ ೧೯೮೭ರಲ್ಲಿ ರಾಮಾಯಣ ಮತ್ತು ೧೯೮೮ರಲ್ಲಿ ಮಹಾಭಾರತ ಧಾರಾವಾಹಿಗಳು ಪ್ರಸಾರವಾದವು. ಈ ಭಕ್ತಿಪ್ರಧಾನ ಧಾರಾವಾಹಿಗಳನ್ನು ಎಲ್ಲಾ ಜಾತಿಗಳ, ಎಲ್ಲಾ ಧರ್ಮಗಳ, ಎಲ್ಲಾ ವಯೋಮಾನದವರು ಮುಕ್ತ ಮನಸ್ಸಿನಿಂದ ಸ್ವೀಕರಿಸಿದರು. ರಾಮಾಯಣ ಮತ್ತು ಮಹಾಭಾರತವು ಗಳಿಸಿದ ಜನಪ್ರಿಯತೆಯೂ ದೂರದರ್ಶನದಲ್ಲಿ ಪ್ರಸಾರವಾದ ಟಿವಿ ಕಾರ್ಯಕ್ರಮಗಳಲ್ಲಿ ಅತ್ಯಂತ ಜನಪ್ರಿಯತೆಯನ್ನು ಪಡೆದ ಕಾರ್ಯಕ್ರಮಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದವು.

ಒಟ್ಟಾರೆಯಾಗಿ ಧಾರಾವಾಹಿಯ ವ್ಯಾಪ್ತಿಗೆ ಪ್ರವೇಶ ಪಡೆಯುವುದಕ್ಕೂ ಮೊದಲು ಅದರ ಇತಿಹಾಸ, ಉಗಮ, ಬೆಳವಣಿಗೆ, ಕಾರ್ಯಕ್ರಮಗಳ ರೂಪುರೇಷೆ ಹೀಗೆ ಎಲ್ಲದರ ಕುರಿತಾದ ಸವಿಸ್ತಾರವಾದ ಮಾಹಿತಿಯನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ(೨೦೦೧) ಈ ಕೃತಿಯ ಲೇಖನಗಳನ್ನು ಒಟ್ಟು ಐದು ಭಾಗಗಳಾಗಿ ವಿಂಗಡಿಸಲಾಗಿದ್ದು, ಮೊದಲನೆಯ ಭಾಗದಲ್ಲಿ ಒಟ್ಟು ಇಪ್ಪತ್ತು ಉಪಶೀರ್ಷಿಕೆಗಳಲ್ಲಿ ತಾತ್ವಿಕ ಚರ್ಚೆಯನ್ನು ಮಾಡಲಾಗಿದೆ, ಎರಡನೆಯ ಭಾಗವು ಸಾಹಿತಿಗಳು ಮತ್ತು ಅವರ ಕೃತಿಗಳ ವಿಶ್ಲೇಷಣೆಯನ್ನು ಮಾಡುವ ಇಪ್ಪತ್ತು ಉಪಶೀರ್ಷಿಕೆಗಳಿವೆ, ಮೂರನೆಯ ಭಾಗವು ಸಮೂಹ ಮಾಧ್ಯಮಗಳ ಒಟ್ಟಾರೆಯ ನೋಟವನ್ನು ಎಂಟು ಉಪಶೀರ್ಷಿಕೆಗಳಲ್ಲಿ ವಿವರಿಸಿದ್ದಾರೆ, ಭಾಗ ನಾಲ್ಕು ರಾಜಕೀಯದ ವಿಷಯಗಳಿಗೆ ಮೀಸಲಾಗಿರಿಸಿದರೆ, ಭಾಗ ಐದರಲ್ಲಿ ಪ್ರಚಲಿತದ ವಿದ್ಯಮಾನಗಳ ಕುರಿತು ಇತರ ಪತ್ರಿಕೆಗಳಲ್ಲಿ ಬರೆದಂತಹ ಲೇಖನಗಳ ವಿವರಣೆಯಾಗಿದೆ. ಇದು ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ ಪುಸ್ತಕದ ಒಂದು ಪಕ್ಷಿನೋಟ. ಈ ಪುಸ್ತಕದಲ್ಲಿ ನನ್ನ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಭಾಗ ಮೂರರಲ್ಲಿ ಚರ್ಚಿಸಲಾಗಿರುವ ವಿಷಯಗಳು ಅಧ್ಯಯನಕ್ಕೆ ಪೂರಕವಾಗಿವೆ. ಒಟ್ಟು ಸಾರಂಶವನ್ನು ಹೀಗೆ ವಿಶ್ಲೇಷಿಸಲಾಗಿದೆ.

ಭಾಗ ಮೂರರಲ್ಲಿ ಒಟ್ಟು ಎಂಟು ಉಪಶೀರ್ಷಿಕೆಗಳಿದ್ದು ಇಲ್ಲಿ ಮುಖ್ಯವಾಗಿ ದೂರದರ್ಶನ ಸಂಸ್ಕೃತಿ ಮತ್ತು ಸಮೂಹ ಮಾಧ್ಯಮ ಸಂಸ್ಕೃತಿ ಮತ್ತು ಮಹಿಳೆ ಎಂಬ ಉಪಶೀರ್ಷಿಕೆಗಳಲ್ಲಿ ದೂರದರ್ಶನ ವ್ಯಕ್ತಿ–ಪಾತ್ರಗಳ ಜನರ ಬದುಕಿನ ಭಾಗವಾಗುವ ಪ್ರಕ್ರಿಯೆಯಾಗಿ ಸಂಭವಿಸುತ್ತದೆ. ಇದು ಒಂದು ಪ್ರಭಾವಿ ಮಾಧ್ಯಮ. ದೂರದರ್ಶನದ ಪ್ರಭಾವಕ್ಕೆ ಸಾಮಾನ್ಯ ಜನರು ಹೇಗೆ ಮಾರುಹೋಗುತ್ತಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾರೆ. ೧೯೬೦ರಲ್ಲಿ ರಿಚರ್ಡ ನಿಕ್ಸನ್ ಮತ್ತು ಜಾನ್.ಎಫ್. ಕೆನಡಿ ಇಬ್ಬರೂ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳಾಗ ಬಯಸಿದ್ದಾಗ, ದೂರದರ್ಶನವು ನಾಲ್ಕು ಭಾಗಗಳಲ್ಲಿ ನಾಲ್ಕು ಗಂಟೆಗಳ ಸಂದರ್ಶನ

ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ದೂರದರ್ಶನದಲ್ಲಿ ಪ್ರಸಾರ ಮಾಡಿದ ಈ ಸಂದರ್ಶನದಿಂದ ಕೆನಡಿಯ ಪರವಾಗಿ ಮುಂಚೆ ಶೇಕಡ ೪೯ ಜನರಿದ್ದರೆ ಸಂದರ್ಶನದ ನಂತರ ೫೬ ಜನರಾದರು ನಿಕ್ಸನ್ ಪರವಾಗಿ ಮುಂಚೆ ಶೇಕಡ ೩೩ ಜನರಿದ್ದರೆ, ಆನಂತರ ೩೧ಕ್ಕೆ ಇಳಿದರು. ಇದು ದೂರದರ್ಶನ ಪ್ರಭಾವದಿಂದಾಗಿ ವ್ಯಕ್ತಿಯ ಮಾತು. ದೇಹಭಾಷೆ ಗಮನಿಸಿದ ಜನರಿಗೆ ಅವರಲ್ಲಿ ಒಬ್ಬ ಸಮರ್ಥವಾದ ನಾಯಕತ್ವದ ಗುಣಗಳು ಗೋಚರಿಸಿತು. ಆದರೆ ರಿಚರ್ಡ ನಿಕ್ಸನ್ ಅವರು ಮಾತಿನಲ್ಲಿ ತಡವರಿಕೆಯಿಂದ ಮಾತನಾಡಿದರು ಹೀಗಾಗಿ ಅವರಲ್ಲಿ ಒಬ್ಬ ಸಮರ್ಥ ನಾಯಕನು ಕಂಡುಬರಲಿಲ್ಲ. ಹಾಗಾಗಿ ಅವರನ್ನು ನಾಯಕನಾಗಿ ಗುರುತಿಸಲು ಜನರು ಹಿಂದೆ ಸರಿದರು ಎಂದು ಹೇಳುತ್ತಾರೆ. ಇದು ದೂರದರ್ಶನದ ಪ್ರಭಾವಕ್ಕೆ ಹಿಡಿದ ಕನ್ನಡಿ ಎಂದು ಉದಾಹರಣೆ ನೀಡಿದ್ದಾರೆ.

ಈ ಲೇಖನದ ಒಟ್ಟಾರೆಯ ಸಾರಾಂಶ, ದೂರದರ್ಶನದಂತಹ ಪ್ರಭಾವಿ ಮಾಧ್ಯಮ ಒಂದು ದೇಶದ, ಅಲ್ಲಿಯ ಸಮಾಜದ ಅಭಿವೃದ್ಧಿಗೆ, ಬೆಳವಣಿಗೆಗೆ ಸಂಪೂರ್ಣವಾಗಿ ಸಹಾಯಕವಾಗುವ ಸಾಧನವಾಗಬೇಕು. ನಮ್ಮ ದೇಶದ ಸಂಸ್ಕೃತಿಗೆ ಪೂರಕವಾದಂತಹ ಆಶಯಗಳನ್ನು ಹೊಂದಿರಬೇಕು. ಅದು ಯಾವುದೇ ಒಂದು ರಾಜಕೀಯ ಪ್ರೇರಿತವಾಗಿ, ಇಲ್ಲವೇ ಬಂಡವಾಳಶಾಹಿ ಪ್ರೇರಿತವಾಗಿ ಇರಬಾರದು. ಒಂದು ವೇಳೆ ಯಾವುದಾದರೂ ಒಂದಕ್ಕೆ ಸೀಮಿತವಾದರೆ, ಅದು ನಮ್ಮ ದೇಶಕ್ಕೆ ದೊಡ್ಡ ದುರಂತವನ್ನೇ ಸೃಷ್ಟಿಸುತ್ತದೆ ಎಂದು ಇಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಇನ್ನೊಂದು ಭಾಗ ಸಮೂಹ ಮಾಧ್ಯಮ, ಸಂಸ್ಕೃತಿ ಮತ್ತು ಮಹಿಳೆ ಈ ಭಾಗದಲ್ಲಿ ಸಮೂಹ ಮಾಧ್ಯಮಗಳಾದ ಪತ್ರಿಕೆ, ಸಿನಿಮಾ ಮತ್ತು ದೂರದರ್ಶನ ಇವುಗಳು ಹೇಗೆ ಹೆಣ್ಣಿನ ಚಿತ್ರಣ ಕೊಡುತ್ತಿವೆ ಎಂಬುದಕ್ಕೆ ಕ್ರಿಸ್ಟಾಫರ್ ಕಾಡವೆಲ್ ಅವರು ಈ ಬೆಳವಣಿಗೆಗಳನ್ನು ಮೂರು ವಿಭಾಗಗಳಲ್ಲಿ ಪ್ರತಿಪಾದಿಸುತ್ತಾರೆ.

೧. ಭಾವೋನ್ಮತ್ತ ಪ್ರೇಮ (Passionate Love) ಬೂರ್ಸ್ವಾ ಸಂಸ್ಕೃತಿಗೂ

೨. ರಮ್ಯ ಅಥವಾ ಧೀರೋದಾತ್ತ ಪ್ರೇಮ (Romantic or chivolrouslove) ಊಳಿಗಮಾನ್ಯ ಸಂಸ್ಕೃತಿಗೂ

೩. ಲೈಂಗಿಕ ಪ್ರೇಮ (Platonic love) ಗುಲಾಮಷಾಹಿ ಗ್ರೀಕ್ ಸಂಸ್ಕೃತಿಗೂ ಸೇರಿದ್ದಾಗಿದೆ.

ಹೀಗೆ ವಿವರಿಸುವ ಮೂಲಕ, ನಮ್ಮ ಸಮೂಹ ಮಾಧ್ಯಮಗಳಾದ ಪತ್ರಿಕೆಗಳು, ಸಿನೆಮಾಗಳು ಮತ್ತು ಧಾರಾವಾಹಿಗಳೂ ಕೂಡ ಹೆಣ್ಣನ್ನು ಆದರ್ಶೀಕರಣಕ್ಕೆ ಒಳಗಾಗಿಸುವ ಮೂಲಕ ಅವರು ಹೇಳುವ, ತೋರಿಸುವ ಆದರ್ಶನಾರಿಯರೇ ಶ್ರೇಷ್ಠರು ಎನ್ನುವಂತಹ ಧೋರಣೆಯನ್ನು ಬಿತ್ತುತ್ತಿದ್ದಾರೆ. ಧಾರಾವಾಹಿಗಳಲ್ಲಿ ಬರುವ, ವೀರರೂ ಪತಿವ್ರತೆಯರೂ ಆಗಿರುವ ಮಹಿಳೆಯರಿಗೆ ಸಂಬಂಧಿಸಿದ "ತೇರಾಪನ್ನೆ" ಧಾರಾವಾಹಿಯನ್ನು ಇಲ್ಲಿ ವಿವರಿಸುತ್ತಾರೆ.

ಇಲ್ಲಿ ತೋರಿಸುವ ಮಹಿಳೆಯರು ಮೇಲ್ವರ್ಗದ ಹಿಂದೂ ಮಹಿಳೆಯರೇ ಆಗಿದ್ದು, ಕ್ರೈಸ್ತ ಮತ್ತು ಮುಸ್ಲಿಂ ಧರ್ಮದ ಮಹಿಳೆಯರನ್ನು ಮತ್ತು ಸಮಾಜದ, ಅಂಚಿನ ಸಮುದಾಯದವರು, ಕೆಳವರ್ಗದ, ಆದಿವಾಸಿ ಮಹಿಳೆಯರ ಕುರಿತು ಜಾಣ ಮೌನವಹಿಸುವುದನ್ನು ಇಲ್ಲಿ ವಿವರಿಸಿದ್ದಾರೆ.

ಕೊನೆಯ ಭಾಗದಲ್ಲಿ ಜಾಹಿರಾತುಗಳು ಮಹಿಳೆಯರನ್ನು ಕೇವಲ ಸರಕಾಗಿ ಮಾತ್ರ ಭಾವಿಸಲಾಗಿದೆ. ತನಗೆ ಸಂಬಂಧವೇ ಇರದ ವಸ್ತುಗಳಿಗೆ, ಅರೆನಗ್ನ ದೇಹವನ್ನು ಪ್ರದರ್ಶಿಸುವ ಅನಿವಾರ್ಯ ಪರಿಸ್ಥಿತಿಯನ್ನು ಬಂಡವಾಳಶಾಹಿಗಳು ಅವಳ ಮೇಲೆ ಹೇರಿರುವುದನ್ನು ವಿಶ್ಲೇಷಿಸಿದ್ದಾರೆ. ದೂರದರ್ಶನದ ಸಂಸ್ಕೃತಿಯ ಮಹತ್ವ ತಿಳಿಸುವುದು. ಒಂದು ಲೇಖನವಾದರೆ ಸಮೂಹ ಮಾಧ್ಯಮಗಳು, ತಳೆದಿರುವ ಧೋರಣೆಗಳಲ್ಲಿ ಶೋಧನಾತ್ಮಕತೆಗಿಂತ ಹೆಚ್ಚಾಗಿ ಸಿದ್ಧರೂಪಗಳನ್ನು ಸ್ವೀಕರಿಸಿ ಆ ಮೂಲಕ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಬಂಡವಾಳಶಾಹಿ ಸಂಸ್ಕೃತಿಗೆ ತನ್ನತನವನ್ನು ಒಪ್ಪಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವುದನ್ನು ಇಲ್ಲಿ ವಿವರಿಸಿದ್ದಾರೆ.

ಶಾಂತ ನಾಗರಾಜ ಅವರು ಟಿ.ವಿ ಧಾರಾವಾಹಿಗಳಲ್ಲಿ ಮಹಿಳೆ ಮತ್ತು ಮೌಲ್ಯ (೨೦೦೫) ಧಾರಾವಾಹಿಗಳ ಕುರಿತು ಒಂದು ಸೂಕ್ಷ್ಮ ನೋಟವನ್ನು ಕೊಟ್ಟಿದ್ದಾರೆ. ಅವರ ಪ್ರಕಾರ "ನಮ್ಮಲ್ಲಿ ಅಗಾಧವಾದ ಮಾನವ ಸಂಪನ್ಮೂಲವಿದ್ದರೂ ನಾವು, ನಮ್ಮ ದೇಶ ಹಿಂದೆಯೇ ಉಳಿದಿದೆ, ಬಡತನ, ರೋಗ-ರುಜೀನ, ಅಜ್ಞಾನ ಅನಕ್ಷರತೆ ಯಾವುದೂ ನಿವಾರಣೆಯಾಗಿಲ್ಲ. ಈ ಬಡತನವನ್ನೂ, ಸೋಮಾರಿ ಪ್ರವೃತಿಯನ್ನು ನಮ್ಮ ಮುಂದಿನ ಜನಾಂಗಕ್ಕೂ ಬಿತ್ತಲು ಟಿ.ವಿ. ಎನ್ನುವ ವ್ಯವಸ್ಥೆಯನ್ನು ಬೇರೆ ಸಂಪದ್ಭರಿತವಾಗಿ ಕಲ್ಪಿಸಿಕೊಂಡಿದ್ದೇವೆ ಎಂದೂ ವಿವರಿಸಿದ್ದಾರೆ.

ಈ ಲೇಖನದ ಸಾರಾಂಶವನ್ನೂ ನೋಡುವುದಾದರೆ ಧಾರಾವಾಹಿಗಳೂ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶಗಳನ್ನು ಕೊಡುವಂತಹ ಕಾರ್ಯಕ್ರಮಗಳಾಗಿರಬೇಕು, ಆದರೆ ಪ್ರಸ್ತುತದ ಧಾರವಾಹಿಗಳನ್ನು ಗಮನಿಸಿದರೆ, ಧಾರಾವಾಹಿಯಲ್ಲಿ ತರ್ಕವಿಹೀನ, ಕಲಾವಿಹೀನ, ಬುದ್ಧಿಹೀನ ಸುಳ್ಳಿನ ಸುರುಳಿಗಳು! ಎನ್ನುವಂತಹ ಧೋರಣೆಗೆ ಬಂದು ನಿಂತಿವೆ ಎನ್ನುತ್ತಾರೆ. ಧಾರಾವಾಹಿಯಗಳನ್ನು ನಿರ್ದೇಶಿಸುವ, ನಿರ್ದೇಶಕರ ಮತ್ತು ಅವರು ಹೊಂದಿರುವ ದೃಷ್ಟಿಕೋನದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಾರೆ. ಒಂದು ಲೇಖನದಲ್ಲಿ ಎನ್. ಗಾಯಿತ್ರಿಯವರು ಕೂಡ ನಿರ್ದೇಶಕರ ವಿರುದ್ಧ ಮಾತನಾಡುತ್ತಾರೆ. ಪಾರ್ವತಿ, ದುರ್ಗಾ, ಕಾವ್ಯಾಂಜಲಿ, ಭಾಗೀರಥಿ, ಭಾಂಧವ್ಯ, ಸ್ಪಂದನ ಇಂಥ ಸೀರಿಯಲ್‌ಗಳಲ್ಲಿ ಮಹಿಳೆಯರನ್ನೂ ಖಳನಾಯಕಿ ಯರನ್ನಾಗಿ ಚಿತ್ರಿಸುತ್ತಾರೆ. ಹೆಣ್ಣಿಗೆ ಹೆಣ್ಣೆ ಶತ್ರು ಎನ್ನುವ ಅವೈಜ್ಞಾನಿಕ ತಿಳುವಳಿಕೆ ಈ ನಿರ್ದೇಶಕರ ಮೂಲಮಂತ್ರವೆಂದು ಟೀಕಿಸುತ್ತಾರೆ. ಧಾರಾವಾಹಿಗಳನ್ನು ಹೆಚ್ಚು ಆಸಕ್ತಿಯಿಂದ ನೋಡುವ ಮಹಿಳಾ ವೀಕ್ಷಕರಿಗೆ, ಈ ಧಾರಾವಾಹಿಗಳ ಮೂಲಕ ಅವಾಸ್ತವ, ಕಾನೂನುಬಾಹಿರ

ಸಂಬಂಧಗಳು ಎಲ್ಲವನ್ನು ಅತ್ಯಂತ ಸಹಜವೋ ಎನ್ನುವಂತೆ ಸಿರಿಯಲ್‌ನಲ್ಲಿ ತುಂಬಿ ಬಿಡುತ್ತಾರೆ. ಇದನ್ನು ಒಪ್ಪಿಕೊಂಡರೆ ಸಮಾಜದ ನೈತಿಕತೆ ನಾಶವಾದಂತೆಯೇ ಎಂದು ಹೇಳುತ್ತಾರೆ. ಸಾಹಿತಿ ಡಾ. ಕೆ. ಮರುಳಸಿದ್ದಪ್ಪನವರು ಕೂಡ ಧಾರಾವಾಹಿ ನಿರ್ದೇಶನ ಮಾಡುವ ನಿರ್ದೇಶಕರುಗಳು ತಮ್ಮ ಸೀರಿಯಲ್‌ನಲ್ಲಿ ಹೆಣ್ಣುಗಳನ್ನು ಊಳಿಗಮಾನ್ಯ ಪದ್ಧತಿ ಯಲ್ಲಿಯೇ ನಡೆಸಿಕೊಳ್ಳುತ್ತಾರೆ. ಇಲ್ಲಿ ಅಭಿನಯಿಸುವ ಬಹುತೇಕರಿಗೆ ಅಭಿನಯದ ಪ್ರತಿಭೆಯೇ ಇಲ್ಲವೆಂದು ಖಾರವಾಗಿ ಹೇಳುತ್ತಾರೆ.

ಧಾರಾವಾಹಿ ನಿರ್ದೇಶನಗಳಲ್ಲಿ ಟಿ.ಎನ್. ಸೀತಾರಾಂ, ಪ್ರಕಾಶ ಬೆಳವಾಡಿ, ವೈಶಾಲಿ, ಕಾಸರವಳ್ಳಿ, ಗೀರಿಶ ಕಾಸರವಳ್ಳಿಯಂತಹ ನಿರ್ದೇಶಕರು ಮಿನುಗುತಾರೆಯಂತೆ ಕಂಡು ಮಾಯವಾಗುತ್ತಿದ್ದಾರೆ. ಇವರು ನಿರ್ದೇಶಿಸಿದ ಒಳ್ಳೆಯ ಕಥಾ ಹಂದರವಿರುವ ಧಾರಾವಾಹಿಗಳಿಗೆ ಹೋಲಿಸಿದರೆ, ಈಗಿನ ಧಾರಾವಾಹಿಗಳು ತುಂಬಾ ಪೇಲವವಾದ ಅರ್ಥದಲ್ಲಿ ಮೂಡಿಬರುತ್ತಿವೆ. ಸಮಾಜಕ್ಕೆ ಒಂದು ಒಳ್ಳೆಯ ಸಂದೇಶನವನ್ನು ನೀಡುವಲ್ಲಿ ಕೊರತೆ ಕಂಡುಬರುತ್ತದೆ ಎನ್ನುವುದು ಲೇಖಕರ ಅಭಿಪ್ರಾಯ.

ಈ ಲೇಖನದ ಒಟ್ಟಾರೆಯಾದ ಆಶಯವನ್ನು ನೋಡುವುದಾದರೆ, ಇಂದು ಬರುತ್ತಲಿರುವ ಅಥವಾ ಪ್ರಸಾರಗೊಳ್ಳುತ್ತಿರುವ ಸಾಲು ಸಾಲು ಧಾರಾವಾಹಿಗಳಲ್ಲಿ, ಯಾವುದಾದರೂ ಒಂದು ಪ್ರಮುಖ ವಿಷಯ ಅಥವಾ ಸಮಸ್ಯೆಯನ್ನು ಕುರಿತು, ಚರ್ಚೆಗಳಾಗದೆ ನಮ್ಮ ದೈನಂದಿನ ಜೀವನದಲ್ಲಾಗುವ ಘಟನೆಗಳನ್ನೇ ಉದ್ದವಾಗಿ ಹಿಂಜಿ ತೋರಿಸಲಾಗುತ್ತಿದೆ, ಮಹಿಳೆಯರನ್ನು ಸೂತ್ರದ ಗೊಂಬೆಯಾಗಿ ಯಾವ ಪಾತ್ರವಾದರೂ ಸರಿ ಅದನ್ನು ನಿರ್ವಹಿಸುವುದು ಮಾತ್ರ ಆಕೆಯ ಕೆಲಸ ಅದು ಊಳಿಗಮಾನ್ಯದಂತಾದರೂ ಸರಿ, ಗ್ಲಾಮರಸ್ಸಾಗಿಯಾದರೂ ಸರಿ, ಧಾರಾವಾಹಿಗಳನ್ನು ಮಾಡುತ್ತಲೇ ಬರುತ್ತಿದ್ದಾರೆ. ಇನ್ನೂ ಕಲೆಯ ಬಗ್ಗೆ ಸಾಮಾನ್ಯ ತಿಳುವಳಿಕೆ ಯಿಲ್ಲದವರೂ ಕೂಡಾ ಈ ವಲಯದೊಳಗೆ ಪ್ರವೇಶಿಸುತ್ತಿದ್ದಾರೆಂದು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಡಾ. ಆರ್ ಸುನಂದಮ್ಮ ಅವರು 'ಮಹಿಳಾ ಸಂಸ್ಕೃತಿ' (೨೦೦೫) ಕೃತಿಯಲ್ಲಿ ದೂರದರ್ಶನ ಮತ್ತು ಮಹಿಳೆ ಎಂಬ ಲೇಖನದಲ್ಲಿ, ದೂರದರ್ಶನದ ಒಟ್ಟಾರೆ ನೋಟವನ್ನು ಮೂರು ಭಾಗಗಳಲ್ಲಿ ಅವರ ಲೇಖನದ ಆಶಯವನ್ನು ಗುರುತಿಸಬಹುದು.

೧. ಪ್ರದರ್ಶಕ ವಸ್ತುವಾಗಿ ಮಹಿಳೆ

೨. ಸಿದ್ಧ ಮಾದರಿಗಳು

೩. ಸೌಂದರ್ಯಕ್ಕೆ ಹೆಚ್ಚಿನ ಆದ್ಯತೆ

ಈ ಮೂರು ಅಂಶಗಳು ಧಾರಾವಾಹಿಯ ಮತ್ತು ಜಾಹೀರಾತಿನ ಮೂಲಮಂತ್ರಗಳಾಗಿದ್ದು, ಇದನ್ನೆ ಮಹಿಳೆಯರೂ ಕೂಡ ಅಳವಡಿಸಿಕೊಳ್ಳುವ ಒಂದು ಪರಿಪಾಠ ಮಾಧ್ಯಮವು

ಮಾಡುತ್ತಿದೆ. ದೂರದರ್ಶನ ಮಾಧ್ಯಮದಲ್ಲಿ ಪುರುಷರಿಗಿಂತ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗಿದೆ, ನಿರೂಪಕಿಯರಾಗಿ, ವಾರ್ತಾ ವಾಚಕಿಯಾಗಿ, ಜಾಹೀರಾತು, ಧಾರಾವಾಹಿ ಅಲಂಕಾರ, ಕುಣಿತ ಹೀಗೆ ಎಲ್ಲ ಕಾರ್ಯಕ್ರಮಗಳಲ್ಲೂ ಮಹಿಳೆಯರನ್ನು ಕಾಣುತ್ತೇವೆ. ಆದರೆ ತೆರೆಯ ಮರೆಯ ತಂತ್ರಜ್ಞಾನ ರಂಗದಲ್ಲಿ ಮಹಿಳೆಯ ಭಾಗವಹಿಸುವಿಕೆ ತೀರ ಕಡಿಮೆ ಅಥವಾ ಇಲ್ಲವೇ ಇಲ್ಲ. ಇಲ್ಲಿ ಮಹಿಳೆ ಕೇವಲ ಪ್ರದರ್ಶಕ ವಸ್ತುವನ್ನಾಗಿ ಮಾತ್ರ ನೋಡಲಾಗುತ್ತದೆ.

ಮಹಿಳೆಯರನ್ನು ಪ್ರದರ್ಶಕ ವಸ್ತುವಿನಂತೆ, ಸಿದ್ಧಮಾದರಿಗಳಲ್ಲೇ ಕಟ್ಟಿಕೊಡುವ ಪ್ರಯತ್ನಗಳು ನಡೆದಿವೆ. ಮಹಿಳೆಯರ ರೂಢಿಗತ ಮಾದರಿಗಳು ಮತ್ತಷ್ಟು ಸ್ಥಿರೀಕರಣಕ್ಕೆ ಒಳಗಾಗುತ್ತಿವೆ. ಅಲಂಕಾರ, ಅಡುಗೆ-ಉಡುಗೆ, ಮನೆಯ ಒಪ್ಪ ಓರಣಗಳಲ್ಲಿಯೇ ಮಹಿಳೆಯ ಪ್ರತಿಭೆ ಇರುವಂತೆ ಈ ಕಾರ್ಯಕ್ರಮಗಳು ಬಿತ್ತರವಾಗುತ್ತಿವೆ ಎಂದಿದ್ದಾರೆ. ಮಹಿಳೆಯರ ಸಿದ್ಧಮಾದರಿಗಳತ್ತ ಹೆಚ್ಚು ಗಮನಹರಿಸುವ, ಸಬಲೀಕರಣಕ್ಕಾಗಿ ಒತ್ತು ಹಾಕದಿರುವುದನ್ನು ಈ ವಿಶ್ಲೇಷಣೆಯಲ್ಲಿ ಕಾಣಬಹುದು.

ಹೆಣ್ಣನ್ನು ಕೇವಲ ಸೌಂದರ್ಯದ ಪ್ರತೀಕವಾಗಿ, ಕಾಣುವ ಮನೋಭಾವನೆಯನ್ನು ಬೆಳಸಲಾಗುತ್ತಿದೆ. ನಿರೂಪಕಿಯರಿಗಾಗಿ ಜಾಹೀರಾತು ನೀಡುವಲ್ಲಿನ ಅಂಶಗಳನ್ನು ಗಮನಿಸಿ, ೨೫ ವರ್ಷಗಳೊಳಗಿನ ಸುಂದರ, ಆಕರ್ಷಕ ನಿಲುವಿರುವ ಹುಡುಗಿಯರು ಬೇಕಾಗಿದ್ದಾರೆ ಎಂದಿರುತ್ತದೆ. ಅವಳ ಸೌಂದರ್ಯಕ್ಕೆ ನೀಡಿದಷ್ಟು ಮಹತ್ವ ಅವಳ ಬೌದ್ಧಿಕತೆಯ ಕಡೆಗೆ ನೀಡುವುದಿಲ್ಲವೆಂದಿದ್ದಾರೆ.

ಧಾರಾವಾಹಿಗಳಲ್ಲಿ ಅದೇ ಸಿದ್ಧಮಾದರಿಯ ಪಾತ್ರಗಳಲ್ಲಿ, ಟೊಳ್ಳು ವ್ಯಕ್ತಿತ್ವದ ಖಚಿತ ನಿರ್ಧಾರಗಳನ್ನು ಸರಿಯಾದ ಕಾಲದಲ್ಲಿ ತೆಗೆದುಕೊಳ್ಳಲಾರದಂತಹ ದ್ವಂದ್ವದ ಪಾತ್ರವನ್ನು ಪ್ರಗತಿಯ ಹಾದಿಯಲ್ಲಿರುವ ಮಹಿಳೆ ಸ್ಥಿತಿಯೆಂದು ನಿರೂಪಿಸಲಾಗುತ್ತದೆ, ಇದನ್ನೇ ಮಹಿಳಾಪರ ಕಾರ್ಯಕ್ರಮಗಳೆಂದು ಗುರುತಿಸಲಾಗುವ ಬಹುಪಾಲು ಕಾರ್ಯಕ್ರಮಗಳಲ್ಲಿ ಕಾಣಬಹುದು. ತ್ಯಾಗ ಮಾಡುವುದು, ಕುಟುಂಬದ ಶ್ರೇಷ್ಠತೆಗಾಗಿ ದುಡಿಯುವ ಪಾತ್ರಗಳನ್ನು ಕೊಡುವುದು ಒಂದು ಕಡೆಯಾದರೆ, ಕುಟುಂಬವನ್ನು ಒಡೆಯುವ ಸ್ತ್ರೀ ಮಾದರಿಗಳನ್ನು ಇನ್ನೊಂದೆಡೆ ಒಲಿದರೆ ನಾರಿ ಮುನಿದರೆ ಮಾರಿ ಎಂಬ ಪರಂಪರೆಯಲ್ಲಿ ರೂಢಿಗತವಾದ ಮಾದರಿಗಳಲ್ಲಿಯೇ ಸ್ತ್ರೀಯರ ಪಾತ್ರಗಳನ್ನು ಸ್ವಿಕರಿಸುತ್ತಿರುವುದು ಹೆಚ್ಚಾಗಿ ಕಂಡುಬರುತ್ತದೆ ಎಂದು ವಿವರಿಸಿದ್ದಾರೆ. ಜಾಹಿರಾತಿನಲ್ಲಿ ಮಹಿಳಾ ಪ್ರಾತಿನಿಧ್ಯದ ಕುರಿತು ಚರ್ಚೆ ಮಾಡಲಾಗಿದೆ

ಟಿ.ವಿ ಮತ್ತು ಮಹಿಳೆ ಲೇಖನದಲ್ಲಿ ಡಾ. ಎಂ. ಉಷಾ ಅವರು (೨೦೦೮) "ಸಾಹಿತ್ಯ ಮತ್ತು ಸಮಾಜ" ಕೃತಿಯಲ್ಲಿ ಡಾ. ಬಸವರಾಜ ಸಬರದ (ಸಂ) ವಿವರಿಸಿದ್ದಾರೆ. ಇಲ್ಲಿನ ಲೇಖನದಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳು ನನ್ನ ಅಧ್ಯಯನಕ್ಕೆ ಪೂರಕವಾಗಿದೆ. ಟಿ.ವಿ. ಧಾರಾವಾಹಿಗಳು, ಮಹಿಳೆಯರು ಒಟ್ಟು ನೋಡುವ ಸಮಯ, ಅದರ ಹಿನ್ನೆಲೆ, ಮಹಿಳೆಯರ

ಅಭಿಪ್ರಾಯ ಇವನ್ನೆಲ್ಲ ಕ್ಷೇತ್ರಕಾರ್ಯದ ಮಾಹಿತಿಯಿಂದ ವಿವರಿಸಿದ್ದಾರೆ. ಹಾಗಾಗಿ ಈ ಲೇಖನ ಮಹತ್ವದ ಅಂಶಗಳನ್ನು ಹೇಳುತ್ತದೆ.

ಇದೇ ಕೃತಿಯ ಇನ್ನೊಂದು ಲೇಖನದಲ್ಲಿ ಡಾ. ಅನುಪಮಾ ನಿರಂಜನ ಅವರ ಸಮೂಹ ಮಾಧ್ಯಮಗಳು ಮತ್ತು ಮಹಿಳೆ, ಈ ಲೇಖನವು ಕೂಡ ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತದೆ.

ಡಾ. ಟಿ.ಸಿ. ಪೂರ್ಣಿಮಾ ಅವರು (೨೦೦೩) "ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ" ಕೃತಿಯಲ್ಲಿಯೂ ಕೂಡ ಅಧ್ಯಯನಕ್ಕೆ ಆಕರವನ್ನು ಒದಗಿಸುತ್ತದೆ. ಮಾಧ್ಯಮ, ಮಾಧ್ಯಮದ ಉಗಮ, ಇತಿಹಾಸ, ಬೆಳವಣಿಗೆ, ಅಭಿವೃದ್ಧಿಯನ್ನು ಕುರಿತು ವಿಸ್ತಾರವಾದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಎಸ್.ಎನ್. ಶ್ರೀಧರ ಮೂರ್ತಿಯವರು. "ದೃಶ್ಯ ಮಾಧ್ಯಮಗಳು ಮತ್ತು ಮಹಿಳೆ" ಎಂಬ ಲೇಖನದಲ್ಲಿ, ಮಹಿಳಾ ಅಧ್ಯಯನದ ವಿಶೇಷ ಸಂಚಿಕೆ, ಡಾ. ಎಚ್.ಎಸ್. ಶ್ರೀಮತಿ (ಸಂ) (೨೦೦೧)" ಚಲನಚಿತ್ರ ನಾಟಕ, ರಂಗಭೂಮಿ ಈ ವಲಯದೊಳಗೆ ಮಹಿಳೆಯರನ್ನು ನಡೆಸಿಕೊಳ್ಳುವ ರೀತಿ, ಅವರು ಅನುಭವಿಸುವ ಯಾತನೆ, ಹಿಂಸೆ, ಶೋಷಣೆ, ಮಾನಸಿಕ ಒತ್ತಡಗಳ ಕುರಿತು ಚರ್ಚಿಸಿದ್ದಾರೆ. ಹೆಣ್ಣು ಎಂದರೆ ಒಬ್ಬ ವ್ಯಕ್ತಿಯಂತೆ ಕಾಣದೇ ಭೋಗದ ವಸ್ತುವಿನ ನೆಲೆಯಲ್ಲಿ ಗುರ್ತಿಸುವ ಪುರುಷಪ್ರಧಾನ ಮಾಧ್ಯಮಗಳು, ಪ್ರಾರಂಭವಾದ ದಶಕಗಳಿಂದಲೇ ಈ ಧೋರಣೆಯನ್ನು ಅನುಸರಿಸಿಕೊಂಡು ಬಂದಿದೆ. ನಟಿಯರಿಗೆ ಇರುವ ನೋವು, ಕಷ್ಟಗಳು ಈ ವಲಯದೊಳಗೆ ಅವಳ ಮೇಲಾಗುವ ದೌರ್ಜನ್ಯ, ಮಾನಸಿಕ ಒತ್ತಡಗಳನ್ನು ಕುರಿತು ವಿಶಾಲವಾದ ಚರ್ಚೆಗಳು, ಅಧ್ಯಯನಗಳು ನಡೆಯಬೇಕಾದ ಅಗತ್ಯತೆಯ ಕುರಿತು ಈ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

Media and Women, N.K.Verna, ಈ ಕೃತಿಯಲ್ಲಿ Portrayal Of women in media. ಭಾಗದಲ್ಲಿ ಲೇಖಕರು ಮಹಿಳೆಯರ ಅಭಿವೃದ್ಧಿ ಹಾಗೂ ಶಿಕ್ಷಣದ ಉನ್ನತಿಗೆ ಮಾಧ್ಯಮದ ಪಾತ್ರ ತುಂಬಾ ಮುಖ್ಯವಾಗಿರುತ್ತದೆ. ಎಲ್ಲಾ ವರ್ಗದ ಜನರ ಮನೆಗೂ ತಲುಪುವ ಈ ಮಾಧ್ಯಮ ನಿರಂತರ ಉಪಯೋಗಕ್ಕೆ ಅನುಕೂಲವಾಗಬೇಕು ಹಾಗೂ ಹೆಚ್ಚಾಗಿ ಕೃಷಿ ಸ್ವಯಂ ಉದ್ಯೋಗಕ್ಕೆ ಉತ್ತೇಜನ ಮತ್ತು ಮಾಹಿತಿ ತಲುಪಿಸಬೇಕಾದ ಇಂದಿನ ಅಗತ್ಯವನ್ನು ಒತ್ತಿ ಹೇಳುತ್ತಾರೆ.

೧೯೮೬ರಲ್ಲಿ ಮಹಿಳಾ ಅಭಿವೃದ್ಧಿ ವಿಭಾಗವು ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಹಿಳಾ ಅಭಿವೃದ್ಧಿ ಮತ್ತು ಸಮಾನತೆಗಾಗಿ ದೂರದರ್ಶನದ ಪಾತ್ರ ಎಂಬ ವಿಷಯದ ಕುರಿತು ಚರ್ಚೆಯನ್ನೇರ್ಪಡಿಸಿತು. ಈ ಚರ್ಚೆಯಲ್ಲಿ ಮಹಿಳೆಯರ ಅಭಿವೃದ್ಧಿಗೆ ಒಟ್ಟು ೧೮ ಸಲಹೆ ಸೂಚನೆಗಳನ್ನು ದೂರದರ್ಶನಕ್ಕೆ ಸಂಬಂಧಪಟ್ಟಂತೆ ನೀಡಲಾಯಿತು. ಈ ಮೂಲಕ

ಮಹಿಳೆಯರ ಅಭಿವೃದ್ಧಿಯಲ್ಲಿ ದೂರದರ್ಶನದ ಪಾತ್ರ ಕುರಿತು ವಿವರಿಸಲಾಯಿತು. ಮುಂದುವರೆದು ಧಾರಾವಾಹಿಗಳು ಮಹಿಳಾ ಬದುಕಿನ ಸ್ಥಿರಮಾದರಿಯ ಪಾತ್ರವನ್ನು ಅದರಲ್ಲಿಯೂ ಹಳ್ಳಿಯ ಮಹಿಳೆಯರ ಬದುಕಿನ ವಾಸ್ತವದ ಚಿತ್ರಣವನ್ನು ಈ ಧಾರಾವಾಹಿಗಳು ಕಟ್ಟಿಕೊಡುತ್ತವೆ. ಜಾಗಿನ ಜೋನತು ಎಂಬ ಕಥಾ ಧಾರಾವಾಹಿ ವಿಶೇಷವಾಗಿ ಮಹಿಳಾ ಬದುಕನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದೆ. ಅದರಲ್ಲೂ ವಿಶೇಷವಾಗಿ ಹಳ್ಳಿಯಲ್ಲಿರುವ ಮಹಿಳೆಯರು ತಮಗಾಗಿರುವ ಅನ್ಯಾಯದ ವಿರುದ್ಧ ಹಾಗೂ ಮಹಿಳೆಯರನ್ನು ಸಾಂಪ್ರದಾಯಿಕವಾಗಿ ನೋಡುವ ಸಮಾಜಕ್ಕೆ ತಕ್ಕದಾದ ಪಾಠ ಕಲಿಸಲು ಮಹಿಳೆಯರನ್ನು ಸಂಘಟಕರನ್ನಾಗಿ ಮಾಡಿ ತನಗೊಬ್ಬಳಿಗೆ ಅಲ್ಲಾ ಎಲ್ಲಾ ಮಹಿಳೆಯರಿಗೂ ಈ ಸಮಸ್ಯೆ ಬರಬಹುದು ಎನ್ನುವ ಉಕ್ತಿಯೊಂದಿಗೆ ಪ್ರಾರಂಭವಾಗಿ ಎದುರಾಗಿರುವ ಸಮಸ್ಯೆಯನ್ನು ನೀಗಿಸಲು ಹೋರಾಡುವ ಈ ಕಥೆ ತುಂಬಾ ಮಹತ್ವದ್ದಾಗಿದೆ. ಗ್ರಾಮೀಣ ಭಾಗದ ಮಹಿಳೆಯರಿಗೆ ಅರಿವಿನ ಸಿಂಚನ ದೊರೆತದ್ದಾಗಿದೆ. ಈ ಧಾರಾವಾಹಿಯಲ್ಲಿ ಲಿಂಗ ತಾರತಮ್ಯದ ವಿರುದ್ಧ ಧ್ವನಿ ಎತ್ತುವ ಕಾರ್ಯ ಮಾಡಲಾಗಿದೆ. ಮಹಿಳೆಯರು ಎದುರಿಸುವ ಸಾಮಾಜಿಕ ಮತ್ತು ಕೌಟುಂಬಿಕ ದೌರ್ಜನ್ಯಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ. ಅದಕ್ಕಾಗಿ ಮದುವೆಯನ್ನುವ ಸಾಂಪ್ರದಾಯಿಕ ಮಾದರಿಯಲ್ಲಿ ಹೆಣ್ಣಿಗೂ ಕೂಡ ಆಯ್ಕೆಯ ಸ್ವಾತಂತ್ರವಿರಬೇಕೆಂದು ಸಂದೇಶ ನೀಡುತ್ತದೆ. ಸ್ವಯಂ ನಿರ್ಧಾರ ತೆಗೆದುಕೊಳ್ಳದೇ ತಂದೆ ತಾಯಿಯರ ಮಾತಿಗೆ ಅವರ ನಿರ್ಧಾರಕ್ಕೆ ತಲೆಬಾಗಿ ಅದೆಷ್ಟೋ ಮಹಿಳೆಯರು ತಮ್ಮ ಜೀವನವನ್ನು ಬಲಿಕೊಟ್ಟ ಉದಾಹರಣೆಗಳನ್ನು ಇಲ್ಲಿ ವಿವರಿಸಲಾಗಿದೆ. ಧಾರಾವಾಹಿಯೂ ಮೂಲದಲ್ಲಿ ಮಹಿಳೆಯರ ಅಸ್ತಿತ್ವವನ್ನು ಎತ್ತಿಹಿಡಿಯುವ ಪ್ರಯತ್ನ ಮಾಡಿದೆ.

ಧಾರಾವಾಹಿ ಮತ್ತು ಸಿನೆಮಾ ಮಾಧ್ಯಮಗಳು ಹೆಣ್ಣಿನ ಬದುಕಿಗೆ ಒಂದು ಸಕಾರಾತ್ಮಕವಾದ ದಾರಿ ಹಾಕಿಕೊಡಬೇಕೆಂದು ಅಂತಹ ಕಾರ್ಯ ಇವುಗಳಿಂದ ನಡೆಯಬೇಕು. ನಾರಿ ನಾರಿಮಣಿಯಂತಹ ಧಾರಾವಾಹಿಯೂ ೪೦%ರಷ್ಟು ಮಹಿಳೆಯರ ಪರವಾಗಿ ವಾದ ಮಂಡಿಸಲಾಗಿದೆ. ಮಹಿಳೆಯರು ಆರ್ಥಿಕವಾಗಿ ಪ್ರಬಲರಾದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ವಿವರಿಸುತ್ತಾರೆ. ಮುಂದುವರೆದು ಮಹಿಳೆಯರು ತಮ್ಮ ಆತ್ಮಸ್ಥೈರ್ಯದ ಜೊತೆಗೆ ಶಿಕ್ಷಣ ಅರಿವು ಹಾಗೂ ಜೀವನದ ಭದ್ರತೆಗೆ ಬೇಕಾಗಿರುವ ತರಬೇತಿ ಹಾಗೂ ಸರಕಾರದ ಯೋಜನೆಗಳನ್ನು ಸದುಪಯೋಗದ ಕುರಿತು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

ಮಹಾಬಲೇಶ್ವರ ಕಾಟ್ರಹಳ್ಳಿ : ಮಾಹಿತಿ ಸಂಸ್ಕೃತಿ (೨೦೦೩) ಈ ಕೃತಿಯಲ್ಲಿ "ಟಿವಿಯಲ್ಲೇ ಬದುಕುವ ಠೀವಿ" ಎಂಬ ಲೇಖನದಲ್ಲಿ ಟೀವಿ ಬಂದ ಮೇಲೆ ಜನರ ಜೀವನದಲ್ಲಾದ ಬದಲಾವಣೆಗಳ ಒಟ್ಟು ಸ್ವರೂಪವನ್ನು ವಿವರಿಸಿದ್ದಾರೆ. ಟಿವಿಯಿಂದ ಮನುಷ್ಯನ ಮನೋಲೋಕದ ಸಾಮರ್ಥ್ಯವನ್ನು ಹೇಗೆ ಹಿಡಿದಿಡಲಾಗುತ್ತಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

Women and media changing roles, struggle and impact ಪೂಜಾ ಕಟಾರಿಯವರು ಈ ಪುಸ್ತಕದಲ್ಲಿ ಮಾಧ್ಯಮವನ್ನು ಕುರಿತು ಒಟ್ಟು ೧೧ ಅಧ್ಯಾಯಗಳಲ್ಲಿ ಹಲವು ವಿಷಯಗಳನ್ನೂ

ಕುರಿತು ಚರ್ಚೆ ಮಾಡಿದ್ದಾರೆ. ದೂರದರ್ಶನ, ಮಹಿಳೆ, ಕುಟುಂಬ ಉದ್ಯೋಗಸ್ಥೆ, ಸ್ತ್ರೀವಾದ, ಚಳುವಳಿ ಈ ಎಲ್ಲ ವಿಷಯಗಳನ್ನು ಕುರಿತು ಈ ಕೃತಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ

ಕನ್ನಡದ ದಿನಪತ್ರಿಕೆಗಳಲ್ಲಿ ಬಂದಂತಹ ಕೆಲವೊಂದು ಲೇಖನಗಳ ಸೂಕ್ಷ್ಮ ನೋಟ

ಕ್ಯಾಟವಾಕ್-ಸಾಫ್ಟ್‌ವೇರ್'-ಅಂಕುಡೊಂಕಿನ ಬಿಂಕ, ಈ ಲೇಖನವು ೮/೧೨/೨೦೦೯ರ ಉದಯವಾಣಿ ಪತ್ರಿಕೆಯಲ್ಲಿ, ಧರಣಿದೇವಿ ಮಾಲಗತ್ತಿಯವರು "ಮೈಸೂರಿನಿಂದ" ಎಂಬ ಅಂಕಣದಲ್ಲಿ ಪ್ರಸ್ತಾಪಿಸುತ್ತಾರೆ. ಈ ಲೇಖನವು ಮಾಧ್ಯಮವು ಯುವ ಜನಾಂಗದ ಮೇಲೆ ಅದರಲ್ಲಿಯೂ ಯುವತಿಯರನ್ನು ಹೇಗೆ ರೂಪಿಸಲಾಗುತ್ತಿದೆ ಎಂಬುದನ್ನು ವಿವರಿಸುತ್ತಾರೆ. ಜಾಗತೀಕರಣದ ಭರಾಟೆಯಲ್ಲಿ ಹೆಣ್ಣಿನ ಅಂದ-ಚಂದ, ಅಂಕು-ಡೊಂಕು, ಉಬ್ಬು-ತಗ್ಗುಗಳು ಹೇಗೆ ಬದಲಾವಣೆಯ ವ್ಯಾಖ್ಯಾನವನ್ನು ಪಡೆದುಕೊಳ್ಳುತ್ತಿವೆ. ಯುವತಿಯರು ಮಾಧ್ಯಮ ಸೃಷ್ಟಿಸುವ, ಸೃಷ್ಟಿಗೆ ಹೇಗೆ ಒಳಗಾಗುತ್ತಿದ್ದಾರೆ ಎಂದು ವಿವರಿಸುತ್ತಾರೆ.

ಮುಂದೆ ಹೀಗೆ ಬರೆಯುತ್ತಾರೆ. "ಫೆಮಿನೈನ್‌ನೆಸ್"ನ ಕಲ್ಪನೆ ನಮ್ಮ ಹುಡುಗಿಯರ ನಡೆ, ನುಡಿ, ಇರುವಿಕೆಯನ್ನೆಲ್ಲ ಪ್ರಭಾವಿಸಿದೆ. ಸಹಜವಾಗಿ ಮಾತನಾಡದೆ, ಇಷ್ಟಿಷ್ಟೇ ಉಲಿಯುವ "ಶುಕಭಾಷಿಣಿ"ಯಾಗುವ ಹುಡುಗಿ ತನ್ನ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಅರಳಿಸಿಕೊಳ್ಳಲಾರಳು, ಸಹಜತೆಯನ್ನು "ಫೆಮಿನೈನ್‌ನೆಸ್"ನ ಕಾಲ್ಪನಿಕ ಬೇಲಿಯಲ್ಲಿ ಕಟ್ಟಿ ಹಾಕಿದರೆ, ಜೀವನದ ಗಿಡ ಬೋನ್ಸಾಯ ಆಗದೇ ಇನ್ನೇನಾದಿತು?

ಮಾಧ್ಯಮ ಯುವತಿಯರಿಗೆ ಬೌದ್ಧಿಕ ಮಟ್ಟದ ಬೆಳವಣಿಗೆಗಿಂತ, ಸೌಂದರ್ಯಕ್ಕೆ ಪೂರಕವಾಗುವಂತಹ, ಮಾದರಿಗಳನ್ನು ಅವರ ಮನಸ್ಸಲ್ಲಿ ಬಿತ್ತುತ್ತಿದೆ ಎಂದು ಇಲ್ಲಿ ವಿವರಿಸುತ್ತಾರೆ.

ಟಿ.ವಿ. ನೋಡಿ, ನಿದ್ದೆ ಮಾಡಿ ಅನ್ನೋಕೆ, ಮಕ್ಕಳ ಸೃಷ್ಟಿಗೆ ನಿತ್ಯವೂ "ಶ್ರಮ" ಪಡಬೇಕಾ ಸಾರ್! ದಿನಾಂಕ ೧೮/೭/೨೦೦೯ರ ವಿಜಯಕರ್ನಾಟಕ ಪತ್ರಿಕೆಯ "ಬೆತ್ತಲೆ ಜಗತ್ತು" ಅಂಕಣದಲ್ಲಿ ಪ್ರತಾಪ್ ಸಿಂಹ ಅವರು, ತಮ್ಮ ಲೇಖನದಲ್ಲಿ ಹೀಗೆ ಬರೆಯುತ್ತಾರೆ. ವಿಶ್ವ ಜನಸಂಖ್ಯಾ ದಿನಾಚರಣೆಯ ಅಂಗವಾಗಿ, ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಆಜಾದ್ ಅವರು ಒಂದು ಹೇಳಿಕೆಯನ್ನು ನೀಡುತ್ತಾರೆ. ಅದರ ಸಾರಾಂಶ ಹೀಗಿದೆ "ಒಂದು ವೇಳೆ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಒದಗಿಸಿದರೆ ಜನ ನಡುರಾತ್ರಿಯವರೆಗೂ ಟಿವಿ ನೋಡಿ ಮಲಗಿಕೊಂಡು ಬಿಡುತ್ತಾರೆ. ಮಕ್ಕಳನ್ನು ಮಾಡಲು ಅವಕಾಶವೇ ಇಲ್ಲದಂತಾಗುತ್ತದೆ" ಎಂಬ ಹೇಳಿಕೆಯನ್ನು ಕೊಡುತ್ತಾರೆ, ಇದಕ್ಕೆ ಪ್ರತಿಕ್ರಿಯೆಯಾಗಿ, ಪ್ರತಾಪಸಿಂಹ ಅವರು ಹೀಗೆ ಬರೆಯುತ್ತಾರೆ, ರಾತ್ರಿ ಹತ್ತೂವರೆ, ಹನ್ನೊಂದು ಗಂಟೆ ನಂತರ ಎಂ.ಟಿವಿ, ಎ ಎಕ್ಸ್ ಎನ್ (AXN), ಎಚ್‌ಬಿಒ (HBO), ಎಫ್‌ಟಿವಿ (FTV) ಝೀ ಟ್ರೆಂಡ್ಝ್ (Z trendz) ಮುಂತಾದ ಇಂಗ್ಲೀಷ್ ಚಾನೆಲಗಳನ್ನು, ವಿವಿಧ ಭಾಷಾ ಚಾನೆಲಗಳಲ್ಲೂ ರಾತ್ರಿ ವೇಳೆ 'ಮಾತ್ರ' ಪ್ರಸಾರವಾಗುವ ಹಾಡುಗಳನ್ನು ವೀಕ್ಷಿಸಿದರೆ ಟೀವಿಯೇ ಜನಸಂಖ್ಯೆ ಹೆಚ್ಚಳಕ್ಕೆ ಮುಖ್ಯಕಾರಣ ಎಂದು ಬಿಡುತ್ತಿದ್ದರೂ Spiltsvilla, Banned Ads, Midnight hot, ಮಿಡ್‌ನೈಟ್

ಮಸಾಲ ಹಾಗೂ ರಾತ್ರಿಯಷ್ಟೇ ಪ್ರಸಾರವಾಗುವ ಇನ್ನಿತರೆ ಕಚಕುಳಿಯಿಕ್ಕುವ ಹಾಡುಗಳು ಮುಪ್ಪು ಬಂದವರಿಗೂ ಹುರುಪು ತುಂಬುತ್ತಿರುತ್ತವೆ. ಆಜಾದ್‌ಸಾಬ್! ಜನ ದಾರಿ ತಪ್ಪಲು ಹಾಗೂ ವಿವಾಹೇತರ ಸಂಬಂಧಗಳಿಗೆ ಧಾರಾವಾಹಿಗಳೇ ಕಾರಣ, ಮಕ್ಕಳು ಓದನ್ನು ಬಿಟ್ಟು ಕಾಲಹರಣ ಮಾಡಲು ಟಿವಿಯೇ ಕಾರಣ ಎಂದೂ ದೂರುವವರು ಸಂಖ್ಯೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಗುಲಾಂ ನಬಿ ಆಜಾದ್ ಸಲಹೆ ನಿಜಕ್ಕೂ ದಿಗ್ಭ್ರಮೆ ಹುಟ್ಟಿಸುವಂತಿದೆ.

ಮುಂದುವರೆದು ಟಿವಿಗೂ ಸೆಕ್ಸಗೂ ಏನು ಸಂಬಂಧ? ಅಕಸ್ಮಾತ್ ಟಿವಿ ಕಾರ್ಯಕ್ರಮ, ಧಾರಾವಹಿಗಳಿಗೆ ಜನ ದಾಸರಾದರೂ, ಯಾರಾದರೂ ವಾರದ ಏಳು ದಿನಗಳೂ ಟಿವಿ ನೋಡಿ ಮಲಗಿಕೊಳ್ಳಲು ಸಾಧ್ಯವೇ? ಅಷ್ಟಕ್ಕೂ ಮಕ್ಕಳ ಸೃಷ್ಟಿಗೆ ನಿತ್ಯವೂ ಶ್ರಮಪಡಬೇಕಾ ಸಾರ್? ಎಂದು ಪ್ರಶ್ನಿಸುತ್ತಾರೆ.

ನಮ್ಮ ಸಮಾಜದಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಟಿವಿ ಒಂದು ದೊಡ್ಡ ಕಾರಣವೆನ್ನುವುದು ಸತ್ಯವಾದ ಮಾತು, ಟಿವಿಯ ಜೊತೆ ಜೊತೆಗೆ, ನಮ್ಮ ಸಮಾಜದಲ್ಲಿ ಕುಟುಂಬ ಯೋಜನೆಯ ಕುರಿತು ಮಾಹಿತಿ ಇಲ್ಲದೇ ಇರುವುದು, ಕೇಳಿ, ತಿಳಿಯಲು ಮುಜುಗರ, ಸಂಕೋಚ, ಇದರ ಫಲವಾಗಿ ಹೆಚ್ಚು ಹೆಚ್ಚು ಮಕ್ಕಳು, ಸಂತಾನ ಹೊರುವ, ಹೇರುವ ಮತ್ತು ಶಸ್ತ್ರಕ್ರಿಯೆಗೆ ಒಳಗಾಗುವುದು ಕೂಡ ಮಹಿಳೆಯರೇ. ಇದನ್ನು ಮೊದಲು ಹೋಗಲಾಡಿಸಬೇಕು. ಮಹಿಳೆಯರೇಕೆ ಈ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕು, ಗಂಡಸರೇಕೆ ವ್ಯಾಸೆಕ್ಟಮಿ ಮಾಡಿಸಿಕೊಳ್ಳಬಾರದು? ಭಾರತದಲ್ಲಿ ವ್ಯಾಸೆಕ್ಟಮಿಗೊಳಗಾಗುವ ಗಂಡಸರ ಪ್ರಮಾಣ ೦.೨ ಪರ್ಸೆಂಟಗಿಂತಲೂ ಕಡಿಮೆ ಇದೆ. ಇದರ ಸಂಖ್ಯೆ ಹೆಚ್ಚಾಗಬೇಕು. ಆ ಮೂಲಕ ಜನಸಂಖ್ಯೆಯನ್ನು ನಿಯಂತ್ರಣದಲ್ಲಿ ತರಲು ಪುರುಷರು ಮುಂದಾಗಬೇಕು. ಆಗ ಮಾತ್ರ ಜನಸಂಖ್ಯೆಯನ್ನು ನಿಯಂತ್ರಿಸುವುದು ಸಾಧ್ಯವಿದೆ ಯೆಂದು ಬರೆಯುತ್ತಾರೆ.

ದೂರು-ದರ್ಶನ ಎಂಬ ಲೇಖನದಲ್ಲಿ ೨೩/೪/೦೮ ವಿಜಯಕರ್ನಾಟಕ ಪತ್ರಿಕೆಯಲ್ಲಿ ಈ ಲೇಖನ ಪ್ರಕಟವಾಗಿತ್ತು. ಈ ಲೇಖನವು ದೂರದರ್ಶನವನ್ನು, ಅದರಲ್ಲಿ ಪ್ರಸಾರವಾಗುವ ಧಾರಾವಾಹಿಗಳನ್ನು ಕುರಿತು ಪ್ರಶ್ನೆ ಕೇಳಲಾಯಿತು

೧. ಇಂದಿನ ಟಿವಿ ಕಾರ್ಯಕ್ರಮಗಳಲ್ಲಿ ಮನರಂಜನೆಯ ಕುರಿತು ನಿಮ್ಮ ಅಭಿಪ್ರಾಯ?

೨. ಮೆಗಾ ಧಾರಾವಾಹಿಗಳ ಬಗ್ಗೆ ಏನನ್ನಿಸುತ್ತದೆ?

೩. ಧಾರಾವಾಹಿಗಳು ಹೇಗಿದ್ದರೆ ಚೆನ್ನ?

೪. ಬೇರೆ ಯಾವ ರೀತಿಯ ಕಾರ್ಯಕ್ರಮಗಳು ನಿಮಗೆ ಇಷ್ಟ? ಎಂಬ ಪ್ರಶ್ನೆಗಳನ್ನು ಕೇಳಲಾಯಿತು. ಅದಕ್ಕೆ ಸುಮಾರು ಹದಿನೈದು ಜನ ಮಹಿಳಾ ವೀಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಇವರ ಪ್ರಕಾರ ಧಾರಾವಾಹಿಗಳಲ್ಲಿ ಕೆಲವೊಂದು ಒಳ್ಳೆಯ ಅಂಶಗಳಿದ್ದರೂ, ಅವು ಜಾರಿ ಹೋಗುವ ಪ್ರಯತ್ನಗಳೇ ಹೆಚ್ಚು ಆಗುತ್ತಿರುತ್ತವೆ.

ಧಾರಾವಾಹಿಗಳ ಜನಪ್ರಿಯತೆಯನ್ನು ಅರಿತ ನಿರ್ದೇಶಕರು ಒಂದು ಒಳ್ಳೆಯ ಕಥೆಯನ್ನು ಹೆಣೆದು, ವೀಕ್ಷಕರ ಮನಸ್ಸನ್ನು ಗೆಲ್ಲಬೇಕು, ಅದು ಬಿಟ್ಟು ತರ್ಕವಿಲ್ಲದ, ಅರ್ಥವಿಲ್ಲದ, ಸಂಭಾಷಣೆಗಳು, ಕಥೆಗಳು ಇರುವುದು ಹೆಚ್ಚಾಗಿದೆ, ಮಕ್ಕಳು, ಮಹಿಳೆಯರು, ವೃದ್ಧರು ಎಲ್ಲರಿಗೂ ಸೂಕ್ತವಾದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂಬುದು ಇವರ ಅಭಿಪ್ರಾಯ. ಧಾರಾವಾಹಿಗಳಲ್ಲಿ ಒಂದು ಒಳ್ಳೆಯ ಅಂಶವಿರಬೇಕು, ನಮ್ಮ ದೈನಂದಿನದಲ್ಲಿ ನಡೆಯುವ ಘಟನೆಗಳನ್ನೇ ಹಿಂಜಿ ತೋರಿಸುವ, ಅತ್ತೆ–ಸೊಸೆ ಜಗಳ, ಅನೈತಿಕ ಸಂಬಂಧ, ವಿವಾಹದಾಚೆಗಿನ ಸಂಬಂಧಗಳನ್ನು ತೋರಿಸುವ ಮೂಲಕ ಸಮಾಜದ ಸ್ವಾಸ್ಥ್ಯ ಹಾಳು ಮಾಡಲಾಗುತ್ತಿದೆ ಎಂದು ಉತ್ತರಿಸಿದ್ದಾರೆ.

"ಕಿರಿಕಿರಿತರದಿರಲಿ ಕಿರುತೆರೆನೋಟ" ಸಂಗಳಾನಮಠ ಯು.ಎನ್. ವಿಜಯಕರ್ನಾಟಕ ೨೦/೭/೦೯ರಲ್ಲಿ ಪ್ರಕಟಗೊಂಡಿರುವ ಈ ಲೇಖದಲ್ಲಿ ಮಕ್ಕಳ ಕುರಿತು ವಿಶೇಷವಾದ ಕಾಳಜಿಯನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಟಿವಿ ಎನ್ನುವ ಪರಿಕರದಿಂದ ಚಿಕ್ಕಮಕ್ಕಳ ಮನಸ್ಸಿನ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ವಿವರಿಸುತ್ತಾ, ಟಿವಿ ಎನ್ನುವುದು ಮಕ್ಕಳಿಗೆ ಸಾಧಕವಾಗುವ ಬದಲು, ಬಾಧಕವೇ ಹೆಚ್ಚಾಗುತ್ತಿದೆ. ಮಕ್ಕಳು ಸತತವಾಗಿ ಟಿವಿ ನೋಡುವುದರಿಂದ ಅವರ ಮನಸ್ಸು, ಕ್ರಿಯಾಶೀಲತೆ ಭಾವನೆಗಳು ಮತ್ತು ಅವರ ಜೀವನದಲ್ಲಿ ಉಂಟಾಗುವ ಏರು–ಪೇರುಗಳ ಕುರಿತು ಸ್ಥೂಲವಾದ ವಿವರಣೆಯನ್ನು ಈ ಲೇಖನದಲ್ಲಿ ಮಾಡಲಾಗಿದೆ.

"ಬಾಯಿ ಪಾಠವೇ ಇಲ್ಲ ಧಾರಾವಾಹಿ ನೋಟವೇ ಎಲ್ಲ" ೨೭/೫/೦೮ರ ವಿಜಯಕರ್ನಾಟಕ ಪತ್ರಿಕೆಯಲ್ಲಿ ವಿನಾಯಕ್‌ಕೋಡ್ಸರವರು, ಬರೆಯುತ್ತಾರೆ. ಧಾರಾವಾಹಿಗಳು ಇಂದು ಸಮಾಜವನ್ನು ಹಾಳು ಮಾಡುವುದಲ್ಲದೇ, ತಾಯಿ–ಮಗುವಿನ ಬಾಂದವ್ಯವನ್ನು, ಸಾಮಿಪ್ಯವನ್ನು ಕಬಳಿಸುತ್ತಿವೆ. ಈ ಮೂಲಕ ತಾಯಿ ಮತ್ತು ಮಗುವಿನ ಮಧ್ಯೆ ಹೇಗೆ ಅಂತರ ವೇರ್ಪಡಿಸುತ್ತಿವೆ ಎಂಬ ಸಾರವನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

"ಮಕ್ಕಳನ್ನು ಟಿವಿಯಿಂದ ದೂರವಿಡಿ" ಎಂಬ ಲೇಖನದಲ್ಲಿ ನಂಜೇಗೌಡ ಎಂ.ಜೆ ಅವರು ಟಿವಿಯ ಅನೂಕೂಲತೆಗಳು ಮಕ್ಕಳ ಮತ್ತು ಯುವಕರ ಬದುಕಿಗೆ ಅನಿವಾರ್ಯ ಅನ್ನುವಂತಾಗಿದ್ದು, ಇದರ ಬೆಳವಣಿಗೆಯಿಂದ ಮಕ್ಕಳ ಆಟ, ಸ್ನೇಹಿತರೊಂದಿಗೆ ಬೆರೆಯುವುದು, ಬೌದ್ಧಿಕ ಬೆಳವಣಿಗೆ ಚಟುವಟಿಕೆಗಳು ಕಡಿಮೆ ಆಗುತ್ತವೆ. ಇದು ಮಕ್ಕಳ ಸರ್ವೋತೋಮುಖ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂಬ ಆತಂಕದ ಅಂಶವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

೧. ಸುಧಾ ಪತ್ರಿಕೆ–೨ ಸೆಪ್ಟೆಂಬರ್ ೨೦೧೦–ಟೀವಿಯಲ್ಲಿ ಠೀವಿ ಎಂಬ ಲೇಖನ ಪ್ರಕಟಿಸಲಾಯಿತು.

೨. ಸುಧಾ ಪತ್ರಿಕೆ–೧೪ ಏಪ್ರಿಲ್ ೨೦೧೧–ಶೂಟಿಂಗ್ ಮನೆಗಳು.

Portrayal of women in Television (TV) Serials: Shashikaul and shradha sahani. Department of Community resource management and Extension, Govt, Collage for women parade, Jammu, Jammu and Kashmir, India.

ಡಿಲಿಟ್ ಮಹಾಪ್ರಬಂಧಗಳು

೧. "ಕನ್ನಡ ಚಲನಚಿತ್ರಗಳಲ್ಲಿ ಹಲವು ನಿರೂಪಣಾ ಮಾದರಿಗಳು" ಸಂಶೋಧಕರು–ಡಿ.ಬಿ, ಬಸವೇಗೌಡ ಬೆಂಗಳೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨. "ಕನ್ನಡ ವೃತ್ತಿರಂಗಭೂಮಿ ಹಾಗೂ ರಂಗವಿನ್ಯಾಸ" ಸಂಶೋಧಕರು– ದೇವದಾಸ ಕಳಸದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಪಿಎಚ್‌ಡಿ ಮಹಾಪ್ರಬಂಧಗಳು

೧. "ಟೇಲಿಸೀರಿಯಲ್ಸ್ ಆ್ಯಂಡ್ ಸೋಷಿಯೋ–ಕಲ್ಚರಲ್ ವ್ಯಾಲ್ಯೂ: ಎ. ಕೇಸ್ ಸ್ಟಡಿ ಅಮಂಗ ದ ಯೂತ್ಸ್"(Teleserials and socio- cultural values, A case study among the youths), ಸಂಶೋಧಕರು–ನಂದಿನಿ ಲಕ್ಷ್ಮೀಕಾಂತ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೨೦೦೯

೨. Representation/ Portrayal of women in mass media-ಎಸ್. ಪಿ. ಶ್ರೀಮತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೩

೩. "ಜಾಹಿರಾತುಗಳಲ್ಲಿ ಮಹಿಳಾ ಪ್ರತಿನಿಧೀಕರಣ"(ಪ್ರಕಟಿತ ಕೃತಿ) ಸಂಶೋಧಕರು, ಡಾ.ಕಲಾವತಿ ಬಿ.ಜಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಎಂ.ಫಿಲ್ ಸಂಪ್ರಬಂಧಗಳು

ಸಮೂಹ ಮಾಧ್ಯಮಗಳಲ್ಲಿ, ಭಾಷೆಯ ಕುರಿತು ನಡೆದ ಅಧ್ಯಯನಗಳು.

೧. "ದೂರದರ್ಶನದಲ್ಲಿ ಕ್ರೈಂ ನ್ಯೂಸ್ ಭಾಷಿಕ ಅಧ್ಯಯನ", ಸಂಶೋಧಕರು, ಹುಲೆಪ್ಪ ಸಂಡೂರು, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨. "ಮಹಿಳಾ ಪುರವಣಿಗಳ ಭಾಷಿಕ ಅಧ್ಯಯನ" ಸಂಶೋಧಕರು, ಕೆ. ಗಂಗಪ್ಪ, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭–೦೮.

೩. "ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯಭಾಷೆ", ಶಂಕ್ರಪ್ಪ, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪. "ಮಹಿಳಾ ಕಥನ ಸಾಹಿತ್ಯ ಮತ್ತು ಸಿನಿಮಾ", ಶ್ವೇತಾ ಎ., ಕಾವ್ಯಮಂಡಲ, ಬೆಂಗಳೂರು, ೨೦೦೯.

೫. "ಸಮೂಹ ಮಾಧ್ಯಮಗಳು ಮತ್ತು ಭಾಷೆ", ಶ್ವೇತಾ ಆರ್., ಬೇಗೂರು ಕಾವ್ಯಮಂಡಲ, ಬೆಂಗಳೂರು, ೨೦೦೯.

೬. "ಕನ್ನಡ ದಿನಪತ್ರಿಕೆಗಳಲ್ಲಿ ಕ್ರೀಡಾಪುಟದ ಭಾಷೆ", ಸೂಗಣ್ಣ, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೭ "ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಒಂದು ಅಧ್ಯಯನ", ರಶ್ಮಿಕುಮಾರಿ, ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ, ಬಲ್ಮಠ, ಮಂಗಳೂರು.

ಒಟ್ಟಾರೆಯಾಗಿ ಸಮೂಹ ಮಾಧ್ಯಮಗಳ ಕುರಿತು ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು ಮುಖ್ಯವಾಗಿ ಮಾಧ್ಯಮದ ಇತಿಹಾಸ, ಮಹಿಳೆಯರ ಪಾಲ್ಗೊಳ್ಳುವಿಕೆ, ಭಾಷೆ, ದುಡಿಯುವ ಮಹಿಳೆಯರು. ಮಕ್ಕಳ ಮೇಲಾಗುವ ಪರಿಣಾಮಗಳು. ಜನಸಂಖ್ಯೆಯ ಹೆಚ್ಚಳಕ್ಕೆ ಟಿವಿ ಹೇಗೆ ಸ್ಫೂರ್ತಿ ನೀಡುತ್ತಿದೆ ಎನ್ನುವ ವಿಷಯಗಳ ಕುರಿತ ವಿಶ್ಲೇಷಣೆಗಳಿರುವುದನ್ನು ನೋಡಬಹುದಾಗಿದೆ. ಸಮೂಹ ಮಾಧ್ಯಮ ಮತ್ತು ಧಾರಾವಾಹಿಗಳನ್ನು ವಿವರಿಸಿಕೊಳ್ಳುವುದು. ಯಾವ ಯಾವ ಬಗೆಯ, ಯಾವ ವಿಷಯದ ಕ್ಷೇತ್ರವನ್ನು ಕುರಿತು ಅಧ್ಯಯನ ನಡೆಸಬೇಕು ಎಂಬುದನ್ನು ಈ ಗ್ರಂಥಗಳು ತಿಳಿಸಿಕೊಡುತ್ತವೆ. ಧಾರಾವಾಹಿಗಳ ಬಗ್ಗೆ ನಡೆದಿರುವ ಈ ಚರ್ಚೆಗಳು, ಅಧ್ಯಯನಗಳು ನನ್ನ ಅಧ್ಯಯನದುದ್ದಕ್ಕೂ ಮಾರ್ಗದರ್ಶಕಗಳಾಗಿ ನಿಲ್ಲುತ್ತವೆ. ಆದರೆ ಧಾರಾವಾಹಿಗಳು ಮಹಿಳೆಯರನ್ನು ಕಟ್ಟಿಕೊಡುವ ಬಗ್ಗೆಯಾಗಲಿ, ಧಾರಾವಾಹಿಗಳಲ್ಲಿ ಮಹಿಳೆ ನಿರ್ವಹಿಸುವ ಪಾತ್ರಗಳ ಬಗ್ಗೆಯಾಗಲಿ ವಿಶ್ಲೇಷಣೆ ಸಿಗುವುದಿಲ್ಲ. ಪುರುಷ ಮಾನದಂಡದಿಂದ ಗುರುತಿಸುವ ಪ್ರಯತ್ನಗಳೇ ಆಗಿವೆ. ಅಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುವ, ವಿಶ್ಲೇಷಿಸುವ ಪ್ರಯತ್ನಗಳು ನಡೆದಿಲ್ಲ. ನನ್ನ ಅಧ್ಯಯನದಲ್ಲಿ ಈ ಪ್ರಯತ್ನವನ್ನು ಮಾಡಲಾಗುವುದು.

❑❑❑

ಅಧ್ಯಾಯ : ಎರಡು

ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ : ಸೈದ್ಧಾಂತಿಕ ಹಾಗೂ ಪರಿಕಲ್ಪನಾತ್ಮಕ ನಿರ್ವಚನ

ಅಧ್ಯಾಯ : ಎರಡು

ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ : ಸೈದ್ಧಾಂತಿಕ ಹಾಗೂ ಪರಿಕಲ್ಪನಾತ್ಮಕ ನಿರ್ವಚನ

೨.೦. ಪೀಠಿಕೆ

ಮಾಧ್ಯಮ ಜಗತ್ತು ಬಂಡವಾಳಶಾಹಿ ಸಂಸ್ಕೃತಿಯಿಂದ ರೂಪುಗೊಂಡಿರುವುದು. ಬಹುಜನರ ವಿಚಾರಗಳನ್ನು, ಭಾವನೆಗಳನ್ನು ತಿರುಚುವ, ಆ ಮೂಲಕ ತನ್ನ ರೂಪಿತವಾಗಿರುವ ಚಿಂತನೆಗಳನ್ನು, ವಿಚಾರಗಳನ್ನು ಜನ ಸಮುದಾಯದ ಮೇಲೆ ಹೇರುವ ಪ್ರಯತ್ನಗಳು ಧಾರಾವಾಹಿಗಳಲ್ಲಿ ನಡೆಯುತ್ತಿರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಇದು ಕೇವಲ ಜನರ ಮನಸ್ಸನ್ನು ನಿಯಂತ್ರಿಸುವ ಶಕ್ತಿಯಾಗಿರದೇ ತನ್ನ ಮೂಲ ಉದ್ದೇಶವಾದ ಬಂಡವಾಳ ಗಳಿಕೆಯ ಬಹುಪಾಲನ್ನು ಈ ಮೂಲಕ ಪಡೆಯುತ್ತದೆ. ಈ ಮಾಧ್ಯಮ ಅಸ್ತಿತ್ವದಲ್ಲಿರುವುದು ಪುರುಷಪ್ರಧಾನ ವ್ಯವಸ್ಥೆಯಲ್ಲಿ. ಪುರುಷಪ್ರಧಾನವಾದ ಮಾಧ್ಯಮ ಹೇಗೆ ಮಹಿಳಾ ಬದುಕನ್ನು ಪ್ರತಿನಿಧೀಕರಿಸುತ್ತದೆ ಎನ್ನುವ ಪ್ರಶ್ನೆಗೆ ಉತ್ತರವಾಗಿ, ಸ್ಥಿರ ಮಾದರಿಯ ಪಾತ್ರದಲ್ಲಿಯೇ ಎನ್ನಬಹುದು. ಧಾರಾವಾಹಿಗಳಲ್ಲಿ ಹೆಣ್ಣಿನ ಪಾತ್ರವನ್ನು ಸ್ಥಿರ ಮಾದರಿಯಲ್ಲಿಯೇ ಕಟ್ಟಿಕೊಡುವ ಮೂಲಕ ಸಮಾಜದಲ್ಲಿರುವುದನ್ನೇ ಸ್ಥಿರೀಕರಿಸುತ್ತದೆ. ಹಾಗಾದರೆ ಇವರು ನೋಡುವ ಸಮಾಜ ಎಂತಹದು? ಆ ಸಮಾಜ ಹೇಗಿದೆ? ಸಮಾಜಕ್ಕೂ ಧಾರಾವಾಹಿಗಳಲ್ಲಿರುವ ಸ್ಥಿರಮಾದರಿಯ ಪಾತ್ರಗಳಿಗೂ ಏನಾದರೂ ಸಂಬಂಧವಿದೆಯಾ? ಇದ್ದರೆ ಎಂತಹ ಸಂಬಂಧವಿದೆ? ಎಂಬ ಪ್ರಶ್ನೆಗಳು ಎದುರಾಗುತ್ತವೆ.

ನಮ್ಮ ಸಮಾಜದಲ್ಲಿ ಒಂದು ವ್ಯವಸ್ಥೆಯು ಅಂತರ್ಗತವಾಗಿದೆ. ಉದ್ದೇಶಿತ ವೀಕ್ಷಕರು ಸಮಾಜದಲ್ಲಿದ್ದಾರೆ. ಆ ವೀಕ್ಷಕರು ಅವರದೇ ಆದ ಸಾಮಾಜಿಕ ನಂಬಿಕೆಗಳ ಮೇಲೆ ಬದುಕುತ್ತಿರುವವರಿದ್ದಾರೆ. ಸಾಮಾಜಿಕ ನಂಬಿಕೆಗಳು ಹೇಗಿವೆ ಎಂದರೆ ಅವು ಅಸಮಾನತೆಯ ನೆಲೆಯಲ್ಲಿ ಕೂಡಿಕೊಂಡಿವೆ. ಸಮಾಜದಲ್ಲಿ ಗಂಡ, ಹೆಂಡತಿಯ ಪಾತ್ರವನ್ನೇ ತೆಗೆದುಕೊಂಡರೆ, ಅಲ್ಲಿ ಗಂಡನನ್ನು ಬಲಿಷ್ಠವಾಗಿ, ಅಧಿಕಾರವನ್ನು ಚಲಾಯಿಸುವವನಾಗಿ ಚಿತ್ರಿಸಿದರೆ; ಹೆಂಡತಿಯನ್ನು ಬಲಹೀನಳಂತೆ, ತೊತ್ತಿನ ಸೇವಕಳಾಗಿ ಚಿತ್ರಿಸುತ್ತಾರೆ. ಈ ಮಾದರಿಯನ್ನು ಒಪ್ಪಿಕೊಂಡಿರುವ ಸಮಾಜವೊಂದು ಅಸ್ತಿತ್ವದಲ್ಲಿರುವುದರಿಂದ ಆ ಮಾದರಿಯನ್ನು ಇನ್ನಷ್ಟು, ಮತ್ತಷ್ಟು ವೈಭವೀಕರಿಸಿ

ನಿರ್ವಚಿಸಲಾಗುತ್ತದೆ. ಈ ನಿರ್ವಚನವನ್ನು ಧಾರಾವಾಹಿಗಳು ಹೇಗೆ ವ್ಯವಸ್ಥಿತವಾಗಿ ಕಟ್ಟಿಕೊಡುತ್ತಿವೆ ಎಂಬುದನ್ನು ಮುಂದಿನ ಭಾಗದಲ್ಲಿ ಸೈದ್ಧಾಂತಿಕ ವಿಶ್ಲೇಷಣೆಯಲ್ಲಿ ಚರ್ಚಿಸಲಾಗಿದೆ.

೨.೧. ಸೈದ್ಧಾಂತಿಕ ವಿಶ್ಲೇಷಣೆ

ಕಾಮಸೂತ್ರದಲ್ಲಿ ಹೆಣ್ಣನ್ನು ಶರೀರ ತತ್ವದ ಭಾಗವಾಗಿ ಕಾಮ ಪುರಷಾರ್ಥದ ಸಾಧನೆಯನ್ನು ನಿರೂಪಿಸುತ್ತದೆ. ಇಲ್ಲಿ ಹೆಣ್ಣಿನ ಅಸ್ತಿತ್ವ ಮನುಸ್ಮೃತಿಯಲ್ಲಿ ಕಟ್ಟಿಕೊಡುವ ಶಾರೀರಿಕ ಅಸ್ತಿತ್ವಕ್ಕೆ ಸಮಾನವಾದುದು. ಹೆಣ್ಣನ್ನು ಶಾರೀರಿಕ ಅಸ್ತಿತ್ವಕ್ಕಿಳಿಸಿದ ಪರಿಣಾಮವಾಗಿ ಆಕೆ ನಾಲ್ಕು ಗೋಡೆಗಳೊಳಗಿನ ನಿರ್ಬಂಧಿತ ಜೀವನಕ್ಕೆ ಬಲಿಯಾಗಿದ್ದಾಳೆ. ಸಾಮಾಜಿಕ ನೆಲೆಯಿಂದ ನಿರ್ವಚನಗೊಂಡ ಅರ್ಥವನ್ನು ಮಾಧ್ಯಮಗಳಿಗೆ ವಿಸ್ತರಿಸಿಕೊಂಡು ಹೋಲಿಸಿದರೆ ಮಹಿಳೆ ಇಲ್ಲಿಯೂ ಕೂಡ ವಾತ್ಸಾಯನ ಕಾಮಸೂತ್ರದಲ್ಲಿ ನಿರ್ವಚಿಸಲ್ಪಟ್ಟ ಹೆಣ್ಣಿನ ದೇಹದ ಸ್ವರೂಪದಲ್ಲಿಯೇ ವಿಸ್ತರಣೆಗೊಳ್ಳುತ್ತಿದ್ದಾಳೆ. ಒಂದು ಕಡೆ ಸ್ತ್ರೀಯರ ಅಭಿವೃದ್ಧಿ, ಸಬಲೀಕರಣಗಳೆಂಬ ಸಿದ್ಧಾಂತಗಳು ಮಹಿಳೆಯರನ್ನು ಸಮಾಜದ ಪ್ರಧಾನ ಧಾರೆಗೆ ತರುವ ಪ್ರಯತ್ನ ನಡೆಸಿದರೆ ಇನ್ನೊಂದೆಡೆ ಮಹಿಳೆಯನ್ನು ದೇಹ ಕೇಂದ್ರಿತವಾಗಿ ನೋಡುವ ಮಾನದಂಡವನ್ನು ಸದ್ದಿಲ್ಲದೇ ಸಮಾಜದಲ್ಲಿ ವಿಸ್ತರಿಸುತ್ತಲಿವೆ. ಈ ದೃಷ್ಟಿಕೋನದಿಂದ ಆಚೆಗೆ ವಿಶ್ಲೇಷಣೆಗೆ ಹೋದರೆ ಅಲ್ಲಿ ಎದುರಾಗುವ ಪ್ರಶ್ನೆ ಈ ಮಹಿಳೆ ಎಂದರೆ ಯಾರು? ಯಾರಿಂದ ನಿರ್ವಚನೆಗೊಂಡಿರುವವಳು? ಹೇಗೆ ನಿರ್ವಚಿಸಲ್ಪಟ್ಟಿದ್ದಾಳೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೊರಟಾಗ ನಮಗೆ ಸಿಗುವ ಮಹಿಳೆ. ನಿಜವಾದ ಅಸ್ತಿತ್ವ ಹೊಂದಿರುವವಳು ಆಗಿದ್ದಾಳೆಯೇ ಎಂದರೆ, ಉತ್ತರ ಇಲ್ಲ ಎನಿಸುತ್ತದೆ.

'ಮಹಿಳೆ' ಎಂಬ ಶಬ್ದಕ್ಕೆ ಸಾಮಾನ್ಯವಾಗಿ ಜೈವಿಕ ಶಾಸ್ತ್ರದಿಂದ ಆಕೆಯನ್ನು ಹೀಗೆ ವರ್ಣಿಸಲಾಗುತ್ತದೆ. ಮಹಿಳೆ ಎಂದರೆ, ಮಾನವರ ಗುಂಪಿನಲ್ಲಿಯ ಒಂದು ಜಾತಿಯ ವಿಚಿತ್ರ ಪ್ರಾಣಿ, ಅದು ಗರ್ಭದಲ್ಲಿ ಭ್ರೂಣವನ್ನು ಧರಿಸಿ ಅದನ್ನು ಪ್ರಸವಿಸಿ ಅದಕ್ಕೆ ಹಾಲುಣಿಸುವುದು ಎಂದು'[೧] ಮಹಿಳೆಯನ್ನು ಈ ಪಾತಳಿಯಲ್ಲಷ್ಟೇ ನೋಡಲಾಗುತ್ತಿದೆ. ಮಹಿಳೆ ಎಂದರೆ ಇಷ್ಟೇನಾ? ಇದಕ್ಕೂ ಹೆಚ್ಚಾಗಿ ಹೆಚ್ಚು ನೋಡಿದಾಗ ಅಲ್ಲೆಲ್ಲ ದೊರೆಯುವುದು. ಪುರುಷ ರೂಪಿತ, ಸ್ಥಾಪಿತವಾಗಿರುವಂತಹ ಮಹಿಳೆ. ಹಾಗಾದರೆ ಮಹಿಳೆ ಎಂದರೆ ಕೇವಲ ಗರ್ಭಕೋಶವೆಂದೇ ಪರಿಗಣಿಸಬೇಕೇ? ಕೇಟ್‌ಮಿಲ್ಲೆಟ್‌ಳು ತನ್ನ 'ಲೈಂಗಿಕ ರಾಜಕೀಯ' ಕೃತಿಯ ಮೊದಲ ಭಾಗದಲ್ಲಿ 'ಲೈಂಗಿಕ ರಾಜಕಾರಣ'ದ ಸೈದ್ಧಾಂತಿಕ ವಿಶ್ಲೇಷಣೆಯನ್ನು ಕೊಡುತ್ತಾ, ಪುರುಷ ಪ್ರಧಾನತೆಯ ವಿವಿಧ ಸ್ವರೂಪವನ್ನು ಅದು ಲೈಂಗಿಕ ರಾಜಕಾರಣದ ಸ್ವರೂಪದಲ್ಲಿ ವಹಿಸುವ ಪಾತ್ರವನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡುತ್ತಾಳೆ'.[೨] ಸಿದ್ದಾಂತದಂತೆ, 'ಪಿತೃಪ್ರಧಾನತೆಯೊಳಗೆ ಪುರುಷನ ಪ್ರಾಬಲ್ಯ ಮತ್ತು ಹೆಣ್ಣಿನ ಅಧೀನತೆಗಳ ವ್ಯವಸ್ಥೆಯೊಂದು ಸರ್ವಾಂತರ್ಯಾಮಿಯಾಗಿರುತ್ತದೆ. ಈ ವ್ಯವಸ್ಥೆ ಸಾಮಾಜೀಕರಣದ ಮೂಲಕ ಸಾಧಿಸಲ್ಪಟ್ಟು, ಸೈದ್ಧಾಂತಿಕ ಸಾಧನಗಳ ಮೂಲಕ ಶಾಶ್ವತಗೊಳಿಸಲ್ಪಡುತ್ತದೆ. ಸಾಂಸ್ಥಿಕ ಪದ್ಧತಿಗಳ ಮೂಲಕ

ಅದು ಉಳಿಸಲ್ಪಡುತ್ತದೆ. ಅಭ್ಯಾಸ ಬಲದಿಂದ ಪುರುಷರು ಆಳುವ ಮನೋಭಾವದವರು ಆಗಿರುತ್ತಾರೆ. ಅರ್ಥ ವ್ಯವಸ್ಥೆ, ರಾಜ್ಯವ್ಯವಸ್ಥೆ ಅದರ ಏಜೆಂಟರಾದ, ಮಿಲಿಟರಿ ಮುಂತಾದವು ಗಳನ್ನು ನಿಯಂತ್ರಿಸುವವರು ಪುರುಷರೇ ಆಗಿದ್ದಾರೆ[೩] ಎಂದು ಪ್ರತಿಪಾದಿಸುತ್ತಾರೆ.

ಹೀಗೆ ಹೆಣ್ಣನ್ನು ಗರ್ಭಕೋಶ ಮತ್ತು ಲೈಂಗಿಕತೆಗೆ ಸೀಮಿತಗೊಳಿಸಿ ನೋಡುವುದನ್ನು ಸ್ತ್ರೀವಾದಿಗಳು ವಿರೋಧಿಸುತ್ತಾ ಬಂದಿದ್ದಾರೆ. ಸಮಾಜದಲ್ಲಿ ಅಸ್ತಿತ್ವವಿರುವ ಎಲ್ಲ ಮಾನದಂಡಗಳು ಪುರುಷನ ನೇರಕ್ಕೆ ರೂಪಿತವಾಗಿರುವುದರಿಂದ ಅಲ್ಲಿ ಮಹಿಳೆಯ ಒಳಗೊಳ್ಳುವಿಕೆ ಅಥವಾ ಭಾಗವಹಿಸುವಿಕೆ ಗೌಣವೇ ಆಗಿರುತ್ತದೆ. ಈ ಪಾತ್ರಗಳನ್ನು ರೂಪಿಸುವ ಪುರುಷ ಪ್ರಧಾನ ವ್ಯವಸ್ಥೆಯು ಹೇಗೆ ಮಾಧ್ಯಮಗಳಲ್ಲಿ ಪಾತ್ರವಹಿಸುತ್ತವೆ ಎಂಬುದನ್ನು ನೋಡುವಾಗ ಮೊದಲು ಎದುರುಗೊಳ್ಳುವ ಪ್ರಶ್ನೆ ಮಹಿಳೆಯರನ್ನು ನಿರ್ವಚಿಸುವ, ಪ್ರತಿನಿಧೀಕರಿಸುವ ಮಾನದಂಡ ಯಾವುದು ಎನ್ನುವುದು. ಅಧ್ಯಯನದ ಮುಖ್ಯ ಪರಿಕಲ್ಪನೆಯಾದ ಪ್ರತಿನಿಧೀಕರಣದ ವ್ಯಾಖ್ಯಾನವನ್ನು ಕೈಗೊಳ್ಳುವ ಮೂಲಕ ಮುಂದಿನ ಚರ್ಚೆಯನ್ನು ಬೆಳೆಸುತ್ತೇನೆ. ಈ ಸಿದ್ಧಾಂತವನ್ನು ಮಾಧ್ಯಮಗಳ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಿಕೊಳ್ಳುವುದರ ಜೊತೆಗೆ ಪ್ರಸಾರವಾಗುವ ಧಾರಾವಾಹಿಗಳಲ್ಲಿ ಹೇಗೆ ಕಟ್ಟಿಕೊಡಲಾಗಿದೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

೨.೧೧. ಪ್ರಸ್ತುತ ಅಧ್ಯಯನದ ತಾತ್ವಿಕ ಸ್ವರೂಪ

ಪ್ರಸ್ತುತ ಅಧ್ಯಯನವು ಮಹಿಳಾ ಅಧ್ಯಯನ, ಸ್ತ್ರೀವಾದ, ಸ್ತ್ರೀವಾದಿ ಚಿಂತನೆಗಳ ತಾತ್ವಿಕ ಚೌಕಟ್ಟಿನಲ್ಲಿ ನಡೆಸಲಾಗಿದೆ. ಅಧ್ಯಯನದ ಉದ್ದಕ್ಕೂ ಮಾಧ್ಯಮವನ್ನು ಕುರಿತು ನಿರ್ವಚನೆ ಮಾಡುವುದರ ಒಟ್ಟಿಗೆ ಅಲ್ಲಿ ನೆಲೆಗೊಂಡಿರುವ ಮೇಲ್‌ಗೇಜ್‌ನ್ನು ಮಹಿಳಾ ಅಧ್ಯಯನದ ತಾತ್ವಿಕ ಚೌಕಟ್ಟಿನ ಮೂಲಕ ವಿವರಿಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹೆಣ್ಣು ಸಾಮಾಜಿಕ ವ್ಯವಸ್ಥೆಯಲ್ಲಿ "ಪುರುಷ ಪ್ರಧಾನತೆ"ಯ ವ್ಯವಸ್ಥಿತವಾದ ರಚನೆಯೊಳಗೆ ಬಂಧಿಯಾಗಿದ್ದಾಳೆ. ನಿರಂತರವಾಗಿ ಅಸಮಾನತೆ, ತಾರತಮ್ಯ, ಭಿನ್ನತೆಯಲ್ಲಿ, ರೂಪುಗೊಳ್ಳುತ್ತಿದ್ದಾಳೆ. ಸಮಾಜವಷ್ಟೇ ಪುರುಷ ಪ್ರಧಾನವಾಗಿರದೇ ಸಮಾಜದಲ್ಲಿರುವ ಎಲ್ಲ ಜ್ಞಾನಶಿಸ್ತುಗಳು ಕೂಡ ಪುರುಷನ ನೇರಕ್ಕೆ ನಿಲ್ಲುತ್ತವೆ. ಈ ಜ್ಞಾನಶಿಸ್ತುಗಳಲ್ಲಿರುವ ಚಿಂತನೆಗಳೆಲ್ಲವು ಏಕಾಕಾರವಾದ ಪುರುಷ ಚಿಂತನೆಗಳನ್ನು ವಿವರಿಸುತ್ತವೆ.

ಪುರುಷ ಪ್ರಾಧಾನ್ಯತೆ ಪಡೆಯುವ ಮತ್ತು ಮಹಿಳೆ ಅಧೀನಳಾಗುವ ವ್ಯವಸ್ಥೆಯ ವಿವರಣೆಯನ್ನು ತಾರತಮ್ಯವನ್ನಾಗಿ ಗುರುತಿಸಲಾಗಿದೆ. ಹೆಣ್ಣಿನ ಅಸ್ತಿತ್ವವನ್ನು ಕುರಿತು ಬಹುದೊಡ್ಡ ಸಿದ್ಧಾಂತವಾದ, ಅಸ್ತಿತ್ವವಾದದ ಚಿಂತನೆಯನ್ನು ಅನ್ವಯಿಸುವ ಖ್ಯಾತ ಸ್ತ್ರೀವಾದಿ ಸಿಮೋನ್ ದ ಬೋವಾ, ಪುರುಷನಿಂದ ರಚಿಸಲ್ಪಟ್ಟ ಜ್ಞಾನವಲಯಗಳನ್ನು ಪ್ರಶ್ನಿಸುತ್ತಾಳೆ. ಮಹಿಳೆಯ ಪರವಾಗಿ ತನ್ನ ವಾದವನ್ನು ಮಂಡಿಸುತ್ತಾಳೆ. ಹಾಗಾಗಿಯೇ ಮಹಿಳೆಯೆಂದರೆ ಸಂಸ್ಕೃತ ಶ್ಲೋಕಗಳಲ್ಲಿರುವ "ಕಾರ್ಯೆಷುದಾಸಿ ಶಯನೆಶುರಂಭಾ" ಎಂದು ನಿರ್ವಚನಗೊಂಡಿರುವುದನ್ನು

ಪ್ರಬಲವಾಗಿ ಭಾರತೀಯ ಸ್ತ್ರೀವಾದಿಗಳು ವಿರೋಧಿಸುತ್ತಾರೆ. ಹೆಣ್ಣು ಸ್ವತಂತ್ರವಾದ ವ್ಯಕ್ತಿತ್ವವಿರುವಳಂತೆ ವ್ಯವಸ್ಥೆಯು ರೂಪುಗೊಳ್ಳಬೇಕೆಂಬ ಸಿದ್ಧಾಂತವನ್ನು ಅನೇಕ ಸ್ತ್ರೀವಾದಿಗಳು ಮಂಡಿಸಿದ್ದಾರೆ. ಪುರುಷನ ರಾಜಕಾರಣವನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಸಿಮೋನ್ ದ ಬೋವಾಳಂತೆ ಕೇಳಿ ಬರುವ ಇನ್ನೊಂದು ಧ್ವನಿ ವರ್ಜಿನಿಯಾವುಲ್ಫಳದು. ತನ್ನ "ಎ ರೂಮ್ ಆಫ್ ಒನ್ಸ್ ಓನ್" (A room of one's own) ಮತ್ತು 'ದಿ ಏಂಜಲ್ ಇನ್ ದಿ ಹೌಸ್' (The Angel in the house)ಗಳಲ್ಲಿ ಮಹಿಳೆಯರಿಗೆ ಪ್ರಧಾನಧಾರೆಗೆ ಬರಲು ಪುರುಷನ ಪಡಿಯಚ್ಚಿನಿಂದ ಗುರುತಿಸಿಕೊಳ್ಳುವುದನ್ನು ಬದಿಗಿಟ್ಟು, ಮಹಿಳೆ ಒಬ್ಬ ಬರಹಗಾರಳಾದಾಗ ಸಾಧ್ಯವೆಂದು ವಾದಿಸುತ್ತಾಳೆ. ಮುಂದುವರಿದು ತಮ್ಮ ಬರವಣಿಗೆಗೆ ಅಡ್ಡಿಯಾಗುವ ದೈಹಿಕ ಅನುಭವಗಳನ್ನು ಕುರಿತು ಪ್ರಾಮಾಣಿಕವಾಗಿ ಬರೆಯಲು ಅಡ್ಡಿಯಾಗುವ ಮಹಿಳೆಯರ ಬಗೆಗಿನ ಪಡಿಯಚ್ಚುಗಳನ್ನು ವಿಮರ್ಶೆ ಮಾಡಿದ್ದಾರೆ. ಉದಾಹರಣೆಗೆ, ಪುರುಷನೊಬ್ಬ ಲೈಂಗಿಕತೆಯ ಬಗ್ಗೆ ಬರೆದರೆ ಅದು ನೈಜವೆಂದು ಒಪ್ಪುವ ಸಮಾಜ. ಅದೇ ವಿಚಾರ ಮಹಿಳೆ ಬರೆದರೆ ನಾಚಿಕೆಗೇಡಿತನ ಎಂದು ಅರ್ಥೈಸಿಕೊಳ್ಳುತ್ತದೆ. ಇದು ಸಮಾಜ ವ್ಯವಸ್ಥೆಯು ಹೆಣ್ಣಿನ ಬಗೆಗೆ ಹೊಂದಿರುವ ನೇತ್ಯಾತ್ಮಕ ದೃಷ್ಟಿಕೋನವನ್ನು ಬಿಡಿಸಿಡುತ್ತದೆ. ಈ ದೃಷ್ಟಿಕೋನದ ಸಾಮಾಜಿಕ ಕಟ್ಟಳೆಯನ್ನು ವುಲ್ಫ್ ಪ್ರಶ್ನಿಸುತ್ತಾಳೆ. ಸಾಹಿತ್ಯ ಲೋಕದಲ್ಲಿ ಮಹಿಳೆಯರ ಸಾಹಿತ್ಯದ ಕೃತಿಗಳಿಲ್ಲದಿರುವುದನ್ನು ಮನಗಾಣುವ ಅವರು ಮಹಿಳಾ ಸಾಹಿತಿಗಳನ್ನು ಕುರಿತು ಮತ್ತೆ ಮತ್ತೆ ಚಿಂತನ, ಮಂಥನ ನಡೆಸುತ್ತಾ; ಮಹಿಳೆಯರು ಬರವಣಿಗೆಯಲ್ಲಿ ತೊಡಗಬೇಕೆಂದು ಅಭಿಪ್ರಾಯಪಡುತ್ತಾಳೆ. ಹೀಗೆ ಮಹಿಳೆಯರನ್ನು ಕುರಿತು ಹೊಂದಿರುವಂತಹ ನಕಾರಾತ್ಮಕ ದೃಷ್ಟಿಕೋನದ ಹಿಂದಿರುವ ರಾಜಕಾರಣವನ್ನು ಅರಿಯಲು ಕೇಟ ಮಿಲ್ಲೆಟ್ ಎಂಬ ಸ್ತ್ರೀವಾದಿ ಚಿಂತಕಿ ತನ್ನ ಸೆಕ್ಸುವಲ್ ಪಾಲಿಟಿಕ್ಸ್ (Sexual Politics) ಕೃತಿಯಲ್ಲಿ ಸೂಕ್ಷ್ಮವಾಗಿ ವ್ಯಾಖ್ಯಾನಿಸುತ್ತಾಳೆ. ಹೇಗೆ ಪೂರ್ವಾಗ್ರಹ ಪೀಡಿತರಾಗಿ ಪುರುಷರು ಹೆಣ್ಣಿನ ಅಸ್ತಿತ್ವವನ್ನು ಮುಖ್ಯವಾಗಿ ಅವಳ ಲೈಂಗಿಕ ಪಾತಳಿಯ ದೃಷ್ಟಿಕೋನದಿಂದ ನೋಡುತ್ತಾರೆಂಬುದನ್ನು ವಿವರಿಸುತ್ತಾಳೆ.

ಮಹಿಳೆಯರ ಅಧೀನವಾದ ಬದುಕು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಚ್ಚಾಗಿ ಹೋಗಿದೆ ಎಂಬ ಸಂಗತಿಯನ್ನು ಅನೇಕ ಸ್ತ್ರೀವಾದಿಗಳು ಗ್ರಹಿಸಿ ತಮ್ಮ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಅಂತಹ ಸ್ತ್ರೀವಾದದ ವಿವಿಧ ಪಂಥಗಳಾದ ಫ್ರೆಂಚ್ ಸ್ತ್ರೀವಾದ, ಆಂಗ್ಲೋ-ಅಮೆರಿಕದ ಸ್ತ್ರೀವಾದ, ತೀವ್ರಗಾಮಿ ಸ್ತ್ರೀವಾದ, ಸಾಂಸ್ಕೃತಿಕ ಸ್ತ್ರೀವಾದ, ಮಾರ್ಕ್ಸ್‌ವಾದಿ ಸ್ತ್ರೀವಾದ, ಕಪ್ಪು ಮಹಿಳಾವಾದ, ಲೆಸ್ಬಿಯನ ಸ್ತ್ರೀವಾದಗಳು ಉಗಮಗೊಂಡವು. ಈ ಎಲ್ಲಾ ಸ್ತ್ರೀವಾದಗಳ ಮೂಲ ಉದ್ದೇಶ ಮಹಿಳೆಯ ಅಸ್ತಿತ್ವವನ್ನು ಎತ್ತಿಹಿಡಿಯುವುದು ಆಗಿದೆ. ಆ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಿ ಲಿಂಗತಾರತಮ್ಯವನ್ನು ಹೋಗಲಾಡಿಸುವುದು. ಪ್ರಸ್ತುತ ಅಧ್ಯಯನದ ವಿಶ್ಲೇಷಣೆಗೆ ಈ ಎಲ್ಲಾ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

೨.೧.೧. ಪ್ರತಿನಿಧೀಕರಣದ ನಿರ್ವಚನ

"ಸ್ತ್ರೀ ಪ್ರತಿನಿಧೀಕರಣ ಎಂದರೆ ಒಂದು ವ್ಯವಸ್ಥೆ ಹೆಣ್ಣನ್ನು ನಿಯಂತ್ರಿಸುತ್ತಾ ಬಂದರೂ ಅದರಿಂದ ಅವಳು ಅನುಭವಿಸಿದ ಬದುಕನ್ನು ಪ್ರತಿನಿಧಿಸುವುದಾಗಿದೆ. ಹೆಣ್ಣು ಬದುಕಿದ ರೀತಿಯನ್ನು ಅವಳ ಕಾಲದ ಸಂಸ್ಕೃತಿ, ನಂಬಿಕೆಗಳ ಹಿನ್ನೆಲೆಯಲ್ಲಿ ನೋಡುವುದಾಗಿದೆ. ಅವಳ ಆಲೋಚನೆ ಬದುಕಿನ ರೀತಿಯಲ್ಲೇ ಅವಳಿದ್ದ ಸಮಾಜ, ಸಂಸ್ಕೃತಿ ಹಾಗೂ ಆಳುವವರ್ಗ ಅವಳನ್ನು ನಡೆಸಿಕೊಂಡ ಬಗೆಯನ್ನು ಹುಡುಕುವುದಾಗಿದೆ. ಮಾಸ್ತಿ ಅವರ ಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ ಎಂಬ ಅಧ್ಯಯನದಲ್ಲಿ ವಿವರಿಸಿದ್ದಾರೆ."[೪] ಹೀಗೆ ಮಹಿಳೆಯ ಪ್ರತಿನಿಧೀಕರಣವು ಕಾಲದಿಂದ ಕಾಲಕ್ಕೆ ಬದಲಾಗುತ್ತ ಹೋಗುತ್ತದೆ.

ಪ್ರಾಚೀನ ಕಾಲದ ಮಹಿಳಾ ಪ್ರತಿನಿಧೀಕರಣ ಆಧುನಿಕ ಕಾಲದ ಮಹಿಳಾ ಪ್ರತಿನಿಧೀಕರಣಕ್ಕೂ ವ್ಯತ್ಯಾಸವಿರುವುದನ್ನು ಕಾಣಬಹುದು. ಹೀಗೆ ಪ್ರತಿನಿಧಿಸುವ ಮಹಿಳೆಯರನ್ನು ಏಕಪ್ರಕಾರವಾದ ಮಾದರಿಯಲ್ಲಿ ನೋಡಿದರೆ ಅಲ್ಲಿ ಕೇವಲ ಏಕಪ್ರಕಾರದ ಫಲಿತಾಂಶ ದೊರೆಯಲಿಕ್ಕಿಲ್ಲ. ಹೇಗೆಂದರೆ ಪ್ರತಿನಿಧೀಕರಣ ಎಂಬ ಶಬ್ದವನ್ನು ಗಮನಿಸಿದಾಗ ಅದು ಭಿನ್ನತೆಯ ಸ್ವರೂಪದಲ್ಲಿ ಕಂಡುಬರುತ್ತದೆ. ಹತ್ತು ಮಹಿಳೆಯರಲ್ಲಿ ಒಬ್ಬ ಮಹಿಳೆಯನ್ನು ಪ್ರತಿನಿಧಿಯಾಗಿ ತೆಗೆದುಕೊಂಡಾಗ ಅಲ್ಲಿ ಪ್ರತಿನಿಧಿಸುವ ಮಹಿಳೆಯ ಬದುಕು, ಬವಣೆ, ಅನುಭವಗಳ ಕುರಿತು ಮಾತ್ರ ಫಲಿತಾಂಶ ಸಿಗಬಹುದು ಹೊರತು ಉಳಿದ ಒಂಬತ್ತು ಜನರ ಬದುಕು, ಬವಣೆ, ಅನುಭವಗಳು ಕೈಬಿಟ್ಟಂತಾಗುತ್ತವೆ. ಹಾಗಾಗಿ ಒಬ್ಬ ಮಹಿಳೆಯಿರುವಂತೆ ಇನ್ನೊಬ್ಬಳಿರುವುದರಲ್ಲಿ "ರೂಪ, ಗುಣ, ಗಾತ್ರ, ಎತ್ತರವಲ್ಲದೇ ಆರ್ಥಿಕ, ಸಮಾಜಿಕ, ಕೌಟುಂಬಿಕ ಪರಿಸ್ಥಿತಿಗಳು, ಶಿಕ್ಷಣ, ಸಂಸ್ಕೃತಿ, ಧರ್ಮ, ವೇಷಭೂಷಣಗಳು, ವಿವಾಹಿತೆ-ಅವಿವಾಹಿತೆ ಉದ್ಯೋಗ, ಅನುಭವ ಇತ್ಯಾದಿ ಅಂಶಗಳಿಂದಲೂ ಒಬ್ಬಳು ಮತ್ತೊಬ್ಬಳಿಗಿಂತ ಭಿನ್ನವಾಗಿರುತ್ತಾಳೆ. ಆದರೆ ಅವರೆಲ್ಲರ ಈ ಭಿನ್ನತೆಯಲ್ಲೂ ಒಂದು ಸಾಮ್ಯತೆಯ ಸಾಧ್ಯವಿದೆ. ಪ್ರತಿಯೊಬ್ಬ ಸ್ತ್ರೀಯೂ ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದಾಳೆ ಹಾಗೂ ಪುರುಷರು ಸ್ತ್ರೀಯರನ್ನು ನೋಡುವ ದೃಷ್ಟಿಕೋನ ಇವೆಲ್ಲ ಒಂದೇ ಆಗಿವೆ."[೫] ವ್ಯವಸ್ಥೆಯಲ್ಲಿ ಅಸ್ತಿತ್ವವಿರುವ ಜ್ಞಾನ ಮೀಮಾಂಶೆಗಳೆಲ್ಲವೂ ಪುರುಷ ರಚಿತವಾಗಿರುವುದರಿಂದ ಅವನು ರೂಪಿಸಿದ ಮಹಿಳೆಯ ಪ್ರತಿನಿಧೀಕರಣದ ಚಿತ್ರಣವೇ ದೊರೆಯುತ್ತದೆ. ಉದಾ: ಗೃಹಿಣಿಯೊಬ್ಬಳನ್ನು ನೋಡಬೇಕಾದರೆ, ಅಲ್ಲಿ ಇಡಿ ಮಹಿಳಾ ವರ್ಗದ ಮಹಿಳೆಯರನ್ನು ನೋಡುವ ಅಗತ್ಯವಿರುವುದಿಲ್ಲ. ಪುರುಷ ರೂಪಿತ ಗೃಹಿಣಿತ್ವದಲ್ಲಿ ಒಬ್ಬ ಗೃಹಿಣಿಯನ್ನು ಪ್ರತಿನಿಧೀಕರಿಸಿದರೆ ಉಳಿದ ಮಹಿಳೆಯರ ಚಿತ್ರಣ ದೊರೆಯುತ್ತದೆ. ವರ್ಗ, ಜಾತಿ, ರೂಪ ಹೊರತುಪಡಿಸಿದರೆ ಗೃಹಿಣಿಯ ಪಾತ್ರವು ಎಲ್ಲ ಮಹಿಳೆಯರಲ್ಲೂ ಸಮಾನವಾಗಿ ಕಾಣಬಹುದು. ಇದೇ ಅಂಶವನ್ನಿಟ್ಟುಕೊಂಡು ಧಾರಾವಾಹಿಗಳು ಹೆಣ್ಣಿನ ಪ್ರತಿನಿಧೀಕರಣವನ್ನು ಮಾಡುತ್ತವೆ. ಹೆಣ್ಣಿನ ಪ್ರತಿನಿಧೀಕರಣವನ್ನು ಮಾಡುವಾಗಲೂ ಅಲ್ಲಿ ಸಮಾಜದ ಒಪ್ಪಿತವಾಗಿರುವ ಸ್ಥಿರಮಾದರಿಯನ್ನೇ ಕಟ್ಟಿಕೊಡುತ್ತದೆ.

ಒಂದು ವೇಳೆ ಈ ಸ್ಥಿರಮಾದರಿಯ ಗೃಹಿಣಿತ್ವದ ಪಾತ್ರವನ್ನು ಸಮಾಜಕ್ಕೆ ಒಪ್ಪಿತವಾಗದ ರೀತಿಯಲ್ಲಿ ಚಿತ್ರಿಸಿದರೆ, ಉದಾ: ಮನೆಯ ಯಾವುದೇ ಕೆಲಸಗಳಲ್ಲಿ ತೊಡಗದೇ ಇರುವುದು, ಹೆಣ್ಣಿಗೆ ಸೂಚಿಸಿರುವಂತಹ ವಿಧೇಯತೆ, ಗೌರವ ಭಾವ, ವಿನಯಶೀಲತೆ ಈ ಮಾದರಿಗಳನ್ನು ಬಿಟ್ಟು, ಸ್ವತಂತ್ರವಾಗಿರುವ ಪ್ರತಿರೋಧ ವ್ಯಕ್ತಿಪಡಿಸುವಂತಹ ಪಾತ್ರವನ್ನು ಪ್ರತಿನಿಧಿಸುವುದನ್ನು ಕಾಣುವುದಿಲ್ಲ. ಧಾರಾವಾಹಿ ಸೋಲಬಹುದೆಂಬ ಅಳುಕು ನಿರ್ದೇಶಕರಲ್ಲಿರಬಹುದು. ಹಾಗಾಗಿ ಈ ಒಪ್ಪಿತವಾಗಿರುವಂತಹ ಪಾತ್ರಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಹೀಗೆ ವಿವರಿಸುವಾಗ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಸಮಾಜದಲ್ಲಿ ಸ್ಥಾಪಿತವಾಗಿರುವ ಸ್ಥಿರಮಾದರಿಯ ಪಾತ್ರಗಳನ್ನೇ ಯಾಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ? ಆ ಪಾತ್ರಗಳ ಆಯ್ಕೆಯ ಹಿಂದಿರುವ ರಾಜಕಾರಣವೇನು? ಈ ದೃಷ್ಟಿಕೋನವೇ ಯಾಕೆ ಬೇಕು? ಪುರುಷನ ದೃಷ್ಟಿಕೋನದಲ್ಲಿ ಸಿಗುವ ಮಹಿಳೆಯ ಚಿತ್ರಣ, ಮಹಿಳೆಯರದ್ದೇ ಆಗಿರುತ್ತದೆಯೇ? ಇದಕ್ಕಿರುವ ಪುರುಷ ಪ್ರಧಾನ ಮಾನದಂಡ ಎಂತಹದು? ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕಂಡುಕೊಂಡಾಗ ಪ್ರತಿನಿಧೀಕರಣದ ವ್ಯಾಖ್ಯಾನ ವನ್ನು ಅರ್ಥೈಸಿಕೊಳ್ಳಬಹುದಾಗಿದೆ.

ಮಹಿಳಾ ಪ್ರತಿನಿಧೀಕರಣವನ್ನು ಧಾರಾವಾಹಿಗಳಲ್ಲಿ ಹೇಗೆ ಕಟ್ಟಿಕೊಡಲಾಗುತ್ತಿದೆ ಎಂದು ವಿಶ್ಲೇಷಿಸುವ ಮುನ್ನ ಮಾಧ್ಯಮದ ಕುರಿತಾದ ಈ ಅಧ್ಯಯನವು, ಮಾಧ್ಯಮದ ಉಗಮ, ಪ್ರಾರಂಭ ಬೆಳವಣಿಗೆಯ ಹಂತಗಳ, ಧಾರಾವಾಹಿಗಳ ಉಗಮ, ಪ್ರಾರಂಭದ ಕುರಿತು ಚರ್ಚೆಯನ್ನು ಬಯಸುವುದರಿಂದ, ಮಾಧ್ಯಮದ ಒಂದು ಚಾರಿತ್ರಿಕ ನೋಟವನ್ನು ಸ್ಥೂಲವಾಗಿ ಅರ್ಥೈಸಿಕೊಳ್ಳುವ ವಿವರವನ್ನು ಮುಂದಿನ ಭಾಗದಲ್ಲಿ ನೀಡಲಾಗಿದೆ.

೨.೨. ಮಾಧ್ಯಮ ಒಂದು ಚಾರಿತ್ರಿಕ ನೋಟ

ಪ್ರಭಾವಿ ಮಾಧ್ಯಮಗಳನ್ನು ಎರಡು ವಿಧಗಳಲ್ಲಿ ವಿಭಾಗೀಕರಿಸಿದಾಗ ಒಂದು ಮುದ್ರಣ ಮಾಧ್ಯಮ. ಎರಡನೆಯದು ವಿದ್ಯುನ್ಮಾನ ಮಾಧ್ಯಮ. ಮುದ್ರಣ ಮಾಧ್ಯಮದಲ್ಲಿ ಪತ್ರಿಕೆಗಳ ಇತಿಹಾಸವನ್ನು ಅವಲೋಕಿಸಿದರೆ; ಮೊಟ್ಟ ಮೊದಲು ಭಾರತದಲ್ಲಿ ಜನವರಿ ೨೯, ೧೭೮೦ರಂದು ಯುರೋಪಿನ ಜೇಮ್ಸ್ ಆಗಸ್ಟಸ್ ಹಿಕ್ಕಿ ಬೆಂಗಾಲ್ ಹೆಜೆಟ್ ಅಥವಾ ಕಲ್ಕಟಾ ಜನರಲ್ ಅಡ್ವರ್ಟೈಸರ್ ಎನ್ನುವ ಎರಡು ಪುಟಗಳ ಇಂಗ್ಲೀಷ್ ಸಾಪ್ತಾಹಿಕವನ್ನು ಭಾರತದ ನೆಲದಲ್ಲಿ ಪ್ರಾರಂಭಿಸಿದರು. ಹಿಕ್ಕಿಯೇ ಈ ಪತ್ರಿಕೆಯ ಸಂಪಾದಕ, ಪ್ರಕಾಶಕ ಮತ್ತು ಮುದ್ರಕನೂ ಆಗಿದ್ದುದರಿಂದ ಅದು ಹಿಕ್ಕೀಸ್ ಗೆಜೆಟ್ ಎಂದೂ ಕರೆಸಿಕೊಂಡಿತು. ಆಗಸ್ಟ್ ಹಿಕ್ಕಿ ಭಾರತದಲ್ಲಿ ಪತ್ರಿಕೋದ್ಯಮದ ಪಿತಾಮಹನೆಂದು ಎನಿಸಿಕೊಂಡನು ಮುಂದುವರೆದು "ಇಂಡಿಯಾ ಗೆಜೆಟ್ (೧೭೮೦) ಕಲ್ಕತ್ತಾ ಗೆಜೆಟ್ ಮತ್ತು ಓರಿಯೆಂಟಲ್ ಅಡ್ವಡ್ವರ್ಟೈಸರ (೧೭೮೪) ಬೆಂಗಾಲ ಜರ್ನಲ್ (೧೭೮೫). ಹೀಗೆ ಅನೇಕ ಪತ್ರಿಕೆಗಳು ಅಸ್ತಿತ್ವ ಪಡೆದುಕೊಂಡವು. ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲೇ ಕನ್ನಡದ ಪತ್ರಿಕೋದ್ಯಮವು ಮೈಸೂರು, ಹೈದ್ರಾಬಾದ್ ರಾಜ್ಯಗಳ, ಬೊಂಬಾಯಿ, ಮದರಾಸು ಬ್ರಿಟೀಷ್ ಪ್ರಾಂತ್ಯಗಳ ವ್ಯಾಪ್ತಿಗೆ ಹರಡಿತ್ತು. ೧೮೪೩ರಿಂದ

೧೮೮೨ರವರೆಗಿನ ಪತ್ರಿಕೋದ್ಯಮದ ಘಟ್ಟವನ್ನು ಮೊದಲ ಘಟ್ಟವೆಂದು ೧೮೮೦ರ ನಂತರದ ಪತ್ರಿಕೋದ್ಯಮವನ್ನು ಎರಡನೇ ಘಟ್ಟವೆಂದು ಪರಿಗಣಿಸಲಾಯಿತು. ೧೮೮೨ರ ಸುಮಾರಿಗೆ ನಾಡಿನಲ್ಲಿ ಇದ್ದ ಕೇವಲ ೪-೫ ಪತ್ರಿಕೆಗಳ ಸಂಖ್ಯೆಗೆ ಪ್ರತಿಯಾಗಿ ೧೯೦೦ರಲ್ಲಿ ಸುಮಾರು ೨೫ ಪತ್ರಿಕೆಗಳು ವಿವಿಧ ಊರುಗಳಿಂದ ಹೊರಡುತ್ತಿದ್ದವು'.[೬]

ಇನ್ನು ಆಕಾಶವಾಣಿಯು "ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಸರ್ವೀಸ್" ಎಂಬ ಹೆಸರಿನಿಂದ ೧೯೨೭ರಲ್ಲಿ ಖಾಸಗಿ ಒಡೆತನದಲ್ಲಿ ಪ್ರಾರಂಭವಾಯಿತು. ನಂತರ ಅದು ೧೯೩೦ರಲ್ಲಿ ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟಿತು'[೭]. ಆಗ ಅದು ಬರೀ ಒಂದು ಸಂಪರ್ಕ ಮಾಧ್ಯಮವಾಗಿ, ಅದರಲ್ಲಿಯೂ ಮುಖ್ಯವಾಗಿ ೧೯೩೨ರ ದ್ವಿತೀಯ ಮಹಾಯುದ್ಧದ ವಾರ್ತೆ (News)ಗಳನ್ನು ಬಿತ್ತರಿಸುವ ಕೆಲಸವನ್ನು ನಿರ್ವಹಿಸುತ್ತಿತ್ತು. ಆನಂತರ ಮುಂದೆ ಅದು ವಾರ್ತೆಯ ಜೊತೆಗೆ ಶಿಕ್ಷಣ (Education) ಹಾಗೂ ಮನರಂಜನೆ(Entertainment)ಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡತೊಡಗಿತು. ೧೯೫೭ರಲ್ಲಿ ಅದಕ್ಕೆ ಆಕಾಶವಾಣಿ ಎಂಬ ಹೆಸರು ಪ್ರಾಪ್ತಿಯಾಯಿತು'.[೮] ಹೀಗೆ ಪತ್ರಿಕೆ ಮತ್ತು ಆಕಾಶವಾಣಿ ಭಾರತದಲ್ಲಿ ಪ್ರಸಾರಗೊಂಡು ಬೆಳವಣಿಗೆಯನ್ನು ಪಡೆಯುತ್ತಾ ಬಂದವು. ೧೯೮೪ರಲ್ಲಿ ನಡೆದ ಇಂದಿರಾಗಾಂಧಿಯ ಹತ್ಯೆ ಎಲ್ಲೆಡೆಯು ಕಾಳ್ಗಿಚ್ಚಿನಂತೆ ಹಬ್ಬಿತು. ಆಗಿನ ಕಾಲದಲ್ಲಿ ನಡೆಯುತ್ತಿದ್ದ ಎಲ್ಲ ವಿದ್ಯಮಾನಗಳನ್ನು ರೇಡಿಯೋ ಮೂಲಕವೇ ತಿಳಿದುಕೊಳ್ಳುತ್ತಿದ್ದರು. ಭಾರತೀಯ ಸಂದರ್ಭದಲ್ಲಿ ಪತ್ರಿಕೆ, ಚಲನಚಿತ್ರ ಮತ್ತು ದೂರದರ್ಶನ ಇವು ಪ್ರಭಾವಿ ಮಾಧ್ಯಮಗಳೆಂದೇ ಕರೆಯಲ್ಪಡುತ್ತವೆ ಎಂಬ ಸೂಕ್ಷ್ಮ ನೋಟವನ್ನು ಒದಗಿಸಿದ ಬಳಿಕ ಧಾರಾವಾಹಿಗಳ ಉಗಮಕ್ಕೆ ಪ್ರವೇಶ ಪಡೆಯುತ್ತೇನೆ.

ಇಂದು ಕಾಲ ಬದಲಾಗಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಹೆಚ್ಚು ಬದಲಾವಣೆಗಳಾಗಿವೆ. ಮನರಂಜನಾ ವಿಧಾನಗಳಲ್ಲಿಯೂ ಬದಲಾವಣೆಗಳಾಗಿವೆ. ಒಂದು ಕಾಲಕ್ಕೆ ಆಕಾಶವಾಣಿ ಪಡೆದಿದ್ದ ಜನಪ್ರಿಯತೆ ಇಂದು ದೂರದರ್ಶನ ಪಡೆದುಕೊಳ್ಳುತ್ತಿದೆ. ದೂರದರ್ಶನ ಕೇವಲ ಶ್ರವಣ ಮಾಧ್ಯಮವಾಗಿರದೇ ದೃಶ್ಯ ಮತ್ತು ಶ್ರವಣ ಮಾಧ್ಯಮವಾಗಿದ್ದು, ಕೇಳುವ ಮತ್ತು ನೋಡುವ ಅವಕಾಶ ಹೊಂದಿದೆ. ಕೇಳಿದ್ದನ್ನು ನೋಡುವ ಮೂಲಕ ಅನುಭವಿಸುವ ಸಾಮರ್ಥ್ಯವನ್ನು ದೂರದರ್ಶನ ಹೊಂದಿದೆ. ತನ್ನ ದೃಶ್ಯ ಮತ್ತು ಶ್ರವಣಗಳ ಪ್ರಭಾವದಿಂದ ಅತಿ ಹೆಚ್ಚು ಜನರನ್ನು ತಲುಪುವ ಮಾಧ್ಯಮವಾಗಿ ನಿಂತಿದೆ.

ಲೂಯಿಸ್ ಮರ್ಲಿನ್ ಅವರು ದೂರದರ್ಶನದ ಕುರಿತು ಹೀಗೆ ವ್ಯಾಖ್ಯಾನಿಸುತ್ತಾರೆ. "ಸಂವಿಧಾನವನ್ನು ಬದಲಾಯಿಸದೇ ಯಾವ ಕ್ರಾಂತಿಯು ನಡೆಯದೆ ನಮ್ಮ ಮೇಲೆ ರಾಜಕೀಯವಾಗಿ ಹಿಡಿತವಿಟ್ಟುಕೊಳ್ಳುವ ಹೊಸ ಶಕ್ತಿಯೊಂದು ಕಾಣಿಸಿಕೊಂಡಿದೆ ಅದುವೇ ದೂರದರ್ಶನ" ಹೌದು ಇಂದು ಮಾಧ್ಯಮ ಜಗತ್ತು ಅತ್ಯಂತ ವಿಸ್ತಾರವಾಗಿದೆ. ಡಿಜಿಟಲ್ ತಂತ್ರಜ್ಞಾನ ಸೆಟಲೈಟ್ ಜಾಲಗಳು ಮನರಂಜನೆಯ ಜತೆಗೆ ಮನಸ್ಸನ್ನು ಕೆಣಕುವ, ಅಭಿರುಚಿಗಳನ್ನು ತಿದ್ದುವ ದೃಶ್ಯಗಳನ್ನು ತೋರಿಸುತ್ತವೆ. ಟಿ.ವಿ ಮಾಧ್ಯಮ ಮನುಷ್ಯನ ಅಭಿರುಚಿ, ಸಂಸ್ಕಾರಗಳನ್ನು

ತನ್ನದೇ ಆದ ರೀತಿಯಲ್ಲಿ ತಿದ್ದುವ ಕೆಲಸವನ್ನು ಮಾಡುತ್ತಿದೆ. ಪತ್ರಿಕೆಗಳನ್ನು ಓದಿ ತಿಳಿಯಬಹುದಾದುದನ್ನು ದೃಶ್ಯಮಾಧ್ಯಮದ ಮೂಲಕ ನೋಡಿ ಜನ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ'[೯]. ಹೀಗೆ ತಮ್ಮ ತಿಳುವಳಿಕೆಯ ಪರಧಿಯನ್ನು ವಿಸ್ತರಿಸಿಕೊಳ್ಳುವುದರ ಮೂಲಕ ಆಧುನಿಕ ಸಂವಹನ ಮಾಧ್ಯಮಗಳ ಭಾಗಗಳಾಗಿ ಸಂವಹನ ಕ್ರಿಯೆಗೆ ಒಳಗಾಗುತ್ತಿರುತ್ತಾರೆ.

ಸಂವಹನ ಕ್ರಿಯೆ ಇಂದು ಪ್ರತಿಯೊಬ್ಬರ ಅವಿಭಾಜ್ಯ ಅಂಗದಂತೆ ಕಾರ್ಯ ನಿರ್ವಹಿಸುತ್ತಿದೆ. ಪರಸ್ಪರರ ಮಧ್ಯೆ ಸಂವಹನ ಕ್ರಿಯೆ ಏರ್ಪಟ್ಟಾಗಲೇ ವ್ಯಕ್ತಿಗಳು ಬೆರೆತು, ಒಬ್ಬರನ್ನೊಬ್ಬರು, ತಿಳಿಯುವ ಪ್ರಯತ್ನಗಳು ನಡೆಯುತ್ತವೆ. ಇಂತಹ ಸಂವಹನ ಕ್ರಿಯೆಯು ಮಾನವನ ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ. ಮಾತಿನ ಅಗತ್ಯವಿಲ್ಲದೆಯೂ ಸಂವಹನ ಸಾಧ್ಯ ಮಾತಿಲ್ಲದ ಮಗುವಿನ ಅಳು ಕೂಡ ತಾಯಿಗೆ ಸೂಕ್ತ ಸಂದೇಶಗಳನ್ನು ಕೊಡುವಂತಹದ್ದಾಗಿದೆ. ಪ್ರಾಣಿಗಳೂ ಕೂಡ ತಮ್ಮದೇ ಆದ ಭಾಷೆಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುತ್ತಿರುತ್ತವೆ. ಹೀಗೆ ಸದ್ದು ಸಂಜ್ಞೆಗಳೂ ಸಂವಹನದ ಸಾಧನಗಳಾಗಬಹುದು. ಮುಂದೆ ಪರಸ್ಪರ ವ್ಯವಹಾರಗಳಿಗಾಗಿ ಒಪ್ಪಿಕೊಂಡ ಧ್ವನಿ ಸಂಕೇತಗಳ ಮೂಲಕ ವ್ಯವಸ್ಥೆಯ ಭಾಷೆಯಾಗಿ ಬಳಕೆಗೆ ಬಂದಿತು ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಬಳಕೆಯಿಂದಾಗಿ ಭಾಷೆ ಬೆಳೆಯುತ್ತ ಸಂವಹನದ ವ್ಯಾಪ್ತಿ ಹಿಗ್ಗುತ್ತ ಹೋಗುತ್ತದೆ. ಸಂವಹನ ಕ್ರಿಯೆ ಎಂಬ ಪದವು ಇಂಗ್ಲೀಷನ ಕಮ್ಯುನಿಕೇಷನ್ (communication) ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಸಲ್ಪಡುವ 'ಸಂವಹನ' ಸೊಗಸಾದ ಪದ ಕನ್ನಡದಲ್ಲಿ 'ಸ' ಕಾರವೇ ಸಕಾರಾತ್ಮಕವಾದುದು, ಸೊಗಸಿಗೆ, ಒಳತಿಗೆ, ಸಮೃದ್ಧಿಗೆ ಸೂಚಿಯಾಗಿರುವುದು, ಸರಸ, ಸಶಕ್ತ, ಸಲ್ಲಕ್ಷಣ, ಸಕ್ರಮ, ಸಶೇಷ, ಸುವರ್ಣ ಮುಂತಾಗಿ ಸೂಚಿಸಬಹುದಾಗಿದೆ'.[೧೦] ಇದಕ್ಕೆ ಇನ್ನೊಂದು ಅರ್ಥದಲ್ಲಿ ವಿವರಿಸುವುದಾದರೆ ಇಂಗ್ಲೀಷನ(mass)" ಎಂಬ ಪದಕ್ಕೆ ಸಂವಾದಿಯಾಗಿ "ಸಮೂಹ" ಎಂಬ ಪದವನ್ನು ಹಾಗೂ communication ಎಂಬ ಪದಕ್ಕೆ ಸಂವಾದಿಯಾಗಿ "ಸಂವಹನ" ಎಂಬ ಪದವನ್ನು ನಾವು ಬಳಸುತ್ತಿದ್ದೇವೆ. ಸಂವಹನ ಮತ್ತು ಸಂಪರ್ಕ ಎಂಬ ಎರಡು ಪದಗಳನ್ನು ಪರ್ಯಾಯ ಪದಗಳಾಗಿಯೂ ಬಳಸಲಾಗುತ್ತಿದೆ'.[೧೧] ಹಾಗಾಗಿಯೇ ಇಡೀ ಭೂಮಂಡಲವೇ ಒಂದು "ವಿಶ್ವಗ್ರಾಮ"ವಾಗಿ ಪರಿವರ್ತನೆಗೊಂಡಿದೆ. ವಿವಿಧ ಜನಾಂಗಗಳು ಮತ್ತು ಸಂಸ್ಕೃತಿಗಳ ವೈಶಿಷ್ಟ್ಯಗಳನ್ನು ಸಮೂಹ ಮಾಧ್ಯಮಗಳು ಮನೆ ಬಾಗಿಲಿಗೇ ತಂದು ನಿಲ್ಲಿಸಿವೆ. ಜನರನ್ನು, ಸ್ಥಳಗಳನ್ನು ಮತ್ತು ಸಂಸ್ಕೃತಿಗಳನ್ನು ಅರಿಯಲು ವಿಶ್ವಪರ್ಯಟನೆ ಬೇಕಿಲ್ಲ" ಎಂದು ಖ್ಯಾತ ಸಂವಹನ ತಜ್ಞ ಮಾರ್ಷಲ್ ಮ್ಯಾಕ್‌ಲೂಹನ್ ಅಭಿಪ್ರಾಯ ಪಡುತ್ತಾರೆ. ಮಾಧ್ಯಮಗಳಲ್ಲಿ, ಪತ್ರಿಕೆ, ಆಕಾಶವಾಣಿ, ದೂರದರ್ಶನ, ಚಲನಚಿತ್ರ ಇವು ತುಂಬಾ ಪ್ರಭಾವಿಯಾದ ಮಾಧ್ಯಮಗಳಾಗಿವೆ. "ದೃಶ್ಯ-ಶ್ರವಣಗಳ ಸಂಯುಕ್ತ ಮಾಧ್ಯಮವಾದ ದೂರದರ್ಶನ ಉಳಿದೆಲ್ಲ ಮಾಧ್ಯಮಗಳಿಗಿಂತ ಶರವೇಗದಲ್ಲಿ ಬೆಳೆಯುತ್ತಿರುವ ಮತ್ತೊಂದು ಪ್ರಮುಖ ಸಂವಹನ ಮಾಧ್ಯಮ. ರೇಡಿಯೋ ಮತ್ತು ಪತ್ರಿಕೆಗಳಿಗಿಂತ ದೂರದರ್ಶನ

ಜನತೆಯ ಮೇಲೆ ಹೆಚ್ಚು ಪ್ರಭಾವ ಮೂಡಿಸುವ ಶಕ್ತಿ ಪಡೆದಿದೆ. ಇತ್ತೀಚಿನ ಭಾರಿ ವಿಸ್ತರಣೆಯ ಯೋಜನೆಯಿಂದಾಗಿ ದೂರದರ್ಶನದ ಲಾಭ ಹೆಚ್ಚು ಮಂದಿ ಭಾರತೀಯರಿಗೆ ಲಭಿಸಲಾರಂಭಿಸಿದೆ'.[೨]

ಬಡವನಿಗೆ ಬಡತನದ ದೌರ್ಬಲ್ಯಗಳನ್ನು ತಿಳಿಸುವುದು ಅನಕ್ಷರಸ್ಥನಿಗೆ ಅಕ್ಷರದ ಮೌಲ್ಯದ ಅರಿವು ಮೂಡಿಸುವುದು, ರೋಗಿಗೆ ಆರೋಗ್ಯದ ಬೆಳಕನ್ನು ತೋರಿಸಿದ ನಂತರವೇ ಆತನಲ್ಲಿ ಬದಲಾವಣೆಯಾಗಬೇಕೆನ್ನುವ ಮನೋಭಾವ ಮೂಡುತ್ತದೆ. ಈ ಪರಿಜ್ಞಾನ ಮೂಡಿದಾಗ, ಓರ್ವ ವ್ಯಕ್ತಿ ವಿವಿಧ ಆಸಕ್ತಿಕರನ್ನು ಕಂಡು ತನಗೆ ಬೇಕಾಗುವ ಅಗತ್ಯತೆಗಳ ಬಗ್ಗೆ ಹುಡುಕಲಾರಂಭಿಸುತ್ತಾನೆ. ಇದು ಮಾಧ್ಯಮದ ಅಭಿವೃದ್ಧಿಯ ಸಂಕೇತವೆನಿಸುತ್ತದೆ. ಈ ಮಾಧ್ಯಮದಲ್ಲಿ ದೂರದರ್ಶನ ಬೇರೆ ಇಲ್ಲ. ಈ ಕುರಿತು ವಿಶಾಲವಾದ ಚರ್ಚೆಗೆ ಹೋಗುವ ಮುನ್ನ ದೂರದರ್ಶನದ ಇತಿಹಾಸ ತಿಳಿಯುವುದು ಮುಖ್ಯವಾಗುತ್ತದೆ.

೨.೩. ದೂರದರ್ಶನ ಮೊಟ್ಟಮೊದಲು ಪ್ರಸಾರಗೊಂಡ ಹಿನ್ನೆಲೆ (ಧಾರಾವಾಹಿಗಳ ಪ್ರಸಾರದ ಹಿನ್ನೆಲೆ)

ಇಂದು ಟೆಲಿವಿಷನ್ ಉದ್ಯಮದಲ್ಲಿ ಸರ್ಕಾರಿ ಒಡೆತನದ ದೂರದರ್ಶನದ ವಾಹಿನಿಗಳು ಹಾಗೂ ಖಾಸಗಿ ಒಡೆತನದ ಉಪಗ್ರಹ ವಾಹಿನಿಗಳು ಪ್ರಸಾರ ಸೇವೆ ಒದಗಿಸುತ್ತಿವೆ. ಸರ್ಕಾರಿ ಒಡೆತನದ ಟಿ.ವಿ ವಾಹಿನಿಗಳು ಸಾಮಾಜಿಕ ಬದ್ಧತೆಯ ನೀತಿಗನುಸಾರವಾಗಿ ಶೈಕ್ಷಣಿಕ, ಆರೋಗ್ಯ, ಅಭಿವೃದ್ಧಿ, ಕೃಷಿ ಇಂತಹ ಕಾರ್ಯಕ್ರಮಗಳನ್ನು ಪ್ರಮುಖವಾಗಿ ಪ್ರಸಾರ ಮಾಡುವುದರ ಜೊತೆಗೆ ಮನರಂಜನಾ ಕಾರ್ಯಕ್ರಮಗಳನ್ನು ಪ್ರಸಾರಮಾಡುತ್ತಿವೆ. ೧೯೬೫ರ ಹೊತ್ತಿನ ಟಿ.ವಿ ದಿನವೊಂದಕ್ಕೆ ಒಂದು ಗಂಟೆ ಸೇವೆ ಒದಗಿಸುವ ಹಂತಕ್ಕೆ ಬಂತು. ಇದರಲ್ಲಿ ಸುದ್ದಿ ಪ್ರಸಾರ ಕೂಡ ಮಾಡಿತ್ತು. ೧೯೭೨ರಲ್ಲಿ ಟಿ.ವಿ., ಮುಂಬೈಗೆ ಬಂದಿತು. ಜತೆಗೆ ಬೆಂಗಳೂರು ಸೇರಿದಂತೆ ಇತರ ಐದು ಟಿ.ವಿ ಕೇಂದ್ರಗಳು ಆರಂಭವಾದವು. ಹೀಗೆ ಆರಂಭವಾದ ಟಿ.ವಿಯು ಪ್ರಸ್ತುತ ದಿನಗಳಲ್ಲಿ ಅತ್ಯಂತ ಬೃಹದಾಕಾರವಾದ ಬೆಳವಣಿಗೆ ಹೊಂದಿ ನಿಂತಿದೆ.

ಇಡೀ ಪ್ರಪಂಚದಲ್ಲಿ ದೂರದರ್ಶನ ಪಾದಾರ್ಪಣೆ ಮಾಡಿದ್ದು ಯಾವಾಗ, ಅದರ ಬೆಳವಣಿಗೆ, ಅಭಿವೃದ್ಧಿಯ ಕುರಿತು ಈಗಾಗಲೇ ಸಾಕಷ್ಟು ಚಿಂತಕರು, ವಿದ್ವಾಂಸರು ಹಲವು ಕೃತಿಗಳಲ್ಲಿ ಅಮೂಲಾಗ್ರವಾದ ಮತ್ತು ವಿಸ್ತಾರವಾದ ಮಾಹಿತಿಯನ್ನು ನೀಡಿದ್ದಾರೆ, ಅಧ್ಯಯನದ ವ್ಯಾಪ್ತಿಯು ದೂರದರ್ಶನದಲ್ಲಿ ಪ್ರಸಾರವಾಗುವ ಧಾರಾವಾಹಿಗಳಿಗೆ ಸೀಮಿತವಾಗಿರುವುದರಿಂದ ದೂರದರ್ಶನದ ಒಂದು ಸ್ಥೂಲ ನೋಟ ಒದಗಿಸಿ ಧಾರಾವಾಹಿಗಳ ವಿಷಯಕ್ಕೆ ಪ್ರವೇಶ ಪಡೆಯವುದಾಗಿದೆ. ಸಮೂಹ ಮಾಧ್ಯಮಗಳಲ್ಲಿ ವಿಸ್ತಾರವಾದ ಬಾಹುಗಳನ್ನು ಹೊಂದಿರುವ ದೂರದರ್ಶನದ ಧಾರಾವಾಹಿಗಳ ಕುರಿತು ಚರ್ಚಿಸುವುದು ಅಧ್ಯಯನದ ಉದ್ದೇಶವಾಗಿದೆ.

ದೂರದರ್ಶನ ಪ್ರಾರಂಭವಾದ ಮೊದಲ ದಿನಗಳಿಂದ ಹಲವಾರು ಕುತೂಹಲಗಳನ್ನು, ಜನರ ಮನಸ್ಸಿನಲ್ಲಿ ಮೂಡಿಸುತ್ತಲೇ ಬಂದಿದೆ. ಅದು ಪ್ರಸ್ತುತ ದಿನಗಳಲ್ಲಿಯೂ ಕೂಡಾ ಹೆಚ್ಚು ಕಡಿಮೆ ಒಂದೇ ಹೋಲಿಕೆ ಇದೆ. ದೂರದರ್ಶನ ದೃಶ್ಯ-ಶ್ರವ್ಯ ಮಾಧ್ಯಮ ಆಗಿರುವುದರಿಂದ ಉಳಿದ ಮಾಧ್ಯಮಗಳಿಗಿಂತ ಹೆಚ್ಚು ಪ್ರಭಾವ ಬೀರುತ್ತದೆ ಎಂದು ಈ ಹಿಂದೆಯೇ ಚರ್ಚಿಸಲಾಗಿದೆ. ಇಂತಹ ಪ್ರಭಾವ ಹೊಂದಿರುವ ಮಾಧ್ಯಮ ಪ್ರಾರಂಭವಾದಾಗ ಕೆಲವೊಂದು ಉದ್ದೇಶಗಳು ಮತ್ತು ಮಾಧ್ಯಮದ ಪಾತ್ರವಹಿಸುವುದಕ್ಕಾಗಿ ರಾಷ್ಟ್ರೀಯ ಗುರಿ ಸಾಧನೆಯ ವಿಷಯದಲ್ಲಿ ದೂರದರ್ಶನವೂ ಸೇರಿದಂತೆ ಎಲ್ಲಾ ಮಾಧ್ಯಮಗಳೂವಹಿಸಬೇಕಾದ ಪಾತ್ರ ಯಾವುದು? ಅದಕ್ಕಾಗಿ ಅಳವಡಿಸಿಕೊಳ್ಳಬೇಕಾದ ಅಂಶಗಳೇನು? ಎಂಬುವುದನ್ನು ಯುನೆಸ್ಕೋ ವರದಿಯಲ್ಲಿ ಸೂಚಿಸಲಾಗಿದೆ ಎಂದು ವಿವರಿಸಲಾಗಿದೆ. ಅವುಗಳನ್ನು ಕೆಳಗಿನಂತೆ ನೋಡ ಬಹುದಾಗಿದೆ.

* ಮಾಹಿತಿ ವಿತರಣೆ.
* ಸಾಮಾಜೀಕರಣೆ.
* ಪ್ರೇರೇಪಣೆ.
* ಸಾರ್ವತ್ರಿಕ ಸಮಸ್ಯೆಗಳನ್ನು ಕುರಿತು ಚರ್ಚೆ, ಅಭಿಪ್ರಾಯಮಂಡನೆಗೆ ಪ್ರೋತ್ಸಾಹ.
* ಶಿಕ್ಷಣ.
* ಸಾರ್ವತ್ರಿಕ ಪ್ರೋತ್ಸಾಹ
* ಮನರಂಜನೆ
* ಭಾವೈಕ್ಯತೆ'.[೧೩]

ಈ ಎಲ್ಲ ಅಂಶಗಳನ್ನು ದೂರದರ್ಶನ ಮತ್ತು ಇತರ ಖಾಸಗಿ ಒಡೆತನದಲ್ಲಿರುವ ವಾಹಿನಿಗಳು ಅನ್ವಯಿಸಿಕೊಂಡು ಒಂದು ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಸಹಕರಿಸಬೇಕಾದುದು ಕರ್ತವ್ಯ ಆದರೆ ವಾಸ್ತವದ ಪರಿಸ್ಥಿತಿ ನೋಡಿದರೆ ಈ ಎಲ್ಲ ಮಾಧ್ಯಮಗಳು ತಮ್ಮ ಗುರಿ, ಉದ್ದೇಶ, ಧ್ಯೇಯೋದ್ದೇಶಗಳನ್ನು ಬದಿಗೊತ್ತಿ ಕೇವಲ ಮನರಂಜನೆಯ ಕಾರ್ಯಕ್ರಮಗಳಿಗೆ ಮಾತ್ರ ಹೆಚ್ಚಿನ ಒಲವನ್ನು ತೋರಿಸಲಾಗಿತ್ತಿದೆ. ಕೆಲವೊಂದು ಗಂಭೀರ ವಿಷಯಗಳ ಕುರಿತು ಚರ್ಚೆಗಳಾಗುತ್ತಿದ್ದರೂ ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಅದೇ ಸಾಂಪ್ರದಾಯಿಕ ಮಾದರಿಯನ್ನೆ ಕಟ್ಟಿಕೊಡಲಾಗುತ್ತಿದೆ.

ದೂರದರ್ಶನದ ಧಾರಾವಾಹಿಗಳಿಗೆ ಸಮೀಕರಿಸಿ ನೋಡ ಹೊರಟರೇ ನಮಗೆ ಸಿಗುವ ವಾಸ್ತವ ಬೇರೆಯದೇ ಆಗಿದೆ. ದೂರದರ್ಶನ ಇಂದು ತಾನು ಅಳವಡಿಸಿಕೊಂಡು ಬರುತ್ತಲಿರುವ ಗುರಿ, ಉದ್ದೇಶಗಳಲ್ಲಿ ಮತ್ತು ಅದು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯ ಗಾಳಿ

ಬೀಸತೊಡಗಿದೆ. ಈ ಬದಲಾವಣೆಯ ಗಾಳಿ ಉದಾರವಾದಿಯಾಗಿದೆಯಾ? ಇಲ್ಲ ಉದಾರವಾದಿಯಾಗುವ ಮುಖವಾಡವನ್ನು ಧರಿಸಿ ಮತ್ತೆ ಸಾಂಪ್ರದಾಯಿಕ ಮಾದರಿಯನ್ನು ಲಿಂಗತಾರತಮ್ಯವನ್ನು ಮತ್ತು ಅಸಮಾನತೆಯನ್ನು ಸ್ಥಿರೀಕರಿಸುವ ಮೂಲಕ ದೃಢೀಕರಿಸುವ ಹುನ್ನಾರ ನಡೆಸುತ್ತಿದೆಯಾ ಎನ್ನುವ ಸಂದೇಹ ಮತ್ತು ಪ್ರಶ್ನೆಗಳು ಏಕಕಾಲಕ್ಕೆ ಹುಟ್ಟಿಕೊಳ್ಳುತ್ತವೆ. ದೂರದರ್ಶನದಲ್ಲಿ ಪ್ರಸಾರವಾಗುವ ಎಲ್ಲಾ ಕಾರ್ಯಕ್ರಮಗಳಿಗಿಂತ ಈ ಧಾರಾವಾಹಿಗಳಲ್ಲಿ ಚಿತ್ರಿತವಾಗುವ ಪುರುಷಮಾನದಂಡ, ಪುರುಷ ದೃಷ್ಟಿಕೋನವೆಂದು ಕರೆಯಲ್ಪಡುವ ಈ ಮಾದರಿಯನ್ನು ವ್ಯಾಖ್ಯಾನಿಸಿಕೊಳ್ಳುವ ಹಂಬಲ ಎದುರಾಗುತ್ತದೆ. ಈ ಪುರುಷ ಮಾನದಂಡವನ್ನು ಸ್ತ್ರೀವಾದಿಗಳು ವ್ಯಾಖ್ಯಾನಿಸುವ ದೃಷ್ಟಿಕೋನವನ್ನು ಕುರಿತು ಚರ್ಚಿಸುವ ಅಗತ್ಯ ಅಧ್ಯಯನಕ್ಕಿದೆ. ಧಾರಾವಾಹಿಗಳಲ್ಲಿ ಪುರುಷ ಮಾನದಂಡದ ಕಲ್ಪನೆಯನ್ನು ನಿರ್ವಚಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

೨.೩.೧. ಧಾರಾವಾಹಿಗಳ ವಿನ್ಯಾಸ

ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳು, ಟಿವಿ ಕಾರ್ಯಕ್ರಮಗಳು ಚಲನಚಿತ್ರ ಪ್ರೇರಿತವಾಗಿವೆ ಎಂದು ಹೇಳಬಹುದು. ದೂರದರ್ಶನ ಪ್ರಾರಂಭವಾದ ದಿನಗಳಲ್ಲಿ ಉತ್ತಮ ಕಾರ್ಯಕ್ರಮಗಳ ನಿರ್ಮಾಣವನ್ನು ಮಾಡಲಾಗುತ್ತಿತ್ತು. ಯಾವಾಗ ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡಿದ ಸೃಜನಶೀಲ ನಿರ್ಮಾಪಕರು, ಧಾರಾವಾಹಿಯ ನಿರ್ದೇಶನಕ್ಕೆ ಮುಂದಾದಾಗ, ಇಲ್ಲಿಯೂ ಚಲನಚಿತ್ರ ಮಾದರಿಯನ್ನೇ ಕಟ್ಟಿಕೊಡಲಾಯಿತು. ಉದಾ: ರಮೇಶಸಿಪ್ಪಿ (ಬುನಿಯಾದ, ಶ್ರೀ ಗಣೇಶ್, ಓಂ ನಮಃ ಶಿವಾಯ) ಧಾರಾವಾಹಿಗಳಲ್ಲಿಯೇ ಜನಪ್ರಿಯತೆಯ ಉತ್ತುಂಗಕ್ಕೇರಿದ ಮಹಾಭಾರತ ನಿರ್ದೇಶಕ ಬಿ.ಆರ್. ಚೋಪ್ರಾ ಅವರು. ಕನ್ನಡದಲ್ಲಿ ಎಸ್. ನಾರಾಯಣ (ಪಾರ್ವತಿ, ದುರ್ಗಾ, ಕಾವ್ಯಾಂಜಲಿ) ಮುಂತಾದವು ವೈಶಾಲಿ ಕಾಸರವಳ್ಳಿ (ಮೂಕರಾಗ) ಗಿರೀಶ್ ಕಾಸರವಳ್ಳಿ (ಗೃಹಭಂಗ) ಇವರು ಚಲನಚಿತ್ರ ಕ್ಷೇತ್ರದಲ್ಲಿ ಮಾಡಿದ ಸೃಜನಶೀಲತೆಯಲ್ಲಿಯೇ ಧಾರಾವಾಹಿಗಳು ಪ್ರಸಾರವಾಗತೊಡಗಿದವು. ಧಾರಾವಾಹಿಗಳನ್ನು ವೀಕ್ಷಕರು ಒಪ್ಪಿಕೊಂಡು ನೋಡಬೇಕಾದರೆ ಹೇಗೆ ವಿನ್ಯಾಸ ಕೊಡಬೇಕೆಂಬುದನ್ನು ಜಯಂತ ಕಾಯ್ಕಿಣಿ ಅವರು ಹೀಗೆ ವಿವರಿಸುತ್ತಾರೆ.

ಯಾವುದೇ ಒಂದು ಧಾರಾವಾಹಿಯು ಮುಖ್ಯವಾಗಿ ಕಥಾವಸ್ತುವನ್ನು ಹೊಂದಿರುತ್ತದೆ. ಅದರಂತೆ ಅಲ್ಲಿ ಅನೇಕರು ಕೆಲಸಗಳನ್ನು ನಿರ್ವಹಿಸುತ್ತಾರೆ. ಈ ಧಾರಾವಾಹಿಗಳು ಪ್ರಸಾರವಾಗಿ ಹೆಚ್ಚು ಜನಪ್ರಿಯತೆಯನ್ನು ಗಳಿಸಲು ಆಯಾ ಕಾಲಘಟ್ಟದ ವಿಷಯಗಳನ್ನು ತಮ್ಮದೇ ಆದ ದೃಷ್ಟಿಕೋನದೊಂದಿಗೆ ನಿರ್ಮಿಸಿರುತ್ತಾರೆ. ಹೀಗೆ ನಿರ್ಮಾಣಗೊಳ್ಳುವ ಧಾರಾವಾಹಿಗಳು ಮುಖ್ಯವಾಗಿ ಜನರವರೆಗೂ ತಲುಪಲು ಕೆಲವೊಂದು ತಂತ್ರಗಳನ್ನು ಅನುಸರಿಸುತ್ತವೆ. ಜಯಂತ ಕಾಯ್ಕಿಣಿ ಅವರು ಈ ಧಾರಾವಾಹಿಗಳ ರೂಪು (ಡಿಸೈನ್) ರೀತಿಯನ್ನು ಹೀಗೆ ಹೇಳುತ್ತಾರೆ. (Each Episode Should End with an Unexpected, note.) ಪ್ರತಿಯೊಂದು ಸಂಚಿಕೆಯು ನಿರೀಕ್ಷಿಸಿರದ ಹಂತಕ್ಕೆ ಬಂದು ಮುಗಿಯಬೇಕು. (let the episodes end on a predictable note.)ಇದಾದ ಮೇಲೆ, ಯಾಕೆಂದರೆ ನೋಡಿದ ಜನ ನನ್ನ ಮನಸ್ಸಿನಂತೆ ಅಥವಾ ನಾನು

ಊಹಿಸಿದಂತೆ ಕತೆ ಓಡುತ್ತಿದೆ ಎಂದು, ಇಲ್ಲಿ ಊಹಿಸುವವರು. ನಿರ್ದೇಶಕರಿಗಿಂತಲೂ ಜಾಣ ಎಂದೆನಿಸಿಕೊಳ್ಳಲು ಪ್ರಾರಂಭವಾಯಿತು. ಮೂರನೆಯದ್ದು ಬಂತು ಅಂದೇನೆಂದರೆ (show people in rich lavisn lifestyles) ಕಾರುಗಳು ತೋರಿಸಿ, ಶ್ರೀಮಂತರಾಗಿ ತೋರಿಸಿ, ಏನು ಬೇಕಾದರೂ ಮಾಡಿ ರಿಚ್ ಆಗಿ ತೋರಿಸಿ ಆದರೆ (Show them crying and suffering) ಯಾಕೆಂದರೆ ಎಷ್ಟಿದ್ದರೆ ಏನು ನೋಡು ಹೇಗೆ ಆಳುತ್ತಿದ್ದಾರೆ'.[೧೫] ಇಂದು ಪ್ರಸಾರಗೊಳ್ಳುವ ಬಹುತೇಕ ಧಾರಾವಾಹಿಗಳು ಈ ಮಾದರಿಯಲ್ಲಿಯೇ ಚಿತ್ರಿತವಾಗುತ್ತಿವೆ. ಧಾರಾವಾಹಿಗಳಲ್ಲಿ ವೈಭವೀಕರಣ(Title) ಇತ್ತೀಚಿನ ದಿನಗಳಲ್ಲಿ ಧಾರಾವಾಹಿಗಳಲ್ಲಿ ಹೆಚ್ಚಿನ ಆಧುನಿಕತ, ಆಡಂಬರವನ್ನು ತುಂಬುತ್ತಿರುವುದು ಕಾಣಬಹುದಾಗಿದೆ. ಝಿ ವಾಹಿನಿಯಲ್ಲಿ ಪ್ರಸಾರವಾಗುವ ಸೊಸೆ ತಂದ ಸೌಭಾಗ್ಯದಲ್ಲಿ ಮದುವೆ ಸಮಾರಂಭವನ್ನು ಅದ್ದೂರಿಯಾಗಿ, ನಿಜ ಜೀವನದಲ್ಲಿ ನಡೆಯುವಷ್ಟೆ ಆಧುನಿಕವಾಗಿ ಚಿತ್ರಿಸಲಾಯಿತು, ರಾಧಾಕಲ್ಯಾಣದಲ್ಲಿಯೂ ಮದುವೆಯನ್ನು ಅದ್ದೂರಿಯಾಗಿಯೇ ಚಿತ್ರೀಕರಿಸಲಾಯಿತು. ಒಂದೂವರೆ ದಶಕದ ಹಿಂದೆ ಪ್ರಸಾರವಾಗುತ್ತಿದ್ದ ಧಾರಾವಾಹಿಗಳಾದ ರಾಮಾಯಣ, ಮಹಾಭಾರತ, ಚಂದ್ರಕಾಂತಾದಂತಹ ಧಾರಾವಾಹಿಗಳು ಯಾವುದೇ ಆಡಂಬರ(ರಾಜ ಪೋಷಾಕಗಳನ್ನು ಹೊರತುಪಡಿಸಿ)ವಿಲ್ಲದಿದ್ದರು ಜನರನ್ನು ತನ್ನ ಸೆಳೆಯುತ್ತಿದ್ದವು. ಇಲ್ಲಿ ಆಧುನಿಕತೆಯ ಭರಾಟೆಗಿಂತಲೂ ಕಥಾವಸ್ತು ಮುಖ್ಯವಾಯಿತು. ದೂರದರ್ಶನ ಮೆಟ್ರೋ ಚಾನೆಲ್‌ನಲ್ಲಿ ಧಾರಾವಾಹಿಗಳು ವಾರದ ಐದು ದಿನ ಪ್ರಸಾರವಾಗತೊಡಗಿದವೋ ಅಲ್ಲಿ ಕೌಟುಂಬಿಕ ಧಾರಾವಾಹಿಗಳದ್ದೇ ಮೇಲುಗೈಯಾಗಿತು. ಖಾಸಗಿ ವಾಹಿನಿಗಳಾದ ಝಿ ಟಿ.ವಿ. ಸ್ಟಾರ್‌ಪ್ಲಸ್, ಸೋನಿಗಳ ಪ್ರವೇಶವಾದಾಗ ಧಾರಾವಾಹಿಗಳ ಸ್ವರೂಪದಲ್ಲಿ ಹೈಟೆಕ ಟಚ ಪಡೆದುಕೊಂಡವು ಉದಾಹರಣೆಯಾಗಿ ಏಕ್ತಾಕಪೂರ ನಿರ್ದೇಶನದ ಕ್ಯೂಂಕಿ ಸಾಸ್ ಭಿ ಕಭಿ ಬಹು ಥಿ, ಕಹಾನಿ ಘರ್ ಕೀ, ಕಸೌಟಿ ಜಿಂದಗೀ ಕೀ, ಅಂಬಿಕಾ, ಮೊದಲಾದ ಧಾರಾವಾಹಿ ಅತ್ತೆ ಸೊಸೆಯರ ವಿರಸ, ಬಾಂದವ್ಯ, ಕುಟುಂಬ ಕಲಹ ಇತ್ಯಾದಿಗಳನ್ನೇ ವೈಭವೀಕರಿಸಿ ಆಡಂಬರವನ್ನೇ ಹೆಚ್ಚಾಗಿ ಚಿತ್ರಿತವಾದವು.

ನಂತರ ಬಾಲಿಕಾವಧು, ಕಾಶಿ, ನಾ ಆನಾ ಇಸ್ ದೇಶ ಲಾಡೋ, ಲಕುಮಿ, ಗೆಜ್ಜೆಪೂಜೆ, ಬಾಲ್ಯವಿವಾಹ, ಮಹಿಳೆಯರ ಮೇಲಿನ ದೌರ್ಜನ್ಯ, ಹೆಣ್ಣು ಶಿಶುಹತ್ಯೆ ಸಾಮಾಜಿಕ ಅನಿಷ್ಠ ಪದ್ಧತಿಯನ್ನು ಹೊರಹಾಕುವಂತಹ ಧಾರಾವಾಹಿಗಳು ಪ್ರಸಾರಗೊಂಡವು. ಹೀಗೆ ಧಾರಾವಾಹಿಗಳಿಗೂ ಕೂಡ ಆಧುನಿಕತೆಯ ಮೋಹ ಮತ್ತು ಟಿ.ಆರ್.ಪಿ.ಯ ವ್ಯಾಮೋಹದಿಂದಾಗಿ ಕಥೆಯ ಮೂಲ ವಸ್ತು ಯಾವ ದಿಕ್ಕಿನತ್ತ ಚಲಿಸುತ್ತಿದೆ ಎಂಬುದರ ಪರಿವೆ ಇಲ್ಲದೇ ಸಾಗುತ್ತಿರುವುದು ಶೋಚನೀಯವೆನಿಸುತ್ತದೆ.

೨.೩.೨. ಧಾರಾವಾಹಿಗಳ ಶೂಟಿಂಗ್ ಮನೆಗಳು

ಹಾಲಿ ದಿನಕ್ಕೆ ೫೮ ಧಾರಾವಾಹಿಗಳು ಪ್ರಸಾರವಾಗುವುದರಿಂದ ೬೦ರಿಂದ ೭೦ ಮನೆಗಳಲ್ಲಿ ನಿತ್ಯ ಶೂಟಿಂಗ್ ನಡೆಯುತ್ತದೆ. ಪ್ರತಿ ಘಟಕದಲ್ಲಿ ಕಲಾವಿದರು, ತಂತ್ರಜ್ಞರು ಕಾರ್ಮಿಕರು ಸೇರಿ ೩೫ರಿಂದ ೪೦ ಮಂದಿ ಕೆಲಸ ಮಾಡುತ್ತಾರೆ. ಚಿತ್ರೀಕರಣದಲ್ಲಿಯೇ ಮೂರು ಸಾವಿರಕ್ಕೂ

ಅಧಿಕ ಮಂದಿ ಕಾರ್ಯನಿರತರಾಗಿದ್ದರೆ, ರೆಕಾರ್ಡಿಂಗ್, ಡಬ್ಬಿಂಗ್‌ನಲ್ಲಿ ದುಡಿಯುವವರ ಸಂಖ್ಯೆ ೨ ಸಾವಿರ ದಾಟುತ್ತದೆ. ಟಿವಿ ಚಾನೆಲ್‌ಗಳ ಸಿಬ್ಬಂದಿ ಹೊರತುಪಡಿಸಿ ಪ್ರತಿನಿತ್ಯ ೫ ಸಾವಿರಕ್ಕೂ ಹೆಚ್ಚು ಮಂದಿ ಧಾರಾವಾಹಿ ನಿರ್ಮಾಣದಲ್ಲಿ ತೊಡಗಿದ್ದಾರೆ. ಧಾರಾವಾಹಿ ಚಿತ್ರೀಕರಣದ ದಿನವೊಂದರ ವೆಚ್ಚ ಕನಿಷ್ಟ ೬೦ ಸಾವಿರವೆಂದರೂ ಸುಮಾರು ೩೦ ಲಕ್ಷ ರೂಪಾಯಿ ಹಣ ಪ್ರತಿನಿತ್ಯ ನಿರ್ಮಾಣಕ್ಕೆ ವೆಚ್ಚವಾಗುತ್ತದೆ. ಐದು ಸಾವಿರಕ್ಕೂ ಅಧಿಕ ಕೆಲಸದಲ್ಲಿ ತೊಡಗಿದ್ದಾರೆ'.[೧೫] ೧೯೯೦ರ ನಂತರ ಟಿ.ವಿ. ಧಾರಾವಾಹಿಗಳ ಯುಗ ಆರಂಭವಾದ ಬಳಿಕ ಬೇಡಿಕೆಗೆ ತಕ್ಕಂತೆ ಶೂಟಿಂಗ್ ಮನೆಗಳೂ ತಯಾರಾದವು ಬನಶಂಕರಿ ಮೂರನೇ ಹಂತ, ಉತ್ತರಹಳ್ಳಿ, ಚನ್ನಸಂದ್ರ ಕನಕಾಪುರ ರೋಡ್, ಬನ್ನೇರುಘಟ್ಟ ರೋಡ್, ಮೈಸೂರು ರೋಡನಲ್ಲಿ ಇಂತಹ ಹಲವು ಶೂಟಿಂಗ್ ಮನೆಗಳಿವೆ (ಮಾಹಿತಿ ಸುಧಾ ವಾರಪತ್ರಿಕೆ) ಬೆಂಗಳೂರಿನಲ್ಲಿ ಅತಿ ಹೆಚ್ಚು ಶೂಟಿಂಗ್ ಮನೆಗಳಿರುವುದು ರಾಜೇಶ್ವರಿ ನಗರದಲ್ಲಿ ಹೀಗೆ ಒಂದು ಧಾರಾವಾಹಿ ನಿರ್ಮಾಣ ಮಾಡಬೇಕಾದರೆ ಬೇಕಾಗುವ ಮನೆಗಳಿಗೆ ಇಲ್ಲಿಯ ಮನೆಗಳೂ ಬಾಡಿಗೆಗೆ ಮತ್ತು ಲಿಸ್‌ಗಾಗಿ ಕೊಡಲಾಗುತ್ತದೆ. ಹೀಗೆ ಶೂಟಿಂಗ್ ಮನೆಗಳಲ್ಲಿ ಪುಣ್ಯಕೋಟಿ, ಕಲ್ಯಾಣರೇಖೆ, ಕಾಲಚಕ್ರ, ವಾತ್ಸಲ್ಯ, ಗಾಯಿತ್ರಿ, ಧಾರಾವಾಹಿಗಳನ್ನು ಶೂಟ್ ಮಾಡಲಾಗಿದೆ. ಉಡುಗೊರೆ ಹೌಸನಲ್ಲಿ 'ಪರಮಪದ' ಕುಸುಮಾಂಜಲಿ, ಅಮ್ಮನಿನಗಾಗಿ ಚಕ್ರವಾಕ, ಮಾಂಗಲ್ಯ ಮತ್ತು ರಾಧ ಧಾರಾವಾಹಿಯ ಕೆಲವು ಭಾಗಗಳು ಸಿಲ್ಲಿ ಲಲ್ಲಿ ಮನೆಯಲ್ಲಿ ಚಿತ್ರೀಕರಣವಾಗಿದೆ(ಮಾಹಿತಿ ಸುಧಾ ಪತ್ರಿಕೆ).

ಒಂದು ಧಾರಾವಾಹಿ ತಯಾರಾಗಬೇಕಾದರೆ ಅದಕ್ಕೆ ಬೇಕಾಗುವ ಸ್ಥಳ ಅಷ್ಟೇ ಮುಖ್ಯವಾಗುತ್ತದೆ. ಈ ಧಾರಾವಾಹಿಗಳು, ಧಾರಾವಾಹಿಗಳನ್ನು ನಿರ್ಮಾಣ ಮಾಡಬೇಕಾದಾಗ ಇಂಲಹ ಶೂಟಿಂಗ ಮನೆಗಳನ್ನು ಬಳಸಿಕೊಂಡು ಚಿತ್ರಿತವಾಗುತ್ತವೆ ಎಂಬುದರ ಒಂದು ಸೂಕ್ಷ್ಮ ನೋಟವನ್ನು ಒದಗಿಸುವ ಪ್ರಯತ್ನ ಮಾಡಿದ್ದೇನೆ.

೨.೩.೩. ಧಾರಾವಾಹಿಗಳಲ್ಲಿ ಪುರುಷ ಮಾನದಂಡ(Male Gaze)ದ ಪರಿಕಲ್ಪನೆ

ಇಂದು ಪ್ರಸಾರಗೊಳ್ಳುವ ಬಹುತೇಕ ಧಾರಾವಾಹಿಗಳಲ್ಲಿ ಕಟ್ಟಿಕೊಡಲಾಗುವ ಮಹಿಳಾ ಪಾತ್ರಗಳು ಪುರುಷ ದೃಷ್ಟಿಕೋನದಿಂದಲೇ ನೋಡುವಂತಹವುಗಳಾಗಿವೆ. ಪುರುಷ ಪ್ರಧಾನ ಮಾನದಂಡಗಳನ್ನಿಟ್ಟುಕೊಂಡು ರೂಪಿತವಾಗಿರುವಂತಹವೇ ಆಗಿವೆ. ಹೀಗೆ ಹೇಳಿದಾಗ ಎದುರಾಗುವ ಮುಖ್ಯ ಪ್ರಶ್ನೆ ಈ ಪುರುಷ ಮಾನದಂಡವೆಂದರೇನು? ಪುರುಷ ಮಾನದಂಡ ಅಥವಾ ಪುರುಷ ಪ್ರಧಾನ ಮಾಧ್ಯಮ ಅಥವಾ ಮೇಲ್‌ಗೇಜ್ ಯಾವಾಗ ಅಸ್ತಿತ್ವ ಪಡೆದುಕೊಂಡಿತು? ಈ ಕಲ್ಪನೆಯನ್ನು ಯಾರು ಪ್ರತಿಪಾದಿಸಿದರು? ಸ್ತ್ರೀವಾದಿಗಳು ಈ ಮೇಲ್‌ಗೇಜ್ ಕಲ್ಪನೆಯ ಬಗ್ಗೆ ಯಾವ ದೃಷ್ಟಿಕೋನ ಹೊಂದಿದ್ದಾರೆ. ಎಂಬುದನ್ನು ತಿಳಿಯುವ ಅಗತ್ಯವಿದೆ. ಮೇಲ್‌ಗೇಜ್ ಎನ್ನುವ ಕಲ್ಪನೆಯು ಅಸ್ತಿತ್ವಕ್ಕೆ ಬಂದದ್ದು ೧೯೭೫ರಲ್ಲಿ ಲಾರಾ ಮೈಲ್ವಿ ತನ್ನ 'Visual Pleasure and Narrative Cinema' ಕೃತಿಯಲ್ಲಿ ಮೇಲ್‌ಗೇಜ್ ಕಲ್ಪನೆಯನ್ನು ವಿವರಿಸುತ್ತಾಳೆ. ಅಮೇರಿಕದ ಹಾಲಿವುಡ್ಡನಲ್ಲಿಯ ತಾರೆಗಳನ್ನು ನೋಡುವ ದೃಷ್ಟಿಕೋನ

ಅದು ಪುರುಷನಿಂದಲೇ ನಿರ್ವಚಿಸಲ್ಪಡುವಂತದ್ದಾಗಿದೆ. ಎಂದು ವಿವರಿಸುತ್ತಾಳೆ. ಅವರು ಚಲನಚಿತ್ರಗಳು ಪುರುಷ ಪ್ರಧಾನ ಮಾಧ್ಯಮದ ಸಾಧನಗಳಂತೆ ಎಂದು ವಿವರಿಸುತ್ತಾರೆ. ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು, ಛಾಯಾಗ್ರಾಹಕರು, ಎಲ್ಲರೂ ಅವರೇ ಆಗಿರುವುದರಿಂದ ಹೆಣ್ಣಿನ ಕಲ್ಪನೆಯನ್ನು ಕೇವಲ ದೇಹವಾಗಿ ಈ ಮೇಲ್‌ಗೇಜ್ ಗ್ರಹಿಸುತ್ತದೆ ಎಂದು ವಿವರಿಸುತ್ತಾರೆ. ಜಾನಬರಗರ್ ಎಂಬ ಚಿಂತಕರು ಗೇಜ್ ಕಲ್ಪನೆಯನ್ನು ಕುರಿತು ಹೀಗೆ ವಿವರಿಸುತ್ತಾರೆ. ಪುರುಷ ಸ್ತ್ರೀಯರ ಕಡೆ ನೋಡುತ್ತಾರೆ. ಆದರೆ ಮಹಿಳೆಯರು ತಮ್ಮನ್ನು ತಾವೇ ನೋಡಿಕೊಳ್ಳುತ್ತಾರೆ. ಇದು ಪುರುಷ ಕೇಂದ್ರಿತ ಸಾಮಾಜಿಕ ನೆಲೆಯಲ್ಲಿನ ಮಹಿಳೆಯರ ಮಾನಸಿಕ ಸ್ಥಿತಿಯನ್ನು ತಿಳಿಸುತ್ತದೆ. ಇದೇ ಸ್ತ್ರೀ-ಪುರುಷರ ವೀಕ್ಷಣೆಯಲ್ಲೂ ಭಿನ್ನತೆಯನ್ನು ಉಂಟುಮಾಡುತ್ತದೆ. ಕ್ಯಾಮರಾಗಳಲ್ಲಿ ಸೆರೆಹಿಡಿದು ಬಿಂಬಿಸುವ ಪ್ರತಿ ದೃಶ್ಯ ಕೂಡ ವೀಕ್ಷಕರು ತಮ್ಮ ಕಣ್ಣಿನಿಂದಲೇ ನೋಡುತ್ತಿದ್ದರೂ ಆದರೆ ಅದು ಅವರೇ ಅನುಭವಿಸುತ್ತಿರುವಂತಹ ಭ್ರಮೆಯಲ್ಲಿ ಇಡುತ್ತದೆ. ಹೀಗೆ ದೃಶ್ಯಗಳು ಪುರುಷರನ್ನು ಭ್ರಮೆಯಲ್ಲಿಡುವ ಕಾರಣವಾಗಿವೇ ಸ್ತ್ರೀಯರ ವಿಷಯಗಳೇ ಪುರುಷರ ವಸ್ತುಗಳಾಗುತ್ತವೆ. ಇದರಲ್ಲಿ ಮಹಿಳಾ ವೀಕ್ಷಕರೂ ಕೂಡ ಗಂಡಿನ ಆಸಕ್ತಿಯ ಕೇಂದ್ರವನ್ನೇ ತಮ್ಮ ಭಾವವನ್ನಾಗಿ ಗ್ರಹಿಸಿ ನೋಡುವಂತೆ ಮಾಡುವ ಮೂಲಕ ಸ್ತ್ರೀಯರಲ್ಲಿ ತಟಸ್ಥತೆಯನ್ನು ಉಂಟುಮಾಡಿದೆ'.[೧೪] ಸ್ತ್ರೀಯರನ್ನು ಪುರುಷರ ಗ್ರಹಿಕೆಯಲ್ಲಿಯೇ ಕಟ್ಟಿಕೊಡುವುದನ್ನು ಧಾರಾವಾಹಿಗಳಲ್ಲಿ ಕಾಣುತ್ತೇವೆ. ಚಿ.ಸೌ. ಸಾವಿತ್ರಿಯ ಕಲ್ಪನೆ, ಮಡದಿ(ಏಳೇಳುಜನ್ಮಕೂ) ಸೊಸೆ ತಂದ ಸೌಭಾಗ್ಯ. ಜನನಿ. ಲಕುಮಿ, ಚಿಕ್ಕಮ್ಮ, ಕಲ್ಯಾಣಿ, ಛೋಟಿಬಹು(ಝಿ ಟಿವಿ ಹಿಂದಿ) ಸಂಸಾರ ಲಕ್ಷ್ಮಿ, ಹಮಾರಿ ದೇವರಾನಿ(ಸ್ಟಾರ್‌ಪ್ಲಸ್) ಬೆಹೆನೆ(ಸ್ಟಾರ್‌ಪ್ಲಸ್) ಸೂರ್ಯಕಾಂತಿ, ಸುಕನ್ಯಾ, ರಾಧ, ಹೀಗೆ ಕೌಟುಂಬಿಕ ಪಾತ್ರಗಳಲ್ಲಿ ವೈಭವೀಕರಿಸುವ ಧಾರಾವಾಹಿಗಳಲ್ಲಿ ಸಾಂಪ್ರದಾಯಿಕ ಮಾದರಿಯನ್ನೇ ಬಿಂಬಿಸುವ ಪುರುಷ ಮಾನದಂಡವನ್ನು ಕಾಣಬಹುದು.

ಈ ಧಾರಾವಾಹಿಗಳಲ್ಲಿ ಮಹಿಳೆಯರನ್ನು ಹಿಂದೂ ಸಂಸ್ಕೃತಿಯು ರೂಪಿಸಿದ ಮೌಲ್ಯಗಳನ್ನು ಕಣ್ಣುಮುಚ್ಚಿಕೊಂಡು ಸ್ವೀಕರಿಸುವಂತಹ ಚಿತ್ರಣವನ್ನೇ ನೀಡಲಾಗುತ್ತದೆ. ಈ ಧಾರಾವಾಹಿಯ ಮೂಲಕ ಮತ್ತೆ ಸಮಾಜಕ್ಕೆ (ವೀಕ್ಷಕರಿಗೆ) ಒಪ್ಪಿಸುವ ಕೆಲಸ ನಡೆದಿರುತ್ತದೆ. ಈ ಧಾರಾವಾಹಿಗಳಲ್ಲಿ ಹೆಣ್ಣು ಪ್ರತಿರೋಧವನ್ನು ವ್ಯಕ್ತಪಡಿಸುವ ಉದಾಹರಣೆಗಳು ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತವೆ. ಚಿತ್ರಲೇಖ ಧಾರಾವಾಹಿಯ ತೇಜಸ್ವಿನಿ, ಪುರುಷನ ಅನ್ಯಾಯ(ಅನಿರುದ್ಧ)ವನ್ನು ವಿರೋಧಿಸಿದರೂ ಮತ್ತೆ ಅವಳು ಕುಟುಂಬ (ಅತ್ತೆ, ಮಾವ, ಗಂಡ) ಬಿಟ್ಟು ಹೊರ ಹೋಗುವಂತಿಲ್ಲ. ಕುಟುಂಬದ ಒಳಗೂ, ಹೊರಗೂ ತೇಜಸ್ವಿನಿ ಅನಿರುದ್ದನ ಶೋಷಣೆಗೆ ಒಳಗಾಗಬೇಕಾಗುತ್ತದೆ. ಹೆಣ್ಣಿನ ಅಭಿವೃದ್ಧಿಯನ್ನು ಬಯಸದ ಗಂಡಿನ ಮನಸ್ಥಿತಿಯನ್ನು ಈ ಧಾರಾವಾಹಿಯು ಕಟ್ಟಿಕೊಡುತ್ತದೆ. ಸ್ಥಿರಮಾದರಿಯ ಪಾತ್ರಗಳನ್ನು ಒಡೆದು ಹೊಸ ದಾರಿಯನ್ನು ಕಂಡುಕೊಳ್ಳುವಂತಹ ಧಾರಾವಾಹಿಗಳಲ್ಲಿ ಮನ್ ಕೀ ಆವಾಜ್ ಪ್ರತಿಜ್ಞಾ(ಸ್ಟಾರ್‌ಪ್ಲಸ್)ದ ಪ್ರತಿಜ್ಞಾ, ಮುಕ್ತ ಮುಕ್ತ(ಈಟಿ.ವಿ. ಕನ್ನಡ)ದ ನಿವೇದಿತಾ ಬೆಂಕಿಯಲ್ಲಿ ಅರಳಿದ ಹೂಮಲ್ಲಿಯ

(ಝೀ ಕನ್ನಡ) ಈ ಪಾತ್ರಗಳು ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿದರೂ ಕೂಡ ಕೊನೆಗೆ ಕೌಟುಂಬಿಕ ಪಾತ್ರಗಳೊಂದಿಗೆ ಹೊಂದಾಣಿಕೆಯಾಗಬೇಕಾಗುತ್ತದೆ. ಈ ಹೊಂದಾಣಿಕೆಯನ್ನೇ ಪ್ರಧಾನವಾಗಿರಿಸಿಕೊಂಡು ರೂಪಿತವಾಗುವ ಧಾರಾವಾಹಿಗಳಲ್ಲಿ ಪಿತೃಪ್ರಧಾನ ವ್ಯವಸ್ಥೆಯು ರೂಪಿಸಿರುವ ಮೌಲ್ಯಗಳನ್ನೇ ಇಲ್ಲಿ ತುಂಬಲಾಗುತ್ತದೆ. ಪ್ರತಿರೋಧ ವ್ಯಕ್ತಪಡಿಸುವ ಪಾತ್ರಗಳಿದ್ದರೂ ಅಂತಿಮವಾಗಿ ಅದರ ಹೊಣೆಗಾರಿಕೆಯನ್ನು ಮಹಿಳೆಯೇ ಹೊರಬೇಕಾಗಿರುವುದರಿಂದ ಇಲ್ಲಿ ಮತ್ತೆ ಪಿತೃಪ್ರಧಾನ ವ್ಯವಸ್ಥೆ ನಯವಾಗಿ ಜಾರಿಕೊಳ್ಳುತ್ತದೆ. ಹೀಗೆ ಜನಪ್ರಿಯವಾಗುವ ಧಾರಾವಾಹಿಗಳನ್ನು ವಿನ್ಯಾಸ ಮಾಡುವವರು ಬಹಳ ಚಾಣಾಕ್ಷತನವನ್ನು ಮೆರೆಯುತ್ತಾರೆ. ವೀಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ, ಈ ಧಾರಾವಾಹಿಗಳ ನಿರ್ದೇಶಕರು ಹೊಂದಿರುವ ವಿಚಾರವನ್ನು ಇಲ್ಲಿ ವಿವರಿಸುವುದು.

೨.೩.೪. ಧಾರಾವಾಹಿಗಳು ಮತ್ತು ಕನ್ನಡಕಗಳು

ವರ್ಜಿನಿಯಾ ವುಲ್ಫ ತನ್ನ ಬಹು ಜನಪ್ರಿಯ ಕೃತಿಯಾದ A room of one ownನಲ್ಲಿ ಪುರುಷರು ಹೇಗೆ ಸಾಮಾಜಿಕವಾಗಿ ಮತ್ತು ಮಾನಸಿಕವಾಗಿ ಮಹಿಳೆಯರ ಮೇಲೆ ಅಧಿಪತ್ಯ ಸ್ಥಾಪಿಸಿದ್ದಾರೆಂದು ವಿವರಿಸುತ್ತಾರೆ. ಮುಂದುವರೆದು ಮಹಿಳೆಯರು ಕನ್ನಡಕವಿದ್ದಂತೆ , ಪುರುಷರು ಮಹಿಳೆಯರನ್ನು ಹೇಗೆ ಕಾಣಬೇಕೆಂದು ಬಯಸುತ್ತಾರೋ, ಅದೇ ಪ್ರತಿಬಿಂಬವನ್ನು ಸ್ಥಾಪಿಸಿಕೊಂಡು ಸಮಾಜವನ್ನು ಎತ್ತಿ ನಿಲ್ಲಿಸುತ್ತಾರೆ ಎಂದು ಪ್ರತಿಪಾದಿಸುತ್ತಾಳೆ. ಇಂದು ಪ್ರಸಾರವಾಗುವ ಧಾರಾವಾಹಿಗಳು ಈ ಕನ್ನಡಕವನ್ನು ಧರಿಸಿಯೇ ಹೆಣ್ಣಿನ ಪ್ರತಿನಿಧೀಕರಣವನ್ನು ಮಾಡುತ್ತವೆ. ಬಹುತೇಕ ಧಾರಾವಾಹಿಗಳು ಹೆಣ್ಣನ್ನು ಸಾಮಾಜಿಕವಾಗಿ ಸ್ಥಾಪಿತವಾದ ಸಿದ್ಧ ಮಾದರಿ Soap opera ಗಳಲ್ಲಿಯೇ ಕಟ್ಟಿಕೊಡುತ್ತವೆ.

೨.೪. ಮಾಧ್ಯಮದಲ್ಲಿ ಮಹಿಳಾ ಪ್ರತಿನಿಧೀಕರಣ

ದೂರದರ್ಶನ ಬಹುಜನ ಸಮುದಾಯವನ್ನು ಮುಟ್ಟುವ ಪ್ರಭಾವಿ ಮಾಧ್ಯಮ, ಈ ಮಾಧ್ಯಮಗಳು ಬಹುತೇಕವಾಗಿ ಮಹಿಳೆಯ ಪಾತ್ರವನ್ನು ಮೂರ್ಖಳು, ಅಬಲೆ, ಅಸಹಾಯಕಗಳು, ಅವಲಂಬಿತೆ, ತಿಳುವಳಿಕೆಯಿಲ್ಲದವಳು (ಬುದ್ಧಿ ಮೊಳಕಾಲು ಕೆಳಗೆ), ಗಂಡ ಮತ್ತು ಮಕ್ಕಳು, ಇತರರ ಸೇವೆಯಲ್ಲಿಯೇ ಕಳೆಯುವವಳು, ಆದರ್ಶ ನಾರಿ, ತ್ಯಾಗಮಯಿ, ಈ ಎಲ್ಲಾ ಗುಣಗಳಲ್ಲಿ ಕಟ್ಟಿಕೊಡಲಾಗುತ್ತಿದೆ. ಹೆಣ್ಣಿನ ಅಸ್ತಿತ್ವ ಕುಟುಂಬದೊಂದಿಗೆ ಮಾತ್ರ ನೋಡುವಂತಹ ನಕಾರಾತ್ಮಕ ಧೋರಣೆಯಲ್ಲಿಯೇ ದೂಡಲಾಗುತ್ತಿದೆ. ಹೆಣ್ಣಿನ ಜೀವನ ಬಾಲ್ಯದಿಂದ, ವೃದ್ಧಾಪ್ಯದವರೆಗೂ ಅವಲಂಬನೆಯಲ್ಲಿಯೇ ಕಳೆಯಬೇಕು. ಅದೇ ಅವಳಿಗೆ ಭೂಷಣ ಈ ಪಾತ್ರಗಳಲ್ಲಿ ನಿರ್ವಚನಗೊಂಡರೆ ಮಾತ್ರ ಸ್ವರ್ಗದ ಬಾಗಿಲು ತೆರೆಯುತ್ತದೆ ಎನ್ನುವ ಮನೋಭಾವ ಅಸ್ತಿತ್ವದಲ್ಲಿದೆ. ಇಂತಹದೇ ವಿಷಯಗಳನ್ನು ಕೇಂದ್ರೀಕರಿಸಿ ಈ ಧಾರಾವಾಹಿಗಳು ನಡೆದುಕೊಂಡು ಬರುತ್ತಿವೆ. ಹೆಣ್ಣಿನೆಡೆಗೆ ಇರುವ ನಕಾರಾತ್ಮಕ ಧೋರಣೆಯನ್ನು, ಸಕಾರಾತ್ಮಕವಾಗಿ ಮೂಡಿಸುವ

ಶಕ್ತಿ ಸಮೂಹ ಮಾಧ್ಯಮಗಳಿಗೆ ಇಲ್ಲವೇ? ಹೆಣ್ಣಿನ ಬವಣೆಯನ್ನು ಮನಗಂಡು ಆಕೆಯ ಅಸ್ತಿತ್ವಕ್ಕೆ ತುಡಿಯುವ ಮನಸ್ಸು ಈ ಮಾಧ್ಯಮಗಳದಲ್ಲವೇ? ಈ ಬಗ್ಗೆ ಚರ್ಚಿಸುವ, ಚಿಂತನೆ ನಡೆಸುವ ತುರ್ತು ಇವತ್ತಿನ ಸಂದರ್ಭಗಳಲ್ಲಿದೆ.

ನಮ್ಮಲ್ಲಿ ಹಲವು ರೀತಿಯ ಪತ್ರಿಕೆಗಳಿವೆ. ಜನಪ್ರಿಯ ಪತ್ರಿಕೆಗಳ ಮುಖಪುಟ ವಿನ್ಯಾಸವನ್ನು ನೋಡಿದರೆ ಅಲ್ಲಿ ಹೆಣ್ಣು ಕೇವಲ ಪ್ರದರ್ಶನದ ವಸ್ತು, ಭೋಗವಸ್ತು ಎಂದೇ ಚಿತ್ರಿತವಾಗಿರುವುದೆ ಹೆಚ್ಚು. ಮಾನಸ, ಗೃಹಶೋಭಾ, ಪ್ರಿಯಾಂಕ ಇವುಗಳಲ್ಲಿ ಚಿತ್ರಿತವಾಗುವ ಹೆಣ್ಣಿಗೆ ಆಧುನಿಕ ಉಡುಗೆ ತೊಡುಗೆ, ಮೇಕಪ್, ಕೇಶವಿನ್ಯಾಸ, ಪಾದರಕ್ಷೆ ಎಲ್ಲವನ್ನು ಒಪ್ಪ ಓರಣವಾಗಿ ಸಿದ್ಧಪಡಿಸಿ, ಆದಷ್ಟು ಉಬ್ಬು ತಗ್ಗುಗಳನ್ನು ಪ್ರದರ್ಶಿಸುವ ಚಿತ್ರಗಳನ್ನು ತೆಗೆದು ಮುಖಪುಟಗಳಿಗೆ ಕಾಯ್ದಿರಿಸುತ್ತಾರೆ. ಇಂತಹ ಚಿತ್ರ ನೋಡಿದ ಸಾಮಾನ್ಯನ ಮನಸ್ಸಿನಲ್ಲಿ ಕಾಮದಿಂದ ನೋಡುವ ದೃಷ್ಟಿಕೋನ ಬೆಳೆಯುತ್ತದೆ, ಹೆಣ್ಣೆಂದರೆ ಕೇವಲ ಭೋಗದ ವಸ್ತು ಗಂಡಿಗೆ ಬೇಕೆಂದಾಗ ಅವನನ್ನು ಸಂತುಷ್ಟಗೊಳಿಸುವವಳು ಎಂಬಂತಹ ಸಂದೇಶ ಇವುಗಳ ಮೂಲಕ ರವಾನೆ ಯಾಗುತ್ತದೆ. ಇಂತಹ ಮಾಧ್ಯಮಗಳು ಸಮಾಜದ ಒಳಿತಿಗೆ ಹೇಗೆ ಪೂರಕವಾಗಬಹುದು ಎನ್ನುವ ಪ್ರಶ್ನೆ ಕಾಡುತ್ತದೆ. ಇನ್ನೂ ಒಳಗಿರುವ ಪುಟಗಳನ್ನು ನೋಡಿದರೆ ಅಲ್ಲಿಯು ಕೂಡಾ ಹಾಡು, ಹಸೆ, ರಂಗೋಲಿ, ಅಡುಗೆ, ಕಸೂತಿ, ಹೂ ಜೋಡಣೆ, ಮನೆಯ ಅಲಂಕಾರ, ಗಂಡನೊಂದಿಗೆ ಹೇಗೆ ವರ್ತಿಸಬೇಕು, ಅವನನ್ನು ಹೇಗೆ ನೋಡಿಕೊಳ್ಳಬೇಕು. ಮಕ್ಕಳ ಲಾಲನೆ ಪಾಲನೆ ಹೇಗೆ, ಅವಕ್ಕೆ ಯಾವ ಸಮಯದಲ್ಲಿ ಏನು ಮಾಡಿಕೊಡಬೇಕು. ಏನು ಮಾಡಬೇಕು, ಏನು ಮಾಡಬಾರದು, ಅಡುಗೆ ಮಾಡುವುದು ಹೇಗೆ? ಬಗೆ ಬಗೆಯಾದ ರುಚಿ ರುಚಿಯಾದ ಖಾದ್ಯಗಳನ್ನು ತಯಾರಿಸಿ ಮನೆಯವರನ್ನು ಹೇಗೆ ಸಂತೋಷಪಡಿಸಬೇಕು? ಎಲ್ಲವನ್ನು ಮಾಡಿ ಮುಖದ ಮೇಲೆ ಬಲವಂತದ ನಗು ತಂದುಗೊಂಡು ಸಂತೋಷ ಪಡಿಸುವುದು. ಯಾವ ಬಗೆಯ ವಸ್ತ್ರಗಳಲ್ಲಿ ತಾನು ಆಕರ್ಷಕವಾಗಿ ಕಾಣುತ್ತಾಳೆ. ಹೇಗೆ ಶೃಂಗರಿಸಿಕೊಳ್ಳಬೇಕು. ಹೇಗೆ ಮೇಕಪ್ ಮಾಡಿಕೊಳ್ಳಬೇಕು. ತನ್ನ ತ್ವಚೆಯನ್ನು ಆಯಾ ಋತುಮಾನಕ್ಕೆ ತಕ್ಕಂತೆ ಶುಭ್ರವಾಗಿ, ಹೊಳೆಯುವಂತೆ ಹೇಗೆ ನೋಡಿಕೊಳ್ಳಬೇಕು, ಕಾಪಾಡಿಕೊಳ್ಳುವುದು ಹೇಗೆ? ವಯಸ್ಸಾಗಿದ್ದರೆ ಅದನ್ನು ಹೇಗೆ ಮರೆ ಮಾಚಬೇಕು, ಸೊಂಟದ, ಎದೆಯ ಅಳತೆಯು ಮಿತಿಮೀರಿ ಬೆಳೆದರೆ, ಆಗಿರುವ ಕೊಬ್ಬನ್ನು ಕರಗಿಸಿಕೊಂಡು ಆಕರ್ಷಕವಾದ ಮೈಕಟ್ಟನ್ನು ಹೇಗೆ ಹೊಂದಬೇಕು. ಹೀಗೆ ಮತ್ತೆ ಮತ್ತೆ ಅವಳು ತನ್ನ ಸ್ತ್ರೀಯಾಗುವಿಕೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುವ ಮೂಲಕ ಆಕೆಯನ್ನು ಮತ್ತೇ ಪ್ರದರ್ಶನದ ಗೊಂಬೆಯಾಗಿ ಮತ್ತು ಭೋಗದ ವಸ್ತುವಾಗಿ ನಿರ್ವಚಿಸುವ ಕಾಳಜಿಗಳು ಇಲ್ಲಿ ಎದ್ದು ಕಾಣುತ್ತವೆ. ಇವುಗಳ ಮುಖಾಂತರ ಮಹಿಳೆಯರು ಇದಷ್ಟಕ್ಕೆ ಮಾತ್ರ ಸೀಮಿತ ಎಂದು ಅಪ್ರತ್ಯಕ್ಷವಾದ ಹೇಳಿಕೆಗಳು ಕೊಡುತ್ತಿರುತ್ತವೆ. ಹೀಗೆ ನಿರ್ವಚನಗೊಳ್ಳುವ ಮಹಿಳೆಯ ಹಿಂದೆ ಅಡಗಿರುವ ರಾಜಕಾರಣ ಯಾವುದು ಎಂದು ಕೆದಕುತ್ತಾ ಹೋದರೆ ಅಲ್ಲಿ ಮುಖ್ಯವಾಗಿ ಎರಡು ವಿಷಯಗಳು ತನ್ನ ಇರುವಿಕೆಯನ್ನು ಸೂಚಿಸುತ್ತವೆ.

೧. ಪುರುಷ ಪ್ರಧಾನ ಮಾಧ್ಯಮ.

೨. ಬಂಡವಾಳಶಾಹಿ ವ್ಯವಸ್ಥೆ ಇವೆರಡು ಕಾಣದ ಕೈಗಳಾಗಿ ಕಾರ್ಯನಿರ್ವಹಿಸುತ್ತವೆ.

ಪ್ಲೇಬಾಯ್ ಅಂತಹ ಪತ್ರಿಕೆಯ ಮುಖಪುಟ ಮತ್ತು ಒಳಪುಟಗಳನ್ನು ನೋಡಿದರೆ, ಹೆಣ್ಣಿನ ಅಸ್ತಿತ್ವ ಎಷ್ಟರಮಟ್ಟಿಗೆ ಅಧೋಗತಿಗೆ ಇಳಿದಿದೆ ಮತ್ತು ಇಳಿಯುತ್ತಿದೆ ಎಂಬ ಅಂಶ ತಿಳಿದುಬರುತ್ತದೆ. ಪುರುಷರೇ ಓದುವ ಇಂತಹ ಪುಸ್ತಕಗಳಲ್ಲಿ ಹೆಣ್ಣಿನ ದೇಹದ ಉಬ್ಬು ತಗ್ಗುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ. ವಿಧ ವಿಧವಾದ ಭಂಗಿಗಳಲ್ಲಿ ನಿಂತು ತೆಗೆದಂತಹ ಚಿತ್ರಗಳು ನೋಡಿದರೆ ಹೆಣ್ಣಿನ ದೇಹವನ್ನು ಎಷ್ಟರಮಟ್ಟಿಗೆ ವ್ಯಾಪಾರೀಕರಣಗೊಳಿಸಲಾಗುತ್ತಿದೆ ಎಂದು ತಿಳಿಯಬಹುದಾಗಿದೆ. ಅದೇ ರೀತಿಯಾಗಿ ಎಫ್.ಟಿವಿಯಂತಹ ವಾಹಿನಿಯನ್ನು ಗಮನಿಸಿದರೆ ಅಲ್ಲಿ ಹೆಣ್ಣಿನ ದೇಹವೇ ಮೂಲ ಬಂಡವಾಳವಾಗಿದೆ. ಆ ದೇಹದಿಂದಲೇ ಕೋಟಿ ಕೋಟಿ ಹಣವನ್ನೆ ಪಡೆಯಲಾಗುತ್ತದೆ. ಹೆಣ್ಣನ್ನು ಕೇವಲ ದೇಹ ಕೇಂದ್ರಿತವಾಗಿ ನೋಡುವ ಪುರುಷ ಪ್ರಧಾನ ಮಾಧ್ಯಮದಲ್ಲಿ ಲಿಂಗ ಸಮಾನತೆ, ತಾರತಮ್ಯ ಎಂಬ ಪದಗಳ ಅರ್ಥ ಗೊತ್ತಿರಲಿಕ್ಕಿಲ್ಲ. ಈ ವ್ಯವಸ್ಥೆಗೆ ಕೈಜೋಡಿಸುವಲ್ಲಿ ದೂರದರ್ಶನವು ಕೂಡಾ ಹಿಂದೆ ಬಿದ್ದಿಲ್ಲ.

ದೂರದರ್ಶನದ ತೆರೆಯ ಮೇಲೆ ಮಹಿಳೆಯರ ಭಾಗವಹಿಸುವಿಕೆ ಪುರುಷರಿಗಿಂತ ಅಧಿಕ ಸಂಖ್ಯೆಯಲ್ಲಿರುವುದು ಗಮನಿಸಬೇಕಾದ ವಿಷಯ. ನಿರೂಪಣೆ, ವಾರ್ತೆಗಳ ಓದುವಿಕೆ, ಜಾಹಿರಾತು, ಧಾರವಾಹಿ, ಅಲಂಕಾರ, ಹಾಡು, ಕುಣಿತ ಹೀಗೆ ಎಲ್ಲ ರೀತಿಯ ಕಾರ್ಯಕ್ರಮಗಳಲ್ಲಿ ಮಹಿಳೆಯನ್ನು ಕಾಣುತ್ತೇವೆ. ಆದರೆ ತೆರೆಯ ಮರೆಯ ತಂತ್ರಜ್ಞಾನ ರಂಗದಲ್ಲಿ ಮಹಿಳೆಯ ಭಾಗವಹಿಸುವಿಕೆ ತೀರ ಕಡಿಮೆ ಅಥವಾ ಇಲ್ಲವೇ ಇಲ್ಲ ಎಂದರೂ ತಪ್ಪಾಗಲಾರದು'.[೧೭]

ಮಹಿಳೆಯರಿಗಾಗಿಯೇ ಬರುತ್ತಿದೆ ಈ ಧಾರಾವಾಹಿ ಪ್ರಪಂಚ ಹೆಣ್ಣಿನ ಮನದಾಳವನ್ನು ಯಶಸ್ವಿಯಾಗಿ ಪ್ರತಿಬಿಂಬಿಸುತ್ತಿದೆ ಈ ಧಾರಾವಾಹಿ ಎಂದು ಹೇಳುವ ಮಹಿಳೆಯ ದುಃಖಕ್ಕೆ ಬಂಡವಾಳವನ್ನು ಲೇಪಿಸಿ, ಹಿಂಪಡೆವ ದೂರದೃಷ್ಟಿಯಲ್ಲಿ ಧಾರಾವಾಹಿಗಳನ್ನು ನಿರ್ಮಿಸಿ, ಸಾಕಷ್ಟು ಹಣವನ್ನು ಪಡೆಯುವ ಉದ್ದೇಶ. ತಾಯಿ, ಹೆಂಡತಿ, ಮಗಳು ಎಂಬ ಪಾತ್ರಗಳನ್ನೆ ವೈಭವೀಕರಿಸಿ ಹೇಳುವ ಧಾರಾವಾಹಿಗಳಿಗೇನು ಕೊರತೆಯಿಲ್ಲ. ಹೆಣ್ಣಿನ ನೋವು, ದುಃಖ, ಕಷ್ಟಗಳನ್ನು ಬಂಡವಾಳ ಮಾಡಿಕೊಂಡು ಹೆಣ್ಣು ಎಂದರೆ ಗೋಳಿನ ಕಥೆ ಎನ್ನುವ ಮಟ್ಟಕ್ಕೆ ತಂದು ನಿಲ್ಲಿಸಿ ಮತ್ತದೇ ಬಾವಿಯೊಳಗಿನ ಕಪ್ಪೆಯಂತೆ ಚಿತ್ರಿಸುತ್ತಾರೆ. ಈ ಭರಾಟೆಯಲ್ಲಿ ಎಷ್ಟು ಸಾಧನೆ ಮಾಡಿದ ಕಷ್ಟಪಟ್ಟು ಮೇಲೆ ಬಂದಂತಹ ಹೆಣ್ಣು ಮಕ್ಕಳು ನಿರಾಕರಣೆಗೆ ಒಳಗಾಗುತ್ತಾರೆ.

ಹೀಗೆ ಆಯ್ಕೆ ಮತ್ತು ನಿರಾಕರಣೆಯ ವ್ಯವಸ್ಥೆಯೊಳಗೆ ಹೆಣ್ಣಿನ ಅಸ್ತಿತ್ವ ಹುಟ್ಟಿಕೊಳ್ಳುವುದರಿಂದ, ಹೆಣ್ಣು ಎಂದರೆ ಭೋಗಕ್ಕೆ ಮಾತ್ರ ಎನ್ನುವ 'ಸೆಕ್ಸಿಸ್ಟ್' ಆದ ದೃಷ್ಟಿಕೋನವನ್ನು ಸ್ಥಾಪಿಸಿ,

ವ್ಯವಸ್ಥಿತವಾಗಿ ರೂಪು ಕೊಡುವುದನ್ನು ಧಾರಾವಾಹಿಗಳಲ್ಲಿ ಕಾಣಬಹುದಾಗಿದೆ. ಈ ಧಾರಾವಾಹಿಗಳು ಹೆಣ್ಣಿನ ಪ್ರತಿನಿಧೀಕರಣವನ್ನು ಯಾವ ನೆಲೆಯಲ್ಲಿ ಮಾಡುತ್ತಿವೆ? ಯಾಕೆ ಮಾಡುತ್ತಿವೆ? ಎನ್ನುವ ವಿವರಣೆಗಾಗಿ ಆಯ್ದುಕೊಂಡ ಕನ್ನಡ ಮತ್ತು ಹಿಂದಿ ಧಾರಾವಾಹಿಗಳು ಹೊತ್ತು ತರುವ ಸಂದೇಶಗಳನ್ನು ಬಿಡಿಸಿಕೊಳ್ಳುವ ಪ್ರಯತ್ನವನ್ನು ಅಧ್ಯಾಯ ಮೂರರಲ್ಲಿ ಮಾಡಲಾಗಿದೆ.

ಟಿಪ್ಪಣಿಗಳು

೧. ಡಾ. ಪ್ರೇಮಾ ಸಿರ್ಸೆ, ೨೦೦೬, **ಮಹಿಳೆ ಸಮಾಜ ಮತ್ತು ಸವಾಲುಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. ೫೩.

೨. ಸುಮಿತ್ರಾಬಾಯಿ ಬಿ.ಎನ್, ೧೯೯೫, **ಸ್ತ್ರೀವಾದಿ ಪ್ರವೇಶಿಕೆ,** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ಪು.ಸಂ. ೨೭.

೩. ಸುಮಿತ್ರಾಬಾಯಿ ಬಿ.ಎನ್, ೧೯೯೫, **ಸ್ತ್ರೀವಾದಿ ಪ್ರವೇಶಿಕೆ,** ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ಪು.ಸಂ. ೨೯.

೪. ಕಲಾವತಿ ಬಿ.ಜಿ., ಸಂಶೋಧಕರು, ೨೦೦೭, **ಜಾಹೀರಾತುಗಳಲ್ಲಿ ಮಹಿಳಾ ಪ್ರತಿನಿಧೀಕರಣ,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೨೨.

೫. ಡಾ. ಅಶ್ವಿನಿ ದೊಂಗಡೆ (ಮೂಲ)(ಅನು) ಡಾ. ವಿಠಲರಾವ್ ಗಾಯಕವಾಡ, ೨೦೦೧, **ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.ಸಂ. ೩೬.

೬. ಡಾ. ಟಿ.ಸಿ. ಪೂರ್ಣಿಮಾ, ೨೦೦೨-೦೩, **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ,** ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.ಸಂ. ೬೮, ೬೯.

೭. ಬಸವರಾಜ ಸಬರದ(ಸಂ) (ಲೇಖನ)ಕರೀಗೌಡ ಬೀಚನಹಳ್ಳಿ, ೨೦೦೮, **ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು,** ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪು.ಸಂ. ೭.

೮. ಅದೇ.,

೯. **ಪ್ರಚಲಿತ ವಿದ್ಯಮಾನಗಳು,** ೨೦೦೨, ನವಕರ್ನಾಟಕ ಪ್ರಕಾಶನ, ಪು.ಸಂ. ೫೧, ೫೨.

೧೦. ಡಾ. ನಿರಂಜನ ವಾನಳ್ಳಿ, **ಪರಿಣಾಮಕಾರಿ ಸಂವಹನ ಕಲೆ,** ಪು.ಸಂ. ೯.

೧೧. ಡಾ. ಡಿ.ಬಿ.ನಾಯಕ, ೧೯೯೦, **ಸಮೂಹ ಮಾಧ್ಯಮಗಳು,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪು.ಸಂ. ೪.

೧೨. ಕೆ.ವಿ. ನಾಗರಾಜ, ೧೯೯೭, **ಸಮೂಹ ಮಾಧ್ಯಮಗಳು ಮತ್ತು ಸಮಾಜ,** ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಪು.ಸಂ. ೧೨.

೧೩. ಡಾ. ಟಿ.ಸಿ. ಪೂರ್ಣಿಮಾ, ೨೦೦೨-೦೩, **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.ಸಂ. ೧೩೩.

೧೪. ಡಾ. ಆರ್. ಸುನಂದಮ್ಮ, **ಮಹಿಳಾ ಅಧ್ಯಯನ ವಲಯದ ಪ್ರಮುಖ ಪರಿಕಲ್ಪನೆಗಳು,** ಮಹಿಳಾ ಅಧ್ಯಯನ ಪತ್ರಿಕೆ, ಸಂಪುಟ-೧೧, ಸಂಚಿಕೆ-೧-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. **ಸುಧಾ ಪತ್ರಿಕೆ ೧೪-೪-೧೧,** ಪು.ಸಂ. ೨೧.

೧೬. **ತುಳುವ ತ್ರೈಮಾಸಿಕ ಸಂಪುಟ-೫ ಸಂಚಿಕೆ-೧,** ೨೦೦೯, ಪು.ಸಂ. ೪೮.

೧೭. ಡಾ. ಆರ್. ಸುನಂದಮ್ಮ, **ಮಹಿಳಾ ಸಂಸ್ಕೃತಿ,** ಸಮತಾ ಅಧ್ಯಯನ ಕೇಂದ್ರ, ಮೈಸೂರು, ಪು.ಸಂ. ೨೧.

□□□

ಅಧ್ಯಾಯ : ಮೂರು

ಧಾರಾವಾಹಿಗಳಲ್ಲಿ ಪ್ರತಿನಿಧಿತವಾದ ಮಹಿಳಾ ಪ್ರತಿನಿಧೀಕರಣದ ಸ್ವರೂಪ ವಿಶ್ಲೇಷಣೆ

(ಸಂಗ್ರಹಿತ ಮಾಹಿತಿಯನ್ನು ಆಧರಿಸಿ)

ಅಧ್ಯಾಯ : ಮೂರು

ಧಾರಾವಾಹಿಗಳಲ್ಲಿ ಪ್ರತಿನಿಧಿತವಾದ ಮಹಿಳಾ ಪ್ರತಿನಿಧೀಕರಣದ ಸ್ವರೂಪ ವಿಶ್ಲೇಷಣೆ

(ಸಂಗ್ರಹಿತ ಮಾಹಿತಿಯನ್ನು ಆಧರಿಸಿ)

ಪೀಠಿಕೆ

ಪ್ರಸಾರವಾಗುವ ಧಾರಾವಾಹಿಗಳಲ್ಲಿ ಪ್ರತಿನಿಧಿತವಾಗುವ ಮಹಿಳಾ ಪ್ರತಿನಿಧೀಕರಣದ ಒಟ್ಟಾರೆಯಾದ ಸ್ವರೂಪವನ್ನು ಅರ್ಥೈಸಿಕೊಂಡು ವಿಶ್ಲೇಷಣೆ ಮಾಡುವ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ. ಧಾರಾವಾಹಿಗಳು ಕಟ್ಟಿಕೊಡುವ ಗೃಹಿಣಿ ಪಾತ್ರವನ್ನು ಹೇಗೆ ವ್ಯವಸ್ಥಿತವಾಗಿ ಸಾಮಾಜಿಕ ನೆಲೆಗಳಿಂದ ಒಪ್ಪಿತವಾಗಿರುವ ಮಾದರಿಗಳಲ್ಲಿಯೇ ಚಿತ್ರಿಸುವುದನ್ನು ವಿಶ್ಲೇಷಿಸಲಾಗಿದೆ. ಈ ಧಾರಾವಾಹಿಗಳಲ್ಲಿ ಗೃಹಿಣಿ ಪಾತ್ರದೊಂದಿಗೆ ವಿವಾಹ ವ್ಯವಸ್ಥೆ, ಕುಟುಂಬ, ಕೌಟುಂಬಿಕ ಪಾತ್ರದಲ್ಲಿ ಮಹಿಳಾ ನಿರ್ವಚನ, ಕೌಟುಂಬಿಕೇತರ ಮಾದರಿಯಲ್ಲಿ ಮಹಿಳೆಯ ನಿರ್ವಚನವನ್ನು ಕೈಗೊಳ್ಳುವ ಈ ಧಾರಾವಾಹಿಗಳ ಮೂಲ ಉದ್ದೇಶಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆಯುನ್ನು ಕೈಗೊಳ್ಳಲಾಗಿದೆ.

೩.೧. ಆಯ್ದ ಕನ್ನಡ ಧಾರಾವಾಹಿಗಳ ವಿಶ್ಲೇಷಣೆ

ಅಧ್ಯಯನದ ಮುಖ್ಯ ಆಕರಗಳಾದ ಕನ್ನಡ ಮತ್ತು ಹಿಂದಿ ಧಾರಾವಾಹಿಗಳನ್ನು ಆಯ್ದುಕೊಳ್ಳಲಾಗಿದೆ. ಈ ಧಾರಾವಾಹಿಗಳಲ್ಲಿ ಕನ್ನಡ ಧಾರಾವಾಹಿಗಳು ಕಟ್ಟಿಕೊಡುವ ಕುಟುಂಬ, ವಿವಾಹ ಮತ್ತು ಮಹಿಳೆಯ ಪಾತ್ರದ ನಿರ್ವಚನವನ್ನು ಅರ್ಥೈಸಿಕೊಳ್ಳುವ ಉದ್ದೇಶದಿಂದ ಆಯ್ದುಕೊಂಡ ಕನ್ನಡ ಧಾರಾವಾಹಿಗಳಲ್ಲಿ ಕೌಟುಂಬಿಕ ಮಾದರಿಯ ಪಾತ್ರಗಳ ವಿಶ್ಲೇಷಣೆಯನ್ನು ಮೊದಲನೆಯದಾಗಿ ನೋಡಬಹುದಾಗಿದೆ.

೩.೧.೧. ಕಲ್ಯಾಣಿ

ಕಥೆಯ ಸಾರಾಂಶ:

ಕಲ್ಯಾಣಿ ಧಾರಾವಾಹಿ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ ೭ ಘಂಟೆಗೆ (ಈಗ ಬದಲಾದ ಸಮಯದಲ್ಲಿ) ಪ್ರಸಾರವಾಗುತ್ತಿದೆ. ಈ ಕಥೆಯು ಗ್ರಾಮೀಣ ಭಾಗದ ಜನರ ಮತ್ತು ನಗರದಲ್ಲಿ ವಾಸಿಸುವ ಜನರ ಜೀವನದ ಮಧ್ಯೆ ನಡೆಯುವ ಮಾನಸಿಕ

ಸಂಘರ್ಷಗಳ ಕಥೆಯಾಗಿದೆ. ಕಥಾನಾಯಕಿ ಗ್ರಾಮೀಣ ಪ್ರದೇಶದ ಮುಗ್ಧ ಹುಡುಗಿ ಮದುವೆಯ ಕನಸನ್ನು ಕಾಣುತ್ತಾ ಇರುವಾಕೆ, ನಗರ ಬದುಕಿನ ಗಂಧ ಗಾಳಿಯೂ ಗೊತ್ತಿರದ ಇವಳಿಗೆ ತಂದೆ ಗೊತ್ತುಮಾಡಿದ ಗಂಡಿನೊಡನೆ ಮದುವೆಯಾಗಬೇಕಾಗುತ್ತದೆ. ಮದುವೆಯಾಗಿ ಅತ್ತೆಯ ಮನೆಗೆ ಕಾಲಿಟ್ಟ ಹೊಸತರಲ್ಲಿಯೇ ಗಂಡನ ಅನಾದರಕ್ಕೆ ಒಳಗಾಗುತ್ತಾಳೆ, ತನ್ನ ಬಾಳ ಸಂಗಾತಿಯಾಗಿ ಕಲ್ಪಿಸಿಕೊಳ್ಳಲು ಆಗದಂತಹ ಹೆಣ್ಣನ್ನು ತಂದು ತನ್ನ ಬದುಕಿಗೆ ಗಂಟು ಹಾಕಿದ್ದಾರೆಂದು ಕಲ್ಯಾಣಿಯ ಮೇಲೆ ಸಮಯ ಸಿಕ್ಕಾಗಲೆಲ್ಲಾ ರೇಗಾಡುತ್ತಿರುತ್ತಾನೆ. ತನ್ನ ಪತಿಯ ವರ್ತನೆಯನ್ನು ಖಂಡಿಸಲು ಆಗದ ಅನುಭವಿಸಲು ಆಗದ ಪರಿಸ್ಥಿತಿ ಆದರೆ ತನ್ನ ಗಂಡ ಒಂದಲ್ಲಾ ಒಂದು ದಿನ ತನ್ನ ಬಳಿ ಬಂದೇ ಬರುತ್ತಾರೆ. ತಾನು ನಂಬಿದ ದೇವರು ತನ್ನ ಕೈಬೀಡುವುದಿಲ್ಲ ಎಂಬ ದೃಢವಿಶ್ವಾಸ ಕಾಯುತ್ತಿರುತ್ತಾಳೆ. ಮುಂದೆ ಕಥೆಯು ಒಂದು ಹೊಸ ತಿರುವು ಪಡೆದುಕೊಳ್ಳುತ್ತದೆ.

ಇಲ್ಲಿ ಕಲ್ಯಾಣಿಯ ಗಂಡ ರಾಮ ಇನ್ನೊಂದು ಮದುವೆಯಾಗುತ್ತಾನೆ. ಜನಪ್ರಿಯ ಉದ್ಯಮಿ ರಾಜಾರಾಮರ ಏಕೈಕ ಪುತ್ರಿಯೊಂದಿಗೆ ರಾಮ ಮದುವೆಯಾಗುತ್ತಾನೆ. ಇಲ್ಲಿ ರಾಮ ತನಗೆ ಈಗಾಗಲೇ ಮದುವೆಯಾಗಿದ್ದು, ತನ್ನ ಹೆಂಡತಿ ಬದುಕಿರುವ ವಿಷಯವನ್ನು ಎಲ್ಲರಿಂದಲೂ ಮುಚ್ಚಿಡುತ್ತಾನೆ. ರಾಮನ ಗೆಳೆಯ ಗಣೇಶ (ಬಾಲರಾಜ್) ಮೊದಲ ಮದುವೆಯ ಆಗಿದ್ದರ ಬಗ್ಗೆ ಗೊತ್ತಿದ್ದರೂ, ರಾಮನ ಎದುರು ಅಸಾಯಕನಾಗಿ ನಿಲ್ಲುತ್ತಾನೆ. ಜೊತೆಗೆ ಇನ್ನೊಂದು ಮದುವೆ ಮಾಡಿಕೊಳ್ಳುತ್ತಿರುವ ರಾಮನ ಮೋಸದಾಟದಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಭಾಗಿಯಾಗುತ್ತಾನೆ.

ಕಥೆಯಲ್ಲಿ ಮದುವೆಯಾಗುವುದರ ಮೂಲಕ ಎರಡನೆಯ ನಾಯಕಿ ರೇಖಾಳ ಪ್ರವೇಶವಾಗುತ್ತದೆ. ರೇಖಾ ರಾಮನ ಎರಡನೇ ಹೆಂಡತಿ. ಜನಪ್ರಿಯ ಉದ್ಯಮಿಯಾದ ರಾಜಾರಾಮ್ ಅವರ ಏಕೈಕ ಪುತ್ರಿ, ಸಮಸ್ತ ಆಸ್ತಿಗೂ, ತಂದೆ-ತಾಯಿಯ ಪ್ರೀತಿಗೂ ಏಕೈಕ ವಾರಸುದಾರಳು. ರೇಖಾ ನೋಡಲು ಸುಂದರಿಯಾದ, ಶಿಕ್ಷಿತಳಾದ, ಹಸನ್ಮುಖಿ ಹುಡುಗಿಯಾಗಿದ್ದು, ತಂದೆಯ ಉದ್ಯಮದಲ್ಲಿ ಕೈ ಜೋಡಿಸಿರುತ್ತಾಳೆ. ರೇಖಾ ಮತ್ತು ರಾಮ ಇಬ್ಬರ ಮದುವೆಯ ಪ್ರಸಂಗವು ಬಹಳ ಕುತೂಹಲಕರವಾದ ರೀತಿಯಲ್ಲಿ ನಡೆಯುತ್ತದೆ. ರೇಖಾಳನ್ನು ಮದುವೆಯಾಗ ಬೇಕಾದ ಗಂಡು ಮದುವೆ ಮಂಟಪಕ್ಕೆ ಬರದೇ ಕೈಕೊಟ್ಟು ಹೋಗುತ್ತಾನೆ. ಇದರಿಂದ ರೇಖಾ ಮತ್ತು ಅವಳ ತಂದೆ-ತಾಯಿಗಳಿಗೆ ತೀವ್ರವಾದ ನಿರಾಸೆಯಾಗುತ್ತದೆ. ಇಂತಹ ಸಂದರ್ಭದ ಸದುಪಯೋಗ ಮಾಡಿಕೊಂಡ ರಾಮ್ ಎಲ್ಲರೂ ಒಪ್ಪಿದರೆ ರೇಖಾಳನ್ನು ತಾನೇ ಮದುವೆಯಾಗುತ್ತೇನೆಂದು ಮುಂದೆ ಬರುತ್ತಾನೆ. ಇಂತಹ ಕಷ್ಟದ ಸಂದರ್ಭದಲ್ಲಿ, ತಮ್ಮ ಮಗಳ ಬಾಳು ಹಾಳಾಗದೇ, ಇದ್ದರೆ ಸಾಕು ಎಂದು ರಾಜಾರಾಮ್ ಅವರು ರಾಮನ ಪೂರ್ವಾಪರ ತಿಳಿದುಕೊಳ್ಳದೇನೆ, ಮಗಳೊಂದಿಗೆ ಮದುವೆಯಾಗಲು ಒಪ್ಪಿಗೆ ಸೂಚಿಸಿ ಮದುವೆ ಮಾಡುತ್ತಾರೆ.

ಮದುವೆಯಾದ ಬಳಿಕ ರಾಮ ಮತ್ತು ರೇಖಾ ದಂಪತಿಗಳು ರಾಜಾರಾಮ್‌ರವರ, ಉದ್ಯಮವನ್ನು ನೋಡಿಕೊಂಡು ಅವರ ಮನೆಯಲ್ಲಿಯೇ ವಾಸವಿರುತ್ತಾರೆ. ರಾಮ ಹಳ್ಳಿ ಕಡೆಗೆ ಆಗಾಗ ಹೋಗಿ ಬಂದು ಮಾಡುತ್ತಿರುತ್ತಾನೆ. ಕೆಲವು ದಿನ ಹೀಗೆ ಮುಂದುವರಿಸಿಕೊಂಡು ಹೋಗುತ್ತಾನೆ. ಆದರೆ ಕೆಲದಿನಗಳ ನಂತರ ಹಳ್ಳಿ ಕಡೆಗೆ ಹೋಗುವುದನ್ನೇ ನಿಲ್ಲಿಸಿ ಬಿಡುತ್ತಾನೆ. ಇದರಿಂದ ಆತಂಕಗೊಳ್ಳುವ ರಾಮನ ತಂದೆ ತಾಯಿ ಮತ್ತು ಹೆಂಡತಿ, ತಮಗೆ ಗೊತ್ತಿರುವ ಕಡೆಗಳಲ್ಲೆಲ್ಲಾ ವಿಚಾರಣೆ ನಡೆಸುತ್ತಾರೆ. ತನ್ನ ತಂದೆ ತಾಯಿಯರು ತನ್ನ ವಿಳಾಸದ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ ಎಂದು ತಿಳಿದ ಮೇಲೆ ರಾಮ ಒಂದು ದಿನ ಹಳ್ಳಿಯ ಮನಗೆ ಹೋಗುತ್ತಾನೆ. ಪ್ರತಿ ಬಾರಿ ಹಳ್ಳಿಯಿಂದ ಪಟ್ಟಣಕ್ಕೆ ಹೋಗುವಾಗ ಯಾವುದಾದರೊಂದು ಉಪಾಯ ಮಾಡುತ್ತಿದ್ದ. ಆದರೆ ಈ ಬಾರಿ ಮಾತ್ರ ರಾಮನ ತಂದೆ-ತಾಯಿಯರು ಕಲ್ಯಾಣಿಯನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗಬೇಕೆಂದು ಹಠ ಹಿಡಿಯುತ್ತಾರೆ. ಇಂತಹ ಸಂದರ್ಭದಲ್ಲೂ ತಾನು ಇನ್ನೊಂದು ಮದುವೆಯಾಗಿರುವುದಾಗಿ ತಿಳಿಸುವುದಿಲ್ಲ. ಇತ್ತ ತಂದೆ ತಾಯಿಯ ಮಾತು ಮೀರುವಂತಿಲ್ಲಾ. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ರಾಮ ಮರು ಮಾತನಾಡದೆ ಕಲ್ಯಾಣಿಯನ್ನು ತನ್ನೊಂದಿಗೆ ಕರೆದೊಯ್ಯುವುದಾಗಿ ಹೇಳುತ್ತಾನೆ. ಅದರಂತೆ ಅವಳನ್ನು ಕರೆದುಕೊಂಡು ಬೆಂಗಳೂರಿಗೆ ಹೋಗುತ್ತಾನೆ. ಆದರೆ ರಾಮ್‌ನಿಗೆ ಕಲ್ಯಾಣಿಯನ್ನು ತನ್ನೊಂದಿಗೆ ಕರೆದುಕೊಂಡು ಹೋಗುವ ಮನಸ್ಸಿರದ ಕಾರಣ, ಬೆಂಗಳೂರಿನ ಬಸ್‌ನಿಲ್ದಾಣ ಬಂದ ಮೇಲೆ ಮಲಗಿರುವ ಕಲ್ಯಾಣಿಯನ್ನು ಬಸ್‌ನಿಲ್ದಾಣದಲ್ಲೆ ಬಿಟ್ಟು ಹೋಗುತ್ತಾನೆ.

ಬಹಳ ಸಮಯದ ಬಳಿಕ ನಿದ್ದೆಯಿಂದ ಎಚ್ಚರಗೊಂಡ ಕಲ್ಯಾಣಿ ಪಕ್ಕದಲ್ಲಿ ತನ್ನ ಗಂಡ ಇಲ್ಲದಿರುವುದನ್ನು ಕಂಡು ಗಾಬರಿಗೊಳ್ಳುತ್ತಾಳೆ. ತನ್ನ ಜೀವಮಾನದಲ್ಲಿ ಪಟ್ಟಣವನ್ನೇ ನೋಡಿರದ ಕಲ್ಯಾಣಿ ಈಗ ಪಟ್ಟಣಕ್ಕೆ ಬಂದು, ಯಾವ ಕಡೆ ಹೋಗಬೇಕೆಂದು ಗೊತ್ತಾಗದೇ ಕಂಗಾಲಾಗಿ ನಿಲ್ಲುತ್ತಾಳೆ. ತನ್ನ ಗಂಡ ತನ್ನನ್ನು ಕರೆದುಕೊಂಡು ಹೋಗಲು ಬಂದೇ ಬರುತ್ತಾನೆ ಎಂದು ಬಸ್‌ನಿಲ್ದಾಣದಲ್ಲೆ ಕಾಯುತ್ತಾ ಕೂಡುತ್ತಾಳೆ. ಬೆಳಿಗ್ಗೆಯಿಂದ ಕಾಯುತ್ತಾ ಕುಂತವಳಿಗೆ ದಿಕ್ಕು ತೋಚದಂತಾಗುತ್ತದೆ. ತನಗೆ ತಿಳಿಯದೇ ಇರುವ ಯಾವುದೋ ಒಂದು ರಸ್ತೆಗೆ ಇಳಿದುಹೋಗುತ್ತಿರುತ್ತಾಳೆ. ಆ ದಾರಿ ಮಧ್ಯದಲ್ಲಿ ಒಬ್ಬ ದೊಡ್ಡ ಉದ್ಯಮಿಗೆ ಮೂರ್ಛೆರೋಗ ಕಾಣಿಸಿಕೊಂಡು ರಸ್ತೆಯಲ್ಲಿಯೇ ಬಿದ್ದು ಒದ್ದಾಡುತ್ತಿರುತ್ತಾನೆ. ಇದನ್ನು ನೋಡಿದ ಕಲ್ಯಾಣಿ ಅವನಿಗೆ ಆ ಸಮಯದಲ್ಲಿ ಸಹಾಯ ಮಾಡಿ ಆ ವ್ಯಕ್ತಿಯನ್ನು ಬದುಕಿಸುತ್ತಾಳೆ. ಆ ಉದ್ಯಮಿ ಕಲ್ಯಾಣಿಯ ಪೂರ್ವಾಪರಗಳನ್ನು ತಿಳಿದುಕೊಂಡು, ತನ್ನ ಮನೆಯಲ್ಲಿ ಕೆಲಸ ಮಾಡಿಕೊಂಡಿರುವೇ ಬಾ ಎಂದು ಕರೆದುಕೊಂಡು ಹೋಗುತ್ತಾನೆ. ಆ ವ್ಯಕ್ತಿಯ ಮನೆಗೆ ಬಂದಾಗ ಕಲ್ಯಾಣಿಗೆ ಒಂದು ಆಶ್ಚರ್ಯದ ಸಂಗತಿ ತಿಳಿಯುತ್ತದೆ. ಮನೆಯ ಯಜಮಾನನ ಅಳಿಯನಾದವನು ಬೇರೆ ಯಾರು ಆಗಿರದೆ ತನ್ನನ್ನು ಮದುವೆಯಾಗಿರುವ ಗಂಡನೇ

ಆಗಿರುವುದಾಗಿ ಗೊತ್ತಾಗುತ್ತದೆ. ತನ್ನ ಗಂಡ ತನ್ನನ್ನು ಮೋಸ ಮಾಡಿದ ಎಂದು ದುಃಖ ಪಡುತ್ತಾಳೆ. ಆದರೆ ತನ್ನ ಮನಸ್ಸಿನಲ್ಲಾಗುತ್ತಿರುವ ಈ ವೇದನೆಯನ್ನು ಯಾರ ಮುಂದೆಯೂ ತಪ್ಪಿಯೂ ಹೇಳುವುದಿಲ್ಲ. ಈಗ ಕಲ್ಯಾಣಿ, ರೇಖಾ ಮತ್ತು ರಾಮ ಮೂವರು ಒಂದೇ ಸೂರಿನಡಿಯಲ್ಲಿ ವಾಸಿಸುತ್ತಾರೆ. ಆದರೆ ಸಂಬಂಧಗಳು ಮಾತ್ರ ಗೊತ್ತಿರುವುದಿಲ್ಲ. ಇಲ್ಲಿ ರಾಮ ಕಲ್ಯಾಣಿಗೆ ತನ್ನ ಮತ್ತು ರೇಖಾಳ ಮದುವೆಯು ಎಂತಹ ಸಂದರ್ಭದಲ್ಲಿ ಆಯಿತು ಎಂದು ಮತ್ತೇ ಸುಳ್ಳಿನ ಆಸರೆಯನ್ನು ಪಡೆಯುತ್ತಾನೆ. ಆದರೆ ಸತ್ಯ ಸಂಗತಿಯನ್ನು ಮಾತ್ರ ಬಿಟ್ಟು ಕೊಡುವುದಿಲ್ಲ. ಇಲ್ಲಿ ರಾಮ ಕಲ್ಯಾಣಿ, ತಂದೆ, ತಾಯಿ, ರೇಖಾಳ ಮನೆಯವರಿಗೆ ಹೀಗೆ ಎಲ್ಲರಿಗೂ ಸುಳ್ಳು ಹೇಳುತ್ತಾನೆ. ಹೀಗೆ ಸಮಯ ಕಳೆಯುತ್ತದೆ. ರಾಮ, ಕಲ್ಯಾಣಿಯ ಜೊತೆ ಕದ್ದುಮುಚ್ಚಿ ಮಾತನಾಡುವುದು. ಉಡುಗೊರೆ ತಂದು ಕೊಡುವುದು. ಹೊಸ ಬಟ್ಟೆ ತರುವುದು ಮಾಡುತ್ತಿರುತ್ತಾನೆ. ಇದನ್ನು ಗಮನಿಸುವ ರೇಖಾಳಿಗೆ ರಾಮ ಮತ್ತು ಕಲ್ಯಾಣಿಯ ಮೇಲೆ ಸಂಶಯ ಉಂಟಾಗುತ್ತದೆ. ರೇಖಾ ಅವರಿಬ್ಬರ ಮಧ್ಯ ಯಾವ ರೀತಿಯಾದ ಸಂಬಂಧ ಇದೆ ಎಂಬುವುದು ತನಗೆ ಗೊತ್ತಾಗಲೇಬೇಕು? ಎಂದು ಹಠ ಹಿಡಿದು ಕೂಡುತ್ತಾಳೆ. ಆಗ ಅನಿವಾರ್ಯವಾಗಿ ರಾಮ ತನ್ನ ಮತ್ತು ಕಲ್ಯಾಣಿಯ ಸಂಬಂಧವನ್ನು ಹೇಳುತ್ತಾನೆ. ಆಗ ರೇಖಾಳಿಗೆ ಕಲ್ಯಾಣಿ ರಾಮನ ಮೊದಲ ಹೆಂಡತಿ ಎಂದು ಗೊತ್ತಾಗುತ್ತದೆ. ಈ ಸಂಬಂಧದ ವಿಷಯ ತಿಳಿದಾಗ ರೇಖಾ ರಾಮ ಮೇಲೆ ಕೋಪಗೊಳ್ಳುತ್ತಾಳೆ. ಕಲ್ಯಾಣಿಗೆ ತನ್ನಿಂದ ಅನ್ಯಾಯ ಆಗಿದೆ. ಅದನ್ನು ತಾನೇ ಸರಿಪಡಿಸಬೇಕೆಂದು ನಿರ್ಧಾರ ಮಾಡುತ್ತಾಳೆ.

ಕಲ್ಯಾಣಿ ಮತ್ತು ತನಗೆ ಕತ್ತಲಲ್ಲಿ ಇಟ್ಟು ರಾಮ ಮೋಸ ಮಾಡಿದ್ದಾರೆಂದು ತಿಳಿದ ದಿನದಿಂದಲೇ ರೇಖಾ ರಾಮನನ್ನು ದ್ವೇಷಿಸಲು ಪ್ರಾರಂಭಿಸುತ್ತಾಳೆ. ಕಲ್ಯಾಣಿಗೆ ಸಿಗಬೇಕಾದ ಸ್ಥಾನಮಾನ ಅವಳಿಗೆ ಸಿಗಬೇಕೆಂದು ಹೋರಾಡುತ್ತಾಳೆ. ರಾಮನೊಂದಿಗೆ ಮಾತನಾಡುವುದು, ಊಟ ಮಾಡುವುದು, ಮಲಗುವುದು, ಎಲ್ಲವನ್ನೂ ನಿಲ್ಲಿಸುತ್ತಾಳೆ. ಕಲ್ಯಾಣಿಯೊಂದಿಗೆ ಹೆಚ್ಚಿನ ಸಮಯ ಕಳೆಯುತ್ತಾಳೆ. ಇದೇ ಸಮಯದಲ್ಲಿ ರೇಖಾ ಗರ್ಭಿಣಿಯಾಗಿರುವ ವಿಷಯ ತಿಳಿದು ಬರುತ್ತದೆ. ಈ ವಿಷಯ ತಿಳಿದ ರೇಖಾಳ ತಂದೆ-ತಾಯಿಯರು ಸಂತಸಗೊಳ್ಳುತ್ತಾರೆ. ಆದರೆ ರೇಖಾಳಿಗೆ ಮಾತ್ರ ಈ ವಿಷಯ ಸಂತೋಷ ತರುವುದಿಲ್ಲ. ಬದಲಿಗೆ ಸಿಟ್ಟು, ದ್ವೇಷ ಹೆಚ್ಚಾಗುವಂತೆ ಮಾಡುತ್ತದೆ. ಇದನ್ನು ಗಮನಿಸುವ ರೇಖಾಳ ತಂದೆ ತಾಯಿ ರೇಖಾಳಿಗೆ ದ್ವೇಷ ಬಿಟ್ಟು ಚೆನ್ನಾಗಿರು ತಾಯಿಯಾಗುವವಳು ಹೀಗಿರಬಾರದು, ಮುಂದೆ ಹುಟ್ಟೊ ಮಗುವಿನ ಮೇಲೆ ಕೆಟ್ಟ ಪರಿಣಾಮ ಬಿರುತ್ತದೆ ಎಂದು ಬುದ್ಧಿವಾದ ಹೇಳುತ್ತಾರೆ. ರೇಖಾ ಕಲ್ಯಾಣಿಗೆ ರಾಮನ ತಂದೆ ತಾಯಿಯ ಬಗ್ಗೆ ಕೇಳುತ್ತಾಳೆ. ಆಗ ಕಲ್ಯಾಣಿ ರಾಮನ ತಂದೆ ತಾಯಿಯರು ಚೆನ್ನಾಗಿದ್ದಾರೆ, ಅವರು ಹಳ್ಳಿಯಲ್ಲಿ ಇದ್ದಾರೆ ಎಂದು ಹೇಳುತ್ತಾಳೆ. ಈ ಸಮಯದಲ್ಲಿ ರೇಖಾಗೆ ರಾಮನ ತಂದೆ ತಾಯಿಯನ್ನು ನೋಡಬೇಕೆಂಬ ಆಸೆಯಾಗುತ್ತದೆ. ಕಲ್ಯಾಣಿಯನ್ನು ಅತ್ತೆ ಮಾವ ಇರುವ ಹಳ್ಳಿಗೆ ಕರೆದುಕೊಂಡು ಹೋಗಬೇಕೆಂದು ಬೇಡಿಕೊಳ್ಳುತ್ತಾಳೆ. ಆಗ

ಕಲ್ಯಾಣಿ ಅನಿವಾರ್ಯವಾಗಿ ಹಳ್ಳಿಗೆ ಕರೆದುಕೊಂಡು ಹೋಗುತ್ತಾಳೆ. ಅಲ್ಲಿ ರೇಖಾ ಕಲ್ಯಾಣಿಯ ಮನೆ ಕೆಲಸದಾಕೆ ಆಗಿ ಹೋಗುತ್ತಾಳೆ, ಮನೆಯ ಆಳಾಗಿ ಕೆಲಸ ಮಾಡುತ್ತಾಳೆ. ಈ ಮೂಲಕ ತನ್ನ ಅತ್ತೆ ಮಾವರ ಸೇವೆ ಮಾಡುತ್ತಾಳೆ. ತನಗೆ ತಂದೆ-ತಾಯಿಯೇ ಇಲ್ಲ, ತಾನೊಬ್ಬ ಅನಾಥ ಎಂದು ಹೇಳಿದ ರಾಮನ ಮಾತುಗಳು ನೆನಪು ಮಾಡಿಕೊಳ್ಳುತ್ತಾಳೆ. ರಾಮನಿಗೆ ಆರೋಗ್ಯವಾಗಿರುವ ಇಂತಹ ತಂದೆ ತಾಯಿಯು ಇದ್ದರೂ ಅನಾಥ ಎಂದಿದ್ದಾರಲ್ಲಾ ಎಂತಹ ಮನುಷ್ಯನಿರಬಹುದೆಂದು ರಾಮನ ಮೇಲೆ ಕೋಪ ಮಾಡಿಕೊಳ್ಳುತ್ತಾಳೆ. ತನಗೆ ಬಂದಿರುವ ಸಿಟ್ಟಿನಿಂದಾಗಿ ರಾಮನಿಗೆ ಬೈಯುತ್ತಾಳೆ. ಆದರೆ ರಾಮನಿಗೆ ಮಾತ್ರ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬರುವುದಿಲ್ಲ. ಕಥೆ ಹೀಗೆಯೇ ಮುಂದುವರೆಯುತ್ತಿದ್ದಾಗ, ಕಥೆಯಲ್ಲಿ ಒಂದು ಹೊಸ ತಿರುವು ಬರುತ್ತದೆ.

ರಾಜಾರಾಮ ಮತ್ತು ರಾಮನ ತಾಯಿ ಒಡಹುಟ್ಟಿದ ಅಕ್ಕ ತಮ್ಮ ಆಗಿರುವ ವಿಷಯ ತಿಳಿಯುತ್ತದೆ, ಬಹಳ ವರ್ಷಗಳ ನಂತರ ಇವರ ಭೇಟಿಯಾಗಿರುತ್ತದೆ. ರಾಜಾರಾಮನ ಅಕ್ಕ ಮನೆಯವರ ವಿರೋಧ ಕಟ್ಟಿಕೊಂಡು ಪ್ರೀತಿಸಿ ಮದುವೆ ಮಾಡಿಕೊಂಡಿರುತ್ತಾಳೆ. ತವರುಮನೆಯನ್ನು ತೊರೆದು ಬಂದಿರುತ್ತಾಳೆ. ಕಥೆಯಲ್ಲಿ ಬರುವ ತಿರುವಿನಿಂದ ರೇಖಾ ರಾಮನ ಎರಡನೆಯ ಹೆಂಡತಿ ಎಂದು ಗೊತ್ತಾಗುತ್ತದೆ. ರಾಮನ ತಂದೆ ತಾಯಿಯರು ರೇಖಾಳನ್ನು ತಮ್ಮ ಸೊಸೆ ಎಂದು ಒಪ್ಪಿಕೊಳ್ಳವುದಿಲ್ಲ. ನಮಗೆ ಕಲ್ಯಾಣಿಯೇ ತಮ್ಮ ಸೊಸೆ ಎಂದು ಹೇಳುತ್ತಾರೆ.ಮುಂದೆ ಕಥೆಯಲ್ಲಿ ರೇಖಾ ಗಂಡುಮಗುವಿಗೆ ಜನ್ಮಕೊಡುತ್ತಾಳೆ. ಕಥೆಯಲ್ಲಿ ಹಲವು ಬದಲಾವಣೆಗಳು, ತಿರುವುಗಳು ತಂತ್ರ ಕುತಂತ್ರಗಳು ನಡೆಯುತ್ತವೆ. ಈ ಮಧ್ಯ ರೇಖಾಳ ತಂದೆ ರಾಜಾರಾಮ ಅವರು ಅಸುನೀಗಿದ್ದಾರೆಂಬ ಮಾಹಿತಿ ದೊರೆಯುತ್ತದೆ. ತಂದೆಯ ಅಕಾಲಿಕ ಮರಣದಿಂದ ರೇಖಾ ಮತ್ತು ಅವಳ ತಾಯಿಗೆ ದಿಕ್ಕೆ ತೋಚದಂತಾಗುತ್ತದೆ. ಇದೇ ಸಮಯದಲ್ಲಿ ರಾಜಾರಾಮನ ಉದ್ಯಮವು ದಿವಾಳಿಯಾಗುವ ಹಂತಕ್ಕೆ ಬಂದು ನಿಲ್ಲುತ್ತದೆ. ಇದರ ಮಧ್ಯೆ ಕಛೇರಿಯ ಕೆಲವೊಂದು ಮುಖ್ಯವಾದ ಕಡತಗಳು ಕಳ್ಳತನವಾಗುತ್ತವೆ. ಕಳುವಾದ ಮೇಲೆ ರೇಖಾಳ ಉದ್ಯಮ ಪೂರ್ತಿಯಾಗಿ ದಿವಾಳಿಯಾಗುತ್ತದೆ. ದಿವಾಳಿಯಾದ ರೇಖಾಳ ಉದ್ಯಮವನ್ನು ಮುಂಬೈ ಮೂಲದ ಸುಮನ ಖರೀದಿ ಮಾಡುತ್ತಾಳೆ.

ಇತ್ತ ರೇಖಾ ತನ್ನ ಉದ್ಯಮಕ್ಕಾಗಿ ಮಾಡಿದ ಸಾಲವನ್ನು ತೀರಿಸಲು ಆಗದೆ ಇದ್ದಾಗ ಮನೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ಸಮಯದಲ್ಲಿ ರಾಮ ರೇಖಾಳನ್ನು ಬಿಟ್ಟು ಹೋಗುತ್ತಾನೆ. ಇಬ್ಬರ ಮಧ್ಯ ಬಿರುಕು ಮೂಡುತ್ತದೆ. ಈ ಸುಮನ ರಾಮನನ್ನು ತನ್ನ ಜೊತೆ ಉದ್ಯೋಗಿಯಾಗಿ ಉಳಿಸಿಕೊಳ್ಳುತ್ತಾಳೆ. ದಿನ ಕಳೆದಂತೆ ರಾಮನೊಂದಿಗೆ ಮದುವೆಯನ್ನು ಮಾಡಿಕೊಳ್ಳುತ್ತಾಳೆ. ರಾಮ ಈ ಧಾರಾವಾಹಿಯಲ್ಲಿ ಒಟ್ಟು ಮೂರು ಮದುವೆ ಮಾಡಿಕೊಳ್ಳುತ್ತಾನೆ (ಕಲ್ಯಾಣಿ, ರೇಖಾ, ಸುಮನ). ರಾಮನಿಗೆ ತಾನು ತಪ್ಪು ಮಾಡುತ್ತಿದ್ದೇನೆಂದು ಎಲ್ಲಿಯೂ ಅನಿಸುವುದಿಲ್ಲ. ಬದಲಿಗೆ ಕಲ್ಯಾಣಿ ಮತ್ತು ರೇಖಾ ಇಬ್ಬರ ಮೇಲೂ ಸಿಟ್ಟಾಗುತ್ತಾನೆ. ತನ್ನನ್ನು

ಸುಮನನಂತಹ ಸುಂದರಿ ಮದುವೆಯಾಗಿರುವುದು ಅವನಿಗೆ ಸಂತೋಷವನ್ನು ತಂದಿರುತ್ತದೆ. ಅದಕ್ಕಾಗಿ ನಾನು ತುಂಬಾ ಅದೃಷ್ಟವಂತನೆಂದು ಹೇಳುವುದರ ಮೂಲಕ ರೇಖಾ ಮತ್ತು ಕಲ್ಯಾಣಿಯನ್ನು ತಿರಸ್ಕಾರಭಾವದಿಂದ ನೋಡುತ್ತಿರುತ್ತಾನೆ. ಕಥೆಯಲ್ಲಿ ಮತ್ತೆ ತಿರುವುಗಳು ಪ್ರಾರಂಭವಾಗುತ್ತವೆ. ಹಲವು ಏರಿಳಿತಗಳು ಬಂದು ಹೋಗುತ್ತವೆ. ರೇಖಾ ಮತ್ತೆ ಮೊದಲಿನ ಸ್ಥಾನಮಾನವನ್ನು ಪಡೆಯುತ್ತಾಳೆ. ಸುಮನ ಅವಳ ನಿಜವಾದ ಬಣ್ಣ ಬಯಲಾಗುತ್ತದೆ. ಅವಳು ಕಲ್ಯಾಣಿಯನ್ನು ಹೋಲುವಂತಹ ಮುಖವಾಡವನ್ನು ಹಾಕಿಕೊಂಡು ರೇಖಾಳನ್ನು ಮತ್ತವಳ ಆಸ್ತಿಯನ್ನು ಅನುಭವಿಸುತ್ತಿರುತ್ತಾಳೆ. ಈ ಬಗ್ಗೆ ತಿಳಿದುಕೊಂಡ ರೇಖಾ, ಅವಳನ್ನು ಕಟ್ಟಿಹಾಕಿ ಚಿತ್ರಹಿಂಸೆ ಕೊಡುತ್ತಾಳೆ. ಸುಮನಳನ್ನು ಅವಳ ಮೋಸದಾಟಕ್ಕೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ಜೈಲಿಗೆ ಹಾಕಿಸುತ್ತಾಳೆ. ಮುಂದೆ ರೇಖಾ ಮೊದಲಿನ ಸ್ಥಾನಕ್ಕೆ ಬರುತ್ತಾಳೆ.

ಈ ಮಧ್ಯೆ ಕಲ್ಯಾಣಿ ರೇಖಾ ಮಧ್ಯೆ ಭಿನ್ನಾಭಿಪ್ರಾಯಗಳು ಬರುತ್ತವೆ. ರಾಮನ ತಂದೆ ತಾಯಿಯರು ಅವಳನ್ನು ಸೊಸೆ ಎಂದು ಒಪ್ಪಿಕೊಳ್ಳದೇ ಇರುವುದರಿಂದ ರೇಖಾ ಈಗ ಕಲ್ಯಾಣಿ-ಮಾವ-ಅತ್ತೆಯ ವಿರುದ್ಧ ತಂತ್ರಗಳನ್ನು ಮಾಡುತ್ತಾಳೆ. ಅವರನ್ನು ನೆಮ್ಮದಿಯಾಗಿ ಇರಲು ಬಿಡುವುದಿಲ್ಲವೆಂದು, ಅವರಿಗೆ ಒಂದಿಲ್ಲೊಂದು ಕಷ್ಟಗಳನ್ನು ಕೊಡಲು ಪ್ರಾರಂಭಿಸುತ್ತಾಳೆ. ಇವಳಿಗೆ ಭಾಗ್ಯ ಆಂಟಿ ಜೊತೆಯಾಗುತ್ತಾಳೆ. ತಾನು ಮಾಡುವ ಪ್ರತಿಯೊಂದು ಕೆಲಸಕ್ಕೆ ಭಾಗ್ಯ ಜೊತೆಯಾಗಿ ಕೆಲಸ ಮಾಡುತ್ತಾಳೆ. ಈ ಮಧ್ಯೆ ಕಲ್ಯಾಣಿಯನ್ನು ಒಂದು ತಪ್ಪಿನಲ್ಲಿ ಸಿಕ್ಕಿ ಹಾಕಿಸಲಾಗುತ್ತದೆ. ಅದರಿಂದಾಗಿ ಕಲ್ಯಾಣಿಯನ್ನು ಜೈಲಿಗೆ ಕಳುಹಿಸಲಾಗುತ್ತದೆ. ರಾಮನನ್ನು ಕೂಡ ಇಲ್ಲಿ ಜೈಲಿಗೆ ಹಾಕಲಾಗುತ್ತದೆ. ರಾಮ ಮತ್ತು ಕಲ್ಯಾಣಿ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಇಲ್ಲಿ ರಾಮ ಮತ್ತು ಕಲ್ಯಾಣಿ ಪೋಲೀಸರಿಂದ ಮಾನಸಿಕ, ದೈಹಿಕ ಹಿಂಸೆಗಳನ್ನು ಅನುಭವಿಸಬೇಕಾಗುತ್ತದೆ. ಇಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳ ಹಿಂದೆ ರೇಖಾಳ ಕೈವಾಡವಿದೇ ಎಂದು ನಂತರ ತಿಳಿಯುತ್ತದೆ. ಕಥೆಯು ಹೀಗೆಯೇ ಮುಂದುವರಿಯುತ್ತದೆ.

ಕಲ್ಯಾಣಿ ಮತ್ತು ರಾಮ ಇಬ್ಬರ ಮಧ್ಯ ಇದ್ದ ಭಿನ್ನಾಭಿಪ್ರಾಯಗಳು ಕಳೆದು ಮತ್ತೆ ಒಂದಾಗುತ್ತಾರೆ. ಇಬ್ಬರ ನಡುವೆ ಪ್ರೀತಿಯು ಮೊಳಕೆ ಒಡೆಯುತ್ತದೆ. ದಿನ ಕಳೆದಂತೆ ಕಲ್ಯಾಣಿ ತಾಯಿಯಾಗುವ ಲಕ್ಷಣಗಳು ಕಂಡುಬರುತ್ತವೆ. ಇದು ರೇಖಾಳಿಗೆ ನುಂಗಲಾರದ ವಿಷವಾಗುತ್ತದೆ. ಹೇಗಾದರೂ ಮಾಡಿ ಮಗುವನ್ನು ಕೊಲ್ಲಲೇಬೇಕೆಂದು ಪಟ್ಟು ಹಿಡಿಯುತ್ತಾಳೆ. ಕಲ್ಯಾಣಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಅವಳ ಜೊತೆಯಿರಲು ಅವಳ ಮನೆಗೆ ಬಂದು ಇದ್ದು ಬಿಡುತ್ತಾಳೆ. ಕಲ್ಯಾಣಿಯ ಮಗುವನ್ನು ಕೊಲ್ಲಬೇಕು ಎಂಬುದು ಅವಳ ಉದ್ದೇಶವಾಗಿರುತ್ತದೆ. ಇದು ಇಲ್ಲಿಯವರೆಗೂ ಪ್ರಸಾರವಾದ ಕಲ್ಯಾಣಿ ಧಾರಾವಾಹಿಯ ಒಂದು ಸ್ಥೂಲ ನೋಟವಾಗಿದ್ದು; ಇದರ ವಿಶ್ಲೇಷಣೆಯನ್ನು ಮುಂದೆ ಮಾಡಲು ಪ್ರತ್ಯೇಕ ಶೀರ್ಷಿಕೆಯನ್ನಿಟ್ಟುಕೊಂಡು ನಡೆಸಲಾಗುವುದು.

ವಿಶ್ಲೇಷಣೆ

ಇಲ್ಲಿ ಕಟ್ಟಿಕೊಟ್ಟಿರುವ ಕಥೆಯಲ್ಲಿ ಹಲವು ವಿಷಯಗಳು ಚಿಂತನೆಗೆ ಒಳಗಾಗಿಸುತ್ತವೆ. ಅಂತಹ ಚಿಂತನೆಗೆ ಮೊದಲು ಬರುವುದೇ ಧರ್ಮ. ಏಕೆಂದರೆ ಧರ್ಮವು ಮಹಿಳೆಯ ಅಸ್ತಿತ್ವವನ್ನು ಪುರುಷನೊಂದಿಗೆ ಗುರುತಿಸುವುದು. ನಮ್ಮ ಧರ್ಮಶಾಸ್ತ್ರಗಳು, ಮೌಲ್ಯಗಳು ಕೂಡ ಇದನ್ನೇ ಸಾರಿ ಹೇಳುತ್ತವೆ. ಹೆಣ್ಣಾದವಳು ಮನೆಯ ಹಿರಿಯರ, ಕಿರಿಯರ, ಗಂಡನ ಸೇವೆಯಲ್ಲಿಯೇ ಸ್ವರ್ಗವನ್ನು ಕಾಣಬೇಕೆಂದು, ಹೀಗೆ ಹೇಳುವಾಗ ಹೆಣ್ಣಿನ ಅಸ್ತಿತ್ವ ಎಲ್ಲಿರುತ್ತದೆ? ಅವಳದೇನಿದ್ದರೂ ಸಮರ್ಪಣಾ ಭಾವ, ನಿಸ್ವಾರ್ಥ ಸೇವೆ ಮಾತ್ರ, ಇದು ಕೇವಲ ಸಮಾಜದಲ್ಲಿ ಅಸ್ತಿತ್ವವಿರುವ ಚಿಂತನೆಗಳಾಗಿರದೇ, ಧಾರಾವಾಹಿಗಳಲ್ಲಿಯೂ ಕೂಡ ಈ ಚಿಂತನೆ ಗಾಢವಾಗಿ ಚಿತ್ರಿತವಾಗಿರುವುದು ಕಂಡುಬರುತ್ತದೆ.

ಧರ್ಮನಿಷ್ಠೆ ವ್ಯಕ್ತಿತ್ವವುಳ್ಳಂತಹ ಹೆಣ್ಣು ನಾಯಕಿಯ ಪಾತ್ರದಲ್ಲಿಯೂ ಅಧರ್ಮಯೆಂದು ಹೇಳುವ ವ್ಯಕ್ತಿತ್ವದಲ್ಲಿ ಖಳನಾಯಕಿ ಪಾತ್ರದಲ್ಲಿಯೂ ಕಟ್ಟಿಕೊಡಲಾಗುತ್ತದೆ. ಧರ್ಮಕ್ಕೆ ಪೂರಕವಾಗಿ, ಮದುವೆಯನ್ನೂ ಕೂಡ ಇಲ್ಲಿ ಬಳಸಿಕೊಳ್ಳಲಾಗುತ್ತದೆ. ಧರ್ಮ ಹೇಗೆ ಹೆಣ್ಣಿನ ಬಾಳಲ್ಲಿ ಗಾಢವಾದ ಪರಿಣಾಮ ಬೀರುತ್ತದೆಯೋ ಹಾಗೆ ವಿವಾಹವು ಕೂಡ ಹೆಣ್ಣಿನ ಬಾಳಲ್ಲಿ ಅಷ್ಟೇ ಗಾಢವಾದ ಪರಿಣಾಮವನ್ನು ಬೀರುತ್ತದೆ. ಮದುವೆ ಪ್ರತಿಯೊಂದು ಹೆಣ್ಣಿನ ಬದುಕಿನಲ್ಲಿ ಒಂದು ಮಹತ್ವದ ಘಟ್ಟವೆಂದು ಹೇಳಲಾಗುತ್ತದೆ, ಮದುವೆ ಹೆಣ್ಣಿನ ಜೀವನಕ್ಕೆ ಒಂದು ಅರ್ಥವನ್ನು ಒದಗಿಸುತ್ತದೆ. ಬಹುತೇಕ ಎಲ್ಲಾ ಧಾರಾವಾಹಿಗಳು ಹೆಣ್ಣಿನ ಮದುವೆಯ ನಂತರ ತನ್ನ ಗಂಡನ ಮನೆಗೆ ಹೋದಮೇಲೆ ಆಕೆಯ ಜೀವನದಲ್ಲಾಗುವ ಏರುಪೇರುಗಳು ಸಮಸ್ಯೆಗಳನ್ನೇ ಹೆಚ್ಚಾಗಿ ತೋರಿಸುತ್ತವೆ. "ನಮ್ಮ ಧರ್ಮಶಾಸ್ತ್ರಗಳಲ್ಲಿ ಮದುವೆಯೆಂದರೆ ಅದು ಎರಡು ಆತ್ಮಗಳ ಸಂಗಮವಾಗಿರುತ್ತದೆ. ಮಹಿಳೆಯು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪುರುಷನಲ್ಲಿ ಲೀನವಾಗಬೇಕಾಗಿತ್ತು".[೧] ಹೀಗೆ ಪುರುಷ ಅಥವಾ ಗಂಡನಲ್ಲಿ ಲೀನವಾಗುವ ಮಹಿಳೆ ಅಥವಾ ಹೆಂಡತಿಯನ್ನು ಮನೆಯ ಎಲ್ಲಾ ಸದಸ್ಯರ ಬೇಕುಬೇಡಗಳಿಗೆ ಸ್ಪಂದಿಸುವವಳಂತೆ ಚಿತ್ರಿಸಲಾಗುತ್ತದೆ.

ಕಲ್ಯಾಣಿ ಧಾರಾವಾಹಿಯ ಕಥೆಯಲ್ಲಿಯೂ ಕೂಡ ಕಥಾನಾಯಕಿಯ ಅಭಿಪ್ರಾಯ ಕೇಳದೆ ಮದುವೆ ಗೊತ್ತು ಮಾಡುತ್ತಾರೆ. ಗಂಡನನ್ನೇ ದೇವರೆಂದು ತಿಳಿಯಬೇಕು. ಅವನಲ್ಲೇ ಲೀನವಾಗಬೇಕೆಂಬ ಸಲಹೆಗಳನ್ನೇ ಕೊಡಲಾಗುತ್ತದೆ. ಇದು ಕೇವಲ ಹಳ್ಳಿ ಪ್ರದೇಶದ ಹುಡುಗಿಗೆ ಮಾತ್ರ ಸೀಮಿತವಾಗಿರದೆ, ದೊಡ್ಡ ಉದ್ಯಮಿಯಾದ, ರಾಜಾರಾಮ ತನ್ನ ಮಗಳಾದ ರೇಖಾಳಿಗೂ ಕೂಡ ಇದೇ ಸಲಹೆಯನ್ನೇ ಕೊಡುತ್ತಾನೆ. ಧಾರಾವಾಹಿಗಳು, ಪುರುಷಪ್ರಧಾನ ಮೌಲ್ಯಗಳಿಗೆ ಪೂರಕವಾಗಿಯೇ ರೂಪಗೊಳ್ಳುತ್ತವೆ ಎಂಬುವುದಕ್ಕೆ ಈ ಧಾರಾವಾಹಿಯು ಕನ್ನಡಿಯಾಗಿ ನಿಲ್ಲುತ್ತದೆ.

ವಿವಾಹವೆನ್ನುವ ವ್ಯವಸ್ಥೆಯು ಕೇವಲ ಕಲ್ಯಾಣಿ ಮತ್ತು ರೇಖಾಳ ಬದುಕಿನಲ್ಲಿ ಬದಲಾವಣೆಯನ್ನುಂಟು ಮಾಡುತ್ತದೆ. ಆದರೆ ಕಥಾನಾಯಕ ರಾಮನ ಮೇಲೆ ಯಾವುದೇ

ಪರಿಣಾಮ ಬಿರುವುದಿಲ್ಲ. ರಾಮ ಮೋಸ ಮಾಡಿ ಮದುವೆಯಾಗುವುದರಲ್ಲಿ ಮುಂಚೂಣಿಯಲ್ಲಿರುತ್ತಾನೆ. ಕಲ್ಯಾಣಿ, ರೇಖಾ, ಸುಮನ ಹೀಗೆ ಮೂವರೊಂದಿಗೆ ಕಾನೂನಿನ ಯಾವುದೇ ಭಯವಿಲ್ಲದೇ ಮದುವೆಯಾಗುತ್ತಾನೆ. ರಾಮ ಮೂರನೆ ಮದುವೆಯಾಗುವಾಗ ಮೊದಲನೆ ಹೆಂಡತಿ ಕಲ್ಯಾಣಿಯಾಗಲೀ, ರೇಖಾ ಆಗಲೀ, ವಿರೋಧಿಸುವುದಿಲ್ಲ. ಅವರು ಕೇವಲ ಪರಿಸ್ಥಿತಿಯ ಕೈಗೊಂಬೆಯಾಗಿ ನಿಲ್ಲುತ್ತಾರೆ. ಪುರುಷ ಏನೇ ಮಾಡಿದರೂ ಸಮಾಜ ಸ್ವೀಕರಿಸುತ್ತದೆ ಎಂಬುದನ್ನು ಈ ಧಾರಾವಾಹಿಯಲ್ಲಿ ತೋರಿಸಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ "ಗಂಡನು ಶೀಲಹೀನನಾಗಿದ್ದರೂ, ಕಾಮಪ್ರವೃತ್ತನಾಗಿ ಬೇರೆಡೆ ಸುಖ ಅರಸುತ್ತಿದ್ದರೂ ಅಥವಾ ಗುಣವಿಹೀನನಾಗಿದ್ದರೂ ಸ್ವಾರ್ಥಿಯಾದ ಹೆಂಡತಿಯು ಅವನನ್ನೇ ದೇವರೆಂದು ತಿಳಿದು ಸತತವಾಗಿ ಪೂಜಿಸಬೇಕು."[೨] "ಪತಿ ಸೇವೆಯಲ್ಲದೇ ಹೆಂಡತಿಯು ಯಾವುದೇ ಯಜ್ಞ, ವ್ರತ ಅಥವಾ ಉಪವಾಸ ಮಾಡಬಾರದು. ಪತಿ ಶೂಶ್ರೂಷೆಯಲ್ಲಿ ತೊಡಗಿದವಳು ಅದೊಂದೇ ಕಾರಣಕ್ಕೆ ಸ್ವರ್ಗವನ್ನು ಹೊಂದುವಳು".[೩] ಇಂತಹ ಮೌಲ್ಯಗಳ ಮನುಸ್ಮೃತಿಗಳನ್ನೇ ಈ ಧಾರಾವಾಹಿಗಳಲ್ಲಿ ತೋರಿಸಲಾಗುತ್ತಿದೆ.

ಈ ಧಾರಾವಾಹಿಗಳು ಮಹಿಳೆಯರಲ್ಲಿ ಎರಡು ವರ್ಗಗಳ ಮಹಿಳಾ ವೀಕ್ಷಕರನ್ನು ಸೃಷ್ಟಿಸುತ್ತವೆ. ಒಂದು ಸಾಂಪ್ರದಾಯಿಕ ಮನೋಭಾವ ಹೊಂದಿರುವ ಮಹಿಳೆಯರು, ಇನ್ನೊಂದು ವರ್ಗ ಆಧುನಿಕ ವಿಚಾರವಂತಿಕೆಯ ಮನೋಭಾವವನ್ನು ಹೊಂದಿರುವಂತಹ ಮಹಿಳಾ ವೀಕ್ಷಕರು. ಇಲ್ಲಿ ಸಾಂಪ್ರದಾಯಿಕ ಪಾತಳಿಗೆ ಒಳಪಟ್ಟ ಮಹಿಳೆಯರಿಗೆ ಕಲ್ಯಾಣಿಯ ಗುಣಗಳು ಇಷ್ಟವಾಗುತ್ತವೆ. ಆಕೆಯಲ್ಲಿರುವ ಸ್ತ್ರೀತ್ವದ ಗುಣಗಳಾದ ಗುಣವಂತೆ, ಶೀಲವಂತೆ, ಸುಶೀಲೆ, ಮುಗ್ದೆ, ಕೋಮಲೆ ಈ ಗುಣಗಳು ಈ ವರ್ಗದ ಮಹಿಳಾ ನೋಡುಗರಿಗೆ ಹೆಚ್ಚು ಹೆಚ್ಚು ಆಕರ್ಷಿತವಾಗಿ, ಒಂದು ಸಂಚಿಕೆಯನ್ನೂ ಸಹ ಬಿಡದೇ ನೋಡುವಂತೆ ಮಾಡುತ್ತದೆ.

ಕ್ಷೇತ್ರಕಾರ್ಯದಲ್ಲಿ ಗ್ರಾಮೀಣ ಭಾಗದ ಮಹಿಳೆಯರಿಗೂ ನಗರಪ್ರದೇಶದ ಮಹಿಳೆಯರಿಗೂ ಹೋಲಿಸಿದರೆ, ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಲ್ಯಾಣಿಯ ಕಥೆಯನ್ನು ಇಷ್ಟಪಡುವವರಿದ್ದಾರೆ. ಅವರು ಕಲ್ಯಾಣಿಯ ಪಾತ್ರದಲ್ಲಿ ತಮ್ಮನ್ನು ತಾವು ಹುಡುಕಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಯಾವುದೋ ಒಂದು ಸನ್ನಿವೇಶದಲ್ಲಿ ಕಲ್ಯಾಣಿ ಪಾತ್ರಧಾರಿಯು, ಹತಾಶಳಾಗಿ ಅಳುತ್ತಿದ್ದರೆ, ಆ ಧಾರಾವಾಹಿ ನೋಡುವ ಮಹಿಳಾ ವೀಕ್ಷಕರು ಕಲ್ಯಾಣಿಯಂತೆ ತಾವು ಕೂಡ ಇದ್ದೇವಲ್ಲ ಎಂದು ಕಣ್ಣೀರಿಟ್ಟ ಪ್ರಸಂಗಗಳನ್ನು ವಿವರಿಸಿ ಹೇಳುತ್ತಾರೆ. ಈ ತೆರನಾದ ಭಾವ ಧಾರಾವಾಹಿ ನೋಡುವಾಗ ಅವರಲ್ಲಿ ಕಾಡುತ್ತಿರುತ್ತದೆ. ಅವರ ಮನಸ್ಸಿನಲ್ಲಿ ರೇಖಾಳಿಗಿಂತ ಕಲ್ಯಾಣಿ ಪಾತ್ರ ಹೆಚ್ಚು ಇಷ್ಟವಾಗಿ ಉಳಿದುಬಿಡುತ್ತದೆ. ಆದರೆ ಕೆಲವೊಂದು ಬಾರಿ ಮಾತ್ರ ಕಲ್ಯಾಣಿಯ ಪಾತ್ರದಲ್ಲಿ ಬದಲಾವಣೆ ತರಬೇಕು. ಸನ್ನಿವೇಶಗಳಿಗೆ ಅಳುತ್ತಾ ಕೂಡುವ ಬದಲು ಪ್ರತಿಭಟಿಸಬೇಕು ಎಂಬುದಾಗಿ ಹೇಳುತ್ತಾರೆ. ಉಳಿದಂತೆ ಕಲ್ಯಾಣಿಯೇ ಮಾದರಿಯಾಗುತ್ತಾಳೆ.

ರೇಖಾಳ ಪಾತ್ರವನ್ನು ಒಪ್ಪುವವರು ಆಧುನಿಕ ವಿಚಾರವಂತಿಕೆಯನ್ನು ಹೊಂದಿರುವವರು. ರೇಖಾ ಒಬ್ಬ ಆಧುನಿಕ ಚಿಂತನೆಯನ್ನು ಹೊಂದಿರುವ, ಸುಶಿಕ್ಷಿತ ಹೆಣ್ಣು. ಯಾವುದು ಸರಿ, ಯಾವುದು ತಪ್ಪು ಎನ್ನುವ ವಿಚಾರವಂತಿಕೆಯನ್ನು ಹೊಂದಿರುವವಳು. ಹೆಚ್ಚು ಹೆಚ್ಚು ಖ್ಯಾತಿಯನ್ನು ಪಡೆಯಬೇಕು, ತನ್ನ ಉದ್ಯಮದಲ್ಲಿ ಹೆಸರು ಗಳಿಸಬೇಕು, ದುಡ್ಡು ಸಂಪಾದಿಸಬೇಕು ಎಂದು ತನ್ನ ಭವಿಷ್ಯತ್ತನ್ನು ಮಹತ್ವಾಕಾಂಕ್ಷೆಯಿಂದ ಬರಮಾಡಿಕೊಳ್ಳುವ ಪಾತ್ರವಾಗಿದೆ. ಈ ಪಾತ್ರ ಆಧುನಿಕ ತಲೆಮಾರಿನವರಿಗೆ ಹೆಚ್ಚು ಇಷ್ಟವಾಗುತ್ತದೆ. ಕಲ್ಯಾಣಿ ಧಾರಾವಾಹಿಯನ್ನು ವೀಕ್ಷಿಸುವ ಈ ಹೊಸ ತಲೆಮಾರಿನ ಯುವತಿಯರು ಕಲ್ಯಾಣಿಯ ಪಾತ್ರವನ್ನು ನಿರಾಕರಿಸುತ್ತಾರೆ. ಕಲ್ಯಾಣಿ ಎಷ್ಟೇ ಮುಗ್ಧೆಯಾಗಿದ್ದರೂ ಸಹ ಒಂದಲ್ಲಾ ಒಂದು ಬಾರಿ ಅವಳು ಪ್ರತಿಭಟಿಸಬೇಕು, ಮಾತನಾಡಬೇಕು. ನಾವು ಇಂದು ಇಷ್ಟೊಂದು ಮುಂದುವರೆದ ಶತಮಾನದಲ್ಲಿದ್ದರೂ ಸಹ ಅವಳನ್ನು ಯಾಕೆ ಹೀಗೆ ಮುಗ್ಧೆಯ ಪಾತ್ರದಲ್ಲಿ ತೋರಿಸುತ್ತಾರೆ? ಇಂದಿನ ಕಾಲದಲ್ಲಿ ಹಳ್ಳಿ ಹುಡುಗಿಯರು ಕೂಡ ಯಾವುದರಲ್ಲಿಯೂ ಹಿಂದೆ ಇಲ್ಲ. ಹೀಗೆ ತೋರಿಸುವುದರಿಂದ ಹಳ್ಳಿ ಹುಡುಗಿಯರನ್ನು ಮತ್ತೆ ಸಾಂಪ್ರದಾಯಿಕತೆಗೆ ಸ್ಥೀಕರಿಸುವ ಹುನ್ನಾರಗಳು ಈ ಮೂಲಕ ನಡೆಯುತ್ತವೆ. ಅದನ್ನು ಈ ಧಾರಾವಾಹಿಗಳ ಮೂಲಕ ತಪ್ಪಿಸುವ ಪ್ರಯತ್ನ ನಡೆದರೆ ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತಾರೆ.

ಧಾರಾವಾಹಿಯಲ್ಲಿ ರೇಖಾ ಮತ್ತು ಕಲ್ಯಾಣಿ ಇಬ್ಬರೂ ಒಬ್ಬನ ಹೆಂಡತಿಯರಾಗಿದ್ದವರು. ಇಬ್ಬರಿಗೂ ಮೋಸ ವಂಚನೆಯಾಗಿದ್ದರೂ ಅದು ರಾಮನಿಂದ. ಕಥೆಯಲ್ಲಿ ರೇಖಾಗೆ ಕಲ್ಯಾಣಿ ರಾಮನ ಮೊದಲ ಹೆಂಡತಿಯೆಂದು ತಿಳಿದಮೇಲೆ ಅವಳನ್ನು ದ್ವೇಷಿಸುವ ಬದಲು ಅವಳೊಂದಿಗೆ ಒಳ್ಳೆಯ ಸಂಬಂಧವನ್ನಿಟ್ಟುಕೊಳ್ಳುತ್ತಾಳೆ. ಒಂದೇ ಮನೆಯಲ್ಲಿ ಮೂವರು ವಾಸಿಸುತ್ತಿರುತ್ತಾರೆ. ಈ ಸನ್ನಿವೇಶವನ್ನು ಧಾರಾವಾಹಿಯಲ್ಲಿ ಕಟ್ಟಿಕೊಡಲಾಗಿದ್ದು, ಈ ಸನ್ನಿವೇಶದ ಕುರಿತಂತೆ ವಿವಾಹಿತ ಮಧ್ಯಮವರ್ಗದ ಮಹಿಳೆಯರು ವಿವಾಹ ಎಂಬ ಬಂಧನದಲ್ಲಿ ಗಂಡ ಇನ್ನೊಬ್ಬಳನ್ನು ಮದುವೆಯಾಗಿದ್ದಾನೆ ಎಂದು ತಿಳಿದ ತಕ್ಷಣವೇ ಒಬ್ಬರನ್ನೊಬ್ಬರು ದ್ವೇಷಿಸುತ್ತಾರೆ. ಅವರಿಬ್ಬರು ಸವತಿಯರಾಗಿದ್ದಾಗ ಅವರ ಮಧ್ಯೆ ಒಳ್ಳೆಯ ಸಂಬಂಧವಿರಲು ಹೇಗೆ ಸಾಧ್ಯ? ಅವರು ಒಬ್ಬರಿಗೊಬ್ಬರು ಶುದ್ಧ ಶುತ್ರುಗಳಾಗುತ್ತಾರೆ. ಒಂದು ಪಕ್ಷ ಅವಳಿಗೇನಾದರು ಮಕ್ಕಳಿದ್ದರೆ, ಅವಳ ಮುಖ ಇವಳಾಗಲಿ, ಇವಳ ಮುಖ ಅವಳಾಗಲಿ ನೋಡುವುದಿಲ್ಲ. ಆದರೆ ಈ ಧಾರಾವಾಹಿಯಲ್ಲಿ ಮಾತ್ರ ಕಲ್ಯಾಣಿ, ರೇಖಾ ಇಬ್ಬರ ಮಧ್ಯ ಮೊದಲು ಒಳ್ಳೆಯ ಸಂಬಂಧ ತೋರಿಸಿದ್ದಾರೆ. ನಂತರ ಅವರು ಕೂಡಾ ಶತ್ರುಗಳಂತೆ ಆಗುವುದನ್ನು ಈ ಧಾರಾವಾಹಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಸಮಾಜದಲ್ಲಿರುವುದರ ಚಿತ್ರಣವನ್ನೇ ಬಿಂಬಿಸುತ್ತದೆ ಎಂದು ವಿವರಿಸುತ್ತಾರೆ.

ಈ ಕಥೆಯ ಒಟ್ಟು ನೋಟವನ್ನು ನೋಡುವುದಾದರೆ ಒಬ್ಬ ಪುರುಷ ತಾನು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಆಯ್ಕೆ ಮತ್ತು ನಿರಾಕರಣೆ ಎರಡು ತನಗೆ ಮಾತ್ರ ಸೇರಿದ್ದು ಯಾರನ್ನು ಬೇಕಾದರೂ ಮದುವೆಯಾಗಬಹುದು, ಎಷ್ಟು ಬೇಕಾದರೂ ಮದುವೆಯಾಗಬಹುದು. ಪುರುಷ ಪ್ರಧಾನ ಮೌಲ್ಯಗಳು ಹೇಗೆ ಪುರುಷನ ಪರವಾಗಿ

ನಿಲ್ಲುತ್ತವೆ. ಎನ್ನುವುದಕ್ಕೆ ಈ ಧಾರಾವಾಹಿ ಸಾಕ್ಷಿಯಾಗುತ್ತದೆ. ಇಲ್ಲಿ ಶೋಷಕನ ಪಾತ್ರದಲ್ಲಿ ಪುರುಷನಿದ್ದರೆ ಶೋಷಣೆ, ವಂಚನೆ, ಮೋಸಕ್ಕೆ ಒಳಗಾಗುವರು ಮಹಿಳೆಯರಾಗಿದ್ದಾರೆ(ಕಲ್ಯಾಣಿ, ರೇಖಾ, ಸುಮನ್). ಆಯ್ಕೆ ನಿರಾಕರಣೆಯ ರಾಜಕಾರಣಕ್ಕೆ ಬಲಿಯಾಗುವ ಮಹಿಳೆಯ ಸ್ಥಾನಮಾನ ಕುಸಿದು ಬೀಳುತ್ತದೆ. ಹೆಣ್ಣಿನ ಅಸ್ತಿತ್ವದ ಕುರಿತಾದ ಚಿಂತನೆಗಳಿಗೆ ಬದ್ಧರಾಗಿ ನಿಲ್ಲುವ ಸ್ತ್ರೀವಾದಿಗಳ ನಿಲುವುಗಳನ್ನು ನಯವಾಗಿ ಧಿಕ್ಕರಿಸುತ್ತಾ, ಸನಾತನ ಕಾಲದಿಂದಲೂ ನಡೆದು ಬರುತ್ತಿರುವ ಮೌಲ್ಯಗಳಿಗೆ ವಾಹಕಗಳಾಗಿ ಈ ಧಾರಾವಾಹಿಗಳು ಪ್ರಸಾರಗೊಳ್ಳುತ್ತಲಿವೆ ಎಂದು ಹೇಳಬಹುದಾಗಿದೆ.

೩.೧.೨. ಅವಲಕ್ಕಿ ಪವಲಕ್ಕಿ

ಕಥೆಯ ಸಾರಾಂಶ

ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ ೧೦.೦೦ ಘಂಟೆಗೆ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಧಾರಾವಾಹಿ ಅವಲಕ್ಕಿ-ಪವಲಕ್ಕಿ. ಈ ಧಾರಾವಾಹಿಯಲ್ಲಿ ನಾಲ್ಕು ಹೆಣ್ಣುಮಕ್ಕಳ ಜೀವನದಲ್ಲಿ ನಡೆಯುವ ಘಟನೆಗಳನ್ನಿಟ್ಟುಕೊಂಡು ಚಿತ್ರಿಸಲಾಗಿದೆ. ಅವರ ಬದುಕಿನಲ್ಲಿ ಬರುವ ಏರಿಳಿತಗಳು, ಕಷ್ಟ ನೋವುಗಳು, ಪ್ರೀತಿಯನ್ನು ಬಯಸುವ ಹೃದಯಗಳ ಕುರಿತಾದ ಕಥೆಯಿದೆ. ಒಬ್ಬ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಗೃಹಿಣಿಯಾಗಿ, ಸ್ನೇಹಿತೆಯಾಗಿ ಹೀಗೆ ಕೌಟುಂಬಿಕ, ಸ್ಥಿರ ಮಾದರಿಯ ಪಾತ್ರಗಳಲ್ಲಿಯೇ ನಿರ್ವಚನೆಗೊಂಡು ಬದುಕುವಂತಹ ಅನಿವಾರ್ಯತೆಯಿದ್ದಾಗ. ಹೆಣ್ಣಾದವಳು ತನ್ನ ಆಸೆ, ಆಕಾಂಕ್ಷೆಗಳನ್ನೆಲ್ಲಾ ಈ ಪಾತ್ರಗಳನ್ನು ಕಾಯ್ದುಕೊಂಡು ಹೋಗುವಲ್ಲಿಯೇ ತ್ಯಾಗಮಾಡಬೇಕಾಗುತ್ತದೆ. ಇಷ್ಟೆಲ್ಲಾ ಪಾತ್ರಗಳನ್ನು ನಿರ್ವಹಿಸುತ್ತಲೇ ಬದುಕುತ್ತಾಳೆ, ಇಲ್ಲಿ ಅವಳ ಆಯ್ಕೆ ನಿರಾಕರಣೆಗೆ ಎಲ್ಲಿ ಸ್ವಾತಂತ್ರವಿದೆ? ಹೆಣ್ಣು ಯಾವಾಗ ತಾನಾಗಿ ಬದುಕಬಲ್ಲಳು? ಸ್ವತಂತ್ರವಾಗಿ, ಸ್ವಚ್ಛಂದವಾದ ಜೀವನ ರೂಪಿಸಿಕೊಳ್ಳುವ ತವಕ, ಈ ಸಂಬಂಧಗಳು, ಅದರಲ್ಲಿ ಬರುವ ಸಮಸ್ಯೆಗಳು ಇವನ್ನೆಲ್ಲ ದಾಟಿಕೊಂಡು ಬಂದು, ಒಂದು ಸುಂದರವಾದ, ನೋವು, ಹತಾಶೆ, ಸಮಸ್ಯೆಗಳಿಲ್ಲದ ಜೀವನಕ್ಕೆ ಪರಿತಪಿಸುವ ನಾಲ್ಕು ಹೆಣ್ಣುಮಕ್ಕಳ ಕಥೆ ಇದು. ಇಲ್ಲಿ ತಂದೆ-ತಾಯಿಗಳ ಮಧ್ಯೆ, ಮಕ್ಕಳ ಮಧ್ಯೆ ನಡೆಯುವ ವಾಗ್ವಾದಗಳು ಪ್ರೀತಿ ಬಯಸುವ ಮಕ್ಕಳು, ಪ್ರೀತಿ ಕೊಡಲು ಆಗದ ತಂದೆ-ತಾಯಿಗಳು, ಪ್ರೀತಿಗಾಗಿ ಕಾಳಜಿಗಾಗಿ ಹಂಬಲಿಸುವ ವೃದ್ಧ ದಂಪತಿಗಳು, ತಂದೆ-ತಾಯಿಯ ಬಗ್ಗೆ ಕಿಂಚಿತ್ತೂ ಕಾಳಜಿ, ಪ್ರೀತಿ ತೋರದ ಮಕ್ಕಳು ಹೀಗೆ ಕಥೆಯಲ್ಲಿ ಪ್ರಸ್ತುತ ವಿದ್ಯಮಾನಗಳ ಕುರಿತಾದ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಮನುಷ್ಯನ ಸಂಬಂಧಗಳಲ್ಲಿ ಹೇಗೆ ಬಿರುಕು ಮೂಡುತ್ತಿದೆ. ಸಂಬಂಧಗಳು ಹೇಗೆ ಟೊಳ್ಳಾಗುತ್ತಿವೆ? ಮನುಷ್ಯನಿಗೆ ಹೇಗೆ ಬದುಕಬೇಕೆಂಬುದರ ಅರಿವಿರದಂತಹ ಸನ್ನಿವೇಶಗಳು ಹೇಗೆ ಸೃಷ್ಟಿಯಾಗುತ್ತಿವೆ? ನಗರ ಪ್ರದೇಶದ ಬದುಕಿನ ಅನಾವರಣ ಈ ಕಥೆಯ ಉದ್ದಕ್ಕೂ ವಿಸ್ತರಿಸುತ್ತಾ ಹೋಗುತ್ತದೆ. ಹೆಣ್ಣಿನ ಬದುಕು ಅದರ ಸೂಕ್ಷ್ಮತೆ, ಸಮಾಜ, ಕುಟುಂಬ, ಮಕ್ಕಳು, ತಂದೆ-ತಾಯಿಯರ

ಒಟ್ಟು ಬದುಕಿನ ಚಿತ್ರಣ ಈ ಕಥೆಯಲ್ಲಿದೆ. ಕಥೆಯಲ್ಲಿ ಬರುವ ಮೊದಲ ನಾಯಕಿ ಪವಿತ್ರಾಳ ಕಥೆಯನ್ನು ಮುಂದೆ ನಟಿಡಬಹುದಾಗಿದೆ.

ಪವಿತ್ರಾ : ಮದುವೆಯಾಗಿ ಒಂದು ಮಗು ಇರುವ ಮಹಿಳೆ. ಗಂಡ ನೀಡುತ್ತಿರುವ ಮಾನಸಿಕ, ದೈಹಿಕ, ಹಿಂಸೆಯನ್ನು ತಾಳಲಾರದೆ ವಿಚ್ಛೇದನವನ್ನು ಪಡೆದುಕೊಂಡು, ತನ್ನ ತಂದೆ-ತಾಯಿ ಮಗನೊಂದಿಗೆ ಬದುಕನ್ನು ಕಟ್ಟಿಕೊಂಡಿರುವಾಕೆ. ಆರ್ಥಿಕವಾಗಿ ಸಬಲಳಾಗಿದ್ದು ತಂದೆ ತಾಯಿಯ ಮೇಲೆ ಅವಲಂಬಿತಳಾಗಿರದೆ ಸ್ವಾವಲಂಬಿಯಾಗಿರುತ್ತಾಳೆ. ಗಂಡನನ್ನು ದೂರ ಮಾಡಿಕೊಂಡರೂ ಆಗಾಗ ಮನೆಗೆ ಬಂದು ಕೊಂಕು ಮಾತುಗಳನ್ನಾಡುತ್ತಿರುತ್ತಾನೆ. ಹೆಂಡತಿಯ ಬಗ್ಗೆಯಾಗಲೀ, ಆಕೆಯ ತಂದೆ ತಾಯಿಯ ಬಗ್ಗೆಯಾಗಲೀ ಸ್ವಲ್ಪವೂ ಮರ್ಯಾದೆ, ಗೌರವವಿರುವುದಿಲ್ಲ. ತನ್ನ ಗಂಡನ ಇಂತಹ ಮನಸ್ಥಿತಿಯಿಂದ ಪವಿತ್ರಾ ಒಳಗೊಳಗೆ ವ್ಯಥೆ ಪಟ್ಟುಕೊಂಡು ಕುಬ್ಜಳಾಗುತ್ತಿರುತ್ತಾಳೆ. ಪವಿತ್ರಾಳ ತಂದೆ-ತಾಯಿಯರಿಗೆ ಅವಳ ಬದುಕು ಹೀಗಾಯಿತಲ್ಲಾ, ಮುಂದೆ ಮಗಳ ಬದುಕು ಹೇಗೆ? ಎಂದು ಚಿಂತಿತರಾಗುತ್ತಾರೆ. ಮರುಮದುವೆಯಾಗುವಂತೆ ಸಲಹೆ ನೀಡುತ್ತಾರೆ. ತಂದೆ ತಾಯಿಯರ ಈ ಮಾತಿಗೆ ಪವಿತ್ರಾ ಹೆಣ್ಣಿನ ಬದುಕಿನಲ್ಲಿ ಮದುವೆಯೆನ್ನುವುದು ಎಲ್ಲಾ ಸಮಸ್ಯೆಗಳ ಮೂಲ ಮತ್ತು ಸಮಸ್ಯೆಗಳ ಆಗರ. ಆದ್ದರಿಂದ ಮದುವೆಯ ಯೋಚನೆ ಕೈಬಿಡಿ ಎಂದು ವಿನಂತಿಸಿಕೊಳ್ಳುತ್ತಾಳೆ. ಮದುವೆಯಿಂದ ಈಗೊಬ್ಬ ನನ್ನ ಬಾಳಲ್ಲಿ ಆಟವಾಡಿಕೊಂಡು ಹೋಗಿದ್ದಾನೆ. ಇನ್ನೊಬ್ಬ ಬಂದು ಬದುಕಿನೊಂದಿಗೆ ಆಟವಾಡುವುದು ಬೇಡ. ನಾನದಕ್ಕೆ ಸಿದ್ಧಳಾಗಿಲ್ಲ ಎಂದು ಹೇಳಿ ಮದುವೆಯ ವಿಷಯವನ್ನು ತಳ್ಳಿ ಹಾಕುತ್ತಾಳೆ. ಈ ಮಧ್ಯೆ ತಾನು ಕೆಲಸ ಮಾಡುತ್ತಿದ್ದ ಕಡೆಯಿಂದ ಬೆಂಗಳೂರಿಗೆ ವರ್ಗಾವಣೆಯಾಗುತ್ತದೆ. ತನ್ನ ಮಗನನ್ನು ತಂದೆ ತಾಯಿಯ ಜೊತೆ ಬಿಟ್ಟು, ತಾನೊಂದು ಪಿ.ಜಿ.(ಪೆಯಿಂಗ್ ಗೆಸ್ಟ್)ಯಲ್ಲಿ ಉಳಿದುಕೊಳ್ಳುತ್ತಾಳೆ. ಇದು ಕಥೆಯ ಮುಖ್ಯಪಾತ್ರಧಾರಿಗಳಲ್ಲಿ ಒಂದಾದ ಪವಿತ್ರಾಳ ಕಥೆ. ಇಲ್ಲಿ ಎರಡನೇಯ ಪಾತ್ರಧಾರಿಯಾಗಿರುವ ಲಕ್ಷ್ಯಾಳ ಬದುಕಿನ ಚಿತ್ರಣವನ್ನು ಹೀಗೆ ಸಾರಾಂಶೀಕರಿಸಬಹುದಾಗಿದೆ.

ಲಕ್ಷ್ಯಾ : ಆಗರ್ಭ ಶ್ರೀಮಂತರ ಮಗಳು ತಂದೆ ತಾಯಿ ದೊಡ್ಡ ಉದ್ಯಮಿಗಳು, ಸಕಲ ಸೌಲಭ್ಯಗಳಿಂದ ತುಂಬಿರುವ ಮನೆ ಕೇಳಿದ್ದೆಲ್ಲವೂ, ಬೇಡಿದ್ದೆಲ್ಲವೂ ಕ್ಷಣಾರ್ಧದಲ್ಲಿಯೇ ಪೂರೈಕೆಯಾಗುವಂತಹ ಸೌಲಭ್ಯ, ಹಣ, ಐಶ್ವರ್ಯ, ಹೆಸರು ಯಾವುದಕ್ಕೂ ಕೊರತೆಯಿಲ್ಲದ ಬದುಕು, ಇಷ್ಟೆಲ್ಲಾ ಇದ್ದರು ಲಕ್ಷ್ಯಾಳಿಗೆ ಏನೋ ಒಂದು ಕೊರಗು. ತನಗೆ ಅವಶ್ಯಕವಾಗಿ ಬೇಕಾಗಿರುವಂತಹದು ತನಗೆ ಸಿಗುತ್ತಿಲ್ಲವೆಂಬ ಕೊರಗು. ಲಕ್ಷ್ಯಾಳ ಈ ಕೊರಗಿಗೆ ಮೂಲ ಕಾರಣ ಪ್ರೀತಿಯ ಕೊರತೆ. ತಂದೆ-ತಾಯಿಗಳಿಗೆ ಸದಾ ಉದ್ಯಮದ ಸಭೆ, ಸಮಾರಂಭಗಳು, ಪ್ರವಾಸ, ಮೀಟಿಂಗು, ಹೀಗೆ ದಿನ, ವಾರಗಟ್ಟಲೆ ಮನೆಯಿಂದ ಹೊರಗುಳಿಯುವುದರಿಂದ ಮಗಳ ಕಡೆ ಅವರಿಗೆ ಗಮನಕೊಡುವುದಾಗುವುದಿಲ್ಲ. ಈ ಕೊರತೆಯು ಲಕ್ಷ್ಯಾಳನ್ನು ತನ್ನ ಮನೆಯಲ್ಲಿಯೇ ಅನ್ಯಮನಸ್ಕಳಾಗಿರುವುದಕ್ಕೆ ಕಾರಣವಾಗಿರುತ್ತದೆ. ಇಲ್ಲಿ ಲಕ್ಷ್ಯಾಳ ಅಣ್ಣನ ಪಾತ್ರವು ಕೂಡ ಇವಳ ಮಾದರಿಯಲ್ಲಿಯೇ ಕಟ್ಟಿಕೊಡಲಾಗಿದೆ.

ಲಕ್ಷ್ಮಿಳ ಅಣ್ಣನನ್ನು ಚಿಕ್ಕ ವಯಸ್ಸಿನಲ್ಲಿಯೇ ದೂರದ ಬೋರ್ಡಿಂಗ್ ಸ್ಕೂಲ್‌ನಲ್ಲಿ ಬಿಟ್ಟಿರುವುದರಿಂದ ಅವನ ವಿದ್ಯಾರ್ಥಿ ಜೀವನ ಅಲ್ಲಿಯೇ ಕಳೆಯುತ್ತದೆ. ತನ್ನ ಓದು ಮುಗಿಸಿಕೊಂಡು ಬಂದ ಮಗನಿಗೆ ಅವನ ಜೊತೆ ಕುಳಿತು ಮಾತನಾಡುವ ಸಮಯ ತಂದೆ ತಾಯಿಗೆ ಇರುವುದಿಲ್ಲ. ಮಗನಿಗೆ ತಾನು ಹಿರಿಮಗನೆಂಬ ಕಾರಣಕ್ಕಾಗಿ ತಾನು ಕೇಳಿದ್ದು, ಹೇಳಿದ್ದೇ ಆಗಬೇಕೆನ್ನುವ ಮನಸ್ಥಿತಿ. ಇದರ ಮಧ್ಯ ತನ್ನನ್ನು ಪ್ರೀತಿಸುವವರು ಯಾರು ಇಲ್ಲವೆಂಬ ಕೊರಗು, ಇಬ್ಬರಲ್ಲಿಯೂ ಕಾಡುತ್ತದೆ. ಇಂತಹ ಸಂದರ್ಭಗಳಲ್ಲಿ ತಂದೆ ತಾಯಿ ಇಬ್ಬರೂ ಅಸಹಾಯಕರಾಗಿ ನಿಲ್ಲುತ್ತಾರೆ. ಮನೆಯಿಂದ ದೂರವಿದ್ದ ಮಗ ಕೇವಲ ಹಟಮಾರಿ ಯಾಗಿರದೇ ಅನೇಕ ದುಶ್ಚಟಗಳಿಗೂ ಬಲಿಯಾಗಿರುತ್ತಾನೆ. ಮನೆಯಲ್ಲಿಯೇ ಸಿಗರೇಟು ಸೇದುವುದು, ಮದ್ಯಪಾನ ಮಾಡುವುದು ಮಾಡುತ್ತಿರುತ್ತಾನೆ. ಇದನ್ನು ನೋಡುವ ಲಕ್ಷ್ಮಿ ಅಣ್ಣನ ಈ ವರ್ತನೆಯನ್ನು ತೀವ್ರವಾಗಿ ಖಂಡಿಸುತ್ತಾಳೆ. ತಂದೆ ತಾಯಿಗೆ, ಅಣ್ಣನ ನಡವಳಿಕೆ ದುಶ್ಚಟಗಳ ಬಗ್ಗೆ ಹೇಳುತ್ತಾಳೆ. ಆದರೆ ಮಗನಿಗೆ ಮಾರ್ಗದರ್ಶನ ನೀಡುವಲ್ಲಿ ತಂದೆ ತಾಯಿಗಳು ಸೋತು ಹೋಗುತ್ತಾರೆ. ಕಾರಣ ಮಗನಿಗೆ ದುಶ್ಚಟಗಳು ಬಹಳ ದಿನಗಳಿಂದ ಇದ್ದುದ್ದರಿಂದ, ತಾನು ದುಶ್ಚಟಗಳನ್ನು ಬಿಡುವುದಿಲ್ಲವೆಂದು ಎದುರು ವಾದಿಸುತ್ತಿರುತ್ತಾನೆ. ಹೀಗಾಗಿ ತಂದೆ ತಾಯಿ ಇಲ್ಲಿ ಸೋತು ಹೋಗುತ್ತಾರೆ. ಅಣ್ಣನ ವರ್ತನೆ ದಿನದಿಂದ ದಿನಕ್ಕೆ ಅಂಕೆ ಮೀರುತ್ತಿದ್ದು, ಅದನ್ನು ಖಂಡಿಸಿದ್ದರು ಕೂಡ ಅವನ ಹವ್ಯಾಸಗಳಲ್ಲಿ ಯಾವುದೇ ಬದಲಾವಣೆಗಳು ಬರದಿದ್ದ ಕಾರಣ, ಲಕ್ಷ್ಮಿಳಿಗೆ ತನ್ನ ಮನೆಯಲ್ಲೇ ತಾನು ಪರಕೀಯಳೆಂಬ ಭಾವ ಮೊದಲೇ ಇದ್ದು, ಈಗ ಅಣ್ಣನ ವರ್ತನೆಯಿಂದ ಮನನೊಂದು ತನ್ನ ಮನೆಯನ್ನು ತೊರೆದು ಬಂದು ಪಿ.ಜಿ.ಗೆ ಸೇರುತ್ತಾಳೆ. ಇದು ಲಕ್ಷ್ಮಿಳ ಕಥೆ, ಈ ಧಾರಾವಾಹಿಯಲ್ಲಿ ಇನ್ನೊಂದು ಯುವತಿಯ ಪಾತ್ರ ಬರುತ್ತದೆ. ಅದು ಅವ್ನಿಯದು.

ಅವ್ನಿ : ಅವ್ನಿಯ ಕಥೆ ಕೂಡ ಮೇಲಿನ ಎರಡು ಪಾತ್ರಗಳಿಗೆ ಹೋಲಿಕೆಯಾಗುತ್ತದೆ. ಅವ್ನಿ ತನ್ನ ಹಳ್ಳಿಯ ಮನೆಯಿಂದ, ಬೆಂಗಳೂರಿಗೆ ಓದುವ ಉದ್ದೇಶದಿಂದ ತಂದೆ ತಾಯಿಯನ್ನು ಬಿಟ್ಟು ಬಂದಿರುತ್ತಾಳೆ. ಪವಿತ್ರಾ, ಲಕ್ಷ್ಮಿ, ಪಾತ್ರಗಳು ಪಿಜಿ.ಗೆ ಪ್ರವೇಶ ಪಡೆಯುವುದಕ್ಕೂ ಮುಂಚೆ, ಅವ್ನಿ ಪಾತ್ರಧಾರಿಯು, ಪಿ.ಜಿ.ಯಲ್ಲಿರುತ್ತಾಳೆ. ಅವ್ನಿ ಜೊತೆ ಪವಿತ್ರಾ ಇರುವುದಾಗಿ ಪಿ.ಜಿ. ನಡೆಸುವ ಯುಜಮಾನರು ನಿರ್ಧರಿಸುತ್ತಾರೆ. ಅದರಂತೆ ಪವಿತ್ರಾ ಅವ್ನಿಯೊಂದಿಗೆ ಇರಲು ಒಪ್ಪುತ್ತಾಳೆ. ಅವ್ನಿ, ಯಾವಾಗಲೂ ಮೌನಿಯಾಗಿರುತ್ತಾಳೆ. ಯಾರೊಂದಿಗೂ ಮಾತನಾಡದೇ, ಸದಾ ಚಿಂತೆಯಲ್ಲಿ ಮುಳುಗಿರುವಳಾಗಿರುತ್ತಾಳೆ. ಅವಳ ಜೀವನದಲ್ಲಿ ಎಂದೂ ಮರೆಯದ ಕಹಿ ಘಟನೆಯೊಂದು ನಡೆದು ಹೋಗಿರುತ್ತದೆ. ತನ್ನ ಸಂತೋಷವನ್ನು, ಲವಲವಿಕೆಯನ್ನು ಕಸಿದುಕೊಂಡು. ಜೀವನವೆಂದರೆ ಜಿಗುಪ್ಸೆ ಹುಟ್ಟಿಸಿಕೊಂಡಿರುವಂತೆ ಮಾಡಿದ ಆ ನೋವನ್ನು ಮರೆಯಲು ಆಗದೇ, ಬದುಕಲು ಆಗದೇ ಆತ್ಮಹತ್ಯೆಯ ಪ್ರಯತ್ನವನ್ನು ಮಾಡಿರುತ್ತಾಳೆ. ತನ್ನ ಒಡಲೊಳಗೆ ಬೆಂಕಿಯನ್ನಿಟ್ಟುಕೊಂಡು ದಿನೇ ದಿನೇ ತನ್ನನ್ನು ತಾನೇ ಸುಟ್ಟುಕೊಳ್ಳುತ್ತಲೇ ಬದುಕುತ್ತಿರುತ್ತಾಳೆ. ಪವಿತ್ರಾ ಅವ್ನಿಯ ಈ ಮೌನ, ಜಿಗುಪ್ಸೆ, ತನ್ನ

ಬದುಕಿನ ದಿಕ್ಕನ್ನ ಬದಲಿಸಿದ ಕಹಿ ಘಟನೆ ಯಾವುದೆಂದು ಬಲವಂತ ಮಾಡಿ ಕೇಳುತ್ತಾಳೆ. ಆಗ ಅನ್ವಿ ತನ್ನ ಬದುಕಿನಲ್ಲಾದ ಕಹಿ ಘಟನೆಯನ್ನು ಅವಳ ಮುಂದೆ ಹೇಳಿಕೊಳ್ಳುತ್ತಾಳೆ.

ತಾನು ಕಾಲೇಜಲ್ಲಿ ಓದುತ್ತಿದ್ದಾಗ ಒಬ್ಬ ಹುಡುಗನನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿರುತ್ತಾಳೆ. ಅವನು ಕೂಡ ತನ್ನನ್ನು ಹಾಗೆ ಪ್ರೀತಿಸುತ್ತಾನೆಂದು ಭಾವಿಸಿರುತ್ತಾಳೆ. ಈ ಪವಿತ್ರವಾದ ಪ್ರೀತಿಗೆ ಮದುವೆಯೆಂಬ ಹೆಸರು ಕೊಡೋಣವೆಂದು ಅನ್ವಿ ನಿರ್ಧರಿಸುತ್ತಾಳೆ. ಅದಕ್ಕೆ ಹುಡುಗನ ಒಪ್ಪಿಗೆಯನ್ನು ಕೇಳುತ್ತಾಳೆ. ಅದಕ್ಕೆ ಹುಡುಗ ಮದುವೆಗೆ ಒಪ್ಪಿಗೆ ಸೂಚಿಸಿ, ನಿಶ್ಚಿತಾರ್ಥಕ್ಕೆ ಏರ್ಪಾಡು ಮಾಡುವಂತೆ ಹೇಳುತ್ತಾನೆ. ತಾನು ಅಂದುಕೊಂಡದ್ದು ಇಷ್ಟು ಬೇಗ ನಡೆಯುತ್ತಿದೆ. ತಾನು ಮೆಚ್ಚಿದ ಹುಡುಗನೇ ತನ್ನ ಬಾಳ ಸಂಗಾತಿಯಾಗುತ್ತಿದ್ದಾನೆಂದು ಕುಣಿದು ಕುಪ್ಪಳಿಸುತ್ತಾಳೆ. ನಿಶ್ಚಿತಾರ್ಥಕ್ಕೆ ಎಲ್ಲವೂ ಸಿದ್ದಗೊಂಡಿರುತ್ತದೆ. ತಂದೆ-ತಾಯಿಯನ್ನು ಒಪ್ಪಿಸಿರುತ್ತಾಳೆ. ಸ್ನೇಹಿತರನ್ನು ಕರೆಸಿರುತ್ತಾಳೆ, ಎಲ್ಲರೂ ಬಂದಿರುತ್ತಾರೆ. ಆದರೆ ಹುಡುಗ ಮಾತ್ರ ಬರುವುದಿಲ್ಲ, ಅವನಿಗಾಗಿ ಎಲ್ಲರೂ ಕಾಯುತ್ತಾರೆ. ಎಷ್ಟೊತ್ತಾದರು ಹುಡುಗ ಬರುವುದಿಲ್ಲ. ಯಾಕೆ ಹೀಗಾಯಿತು ಅಂತ ಯೋಚನೆಯಲ್ಲಿ ಮುಳುಗಿದ್ದಾಗ ಅವನ ಕಡೆಯಿಂದ ಒಂದು ಪತ್ರ ಬರುತ್ತದೆ. ಆ ಪತ್ರ ಓದಿದ ಮೇಲೆ ಅನ್ವಿಗೆ ತಾನು ನಿಂತ ನೆಲ ತನ್ನದಲ್ಲವೇನೋ ಎಂಬ ಭಾವ ಮೂಡುತ್ತದೆ. ತಾನು ನಂಬಿದವನಿಗೆ ತನ್ನೊಂದಿಗೆ ಮದುವೆಯಾಗಲು ಇಷ್ಟವಿಲ್ಲವೆಂಬ ನಾಲ್ಕು ಸಾಲು ಓದಿದ ಅನ್ವಿಗೆ ತುಂಬಾ ನೋವಾಗುತ್ತದೆ. ಆ ನೋವು ಎಷ್ಟು ಕಾಡುತ್ತದೆ ಎಂದರೆ, ಆತ್ಮಹತ್ಯೆಗೂ ಒಳಗಾಗಿ ಪಾರಾಗಿ ಬಂದಿರುತ್ತಾಳೆ. ತಂದೆ-ತಾಯಿಗೆ ಒಬ್ಬಳೇ ಮಗಳಿದ್ದವಳು. ಆ ಘಟನೆಯ ಬಳಿಕ ಅನ್ವಿ ಜೀವಂತ ಶವವಾಗಿಬಿಡುತ್ತಾಳೆ. ಅವಳ ಬದುಕು ನಿಂತ ನೀರಾಗಿ ಬಿಡುತ್ತದೆ. ತಂದೆ-ತಾಯಿ, ಸ್ನೇಹಿತರು ಯಾರ ಮಾತಿಗೂ ಕಿವಿಗೊಡುವುದಿಲ್ಲ. ತಂದೆ-ತಾಯಿಯನ್ನು ಬಿಟ್ಟು ಪಿ.ಜಿ.ಗೆ ಬಂದು ಸೇರುತ್ತಾಳೆ. ಅವಳು ತನಗೆ ಮೋಸ ಮಾಡಿದ ಹುಡುಗನಿಗೆ ಒಮ್ಮೆ ಭೇಟಿಯಾಗಿ, ತನ್ನನ್ನು ಬೇಡವೆಂದು ಯಾಕೆ ಹೇಳಿದ? ತಾನು ಇಷ್ಟವಿಲ್ಲವೆಂದ ಮೇಲೆ ಪ್ರೀತಿಯ ನಾಟಕ ಯಾಕೆ ಆಡಿದ? ಎಂದು ಕೇಳಬೇಕು ಎನ್ನುವ ಕಾರಣದಿಂದ ಬದುಕಿದ್ದೇನೆಂದು ಪವಿತ್ರಾಳಿಗೆ ಹೇಳುತ್ತಾಳೆ. ಈ ದುಃಖವನ್ನು ಮರೆಯಲು ಪಿ.ಜಿ.ಗೆ ಬಂದು ಸೇರಿರುತ್ತಾಳೆ. ಕಥೆಯ ಕೊನೆಯ ಪಾತ್ರ ಲಕ್ಷ್ಮೀಯದು.

ಲಕ್ಷ್ಮೀ : ದೂರದ ಧಾರವಾಡದಿಂದ ಬೆಂಗಳೂರಿಗೆ ಓದಲು ಬಂದಿರುತ್ತಾಳೆ. ಸದಾ ಚಟುವಟಿಕೆಯಿಂದ ಇರುವ, ನಗುನಗುತ್ತಾ ಇತರರನ್ನು ನಗಿಸುತ್ತಾ ಇರುವ ಹುಡುಗಿ ಇವಳಿಗೆ ನಾಟಕ, ಧಾರಾವಾಹಿಯಲ್ಲಿ ಅಭಿನಯಿಸುವ ಆಸೆ, ತಾನು ದೊಡ್ಡ ಸ್ಟಾರ್ ಆಗಬೇಕು, ದೊಡ್ಡ ದೊಡ್ಡ ಬಂಗಲೆಗಳಿರಬೇಕು. ಐಷಾರಾಮಿ ಕಾರು, ಮನೆಯಲ್ಲಿ ಆಳು-ಕಾಳು, ಲಕ್ಷ ಲಕ್ಷ ದುಡ್ಡು ತನ್ನಲ್ಲಿರಬೇಕು ಎಂದು ಹಗಲು ರಾತ್ರಿ ಕನಸು ಕಾಣುತ್ತಿರುತ್ತಾಳೆ. ತನಗೊಬ್ಬ ಗೆಳೆಯ (ಬಾಯ್‌ಫ್ರೆಂಡ್) ಇರಬೇಕು, ಅವನೊಂದಿಗೆ ಬೈಕಲ್ಲಿ ಕೂತು ಸುತ್ತಾಡಬೇಕು. ಐಸ್‌ಕ್ರೀಂ ತಿನ್ನಬೇಕು ಶಾಪಿಂಗ್ ಮಾಡಬೇಕು ಎಂದು ಕನಸು ಕಾಣುತ್ತಿರುತ್ತಾಳೆ, ಊರಿನಿಂದ ತನ್ನ ಸೋದರ ಮಾವ ಹಳ್ಳಿಯ ವೇಷದಲ್ಲಿ ಆಕೆಯನ್ನು ನೋಡಲು ಬೆಂಗಳೂರಿಗೆ

ಬಂದಾಗ ಅವನ ಹಳ್ಳಿವೇಷ ಹಾಕಿಕೊಂಡು ಗಂಟು ಮೂಟೆಕಟ್ಟಿಕೊಂಡು ಬರುವುದು ಅವಳಿಗೆ ಸುತಾರಾಂ ಇಷ್ಟವಿರುವುದಿಲ್ಲ. ತನ್ನನ್ನು ನೋಡಲು ಬಂದಾಗ ಉಪಾಯವಾಗಿ ಇಲ್ಲಿಗೆ ಬರಬಾರದು, ಬಂದರೆ ತನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತದೆ ಎಂದೂ ಹೇಳಿರುತ್ತಾಳೆ. ಲಕ್ಷ್ಮಿಯ ಬಾಳಲ್ಲಿ ಹಲವು ಏರಿಳಿತಗಳು ಎದುರಾಗುತ್ತವೆ. ಅವುಗಳನ್ನು ದಾಟಿಕೊಂಡು ಮುಂದೆ ಹೋಗುತ್ತಾಳೆ. ಇದು ಲಕ್ಷ್ಮೀಯ ಕಥೆ.

ಈ ಕಥೆಯಲ್ಲಿ ನಾಲ್ಕು ಕಥಾನಾಯಕಿಯರದು ಒಂದೊಂದು ಪಾತ್ರ, ಇವರೆಲ್ಲಾ ಬೇರೆ ಬೇರೆ ಊರುಗಳಿಂದ ಬಂದು ಒಂದು ಪಿ.ಜಿ.ಯಲ್ಲಿ ಉಳಿಯುತ್ತಾರೆ. ಈ ಪಿ.ಜಿ.ಯಲ್ಲಿ ಕಥೆಯು ತಿರುವುಗಳನ್ನು ಪಡೆದು ನಡೆಯುತ್ತದೆ. ಈ ಪಿ.ಜಿಯನ್ನು ವೃದ್ಧ ದಂಪತಿಗಳು ನಡೆಸುತ್ತಿರುತ್ತಾರೆ. ಅವರದು ಕೂಡ ಒಂದು ನೋವಿನ ಕಥೆಯೇ ಇದೆ. ಪಿ.ಜಿ. ನಡೆಸಬೇಕೆಂಬ ಯಾವುದೇ ಉದ್ದೇಶವಾಗಲಿ, ಅನಿವಾರ್ಯತೆಯಾಗಲಿ ಈ ವೃದ್ಧ ದಂಪತಿಗಳಿಗೇ ಇರುವುದಿಲ್ಲ, ಇವರು ತಮ್ಮ ಜೊತೆ ಯಾರಾದರೂ ಇದ್ದರೆ ತಮಗೂ ಜೊತೆಗಾರರಿದ್ದ ಹಾಗಾಗುತ್ತದೆ ಎನ್ನುವ ಉದ್ದೇಶದಿಂದ ಪಿ.ಜಿ. ನಡೆಸುತ್ತಿರುತ್ತಾರೆ. ಇವರ ಬದುಕು ಕೂಡ ಕಥಾ ನಾಯಕಿಯ ರಂತೆ ಕಹಿ ಅನುಭವಗಳಿಂದ ಕೂಡಿರುತ್ತದೆ. ಬೆಂಗಳೂರಿನಂತಹ ಮಹಾನಗರದಲ್ಲಿ ದೊಡ್ಡ ಬಂಗಲೆ ಹೊಂದಿರುವ ಇವರಿಗೆ ಎರಡು ಮಕ್ಕಳು, ಮಕ್ಕಳಿಬ್ಬರೂ ತಮ್ಮ ತಮ್ಮ ಉದ್ಯೋಗವನ್ನರಸಿ ದೂರದ ವಿದೇಶಗಳಲ್ಲಿರುತ್ತಾರೆ. ಮಕ್ಕಳಿಗೆ ತಂದೆ ತಾಯಿಯರಿಗೆ ವಯಸ್ಸಾಗಿದೆ, ತಮ್ಮ ಅಗತ್ಯತೆ ಅವರಿಗಿದೇ ಎಂಬ ಕಿಂಚಿತ್ತೂ ಕಾಳಜಿ ಅವರಲ್ಲಿರುವುದಿಲ್ಲ. ಅವರೂ ಇತ್ತ ಬರದೇ ಇವರೂ ಅತ್ತ ಹೋಗದೇ ಇರುವಂತಹ ಪರಿಸ್ಥಿತಿ, ಮಗ, ಸೊಸೆ, ಮೊಮ್ಮಕ್ಕಳು ಎಲ್ಲಾ ಇದ್ದು ಇಲ್ಲದವರಂತೆ ಕಾಲ ಕಳೆಯುವ ಅನಿವಾರ್ಯತೆ ಇವರಿಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ತಾವೂ ಈ ವಯಸ್ಸಿನಲ್ಲಿ ಒಂಟಿಯಾಗಿರಬಾರದೆಂಬ ಉದ್ದೇಶದಿಂದ ಕೇವಲ ಹೆಣ್ಣು ಮಕ್ಕಳಿಗಾಗಿ ಈ ಪಿ.ಜಿಯನ್ನು ನಡೆಸುತ್ತಿರುತ್ತಾರೆ. ಈ ಪಿ.ಜಿಗೆ ಮೊದಲು ಬಂದವಳು ಲಕ್ಷ್ಮೀ ನಂತರ ಪವಿತ್ರಾ, ಲಕ್ಷ್ಯಾ ಮತ್ತು ಅವ್ನಿ, ಹೀಗೆ ನಾಲ್ವರು ಮನೆಬಿಟ್ಟು ಹೊಸ ಪ್ರಪಂಚಕ್ಕೆ ಕಾಲಿಡುತ್ತಾರೆ. ಎಲ್ಲರೊಂದಿಗೆ ಸಂತೋಷದಿಂದ ಬದುಕಬೇಕೆಂಬ ಉದ್ದೇಶ ಹೊಂದಿ ಈ ಮನೆಗೆ ಬರುತ್ತಾರೆ. ಇಲ್ಲಿ ಚಿತ್ರಿತವಾಗಿರುವ ಎಲ್ಲಾ ಪಾತ್ರಗಳು ಮುಖ್ಯವಾಗಿ ಪ್ರೀತಿಯನ್ನು ನೆಮ್ಮದಿಯನ್ನು ಹುಡುಕುವಂತಹ ಪಾತ್ರಗಳೇ ಆಗಿವೆ. ಕಥೆಯ ಪ್ರತಿ ಸಂಚಿಕೆಗಳಲ್ಲಿ ಇದು ಚಿತ್ರಿತವಾಗಿದೆ. ಒಂದೆಡೆ ಸೇರುವ ಈ ಪಾತ್ರಗಳು ಮುಂದೆ ಹೇಗೆ ಜೀವನ ನಡೆಸುತ್ತವೆ ಎಂಬುದು ಮುಂದಿನ ಸಂಚಿಕೆಗಳಲ್ಲಿ ತೋರಿಸಲಾಗುತ್ತದೆ.

ಕಥಾನಾಯಕಿಯರ ಜೀವನದಲ್ಲಿ ಬರುವ ಕೆಲವು ತಿರುವುಗಳು

ಕಥೆಯ ಇನ್ನೊಂದು ಭಾಗ ಪಿ.ಜಿಯಿಂದ ಆರಂಭವಾಗುತ್ತದೆ. ತಮ್ಮ ತಮ್ಮ ಮನೆಗಳಿಂದ ಪಿ.ಜಿಗೆ ಬರುವ ಮೊದಲು ನಡೆಯುವ ಕಥೆ ಮೊದಲನೆಯ ಭಾಗವಾಗಿದೆ. ಎರಡನೇ ಭಾಗದಲ್ಲಿ ಕಥಾನಾಯಕಿಯರ ಜೀವನದಲ್ಲಿ ಕೆಲವೊಂದು ಹೊಸ ತಿರುವುಗಳು ಬರುತ್ತವೆ. ಆ ಕಥನಾಯಕಿಯಲ್ಲಿ ಮೊದಲ ಕಥಾ ನಾಯಕಿ ಪವಿತ್ರಾಳ ಬದುಕಿನಲ್ಲಿ ಬರುವ ತಿರುವೆಂದರೆ

ಪವಿತ್ರಾಳ ಜೀವನದಲ್ಲಿ ಹೊಸ ವ್ಯಕ್ತಿಯ ಆಗಮನವಾಗುತ್ತದೆ. ತಾನು ದುಡಿಯುವ ಸ್ಥಳದಲ್ಲಿಯೇ ಆ ವ್ಯಕ್ತಿಯ ಪರಿಚಯವಾಗುತ್ತದೆ. ಪವಿತ್ರಾ ಆ ವ್ಯಕ್ತಿಯೊಂದಿಗೆ ಓಡಾಡುವುದು, ಊಟ, ತಿಂಡಿ, ಕಾಫಿ, ಹೀಗೆ ಅವನೊಂದಿಗೆ ಸಂತೋಷದಿಂದ ಬೆರೆಯುತ್ತಾಳೆ. ಆತನೊಂದಿಗೆ ಬಿಚ್ಚು ಮನಸ್ಸಿನಿಂದ ಮಾತನಾಡಿಕೊಂಡು ಆನಂದದಿಂದ ಇರುತ್ತಾಳೆ. ಅದು ಸ್ನೇಹನಾ? ಪ್ರೀತಿನಾ? ಎನ್ನುವ ಗೊಂದಲ ಅವಳಲ್ಲಾಗ ಮೂಡಿದರೂ ಸಹ ಅವಳು ಯಾವುದೇ ನಿರ್ಧಾರ ತೆಗೆದುಕೊಳ್ಳಲು ಆಗದಂತಹ ಮನಸ್ಥಿತಿಯಲ್ಲಿರುತ್ತಾಳೆ. ಪವಿತ್ರಾ ಹೀಗೆ ಇನ್ನೊಬ್ಬನೊಂದಿಗೆ ಸುತ್ತಾಡುತ್ತಿರುವುದು ಮಾಜಿ ಗಂಡನಿಗೆ ಗೊತ್ತಾಗಿ ಆ ಮಾಜಿ ಗಂಡ ತನ್ನ ಹೆಂಡತಿಯ ಬಗ್ಗೆನೇ ಕಟುವಾಗಿ ಟೀಕಿಸುತ್ತಾನೆ. ತನ್ನ ಮಗನ ಮನಸ್ಸಿನಲ್ಲಿ ತಾಯಿಯ ಬಗ್ಗೆ ಕೆಟ್ಟ ವಿಚಾರಗಳನ್ನು ತುಂಬುತ್ತಾನೆ. ತಾಯಿ ಮಗನ ಮಧ್ಯೆ ಅಂತರ ಸೃಷ್ಟಿಸುತ್ತಾನೆ. ತಮ್ಮ ಮಗಳು ಹೀಗೆ ಯಾವನ್ ಜೊತೆನೋ ಸುತ್ತಾಡುತ್ತಿದ್ದಾಳೆ. ಅದನ್ನು ನೋಡಿ ನೀವು ಸುಮ್ಮನಿದ್ದೀರಾ? ನಿಮ್ಮ ಮಗಳಿಗೆ ಬುದ್ಧಿವಾದ ಹೇಳಬಾರದಾ? ಎಂದು ಪವಿತ್ರಾಳ ಮನೆಗೆ ಬಂದು ಗಲಾಟೆ ಮಾಡುತ್ತಾನೆ. ಇದನ್ನು ತಿಳಿದ ಪವಿತ್ರಾ ತೀವ್ರ ಹತಾಷಳಾಗುತ್ತಾಳೆ. ತಾನು ಯಾವುದೇ ತಪ್ಪು ಮಾಡದಿದ್ದರೂ ತನಗೆ ಏಕೆ ಈ ಶಿಕ್ಷೆಯಾಗುತ್ತಿದೆ ಎಂದು ದುಃಖಿಸುತ್ತಾಳೆ. ಅವಳ ದುಃಖಕ್ಕೆ ಯಾರ ಬಳಿಯು ಸಾಂತ್ವನ ಇರುವುದಿಲ್ಲ. ಆದರೆ ಪವಿತ್ರಾಳ ಅತ್ತೆ ಪಾತ್ರವನ್ನು ತುಂಬಾ ಸಕಾರಾತ್ಮಕವಾಗಿ ತೋರಿಸಲಾಗಿದೆ.

ಪವಿತ್ರಾಳ ಅತ್ತೆಗೆ ತನ್ನ ಮಗ ಎಂತವನು, ತನ್ನ ಸೊಸೆಗೆ ಯಾವ ರೀತಿಯ ಕಾಟ ಕೊಡುತ್ತಿದ್ದಾನೆಂದು ಹೇಳುವ ಮೂಲಕ ಸೊಸೆಯ ಪರವಾಗಿ ನಿಲ್ಲುತ್ತಾಳೆ. ಮಗನನ್ನು ವಿರೋಧಿಸುತ್ತಾಳೆ. ತನ್ನ ಮಗನಿಗೆ ಇಂಥ ಹೆಂಡತಿ ಸಿಕ್ಕದ್ದು ತನ್ನ ಪುಣ್ಯ ಆದರೆ, ಅಂತಹ ಹೆಂಡತಿಯನ್ನು ಸುಖವಾಗಿ ನೋಡಿಕೊಳ್ಳುವ ಯೋಗ್ಯತೆ ತನ್ನ ಮಗನಿಗಿಲ್ಲವಲ್ಲ ಎಂದೂ ಕೊರಗುತ್ತಾಳೆ. ಸುಂದರವಾದ ಸಂಸಾರವಾಗಬೇಕಾಗಿದ್ದ ತನ್ನ ಮಗನ ಮನೆ ಇಂದು ಮೂರು ಜನ ಮೂರು ದಿಕ್ಕು ಎಂಬಂತಾಗಿದೆ ಎಂದು ವ್ಯಥೆ ಪಡುತ್ತಾರೆ. ಅತ್ತೆ-ಸೊಸೆ ಪಾತ್ರವನ್ನು ಸಕಾರಾತ್ಮಕವಾಗಿ ಚಿತ್ರಿಸಲಾಗಿದೆ. ಸಾಂಪ್ರದಾಯಿಕ ಮೌಲ್ಯಗಳಿಗೆ ಒಳಗಾಗದೇ ಸೊಸೆಯನ್ನು ಎತ್ತಿಹಿಡಿಯುವ, ಅವಳ ಪರವಾಗಿ ಮಾತನಾಡುವ ಪಾತ್ರದಲ್ಲಿ ಚಿತ್ರಿಸಿದ್ದಾರೆ.

ಇನ್ನು ಲಕ್ಷ್ಮ್ಯಾಳ ಜೀವನದಲ್ಲಿ ಬರುವ ತಿರುವು ಅದು ಹೋರಾಟದ ತಿರುವಾಗಿದೆ. ಲಕ್ಷ್ಮ್ಯ ಒಬ್ಬ ಪರ್ತಕರ್ತೆ ಆಗಿರುತ್ತಾಳೆ. ಎಲ್ಲಾದರೂ ಅನ್ಯಾಯ, ಮೋಸ, ವಂಚನೆ ನಡೆಯುತ್ತಿದ್ದರೆ, ಅದನ್ನು ಪ್ರತಿಭಟಿಸುವ ಎದೆಗಾರಿಕೆ ಅವಳಲ್ಲಿರುತ್ತದೆ. ಹೀಗಿರುವಾಗ ಲಕ್ಷ್ಮ್ಯಾಳ ಎದುರು ಒಂದು ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ. ಲಕ್ಷ್ಮ್ಯಾಳ ಮನೆಯಲ್ಲಿ ಸುಮಾ ಎನ್ನುವ ಹುಡುಗಿ ಕೆಲಸ ಮಾಡುತ್ತಿರುತ್ತಾಳೆ. ಅವಳು ತನ್ನ ತಾಯಿಯ ದೂರದ ಸಂಬಂಧಿಯಾಗಿರುತ್ತಾಳೆ. ಅವಳ ಮತ್ತು ಲಕ್ಷ್ಮ್ಯಾಳ ನಡುವೆ ಅಕ್ಕತಂಗಿಯ ಸಂಬಂಧವಿರುತ್ತದೆ. ಸುಮಾಳ ಜೊತೆ ಅಷ್ಟೊಂದು ಸ್ನೇಹದೊಂದಿಗೆ ಇರುತ್ತಾಳೆ. ಲಕ್ಷ್ಮ್ಯ ಮನೆಬಿಟ್ಟು ಹೋಗುವಾಗ ಸುಮಾಳಿಗೆ

ತನ್ನಣ್ಣನಿಂದ ಎಚ್ಚರವಾಗಿರಲು ಹೇಳಿ ಹೋಗಿರುತ್ತಾಳೆ. ಆದರೆ ತನ್ನಣ್ಣ ಸುಮಾಳಿಗೆ ಮಾನಸಿಕ ಹಿಂಸೆ ಕೊಡುತ್ತಿರುತ್ತಾನೆ. ಅವಳನ್ನ ದೈಹಿಕ ಸಂಬಂಧಕ್ಕಾಗಿ ಆಹ್ವಾನಿಸುತ್ತಾನೆ. ಒಂಥರಾ ಕೆಟ್ಟದಾಗಿ ನಡೆದುಕೊಳ್ಳುತ್ತಾನೆ. ತನ್ನನ್ನು ಕೆಟ್ಟ ದೃಷ್ಟಿಯಿಂದ ನೋಡುವುದು, ಮುಟ್ಟುವುದು, ಮಾಡುತ್ತಿರುತ್ತಾನೆ. ಹಾಗೆಂದು ಸುಮಾ ಲಕ್ಷ್ಯಾಳಿಗೆ ಫೋನ್ ಮೂಲಕ ತಿಳಿಸಿರುತ್ತಾಳೆ. ತನ್ನ ತಂದೆ ತಾಯಿಗೆ ವಿಷಯ ತಿಳಿಸುತ್ತೇನೆಂದು ಭರವಸೆ ಕೊಡುತ್ತಾಳೆ. ಒಂದು ದಿನ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಲಕ್ಷ್ಯಾಳ ಅಣ್ಣ ಸುಮಾಳನ್ನು ಬಲವಂತವಾಗಿ ಹಿಡಿದುಕೊಳ್ಳಲು ಹೋಗುತ್ತಾನೆ. ಆಗ ಅವನಿಂದ ತಪ್ಪಿಸಿಕೊಳ್ಳಲು ಹೋಗಿ ಸುಮಾ ಕಾಲುಜಾರಿ ಬೀಳುತ್ತಾಳೆ. ಬಿದ್ದ ರಭಸಕ್ಕೆ ತಲೆಗೆ ತೀವ್ರವಾಗಿ ಪೆಟ್ಟಾಗಿ, ರಕ್ತ ಹರಿದುಹೋಗುತ್ತದೆ. ಸುಮಾ ಸ್ಥಳದಲ್ಲೇ ಸಾವನ್ನಪ್ಪುತ್ತಾಳೆ. ಈ ಸನ್ನಿವೇಶವನ್ನು ನಿರೀಕ್ಷಿಸಿರದ ಲಕ್ಷ್ಯಾಳ ಅಣ್ಣನಿಗೆ ದಿಕ್ಕು ತೋಚದಂತಾಗುತ್ತದೆ. ತಂದೆ ತಾಯಿಗೆ ಫೋನ್ ಮಾಡಿ ನಡೆದ ಘಟನೆಯನ್ನು ವಿವರಿಸುತ್ತಾನೆ. ಲಕ್ಷ್ಯಾಳಿಗೂ ಇದು ತಿಳಿಯುತ್ತದೆ. ಸುಮಾ ಕಾಲುಜಾರಿ ಬಿದ್ದು ಸಾವನ್ನಪ್ಪಿದ್ದಾಳೆ ಎಂದು ಲಕ್ಷ್ಯಾಳ ತಂದೆ ತಾಯಿ ಪೋಲಿಸರಿಗೆ ತಪ್ಪು ಮಾಹಿತಿ ನೀಡುತ್ತಾರೆ. ಈ ಮಾತು ಸತ್ಯವಾಗಿರಬಹುದೆಂದು ಅವಳು ಕೂಡ ನಂಬುತ್ತಾಳೆ. ಆದರೆ ಅವಳಿಗೆ ಇಲ್ಲಿ ಏನೋ ಮೋಸ ನಡೆದಿದೆ ಎಂದು ಸಂದೇಹ ಬರುತ್ತದೆ. ಅದಕ್ಕೆ ಮೊದಲು ಅಣ್ಣನ ಮೇಲೆಯೇ ಸಂದೇಹ ಪಡುತ್ತಾಳೆ. ಆದರೆ ಅವಳ ತಂದೆ ತಾಯಿ ಅವನದೇನು ತಪ್ಪಿಲ್ಲ ಅವನು ನಿರಪರಾಧಿ ಎಂದು ವಾದಿಸಿ ಲಕ್ಷ್ಯಾಳನ್ನು ಸುಮ್ಮನಾಗಿಸುತ್ತಾರೆ. ಆದರೂ ಲಕ್ಷ್ಯಾಳಿಗೆ ಮಾತ್ರ ಸಂದೇಹ ಕಾಡುತ್ತಿರುತ್ತದೆ. ತನ್ನ ತಂದೆ ಅಣ್ಣ ಸುಳ್ಳ ಹೇಳುತ್ತಿದ್ದಾರೆ. ಆದರೆ ತನ್ನ ತಾಯಿ ಸುಳ್ಳು ಹೇಳಲಾರಳು ಎಂಬ ವಿಶ್ವಾಸದಿಂದ ತಾಯಿಗೆ ಸತ್ಯ ಹೇಳುವಂತೆ ಬೇಡಿಕೊಳ್ಳುತ್ತಾಳೆ. ತಾಯಿಯ ಮನಸ್ಸು ಕರಗಿ, ಅವಳಲ್ಲಿ ತುಂಬಿರುವ ದುಃಖದ ಕಟ್ಟೆ ಒಡೆದು ಮಗಳಿಗೆ ವಾಸ್ತವವಾಗಿ ಏನು ನಡೆಯಿತು. ಎಂದು ಹೇಳುತ್ತಾಳೆ. ಲಕ್ಷ್ಯಾ ತಾನು ಸಂದೇಹ ಪಟ್ಟಿದ್ದು ನಿಜವಾಯ್ತು ತನ್ನ ಅಣ್ಣನ ಕಾಮದ ಆಟಕ್ಕೆ ಮುಗ್ಧೆ ಒಬ್ಬಳು ಬಲಿಯಾದಳು. ಅಂತಹ ಅಮಾಯಕ ಹುಡುಗಿಯ ಬಾಳು ಹಾಳು ಮಾಡಿದ ಎಂದು ಗೊತ್ತಾದ ಕೂಡಲೆ ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಪೋಲೀಸರಿಗೆ ದೂರು ಕೊಡುತ್ತಾಳೆ. ಸುಮಾಳ ಸಾವು ಆಕಸ್ಮಿಕ ಸಾವಲ್ಲ, ಆಕೆಯನ್ನು ಕೊಲೆ ಮಾಡಲಾಗಿದೆ. ಆಕೆಯನ್ನು ಕೊಲೆ ಮಾಡಿದ್ದು ತನ್ನ ಅಣ್ಣನೆಂದು ಸಾಕ್ಷಿ ಹೇಳುತ್ತಾಳೆ. ತನ್ನ ತಂದೆ ಎಷ್ಟೇ ಬಲವಂತ ಮಾಡಿದರೂ ಲಕ್ಷ್ಯಾ ತಾನು ತೆಗೆದುಕೊಂಡ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ, ಸುಮಾಳ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ತನ್ನಣ್ಣನಿಗೆ ಶಿಕ್ಷೆಯಾಗಲೇಬೇಕು ಎಂದು ಹೇಳುತ್ತಾಳೆ. ಅದರಂತೆ ನಡೆದುಕೊಳ್ಳುತ್ತಾಳೆ. ಈ ಕಥೆಯಲ್ಲಿ ಬರುವ ಈ ತಿರುವಿನಲ್ಲಿ ಲಕ್ಷ್ಯಾಳ ದಿಟ್ಟಹೆಜ್ಜೆ ಮಾದರಿಯಾಗುತ್ತದೆ. ಇದೇ ರೀತಿಯಾಗಿ ಅವ್ನಿಯ ಬಾಳಲ್ಲು ಕೂಡಾ ತಿರುವೊಂದು ಬರುತ್ತದೆ.

ಅವ್ನಿಯ ಬದುಕಲ್ಲಿಯೂ ಕೂಡ ತಿರುವುಗಳು ಬರುತ್ತವೆ. ತನ್ನನ್ನು ಮದುವೆಯಾಗಲು ಇಷ್ಟವಿಲ್ಲವೆಂದು ಮನದಲ್ಲಿ ಸಾವಿರ ಬಾಂಬುಗಳನ್ನು ಸಿಡಿಸಿ, ತನ್ನನ್ನು ಅರೆ ಹುಚ್ಚಿಯನ್ನಾಗಿ

ಮಾಡಿದ ಹುಡುಗನ ಭೇಟಿಯಾಗುತ್ತದೆ. ತನಗೆ ಕಾಡಿದ ಪ್ರಶ್ನೆಗಳಿಗೆ ಉತ್ತರ ಕೇಳುತ್ತಾಳೆ. ಅವಳಿಗೆ ತಿಳಿಯುವ ಸತ್ಯ ನಿಜಕ್ಕೂ ದಿಗ್ಭ್ರಮೆ ಹುಟ್ಟಿಸುತ್ತದೆ. ತಾನು ಮನಸಾರೆ ಪ್ರೀತಿಸಿದ ಹುಡುಗನಿಗೆ ಕೇವಲ ಒಂದು ಹೆಣ್ಣಿನ ಜೊತೆ ಬೇಕಾಗಿತ್ತು. ಅಷ್ಟೇ ಅದಕ್ಕೆ ಪ್ರೀತಿ ಪ್ರೇಮ ಅಂತ ಹೆಸರಿಟ್ಟು ಮದುವೆಯಾಗುವ ಅವಶ್ಯಕತೆ ಅವನಿಗಿರಲಿಲ್ಲ. ಅವಳನ್ನು ಕೇವಲ ಒಂದು ದೇಹವಾಗಿ ಮಾತ್ರ ನೋಡಿದ್ದ, ಮನಸ್ಸಾಗಿ ಅಲ್ಲ ಎಂದು ತಿಳಿಯುತ್ತದೆ. ತನಗೆ ಗೊತ್ತಾದ ಈ ಸತ್ಯಕ್ಕೆ ತಾನು ಎಷ್ಟೇ ದುಃಖಪಟ್ಟರು ಯಾವುದೇ ಪ್ರಯೋಜನವಿಲ್ಲವೆಂದು ಅಂದುಕೊಂಡು ದುಃಖ ಪಡುವುದಿಲ್ಲ. ಬದಲಿಗೆ ತನಗೆ ದುಃಖ ನೀಡಿದ ಅವನಿಗೆ ದುಃಖಿಯನ್ನಾಗಿ ಮಾಡಬೇಕು. ಅಂತಹ ಸಂದರ್ಭಗಳನ್ನು ತರಬೇಕು ತಾನು ಯಾವ ರೀತಿಯಾಗಿ ನೋವು ಅನುಭವಿಸಿದ್ದೇನೋ, ಅದೇ ರೀತಿಯಾಗಿ ಅವನು ನೋವು ಅನುಭವಿಸಬೇಕೆಂದು ಬಯಸುತ್ತಾಳೆ. ಅಂತಹ ಅವಕಾಶಕ್ಕಾಗಿ ಕಾದಿದ್ದ ಅಪ್ನಿಗೆ ಅಂತಹ ಒಂದು ಅವಕಾಶ ಬಂದೊದಗುತ್ತದೆ.

ತಾನು ಪ್ರೀತಿಸಿದ ಹುಡುಗ ಇನ್ನೊಂದು ಹುಡುಗಿಯನ್ನು ಪ್ರೀತಿಸುತ್ತಿರುವ ವಿಷಯ ತಿಳಿಯುತ್ತದೆ. ಅವರಿಬ್ಬರೊಂದಿಗೆ ಸ್ನೇಹದಿಂದ ಇರುತ್ತಲೇ ಅವರಿಬ್ಬರ ಮಧ್ಯೆ ಗೊಂದಲಗಳು, ಚಿಕ್ಕ ಪುಟ್ಟ ಸಂಶಯಗಳು ಹುಟ್ಟುವಂತೆ ಮಾಡುತ್ತಾಳೆ. ಆಗ ಅವರಿಬ್ಬರಲ್ಲಿ ಸಣ್ಣದಾಗಿ ಅಭದ್ರತೆ ಕಾಡಲು ಶುರುವಾಗುತ್ತದೆ. ಈ ಅಭದ್ರತೆಯಿಂದ ಶೀತಲ ಸಮರಗಳು ಆರಂಭವಾಗಿ ಮುಂದೆ ದೊಡ್ಡ ಜಗಳಕ್ಕೆ ತಿರುಗುತ್ತದೆ. ಕೆಲವು ತಪ್ಪು ಗ್ರಹಿಕೆಗಳನ್ನು, ಸೃಷ್ಟಿಸಿ, ಅವರಿಬ್ಬರ ಮಧ್ಯ ಇನ್ನಷ್ಟು ಬಿರುಕು ಮೂಡಿಸುತ್ತಾಳೆ. ಇದರ ಫಲವಾಗಿ ಆ ಹುಡುಗಿ ಅವನ್ನು ಬಿಟ್ಟು ಹೋಗುತ್ತಾಳೆ. ಆಗ ಅಪ್ನಿಯ ಗೆಳೆಯ ಮತ್ತೆ ಒಂಟಿಯಾಗುತ್ತಾನೆ. ತಾನು ಮನಸಾರೆ ಪ್ರೀತಿಮಾಡಿದ ಹುಡುಗಿ ಹೀಗೆ ಮೋಸ ಮಾಡಿ ಹೋದಳಲ್ಲಾ ಎಂದು ಅಪ್ನಿಯ ಎದುರು ತನ್ನ ದುಃಖ ತೋಡಿಕೊಳ್ಳುತ್ತಾನೆ. ತಾನು ಪ್ರೀತಿಸಿದ ಹುಡುಗ ಮತ್ತೆ ಬಂದು ಅಪ್ನಿಯ ಪ್ರೀತಿಗೆ ಹಂಬಲಿಸುತ್ತಾನೆ. ಆಗ ಅಪ್ನಿ ತನ್ನ ಪ್ರೀತಿ ಬಹಳ ಅಮೂಲ್ಯವಾದದು ಆ ಪ್ರೀತಿ ಪಡೆಯಲು ಯೋಗ್ಯತೆ ಇರಬೇಕು. ಅದು ನಿನ್ನಲ್ಲಿ ಇಲ್ಲ ಅದನ್ನ ನೀನು ಕಳೆದುಕೊಂಡಿದ್ದಿಯಾ ಎಂದು ಹೇಳಿ ಹೊರನಡೆಯುತ್ತಾಳೆ. ತಾನು ಪ್ರೀತಿಸುತ್ತಿದ್ದ ಹುಡುಗಿ ನನಗೆ ಕೈಕೊಟ್ಟು ಹೋದಾಗ ನನಗೆ ನಿಜವಾದ ಪ್ರೀತಿ ಅಂದರೇನು, ಪ್ರೀತಿಸಿದವರು ಕೈಕೊಟ್ಟಾಗ ಅನುಭವಿಸುವ ದುಃಖ ಎಂತಹದು ಎಂದು ನನಗೆ ಈಗ ಅರಿವಾಯಿತು ಎಂದು ತಾನು ದುಃಖ ಪಡುತ್ತಾನೆ. ಆಗ ಅಪ್ನಿಗೂ ಇದೇ ರೀತಿಯಾಗಿ ದುಃಖ ಆಗಿರಬೇಕಲ್ಲ ಎಂದು ತಿಳಿದು ನೊಂದುಕೊಳ್ಳುತ್ತಾನೆ. ತನಗೆ ಸರಿಯಾದ ಶಿಕ್ಷೆಯಾಗಿದೆ ಎಂದು ಎದ್ದು ಹೋಗುತ್ತಾನೆ.

ಇನ್ನು ಲಕ್ಷ್ಮಿಯ ಜೀವನದಲ್ಲಿ ಕೂಡಾ ಒಬ್ಬ ಹುಡುಗನ ಆಗಮನವಾಗುತ್ತದೆ. ಅವನಿಗೂ ನಾಟಕಗಳೆಂದರೇ ಹುಚ್ಚು, ಅವನೇ ಒಂದು ಸ್ವತಂತ್ರವಾದ ಸಿನೆಮಾ ಮಾಡಬೇಕೆಂಬುದು ಅವನ ಆಸೆಯಾಗಿರುತ್ತದೆ. ಆದರೆ ಅವನಲ್ಲಿ ಅದಕ್ಕೆ ಬೇಕಾಗುವಷ್ಟು ದುಡ್ಡು ಇರುವುದಿಲ್ಲ. ಒಂದು ವೇಳೆ ಆ ದುಡ್ಡು ಏನಾದರು ಹೊಂದಾಣಿಕೆಯಾದರೆ, ಒಂದು ಒಳ್ಳೆಯ ಅವಕಾಶ ಸಿಕ್ಕರೆ ತಾನು ನಿರ್ದೇಶನ ಮಾಡುತ್ತೇನೆ. ನಿನಗೆ ನಾಯಕಿಯನ್ನಾಗಿ ಮಾಡುತ್ತೇನೆಂದು

ಹೇಳುತ್ತಾನೆ. ಇದೆ ಸಮಯಕ್ಕೇ ಸರಿಯಾಗಿ ಅವನಿಗೆ ಒಂದು ಅವಕಾಶ ಸಿಗುತ್ತದೆ. ಆದರೆ ಅದಕ್ಕೆ ಅವನು ದುಡ್ಡು ಹೊಂದಿಸಬೇಕಾಗುತ್ತದೆ. ಅಷ್ಟೊಂದು ದುಡ್ಡು ತನ್ನಲ್ಲಿರುವುದಿಲ್ಲ, ಅದಕ್ಕಾಗಿ ಲಕ್ಷ್ಮೀಗೆ ಸಹಾಯ ಮಾಡುವಂತೆ ಕೇಳುತ್ತಾನೆ. ಒಂದು ವೇಳೆ ಸಹಾಯ ಮಾಡಿದರೆ ಅವಳನ್ನೇ ಚಿತ್ರದಲ್ಲಿ ನಾಯಕಿಯನ್ನಾಗಿ ಮಾಡುವುದಾಗಿ ಹೇಳುತ್ತಾನೆ. ಲಕ್ಷ್ಮೀಯ ಅಭಿನಯಿಸುವ ಆಸೆಗೆ ಈಗ ಕಾಲ ಕೂಡಿಬಂದಿದೆ ಎಂದು ತಿಳಿದುಕೊಂಡು ದುಡ್ಡಿನ ವ್ಯವಸ್ಥೆ ಮಾಡಲು ಮುಂದಾಗುತ್ತಾಳೆ. ಆಗ ಅವಳ ನೆನಪಿಗೆ ಬರುವುದೇ ತನ್ನ ಸೋದರಮಾವ. ಅವನಿಗೆ ತನ್ನ ಕನಸು, ಆಸೆಯನ್ನು ಹೇಳುತ್ತಾಳೆ, ಅದನ್ನು ಪೂರೈಸಲು ದುಡ್ಡು ಅವಶ್ಯಕ ವಾಗಿರುವುದನ್ನು ಹೇಳುತ್ತಾಳೆ. ಮುಂದೇ ಲಕ್ಷ್ಮೀಯನ್ನು ಮದುವೆಯಾಗಬೇಕೆಂದು ಕನಸು ಕಂಡವನಿಗೆ ಲಕ್ಷ್ಮೀ ಹೇಳುವ ಮಾತನ್ನು ತಳ್ಳಿಹಾಕಲು ಆಗದಂತಹ ಪರಿಸ್ಥಿತಿ ಎದುರಾಗುತ್ತದೆ. ಆಗ ನಮ್ಮ ಲಕ್ಷ್ಮೀಗೆ ಒಳ್ಳೆಯದಾಗುತ್ತೆ ಅಂದ ಮೇಲೆ ನಾನು ಏನು ಬೇಕಾದರೂ ಮಾಡಲು ಸಿದ್ಧನಿರುವುದಾಗಿ ಹೇಳುತ್ತಾನೆ. ದುಡ್ಡು ಹೊಂದಿಸಿ ತಂದು ಕೊಡುತ್ತಾನೆ. ಆದರೆ ಲಕ್ಷ್ಮೀ ನಂಬಿದ ಹುಡುಗ ಮಾತ್ರ ಅವಳಿಗೆ ನಂಬಿಸಿ ಮೋಸಮಾಡುತ್ತಾನೆ. ಕಾರಣ ಅವನಿಗೆ ಒಂದು ಸಿನಿಮಾದಲ್ಲಿ ದೊಡ್ಡ ಅವಕಾಶ ಸಿಕ್ಕಿದ್ದು, ಅಲ್ಲಿ ನಿಷ್ಠೆಯಿಂದ ಕೆಲಸ ಮಾಡಿಕೊಂಡು ಹೋಗಬೇಕು ಮತ್ತು ತನ್ನ ಭವಿಷ್ಯವನ್ನು ಭದ್ರಪಡಿಸಿಕೊಳ್ಳಬೇಕೆಂದು ಹೇಳುತ್ತಾನೆ. ಅದಕ್ಕೆ ತನ್ನನ್ನು ಇಲ್ಲಿಗೆ ಮರೆತು ಬಿಡಬೇಕೆಂದು ಹೇಳಿ ಹೋಗುತ್ತಾನೆ. ಲಕ್ಷ್ಮೀ ಕಟ್ಟಿದ ಕನಸಿನ ಗೋಪುರ ಒಂದೇ ಸಲಕ್ಕೆ ನೆಲ ಸಮವಾಗಿ ಬಿಡುತ್ತದೆ. ಈ ಸಂದರ್ಭದಲ್ಲಿ ಲಕ್ಷ್ಮೀಯ ಬದುಕು ಅತಂತ್ರವಾಗುತ್ತದೆ. ಇದು ಅವಲಕ್ಕಿ ಪವಲಕ್ಕಿ ಧಾರಾವಾಹಿಯ ಒಟ್ಟು ಕಥೆಯ ಸಾರಾಂಶ.

ಈ ಧಾರಾವಾಹಿ ಒಂದು ಭಿನ್ನ ದೃಷ್ಟಿಕೋನ ಹೊಂದಿ ಪ್ರಸಾರವಾದಂತಹ ಧಾರಾವಾಹಿ ಯಾಗಿತ್ತು. ಆದರೆ ಈ ಧಾರಾವಾಹಿ ಅರ್ಧದಲ್ಲಿಯೇ ಪ್ರಸಾರಾವಾಗುವುದು ನಿಂತು ಹೋಗಿರುವುದರಿಂದ ಇದಿಷ್ಟೇ ಕಥೆಯನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ವಿಶ್ಲೇಷಣೆ

ಈ ಕಥೆಯು ಹಲವು ತಿರುವುಗಳನ್ನು ಪಡೆಯುತ್ತದೆ. ಪ್ರತಿಯೊಂದು ಸಂಚಿಕೆಯು ಕುತೂಹಲಗಳಿಂದ ಪಾರಂಭವಾಗಿ ಕುತೂಹಲವನ್ನಿಟ್ಟು ಮುಕ್ತಾಯಗೊಳ್ಳುತ್ತಿದೆ. ಧಾರಾವಾಹಿಯ ಒಟ್ಟು ವಿಶ್ಲೇಷಣೆಯನ್ನು ಮಾಡುತ್ತಾ ಹೋದರೆ, ಲಿಂಗಸಮಾನತೆಯ ಅಂಶಗಳನ್ನು ಈ ಧಾರಾವಾಹಿಯ ಕೆಲವೊಂದು ಕಡೆಗಳಲ್ಲಿ ಚಿತ್ರಿಸಿದರೆ, ಕೆಲವೊಂದು ಕಡೆ ಲಿಂಗತಾರತಮ್ಯವನ್ನು ಮಾಡಲಾಗಿದೆ. ಅದಕ್ಕೆ ಉದಾಹರಣೆಯೆಂದರೆ ಲಕ್ಷ್ಮ್ಯಾ ಮತ್ತು ಆಕೆಯ ಅಣ್ಣನ ನಡುವೆ ನಡೆಯುವ ತಾರತಮ್ಯ ಅಣ್ಣನಾದವ ಏನೇ ಮಾಡಿದರೂ ಅನುಸರಿಸಿಕೊಂಡು ಹೋಗಬೇಕೆಂದು ತಂದೆ ಮಗಳಿಗೆ ಹೇಳುತ್ತಾನೆ. ಆದರೆ ಇಬ್ಬರಿಗೂ ಸಮಾನ ಹಕ್ಕು ಇದೆ ಎಂಬುದನ್ನು ಮರೆತು ಬಿಡುತ್ತಾನೆ. ಪ್ರತಿಷ್ಠಿತ ಕುಟುಂಬದಲ್ಲಿ ನಡೆಯುವ ದಿನನಿತ್ಯದ ಜಂಜಾಟಗಳು, ಮಾನಸಿಕ ನೆಮ್ಮದಿಗಾಗಿ ನಡೆಯುವ ಹೊಯ್ದಾಟಗಳ ಚಿತ್ರಣ ಇಲ್ಲಿದೆ.

ನಮ್ಮ ಸಮಾಜದ ಪ್ರಸ್ತುತ ವಿದ್ಯಾಮಾನಗಳ ಕುರಿತು ಸಾಕಷ್ಟು ವಿಷಯಗಳನ್ನು ಕಥೆಯಲ್ಲಿ ಚಿತ್ರಿಸಲಾಗಿದೆ. ಪ್ರತಿಯೊಂದು ಪಾತ್ರವು ಪ್ರೀತಿ, ವಿಶ್ವಾಸ, ನೆಮ್ಮದಿ, ಗೌರವ ಬಯಸುತ್ತದೆ. ಅದನ್ನು ಪಡೆಯಲು ಎಲ್ಲೆಲ್ಲೋ ತಡಕಾಡುತ್ತದೆ. ಜೀವನ ಎನ್ನುವುದು ಕಷ್ಟಗಳ ಸರಮಾಲೆ ಎಂಬುದನ್ನು ಪ್ರತಿಯೊಂದು ಪಾತ್ರದಲ್ಲಿಯೂ ಕಟ್ಟಿಕೊಡಲಾಗಿದೆ.

ಸ್ಥಿರ ಮಾದರಿಯ ಪಾತ್ರಗಳಾದ ಹೆಂಡತಿ, ತಾಯಿ, ಮಗಳು, ಪ್ರೇಯಸಿ ಇಂಥ ಸಂಬಂಧಗಳಲ್ಲಿಯೇ ಕಟ್ಟಿಕೊಡಲಾಗಿದೆ. ಪವಿತ್ರಾಳ ಪಾತ್ರ ಉದ್ಯೋಗಸ್ಥೆಯಾಗಿ ಕಟ್ಟಿಕೊಟ್ಟರೂ ಸಹ ಅವಳು ತಾಯಿಯಾಗಿ ಒಬ್ಬನ ಹೆಂಡತಿಯಾಗಿ ಮಾತ್ರ ಗುರ್ತಿಸಿಕೊಳ್ಳುತ್ತಾಳೆ. ಅವಳಿಗೆ ಸ್ವಂತ ಬದುಕನ್ನು ಕಟ್ಟುವ ತವಕವಿದ್ದರೂ ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ನೈತಿಕತೆಯಲ್ಲಿ ಕಟ್ಟಿ ಹಾಕಲಾಗಿದೆ. ಗಂಡನಿಂದ ವಿಚ್ಛೇದನ ಪಡೆದರು ಸಹ ಅವಳಿಗೆ ಅವನ ಹಿಂಸೆ ನಿಲ್ಲುವುದಿಲ್ಲ. ಮತ್ತೆ ಮತ್ತೆ ಅಸಹಾಯಕಳಾಗಿ ನಿಲ್ಲುತ್ತಾಳೆ. ಹೆಣ್ಣಾದವಳು ತಾಯಿ ಮತ್ತು ಹೆಂಡತಿ ಈ ಪಾತ್ರಗಳ ನಿರ್ವಹಣೆಯಲ್ಲಿಯೇ ಸಾರ್ಥಕತೆಯನ್ನು ಕಾಣಬೇಕು ಅಂದಾಗಲೇ ಅವಳಿಗೆ ಮರ್ಯಾದೆ, ಘನತೆ, ಗೌರವ ಎಲ್ಲ ಸಿಗುತ್ತದೆ ಎಂಬುವುದು ಪವಿತ್ರಾಳ ಗಂಡನ ಧೋರಣೆ.

ಇಲ್ಲಿ ಲಕ್ಷ್ಮ್ಯಾಳ ತಾಯಿಯ ಪಾತ್ರವು ಕೂಡ ಪಿತೃಪ್ರಧಾನ ವ್ಯವಸ್ಥೆಯ ಕಂಬಂಧ ಬಾಹುಗಳಿಗೆ ಹೇಗೆ ಬಲಿಯಾಗುತ್ತದೆ ಎಂಬುವುದನ್ನು ತೋರಿಸಲಾಗಿದೆ. ಒಂದು ಅಸಹಾಯಕ ಮುಗ್ಧ ಹೆಣ್ಣಿಗೆ ತನ್ನ ಮಗನಿಂದ ಅನ್ಯಾಯವಾಗಿದೆ ಎಂದು ಗೊತ್ತಿದ್ದರೂ ಸಹ ಗಂಡ ಮತ್ತು ಮಗನ ಮರ್ಯಾದೆ ಉಳಿಸಲು ಸುಳ್ಳಿನ ಆಸರೆ ಪಡೆಯುತ್ತಾಳೆ. ಇಲ್ಲಿ ಗಂಡ ಮತ್ತು ಮಗನನ್ನು ವಿರೋಧಿಸುವ ಶಕ್ತಿ ಅವಳಲ್ಲಿ ಇರದಂತೆ ತೋರಿಸುತ್ತಾರೆ. ಸಾಂಪ್ರಾದಾಯಿಕ ಪಾತ್ರ ನಿರ್ವಹಣೆ ಹೆಣ್ಣಿಗೆ ಶ್ರೇಷ್ಠವೆಂಬ ಅಂಶ ಹೇಳಲಾಗುತ್ತದೆ, ಆದರೆ ಲಕ್ಷ್ಮ್ಯಾಳ ಪ್ರಶ್ನೆಗಳಿಗೆ ಮೂಕ ವಿಸ್ಮಿತಳಾಗಿ ಕೊನೆಗೆ ಹೆಣ್ಣಿನ ಪರವಾಗಿ ನಿಲ್ಲುವ ಮೂಲಕ ಹೆಣ್ಣಿಗೆ ಮೊಸ ಆಗದಂತೆ ಚಿತ್ರಿಸುತ್ತಾರೆ. ಇಲ್ಲಿ ಹೆಣ್ಣು ಗಂಡಿನ ಪಾರಮ್ಯವನ್ನು ಒಪ್ಪಿಕೊಳ್ಳಬೇಕೆಂಬ ಅಲಿಖಿತ ನಿಯಮವನ್ನು ಪವಿತ್ರ ಮತ್ತು ಲಕ್ಷ್ಮ್ಯಾಳ ತಾಯಿಯ ಪಾತ್ರದಲ್ಲಿ ತೋರಿಸಲಾಗಿದೆ.

ಧಾರಾವಾಹಿಯಲ್ಲಿ ಅತ್ತೆಯ ಪಾತ್ರವನ್ನು ಒಂದು ಕಡೆ ಸಕರಾತ್ಮಕವಾಗಿ ಚಿತ್ರಿಸುತ್ತಾರೆ. ಅದು ಪವಿತ್ರಾಳ ಅತ್ತೆ ರೂಪದಲ್ಲಿ. ತನ್ನ ಮಗ ತನ್ನ ಸೊಸೆಗೆ ಕೊಡುವ ಹಿಂಸೆಯನ್ನು ವಿರೋಧಿಸುತ್ತಾಳೆ, ಮಗನ ಪರವಾಗಿ ಮಾತನಾಡದೆ ಸೊಸೆಯನ್ನು ಎತ್ತಿಹಿಡಿಯುತ್ತಾಳೆ. ಇಲ್ಲಿ ಅತ್ತೆ ಸೊಸೆಯರ ಸಂಬಂಧದಲ್ಲಿ ಸಾಂಪ್ರದಾಯಿಕವಾಗಿ ಬೆಳೆದುಬಂದ ಜಗಳ ವೈಮನಸ್ಸು, ಚುಚ್ಚುಮಾತು, ಕೊಂಕಿನ ನುಡಿಗಳಿಗೆ ಆಸ್ಪದವಿರುವುದಿಲ್ಲ. ಅತ್ತೆ ಸೊಸೆ ಸಂಬಂಧವನ್ನು ಆರೋಗ್ಯವಂತವಾಗಿ ಚಿತ್ರಿಸಿದ್ದಾರೆ. ಇದೇ ಧಾರಾವಾಹಿಯಲ್ಲಿ ಅತ್ತೆಯ ಪಾತ್ರವನ್ನು ನಕಾರಾತ್ಮಕ ಧೋರಣೆಯಲ್ಲಿ ಚಿತ್ರಿಸಿದ್ದಾರೆ. ಪಿ.ಜಿ. ನಡೆಸುತ್ತಿರುವ ಅಜ್ಜಿಯು ತನ್ನ ಮಗನನ್ನು ನೋಡಲು ವಿದೇಶಕ್ಕೆ ಹೋಗಲು ಮಗನಿಂದ ಆಹ್ವಾನ ಬರುತ್ತದೆ. ತನಗೆ ಆಗುವ ಸಂತೋಷವನ್ನು

ಎಲ್ಲರೊಂದಿಗೆ ಹಂಚಿಕೊಂಡು ಸಂಭ್ರಮಿಸಿರುತ್ತಾಳೆ. ಮಗನಿಗೆ ಇಷ್ಟವಾಗುವ ತಿಂಡಿ ತಿನಿಸುಗಳನ್ನು ಬಹಳ ಪ್ರೀತಿಯಿಂದ ತಯಾರಿಸಿರುತ್ತಾಳೆ. ಇನ್ನೇನು ಹೊರಡುವ ದಿನ ಬಂದೇ ಬಿಡುತ್ತದೆ. ಆಗ ಮಗನಿಂದ ಫೋನ್ ಬರುತ್ತದೆ. ತನಗೆ ಕೆಲಸಗಳಿದ್ದು ಈಗ ಬರುವುದು ಬೇಡ ಇನ್ನೊಮ್ಮೆ ಹೇಳುತ್ತೇನೆ. ಆವಾಗ ಬರುವಿರಂತೆ ಎಂದು ಹೇಳಿ ಫೋನು ಇಟ್ಟು ಬಿಡುತ್ತಾನೆ. ಮಗನ ಮಾತು ಕೇಳಿದ ತಂದೆ ತಾಯಿಯರಿಗೆ ಇದ್ದ ಸಂಭ್ರಮವೆಲ್ಲಾ ಒಂದೇ ಕ್ಷಣಕ್ಕೆ ಕರಗಿ ನೀರಾಗಿ ಹೋಗುತ್ತದೆ. ಆಗ ಅಜ್ಜಿ ತನ್ನ ಮಗ ಒಳ್ಳೆಯವನೇ ಆದರೆ ಸೊಸೆ ಚೆನ್ನಾಗಿಲ್ಲ ಅವನನ್ನು ವಶೀಕರಣಮಾಡಿದ್ದಾಳೆ ಎಂದು ಸೊಸೆಯ ಮೇಲೆ ಪೂರ್ವಾಪರ ತಿಳಿಯದೇ ಆರೋಪ ಮಾಡುತ್ತಾಳೆ. ಅದಕ್ಕೆ ಲಕ್ಷೀ "ಅಲ್ಲ ಅಜ್ಜಿ ಅಳಿಯ ಮಗಳ ವಶದಲ್ಲಿದ್ದರೇ ಸಂತೋಷಪಡುತ್ತೀರಿ ಆದರೆ ಮಗ ಸೊಸೆಯ ಹಿಡಿತದಲ್ಲಿರುವುದು ವಶೀಕರಣ ಅಂತ ಯಾಕೆ ಕರೆಯುತ್ತೀರಿ ಅಂತ ಕೇಳುತ್ತಾಳೆ". ಅದಕ್ಕೆ ಅಳಿಯಂದಿರು ಮಗಳ ಮನಸಿಗೆ ನೋವು ಮಾಡುವುದಿಲ್ಲ. ಹಾಗಾಗಿ ಅಲ್ಲಿ ಹೋಗಲು ತೊಂದರೆ ಇಲ್ಲ, ಆದರೆ ಮಗನದೆ ತೊಂದರೆ ಯಾಕೆಂದರೆ ಅವಳಿದ್ದಾಳಲ್ಲ ಮಾಯಾಂಗಿಣಿ ನನ್ನ ಮಗನನ್ನು ತನ್ನ ವಶೀಕರಣದಲ್ಲಿಟ್ಟಿದ್ದಾಳೆ ಎಂದು ತನ್ನ ಮಗನ ಕೆಲಸದ ಒತ್ತಡಗಳೇನಿದೆಯೋ ಎಂಬುವುದರ ಬಗ್ಗೆ ಆಲೋಚನೆ ಮಾಡದೇ ನೇರವಾಗಿ ಸೊಸೆಯದೇ ತಪ್ಪೆಂದು ದೂಷಿಸುತ್ತಾಳೆ. ಇಲ್ಲಿ ಅತ್ತೆಯ ಪಾತ್ರವನ್ನು ನಕಾರಾತ್ಮಕ ಧೋರಣೆಯಲ್ಲಿ ಚಿತ್ರಿಸಿದ್ದಾರೆ.

ಈ ಕಥೆಯಲ್ಲಿ ಬರುವ ನಾಲ್ಕು ಪಾತ್ರಗಳಲ್ಲೂ ಪುರುಷ ಪ್ರಧಾನ ವ್ಯವಸ್ಥೆಯ ಪಡಿಯಚ್ಚಾಗಿ ಅದರ ಕಠೋರತೆಗೆ ಒಳಗಾಗಿ ನೋವು ವ್ಯಥೆ ಪಡುವಂತಹ ಪಾತ್ರಗಳಿವೆ. ಪವಿತ್ರಾಳ ಪಾತ್ರ ಒಬ್ಬ ವಿಚ್ಛೇದಿತೆಯ ಮುಂದಿನ ಬದುಕಿನಲ್ಲಿ ಆಗುವ ಏರುಪೇರುಗಳು ಸಮಾಜ, ಕುಟುಂಬ ಅವಳನ್ನು ನಡೆಸಿಕೊಳ್ಳುವ ರೀತಿ; ಆ ನೋವು ಅನುಭವಿಸಲು ಆಗದ ಮನಸ್ಥಿತಿ ಎಲ್ಲವನ್ನೂ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಪವಿತ್ರಾಳ ಪಾತ್ರವಾಗಿರಬಹುದು, ಅವ್ವಿ, ಲಕ್ಷ್ಮಿಯ ಪಾತ್ರ ಆಗಿರಬಹುದು, ಲಕ್ಷ್ಮ್ಯಳ ತಾಯಿಯ ಪಾತ್ರವಾಗಿರಬಹುದು. ಈ ಎಲ್ಲಾ ಪಾತ್ರಗಳು ಲಿಂಗತಾರತಮ್ಯಕ್ಕೆ ಒಳಗಾಗಿ ವ್ಯವಸ್ಥೆ ಕಟ್ಟಿಕೊಟ್ಟಿರುವ ಮೌಲ್ಯಗಳನ್ನು ಒಪ್ಪಿಕೊಳ್ಳುವಂತಹ ಪರಿಸ್ಥಿತಿಗೆ ಅವರು ಒಳಗಾಗಬೇಕಾಗುತ್ತದೆ. ಇಲ್ಲಿ ಈ ಪಾತ್ರಗಳು ಎಲ್ಲಿಯೂ ವಿರೋಧ ಮಾಡುವುದಿಲ್ಲ. ವ್ಯವಸ್ಥೆಯ ವಿರುದ್ಧ ನಿಲ್ಲುವ ಮನಸ್ಥಿತಿಯಲ್ಲಿ ಯಾವ ಪಾತ್ರಗಳನ್ನು ತೋರಿಸುವುದಿಲ್ಲ. ಕಥೆಯ ಪ್ರತಿಯೊಂದು ಹಂತದಲ್ಲಿಯೂ ಬಂಡಾಯ ಏಳುವಂತಹ, ವ್ಯವಸ್ಥೆಯನ್ನು ವಿರೋಧಿಸುವಂತಹ ಪಾತ್ರ ಕೇವಲ ಲಕ್ಷ್ಮ್ಯಳ ಪಾತ್ರದಲ್ಲಿ ಚಿತ್ರಸಲಾಗಿದೆ. ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಮನಸ್ಥಿತಿಯನ್ನು ತೋರಿಸಿದ್ದಾರೆ. ಕೆಲವೊಂದು ಕಡೆ ಅವ್ವಿಯ ಪಾತ್ರ ಬಂಡಾಯ ಏಳುತ್ತದೆ. ಆದರೆ ಮತ್ತೆ ವ್ಯವಸ್ಥೆಯ ಕರಾಳತೆಯಿಂದ ಸೋಲುತ್ತದೆ. ಇಂತಹ ಪಾತ್ರಗಳ ಚಿತ್ರಣ ಈ ಧಾರಾವಾಹಿ ನೀಡುತ್ತದೆ. "ಯಾವುದೇ ಚಲನಚಿತ್ರದಲ್ಲಾಗಲಿ ಧಾರಾವಾಹಿಗಳಲ್ಲಾಗಲಿ ಮಹಿಳಾ ಪಾತ್ರಗಳಿರುವುದು ಸಹಜ. ಆದರೆ ಆ ಪಾತ್ರಗಳನ್ನು ಎಷ್ಟರಮಟ್ಟಿಗೆ ಬಲಿಷ್ಟವಾಗಿ ಕಟ್ಟಿಕೊಡುತ್ತಾರೆ ಎಂಬುವುದು ಮುಖ್ಯವಾಗುತ್ತದೆ.

ಮಹಿಳೆಯ ಸಾಂಪ್ರದಾಯಿಕ ಪಾತ್ರ ಚಿತ್ರಣವನ್ನು ಮುಂದುವರಿಸಿದರೆ ಮಹಿಳಾ ಪರವಾದಂತಹ ವಿಚಾರಗಳು ಸಮಾಜದಲ್ಲಿ ಹರಡುವುದು ಕಷ್ಟ ಸಾಧ್ಯ ಧೈರ್ಯ, ಸ್ವಾವಲಂಬನೆ, ಸ್ವಾಭಿಮಾನ, ಆತ್ಮವಿಶ್ವಾಸ, ಹೋರಾಟದ ಮನೋಭಾವ, ಹೊಂದಾಣಿಕೆಯನ್ನು ತಿರಸ್ಕರಿಸುವ ಎದೆಗಾರಿಕೆ ಲಿಂಗಸಮಾನತೆ ಇವೆ ಮೊದಲಾದ ಮೌಲ್ಯಗಳನ್ನು ಎತ್ತಿಹಿಡಿಯುವಂತಹ ಮಹಿಳಾ ಪಾತ್ರಗಳ ಹೆಚ್ಚಳ ವೀಕ್ಷಕರ ಮನಸ್ಸಿನ ಮೇಲೆ ಮಹಿಳೆಯರನ್ನು ಕುರಿತಂತೆ ಸಕರಾತ್ಮಕ ಚಿತ್ರಣವನ್ನು ಮೂಡಿಸುವುದಕ್ಕೆ ನೆರವಾಗುತ್ತದೆ".[೯] ಈ ದೆಸೆಯಲ್ಲಿ ಮಾಧ್ಯಮಗಳು ಮಹಿಳೆಯರ ವಿಚಾರದಲ್ಲಿ ನಕಾರಾತ್ಮಕ ಧೋರಣೆಗಳನ್ನೇ ಹೆಚ್ಚಾಗಿ ತಳೆದಿವೆ ಎನ್ನುವುದು ನಿಜವಾದರೂ ಮಹಿಳೆಯ ಪರ ಕಾಳಜಿಗಳನ್ನು ಬೆಳೆಸುವುದರಲ್ಲಿ ಮಾಧ್ಯಮಗಳು ವಹಿಸಬಹುದಾದ. ಪ್ರಮುಖ ಪಾತ್ರವನ್ನು ಕುರಿತಂತೆ ಯಾರು ಅನುಮಾನವನ್ನು ವ್ಯಕ್ತಪಡಿಸುವ ಹಾಗಿಲ್ಲ. ಮಹಿಳೆಯರ ವಿಚಾರದಲ್ಲಿ ಸಮಾಜದ ಧೋರಣೆಯನ್ನು ಬದಲಾಯಿಸುವುದರಲ್ಲಿ ಮಾಧ್ಯಮಗಳಿಗಿಂತ ಪ್ರಬಲ ಸಾಧನ ಬೇರೊಂದಿಲ್ಲ".[೫] ಯಾವುದೇ ಧಾರಾವಾಹಿಗಳಲ್ಲಾಗಲಿ ಕಾರ್ಯಕ್ರಮಗಳಲ್ಲಾಗಲಿ ಹೆಣ್ಣಿಗೆ ಸಾಂಪ್ರದಾಯಿಕ ಮಾದರಿಯಲ್ಲಿ ಕಟ್ಟಿಕೊಡುವ ಪಾತ್ರಗಳ ಬದಲು ಆಧುನಿಕ ಪಾತ್ರಗಳಲ್ಲಿಯೂ ಆಕೆಯನ್ನು ಕಟ್ಟಿಕೊಡುವುದರ ಜೊತೆಗೆ ದಕ್ಷ ಅಧಿಕಾರಿ, ಧೈರ್ಯವಂತೆ, ಸಬಲೆಯೆಂದು ಚಿತ್ರಿಸಿದರೆ ಸಮಾಜದಲ್ಲಿ ಲಿಂಗಸಮಾನತೆಯನ್ನು ತರಬಹುದು.

೩.೧.೩. ಲಕುಮಿ

ಕಥೆಯ ಸಾರಾಂಶ

ಲಕುಮಿ ಧಾರಾವಾಹಿ ಪ್ರತಿ ಸೋಮವಾರದಿಂದ ಶುಕ್ರವಾರದವರೆಗೂ ರಾತ್ರಿ ೯.೩೦ಕ್ಕೆ ಸುವರ್ಣವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಧಾರಾವಾಹಿಯು ರವಿ ಬಸಪ್ಪನದೊಡ್ಡಿ ಅವರ ನಿರ್ದೇಶನದಲ್ಲಿ ಮೂಡಿ ಬಂದ ಧಾರಾವಾಹಿ. ಕಥೆಯಲ್ಲಿ ಬಾಲ್ಯವಿವಾಹ ಮತ್ತು ಅದರಿಂದಾಗುವಂತಹ ದುಷ್ಪರಿಣಾಮಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹಳ್ಳಿಯ ಒಬ್ಬ ಮುಗ್ಧ ಹುಡುಗಿಯ ಬಾಳಲ್ಲಿ ಉತ್ತರಿಸಲಾಗದಂತಹ ಹಲವು ಪ್ರಶ್ನೆಗಳನ್ನು ಈ ಧಾರಾವಾಹಿ ಹುಟ್ಟುಹಾಕುತ್ತದೆ. ನಮ್ಮ ಸಮಾಜ ವ್ಯವಸ್ಥೆಯಲ್ಲಿರುವ ರೂಢಿಗಳು, ಸಂಪ್ರದಾಯಗಳು, ಆಚರಣೆಗಳು ಇಂದಿಗೂ ಕೂಡಾ ಅಲ್ಲಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣಬಹುದು. ಕೆಲವೊಂದು ಘಟನೆಗಳು ಕಣ್ಣಿಗೆ ಕಾಣಿಸಬಹುದು, ಕಿವಿಗೆ ಕೇಳಿಸಬಹುದು. ಉಳಿದಂತೆ ನಮ್ಮ ಅರಿವಿನ ಪರಿಧಿಗೆ ಬಾರದಿರುವಂತಹ ಅನೇಕ ಘಟನೆಗಳಿವೆ. ಅವುಗಳನ್ನು ಪ್ರಧಾನ ಧಾರೆಗೆ ತರುವ ಮೂಲಕ ವ್ಯವಸ್ಥೆಯ ಜೊತೆ ಮುಖಾಮುಖಿಯಾಗಿಸುವ ಪ್ರಯತ್ನ ಕೆಲವೊಂದು ಧಾರಾವಾಹಿಗಳು ಮಾಡುತ್ತಿವೆ. ಇಂತಹ ಕಥಾ ವಸ್ತುವನ್ನು ಆಯ್ದುಕೊಂಡು ಚಿತ್ರಿಸಿದಂತಹ ಧಾರಾವಾಹಿ "ಲಕುಮಿ". ಹೀಗೆ ಒಂದು ಹೊಸ ದಾರಿಗೆ ನಾಂದಿಯಾದಂತಹ ಲಕುಮಿ ಧಾರಾವಾಹಿಯ ಕೆಲವೊಂದು ಭಾಗಗಳ ಸೂಕ್ಷ್ಮವಾದ ನೋಟವನ್ನು ಇಲ್ಲಿ ವಿವರಿಸಲಾಗಿದೆ.

'ಲಕುಮಿ' ಒಬ್ಬ ಮುಗ್ಧ, ವಿದ್ಯಾವಂತ ಹಳ್ಳಿ ಹುಡುಗಿ, ಓದಿನಲ್ಲಿ ಸದಾ ಚುರುಕಾಗಿರುವ ಬಾಲೆ, ಇನ್ನೊಬ್ಬರ ಕಷ್ಟವನ್ನು ತನ್ನ ಕಷ್ಟವೆಂದು ಭಾವಿಸುವ, ಆ ಕಷ್ಟಗಳಿಗೆ ಪರಿಹಾರವನ್ನು ಕಂಡುಕೊಂಡು, ಕಷ್ಟದಿಂದ ಪಾರು ಮಾಡುವಂತಹ ಚಾಣಾಕ್ಷೆ. ತನ್ನ ಒಳ್ಳೆಯತನ, ಬುದ್ಧಿವಂತಿಕೆಯಿಂದ ಹಳ್ಳಿಯ ಜನರಿಗೆ ಬೇಕಾದಂತಹ ಹುಡುಗಿಯಾಗಿರುತ್ತಾಳೆ. ಇಂಥ ಹುಡುಗಿಯನ್ನು ಊರಿನವರೆಲ್ಲಾ ಕೊಂಡಾಡಿದರೆ, ಮನೆಯಲ್ಲಿ ತಂದೆಯಾದವನು ಮಾತ್ರ ಈ ವಿಚಾರಕ್ಕೆ ತದ್ವಿರುದ್ಧವಾಗಿರುತ್ತಾನೆ. ಲಕುಮಿಯ ತಂದೆ "ಹೆಣ್ಣೆಂದರೆ ಹುಣ್ಣು" ಎನ್ನುವ ಮಾತನ್ನು ಅಕ್ಷರಶಃ ಪಾಲಿಸುವವನಾಗಿರುತ್ತಾನೆ. ಹಾಗಾಗಿಯೇ ಲಕುಮಿಗೆ ಓದಿನಲ್ಲಿ ಆಸಕ್ತಿಯಿದ್ದರೂ ಆಕೆಯ ಓದಿಗೆ ತಿಲಾಂಜಲಿ ಹಾಕಿಸುತ್ತಾನೆ. ಹೆಣ್ಣು ಮಕ್ಕಳು ಇನ್ನೊಬ್ಬರ ಮನೆಯ ಸ್ವತ್ತು, ಹೆಚ್ಚಿಗೆ ಓದಿಸಿದರೆ ಗಂಡು ಸಿಗುವುದು ಕಷ್ಟ. ಹೆಣ್ಣು ಮಕ್ಕಳಿಗೆ ಓದಿಸಲು ದುಡ್ಡು ಹಾಕಬೇಕು, ನಂತರ ಮದುವೆಯ ಖರ್ಚು ಭರಿಸಬೇಕು. ಇಷ್ಟೆಲ್ಲ ಖರ್ಚುಗಳನ್ನು ನಾವೇ ಮಾಡಬೇಕು. ಅವಳು ಓದಿ ನಮ್ಮನೇನು ಸಾಕಬೇಕಿಲ್ಲ, ಅವಳಿಗೆ ಹೆಚ್ಚಿನ ಓದು ಅವಶ್ಯಕವಿಲ್ಲವೆಂದು ನಂಬಿರುತ್ತಾನೆ. ಇದು ಲಕುಮಿಯ ತಂದೆ ಕರಿನಿಂಗನ ಮನಸ್ಥಿತಿಯಾದರೆ, ಇದಕ್ಕೆ ವಿರುದ್ಧವಾದ ಮನಸ್ಥಿತಿ ಲಕುಮಿಯ ತಾಯಿ ನಂಜಿಯದಾಗಿರುತ್ತದೆ. ನಂಜಿ ಲಕುಮಿಯನ್ನು ಜೀವಕ್ಕಿಂತ ಹೆಚ್ಚು ಪ್ರೀತಿಸುತ್ತಿರುತ್ತಾಳೆ. ಮಗ ಮತ್ತು ಮಗಳನ್ನು ತನ್ನ ಜೀವದಂತೆ ನೋಡಿಕೊಳ್ಳುತ್ತಾಳೆ. ಇಬ್ಬರ ಮಧ್ಯೆ ಯಾವುದೇ ತಾರತಮ್ಯ ಮಾಡುವುದಿಲ್ಲ. ಮನೆಯಲ್ಲಿ ಬಡತನವಿದ್ದರೂ, ಜವಾಬ್ದಾರಿಯನ್ನರಿಯದ ಗಂಡನಿದ್ದರೂ ಎಲ್ಲವನ್ನೂ ಸಹಿಸಿಕೊಂಡು ಕ್ಷಮೆಯಾ ಧರಿತ್ರಿಯಂತೆ ತನ್ನ ಕರ್ತವ್ಯವನ್ನು ಮತ್ತು ಜವಾಬ್ದಾರಿಯನ್ನು ನಿಷ್ಠೆಯಿಂದ ಮಾಡಿಕೊಂಡು ಹೋಗುತ್ತಿರುತ್ತಾಳೆ. ಇದು ಲಕುಮಿಯ ಪುಟ್ಟ ಕುಟುಂಬದ ಕಥೆ. ಕಥೆಯು ಹೀಗೆ ಮುಂದುವರೆಯುತ್ತಿರಬೇಕಾದಾಗ ಲಕುಮಿಯ ಊರಿನವನೇ ಆದ ಪಾಪಣ್ಣನ ಪ್ರವೇಶವಾಗುತ್ತದೆ.

ಕಥೆಯು ಒಂದು ತಿರುವು ಪಡೆಯುವುದಕ್ಕೆ ಈ ಪಾಪಣ್ಣ ಕಾರಣನಾಗುತ್ತಾನೆ. ಪಾಪಣ್ಣ ಒಬ್ಬ ಮಧ್ಯ ವಯಸ್ಕ, ಸದಾ ರಾಜಕಾರಣಿಗಳ ಜೊತೆಗೆ ಓಡಾಡುತ್ತಿರುತ್ತಾನೆ. ತನಗೆ ಇಂತಿಂಥ ಮಂತ್ರಿಗಳ ಪರಿಚಯವಿದೆ, ನನ್ನ ಕಂಡರೆ ಅವರು ಗುರುತಿಸುತ್ತಾರೆ, ತುಂಬಾ ಪ್ರೀತಿಯಿಂದ ಕಾಣುತ್ತಾರೆ. ನನ್ನ ಯಾವುದೇ ಕೆಲಸ ಬಹುಬೇಗ ಮಾಡಿಕೊಡುತ್ತಾರೆ. ಎಂದು ಹಳ್ಳಿಗೆ ಬಂದಾಗಲೊಮ್ಮೆ ತನ್ನ ಬಗ್ಗೆ ಹೇಳಿಕೊಳ್ಳುತ್ತಿರುತ್ತಾನೆ. ಹೀಗಿರುವಾಗ ಒಂದು ದಿನ ಪಾಪಣ್ಣ ಬಂದು ಕರಿನಿಂಗನಿಗೆ ಒಂದು ವಿಷಯ ತಿಳಿಸುತ್ತಾನೆ. ಪಾಪಣ್ಣನ ಮಾತಿಗೆ ಕರಿನಿಂಗ ಹಿಂದೂ ಮುಂದೂ ಯೋಚಿಸದೇ ಒಪ್ಪಿಗೆಯನ್ನು ಕೊಟ್ಟು ಬಿಡುತ್ತಾನೆ.

ಆ ದಿನ ಕರಿನಿಂಗ ಒಪ್ಪಿಕೊಂಡಿರುವ ವಿಷಯ ಸಾಮಾನ್ಯ ವಿಷಯವಾಗಿರುವುದಿಲ್ಲ. ಬದಲಿಗೆ ತನ್ನ ಸ್ವಂತ ಮಗಳ ಮದುವೆಯ ವಿಷಯವಾಗಿರುತ್ತದೆ. ಕರಿನಿಂಗ ತನ್ನ ಮಗಳನ್ನು

ಶ್ರೀಮಂತ ರಾಜಕಾರಣಿ ದೇವಲಿಂಗಯ್ಯನವರ ಏಕೈಕ ಪುತ್ರ ಸೂರ್ಯನ ಕೈಯಿಂದ ತಾಳಿ ಕಟ್ಟಿಸಬೇಕೆಂದು ನಿಶ್ಚಯಿಸಿ ಬಂದಿರುತ್ತಾನೆ. ಇಲ್ಲಿಂದ ಕಥೆಯು ಹೊಸ ತಿರುವು ಪಡೆಯಲು ಕಾರಣವಾಗುತ್ತದೆ.

ಗೃಹಮಂತ್ರಿಯಾಗಿದ್ದ ದೇವಲಿಂಗಯ್ಯನವರ ಮಗ ಸೂರ್ಯನಿಗೆ ಒಂದು ಕನ್ಯೆ ಬೇಕಾಗಿರುತ್ತದೆ. ಅದು ಕೇವಲ ತಾಳಿಕಟ್ಟಲು ಮಾತ್ರ ಮುಂದೆ ಯಾವುದೇ ರೀತಿಯಿಂದಲೂ ತಮಗಾಗಲಿ ತಾಳಿ ಕಟ್ಟಿದ ಹುಡುಗಿಗಾಗಲಿ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಅಂತಹ ಹುಡುಗಿಯನ್ನು ತಂದು ತಾಳಿ ಕಟ್ಟಿಸಿದರೆ ಕೇಳಿದಷ್ಟು ಹಣ ಕೊಡುವುದಾಗಿ ಪಾಪಣ್ಣನಿಗೆ ಗೃಹ ಮಂತ್ರಿ ಹೇಳಿರುತ್ತಾರೆ. ಇದನ್ನೇ ಪಾಪಣ್ಣ ಕರಿನಿಂಗನಿಗೆ ತಿಳಿಸಿರುತ್ತಾನೆ. ಮೊದಲೇ ದುಡ್ಡೇಂದರೆ ಬಾಯಿ ಬಿಡುವಂತಹ ಪಾತ್ರದಲ್ಲಿ ಲಕುಮಿಯ ತಂದೆಯಿರುವುದರಿಂದ ದುಡ್ಡು ಎಂಬ ಶಬ್ದ ಕಿವಿಗೆ ಬಿದ್ದ ಮೇಲೆ ಹಿಂದೆ ಮುಂದೆ ನೋಡದೇ ಒಪ್ಪಿಕೊಳ್ಳುತ್ತಾನೆ. ಇದರೊಂದಿಗೆ ತನಗೆ ಮುಂಗಡವಾಗಿ ಹಣ ಕೊಡಬೇಕೆಂದು ಪಾಪಣ್ಣನಿಗೆ ಹೇಳುತ್ತಾನೆ. ಹೀಗೆ ಒಪ್ಪಂದವನ್ನು ಮಾಡಿಕೊಂಡು ಮನೆಗೆ ಹೋದ ಕರಿನಿಂಗನ ವ್ಯಕ್ತಿತ್ವದಲ್ಲಿ ಭಾರಿ ಬದಲಾವಣೆಗಳು ಕಂಡುಬರುತ್ತವೆ. ಮನೆಗೆ ಬಂದವನೆ ಲಕುಮಿಯನ್ನು ಕಂಡು ಬಹಳ ಪ್ರೀತಿಯಿಂದ ಮಾತನಾಡಿಸುತ್ತಾನೆ. ಹೆಚ್ಚಿನ ಕಾಳಜಿಯನ್ನು ತೋರಿಸುತ್ತಾನೆ. ಮಗಳನ್ನು ಕಂಡರೆ ಸದಾ ಸಿಡಿಯುತ್ತಿರುವ ಗಂಡ ಈ ಪರಿಯಾಗಿ ಬದಲಾಗಿದ್ದಾನೆ ಅಂದರೆ ಅಲ್ಲಿ ಯಾವುದೋ ಕಾಣದ ಮೋಸ ಇದ್ದಿರಬಹುದೆನೋ, ಇಲ್ಲಾ ಕರಿನಿಂಗನಿಗೆ ದುಡ್ಡಿನ ಆಸೆಯೇನಾದರೂ ಬಂದಿದೆಯಾ, ತನ್ನ ಮಗಳಿಂದ ಯಾವ ಕೆಲಸ ಆಗಬೇಕಾಗಿದೆಯೋ, ಅದಕ್ಕೆ ಇಷ್ಟೊಂದು ಪ್ರೀತಿ, ಕಾಳಜಿಯನ್ನು ತೋರಿಸುತ್ತಿದ್ದಾನೆ. ಈ ಪ್ರೀತಿ, ಕಾಳಜಿಯೆಲ್ಲಾ ನಾಟಕವೆಂದು ಮನದಲ್ಲೆ ಲೆಕ್ಕಾಚಾರ ಹಾಕುತ್ತಾಳೆ. ನಂಜಿಯ ಈ ಲೆಕ್ಕಾಚಾರ ನಿಜವಾಗಿರುತ್ತದೆ. ತಾನು ಬಯಸದೇ ಇರುವಂತಹ ಅನಾಹುತದ ಸುದ್ದಿಯೊಂದು ಅವಳು ಕೇಳಬೇಕಾಗಿ ಬರುತ್ತದೆ. ಏನೂ ಅರಿಯದ ತನ್ನ ಮಗಳಿಗೆ ದುಡ್ಡಿನ ಆಸೆಗೋಸ್ಕರ ಸ್ವಂತ ಮಗಳನ್ನೇ ಬಲಿಕೊಡುತ್ತಿರುವುದು, ಗಂಡನೊಂದಿಗೆ ತಾನು ಈ ಪಾಪ ಕೃತ್ಯದಲ್ಲಿ ಭಾಗಿಯಾಗುತ್ತಿದ್ದೇನಲ್ಲಾ ಎಂದು ವ್ಯಥೆ ಪಡುತ್ತಿರುತ್ತಾಳೆ. ಕರಿನಿಂಗ ಎಲ್ಲ ವಿಷಯವನ್ನು ವಿವರವಾಗಿ ನಂಜಿಗೆ ಹೇಳುತ್ತಾನೆ.

ಗೃಹಮಂತ್ರಿಯಾಗಿರುವ ದೇವಲಿಂಗಯ್ಯನವರ ಮಗನಿಗೆ ಜಾತಕದಲ್ಲಿ ಮೊದಲ ಹೆಂಡತಿಯ ಸಾವು ಇದೆ ಎಂದು ಜ್ಯೋತಿಷ್ಯರು ಹೇಳಿರುತ್ತಾರೆ. ದೇವಲಿಂಗಯ್ಯನವರ ಮಗ ಸೂರ್ಯ ಈಗಾಗಲೇ ಪೂರ್ವಿ ಎನ್ನುವ ಹುಡುಗಿಯನ್ನು ಪ್ರೀತಿ ಮಾಡುತ್ತಿದ್ದು, ಮದುವೆಯಾದರೆ ಅವಳ ಜೊತೆಯಲ್ಲೆ ಆಗಬೇಕು ಪೂರ್ವಿಯ ಜೊತೆ ಜೀವನಪೂರ್ತಿ ಬದುಕಬೇಕು, ಯಾವುದೇ ಕಾರಣಕ್ಕೂ ಆಕೆಯನ್ನು ಕಳೆದುಕೊಳ್ಳಲು ಇಷ್ಟವಿಲ್ಲ. ಅದಕ್ಕೆ ಏನಾದರು ಪರಿಹಾರವಿದ್ದರೆ ತಿಳಿಸಬೇಕೆಂದು ಜ್ಯೋತಿಷ್ಯದ ಮೊರೆಹೋಗುತ್ತಾರೆ. ಸೂರ್ಯನ ಈ ತಳಮಳ

ಸಂಕಟವನ್ನು ಅರಿಯುವ ಜ್ಯೋತಿಷಿಯು ಯಾವುದಾದರೂ ಒಬ್ಬ ಕನ್ಯೆಯ ಜೊತೆ ಸೂರ್ಯನ ಮದುವೆ ಮಾಡಿಸಿದರೆ ಅಲ್ಲಿಗೆ ಆ ಹುಡುಗಿಯೂ ಸೂರ್ಯನ ಮೊದಲ ಹೆಂಡತಿಯಾಗುತ್ತಾಳೆ. ಸೂರ್ಯನಿಗಿರುವ ದೋಷ ಆ ಹುಡುಗಿಯ ಮೇಲೆ ಹೋಗುತ್ತದೆ. ಮುಂದೆ ಅವಳು ಸಾವನ್ನಪ್ಪುತ್ತಾಳೆ. ಆಗ ಪೂರ್ವಿಯೊಂದಿಗೆ ಸೂರ್ಯನ ಮದುವೆ ನೆರವೇರಬಹುದು ಎಂದು ಜ್ಯೋತಿಷಿಗಳು ಹೇಳುತ್ತಾರೆ. ಆಗ ದೇವಲಿಂಗಯ್ಯನವರು ಜ್ಯೋತಿಷಿಗಳ ಈ ಮಾತೇ ಸರಿಯಾದುದೆಂದು ಒಪ್ಪಿಕೊಂಡು ಮುಂದಿನ ಕೆಲಸಕ್ಕೆ ತಯಾರಿ ಮಾಡಿಕೊಳ್ಳಲು ತೊಡಗುತ್ತಾರೆ. ತಮಗೆ ತೀರಾ ಹತ್ತಿರವಾಗಿರುವ ನಂಬಿಕಸ್ಥನಾಗಿರುವ ಪಾಪಣ್ಣನಿಗೆ ಈ ವಿಷಯವನ್ನು ಕುರಿತು ಪ್ರಸ್ತಾಪ ಮಾಡುತ್ತಾನೆ. ತಮಗೆ ಬಂದಿರುವ ಈ ಕಷ್ಟಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ. ತಮಗೆ ಸಹಾಯ ಮಾಡಿದರೆ ಬೇಕಾದಷ್ಟು ಹಣವನ್ನು ಕೊಡುತ್ತೇನೆಂದು ದೇವಲಿಂಗಯ್ಯನವರು ಪಾಪಣ್ಣನಿಗೆ ಹೇಳುತ್ತಾರೆ. ಅದಕ್ಕೆ ಸಕಾರಾತ್ಮಕ ಉತ್ತರ ಪಾಪಣ್ಣನಿಂದ ದೊರೆಯುತ್ತದೆ. ತನ್ನ ಊರಿನಲ್ಲಿ ಅಂತವರು ಯಾರಾದರು ಕಣ್ಣಿಗೆ ಬಿದ್ದರೆ ತಿಳಿಸುವುದಾಗಿ ಹೇಳಿ ಹೊರಡುತ್ತಾನೆ. ಹೀಗೆ ಯೋಚನೆ ಮಾಡುತ್ತಾ ಹೋಗುತ್ತಿರುವಾಗ, ಲಕುಮಿ ಎದುರಾಗಿ ಮಾತನಾಡಿಸುತ್ತಾಳೆ. ಆಗಲೇ ಪಾಪಣ್ಣನಿಗೆ ಲಕುಮಿಯನ್ನು ಈ ಕೆಲಸಕ್ಕೆ ಬಳಸಿಕೊಳ್ಳಬಹುದೆಂದು ಮನದಲ್ಲೆ ತೀರ್ಮಾನಿಸುತ್ತಾನೆ. ಲಕುಮಿಯ ತಂದೆಗಿದ್ದ ದುಡ್ಡಿನ ಆಸೆಯನ್ನು ಅರಿತಿದ್ದ ಪಾಪಣ್ಣ ಕರಿನಿಂಗನಿಗೆ ಇನ್ನಷ್ಟು ದುಡ್ಡನ್ನು ಮಾಡಿಕೊಂಡು ಶ್ರೀಮಂತರಾಗಿ ಇದ್ದು ಬಿಡಬಹುದು ಒಳ್ಳೆ ಬಟ್ಟೆ, ಒಳ್ಳೆ ಊಟ, ಹೀಗೆ ಏನೇನೊ ಮಾಡಬಹುದು ಎಂದು ಕರಿನಿಂಗನಿಗೆ ದುಡ್ಡಿನ ಆಸೆ ಹುಟ್ಟಿಸುತ್ತಾನೆ. ಆಗ ಕರಿನಿಂಗ ಧೀಡಿರ ಶ್ರೀಮಂತನಾಗಬೇಕಾದರೆ ಏನು ಮಾಡಬೇಕು? ಯಾವ ದಾರಿ ಇದೆ? ನಾವು ಬಡವರು ಏನು ಮಾಡಬಹುದು? ಎಂದು ಪಾಪಣ್ಣನಿಗೆ ಪ್ರಶ್ನೆ ಮಾಡುತ್ತಾನೆ. ಅದಕ್ಕೆ ಪಾಪಣ್ಣ ಬಹಳ ವಿಚಾರಮಾಡಿ ಹೇಳುವವನಂತೆ ಹೀಗೆ ಮಾಡಿದರೆ ಹೇಗೆ? ಎಂದು ಕೇಳುತ್ತಾನೆ. ಆಗ ಪಾಪಣ್ಣ ಕರಿನಿಂಗನಿಗೆ ದುಡ್ಡು ಮಾಡುವ ಸುಲಭದ ದಾರಿಯನ್ನು ತೋರಿಸಿಕೊಡುತ್ತಾನೆ. ಮೊದಮೊದಲು ಈ ಮಾತಿಗೆ ಒಪ್ಪದ ಕರಿನಿಂಗ ನಂತರ ತನ್ನೊಳಗೆ ವಿಚಾರಮಾಡಿ ಕೇವಲ ತಾಳಿ ಕಟ್ಟಿಸಿಕೊಂಡರಾಯ್ತು ಅಷ್ಟೇ. ಮದುವೆಯಾಗಿ ಅವರ ಮನೆಗೆ ಹೋಗುವಂತಿಲ್ಲ. ಯಾವ ಕೆಲಸವೂ ಮಾಡದೆ ತನಗೆ ದುಡ್ಡು ಬರುತ್ತದಲ್ಲಾ ಅಷ್ಟೆ ಸಾಕು ಎಂದು ಸಂತಸಪಡುತ್ತಾನೆ. ಶ್ರೀಮಂತ ರಾಜಕಾರಣಿಗಳು ಇಷ್ಟು ಸಣ್ಣ ಕೆಲಸಕ್ಕೆ ಸಾಕಷ್ಟು ದುಡ್ಡು ಕೊಡಲು ತಯಾರಾಗಿದ್ದರೆ, ತಾನು ಈ ಅವಕಾಶವನ್ನು ಯಾಕೆ ಕಳೆದುಕೊಳ್ಳಬೇಕು. ಇಂತಹ ಅವಕಾಶ ಮತ್ತೆ ಮತ್ತೆ ಬರುವುದಿಲ್ಲ ಎಂದು ಯೋಚನೆ ಮಾಡಿ ಕೊನೆಗೆ ಪಾಪಣ್ಣನಿಗೆ ಒಪ್ಪಿಗೆಯನ್ನು ಕೊಡುತ್ತಾನೆ. ಈ ಕೆಲಸಕ್ಕೆ ಲಕುಮಿ ಮತ್ತು ನಂಜಿಯನ್ನು ಒಪ್ಪಿಸುವುದಾಗಿ ಹೇಳಿ ಮನೆಗೆ ಹೊರಡುತ್ತಾನೆ.

ಮನೆಗೆ ಬಂದವನೆ ಲಕುಮಿಯ ತಾಯಿ ನಂಜಿಗೆ ಎಲ್ಲ ವಿಷಯವನ್ನು ವಿವರವಾಗಿ ಹೇಳುತ್ತಾನೆ, ನಾವು ತಾಳಿ ಕಟ್ಟಿಸಬೇಕು ಅಷ್ಟೇ ಬೇರಾವುದೇ ಕೆಲಸ ಇಲ್ಲ. ಇದಕ್ಕೆ ತಾನು ಒಪ್ಪಿಗೆ ಕೊಟ್ಟಾಗಿದೆ. ಇನ್ನು ಲಕುಮಿಯನ್ನು ಇದಕ್ಕೆ ತಯಾರು ಮಾಡುವುದು ನಿನ್ನ

ಕೆಲಸವೆಂದು ಹೇಳಿ ಹೊರ ಹೋಗುತ್ತಾನೆ. ನಂಜಿ ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯನ್ನು ನೀರಿಕ್ಷಿಸಿರಲಿಲ್ಲ, ಕರಿನಿಂಗ ಹೇಳಿದ ತಾಳಿಕಟ್ಟಿಸಿಕೊಳ್ಳುವುದೆಂದರೆ ಅದು ಸಣ್ಣ ಮಾತೇ, ತನ್ನ ಮಗಳನ್ನು ಇನ್ನಾರದೊ ದೋಷಕ್ಕೆ ಬಲಿಕೊಡುತ್ತಿದ್ದಾನಲ್ಲಾ, ಹೆತ್ತ ಮಗಳ ಮೇಲೆ ಎಂತಹ ತಿರಸ್ಕಾರ ಭಾವವಿದೆ ಎಂದು ಮನದಲ್ಲೆ ದುಃಖ ಪಡುತ್ತಾಳೆ. ಆ ದುಃಖ ಕೇಳಲು ಕರಿನಿಂಗ ಇರುವುದಿಲ್ಲ, ತನ್ನ ತಾಯಿಯ ದುಃಖವನ್ನು ಅರ್ಥ ಮಾಡಿಕೊಳ್ಳುವಷ್ಟು ಅರಿವು ಲಕುಮಿಗೆ ಇರುವುದಿಲ್ಲ. ಇತ್ತ ಕರಿನಿಂಗನ ಒಪ್ಪಿಗೆಯನ್ನು ಪಡೆದ ಪಾಪಣ್ಣ ದೇವಲಿಂಗಯ್ಯನವರ ಮನೆಗೆ ಹೋಗಿ ಮದುವೆಯ ತಯಾರಿ ಮಾಡುವಂತೆ ಹೇಳುತ್ತಾನೆ.

ತಮ್ಮ ಮಗನಿಗೆ ಬಂದಿರುವ ಕಷ್ಟದ ಪರಿಹಾರಕ್ಕಾಗಿ ಕಂಡುಕೊಂಡ ಉಪಾಯ ಕೈಗೂಡುತ್ತಲಿದೆ. ತಮ್ಮ ಮಗನ ಬಾಳು ಚೆನ್ನಾಗಿದ್ದರೆ ಸಾಕು ಎಂದು ದೇವಲಿಂಗಯ್ಯ ಮತ್ತು ಅವರ ತಾಯಿ, ಮದುವೆಯ ಏರ್ಪಾಡು ಮಾಡಿಕೊಂಡು ಹಳ್ಳಿಯತ್ತ ನಡೆಯುತ್ತಾರೆ. ಇತ್ತ ಕರಿನಿಂಗ ತನ್ನ ಮಗಳಿಗೆ ಎಂತಹ ಭವಿಷ್ಯವನ್ನು ಕೊಡುತ್ತಿದ್ದೇನೆಂದು ಅರಿಯದಂತಹ ಮೂಢತೆಯಲ್ಲಿ ಬಿದ್ದು ತನ್ನ ಮಗಳಿಗೆ ಮದುವೆ ಮಾಡಿಸಲು ಮುಂದಾಗುತ್ತಾನೆ. ಮದುವೆಗೆ ಬೇಕಾಗುವಂತಹ ಹೊಸ ಬಟ್ಟೆಗಳು, ಒಡವೆಗಳನ್ನು ಖರೀದಿ ಮಾಡಿ ಮನೆಗೆ ತಂದುಕೊಡುತ್ತಾನೆ. ಲಕುಮಿಯ ತಾಯಿ ಮಾತ್ರ ಇದನ್ನೆಲ್ಲ ನಿರಾಕರಿಸಲು ಆಗದ, ಒಪ್ಪಿಕೊಳ್ಳಲು ಆಗದಂತಹ ಪರಿಸ್ಥಿತಿಯಲ್ಲಿ ಬಲವಂತದ ನಗುವನ್ನು ತಂದುಕೊಂಡು ಮಗಳಿಗೆ ಮದುವೆಗೆ ಸಿದ್ಧ ಮಾಡುತ್ತಾಳೆ. ಸಿದ್ಧ ಮಾಡಿದ ಮೇಲೆ ಊರ ಹೊರಗಿನ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಇತ್ತ ಸೂರ್ಯನ ಮನೆಯವರು ದೇವಸ್ಥಾನಕ್ಕೆ ಬರುತ್ತಾರೆ. ಸೂರ್ಯನ ಮನೆಯವರು ದೇವಸ್ಥಾನಕ್ಕೆ ಬರುವ ಸಮಯದಲ್ಲಿ ಲಕುಮಿ ತನ್ನ ತಮ್ಮನೊಂದಿಗೆ ದೇವಸ್ಥಾನದ ಮುಂದೆ ಆಟವಾಡುತ್ತಿರುತ್ತಾಳೆ. ಇದನ್ನು ಗಮನಿಸುವ ಸೂರ್ಯನ ತಾಯಿ ತಾವೂ ಇಷ್ಟು ಚಿಕ್ಕ ಹುಡುಗಿಗೆ ಮದುವೆ ಮಾಡಿಸುತ್ತೀದ್ದೇವೆಯೆ? ಏನೂ ಅರಿಯದ ಮುಗ್ದೆಗೆ ಎಂತಹ ಘೋರ ಅನ್ಯಾಯ ಮಾಡುತ್ತಿದ್ದೇವೆ? ತಮ್ಮ ಸ್ವಾರ್ಥ ಸಾಧನೆಗಾಗಿ ಎಳೆವಯಸ್ಸಿನ ಹುಡುಗಿ ಬಲಿಯಾಗ ಬೇಕೆ? ಎಂದು ದುಃಖಪಡುತ್ತಾಳೆ. ಸೂರ್ಯನ ತಾಯಿ ಮನಸ್ಸು ಕರಗಿ ಇಂತಹ ಮುಗ್ದ ಹುಡುಗಿಗೆ ಮೋಸ ಮಾಡುವುದು ಬೇಡ, ವಾಪಸ್ಸು ಹೋಗೋಣ ಎಂದು ಬೇಡಿಕೊಳ್ಳುತ್ತಾಳೆ. ಆದರೆ ಮಿನಿಸ್ಟರ್ ದೇವಲಿಂಗಯ್ಯ ಆಗಲಿ, ಆತನ ತಾಯಿಯಾಗಲಿ, ಪದ್ಮಾಳ ಮಾತನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ. ಬದಲಿಗೆ 'ಏನು ನಡಿತಿದೆಯೋ ಅದು ನಡಿಲಿ ಬಿಡು' ನಿನ್ಯಾಕೆ ಅಡ್ಡ ಬರ್ತೀಯಾ' ಅಂತ ಪದ್ಮಾಳ ಅತ್ತೆ ಹೇಳುತ್ತಾಳೆ. ಸೂತ್ರದ ಗೊಂಬೆಯಂತಹ ಬದುಕು ಬದುಕುತ್ತಿರುವ ಪದ್ಮಾಳಿಗೆ ತನ್ನ ಕಣ್ಣ ಮುಂದೆ ನಡೆಯುತ್ತಿರುವ ಈ ಅನ್ಯಾಯವನ್ನು ವಿರೋಧಿಸಲು ಆಗದಂತಹ ಪರಿಸ್ಥಿತಿ. ಈ ಮಧ್ಯ ಲಕುಮಿ ಮತ್ತು ಸೂರ್ಯನ ಮದುವೆ ದೇವಸ್ಥಾನದಲ್ಲಿ ನಡೆಮಹೋಗುತ್ತದೆ. ಲಕುಮಿಗೆ ತಾಳಿಯನ್ನು "ತಾಯತ"ವೆಂದು ಹೇಳಿ ಕಟ್ಟಲಾಗುತ್ತದೆ. ಈ ಮೂಲಕ ಒಂದು ಮುಗ್ಧ ಹುಡುಗಿ ಬಾಲ್ಯವಿವಾಹ ಪದ್ಧತಿಗೆ ಒಳಗಾಗುತ್ತಾಳೆ.

ವಿವಾಹವಾದ ಎರಡನೆ ದಿನಕ್ಕೆ ಲಕುಮಿಗೆ ಹಾವು ಕಚ್ಚುತ್ತದೆ ಈ ಹಾವಿನ ವಿಷವನ್ನು ಇಳಿಸಲು ಹರಸಾಹಸ ಮಾಡಲಾಗುತ್ತದೆ. ಲಕುಮಿಗೆ ಹಾವು ಕಚ್ಚಿದ ಸುದ್ದಿಯನ್ನು ಸೂರ್ಯನ ಮನೆಯವರಿಗೂ ತಿಳಿಸಲಾಗುತ್ತದೆ. ಜ್ಯೋತಿಷಿಗಳ ಮಾತನ್ನು ನಂಬಿ ಮದುವೆ ಮಾಡಿದ ದೇವಲಿಂಗಯ್ಯನವರಿಗೆ ಜ್ಯೋತಿಷ್ಯ ಸುಳ್ಳಾಗಲಿಲ್ಲ, ತಮ್ಮ ಮಗನಿಗಿದ್ದ ದೋಷವೆಲ್ಲಾ ಹೊರಟು ಹೋಯ್ತು ಎಂದು ನಿಟ್ಟುಸಿರು ಬಿಡುತ್ತಾರೆ. ಇತ್ತ ಲಕುಮಿಯ ಮನೆಯಲ್ಲಿ ತಾಯಿ ನಂಜಿಗೆ ಜ್ಯೋತಿಷಿಗಳು ಹೇಳಿದ್ದು ಸತ್ಯವಾಯಿತೆ? ನನ್ನ ಮಗಳನ್ನು ಗೊತ್ತಿದ್ದು, ಗೊತ್ತಿದ್ದು ಸಾವಿನ ಮನೆಗೆ ತಳ್ಳಿದೇವಲ್ಲಾ? ಎಂದು ದುಃಖಿಸುತ್ತಾಳೆ. ಇದರ ಮಧ್ಯ ಲಕುಮಿಗೆ ಕಚ್ಚಿರುವ ಹಾವಿನ ವಿಷವನ್ನು ತೆಗೆಯಲು ಹರಸಾಹಸ ಮಾಡಲಾಗುತ್ತದೆ. ಲಕುಮಿಯ ಬಾಲ್ಯದ ಗೆಳೆಯನಾದ ಗಣೇಶನು ಹಾವಿನ ವಿಷವನ್ನು ಇಳಿಸಲು ತುಂಬಾ ಪ್ರಯತ್ನ ನಡೆಸುತ್ತಾನೆ. ವಿಷ ಇಳಿಸಲು ಬೇಕಾಗುವಂತಹ ತಪ್ಪಲನ್ನು ತಂದು ಲಕುಮಿಗೆ ಏರಿದ ವಿಷವನ್ನು ಇಳಿಸುತ್ತಾನೆ. ವಿಷವೆಲ್ಲಾ ಇಳಿದ ಮೇಲೆ ಲಕುಮಿಯು ಮೊದಲಿನಂತೆ ಆರ್ಯೋಗ್ಯವಾಗಿ ಓಡಾಡಲು ಪ್ರಾರಂಭಿಸುತ್ತಾಳೆ. ಈ ಸುದ್ದಿ ದೇವಲಿಂಗಯ್ಯನವರಿಗೂ ಗೊತ್ತಾಗುತ್ತದೆ. ತಾವು ಅಂದು ಕೊಂಡಂತೆ ಯಾವುದು ನಡೆಯಲೇ ಇಲ್ಲ, ಹಾಗಾದರೆ ಜ್ಯೋತಿಷ್ಯ ಸುಳ್ಳಾ? ತಮ್ಮ ನಂಬಿಕೆ ಸುಳ್ಳಾಯಿತಾ? ಎಂದು ಚಿಂತಿಸುತ್ತಾ ಕೂಡುತ್ತಾರೆ. ಈ ವಿಷಯ ತಿಳಿದ ಅವರು ಮುಂದಿನ ದಾರಿ ಹೇಗೆ? ಎಂಬ ಪ್ರಶ್ನೆ ಕಾಡಲು ಪ್ರಾರಂಭವಾಗುತ್ತದೆ.

ಇತ್ತ ಲಕುಮಿಗೆ ಹಾವು ಕಚ್ಚಿದ ಸುದ್ದಿಯನ್ನು ಕೇಳಿ ಊರಿನಲ್ಲಿರುವವರು ಬಂದು ಅವಳ ಯೋಗಕ್ಷೇಮವನ್ನು ವಿಚಾರಿಸುತ್ತಿರುತ್ತಾರೆ. ಲಕುಮಿಯ ಜೊತೆಯಲ್ಲೇ ಗಣೇಶ ಎಂಬ ಹುಡುಗ ಓದುತ್ತಿರುತ್ತಾನೆ. ಈ ಗಣೇಶನೇ ಲಕುಮಿಗೆ ಹಾವು ಕಚ್ಚಿದಾಗ, ಹಾವಿನ ವಿಷ ಇಳಿಸಲು ತಪ್ಪಲು ತಂದು ಲಕುಮಿಯನ್ನು ಬದುಕಿಸುತ್ತಾನೆ. ಲಕುಮಿ ಮತ್ತು ಗಣೇಶ ಇಬ್ಬರು ಒಳ್ಳೆಯ ಸ್ನೇಹಿತರಾಗಿರುತ್ತಾರೆ. ಗಣೇಶ ಪಾಠದಲ್ಲಿ ಅಷ್ಟೊಂದು ಜಾಣನಿರುವುದಿಲ್ಲ. ಓದಿನಲ್ಲಿ ಹಿಂದೆ ಇರುತ್ತಾನೆ. ಗಣೇಶನ ಈ ದೌರ್ಬಲ್ಯವನ್ನು ಗುರ್ತಿಸುವ ಲಕುಮಿ ಗಣೇಶನಿಗೆ ಓದಿನ ಮಹತ್ವ ತಿಳಿಹೇಳಿ ವಿದ್ಯಾಭ್ಯಾಸದಲ್ಲಿ ಮುಂದುವರೆಯುವಂತೆ ಮಾಡುತ್ತಾಳೆ. ಇಲ್ಲಿಯವರೆಗೂ ಕಥೆಯ ಮೊದಲ ಭಾಗದ ಅನಾವರಣವಾಗುತ್ತದೆ. ಕಥೆಯಲ್ಲಿ ಮೊದಲು ಗ್ರಾಮ, ಅಲ್ಲಿನ ಪರಿಸರ, ಗ್ರಾಮದಲ್ಲಿ ನಡೆಯುವ ಚಿಕ್ಕ ಪುಟ್ಟ ವಿಷಯಗಳ ಕುರಿತು ತೋರಿಸಲಾಗಿದ್ದು, ಉಳಿದ ಭಾಗದಲ್ಲಿ ನಗರ ಪ್ರದೇಶದ ಬದುಕನ್ನು ತೋರಿಸಲಾಗಿದೆ.

ನಗರ ಪ್ರದೇಶದಲ್ಲಿ ಮಿನಿಸ್ಟರ್ ದೇವಲಿಂಗಯ್ಯನವರ ಮನೆ, ಅವರ ಹೆಂಡತಿ, ತಾಯಿ, ಮಗ ಇವರ ಕುರಿತು ತೋರಿಸಲಾಗುತ್ತದೆ. ಮಿನಿಸ್ಟರ್ ದೇವಲಿಂಗಯ್ಯನವರ ಭವ್ಯವಾದ ಮನೆ, ವಿಶಾಲವಾದ ಹೊರಾಂಗಣ, ಸಂಪತ್ತಿನಿಂದ ಕೂಡಿದ ಮನೆಯ ಚಿತ್ರಣ ತೋರಿಸಲಾಗುತ್ತದೆ. ದೇವಲಿಂಗಯ್ಯನವರ ಮನೆಯಲ್ಲಿ ಸಂಪತ್ತಿಗೆ ಯಾವುದೇ ಕೊರತೆ ಇರುವುದಿಲ್ಲ. ಇದನ್ನರಿತೇ ಲಕುಮಿಯ ತಂದೆ ಕರಿಸಿಂಗನು ತನ್ನ ಮಗಳಿಗೆ ತಾಳಿ ಕಟ್ಟಿಸಿದ್ದ,

ಅದಕ್ಕೆ ಪ್ರೀತಿಯಾಗಿ ಹಣಕೊಡಬೇಕೆಂದು ಪಾಪಣ್ಣನ ಮೂಲಕ ಕೇಳಿ ಪಡೆದುಕೊಳ್ಳುತ್ತಿರುತ್ತಾನೆ. ಪಾಪಣ್ಣ ಕರಿನಿಂಗನು ಕೇಳಿದಾಗಲೆಲ್ಲ ದುಡ್ಡನ್ನು ಪೂರೈಸಿರುತ್ತಾನೆ. ಆದರೆ ಕರಿನಿಂಗನಿಗೆ ಪಾಪಣ್ಣನ ಮೇಲೆ ನಂಬಿಕೆಯಿರುವುದಿಲ್ಲ. ಪಾಪಣ್ಣ ತನಗೆ ಅಂತ ಕೊಡುತ್ತಿರುವ ದುಡ್ಡಿನಲ್ಲಿ ತಾನೇಷ್ಟು ಲಾಭ ಪಡೆಯುತ್ತಿದ್ದಾನೆನೋ? ಎಂಬ ಸಂಶಯ ಶುರುವಾಗುತ್ತದೆ. ಹಾಗಾಗಿ ಕರಿನಿಂಗ ಮುಂದಿನ ಬಾರಿ ದುಡ್ಡು ಪಡೆಯಲು ತಾನೆ ದೇವಲಿಂಗಯ್ಯನವರ ಮನೆಗೆ ಹೋಗುತ್ತಾನೆ. ತನ್ನ ಮಗಳನ್ನು ಕದ್ದುಮುಚ್ಚಿ ಮದುವೆಯಾಗಿರುವ ವಿಷಯವನ್ನು ಹೊರಗಿನ ಜನರಿಗೆ ತಿಳಿಸುತ್ತೇನೆ. ಆಗ ನಿಮ್ಮ ಮಾನ ಮರ್ಯಾದೆಯೆಲ್ಲಾ ಮೂರುಕಾಸಿಗೆ ಹರಾಜಾಗುತ್ತದೆ. ನಿಮಗೆ ನಿಮ್ಮ ಮಾನ ಮರ್ಯಾದೆ ಉಳಿಸಿಕೊಳ್ಳಬೇಕಾದರೆ ನಾನು ಕೇಳಿದಷ್ಟು ಹಣ ಕೊಡಬೇಕೆಂದು ಕರಿನಿಂಗ ದೇವಲಿಂಗಯ್ಯನವರ ಮೇಲೆ ಒತ್ತಡ ಹೇರುತ್ತಾನೆ. ಈ ಮಾತನ್ನು ಕೇಳುವ ದೇವಲಿಂಗಯ್ಯನವರಿಗೆ ತಮ್ಮ ಮಾನ ಮರ್ಯಾದೆ ಹೋದರೆ, ಮುಂದೆ ತಮ್ಮ ರಾಜಕಿಯದ ಭವಿಷ್ಯ ಹಾಳಾಗುತ್ತದೆ. ಅದು ಹಾಳಾಗಬಾರದು ತಮ್ಮ ಮಗನ ಒಳ್ಳೆಯ ಭವಿಷ್ಯಕ್ಕಾಗಿ ಒಂದು ತಪ್ಪು ಕೆಲಸ ಮಾಡುವಂತಾಗಿ ಅದನ್ನು ಸರಿಪಡಿಸಲು ಈಗ ದುಡ್ಡು ಕೊಡದ ಹೊರತು ಬೇರೆ ದಾರಿಯೇ ಇಲ್ಲವೆಂದು ದೇವಲಿಂಗಯ್ಯ ಕರಿನಿಂಗನ ಮಾತಿಗೆ ಉತ್ತರಿಸದೇ ದುಡ್ಡು ಕೊಟ್ಟು ಕಳುಹಿಸುತ್ತಾರೆ. ಕಥೆಯ ಮುಂದುವರೆದ ಭಾಗದಲ್ಲಿ ಕರಿನಿಂಗ ದೇವಲಿಂಗಯ್ಯನವರಿಂದ ಪಡೆದಂತಹ ಹಣವನ್ನು ಹಳ್ಳಿಗೆ ತೆಗೆದುಕೊಂಡು ಬರುತ್ತಾನೆ. ಅಷ್ಟೊಂದು ದುಡ್ಡನ್ನು ಯಾರಿಗೂ ತಿಳಿಯದ ಹಾಗೆ ಹೇಗೆ ಮುಚ್ಚಿಡಬೇಕೆಂಬುದು ಯಕ್ಷ ಪ್ರಶ್ನೆಯಾಗಿ ಕಾಡುತ್ತದೆ. ತನಗೆ ಬಯಸದೇ ಬಂದ ಈ ಸಂಪತ್ತನ್ನು ತಾನೊಬ್ಬನೇ ಅನುಭವಿಸಬೇಕೆಂಬ ಆಸೆ ಅವನಲ್ಲಿ ಮೊಳಕೆ ಒಡೆಯುತ್ತದೆ. ಈ ಹಣವನ್ನೆಲ್ಲ ತನಗೆ ಮಾತ್ರ ಗೊತ್ತಿರುವ ಸ್ಥಳದಲ್ಲಿ ಮುಚ್ಚಿಡಬೇಕು. ತನಗೆ ಬೇಕಾದಾಗ ಮಾತ್ರ ಅಲ್ಲಿಗೆ ಹೋಗಿ ದುಡ್ಡು ತೆಗೆಯಬೇಕೆಂದುಕೊಂಡು ಮನದಲ್ಲೆ ಲೆಕ್ಕಾಚಾರ ಹಾಕಿಕೊಳ್ಳುತ್ತಾನೆ. ಒಂದು ಹಾಳು ಬಿದ್ದ ಮನೆಯ ಹಿತ್ತಲಿನಲ್ಲಿ ಯಾರಿಗೂ ಕಾಣದಂತೆ ಮುಚ್ಚಿಟ್ಟು ಬರುತ್ತಾನೆ.

ಈಗ ಕರಿನಿಂಗ ಮೊದಲಿನಂತೆ ಬಡವನಲ್ಲ, ಅವನಲ್ಲಿ ಈಗ ಸಾವಿರ, ಲಕ್ಷಗಳಷ್ಟು ಹಣವಿರುತ್ತದೆ. ಅವನಲ್ಲಿರುವ ಈ ಹಣ ಅವನಲ್ಲೊಂದು ಹೊಸ ಹುರುಪನ್ನು ಅಹಂ ಭಾವವನ್ನು ಸೃಷ್ಟಿಸಿರುತ್ತದೆ. ಆ ಅಹಂ ಭಾವದಿಂದಲೇ ಊರೊಳಗೆ ಓಡಾಡುತ್ತಿರುತ್ತಾನೆ. ಕರಿನಿಂಗನಲ್ಲಾದ ಈ ಬದಲಾವಣೆಯನ್ನು ಪಾಪಣ್ಣ ಗಮನಿಸುತ್ತಾನೆ. ಇದರ ಹಿನ್ನೆಲೆ ತಿಳಿದುಕೊಳ್ಳುವ ಕಾತರ ಪಾಪಣ್ಣನಲ್ಲಿ ಹೆಚ್ಚಾಗುತ್ತದೆ. ಕರಿನಿಂಗನನ್ನು ಹಿಂಬಾಲಿಸಿದಾಗ. ಕರಿನಿಂಗ ಮುಚ್ಚಿಟ್ಟ ಹಣದ ಬಗ್ಗೆ ಗೊತ್ತಾಗುತ್ತದೆ. ಹೀಗೆ ಕೆಲವು ದಿನಗಳು ಕಳೆಯುತ್ತವೆ. ಒಂದು ದಿನ ಕರಿನಿಂಗ ತಾನು ಮುಚ್ಚಿಟ್ಟಿರುವ ದುಡ್ಡನ್ನು ತೆಗೆದುಕೊಳ್ಳಲು ಬಂದಾಗ ಅವನಿಗೆ ಆಶ್ಚರ್ಯ ಕಾದಿರುತ್ತದೆ. ತಾನು ಮುಚ್ಚಿಟ್ಟಿದ್ದ ದುಡ್ಡನ್ನು ಯಾರೋ ಕದ್ದುಬಿಟ್ಟಿರುತ್ತಾರೆ. ಅದನ್ನು ಕಂಡು ದುಃಖಿತನಾಗುತ್ತಾನೆ. ತನ್ನ ದುಡ್ಡು ಹೀಗೆ ಕಳೆದುಹೋಯಿತಲ್ಲ ಎಂದು ದುಃಖಿತನಾಗುತ್ತಾನೆ. ತಾನು ಅನುಭವಿಸುತ್ತಿರುವ ಯಾತನೆ, ತಳಮಳವನ್ನು ಅತ್ತ

ಹೇಳಿಕೊಳ್ಳುವಂತಿಲ್ಲ ಇತ್ತ ಅನುಭವಿಸುವಂತೆಯು ಇಲ್ಲದಂತಹ ಪರಿಸ್ಥಿತಿಯಲ್ಲಿ ಕರಿನಿಂಗನಿರುತ್ತಾನೆ. ತಾನು ಅನುಭವಿಸುತ್ತಿರುವ ಕಷ್ಟವನ್ನು ಪರಿಹರಿಸುವಂತೆ ಪಾಪಣ್ಣನಿಗೆ ಕೇಳುತ್ತಾನೆ. ಇಲ್ಲಿ ಪಾಪಣ್ಣ ಕರಿನಿಂಗನಿಗೆ ದುಡ್ಡು ಹೇಗೆ ಬಂತು? ಎಲ್ಲಿಂದ ಬಂತು? ಯಾವಾಗ ತಂದಿರುವೆ? ಎಂದೆಲ್ಲಾ ಪ್ರಶ್ನೆ ಕೇಳುತ್ತಾನೆ. ಕರಿನಿಂಗನಿಗೆ ಸಿಟ್ಟು ಬಂದರು ಅದನ್ನು ವ್ಯಕ್ತಪಡಿಸದೇ ಎಲ್ಲಾ ವಿಷಯವನ್ನು ವಿವರವಾಗಿ ಹೇಳುತ್ತಾನೆ. ಈ ವಿಷಯ ಕೇಳುವ ಪಾಪಣ್ಣ ತನ್ನ ಸಹಾಯ ವಿಲ್ಲದೆಯೇ ಕರಿನಿಂಗ ಇಷ್ಟೊಂದು ಮುಂದುವರೆಯಬಹುದಾ? ಎಂದು ಪ್ರಶ್ನೆ ಹಾಕಿಕೊಳ್ಳುತ್ತಾನೆ. ಕೊನೆಗೂ ಕರಿನಿಂಗನ ಹಣ ಮಾತ್ರ ಅವನಿಗೆ ದೊರೆಯುವುದಿಲ್ಲ "ಇಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ" ಎನ್ನುವ ಗಾದೆ ಮಾತಿನಂತೆ ನಡೆಯುತ್ತದೆ. ಈ ಘಟನೆಯಿಂದ ಕರಿನಿಂಗ ಸೋತು ಸುಣ್ಣವಾಗುತ್ತಾನೆ. ಮನೆಗೆ ಬಂದವನೆ ಹೆಂಡತಿ ಮಕ್ಕಳ ಮೇಲೆ ಹರಿಹಾಯ್ದು ಕೂಗಾಡುತ್ತಾನೆ. ಕರಿನಿಂಗನ ಈ ಕೂಗಾಟಕ್ಕೆ ಕಾರಣವೆನೆಂದು ನಂಜಿ ಕೇಳುತ್ತಾಳೆ. ಅವಳು ಎಷ್ಟು ಸಾರಿ ಕೇಳಿದರು ಸಹ ಹೇಳುವ ಮನಸ್ಸು ಕರಿನಿಂಗನಿಗೆ ಇರುವುದಿಲ್ಲ. ನಂಜಿ ಬಹಳ ಒತ್ತಾಯ ಮಾಡಿ ಕೇಳಿದಾಗ ಕರಿನಿಂಗ ತಾನು ಹಣ ಪಡೆದದ್ದು, ಮುಚ್ಚಿಟ್ಟದ್ದು, ಕಳೆದುಕೊಂಡಿದ್ದು ಎಲ್ಲದರ ಬಗ್ಗೆಯೂ ವಿವರವಾಗಿ ಹೇಳುತ್ತಾನೆ. ಆಗ ನಂಜಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು. ಮನುಷ್ಯನಿಗೆ ಅತಿ ಆಸೆ ಇದ್ದರೆ ಹೀಗೆ ಆಗುವುದೆಂದು ಹೇಳಿ ಅಳಲು ಶುರುಮಾಡುತ್ತಾಳೆ. ಇದನ್ನೆಲ್ಲ ಗಮನಿಸುವ ಲಕುಮಿಯು ತನ್ನ ತಂದೆ ತಾಯಿಯರಿಗೆ ಬಂದಿರುವ ಪರಿಸ್ಥಿತಿಯನ್ನು ಕಂಡು ಅವಳು ಕೂಡ ದುಃಖಪಡುತ್ತಾಳೆ. ಹೀಗೆ ದುಡ್ಡು ಕಳೆದುಕೊಳ್ಳುವ ಕರಿನಿಂಗ, ಮುಂದೆ ಏನು ತೋಚದಂತೆ ಕುಳಿತಿರುವಾಗ. ಪಾಪಣ್ಣನ ಆಗಮನವಾಗುತ್ತದೆ. ಪಾಪಣ್ಣ ಬಂದವನೇ ಕರಿನಿಂಗನಿಗೆ ಒಂದು ಸಲಹೆಯನ್ನು ಕೊಡುತ್ತಾನೆ. ಪಟ್ಟಣದಲ್ಲಿ ತನಗೆ ಗೊತ್ತಿರುವ ಒಬ್ಬರ ಮನೆಯಲ್ಲಿ ಮನೆ ಕೆಲಸಕ್ಕೆಂದು ಹುಡುಗಿಯ ಅವಶ್ಯಕತೆ ಇದೆ. ಒಂದು ವೇಳೆ ಲಕುಮಿಯನ್ನು ಕೆಲಸಕ್ಕೆಂದು ಕಳುಹಿಸಿದರೆ ಒಳ್ಳೆಯ ದುಡ್ಡು ಪಡೆಯಬಹುದೆಂದು ಹೇಳುತ್ತಾನೆ. ಇದನ್ನು ಕೇಳಿದ ಕರಿನಿಂಗ ತನ್ನ ಮಗಳನ್ನು ದುಡಿಯಲು ಕಳುಹಿಸುವುದೇ ಉತ್ತಮ ಎಂದು ಅಭಿಪ್ರಾಯ ಪಡುತ್ತಾನೆ ಚೆನ್ನಾಗಿ ಓದು ಬರಹ ಕಲಿಯುತ್ತಿದ್ದ ಮಗಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳುಹಿಸುವ ಯೋಚನೆ ಮಾಡುತ್ತಾನೆ. ಪಾಪಣ್ಣನಿಗೆ ಪಟ್ಟಣದಲ್ಲಿ ಚೆನ್ನಾಗಿ ದುಡ್ಡು ಬರೋ ಕಡೆ ಕೆಲಸ ನೋಡಬೇಕೆಂದೂ ಹೇಳುತ್ತಾನೆ.

ಪಾಪಣ್ಣ ಪಟ್ಟಣಕ್ಕೆ ಹೋಗಿ ಬಂದು ಮಾಡುತ್ತಿರುವುದರಿಂದ ಪಟ್ಟಣದಲ್ಲಿ ಸುಮಾರು ಜನ ಶ್ರೀಮಂತರ, ರಾಜಕಾರಣಿಗಳ ಪರಿಚಯವಿದ್ದು ತನ್ನ ಯಾವುದಾದರೂ ಕೆಲಸವನ್ನು ಮಾಡಬೇಕಾದರೆ ಇವರುಗಳ ಸಹಾಯ ಪಡೆಯುತ್ತಿರುತ್ತಾನೆ. ಹೀಗೆಯೇ ಒಬ್ಬ ಶ್ರೀಮಂತ ಯಜಮಾನ ತಮ್ಮ ಮನೆಯಲ್ಲಿ ಕೆಲಸ ಮಾಡಲು ಒಂದು ಒಳ್ಳೆ ಹುಡುಗಿ ಇದ್ದರೆ ಕಳುಹಿಸಬೇಕೆಂದು ಪಾಪಣ್ಣನಿಗೆ ಹೇಳಿರುತ್ತಾರೆ. ಈ ಸಮಯಕ್ಕೆ ಸರಿಯಾಗಿ ಪಾಪಣ್ಣನಿಗೆ ಲಕುಮಿಯ ನೆನಪಾಗುತ್ತದೆ. ಶ್ರೀಮಂತ ಯಜಮಾನನಿಗೆ ಅಂತಹ ಒಂದು ಹುಡುಗಿ ನಮ್ಮ

ಊರಿನಲ್ಲಿ ಇದ್ದಾಳೆ. ಅವಳಿಗೆ ಇಂತಿಷ್ಟು ದುಡ್ಡು ಮುಂಗಡವಾಗಿ ಕೊಟ್ಟರೆ ಅವಳನ್ನು ತಂದು ಮನೆ ಕೆಲಸಕ್ಕೆ ಹಚ್ಚುತ್ತೇನೆ ಎಂದು ಹೇಳಿ, ಯಜಮಾನನಿಂದ ಮುಂಗಡ ಹಣವನ್ನು ಪಡೆದು ಊರಿಗೆ ಹೊರಡುತ್ತಾನೆ. ಊರಿಗೆ ಹೋದ ದಿನವೆ ಪಾಪಣ್ಣ ಕರಿನಿಂಗನಿಗೆ ವಿಷಯ ತಿಳಿಸುತ್ತಾನೆ. ತನಗೆ ಕೊಟ್ಟಿರುವ ಮುಂಗಡ ಹಣದಲ್ಲಿ ಪಾಪಣ್ಣ ಒಂದಿಷ್ಟು ಇಟ್ಟುಕೊಂಡು ಮಿಕ್ಕಿದ್ದನ್ನು ಕರಿನಿಂಗನಿಗೆ ಕೊಡುತ್ತಾನೆ. ದುಡ್ಡನ್ನು ಕಂಡು ಬಾಯಿ ಬಿಡುವ ಕರಿನಿಂಗ ತನ್ನ ಮಗಳಿಗೆ ಪಟ್ಟಣದಲ್ಲಿ "ಕ್ಯಾಮೆ" (ಕೆಲಸ) ಮಾಡಲು ಹೊರಡಬೇಕು ಅದಕ್ಕೆ ಬೇಕಾಗಿರುವ ಬಟ್ಟೆ ಬರೆ ತೆಗೆದುಕೊಳ್ಳಬೇಕೆಂದು ನಂಜಿ ಮತ್ತು ಲಕುಮಿಗೆ ಹೇಳುತ್ತಾನೆ. ಮಗಳನ್ನು ಹೀಗೆ ಗೊತ್ತಿಲ್ಲದ ಊರಿಗೆ ಕಂಡವರ ಮನೆಯಲ್ಲಿ ಕೆಲಸ ಮಾಡಲು ಕಳುಹಿಸುತ್ತಿದ್ದಾನಲ್ಲಾ ಎಂಬ ಚಿಂತೆ ನಂಜಿಗೆ ಕಾಡುತ್ತದೆ.ಮಗಳನ್ನು ಬೇರೆ ಊರಿಗೆ ಕಳಿಸಬೇಡಾ ಎಂದು ಎಷ್ಟೆ ಕೇಳಿದರು ಕರಿನಿಂಗ ಕೇಳುವುದಿಲ್ಲ. ತಾಯಿ ಮಗಳ ದುಃಖ ನೋವು, ಸಂಕಟ ಕರಿನಿಂಗನಿಗೆ ಅರ್ಥವೇ ಆಗುವುದಿಲ್ಲ. ಅದನ್ನು ಅವನು ಗಮನಿಸುವುದು ಇಲ್ಲ,ಒಟ್ಟಿನಲ್ಲಿ ಲಕುಮಿಯನ್ನು ದುಡಿಮೆಗಾಗಿ ಪಟ್ಟಣದಲ್ಲಿ ಬಿಡುವ ಪ್ರಯತ್ನದಲ್ಲಿ ಕರಿನಿಂಗ ಹಿಂದೆ ಸರಿಯುವುದಿಲ್ಲ. ತಂದೆಯ ಮನಸ್ಸಿನಂತೆ ಲಕುಮಿ ತನ್ನ ಬಟ್ಟೆಗಳನ್ನು ಕಟ್ಟಿಕೊಂಡು ಪಾಪಣ್ಣನ ಜೊತೆ ಕ್ಯಾಮೆ ಮಾಡಲು ಪಟ್ಟಣದತ್ತ ಮುಖ ಮಾಡುತ್ತಾಳೆ. ಇದು ಕಥೆಯಲ್ಲಿ ಒಂದು ಹೊಸ ತಿರುವು ಬರುವಲ್ಲಿ ಕಾರಣವಾಗುತ್ತದೆ. ಹಳ್ಳಿಯ ವಾತಾವರಣದಲ್ಲಿ ಬೆಳೆದಿರುವ ಲಕುಮಿಗೆ ಪಟ್ಟಣದ ಬದುಕು ಒಂದು ಹೊಸ ಅನುಭವಕ್ಕೆ ತಂದು ನಿಲ್ಲಿಸುತ್ತದೆ.

ಪಾಪಣ್ಣ ಲಕುಮಿಯನ್ನು ಗೊತ್ತು ಮಾಡಿದ ಮನೆಗೆ ತಂದು ಬಿಡುತ್ತಾನೆ. ಮನೆಯ ಯಜಮಾನರು ಹೇಳುವ ಕೆಲಸವನ್ನು ಮನಸ್ಸು ಪೂರ್ವಕವಾಗಿ ಮಾಡು, ಯಜಮಾನರಿಂದ ಹುಡುಗಿ ಒಳ್ಳೆಯವಳು ಅಂತ ಎನಿಸಿಕೊಳ್ಳಬೇಕು ಎಂದು ಹೇಳಿ ಹೊರಟು ಹೋಗುತ್ತಾನೆ. ಗೊತ್ತಿಲ್ಲದ ಪರಿಚಯವಿಲ್ಲದ ಮನೆಯಲ್ಲಿ ಆ ಮನೆಯವರ ಮಧ್ಯೆ ಅನಾಥ ಭಾವ ಎದುರಿಸುವ ಲಕುಮಿ ತಾನು ಬಂದಿರುವ ಉದ್ದೇಶವನ್ನು ಅರಿತುಕೊಂಡು ಮನೆಯ ಯಜಮಾನಿ ಹೇಳುವ ಕೆಲಸಗಳನ್ನು ಬಿಡದೇ ಮಾಡುತ್ತಾಳೆ. ಮನೆಯ ಕಸ, ಪಾತ್ರೆ, ಬಟ್ಟೆ, ಸ್ವಚ್ಛತೆ, ಗಿಡಗಳಿಗೆ ನೀರು ಹಾಕುವುದು ಹೀಗೆ ಪ್ರತಿಯೊಂದು ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿರುತ್ತಾಳೆ. ಆದರೆ ಮನೆಯ ಯಜಮಾನಿಗೆ ಮಾತ್ರ ಅವಳು ಮಾಡುವ ಕೆಲಸ ಹಿಡಿಸುವುದಿಲ್ಲ. ಪ್ರತಿಯೊಂದು ಕೆಲಸಕ್ಕೂ ಒಂದೊಂದು ಕಾರಣಕೊಟ್ಟು ಟೀಕೆ ಮಾಡುತ್ತಾಳೆ. ಹಳ್ಳಿಯವರಿಗೆಲ್ಲಾ ಬೆಲೆಬಾಳುವ ವಸ್ತುಗಳ ಬೆಲೆ ಗೊತ್ತಿರುವುದಿಲ್ಲ ಎಂದು ಹಿಯಾಳಿಸಿ ಮಾತನಾಡುತ್ತಾಳೆ ಕೆಲವೊಮ್ಮೆ ದೈಹಿಕ, ಮಾನಸಿಕ ಹಿಂಸೆಗಳನ್ನು ಕೊಡುತ್ತಿರುತ್ತಾಳೆ. ಇದು ಪುನರಾವರ್ತನೆಯಾದಾಗ ಲಕುಮಿ ಒಂದು ದಿನ ಮನೆಯಿಂದ ತಪ್ಪಿಸಿಕೊಂಡು ಹೊರಗೆ ಹೋಗುತ್ತಾಳೆ. ರಾತ್ರಿ ವೇಳೆ ಮನೆಬಿಟ್ಟು ಬರುತ್ತಾಳೆ. ಹೀಗೆ ಕತ್ತಲೆಯಲ್ಲಿ ಬರುತ್ತಿರಬೇಕಾದರೆ, ರಸ್ತೆಯ ಮಧ್ಯದಲ್ಲಿ ಸಿಕ್ಕ ಪುಂಡರ ಗುಂಪೊಂದು ಒಂಟಿ ಹುಡುಗಿ ಸಿಕ್ಕಳು ಎಂದು ಬೆನ್ನಟ್ಟಿ ಬರುತ್ತಾರೆ. ಅವರಿಂದ ತಪ್ಪಿಸಿಕೊಳ್ಳಲು ಲಕುಮಿ ಓಡಿ ಹೋಗುವಾಗ ಒಂದು ಕಾರಿಗೆ ಡಿಕ್ಕಿ ಹೊಡೆದು ಕೆಳಗೆ ಪ್ರಜ್ಞೆ

ತಪ್ಪಿದ ಸ್ಥಿತಿಯಲ್ಲಿ ಬೀಳುತ್ತಾಳೆ. ಆಗ ಕಾರಿನಿಂದ ಒಬ್ಬ ಯುವತಿ ಇಳಿದು ಬರುತ್ತಾಳೆ. ಇದನ್ನು ಗಮನಿಸುವ ಪುಂಡರ ಗುಂಪು ಅಲ್ಲಿಂದ ಕಾಲ್ಕಿತ್ತುತ್ತದೆ. ಇದು ಕಥೆಯಲ್ಲಿ ಇನ್ನೊಂದು ಪಾತ್ರದ ಪ್ರವೇಶವನ್ನು ಸೂಚಿಸುತ್ತದೆ. ಅದು ಪೂರ್ವಿಯ ಪಾತ್ರದ ಪ್ರವೇಶ.

ಪೂರ್ವಿ ಒಬ್ಬ ಧೈರ್ಯವಂತೆ, ಸಮಾಜ ಸುಧಾರಕಿ, ಹೆಣ್ಣಿನ ವಿರುದ್ಧ ಎಲ್ಲಿಯಾದರೂ ಅನ್ಯಾಯವಾಗುತ್ತಿದ್ದರೇ ಅದನ್ನು ಖಂಡಿಸುವ ಗುಣ ಅವಳಲ್ಲಿರುತ್ತದೆ. ತನ್ನ ಈ ಗುಣದಿಂದ ಹಲವರ ಬದುಕನ್ನು ಸರಿ ದಾರಿಗೆ ತಂದಿರುತ್ತಾಳೆ. ಪೂರ್ವಿ ಒಬ್ಬ ಸಮಾಜ ಸುಧಾರಕಿ ಯಾಗುವುದರ ಜೊತೆಗೆ ಮಿನಿಸ್ಟರ್ ದೇವಲಿಂಗಯ್ಯನವರ ಮಗ ಸೂರ್ಯನನ್ನು ಮದುವೆಯಾಗ ಬೇಕಾದವಳು ಆಗಿರುತ್ತಾಳೆ. ಲಕುಮಿ ಇವಳ ಕಾರಿಗೆ ಡಿಕ್ಕಿ ಹೊಡೆದಿರುತ್ತಾಳೆ. ಇಂಥ ರಾತ್ರಿಯಲ್ಲಿ ಈ ಹುಡುಗಿ ಹೀಗೇಕೆ ಓಡಿ ಬರುತ್ತಿದ್ದಳು? ಅವಳನ್ನು ಅಟ್ಟಿಸಿಕೊಂಡು ಬಂದವರು ಯಾರು? ನೋಡಿದರೆ ಹಳ್ಳಿಹುಡುಗಿ ಅಂತ ಅನಿಸುತ್ತಿದ್ದಾಳೆ. ಏನಾಗಿರಬಹುದು? ಎಂದು ಯೋಚನೆ ಮಾಡುತ್ತಾಳೆ. ಯೋಚಿಸುತ್ತಲೇ ಅವಳನ್ನು ಕಾರಿನಲ್ಲಿ ಹಾಕಿಕೊಂಡು ಮನೆಗೆ ಕರೆದುಕೊಂಡು ಹೋಗುತ್ತಾಳೆ.

ಇತ್ತ ತಮ್ಮ ಮನೆಗೆ ಕೆಲಸಕ್ಕೆಂದು ಬಂದ ಹುಡುಗಿ ತಪ್ಪಿಸಿಕೊಂಡಿದ್ದಾಳೆಂದು ತಿಳಿದ ಮನೆಯ ಯಜಮಾನರು ಅವಳಿಗೆ ಸಂಬಂಧ ಪಟ್ಟಂತಹ ಪಾಪಣ್ಣನಿಗೆ ವಿಷಯ ತಿಳಿಸಲಾಗುತ್ತದೆ. ಸುದ್ದಿ ತಿಳಿದ ಪಾಪಣ್ಣ ತಕ್ಷಣವೇ ಬೆಂಗಳೂರಿಗೆ ಬರುತ್ತಾನೆ. ತಮ್ಮ ಊರಿನ ಹುಡುಗಿ ಹಾಗೆಲ್ಲ ಮಾಡುವುದಿಲ್ಲ. ನೀವೇ ಅವಳಿಗೆ ಕೊಡಬಾರದ ಹಿಂಸೆ ಏನಾದರೂ ಕೊಟ್ಟಿರಬಹುದು ಅದಕ್ಕೆ ಅವಳು ತಪ್ಪಿಸಿಕೊಂಡು ಹೋಗಿದ್ದಾಳೆ ಎಂದು ಕೋಪಗೊಳ್ಳುತ್ತಾನೆ. ತಮ್ಮ ಹುಡುಗಿಗೆ ಹೀಗೆಲ್ಲಾ ಮಾಡಿದ್ದೀರಾ, ಅವಳಿಗೇನಾದರೂ ಹೆಚ್ಚು ಕಡಿಮೆಯಾದರೆ ನಿಮಗೆ ಬಿಡುವುದಿಲ್ಲವೆಂದು ಪಾಪಣ್ಣ ಸಿಟ್ಟಿನಿಂದ ಮಾತನಾಡುತ್ತಾನೆ. ಇದರಿಂದ ಮನೆಯ ಯಜಮಾನನಿಗೆ ದಿಕ್ಕೇ ತೋಚದಂತಾಗುತ್ತದೆ. ತಮ್ಮ ಮೇಲೆ ಇಲ್ಲ ಸಲ್ಲದ ಆರೋಪಗಳು ಬರಬಹುದು. ತಮ್ಮ ಮರ್ಯಾದೆ ಹರಾಜಾಗಬಹುದು. ಎಷ್ಟು ದುಡ್ಡು ಬೇಕೋ ತೆಗೆದುಕೊಳ್ಳಿ ಎಂದು ಪಾಪಣ್ಣನಿಗೆ ಮನೆಯ ಯಜಮಾನ ಮತ್ತು ಯಜಮಾನಿ ವಿನಂತಿಸಿಕೊಳ್ಳುತ್ತಾರೆ. ಇಲ್ಲಿಯವರೆಗೂ ತನ್ನ ಮಗಳು ಲಕುಮಿ ಕಾಣೆಯಾಗಿರುವ ವಿಷಯ ಗೊತ್ತಿರದ ಕರಿನಿಂಗ ವಿಷಯ ಗೊತ್ತಾದ ತಕ್ಷಣವೇ ಬೆಂಗಳೂರಿಗೆ ಬಂದು ಯಜಮಾನರ ಮನೆಯಲ್ಲಿ ದೊಡ್ಡ ರಾದ್ಧಾಂತವೇ ಮಾಡುತ್ತಾನೆ. ತಮ್ಮ ಮಗಳಿಗೆ ಏನಾದರೂ ಹೆಚ್ಚು ಕಡಿಮೆಯಾದರೆ ನಿಮ್ಮನ್ನು ಬಿಡುವುದಿಲ್ಲವೆಂದು ಹೇಳಿ ಎಚ್ಚರಿಕೆ ನೀಡುತ್ತಾನೆ. ವಿಷಯ ಪೋಲೀಸರವರೆಗೂ ಹೋಗುತ್ತದೆ. ಮನೆಯ ಯಜಮಾನ/ ಯಜಮಾನಿಗೆ ತಕ್ಕ ಶಾಸ್ತಿ ಮಾಡಿಸಲಾಗುತ್ತದೆ. ಪೋಲಿಸರ ಹುಡುಕಾಟದಿಂದ ಲಕುಮಿ ಎಲ್ಲಿರುವಳೆಂದು ಪತ್ತೆಯಾಗುತ್ತದೆ. ತಮ್ಮ ಮಗಳಿಗೆ ಯಾವುದೇ ಹಾನಿಯಾಗಿಲ್ಲ, ಅವಳು ಸುರಕ್ಷಿತವಾಗಿ, ಸುರಕ್ಷಿತವಾದ ಸ್ಥಳದಲ್ಲಿ ಇದ್ದಾಳೆಂದು ತಿಳಿದ ಮೇಲೆ ಕರಿನಿಂಗ ನಿಟ್ಟುಸಿರು ಬಿಡುತ್ತಾನೆ. ತನ್ನ ಮಗಳನ್ನು ರಕ್ಷಿಸಿದ ಪೂರ್ವಿಗೆ ಧನ್ಯವಾದ ಸಲ್ಲಿಸುತ್ತಾನೆ.

ಪೂರ್ವಿ ಲಕುಮಿಯನ್ನು ಮನೆಗೆ ತಂದ ಮೇಲೆ ಅವಳನ್ನು ಹೊಸ ವ್ಯಕ್ತಿಯಂತೆ ಮಾಡುತ್ತಾಳೆ. ಲಕುಮಿ ಪೂರ್ವಿಯ ಮನೆಯಲ್ಲಿ ಬಟ್ಟೆ, ಪಾತ್ರೆ, ಕಸ ಹೀಗೆ ಈ ಕೆಲಸಗಳನ್ನು ಮಾಡುತ್ತಿರುತ್ತಾಳೆ ಜೊತೆಗೆ ಕೈಗೆ ಸಿಗುವ ಪೇಪರನ್ನೋ, ಕಾಗದವನ್ನೋ ಕೂತೂಹಲದಿಂದ ಓದುತ್ತಿರುತ್ತಾಳೆ. ಲಕುಮಿಗೆ ಓದಿನಲ್ಲಿರುವ ಆಸಕ್ತಿಯನ್ನು ಗುರುತಿಸುವ ಪೂರ್ವಿ ಅವಳನ್ನು ಒಂದು ಪ್ರತಿಷ್ಠಿತ ಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಸೇರಿಸುತ್ತಾಳೆ. ಲಕುಮಿ ಚೆನ್ನಾಗಿ ಓದಿ ಮುಂದೆ ಬರುತ್ತಿರುತ್ತಾಳೆ. ಆದರೆ ತಂದೆ ಕರಿನಿಂಗನಿಗೆ ಮಾತ್ರ ದುಡಿಯುವ ಕೈ ಮುರಿದಂತೆ ಭಾಸವಾಗುತ್ತದೆ. ಲಕುಮಿಯನ್ನು ಮುಂದೆ ಇಟ್ಟುಕೊಂಡು ಒಂದು ಒಳ್ಳೆಯ ಭವಿಷ್ಯ ನೀಡಿದ ಪೂರ್ವಿಯ ಪರೋಪಕಾರವನ್ನು ಮರೆತು ಅವರಿಂದ ಹಣ ಕೇಳುತ್ತಾನೆ. ತನ್ನ ಮಗಳನ್ನು ಕೆಲಸದಿಂದ ಬಿಡಿಸಿಕೊಂಡು ತಮ್ಮ ಮನೆಯಲ್ಲಿಟ್ಟದ್ದೀರಿ. ನಮಗೆ ಹಳ್ಳಿಯ ಕಡೆಗೆ ಸಂಪಾದನೆ ಇಲ್ಲದಂತಾಗಿದೆ. ನಮ್ಮ ಮಗಳು ದುಡಿಯುತ್ತಿದ್ದರೆ, ನಮ್ಮ ಸಂಸಾರಕ್ಕೆ ಒಂದು ಆಸರೆಯಾಗುತ್ತಿತ್ತು ಎಂದು ಕರಿನಿಂಗ ಪೂರ್ವಿ ಮತ್ತವಳ ತಂದೆಗೆ ಹೇಳುತ್ತಾನೆ. ಇದನ್ನು ಕೇಳುವ ಅವರು ಕರಿನಿಂಗನ ಅಸಹಾಯಕತೆಗೆ ವ್ಯಥೆಪಟ್ಟುಕೊಂಡು ತಮ್ಮಲ್ಲಿರುವ ದುಡ್ಡುಕೊಟ್ಟು ಕಳುಹಿಸುತ್ತಾರೆ. ಹೀಗೆ ದುಡ್ಡು ತೆಗೆದುಕೊಂಡು ಹೋಗುವ ಪ್ರಕ್ರಿಯೆ ಮುಂದುವರೆಯುತ್ತಾ ಹೋಗುತ್ತದೆ. ಕಥೆಯಲ್ಲಿ ಇನ್ನೊಂದು ಪಾತ್ರವಾದ ಲಕ್ಷ್ಮೀ ಎನ್ನುವ ಹುಡುಗಿಯ ಪ್ರವೇಶವಾಗುತ್ತದೆ. ಈ ಹುಡುಗಿ ತನಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಪೂರ್ವಿ ಹತ್ತಿರ ಮಾತಾಡಿರುತ್ತಾಳೆ. ಪೂರ್ವಿ ಲಕ್ಷ್ಮೀಯನ್ನು ಕಷ್ಟದಿಂದ ಪಾರು ಮಾಡಿ ಅವಳಿಗೆ ಒಂದು ಸೀರೆ ಅಂಗಡಿಯಲ್ಲಿ ಕೆಲಸ ಕೊಡಿಸುತ್ತಾಳೆ. ಈ ಲಕ್ಷ್ಮೀಯ ಮೂಲಕವೇ ಇನ್ನೊಬ್ಬ ಮಧ್ಯವಯಸ್ಸಿನ ಮಹಿಳೆಯ ಪರಿಚಯವಾಗುತ್ತದೆ. ಈ ಮಹಿಳೆ ಬದುಕಿನಲ್ಲಿ ಒಬ್ಬ ಗಂಡಸಿನಿಂದ ಅನ್ಯಾಯಕ್ಕೊಳಗಾಗಿರುತ್ತಾಳೆ. ದೂರವಾಣಿಯ ಮೂಲಕ ಪೂರ್ವಿಯೊಂದಿಗೆ ಮಾತನಾಡುತ್ತಾಳೆ. ಆ ಮಹಿಳೆ ತನಗೆ ಪೂರ್ವಿಯ ತಂದೆಯಿಂದಲೇ ಮೋಸ ಆಗುತ್ತಿದ್ದು ತನಗೆ ನ್ಯಾಯ ಕೊಡಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಈ ವಿಷಯ ತಿಳಿದ ಮೇಲೆ ಪೂರ್ವಿಯ ಮನಸ್ಥಿತಿಯಲ್ಲಿ ಬಹಳ ಬದಲಾವಣೆ ಕಂಡುಬರುತ್ತದೆ. ತನ್ನ ತಂದೆಯಿಂದ ಒಂದು ಹೆಣ್ಣು ನೋವು, ಅನ್ಯಾಯ ಎದುರಿಸುತ್ತಿದ್ದಾಳಾ? ಯಾಕೆ? ಏನಿರಬಹುದು ಎಂದು ಕೂಲಂಕುಷವಾಗಿ ತಿಳಿದುಕೊಳ್ಳುತ್ತಾಳೆ. ಆ ಮಧ್ಯೆ ವಯಸ್ಕ ಹೆಣ್ಣು ಮತ್ತು ತನ್ನ ತಂದೆಯ ಮಧ್ಯ ಇರುವ ಸಂಬಂಧವನ್ನು ಹೆಚ್ಚು ಗುಟ್ಟಾಗಿಡದೇ ತನ್ನ ತಂದೆಯೊಂದಿಗೆ ಆ ಹೆಣ್ಣಿಗೆ ಮದುವೆ ಮಾಡಿಸುತ್ತಾಳೆ. ತನಗೊಬ್ಬ ಹೊಸ ಅಮ್ಮ, ತಂದೆಗೊಬ್ಬ ಜೀವನ ಸಂಗಾತಿ ಸಿಕ್ಕ ಸಂಭ್ರಮ ಪೂರ್ವಿಯಲ್ಲಿ ಎದ್ದು ಕಾಣುತ್ತದೆ. ಕಥೆಯು ಹೀಗೆ ಮುಂದೆ ಸಾಗುತ್ತದೆ.

ಮುಂದುವರೆದ ಭಾಗದಲ್ಲಿ ದೇವಲಿಂಗಯ್ಯನವರ ಮಗ ಸೂರ್ಯನಿಗೂ, ಪೂರ್ವಿಗೂ ಗೊತ್ತು ಮಾಡಿದ ದಿನಾಂಕದಂದು ಮದುವೆ ಮಾಡುವ ತಯಾರಿ ನಡೆಯುತ್ತಿರುತ್ತದೆ. ಅದಕ್ಕೆ ಬೇಕಾಗಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿರುತ್ತದೆ. ಇತ್ತ ಲಕುಮಿ ತನ್ನ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಿರುತ್ತಾಳೆ. ಹಾಗಾಗಿ ತನ್ನ ಅಕ್ಕನನ್ನು

ಮದುವೆಯಾಗುತ್ತಿರುವ ಗಂಡು ಯಾರೆಂಬುದು ಅವಳು ತಿಳಿದುಕೊಳ್ಳಲು ಆಗುವುದಿಲ್ಲ. ಭೇಟಿಯಾಗುವಂತಹ ಸಂದರ್ಭಗಳು ಬಂದಾಗ ಅವರಿಬ್ಬರು ಮುಖಾಮುಖಿಯಾಗುವುದೇ ಇಲ್ಲ. ದೂರದಿಂದಲೇ ನೋಡುವ ಅವಕಾಶ ದೊರೆಯುತ್ತದೆ.ಈ ವೇಳೆಯಲ್ಲಿಯೇ ಮದುವೆಯ ದಿನ ಬಂದೇ ಬಿಡುತ್ತದೆ. ಆವತ್ತು ಲಕುಮಿಗೆ ಪರೀಕ್ಷೆಯ ದಿನವಾದ್ದರಿಂದ ಪೂರ್ವಿ ಲಕುಮಿಯನ್ನು ಬಲವಂತದಿಂದ ಪರೀಕ್ಷೆಗೆ ಕಳುಹಿಸುತ್ತಾಳೆ. ಮದುವೆ ಸಾಧಾರಣವಾಗಿ ದೇವಸ್ಥಾನದಲ್ಲಿ ನಡೆಯುತ್ತಿದ್ದು ತಾನು ಪರೀಕ್ಷೆ ಮುಗಿದ ಮೇಲೆ ಅಲ್ಲಿಗೆ ಬರಬೇಕೆಂದು, ಪರೀಕ್ಷೆ ಚೆನ್ನಾಗಿ ಬರೆಯುವಂತೆ ಹೇಳಿ ಕಳುಹಿಸುತ್ತಾಳೆ.

ಪೂರ್ವಿ ಮತ್ತು ಸೂರ್ಯನ ಮದುವೆ ನಡೆದು ಹೋಗುತ್ತದೆ. ಲಕುಮಿ ಶಾಲೆಯಿಂದ ಬರುವಷ್ಟರಲ್ಲಿ ಮದುವೆ ಮುಗಿದಿರುತ್ತದೆ. ದೇವಸ್ಥಾನದಲ್ಲಿ ಬಂದ ಲಕುಮಿಯನ್ನು ನೋಡಿ ಸೂರ್ಯನ ಮನೆಯವರೆಲ್ಲ ಕ್ಷಣ ದಂಗಾಗಿ ನಿಲ್ಲುತ್ತಾರೆ. ಲಕುಮಿಗೂ ಸೂರ್ಯನ ಮನೆಯವರನ್ನು ನೋಡಿ ಒಂದು ಕ್ಷಣ ಇವರನ್ನೆಲ್ಲೋ ನೋಡಿದ್ದೀನಲ್ಲಾ ಯಾರಿವರು? ಎಂದು ನೆನಪು ಮಾಡಿಕೊಳ್ಳುತ್ತಾಳೆ. ತನಗೆ ತಾಯತ ಕಟ್ಟಿದ ಹುಡುಗನ ಕಡೆಯವರು ಎಂದು ಮನದಟ್ಟಾಗುತ್ತದೆ. ಇದನ್ನು ದಾಟಿ ತನ್ನ ಅಕ್ಕನಿಗೆ ಕೈ ಹಿಡಿದ ಮಾವ ಯಾರು ಎಂದು ತಿಳಿದುಕೊಳ್ಳಲು ಮುಂದೇ ಬಂದಾಗ ಅವಳಿಗೆ ಅಲ್ಲಿಯೂ ಆಶ್ಚರ್ಯ ಕಾದಿರುತ್ತದೆ. ತನಗೆ ತಾಯತಾ ಕಟ್ಟಿದ ಗಂಡು ಇಲ್ಲಿ ಪೂರ್ವಕ್ಕನ ಗಂಡನಾಗಿದ್ದಾನೆ ಎಂದು ತಿಳಿದು ಖುಷಿಯಿಂದ ಈ ವಿಷಯವನ್ನು ಪೂರ್ವಿಗೆ ತಿಳಿಸಲು ಮುಂದೆ ಬರುತ್ತಾಳೆ. ಅಷ್ಟರಲ್ಲಿಯೇ ಸೂರ್ಯನ ತಾಯಿ ಅವಳನ್ನು ತಡೆಯುತ್ತಾಳೆ. ಪೂರ್ವಿಗೆ ಲಕುಮಿ ಮತ್ತು ಸೂರ್ಯನ ವಿಷಯ ಗೊತ್ತಾಗುವುದು ಬೇಡವೆಂದು ಹೇಳುತ್ತಾಳೆ. ಲಕುಮಿ ಕಾರಣ ಗೊತ್ತಾಗದೇ ಗೊಂದಲಕ್ಕೀಡಾಗುತ್ತಾಳೆ. ಆದರೂ ಆ ಸಂದರ್ಭದಲ್ಲಿ ಯಾವುದನ್ನೂ ತೋರಿಸದೇ ನಗುನಗುತ್ತಾ ಬೇರೆಯುತ್ತಾಳೆ. ಮುಂದೆ ಕಥೆಯಲ್ಲಿ ಹಲವು ತಿರುವುಗಳು ಬರುತ್ತವೆ. ಹೊಸ ಪಾತ್ರಗಳ ಪ್ರವೇಶವಾಗುತ್ತದೆ.

ಇದೇ ಸಮಯದಲ್ಲಿ ಪೂರ್ವಿಯಿಂದ ಮುಚ್ಚಿಟ್ಟಿದ್ದ ಸತ್ಯವೊಂದು ಬಹಿರಂಗವಾಗುತ್ತದೆ. ಲಕುಮಿಯ ಕತ್ತಲ್ಲಿರುವ ತಾಳಿಯನ್ನು ಪೂರ್ವಿ ನೋಡುತ್ತಾಳೆ. ಒಂದು ಕ್ಷಣಕ್ಕೆ ತನ್ನ ಕಣ್ಣನ್ನು ನಂಬದಂತಹ ಪರಿಸ್ಥಿತಿ ಅವಳದಾಗಿರುತ್ತದೆ. ಈ ಕುರಿತು ಲಕುಮಿಯನ್ನು ಕೇಳಿದಾಗ ತನ್ನ ಕೊರಳಲ್ಲಿರುವುದು "ತಾಯತ"ವೆಂದು ಸೂರ್ಯ ಮಾಮ ಮೊದಲು ನನಗೆ ಈ ತಾಯತ ಕಟ್ಟಿದ್ದು ಎಂದು ಹೇಳುತ್ತಾಳೆ. ತಾನು ಏನು ಕೇಳುತ್ತೀದ್ದೆನೆ ಇದು ಸತ್ಯವೇ? ಸುಳ್ಳೇ? ಏನು ನಡೆಯುತ್ತಿದೆ ಎಂದು ವ್ಯಥೆ ಪಡುತ್ತಾಳೆ. ಇಷ್ಟಕ್ಕೆ ಸುಮ್ಮನಾಗದ ಪೂರ್ವಿ ಈ ಘಟನೆ ನಡೆಯಲು ಮುಖ್ಯ ಕಾರಣವೇನು? ಯಾಕೆ ಹೀಗೆ ಆಯಿತು? ಅದರ ಸತ್ಯಾಸತ್ಯತೆಯೇನು? ತನಗೆ ತಿಳಿಯಬೇಕು ಎಂದು ಕೇಳುತ್ತಾಳೆ.ಮೊದಲು ಸೂರ್ಯನಿಗೆ ಈ ವಿಚಾರವಾಗಿ ಕೇಳುತ್ತಾಳೆ. ಸೂರ್ಯ ಪೂರ್ವಿಯೊಂದಿಗೆ ಜೀವನದುದ್ದಕ್ಕೂ ಜೊತೆಯಾಗಿ

ಇರಬೇಕೆಂಬ ಆಸೆಯಿಂದ ಈ ರೀತಿಯಾಗಿ ಮಾಡಿದ್ದೇವೆ. ಎಂದು ಹೇಳುತ್ತಾನೆ. ಅದಕ್ಕೆ ತಂದೆ ತಾಯಿ ಅಜ್ಜಿ ಎಲ್ಲರ ಒಪ್ಪಿಗೆ ಇದ್ದದ್ದು ಎಲ್ಲರ ಸಮ್ಮುಖದಲ್ಲಿಯೇ ಇಂತಹ ಅನ್ಯಾಯ ನಡೆದದ್ದು ಎಂದು ಹೇಳುತ್ತಾನೆ. ತನ್ನಿಂದ ಇಂಥ ಒಂದು ಸತ್ಯವನ್ನು ಮುಚ್ಚಿಡಲಾಗಿದೆ. ನೀವೆಲ್ಲರೂ ನನಗೆ ಮೋಸ ಮಾಡಿದಿರಿ, ಮೋಸ ಮಾಡಿದವರ ಜೊತೆ ನಾನು ಇರಲಾರೆ ಎಂದು ಹೇಳಿ ಮನೆಬಿಟ್ಟು ತನ್ನ ತಂದೆ ಮನೆಗೆ ಬರುತ್ತಾಳೆ. ತಂದೆಯ ಮನೆಯಲ್ಲಿಯೂ ಬಹಳ ದಿನ ಉಳಿಯುವುದಿಲ್ಲ ಕಾರಣ ತನ್ನ ಗಂಡ, ಗಂಡನ ಮನೆಯವರೊಂದಿಗೆ ತಂದೆಯೂ ಕೂಡ ಈ ಅನ್ಯಾಯದಲ್ಲಿ ಭಾಗಿಯಾಗಿದ್ದಾರೆಂದು ತಿಳಿದು ಬಹಳ ವ್ಯಥೆ ಪಡುತ್ತಾಳೆ. ಅನ್ಯಾಯವಾಗಿ ಒಬ್ಬ ಮುಗ್ಧ ಹುಡುಗಿಯ ಬಾಳಿನಲ್ಲಿ ಇಂತಹ ಅನ್ಯಾಯ ನಡೆದು ಹೋಯಿತಲ್ಲಾ, ಆ ಅನ್ಯಾಯ ತನ್ನ ಗಂಡನಿಂದಲೇ ಆಯಿತಲ್ಲಾ ಎಂದು ವ್ಯಥೆ ಪಡುತ್ತಾಳೆ. ಇದನ್ನೆಲ್ಲವನ್ನು ತನ್ನಿಂದ ಸಹಿಸಿಕೊಳ್ಳಲಾಗುವುದಿಲ್ಲವೆಂದು ಹೇಳಿ ಬೇರೆ ಕಡೆ ವಾಸಿಸಲು ನಿರ್ಧರಿಸುತ್ತಾಳೆ.

ಇದೇ ಸಂದರ್ಭದಲ್ಲಿ ಪೂರ್ವಿ ಕ್ಯಾನ್ಸರಗೆ ಒಳಗಾಗುತ್ತಾಳೆ, ಇದರ ನಡುವೆ ಅವಳು ಗರ್ಭಿಣಿಯಾಗಿರುವ ವಿಷಯ ತಿಳಿದು ದುಃಖಿಸುತ್ತಾಳೆ. ಈ ನಡುವೆ ಕಥೆಯು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಸೂರ್ಯನಿಂದ ಪೂರ್ವಿ ದೂರಾಗಿರುವ ವಿಷಯ ತಿಳಿದ ಪೂರ್ವಿಯ ಗೆಳತಿ ಲಕ್ಷ್ಮೀ ಈ ಸಂದರ್ಭವನ್ನು ತನ್ನ ಉಪಯೋಗಕ್ಕೆ ಬಳಸಿಕೊಳ್ಳುತ್ತಾಳೆ. ಸೂರ್ಯನಿಗೆ ಪದೇ ಪದೇ ಫೋನು ಮಾಡುವುದು ಅವನನ್ನು ತುಂಬಾ ಪ್ರೀತಿಸುತ್ತಿದ್ದೇನೆಂದು ಹೇಳುವುದು ಮಾಡುತ್ತಾಳೆ. ಹೀಗೆ ಮಾಡುವುದರ ಮೂಲಕ ತನ್ನ ಬಗ್ಗೆ ಸೂರ್ಯನಿಗೆ ಪ್ರೀತಿ ಹುಟ್ಟುವ ಹಾಗೆ ಮಾಡುತ್ತಾಳೆ. ಸೂರ್ಯ ತಾನೊಬ್ಬ ವಿವಾಹಿತ ಎಂಬುವುದನ್ನು ಮರೆತು ಲಕ್ಷ್ಮೀಯ ಪ್ರೀತಿಯಲ್ಲಿ ಬಿದ್ದುಬಿಡುತ್ತಾನೆ. ಅವಳದೇ ವಿಚಾರದಲ್ಲಿ ಮುಳುಗಿರುವ ಅವನಿಗೆ ಪೂರ್ವಿಯ ಬಗ್ಗೆ ವಿಚಾರಮಾಡುವುದಿಲ್ಲ. ಬದಲಿಗೆ ಪೂರ್ವಿಯಿಂದ ಆದಷ್ಟು ದೂರ ಹೋಗಬೇಕೆಂದು ನಿರ್ಧರಿಸುತ್ತಾನೆ. ತನ್ನ ಈ ಮನಸ್ಥಿತಿಯನ್ನು ಲಕ್ಷ್ಮೀಗೂ ಹೇಳುತ್ತಾನೆ. ಇದನ್ನೇ ಬಯಸುತ್ತಿದ್ದ ಲಕ್ಷ್ಮೀಗೆ ಮತ್ತಷ್ಟು ಬಲ ಬಂದಂತಾಗಿ ಬಿಡುತ್ತದೆ. ಇಬ್ಬರು ಹೊರಗಡೆ ಸುತ್ತಾಡುವುದು, ಭೇಟಿಯಾಗುವುದು ಮಾಡುತ್ತಾರೆ. ಇವರ ಚಲನ ವಲನವನ್ನು ಲಕುಮಿ ಗಮನಿಸುತ್ತಾಳೆ. ಲಕುಮಿ ಲಕ್ಷ್ಮೀಗೆ ಭೇಟಿಯಾಗಿ ನಿನ್ನಿಂದ ಇಂತಹ ವರ್ತನೆಯನ್ನು ನಿರೀಕ್ಷಿಸಿರಲಿಲ್ಲ ಎಂದು ತನಗೆ ಬಂದಿರುವ ಕೋಪವನ್ನೇಲ್ಲಾ ಲಕ್ಷ್ಮೀಯ ಮೇಲೆ ಹಾಕುತ್ತಾಳೆ. ತನ್ನ ಅಕ್ಕ ಮಾಮನ ಮಧ್ಯೆ ಬಂದರೆ ಪರಿಸ್ಥಿತಿ ಸರಿಯಾಗಿರುವುದಿಲ್ಲ ಎಂದು ಎಚ್ಚರಿಸುತ್ತಾಳೆ. ಜೊತೆಗೆ ಸೂರ್ಯನಿಗೂ ಕೂಡಾ ತಾನು ಮಾಡುತ್ತಿರುವುದು ಸರಿ ಇಲ್ಲಾ, ತನ್ನ ಅಕ್ಕನ ಆರೋಗ್ಯ ಸರಿಯಿಲ್ಲದ ಸಮಯದಲ್ಲಿ ಅಕ್ಕನ ಕಡೆ ಕೊಡಬೇಕಾದ ಗಮನ ಈ ಲಕ್ಷ್ಮೀ ಕಡೆಗೆ ಕೊಡುತ್ತಿಯಲ್ಲಾ ಎಂದು ಅವರಿಬ್ಬರಿಗೆ ಬುದ್ಧಿವಾದ ಹೇಳಿ ಹೊರಡುತ್ತಾಳೆ.ಮುಂದುವರೆಯುತ್ತಿದ್ದಂತೆ ಕಥೆಯಲ್ಲಿ ಲಕ್ಷ್ಮೀಯು ಒಂದು ವಾಹನ ಅಪಘಾತದಲ್ಲಿ ಸಾವನ್ನಪ್ಪುತ್ತಾಳೆ. ಕಥೆಯ ಮುಂದಿನ

ಹಂತದಲ್ಲಿ ಲಕುಮಿ ಪೂರ್ವಿಯ ಜೊತೆ ಇರಲು ಹೊರಡುತ್ತಾಳೆ. ಅನಾರೋಗ್ಯದಿಂದ ಬಳಲುತ್ತಿರುವ ಪೂರ್ವಿಗೆ ತಾಯಿಯಂತೆ ಆರೈಕೆ ಮಾಡಲು ಮುಂದಾಗುತ್ತಾಳೆ. ಈ ಮಧ್ಯೆ ಲಕುಮಿ ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿ ಕಾಲೇಜು ಮೆಟ್ಟಲು ಹತ್ತುತ್ತಾಳೆ. ಕಾಲೇಜಿನಲ್ಲಿ ಅವಳು ಬದುಕಿನ ಇನ್ನೊಂದು ಪುಟದ ಆರಂಭವಾಗುತ್ತದೆ.

ಲಕುಮಿ ಹಳ್ಳಿಯ ಉಡುಗೆಯಾದ ಲಂಗ ದಾವಣಿಯನ್ನು ಹಾಕಿಕೊಂಡು ಕಾಲೇಜಿಗೆ ಹೋಗುತ್ತಿರುತ್ತಾಳೆ. ಕಾಲೇಜಿನಲ್ಲಿ ಎಲ್ಲ ವಿದ್ಯಾರ್ಥಿಗಳು ಆಧುನಿಕ ಶೈಲಿಯ ಬಟ್ಟೆಗಳನ್ನು ಧರಿಸಿ ಬರುವುದರಿಂದ ಇವರ ಮಧ್ಯೆ ಲಕುಮಿ ಭಿನ್ನವಾಗಿ ಕಾಣಿಸಿಕೊಳ್ಳುತ್ತಾಳೆ, ತನ್ನ ಸಹಪಾಠಿಗಳು ಇವಳ ಉಡುಗೆಯನ್ನು ಗೇಲಿ ಮಾಡಿ ಮಾತನಾಡುತ್ತಾರೆ. ಆದರೂ ಲಕುಮಿ ಅವರ ಮಾತಿಗೆ ಉತ್ತರಿಸದೇ ತನ್ನ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡುವುದಿಲ್ಲ. ತಾನು ಹೀಗೆ ಇರುವುದು, ಹೀಗೆಯೇ ಬಟ್ಟೆ ಹಾಕಿಕೊಳ್ಳೊದು. ತನ್ನನ್ನು ಒಪ್ಪಿಕೊಂಡರು ಸಂತೋಷ ಒಪ್ಪಿಕೊಳ್ಳದಿದ್ದರೂ ಸಂತೋಷ ಎಂದು ಹೇಳುತ್ತಾಳೆ. ಕಾಲೇಜಿನಲ್ಲಿ ಮೊದ ಮೊದಲು ಇವಳೊಂದಿಗೆ ಬೆರೆಯಲು ಇಷ್ಟಪಡದವರು ಇವಳ ಬುದ್ಧಿವಂತಿಕೆಗೆ ಸೋತು ಅವಳೊಂದಿಗೆ ಸ್ನೇಹವನ್ನು ಬಯಸಿ ಬರುತ್ತಾರೆ. ಕಥೆಯ ಉದ್ದಕ್ಕೂ ಲಕುಮಿಯ ಒಳ್ಳೆತನ, ಇನ್ನೊಬ್ಬರ ಕಷ್ಟಕ್ಕೆ ಮಿಡಿಯುವ ಹೃದಯವನ್ನು ತೋರಿಸಿರುವುದರಿಂದ ಕಾಲೇಜು ಶಿಕ್ಷಣದಲ್ಲಿಯೂ ಆ ಗುಣಗಳನ್ನು ಮುಂದುವರಿಸಲಾಗುತ್ತದೆ. ಈ ಮಧ್ಯೆ ಅವಳಿಗೆ ಕಾಲೇಜಿನಲ್ಲಿ ಸಹಪಾಠಿಯಾದ ರಾಹುಲ್ ಎಂಬ ಹುಡುಗನ ಪರಿಚಯವಾಗುತ್ತದೆ. ರಾಹುಲ್ ಒಬ್ಬ ಶ್ರೀಮಂತ ಉದ್ಯಮಿಗಳ ಏಕೈಕ ಪುತ್ರ ಓದಿನಲ್ಲಿ ಯಾವುದೇ ರೀತಿಯ ಒಲವನ್ನು ತೋರಿಸುವುದಿಲ್ಲ. ಕಾಲೇಜಿನಲ್ಲಿ ತನ್ನದೇ ಆದ ಗುಂಪೊಂದನ್ನು ಕಟ್ಟಿಕೊಂಡು ಓಡಾಡುತ್ತಿರುತ್ತಾನೆ. ಇಂತಹ ಹುಡುಗನನ್ನು ಕಂಡು ಲಕುಮಿ ಆತ್ಮೀಯವಾಗಿ ಮಾತನಾಡಿಸುತ್ತಾಳೆ. ಮತ್ತು ಅವನಿಗೆ ಓದಿನ ಮಹತ್ವದ ಬಗ್ಗೆ ತಿಳಿಸಿ ಹೇಳುತ್ತಾಳೆ. ಅವಳ ಮಾತುಗಳಿಂದ ಪ್ರಭಾವಿತನಾಗುವ ರಾಹುಲ್ ಲಕುಮಿಯ ಆಸೆಯಂತೆ ಪರೀಕ್ಷೆಯನ್ನು ಉತ್ತಮ ಅಂಕಗಳೊಂದಿಗೆ ಪಾಸು ಮಾಡುತ್ತಾನೆ. ಮಗನ ಈ ಸಾಧನೆಯನ್ನು ಕಂಡು ಅವನ ತಂದೆ ತಾಯಿಗಳು ತುಂಬಾ ಸಂತಸಗೊಳ್ಳುತ್ತಾರೆ. ಲಕುಮಿ ರಾಹುಲ್‌ಗೆ ಒಬ್ಬ ಒಳ್ಳೆಯ ಸ್ನೇಹಿತೆಯಾಗಿ, ಮಾರ್ಗದರ್ಶಕಳಾಗಿ ನಿಲ್ಲುತ್ತಾಳೆ. ಅವನಲ್ಲಿ ಅಡಗಿರುವ ಪ್ರತಿಭೆಯನ್ನು ಈ ಮೂಲಕ ಹೊರತರುತ್ತಾಳೆ. ಇದು ಲಕುಮಿ ಮಾಡಿದ ಒಂದು ದೊಡ್ಡ ಸಾಧನೆಯೆಂದು ಹೇಳಬಹುದು.ಲಕುಮಿಯಲ್ಲಿರುವ ಈ ಗುಣದಿಂದಾಗಿ ಲಕುಮಿ ಎಲ್ಲರ ಪ್ರೀತಿಗೆ ಪಾತ್ರಳಾಗುತ್ತಾಳೆ. ಕಾಲೇಜಿನಲ್ಲಿ ನಡೆಯುವ ಹಲವು ಘಟನೆಗಳಲ್ಲಿ ನಡೆಯುತ್ತವೆ ಅದರಲ್ಲಿ ಒಂದು ಘಟನೆ ಹೀಗೆ ನಡೆಯುತ್ತದೆ.

ಅದೊಂದು ದಿನ ಚಿಕ್ಕ ಮಗುವನ್ನು ಕಂಕುಳಲ್ಲಿ ಹೊತ್ತು ಹೆಣ್ಣುಮಗಳೊಬ್ಬಳು ಕಾಲೇಜಿಗೆ ಬರುತ್ತಾಳೆ. ಕಾಲೇಜಿನಲ್ಲಿ ಅವಳನ್ನು ಯಾರು ಗಮನಿಸುವುದಿಲ್ಲ ತಮಗೆ ಸಂಬಂಧವಿಲ್ಲದಂತೆ ಇದ್ದು ಬಿಡುತ್ತಾರೆ. ಆದರೆ ಲಕುಮಿ ಮಾತ್ರ ಆ ಹೆಣ್ಣುಮಗಳನ್ನು ಕಂಡು ಆತ್ಮೀಯವಾಗಿ

ಮಾತನಾಡಿಸುತ್ತಾಳೆ. ಅವಳನ್ನು ಹತ್ತಿರಕ್ಕೆ ಕರೆದು ತಾನು ಯಾರು? ಇಲ್ಲಿಗೇಕೆ ಬಂದಿರುವೆ? ಇಲ್ಲಿ ಯಾರನ್ನು ಭೇಟಿಯಾಗಬೇಕಿತ್ತು? ಎಂದು ಕಾಳಜಿಯಿಂದ ಕೇಳುತ್ತಾಳೆ. ಆ ಮಹಿಳೆ ಅವಳ ಮಾತಿಗೆ ಉತ್ತರಿಸುತ್ತಾ ತನ್ನ ಗಂಡ ಈ ಕಾಲೇಜಿನಲ್ಲಿ ಉದ್ಯೋಗಿಯಾಗಿದ್ದು ಸುಮಾರು ತಿಂಗಳುಗಳಿಂದ ಹಳ್ಳಿಯ ಕಡೆ ಬಂದಿಲ್ಲ. ತನ್ನನ್ನಾಗಲಿ ತನ್ನ ಮಗುವನ್ನಾಗಲಿ ನೋಡಲು ಬಂದಿಲ್ಲ. ಅದಕ್ಕಾಗಿ ಗಾಬರಿಯಾಗಿ ಏನಾಗಿದೆಯೋ? ಎಂದು ನೋಡಲು ಬಂದಿದ್ದೇನೆ ಎಂದು ಹೇಳುತ್ತಾಳೆ. ಆ ಹೆಣ್ಣುಮಗಳ ಮಾತನ್ನು ಕೇಳುವ ಲಕುಮಿಗೆ ಆಶ್ಚರ್ಯವಾಗುತ್ತದೆ. ಈ ಮುಗ್ಧೆ ಯಾರದ್ದೋ ಮೋಸಕ್ಕೆ ಬಲಿಯಾಗಿದ್ದಾಳೆ ಎಂದು ತಿಳಿದುಕೊಳ್ಳುತ್ತಾಳೆ. ಲಕುಮಿ ಆ ಹೆಣ್ಣುಮಗಳ ಗಂಡನ ಹೆಸರೇನು? ಎಂದು ಕೇಳುತ್ತಾಳೆ. ಸಾಂಪ್ರದಾಯಿಕ ಚೌಕಟ್ಟಿನೊಳಗೆ ಬೆಳೆದಿರುವುದರಿಂದ ತನ್ನ ಗಂಡನ ಹೆಸರು ಹೇಳುವುದಿಲ್ಲವೆಂದು ಹೇಳುತ್ತಾಳೆ. ಹೀಗೆ ಹೇಳಿದರೆ ನಿನ್ನ ಗಂಡ ಯಾರೆಂದು ಪತ್ತೆಹಚ್ಚುವುದು ಹೇಗೆ? ಎಂದು ಕೇಳುತ್ತಾಳೆ. ಆಗ ಆ ಹೆಣ್ಣುಮಗಳು ತನ್ನ ಬಳಿ ಇರುವ ಗಂಡನ ಫೋಟೋ ತೋರಿಸುತ್ತಾಳೆ. ಆಗ ಲಕುಮಿಗೆ ಒಂದು ಕ್ಷಣ ತನ್ನ ಕಣ್ಣನ್ನೇ ನಂಬಲು ಆಗದಂತಹ ಆಶ್ಚರ್ಯ ಕಂಡುಬರುತ್ತದೆ.

ಆ ಫೋಟೋದಲ್ಲಿರುವ ವ್ಯಕ್ತಿ ಬೇರೆ ಯಾರು ಆಗಿರದೆ ತನ್ನದೇ ಕಾಲೇಜಿನ ದೈಹಿಕ ಶಿಕ್ಷಕರಾಗಿರುತ್ತಾರೆ. ಈ ಶಿಕ್ಷಕರು ತನ್ನ ಮದುವೆಯೆ ಆಗಿಲ್ಲ, ತಾನಿನ್ನು ಅವಿವಾಹಿತ ಎಂದು ಹೇಳಿಕೊಂಡಿರುತ್ತಾರೆ. ಆಗ ಲಕುಮಿ ಮುಗ್ಧೆ ಮತ್ತವಳ ಮಗುವನ್ನು ಕಂಡು ದುಃಖ ಪಡುತ್ತಾಳೆ. ನಂತರ ಎಲ್ಲವನ್ನೂ ವಿವರವಾಗಿ ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತಾಳೆ. ತನ್ನ ಶಿಕ್ಷಕರಲ್ಲಿಗೆ ಹೋಗಿ ತಮ್ಮ ಹೆಂಡತಿ ಕಾಲೇಜಿಗೆ ಬಂದದ್ದು, ಮದುವೆ ಆಗಿ ಒಂದು ಮಗುವಿದ್ದರು ನನಗೆ ಮದುವೆಯಾಗಿಲ್ಲ ಎಂದು ಸುಳ್ಳು ಹೇಳುತ್ತೀದ್ದಿರಲ್ಲಾ ನಿಮಗೆ ಮನಸ್ಸಾದರು ಹೇಗೆ ಬಂತು ಎಂದು ಪ್ರಶ್ನೆ ಮಾಡುತ್ತಾಳೆ.ತನ್ನ ವಿದ್ಯಾರ್ಥಿನಿಯೊಬ್ಬಳು ತನ್ನ ವೈಯಕ್ತಿಕ ವಿಷಯದೊಳಗೆ ತಲೆ ಹಾಕುತ್ತಿರುವುದನ್ನು ತೀವ್ರವಾಗಿ ಖಂಡಿಸುತ್ತಾರೆ.

ಆದರೆ ಲಕುಮಿ ಶಿಕ್ಷಕರ ಈ ಮನೋಭಾವದ ಹಿಂದಿರುವ ಸತ್ಯವನ್ನು ತಿಳಿದುಕೊಳ್ಳಬೇಕೆಂದು ಒತ್ತಾಯಿಸುತ್ತಾಳೆ. ಕೊನೆಗೆ ಶಿಕ್ಷಕರು ತನ್ನನ್ನು ಬಲವಂತವಾಗಿ ಈ ಹುಡುಗಿಯೊಂದಿಗೆ ಮದುವೆ ಮಾಡಲಾಗಿದೆ. ಅವಳಿಗೂ ನನಗೂ ಯಾವುದೇ ಸಂಬಂಧವಿಲ್ಲ ಅವಳನ್ನು ಮನೆಗೆ ಹೋಗುವಂತೆ ಹೇಳು ಎಂದು ಹೇಳುತ್ತಾನೆ. ಆಗ ಈ ಮಹಿಳೆ ಪರಿಸ್ಥಿತಿ ಕಂಡು ಲಕುಮಿಗೆ ತುಂಬಾ ವ್ಯಥೆಯಾಗುತ್ತದೆ. ತಮ್ಮಿಂದ ಆ ಹೆಣ್ಣುಮಗಳಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಅವಳೊಂದಿಗೆ ಸುಖವಾಗಿ ಬಾಳಬೇಕೆಂದು ವಿನಂತಿಸಿಕೊಳ್ಳುತ್ತಾಳೆ. ಅವಳು ಈ ಪ್ರಯತ್ನದಲ್ಲಿ ಸಫಲಳಾಗುತ್ತಾಳೆ.

ಲಕುಮಿಯು ಕಾಲೇಜಿನಲ್ಲಿ ಓದುತ್ತಿದ್ದಾಗ ಇನ್ನೊಂದು ಘಟನೆ ನಡೆಯುತ್ತದೆ. ಲಕುಮಿಯು ಕಾಲೇಜಿಗೆ ಹೋಗುವಾಗ "ತಾಯತ"ವನ್ನು ಕಟ್ಟಿಕೊಂಡು ಹೋಗುತ್ತಿರುತ್ತಾಳೆ. ತಾನು ಹಾಕಿಕೊಂಡಿರುವುದು "ತಾಯತ" ಅಲ್ಲ ತಾಳಿಯಾಗಿದೆ ಎಂಬುದು ಲಕುಮಿಗೆ ತಿಳಿದಿರುವುದಿಲ್ಲ. ಆದರೆ

ಲಕುಮಿಯನ್ನು ಮನಸಾರೆ ಇಷ್ಟಪಟ್ಟಿದ್ದ ರಾಹುಲನಿಗೆ ಅವಳ ಕೊರಳಲ್ಲಿ ಏನಿದೆ? ಎಂಬುದನ್ನು ತಿಳಿದುಕೊಳ್ಳುವ ಕುತೂಹಲದಿಂದ ಕೇಳುತ್ತಾನೆ. ಅದಕ್ಕೆ ಅವಳು ತಾಯತ ಇದೆ ಎಂದು ಉತ್ತರಿಸುತ್ತಾಳೆ. ಈ ಮಾತನ್ನು ನಂಬದ ರಾಹುಲ್ ಅದನ್ನು ಹೊರ ತೆಗೆದು ನೋಡಿದಾಗ ತುಂಬಾ ಅಘಾತಗೊಳ್ಳುತ್ತಾನೆ. ಅವಳ ಕೊರಳಲ್ಲಿರುವುದು ತಾಯತ ಅಲ್ಲ ತಾಳಿ ಇದೆ. ನಿನ್ನ ಕೊರಳಲ್ಲಿರುವುದು ತಾಳಿ ಎಂದು ಗೊತ್ತಾಗದಿರುವಷ್ಟು ದಡ್ಡಿನೇನೆ? ಎಂದು ಕೇಳಿ ದುಃಖಿತನಾಗುತ್ತಾನೆ. ಅಲ್ಲಿಗೆ ಲಕುಮಿಯ ಬಾಳಲ್ಲಿ ಮತ್ತೊಮ್ಮೆ ಬಿರುಗಾಳಿ ಏಳುತ್ತದೆ. ತಾನು ಇಷ್ಟು ದಿನ ನಂಬಿದ ತಾಯತವನ್ನು ತಾಳಿ ಎಂದು ಹೇಳುತ್ತಿದ್ದಾರಲ್ಲಾ? ಅಂದರೆ ತನಗೆ ಮದುವೆಯಾಗಿದೆಯಾ? ನನ್ನ ಗಂಡ ಯಾರು? ಸೂರ್ಯ ಮಾಮನೇ ನನ್ನ ಗಂಡನಾ? ಎಂದು ತನ್ನೊಳಗೆ ಪ್ರಶ್ನೆ ಮಾಡಿಕೊಳ್ಳುತ್ತಾಳೆ. ರಾಹುಲ ಮಾತ್ರ ಆ ವಿಷಯವನ್ನು ಅಲ್ಲಿಗೆ ಬಿಡದೆ ಅದರ ಮೂಲವನ್ನು ಹಿಡಿದು ಹೊರಡುತ್ತಾನೆ. ಲಕುಮಿಯ ಊರಿಗೆ ಹೋಗಿ ಅಲ್ಲಿ ಎಲ್ಲವನ್ನು ವಿವರವಾಗಿ ತಿಳಿದುಕೊಳ್ಳುತ್ತಾನೆ. ಅವಳ ತಂದೆ ತಾಯಿಯವರಿಂದಲೂ ಕೇಳಿ ತಿಳಿದುಕೊಳ್ಳುತ್ತಾನೆ. ತನ್ನ ಸ್ನೇಹಿತೆಯನ್ನು ಚಿಕ್ಕಂದಿನಲ್ಲಿಯೇ ವಿವಾಹ ಮಾಡಿ ಎಂಥ ತಪ್ಪು ಕೆಲಸ ಮಾಡಿದ್ದೀರಿ ಎಂದು ಗೋಗರೆಯುತ್ತಾನೆ. ಇತ್ತ ಲಕುಮಿ ತನ್ನ ಬಾಳಲ್ಲಿ ಎದ್ದಿರುವ ಬಿರುಗಾಳಿಯನ್ನು ಆರಿಸುವ ಪ್ರಯತ್ನ ಪಡುತ್ತಾ ಕಥೆಯಲ್ಲಿ ಇದು ಒಂದು ಮಹತ್ವವಾದ ಘಟ್ಟವೆಂದು ತೋರಿಸಲಾಗಿದೆ. ಅಲ್ಲಿಂದ ಕಥೆಯಲ್ಲಿ ಹಲವಾರು ಹೊಸ ಹೊಸ ತಿರುವುಗಳು ಎದುರಾಗುತ್ತವೆ.

ಕಥೆಯು ಮುಂದುವರೆದು ಪೂರ್ವಿಯು ತೀವ್ರ ಅನಾರೋಗ್ಯಕ್ಕೆ ಒಳಗಾಗುತ್ತಿರುತ್ತಾಳೆ. ದಿನೇ ದಿನೇ ಅವಳ ದೇಹಾರೋಗ್ಯ ಕ್ಷೀಣಿಸುತ್ತಿರುತ್ತದೆ. ಇದರ ಮಧ್ಯೆ ಅವಳು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಮಿನಿಸ್ಟರ್ ದೇವಲಿಂಗಯ್ಯನವರು ದುಡ್ಡು ಕೊಟ್ಟು ಆ ಹೆಣ್ಣುಮಗುವನ್ನು ಸಾಯಿಸುವಂತೆ ಕರಿನಿಂಗನಿಗೆ ಹೇಳುತ್ತಾರೆ. ಕರಿನಿಂಗ ಮತ್ತು ನಂಜಿ ಮಣ್ಣು ಮಾಡಿ ಬರುವಾಗ ನಂಜಿಗೆ ಮಗುವಿನ ಅಳು ಕೇಳಿಸುತ್ತದೆ. ಆ ಅಳುವಿಗೆ ನಂಜಿ ಮಗು ಸತ್ತಿಲ್ಲ, ಎಂಬುದು ಖಾತ್ರಿಯಾಗುತ್ತದೆ. ಕರಿನಿಂಗನ ನೀಚ ಬುದ್ಧಿಗೆ ಬೈದು ಆ ಮಗುವನ್ನು ವಾಪಸ್ಸು ತರುತ್ತಾಳೆ. ದೇವಲಿಂಗಯ್ಯನವರಿಗೆ ಮಗುವನ್ನು ಮಣ್ಣು ಮಾಡಿದ್ದೇವೆಂದು ಹೇಳು ಅಂತ ನಂಜಿ ಹೇಳುತ್ತಾಳೆ. ಆಗ ಕರಿನಿಂಗ ನಂಜಿ ಹೇಳಿದಂತೆ ಹೇಳುತ್ತಾನೆ. ತನ್ನ ಮಗು ಸತ್ತುಹೋಗಿದೆ ಎಂದು ತಿಳಿದು ಮತ್ತಷ್ಟು ಮಾನಸಿಕ ಖಿನ್ನತೆಗೆ ಒಳಗಾಗುತ್ತಾಳೆ. ಲಕುಮಿ ಪೂರ್ವಿಯ ದೇಹಾರೋಗ್ಯದೆಡೆಗೆ ಚಿಂತಿಸಿ ಅವಳನ್ನು ಚಿಕ್ಕ ಮಗುವಿನಂತೆ ಆರೈಕೆ ಮಾಡುತ್ತಾಳೆ. ಪೂರ್ವಿಯ ದೇಹಾರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಇದಾದ ಕೇಲವು ದಿನಗಳ ಬಳಿಕ ಅವಳಿಗೆ ತನ್ನ ಮಗು ಸತ್ತಿಲ್ಲ ಬದುಕಿದೆ ಅದನ್ನು ಮಣ್ಣು ಮಾಡಬೇಕೆಂದು ಹೇಳಲಾಗಿದ್ದು ತನ್ನ ಮನೆಯವರೆ ತನ್ನ ಬದುಕಿಗೆ ಕೊಳ್ಳಿ ಇಡುತ್ತೀದ್ದಾರಲ್ಲಾ ಎಂದು ವ್ಯಥೆ ಪಡುತ್ತಾಳೆ. ಎಲ್ಲ ಸತ್ಯಾಂಶ ತಿಳಿದಾಗ ಪೂರ್ವಿ ಮತ್ತು ಸೂರ್ಯ ತಂದೆ ತಾಯಿಯ ಮನೆಯನ್ನು ತೊರೆದು ಹೊರಬರುತ್ತಾರೆ. ಇತ್ತ ಸೂರ್ಯನ ತಂದೆ, ತಾಯಿ, ಅಜ್ಜಿಗೆ ತಾವು

ಎಂತಹ ಘೋರ ಪಾಪ ಮಾಡಿದ್ದೇವೆಂದು ಅರಿವಾಗುತ್ತದೆ. ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಅಂಗಲಾಚಿ ಬೇಡಿಕೊಳ್ಳುತ್ತಾರೆ. ಇದನ್ನು ಕೇಳಿ ಸೂರ್ಯ ಮತ್ತು ಪೂರ್ವಿ ಅವರ ತಪ್ಪನ್ನು ಕ್ಷಮಿಸಿ ಎಲ್ಲರ ಒತ್ತಾಯದ ಮೇರೆಗೆ ಮತ್ತೆ ಮನೆಗೆ ಬರುತ್ತಾರೆ. ಮನೆಗೆ ಬಂದ ಮೇಲೆ ಕಥೆಯು ಮುಂದುವರೆದಂತೆ ಪೂರ್ವಿಯು ತೀವ್ರ ಅನಾರೋಗ್ಯದಿಂದ ಬಳಲಿ ಸಾವನ್ನಪ್ಪುತ್ತಾಳೆ.

ಇತ್ತ ಲಕುಮಿ ತನಗೆ ಸೂರ್ಯನೇ ಗಂಡ ಎಂದು, ಅವನಿರುವ ಮನೆ ತನ್ನದೆಂದು ಮಗು ಕೂಡ ತನ್ನದೆಂದು ಭಾವಿಸಿ ಅಲ್ಲಿಗೆ ವಾಸಿಸಲು ಬರುತ್ತಾಳೆ. ಒಬ್ಬ ಗೃಹಿಣಿಯಾಗಿ ಯಾವ ಯಾವ ಕೆಲಸಗಳನ್ನು ಮಾಡಬೇಕೋ ಆ ಕೆಲಸಗಳನ್ನೆಲ್ಲಾ ಮಾಡುತ್ತಾಳೆ. ಎಲ್ಲರ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡುತ್ತಾಳೆ. ಇತ್ತ ಗಣೇಶ ಮತ್ತು ರಾಹುಲ ಇಬ್ಬರು ಲಕುಮಿಯ ಒಳ್ಳೆಯ ಸ್ನೇಹಿತರಾಗಿದ್ದು ಅವಳ ಪ್ರತಿಯೊಂದು ಕೆಲಸದಲ್ಲಿಯೂ ಭಾಗಿಯಾಗಿರುತ್ತಾರೆ. ಅವಳಿಗೆ ಸೂರ್ಯನ ಮನೆಯವರಿಂದ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ಲಕುಮಿಯ ಒಳ್ಳೆತನ ಅವರಿಬ್ಬರಲ್ಲಿಯೂ ಸಾಕಷ್ಟು ಬದಲಾವಣೆಯನ್ನುಂಟು ಮಾಡಿರುತ್ತದೆ.ಲಕುಮಿ ಸೂರ್ಯನ ಮನೆಯಲ್ಲಿ ವಾಸವಿರುವುದು ಸೂರ್ಯನಿಗಾಗಲಿ ಅವರ ಮನೆಯವರಿಗಾಗಲಿ ಇಷ್ಟ ಇರುವುದಿಲ್ಲ. ಹಾಗಾಗಿ ಲಕುಮಿಯನ್ನು ಕಂಡರೆ ಹಾವು ಕಂಡಂತೆ ಮಾಡುತ್ತಾರೆ. ಇದನ್ನೆಲ್ಲ ಗಮನಿಸುವ ಲಕುಮಿ ಯಾವುದೇ ಬೇಜಾರು ಮಾಡಿಕೊಳ್ಳದೇ ಪೂರ್ವಿಯ ಮಗಳು ಸುಪ್ರಿಯಾಳೊಂದಿಗೆ ಚೆನ್ನಾಗಿ ಬೆರೆತು ಸಂತೋಷದಿಂದ ಇರುತ್ತಾಳೆ. ಈ ಮಧ್ಯ ಕಥೆಯಲ್ಲಿ ಇನ್ನೊಂದು ಪಾತ್ರದ ಪ್ರವೇಶವಾಗುತ್ತದೆ. ಅದು ಅರ್ಪಿತಾಳದು.

ಅರ್ಪಿತಾ ಸೂರ್ಯನ ಕಛೇರಿಗೆ ಉದ್ಯೋಗಿಯಾಗಿ ಬರುತ್ತಾಳೆ. ಅರ್ಪಿತಾ ಒಬ್ಬ ಪ್ರತಿಭಾವಂತ ಯುವತಿಯಾಗಿದ್ದು ತನ್ನ ತಾಯಿಗೆ ಒಬ್ಬಳೆ ಮಗಳಾಗಿರುತ್ತಾಳೆ. ಸದಾ ಚಟುವಟಿಕೆಯಿಂದ ಇರುವ ಚಾಣಾಕ್ಷ ಹುಡುಗಿಯಾಗಿರುತ್ತಾಳೆ. ತನ್ನ ಮಾತುಗಳಿಂದ ಎಂತವರ ಸ್ನೇಹ, ಪ್ರೀತಿಯನ್ನು ಪಡೆಯುವವಳಾಗಿರುತ್ತಾಳೆ. ಇಂತಹ ಪಾತ್ರ ಅರ್ಪಿತಾಳದಾಗಿರುತ್ತದೆ. ತಾನು ಕೆಲಸ ಮಾಡುವ ಕಛೇರಿಯಲ್ಲಿ ಸದಾ ನಗು ತುಂಬಿರಬೇಕು. ಅದೇ ತನ್ನ ಆಸೆ ಎಂದು ಸೂರ್ಯನಿಗೆ ಹೇಳುತ್ತಿರುತ್ತಾಳೆ. ಹೆಂಡತಿಯನ್ನು ಕಳೆದುಕೊಂಡ ದುಃಖದಲ್ಲಿರುವ ಸೂರ್ಯನಿಗೆ ಮೊದ ಮೊದಲು ಅರ್ಪಿತಾಳ ಮಾತು ನಗು, ಚೇಷ್ಟೆ, ಹುಡುಗುತನ, ಇಷ್ಟವಾಗುವುದಿಲ್ಲ. ಕಛೇರಿಯಲ್ಲಿ ಒಂದು ಶಿಸ್ತು ಇರಬೇಕೆಂದು ಹೇಳುತ್ತಿರುತ್ತಾನೆ. ಆದರೆ ನಂತರದ ದಿನಗಳಲ್ಲಿ ಸೂರ್ಯನ ನಡವಳಿಕೆಯಲ್ಲಿ ಬಹಳ ಬದಲಾವಣೆಗಳಾಗುತ್ತವೆ. ಅವನು ಅರ್ಪಿತಾಳನ್ನು ಇಷ್ಟಪಡಲು ಪ್ರಾರಂಭಿಸುತ್ತಾನೆ. ಅರ್ಪಿತಾ ಸೂರ್ಯನ ಮನೆವರೆಗೂ ಹೋಗಿ ಎಲ್ಲರೊಂದಿಗೆ ಮುಕ್ತವಾಗಿ ಬೆರೆಯುವ ಪ್ರಯತ್ನ ಮಾಡುತ್ತಾಳೆ. ಅವಳ ಈ ಮುಕ್ತ ಮನಸ್ಸನ್ನು ಕಾಣುವ ಸೂರ್ಯನ ತಾಯಿ ತನ್ನ ಮನದಲ್ಲೇ ಅವಳನ್ನು ಸೊಸೆಯಾಗಿ ಮಾಡಿಕೊಳ್ಳಬೇಕೆಂದು ಬಯಸುತ್ತಾಳೆ. ಅದರಂತೆ ಸೂರ್ಯ ಕೂಡ ಅರ್ಪಿತಾಳಿಗೆ ಮದುವೆಯ ಪ್ರಸ್ತಾಪವನ್ನು ಅವಳ ಮುಂದೆ ಇಡುತ್ತಾ ತನ್ನ ಮನಸ್ಸಿನ ಮಾತನ್ನು ಹೇಳುತ್ತಾನೆ. ಇದರಿಂದ

ಸಂತೋಷಗೊಳ್ಳುವ ಅರ್ಪಿತಾ ತನ್ನ ತಾಯಿಯ ಒಪ್ಪಿಗೆಯನ್ನು ಪಡೆದು ಮದುವೆಗೆ ಒಪ್ಪಿಗೆಯನ್ನು ಕೊಡುತ್ತಾಳೆ.

ಇತ್ತ ಲಕುಮಿಗೆ ಈ ಮನೆಯಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳ ಬಗ್ಗೆ ತಿಳಿದು ದುಃಖಪಡುತ್ತಾಳೆ. ತನ್ನ ಅಕ್ಕನ ಸಾವಿನ ಹಿಂದೆಯೇ ಮದುವೆಗೆ ತಯಾರಿ ನಡೆಸುತ್ತಿದ್ದಾರಲ್ಲಾ ಎಂದು ದುಃಖಪಡುತ್ತಾಳೆ. ಇತ್ತ ದೇವಲಿಂಗಯ್ಯನವರು ಒಂದು ವಿಷಯದ ಕುರಿತು ಚಿಂತಿಸಿ, ವ್ಯಥೆ ಪಡುತ್ತಿರುತ್ತಾರೆ. ಲಕುಮಿ ಮತ್ತು ಸೂರ್ಯ ಇಬ್ಬರ ಮದುವೆಯಾಗಿದ್ದು ಅದಕ್ಕೆ ವಿಚ್ಛೇದನೆಯನ್ನು ಪಡೆಯದೇ ಇದ್ದುದ್ದು ದೇವಲಿಂಗಯ್ಯನವರ ಚಿಂತೆಗೆ ಕಾರಣವಾಗಿರುತ್ತದೆ. ಇದಕ್ಕೆ ಒಂದು ಉಪಾಯ ಮಾಡಿ ಸೂರ್ಯ ಮತ್ತು ಲಕುಮಿಯ ಮಧ್ಯೆ ಇರುವ ಸಂಬಂಧವನ್ನು ಅಂತ್ಯಗೊಳಿಸಬೇಕೆಂದು ಅಂದುಕೊಳ್ಳುತ್ತಾರೆ. ಅದರಂತೆ ಲಕುಮಿಯನ್ನು ಉಪಾಯವಾಗಿ ಮನೆಗೆ ಕರೆಸುತ್ತಾರೆ. ತನಗೂ ಮತ್ತು ಸೂರ್ಯನಿಗೂ ಯಾವುದೇ ಸಂಬಂಧವಿಲ್ಲ ಎಂದು ಬರೆದುಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಹೀಗೆ ಬರೆದುಕೊಟ್ಟರೆ ಮುಂದೆ ಯಾವುದೇ ರೀತಿಯ ಸಮಸ್ಯೆಗಳು ಎದುರಾಗುವುದಿಲ್ಲ ಎಂದು ಹೇಳುತ್ತಾರೆ. ಲಕುಮಿ ತನಗೂ ಸೂರ್ಯನಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಸೂರ್ಯ ಯಾರನ್ನು ಬೇಕಾದರೂ ಮದುವೆಯಾಗಬಹುದು ಮುಂದೆ ತನ್ನಿಂದ ಯಾವುದೇ ರೀತಿಯಿಂದಲೂ ತೊಂದರೆಯಾಗುವುದಿಲ್ಲವೆಂದು ಹೇಳಿ ಬರೆದು ಸಹಿ ಹಾಕಿ ಕೊಡುವಂತೆ ಅವರು ಹೇಳುತ್ತಾರೆ. ಇದಕ್ಕೆ ಪ್ರತಿಕ್ರಿಯೆಯಾಗಿ ಲಕುಮಿ ಒಂದು ಷರತ್ತನ್ನು ಹಾಕುತ್ತಾಳೆ. ಪೂರ್ವಿಯ ಮಗಳಾದ ಸುಪ್ರಿಯಾಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಯಾವುದೇ ರೀತಿಯಿಂದಲೂ ತೊಂದರೆಯಾಗಬಾರದು, ಅನ್ಯಾಯವಾಗಬಾರದು. ಅವಳನ್ನು ಚೆನ್ನಾಗಿ ನೋಡಿಕೊಳ್ಳತ್ತೇವೆಂದು ಭಾಷೆ ಕೊಟ್ಟರೆ ಮಾತ್ರ ತಾವು ಹೇಳುವಂತೆ ಕೇಳುತ್ತೇನೆಂದು ಹೇಳುತ್ತಾಳೆ. ಅದಕ್ಕೆ ಸೂರ್ಯನ ಮನೆಯವರೆಲ್ಲರೂ ಒಪ್ಪಿಗೆಯನ್ನು ಕೊಡುತ್ತಾರೆ. ತಮ್ಮ ಮನೆಯ ಮೊಮ್ಮಗಳಿಗೆ ಯಾವುದೇ ಮೋಸ, ಅನ್ಯಾಯ ಆಗುವುದಿಲ್ಲ. ತಾನು ನಿಶ್ಚಿಂತೆಯಿಂದ ಇರಬಹುದು ಎಂದು ಲಕುಮಿಗೆ ಹೇಳಿ ಭಾಷೆ ಕೊಡುತ್ತಾರೆ. ಇದನ್ನು ಕೇಳಿದ ಲಕುಮಿ ಸುಪ್ರಿಯಾಳಿಗೆ ಹೊಸ ತಾಯಿಯನ್ನು ತರಲು ಇಷ್ಟೆಲ್ಲಾ ಕಷ್ಟಪಡುತ್ತಿದ್ದಾರಲ್ಲ ಅವಳಿಗೆ ಒಳ್ಳೆಯದಾದರೆ ಸಾಕು ಎಂದು ಒಂದು ಖಾಲಿಹಾಳೆಯ ಮೇಲೆ ಸಹಿ ಮಾಡಿ ಕೊಡುತ್ತಾಳೆ.

ಲಕುಮಿ ಖಾಲಿ ಕಾಗದದ ಮೇಲೆ ಸಹಿ ಮಾಡಿದ ತಕ್ಷಣ ಸೂರ್ಯನ ಮನೆಯವರಿಗೆ ಬಹಳ ಸಂತಸವಾಗುತ್ತದೆ. ಇದೇ ಸಂತಸದಲ್ಲಿ ಸೂರ್ಯ ಮತ್ತು ಅರ್ಪಿತಾಳ ಮದುವೆಯ ತಯಾರಿ ನಡೆಯುತ್ತದೆ. ಮದುವೆಗೆ ಬೇಕಾಗುವ ಎಲ್ಲ ವಸ್ತುಗಳ, ಆಭರಣಗಳ ತಯಾರಿ ನಡೆಯುತ್ತದೆ. ಇದರ ಮಧ್ಯೆ ಸೂರ್ಯನ ಮಗಳು ಸುಪ್ರಿಯಾಳಿಗೆ ತೀವ್ರವಾದ ಜ್ವರ ಕಾಣಿಸಿಕೊಳ್ಳತ್ತದೆ. ಜ್ವರ ಮಾಮೂಲಿಯಾಗಿದೆ ಎಂದು ಮನೆಯವರೆಲ್ಲ ಉದಾಸೀನ ತಾಳುತ್ತಾರೆ. ಆದರೆ ಮಗುವಿಗೆ ತೀವ್ರವಾದ ಜ್ವರ ಕಾಣಿಸಿಕೊಂಡು ತಲೆಗೆ ಏರುತ್ತದೆ. ಸುಪ್ರಿಯಾಳ ಈ ಅವಸ್ಥೆಯನ್ನು ಕಾಣುವ ಮನೆಯ ಸದಸ್ಯನಂತೆ ಇರುವವನು ಲಕುಮಿಯ ಬಳಿಗೆ ಮಗುವನ್ನು

ಕರೆದುಕೊಂಡು ಹೋಗಿ ಮಗುವಿನ ಅನಾರೋಗ್ಯದ ಬಗ್ಗೆ, ಮಗಿವಿನೆಡೆಗೆ ಮನೆಯವರು ತೋರುತ್ತಿರುವ ಉದಾಸೀನತೆ ಬಗ್ಗೆ, ಮದುವೆಯ ಸಡಗರ ಸಂಭ್ರಮದ ಬಗ್ಗೆ ಎಲ್ಲದರ ವಿವರವನ್ನು ತಂದೂ ಒಪ್ಪಿಸುತ್ತಾನೆ. ಲಕುಮಿ ತಾನು ಸಹಿ ಮಾಡಿ ದೊಡ್ಡ ತಪ್ಪು ಮಾಡಿದೇ ಎಂದು ವ್ಯಥೆ ಪಟ್ಟುಕೊಂಡು, ಮನೆಯವರು ನೀಡಿದ ಭಾಷೆಯನ್ನು ನೆನಪಿಸಲು ದೇವಲಿಂಗಯ್ಯನವರ ಮನೆಗೆ ಹೋಗುತ್ತಾಳೆ. ಮನೆಯಲ್ಲಿ ಎಲ್ಲರೂ ಮದುವೆಯ ಸಂಭ್ರಮದಲ್ಲಿದ್ದು ಖರೀದಿ ಮಾಡಿದಂತಹ ಬಟ್ಟೆ ಒಡವೆಗಳನ್ನು ನೋಡುತ್ತಿರುತ್ತಾರೆ. ಮದುವೆಗೆ ಯಾವ ಯಾವ ತಯಾರಿ ಆಗಬೇಕು? ಇನ್ನೂ ಯಾವ ಕೆಲಸ ಬಾಕಿ ಉಳಿದಿದೆ? ಹೀಗೆ ಮದುವೆಯ ಬಗ್ಗೆಯೇ ಯೋಜನೆ,ಯೋಚನೆಗಳು ನಡೆದಿರುತ್ತವೆ. ವಿನಃ ಸುಪ್ರಿಯಾಳ ಬಗ್ಗೆ ಯಾರು ಏನೂ ಹೇಳುವುದೂ ಇಲ್ಲ. ಕೇಳುವುದೂ ಇಲ್ಲ. ಇಂತಹ ಸಂದರ್ಭದಲ್ಲಿ ಲಕುಮಿ ಎಲ್ಲರ ವರ್ತನೆಯನ್ನು ಕುರಿತು ತೀವ್ರವಾಗಿ ಖಂಡಿಸುತ್ತಾಳೆ. ಮನೆಯಲ್ಲಿ ಎಳೆ ಮಗುವಿನ ದೇಹಾರೋಗ್ಯ ಕೆಟ್ಟಿದ್ದರೆ ಅದು ತಮ್ಮ ಗಮನಕ್ಕೆ ಬರದೇ ಹೋಯಿತೆ? ಮಗುವಿನ ಆರೋಗ್ಯಕ್ಕಿಂತ ಮದುವೆಯೇ ಮುಖ್ಯವಾಯಿತೇ? ಇನ್ನು ಮದುವೆನೇ ಆಗಿಲ್ಲ ಹೀಗೆ ನಿರಾಕರಣಕ್ಕೆ ಒಳಗಾಗುವ ಮಗು ಮುಂದೆ ಹೇಗೆ ಇರುತ್ತದೆ? ಎಳ್ಳಷ್ಟು ಕಾಳಜಿ, ಪ್ರೀತಿ, ಪ್ರೇಮ ಇಲ್ಲದ ಈ ಮನೆಯಲ್ಲಿ ಸುಪ್ರಿಯಾ ಇರಬೇಕಾ? ಎಂದು ಎಲ್ಲರಿಗೂ ಪ್ರಶ್ನೆ ಮಾಡುತ್ತಾಳೆ. ಅವಳು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳುವ ಧೈರ್ಯವಿಲ್ಲದೇ ತಪ್ಪಿತಸ್ಥರ ಭಾವದಿಂದ ನಿಂತಿರುತ್ತಾಳೆ. ಇದನ್ನು ಗಮನಿಸುವ ಲಕುಮಿ ಈ ಪುಟ್ಟ ಮಗು ಎಲ್ಲರೂ ಇದ್ದು ಅನಾಥವಾಗಿ ಬಾಳುವುದು ಬೇಡ. ಇವಳಿಗೆ ಯಾವುದೇ ಕೊರತೆಯಾಗದಂತೆ ತಾನು ಸಾಕಿ ಬೆಳೆಸುತ್ತೇನೆ ಎಂದು ಲಕುಮಿ ಸುಪ್ರಿಯಾಳನ್ನು ಕರೆದುಕೊಂಡು ಹೊರಟು ಬಿಡುತ್ತಾಳೆ. ತನ್ನ ಪೂರ್ವಕ್ಕನಿಗೆ ಈ ಮೂಲಕ ನಾನು ಅವಳ ಋಣದಲ್ಲಿ ಸ್ವಲ್ಪ ಕಡಿಮೆ ಮಾಡಿಕೊಳ್ಳುತ್ತೇನೆಂದು ಹೇಳಿ ಹೊರಟುಹೋಗುತ್ತಾಳೆ. ಕಥೆಯು ಇಲ್ಲಿಗೆ ಮುಕ್ತಾಯವಾಗುತ್ತದೆ. ಇದು ಲಕುಮಿ ಕಥೆಯ ಒಂದು ಸೂಕ್ಷ್ಮ ನೋಟವಾಗಿದೆ.

ವಿಶ್ಲೇಷಣೆ

ನಿರ್ದೇಶಕರು; ರವಿ ಬಸಪ್ಪನದೊಡ್ಡಿ

ಕಥೆಯಲ್ಲಿ ಮುಖ್ಯವಾಗಿ ಬರುವ ಪಾತ್ರಗಳು

ಲಕುಮಿ–ತಂದೆ–ತಾಯಿ–ತಮ್ಮ

ಪಾಪಣ್ಣ–ಜಮಿನ್ದಾರರು–ಹೆಂಡತಿ,

ದೇವಲಿಂಗಯ್ಯ– ತಾಯಿ–ಹೆಂಡತಿ–ಮಗ,

ಪೂರ್ವಿ–ತಂದೆ–ತಾಯಿ,

ಗಣೇಶ–ರಾಹುಲ

ಲಕ್ಷ್ಮೀ–ಅರ್ಪಿತಾ–ತಾಯಿ

ಎಲ್ಲ ಪಾತ್ರಗಳು ಭಿನ್ನವಾಗಿ ಚಿತ್ರಿತವಾಗಿವೆ. ಕಥೆಯ ಪ್ರಾರಂಭದಲ್ಲಿ ಮುಖ್ಯವಾಗಿ ಎರಡು ಪ್ರದೇಶಗಳ ನಡುವೆ ಇರುವ ಭಿನ್ನ ಬದುಕಿನ ಚಿತ್ರಣವನ್ನು ಕೊಡಲಾಗಿದೆ. ಗ್ರಾಮೀಣ ಪ್ರದೇಶದ ಬದುಕಿಗೂ, ನಗರ ಪ್ರದೇಶದ ಬದುಕಿಗೂ ಇರುವ ಭಿನ್ನತೆ ಇಲ್ಲಿ ಚಿತ್ರಿತವಾಗಿದೆ. ಗ್ರಾಮೀಣ ಭಾಗದಲ್ಲಿ ವಾಸಿಸುವ ಮುಗ್ಧ ಹುಡುಗಿಯ ಬದುಕಿನಲ್ಲಿ ಬಾಲ್ಯವಿವಾಹಕ್ಕೆ ಒಳಗಾಗುವ ಮೂಲಕ ಕಥೆಯು ಪ್ರಾರಂಭಗೊಳ್ಳುತ್ತದೆ. ಹಳ್ಳಿಜೀವನ, ಅಲ್ಲಿನ ಕಷ್ಟಗಳು, ದುಡಿಮೆ, ಯಜಮಾನಿಕೆ ಗುಲಾಮ ಪದ್ಧತಿ (ಜೀತಪದ್ಧತಿ ಲಕುಮಿಯ ತಂದೆ ಜೀತದ ಆಳಾಗಿ, ಜಮೀನ್ದಾರರ ಹೊಲದಲ್ಲಿ ದುಡಿಯುತ್ತಿರುತ್ತಾನೆ) ಬಡತನ, ಬಡತನದಿಂದಾಗಿ ಎಂತಹ ಕೆಲಸಕ್ಕೂ ಸಿದ್ಧವಾಗುವ ತಂದೆ, ಇದೆಲ್ಲದರ ಚಿತ್ರಣ ಕಥೆಯಲ್ಲಿದೆ.

ಹೆಣ್ಣು ಅವಲಂಬಿತೆ. ಆಕೆಯನ್ನು ಹೇಗೆ ಬೇಕಾದರೂ ರೂಪಿಸಬಹುದೆಂಬ ಮನೋಭಾವ ಹೊಂದಿರುವ ಕರಿನಿಂಗ "ಹೆಣ್ಣು ಎಂದರೆ ಹುಣ್ಣು" ಎಂಬಂತಹ ಪಾತ್ರದಲ್ಲಿ ಕಟ್ಟಿಕೊಡಲಾಗಿದೆ. ಮಗನನ್ನು ಹೆಚ್ಚಿನ ವಿದ್ಯಾಭ್ಯಾಸ ಮಾಡಿಸಲು ಇಷ್ಟಪಡುವ ತಂದೆ ಮಗಳಿಗೆ ಶಿಕ್ಷಣಕ್ಕಿಂತ ಮದುವೆಯ ಅವಶ್ಯಕತೆ ಇದೆ ಎಂದು ಹೇಳುತ್ತಾ ಲಿಂಗತಾರತಮ್ಯವನ್ನು ಮಾಡುತ್ತಾನೆ. ತನ್ನಲ್ಲಿರುವ ಬಡತನವನ್ನು ದೂರ ಮಾಡಲು ದಿಢೀರನೇ ಶ್ರೀಮಂತನಾಗಬೇಕೆಂಬ ಕನಸು ಇರುವ ತಂದೆಗೆ ಶ್ರೀಮಂತ ರಾಜಕಾರಣಿಯ ಮಗನಿಗೆ ತನ್ನ ಮಗಳನ್ನು ಮದುವೆ ಮಾಡಿಸುವುದರ ಮೂಲಕ ಹೆಣ್ಣಿನ ಬದುಕು ಇಷ್ಟೇ ಎಂಬಂತಹ ಚಿತ್ರಣ ನೀಡಲಾಗಿದೆ. ಕಥೆಯಲ್ಲಿ ಗಣ್ಯ ವ್ಯಕ್ತಿಯಾಗಿದ್ದ ದೇವಲಿಂಗಯ್ಯನವರು ಸಹ ತಮ್ಮ ಮಗನಿಗೆ ಒಳ್ಳೆಯದಾಗಲಿ ಎಂಬ ದುರುದ್ದೇಶದಿಂದ ಒಂದು ಮುಗ್ಧ ಹುಡುಗಿಯ ಜೀವನವನ್ನು ಬಲಿಕೊಡುವಲ್ಲಿ ಸಹಭಾಗಿಯಾಗುತ್ತಾರೆ. ಈ ಚಿತ್ರಣ ಸಮಾಜದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುವ ಮತ್ತು ನಡೆಯುತ್ತಿರುವ ಶೋಷಣೆಗೆ ಹಿಡಿದ ಕನ್ನಡಿಯಾಗಿದೆ. ಸಮಾಜದ ನೈಜ ಚಿತ್ರಣವನ್ನು ಇಲ್ಲಿ ಅನಾವರಣ ಮಾಡಿರುವುದನ್ನು ಗಮನಿಸಬಹುದಾಗಿದೆ.

ಬಾಲ್ಯ ವಿವಾಹದ ಕಥಾವಸ್ತು

ಈ ಕಥೆಯಲ್ಲಿ ಕಥಾನಾಯಕಿ ಲಕುಮಿಗೆ ಚಿಕ್ಕ ಪ್ರಾಯದಲ್ಲಿಯೇ ವಿವಾಹಮಾಡಿಸಲಾಗುತ್ತದೆ. (ಅದು ಮೋಸದ ವಿವಾಹವಾಗಿರುತ್ತದೆ) ಮದುವೆ, ತಾಳಿ, ಎಂದರೇನು? ಅಂತ ಗೊತ್ತಿರದ ಮುಗ್ಧ ಹುಡುಗಿಗೆ "ತಾಯತ"ವೆಂದು ತಾಳಿ ಕಟ್ಟಲಾಗುತ್ತದೆ. ಈ ಮೂಲಕ ಒಬ್ಬ ಅಪ್ರಾಪ್ತೆಯನ್ನು ಬಾಲ್ಯವಿವಾಹದೆಡೆಗೆ ನೂಕಲಾಗುತ್ತದೆ. ಲಕುಮಿಯ ತಂದೆಯೂ ಇದರಲ್ಲಿ ಪಾಲುದಾರ ನಾಗುತ್ತಾನೆ. ತನ್ನ ಮಗಳಿಗೆ ಒಂದು ಒಳ್ಳೆಯ ಭವಿಷ್ಯ ನೀಡುತ್ತಿಲ.. ತಾನು ಪಾಪ ಮಾಡುತ್ತಿದ್ದೇನೆ. ತನ್ನ ಮಗಳಿಗೆ ಅನ್ಯಾಯ ಮಾಡುತ್ತಿದ್ದೇನೆಂಬ ಕಿಂಚಿತ್ತು ಕಾಳಜಿಯಾಗಲಿ, ವಿಚಾರವಾಗಲಿ ಅವನ ಮನಸ್ಸಿನಲ್ಲಿ ಬರುವುದಿಲ್ಲ. ಆದರೆ ಲಕುಮಿಯ ತಾಯಿ ನಂಜಿಗೂ, ಸೂರ್ಯನ ತಾಯಿ ಪದ್ಮಾಳಿಗೂ ಈ ಮದುವೆ ನಡೆಯುವಾಗ ಮಾತ್ರ ತಾವು ಮಹಾಪಾಪ

ಮಾಡುತ್ತಿದ್ದೇವೆ. ಒಂದು ಮುಗ್ಧ ಹುಡುಗಿಗೆ ಮೋಸ ಮಾಡುತ್ತಿದ್ದೇವೆ ಎಂದು ವ್ಯಥೆ ಪಡುತ್ತಾರೆ. ಇಲ್ಲಿ ಮಹಿಳೆಯರಿಗಿರುವ ಈ ಕಾಳಜಿ, ಪುರುಷರಲ್ಲಿ ಕಾಣುವುದಿಲ್ಲ. ಹೆಣ್ಣಿನ ವಿಷಯದಲ್ಲಿ ಯಾವ ರೀತಿಯಾದ ತಾರತಮ್ಯ ನೀತಿ ಅನುಸರಿಸಲಾಗುತ್ತದೆ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ.

ಈ ಕಥೆಯು ಪ್ರಾರಂಭದಲ್ಲಿ ಲಕುಮಿಯ ಕತ್ತಿಗೆ ಕಟ್ಟಲಾದ ತಾಯತವನ್ನು ತಾಳಿ ಎಂದು ತಿಳಿಯದಷ್ಟು ಮುಗ್ಧವಾಗಿ ಚಿತ್ರಿಸಿದ್ದಾರೆ. ಕಥೆಯು ಪ್ರಾರಂಭದಿಂದ, ಮುಗಿಯುವವರೆಗೂ ಅವಳಿಗೆ ತಾಯತ ಮತ್ತು ತಾಳಿಯ ಮಧ್ಯೆ ಇರುವ ವ್ಯತ್ಯಾಸ ಗೊತ್ತಿರುವುದಿಲ್ಲ. ಹಾಗೆ ಅವಳನ್ನು ಚಿತ್ರಿಸಲಾಗಿದೆ. ಇದು ಇಂದಿನ ಪ್ರಪಂಚವನ್ನು ಗಮನಿಸುವುದಾದರೆ, ತನ್ನ ಕತ್ತಲ್ಲಿ ಇರುವುದು ತಾಯತ ಅಲ್ಲ, ತಾಳಿ ಎಂದು ಅರಿಯದಷ್ಟು ಮುಗ್ಧರು ಇರುತ್ತಾರಾ? ಹಾಗೆ ಚಿತ್ರಿಸುವ ಅವಶ್ಯಕತೆ ಇತ್ತಾ? ಇದ್ದರೆ ಎಷ್ಟರಮಟ್ಟಿಗೆ ಈ ಮುಗ್ಧತೆಯನ್ನು ಒಪ್ಪಿಕೊಳ್ಳಬೇಕು? ಇಂತಹ ಮನೋಭಾವದ ಮುಗ್ಧೆಯನ್ನು ಚಿತ್ರಿಸುವ ಅವಶ್ಯಕತೆ ಇತ್ತಾ? ಎನ್ನುವ ಪ್ರಶ್ನೆಗಳು ಕಾಡುತ್ತವೆ.

ಈ ಪ್ರಶ್ನೆಗಳನ್ನಿಟ್ಟುಕೊಂಡು ಕ್ಷೇತ್ರಕಾರ್ಯ ಮಾಡಿದಾಗ ಸಂದರ್ಶಿಸಿದ ಹತ್ತು ಮಹಿಳೆಯರಲ್ಲಿ ಒಂಬತ್ತು ಮಹಿಳೆಯರು ಈ ಮುಗ್ದತೆಯನ್ನು ನಿರಾಕರಿಸುತ್ತಾರೆ. ಬಹಳ ತಪ್ಪಾಗಿ ತೋರಿಸಿದ್ದಾರೆ. ತಾಳಿಗೂ ತಾಯತಕ್ಕೂ ವ್ಯತ್ಯಾಸ ಗೊತ್ತಿರದಷ್ಟು ಮುಗ್ದ ಹೆಣ್ಣುಮಕ್ಕಳು ಇವತ್ತಿನ ಕಾಲದಲ್ಲಿ ದೊರಕುವುದು ಕಷ್ಟ ಎಂದೇ ಇವರು ಅಭಿಪ್ರಾಯಪಡುತ್ತಾರೆ. ಇನ್ನು ಕಾಲೇಜು ವಿದ್ಯಾರ್ಥಿನಿಯರಿಗೆ ಕೇಳಿದ ಇದೇ ಪ್ರಶ್ನೆಗೆ ಅವರು ಸಹ ಲಕುಮಿಯ ಈ ಮುಗ್ದ ಸ್ವಭಾವವನ್ನು ವಿರೋಧಿಸುತ್ತಾರೆ. ಅವರ ಪ್ರಕಾರ ಧಾರಾವಾಹಿಯಲ್ಲಿ ಲಕುಮಿಯನ್ನು ಅತಿಯೆನಿಸುವಷ್ಟು ಮುಗ್ದವಾಗಿ ಚಿತ್ರಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಸ್ವಂತ ಬುದ್ಧಿವಂತಿಕೆ, ತಿಳುವಳಿಕೆ ಇರುವವಳಂತೆ ಚಿತ್ರಿಸಿದರೆ ಧಾರಾವಾಹಿಯಲ್ಲಿ ಒಂದು ಹೊಸ ಬದಲಾವಣೆ ತರಬಹುದಿತ್ತು. ಆ ಮೂಲಕ ಹೆಣ್ಣುಮಕ್ಕಳು ಸಹ ಬುದ್ದಿವಂತರೆಂದು ತೋರಿಸಬಹುದಿತ್ತು. ಆದರೆ ನಿರ್ದೇಶಕರು ಹಾಗೆ ಮಾಡದೇ ಲಕುಮಿಯನ್ನು ಹೆಚ್ಚು ಮುಗ್ಧವಾಗಿ ತೋರಿಸಿದ್ದಾರೆ ಎಂದು ಮಾಹಿತಿ ನೀಡುತ್ತಾರೆ.

ಮಾಹಿತಿಯನ್ನು ಕೂಲಂಕುಷವಾಗಿ ಗಮನಿಸಿದರೆ, ಲಕುಮಿ ಧಾರಾವಾಹಿಗೂ, ವಾಸ್ತವದ ಚಿತ್ರಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಸಮಾಜದಲ್ಲಿ ಇಷ್ಟೊಂದು ಮುಗ್ದ ಸ್ವಭಾವವಿರುವ ಹುಡುಗಿಯರು ಇರುವುದು ಕಡಿಮೆ ಎನ್ನಬಹುದು. ಸಮಾಜದಲ್ಲಿರುವ ಮುಗ್ದ ಹುಡುಗಿಯ ಚಿತ್ರಣ ಧಾರಾವಾಹಿಯಲ್ಲಿ ಯಾಕೆ ಚಿತ್ರಿಸಲಾಯಿತು? ಈ ಚಿತ್ರಣ ಪ್ರಸ್ತುತ ಸಮಾಜಕ್ಕೆ ಎಷ್ಟರ ಮಟ್ಟಿಗೆ ಒಪ್ಪುತ್ತದೆ? ನಿರ್ದೇಶಕರ ಮನಃಸ್ಥಿತಿ ಎಂತಹದು? ಎಂಬ ಪ್ರಶ್ನೆಗಳು ಎದುರಾಗುತ್ತವೆ.

ಉತ್ತರ ಪಡೆಯುವ ಹಂಬಲಕ್ಕೆ ಎದುರಾಗಿ ನಿಲ್ಲುವುದು ಪುರುಷ ಪ್ರಧಾನ ವ್ಯವಸ್ಥೆಯ ಸಮಾಜ ಮತ್ತು ಪುರುಷ ಪ್ರಧಾನವಾಗಿರುವ ಮಾಧ್ಯಮಗಳು ಪರಸ್ಪರ ಇವೆರಡೂ ಸೇರಿಕೊಂಡು ಹೆಣ್ಣಿನ ಬದುಕನ್ನು ದುರಂತವಾಗಿಸುವ ಕಥನ ಇಲ್ಲಿನದಾಗಿದೆ. ಹೌದು ಪುರುಷ ಪ್ರಧಾನ

ವ್ಯವಸ್ಥೆ ಅಸ್ತಿತ್ವ ಪಡೆದುಕೊಂಡು ಬಂದ ದಿನಗಳಿಂದಲೂ ಒಂದಿಲ್ಲ ಒಂದು ಕಾರಣಗಳಿಂದ ಮಹಿಳೆಯನ್ನು ವ್ಯವಸ್ಥಿತವಾಗಿ ಕಟ್ಟಿಡುವ ಹುನ್ನಾರ ಮಾಡುತ್ತಲೇ ಬರುತ್ತಲಿದೆ. ಮಹಿಳೆಯರನ್ನು ಹೆಚ್ಚು ಹೆಚ್ಚು ಸ್ವಾವಲಂಬಿಯಾಗಿ ರೂಪಿಸಿದರೆ ಅವರ ಪ್ರಾಧಾನ್ಯತೆ ಎಲ್ಲಿ ಕಡಿಮೆಯಾಗುತ್ತದೆಯೋ ಎಂಬ ಅಳುಕು ಅವರಲ್ಲಿ ಮನೆ ಮಾಡಿರುವುದರಿಂದ ಆದಷ್ಟು ಅವಳನ್ನು ಪರಾವಲಂಬಿಯಾಗಿಯೇ ನಿರ್ವಚಿಸಲಾಗುತ್ತಿದೆ. ಈ ಧೋರಣೆಯನ್ನೇ ಮಾಧ್ಯಮದಲ್ಲಿಯೂ ಕಾಣಬಹುದಾಗಿದೆ. ಮಾಧ್ಯಮದಲ್ಲಿ ನಿರ್ಮಾಪಕ ಮತ್ತು ನಿರ್ದೇಶಕರುಗಳೆಲ್ಲರೂ ಪುರುಷರೇ ಆಗಿರುವುದರಿಂದ (ಕೆಲವು ಕಡೆ ಮಹಿಳಾ ನಿರ್ದೇಶಕರು, ನಿರ್ಮಾಪಕರು ಇರಬಹುದು) ಸಮಾಜದಲ್ಲಿ ಅಸ್ತಿತ್ವವಿರುವ ಮೌಲ್ಯಗಳನ್ನೇ ಒಪ್ಪಿಸುವ ಕೆಲಸಗಳು ಈ ಧಾರಾವಾಹಿಗಳ ಮೂಲಕ ನಡೆಯುತ್ತವೆ. ಪುರುಷರು ರೂಪಿಸಿರುವ ಮೌಲ್ಯಗಳನ್ನು ಹೊತ್ತುಕೊಂಡು ಹೋಗಲು ಮಹಿಳೆಯರ ಹೆಗಲೇ ಬೇಕಾಗಿರುತ್ತದೆ. ಇದನ್ನು ಅರಿತ ನಿರ್ದೇಶಕರು ಅದಕ್ಕೆ ಪೂರಕವಾಗಿರುವಂತಹ ಧಾರಾವಾಹಿಗಳನ್ನು ನಿರ್ದೇಶಿಸುತ್ತಾರೆ. ಮಹಿಳೆಯರಿಗೆಂದೇ ರೂಪಿತವಾಗಿರುವ ಸ್ತ್ರೀತ್ವದ ಎಲ್ಲಾ ಗುಣಗಳನ್ನು "ಲಕುಮಿ"ಯ ಪಾತ್ರದಲ್ಲಿ ಕಾಣಬಹುದು. ಅವಳನ್ನು ಕೌಟುಂಬಿಕ ವಲಯದೊಳಗೆ ಮಾತ್ರ ಕಟ್ಟಲಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

ತಾಯಿಯ ಅಸಹಾಯಕತೆ

ಇಲ್ಲಿ ಲಕುಮಿಯ ತಾಯಿ ನಂಜಿ ಮತ್ತು ಸೂರ್ಯನ ತಾಯಿ ಪದ್ಮಾ ಈ ಎರಡು ಪಾತ್ರಗಳು ಈ ಕಥೆಯಲ್ಲಿ ಅಸಹಾಯಕತೆ, ಅವಲಂಬಿತೆಯರು ಆಗಿದ್ದಾರೆ. ನಿರ್ಧಾರ ತೆಗೆದುಕೊಳ್ಳುವಲ್ಲಿ ಅಸಮರ್ಥರು ಎಂಬಂತೆ ಚಿತ್ರಿಸಲಾಗಿದೆ. ನಿರ್ಧಾರ ತೆಗೆದುಕೊಳ್ಳುವಲ್ಲಿ ಪುರುಷನನ್ನ ಪ್ರಬಲವಾಗಿ ಬಿಂಬಿಸುತ್ತಾರೆ. ಈ ಕಥೆಯಲ್ಲಿ ಮಿನಿಸ್ಟರ ದೇವಲಿಂಗಯ್ಯ, ಕರಿನಿಂಗ, ಸೂರ್ಯ ಇವರೆಲ್ಲಾ ನಿರ್ಧಾರ ತೆಗೆದುಕೊಳ್ಳುವವರಾಗಿ ತೋರಿಸುವುದರ ಮೂಲಕ ಪುರುಷ ಪ್ರಭುತ್ವವನ್ನು ಬೆಂಬಲಿಸಲಾಗುತ್ತದೆ.

ಕಥೆಯಲ್ಲಿ ನಂಜಮ್ಮ ಮತ್ತು ಪದ್ಮಾ ಈ ಇಬ್ಬರು ಏನು ಅರಿಯದ ಮುಗ್ದ ಹುಡುಗಿಗೆ ತಾಯತಾ ಎಂದು ತಾಳಿ ಕಟ್ಟುವ ಸಮಯದಲ್ಲಿ ಈ ಇಬ್ಬರು ಅನುಭವಿಸುವ ಮಾನಸಿಕ ತುಮುಲಗಳು, ಕೊರಗುವಿಕೆ, ತಳಮಳ, ಇವರಿಗಾಗುವಷ್ಟು ಚಡಪಡಿಕೆಯನ್ನು ಮಿನಿಸ್ಟರ ದೇವಲಿಂಗಯ್ಯನವರಿಗಾಗಲಿ, ಕರಿನಿಂಗನಿಗಾಗಲಿ, ಸೂರ್ಯನಿಗಾಗಲಿ, ಸೂರ್ಯನ ಅಜ್ಜಿಗಾಗಲಿ, ಪಾಪಣ್ಣನಿಗಾಗಲಿ, ದೇವಸ್ಥಾನದ ಪುರೋಹಿತರಿಗಾಗಲಿ, ಜ್ಯೋತಿಷಿಗಳಿಗಾಗಲಿ, ಎಲ್ಲಿಯೂ ಪಾಪ ಪ್ರಜ್ಞೆ ಕಾಡುವುದಿಲ್ಲ. ಇಂತಹ ಕಾರ್ಯದಲ್ಲಿ ಪುರುಷರು ಹೆಣ್ಣಿನ ವಿಷಯದಲ್ಲಿ ತಳೆದಿರುವ ಧೋರಣೆಯನ್ನು ಈ ಕಥನ ಅನಾವರಣಗೊಳಿಸುತ್ತದೆ.

ವಿವಾಹದ ಆಯ್ಕೆ ಮತ್ತು ನಿರಾಕರಣೆಯ ರಾಜಕಾರಣ

ಈ ಕಥಾವಸ್ತುವು ಪುರುಷ ಪ್ರಧಾನ ವ್ಯವಸ್ಥೆಯನ್ನು ಎತ್ತಿಹಿಡಿಯುವ, ಗಂಡಿನ ಶ್ರೇಷ್ಠತೆಯನ್ನು ಸಾರುವ ಅಂಶಗಳನ್ನೇ ಧಾರಾವಾಹಿಯಾಗಿ ಚಿತ್ರಿಸಲಾಗಿದೆ. ಈ ಧಾರಾವಾಹಿಯ ಕಥಾನಾಯಕ ಸೂರ್ಯ ಒಂದಲ್ಲ, ಎರಡಲ್ಲ ನಾಲ್ಕು ಜನ ಯುವತಿಯರೊಂದಿಗೆ ಪ್ರೀತಿ, ಪ್ರೇಮ,

ಮದುವೆ ಎಂದುಕೊಂಡಿರುತ್ತಾನೆ. ಮೊದಲಿಗೆ ಲಕುಮಿಯನ್ನು ಮೋಸದಿಂದ ತಾಳಿ ಕಟ್ಟುತ್ತಾನೆ. ಪೂರ್ವಿಯೊಂದಿಗೆ ಪ್ರೀತಿಸಿ ಮದುವೆಯಾಗುತ್ತಾನೆ. ಪೂರ್ವಿಗೆ ತನ್ನ ಮತ್ತು ಲಕುಮಿಯ ಬಗ್ಗೆ ಮುಚ್ಚಿಟ್ಟಿದ್ದ ರಹಸ್ಯ ಗೊತ್ತಾದ ಮೇಲೆ ಪೂರ್ವಿ ಸೂರ್ಯನನ್ನು ಮತ್ತವನ ಮನೆಯವರನ್ನು ದ್ವೇಷಿಸಲು ಪ್ರಾರಂಭಿಸುತ್ತಾಳೆ. ಲಕುಮಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಾಗಿ ಹೇಳಿ, ಮನೆಯವರನ್ನು ಎದುರು ಹಾಕಿಕೊಳ್ಳುತ್ತಾಳೆ. ಪೂರ್ವಿಯ ಈ ವರ್ತನೆಯಿಂದ ಬೇಸತ್ತ ಸೂರ್ಯ, ಪೂರ್ವಿಯ ಗೆಳತಿಯಾದ ಲಕ್ಷ್ಮೀಯೊಂದಿಗೆ ಪ್ರೀತಿ, ಪ್ರೇಮ ಅಂತ ಸುತ್ತಾಡುತ್ತಾನೆ. ತನ್ನ ಹೆಂಡತಿ ಅನಾರೋಗ್ಯದಿಂದ ಬಳಲುತ್ತಿದ್ದರೂ ಅವಳನ್ನು ಗಮನಿಸದೇ ಲಕ್ಷ್ಮೀಯೊಂದಿಗೆ ಸಂಬಂಧ ಬೆಳೆಸುತ್ತಾನೆ. ಕಥೆಯಲ್ಲಿ ಲಕ್ಷ್ಮೀಯು ವಾಹನ ಅಪಘಾತ ಒಂದರಲ್ಲಿ ಸಾವನ್ನಪ್ಪುತ್ತಾಳೆ. ಪೂರ್ವಿ ಕ್ಯಾನ್ಸರ್‌ನಿಂದ ಬಳಲಿ ಸಾವನ್ನಪ್ಪುತ್ತಾಳೆ. ಈ ಇಬ್ಬರ ನಂತರ ಸೂರ್ಯನ ಬಾಳಲ್ಲಿ ಅಪೂರ್ವ ಎಂಬ ಹುಡುಗಿ ಬರುತ್ತಾಳೆ. ಸೂರ್ಯನ ಕಛೇರಿಯಲ್ಲಿ ಉದ್ಯೋಗಿಯಾಗಿ ಸೇರಿಕೊಳ್ಳುತ್ತಾಳೆ. ತನ್ನ ಹೆಂಡತಿಯ ಸಾವಿನ ಬೆನ್ನ ಹಿಂದೆಯೇ ಸೂರ್ಯ ಅಪೂರ್ವಳನ್ನು ಮದುವೆಯಾಗಬೇಕೆಂದಿರುವೆ ಎಂದು ಹೇಳುತ್ತಾನೆ. ಕಥೆಯಲ್ಲಿ ಸೂರ್ಯನಿಗೆ ಕೊಡುವಂತಹ ಮದುವೆಯಾಗುವ ಅವಕಾಶ ಲಕುಮಿಗೆ ಒಂದು ಬಾರಿಯಾದರು ಕೊಡುವುದಿಲ್ಲ. ಇದು ಮದುವೆಯೆಂಬ ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಆ ಮೂಲಕ ಗಂಡಿಗೆ ವಿವಾಹದ ಆಯ್ಕೆ ಮತ್ತು ನಿರಾಕರಣೆಯ ಸ್ವಾತಂತ್ರ್ಯವನ್ನು ನಿರ್ದೇಶಕರು ನೀಡುತ್ತಾರೆ. ಆ ಸಾಧ್ಯತೆಗಳು ಅವನಿಗೆ ಹೆಚ್ಚು ಎಂಬಂತೆ ಚಿತ್ರಿಸಿದ್ದಾರೆ.

ಇಲ್ಲಿ ಲಕುಮಿಯ ಬಾಳಲ್ಲಿ ಬರುವ ರಾಹುಲ್ ಆಗಿರಬಹುದು ಗಣೇಶನಾಗಿರಬಹುದು. ಈ ಪಾತ್ರಗಳನ್ನು ಲಕುಮಿಯ ಬಾಳಲ್ಲಿ ಸ್ನೇಹಿತರಾಗಿಯೇ ಉಳಿಯುವಂತೆ ಮಾಡಲಾಗುತ್ತದೆ. ಕಥೆಯ ಕೊನೆಯವರೆಗೂ ಎಲ್ಲಿಯೂ ಲಕುಮಿಯನ್ನು ಪ್ರೀತಿ, ಪ್ರೇಮ, ಮದುವೆ ಎಂಬ ವಲಯದೊಳಗೆ ಪ್ರವೇಶಕೊಡದೇ ಕೌಟುಂಬಿಕ ವಲಯದೊಳಗಿನ ಬದುಕಿನಲ್ಲಿ ಮಾತ್ರ ಚಿತ್ರಿತವಾಗುತ್ತದೆ. ಹೊರತು ಒಬ್ಬ ಹುಡುಗನ ಪ್ರವೇಶವನ್ನು ನಯವಾಗಿ ತೀರಸ್ಕರಿಸುತ್ತಾ ಬರಲಾಗಿದೆ. ಲಕುಮಿಗೆ ವಿವಾಹ ಚೌಕಟ್ಟಿನ ಆಚೆ ಇಡಲಾಗುತ್ತದೆ. ಕಥೆಯ ಕೊನೆಯ ಭಾಗದಲ್ಲಿ ಮಗುವಿನ ಜವಾಬ್ದಾರಿಯೊಂದನ್ನು ಆ ಪುಟ್ಟ ಬಾಲಕಿಯ ಹೆಗಲ ಮೇಲೆ ಹಾಕಿ ತಾಯ್ತತನದ ಪರಿಧಿಗೆ ತಂದು ಕಥೆ ಮುಗಿಸುತ್ತಾರೆ.

ಕಥೆಯು ಹೀಗೆ ಮುಕ್ತಾಯವಾಗುವುದನ್ನು ಸಾಂಪ್ರದಾಯಿಕ ಮನೋಭಾವದವರು ಲಕುಮಿಯ ಕಷ್ಟ, ಸಹಿಷ್ಣುತೆ, ವಿಶಾಲ ಹೃದಯವಂತಿಕೆಯನ್ನು ಕೊಂಡಾಡಬಹುದು. ಆದರೆ ಹೆಣ್ಣನ್ನು ಸಮಾನತೆಯ ದೃಷ್ಟಿಕೋನದಿಂದ ನೋಡುವ ಬುದ್ಧಿಜೀವಿಗಳಿಗೆ ಬಹುಶಃ ಈ ರೀತಿಯಾದ ಮುಕ್ತಾಯ ಹಿಡಿಸಲಿಕ್ಕಿಲ್ಲ. ಧಾರಾವಾಹಿಗಳು ಸಮಾಜದಲ್ಲಿರುವ ವ್ಯವಸ್ಥೆಯನ್ನು ಸಡಿಲಗೊಳಿಸುವ. ಮಹಿಳೆಯರ ಅಭಿವೃದ್ಧಿಯಲ್ಲಿ ಮತ್ತವರ ಸ್ಥಾನಮಾನಗಳಲ್ಲಿ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಶ್ರಮವಹಿಸಿದರೆ, ಅದು ಒಂದು ಒಳ್ಳೆಯ ಸಮಾಜಕ್ಕೆ ನಾಂದಿಯಾಗಬಹುದಿತ್ತು. ಆದರೆ ಕಥೆಯಲ್ಲಿ ಹಾಗೆ ಮಾಡದೇ ಮದುವೆಯ ಬದುಕನ್ನೇ ಕಂಡಿರದವಳಿಗೆ ತಾಯ್ತತನದ

ಜವಾಬ್ದಾರಿ ಹೇರುವುದು ಎಷ್ಟರಮಟ್ಟಿಗೆ ಸರಿ? ಲಕುಮಿಗೆ ಒಬ್ಬ ಜೀವನ ಸಂಗಾತಿಯನ್ನು ಮಾಡಿ ಸುಪ್ರಿಯಾಳೊಂದಿಗೆ ಬದುಕುವಂತಹ ಜವಾಬ್ದಾರಿ ಕೊಟ್ಟಿದ್ದರೆ ಅಲ್ಲಿ ಕಥೆಗೆ ಒಂದು ನ್ಯಾಯ ದೊರೆಯಬಹುದಿತ್ತೇನೋ? ಎಂಬ ಪ್ರಶ್ನೆ ಹಾಗೆಯೇ ಉಳಿದುಬಿಡುತ್ತದೆ.

ಪಿತೃಪ್ರಧಾನತೆಯ ಸಮಾಜ ಮತ್ತು ಧರ್ಮ

ಧರ್ಮ ಮತ್ತು ಪಿತೃಪ್ರಧಾನತೆಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿದ್ದು ಪರಸ್ಪರ ಪೋಷಕಗಳಾಗಿ ನಿಲ್ಲುತ್ತವೆ. ಬಹುತೇಕ ಸ್ತ್ರೀಯರು ಧರ್ಮದ ಸಾರವನ್ನು ಅರಿಯಲು ಅವಶ್ಯಕವಾದ ಜ್ಞಾನಾರ್ಜನೆಯ ಪ್ರಕ್ರಿಯೆಯಿಂದ ಅವರನ್ನು ಪ್ರಜ್ಞಾಪೂರ್ವಕವಾಗಿ ದೂರವಿಡಲ್ಪಟ್ಟಿದ್ದರಿಂದ ಅವರ ಪಾತ್ರವನ್ನು ಕುರಿತಂತೆ ಧರ್ಮಗ್ರಂಥಗಳು ಏನು ಹೇಳುತ್ತವೆ ಎಂದು ಅರಿವಿಗೆ ಬಂದರು ಕೂಡ ಅದರ ವಿರುದ್ಧ ಪ್ರತಿಭಟಿಸುವುದಾಗಲಿ ಅವುಗಳನ್ನು ದಾಟುವುದಾಗಲಿ ಆಗುವುದಿಲ್ಲ. ಅಲ್ಲದೇ ಆಕೆಯು ವ್ಯಕ್ತಿಯಾಗಿ ಎಲ್ಲಾ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳಬಹುದೆಂಬ ಅಂಶಕ್ಕೆ ಪುರುಷರು ಪ್ರಾಮುಖ್ಯತೆಯನ್ನು ನೀಡಲಿಲ್ಲ. ಬಹುಸಂಖ್ಯಾತ ಸ್ತ್ರೀಯರ ಪಾಲಿಗೆ ಧರ್ಮವು ಅವರ ಕೌಟುಂಬಿಕ ಪಾತ್ರವನ್ನು ನಿರ್ದೇಶಿಸುವಂತಹ ಒಂದು ಸಮಾಜಿಕ ನಿಯಂತ್ರಣ ವ್ಯವಸ್ಥೆಯಾಗಿದೆ. ಅವಳಿಗೆ ನೀಡಿರುವ ಹಕ್ಕುಗಳು ಕೆಲವು ಹೇರಿರುವ ನಿರ್ಬಂಧಗಳು ಸ್ತ್ರೀಯರನ್ನು ಕುರಿತು ಧರ್ಮ ತಳೆದಿರುವ ನಿಲುವುಗಳಾಗಿವೆ.

ಕುಟುಂಬದ ಸದಸ್ಯರೆಲ್ಲರ ಪಾಲಿಗೆ ವಿಶೇಷವಾದ ಹಕ್ಕು ಬಾಧ್ಯತೆಗಳು ಅಲಿಖಿತವಾಗಿ ಬಂದಿರುತ್ತವೆ. ಪುರುಷ ಪ್ರಧಾನವಾದ ಈ ಸಮಾಜ ವ್ಯವಸ್ಥೆಯಲ್ಲಿ ಈ ಎಲ್ಲಾ ನಿಯಮಾವಳಿಗಳನ್ನು ರೂಪಿಸುವವನು ಪುರುಷನೇ ಎಂದ ಮೇಲೆ ಸಹಜವಾಗಿಯೇ ಎಲ್ಲವೂ ಅವನ ನೇರಕ್ಕೆ ಅನುಕೂಲಕ್ಕೆ ಸರಿಯಾಗಿರುತ್ತದೆ. ಹಾಗಾಗಿ ಹಕ್ಕುಗಳೆಲ್ಲವೂ ಪುರುಷನದ್ದು ಬಾಧ್ಯತೆಗಳೆಲ್ಲವೂ ಹೆಂಗಸಿನದು ಎಂದಾಗಿಬಿಟ್ಟಿದೆ. ಹೆಂಗಸು ಹುಟ್ಟಿದ ಮನೆಯಲ್ಲಿ ಹೇಗೆ ಬದುಕಬೇಕೆಂಬ ತರಬೇತಿಯಲ್ಲೇ ಬೆಳೆಯುತ್ತಾಳೆ. ತಾಯಿ ಮನೆಯಲ್ಲೂ ಅತ್ತೆ ಮನೆಯಲ್ಲೂ ಅಲ್ಲಿನ ಪುರುಷರ ಜೊತೆಗಿನ ಸಂಬಂಧಗಳ ನೆರಳನ್ನೂ ಅವಲಂಬಿಸುವುದು ಅವಳ ಬದುಕಾಗುತ್ತದೆ. ತನ್ನ ಹಕ್ಕುಗಳ ಬಗ್ಗೆ ಎಂದೂ ಕೂಡ ಆಲೋಚಿಸದೇ ತಾನು ನಿರ್ವಹಿಸಬೇಕಾದ ಬಾಧ್ಯತೆಗಳನ್ನು, ಕರ್ತವ್ಯಗಳನ್ನು ಮಾತ್ರ ಚಿಂತಿಸುವುದು ಅನಿವಾರ್ಯವಾಗಿರುತ್ತದೆ. ಸಮಾಜ, ಧರ್ಮ, ಕುಟುಂಬಗಳು ಅವಳು ಆ ರೀತಿ ನಡೆದರೆ ಮಾತ್ರ ಅವಳನ್ನು ಮನ್ನಿಸುತ್ತವೆ. ಇಲ್ಲವಾದಲ್ಲಿ ಧಾರ್ಮಿಕ ದಿಗ್ಬಂಧನೆ ನಿಷೇಧಗಳನ್ನು ಹೇರಲಾಗುತ್ತದೆ. ಅಂತಿಮವಾಗಿ ಮಹಿಳೆ ಕುಟುಂಬದ ಒಟ್ಟು ನಿಯಮಗಳನ್ನು ಪಾಲಿಸಿಕೊಂಡು ಹೋಗಬೇಕಾಗುತ್ತದೆ. ಧರ್ಮ ಸಾಮಾಜೀಕರಣದ ಅತ್ಯಂತ ಪ್ರಮುಖವಾದ ಅಂಶಗಳಲ್ಲಿ ಒಂದಾಗಿದೆ. ಇದು ಪುರುಷ ನಿಷ್ಠವಾಗಿ ಪುರುಷ ಪರವಾದಂತಹ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದರಲ್ಲಿ ಇದರ ಕೊಡುಗೆ ಅಪಾರ. ಪುರುಷ ಅವಲಂಬಿತ ಮಹಿಳಾ ಜೀವನವನ್ನು ಹೇಳುತ್ತಾ ಅವರ ವ್ಯಕ್ತಿತ್ವದಲ್ಲಿ ಅವುಗಳನ್ನು ಸ್ಥಿರಗೊಳಿಸುವಲ್ಲಿ ಧರ್ಮದ ಪಾತ್ರ ಮುಖ್ಯವಾದದ್ದು ಹೀಗೆ ಪುರುಷ ನಿರ್ಮಿತ ನಿಯಮಗಳ ಪಾಲನೆ ಮಾಡಲಿಲ್ಲವಾದಲ್ಲಿ ಘೋರವಾದ ಶಿಕ್ಷೆಗೆ ಒಳಪಡಿಸುತ್ತದೆ ಎಂಬುದಕ್ಕೆ ಅನೇಕ ಜೀವಂತ ಉದಾಹರಣೆಗಳನ್ನು ನೀಡಬಹುದಾಗಿದೆ.

ಕೇವಲ ಐದು ತಿಂಗಳ ಬಾಣಂತಿಗೆ ಕೈಕಾಲುಗಳಿಗೆ ಸರಪಳಿಹಾಕಿ ಸೆರೆಮನೆಯಲ್ಲಿಡಲಾಯಿತು. ಅವಳನ್ನು ಹೀಗೆ ಕಟ್ಟಿಹಾಕಲು ಕಾರಣವಾಗಿದ್ದು ವ್ಯಭಿಚಾರ. ಅದಕ್ಕೆ ವಿಧಿಸಲಾದ ಶಿಕ್ಷೆ ಕಲ್ಲು ಹೊಡೆದು ಕೊಲ್ಲುವುದು. ಇದು ಆಫ್ರಿಕಾದ ಸುಡಾನ ಎಂಬ ದೇಶದ ನ್ಯಾಯ ವ್ಯವಸ್ಥೆಯಲ್ಲಿ ನಡೆದ ಘಟನೆಯಾಗಿದೆ. ಇಂತಿಸಾರ್ ಶರೀಫ್ ಅಬ್ದುಲ್ಲಾಳ ಗಂಡನೆನಿಕೊಂಡವನಿಗೆ ಶೀಲದ ಮೇಲೆ ಸಂಶಯ. ಈಕೆ ಯಾರ ಜೊತೆ ವ್ಯಭಿಚಾರ ನಡೆಸಿದ್ದಾಳೆಂದು ಆರೋಪಿಸಲಾಗಿತ್ತೋ ಆತ ಈ ಆರೋಪವನ್ನು ನಿರಾಕರಿಸಿದ. ಆತನನ್ನು ಕೋರ್ಟ ಮುಕ್ತವಾಗಿ ಹೊರಗೆ ಹೋಗಲು ಅನುಮತಿ ಕೊಟ್ಟಿತು. ಆದರೆ ಅವಳ ಸಹೋದರ ಮಾತ್ರ ಈಕೆಗೆ ಹೊಡಿದು ಬಡಿದು ಆರೋಪ ಒಪ್ಪಿಕೊಳ್ಳುವಂತೆ ಮಾಡಿದ. ಸಾರ್ವಜನಿಕವಾಗಿ ಕಲ್ಲು ಹೊಡೆದು ಸಾಯಿಸುವ ಶಿಕ್ಷೆ ಜಾರಿಯಾಯಿತು. ಕೊನೆಗೆ ಇಂತಿಸಾರ್ ಅಂತರಾಷ್ಟ್ರೀಯ ಮಹಿಳಾ, ಮಾನವ ಹಕ್ಕುಗಳ ಮೊರೆ ಹೋದಾಗ ಪ್ರಜ್ಞಾವಂತರು ಸುಡಾನ್ ಸರ್ಕಾರಕ್ಕೆ ಛೀಮಾರಿ ಹಾಕಿ, ಇಂತಿಸಾರ್‌ಳನ್ನು ರಕ್ಷಿಸಿತು. ಇಂತಹ ಅದೆಷ್ಟೋ ಘಟನೆಗಳು, ಘೋರವಾದ ಉಗ್ರವಾದ ಸ್ವರೂಪವನ್ನು ತಾಳಿಕೊಂಡು ದಿನನಿತ್ಯ ನಡೆಯುತ್ತಿರುತ್ತವೆ. ಕೆಲವು ಘಟನೆಗಳು ಕಣ್ಣಿಗೆ ಕಾಣಿಸುತ್ತವೆ. ಕಿವಿಗೆ ಕೇಳಿಸುತ್ತವೆ. ಆದರೆ ಉಳಿದ ಎಷ್ಟೋ ಘಟನೆಗಳು, ಹಿಂಸೆಗಳು ನಮ್ಮ ಅರಿವಿಗೆ ಬರದೇ ಹೆಣ್ಣಿನ ಜೀವ ತೆಗೆಯುತ್ತವೆ. ಇದು ಸಮಾಜದಲ್ಲಿ ಧರ್ಮಗಳು ಹೆಣ್ಣಿನ ವಿಚಾರದಲ್ಲಿ ತಳೆದಿರುವ ನಿಯಮಗಳನ್ನು ಕುರಿತು ಹೇಳುತ್ತದೆ. ಹೀಗೆ ಕಲ್ಲಿನಿಂದ ಹೊಡೆಯುವ ಚಿತ್ರಹಿಂಸೆಕೊಟ್ಟು ಸಾಯಿಸುವಂತಹ ಘೋರ ನಿಯಮಗಳು ನಮ್ಮ ವ್ಯವಸ್ಥೆಯೊಳಗೆ ಇಂದಿಗೂ ಕೂಡ ಜೀವಂತವಾಗಿರುವುದನ್ನು ಗಮನಿಸಿದರೆ ಶೋಚನಿಯವೆನಿಸುತ್ತದೆ.

೨.೧.೪. ಗೆಜ್ಜೆಪೂಜೆ

ಕಥೆಯ ಸಾರಾಂಶ

ಮಲೆನಾಡಿನ ಪುಟ್ಟ ಹಳ್ಳಿ ಚಂದ್ರಗಿರಿ. ಈ ಹಳ್ಳಿಯಲ್ಲಿ ಆಚರಣೆಗಳೂ, ಮೌಲ್ಯಗಳಿಗೆ, ಸಂಪ್ರದಾಯಗಳಿಗೆ ತುಂಬಾ ಮಹತ್ವ ಕೊಡುವ ಊರು. ಊರಿನಲ್ಲಿ ಅವಿವಾಹಿತ ಹುಡುಗಿಯರನ್ನು ದೇವರ ಜೊತೆ ಮದುವೆ ಮಾಡಿಕೊಡುವುದು. ಆನಂತರ ಆ ಹೆಣ್ಣನ್ನು ಶ್ರೀಮಂತ ರಾಜಕಾರಣಿಯೋ, ಪೋಲಿಸ್ ಅಧಿಕಾರಿಯೋ, ಸರಕಾರಿ ಅಧಿಕಾರಿಗಳೋ, ಹೀಗೆ ಹೆಚ್ಚಿನ ದುಡ್ಡು ಯಾರು ಕೊಡುತ್ತಾರೋ ಅವರೊಂದಿಗೆ ಆ ರಾತ್ರಿ ಮಲಗುವ ಪದ್ಧತಿ. ಇದು ಚಂದ್ರಗಿರಿಯಲ್ಲಿ ತಪ್ಪಿಲ್ಲದ ಹಾಗೆ ನಡೆದುಕೊಂಡು ಬಂದಿರುವ ಪದ್ಧತಿ. ಇದೇ ಗ್ರಾಮದಲ್ಲಿ ಯಮುನೆಯೂ ಒಂದು ಪುಟ್ಟ ಮನೆ ಮಾಡಿಕೊಂಡು ವಾಸವಿರುತ್ತಾಳೆ. ಯಮುನೆಗೆ ಇಬ್ಬರು ಹೆಣ್ಣುಮಕ್ಕಳು ಮಂಜುಳಾ ಮತ್ತು ಕಲ್ಪನಾ. ಯಮುನೆ ಒಬ್ಬ ದೇವದಾಸಿಯಾಗಿದ್ದು, ಆ ಸಂಪ್ರದಾಯವನ್ನು ಮಗಳು ಮುಂದುವರೆಸಲಿ ಎಂಬ ಕಾರಣಕ್ಕಾಗಿ ಹಿರಿಮಗಳಾದ ಮಂಜುಳಾಳನ್ನು ಕೂಡಾ ದೇವದಾಸಿಯನ್ನಾಗಿ ಮಾಡಿರುತ್ತಾಳೆ.

ಇಲ್ಲಿ ವಿರೋಧ ಬರುವುದು ತಂಗಿ ಕಲ್ಪನಾಳನ್ನು ದೇವದಾಸಿಯನ್ನಾಗಿ ಮಾಡಬೇಕೆಂದಾಗ, ಏಕೆಂದರೆ, ಮಂಜುಳಾಳಿಗೆ ತನ್ನ ತಂಗಿ ಕಲ್ಪನಾ ತನ್ನಂತೆ ದೇವದಾಸಿಯಾಗಿ ಇನ್ನೊಬ್ಬರ

ಸೇವೆಗೆ ಮುಡಿಪಾಗಿರುವುದು ಇಷ್ಟವಿರುವುದಿಲ್ಲ. ತನ್ನ ತಂಗಿ ಇಂಥ ಮೂಢನಂಬಿಕೆಗಳ, ಆಚರಣೆಗಳಿಗೆ ಒಳಗಾಗಬಾರದು ತನ್ನಂತೆ ಅವಳ ಬಾಳು ಹಾಳಾಗಬಾರದು. ಒಳ್ಳೆಯ ಹುಡುಗನೊಂದಿಗೆ ಮದುವೆಯಾಗಿ, ಉಳಿದ ಹೆಣ್ಣುಮಕ್ಕಳಂತೆ ವೈವಾಹಿಕ ಜೀವನ ನಡೆಸಬೇಕೆಂಬುದು ಅವಳ ಆಸೆಯಾಗಿರುತ್ತದೆ. ಆದರೆ ತಾಯಿಯ ಆಸೆ ಇದಕ್ಕೆ ವಿರುದ್ಧವಾಗಿರುತ್ತದೆ ನಮ್ಮಂತಹ ಜನರಿಗೆ ಮದುವೆ, ಗಂಡ, ಸಂಸಾರ, ಮಕ್ಕಳು, ಯಾವುದು ಇರುವುದಿಲ್ಲ. ನಾವೆನಿದ್ದರೂ ಇನ್ನೊಬ್ಬರ (ಪುರುಷರ) ಸೇವೆಗೆ ಮೀಸಲು. ಈ ಪದ್ಧತಿ ನಮ್ಮ ಹಿಂದಿನ ತಲೆಮಾರುಗಳಿಂದಲೂ ನಡೆದುಕೊಂಡು ಬಂದಿದೆ. ಅದನ್ನು ತಪ್ಪಿಸುವ ಹಾಗಿಲ್ಲ, ಒಂದು ವೇಳೆ ತಪ್ಪಿಸಿದರೆ, ಆ ದೇವರು ನಮಗೆ ಶಿಕ್ಷೆ ಕೊಡುತ್ತಾನೆ. ಭೂಮಿಯ ಮೇಲೆ ಅಲ್ಲೋಲ, ಕಲ್ಲೋಲಗಳು ಏಳುತ್ತವೆ. ಹಾಗಾಗಿ ನಾವು ಸೃಷ್ಟಿಯ ನಿಯಮಕ್ಕೆ ವಿರುದ್ಧವಾಗಿ ನಡೆದು ಕೊಳ್ಳುವಂತಿಲ್ಲ ಎಂದು ತಾಯಿ ಹೇಳುತ್ತಾಳೆ. ಈ ಅಭಿಪ್ರಾಯ ಯಮುನೆಯ ಮನದಲ್ಲಿ ಬೇರೂರಿರುತ್ತದೆ. ತಾಯಿಯ ಈ ಮಾತುಗಳು ಮಂಜುಳಾಳಲ್ಲಿ ಅಸಹನೆ, ಸಿಟ್ಟಿಗೆ ಕಾರಣ ವಾಗಿರುತ್ತದೆ. ಈ ಅಸಹನೆಯನ್ನು ಹೊರ ಹಾಕುತ್ತಾ, ಈ ಪದ್ಧತಿಯನ್ನು ನಾವೇ ಯಾಕೆ ಮಾಡಿಕೊಂಡು ಹೋಗಬೇಕು? ನಾವೇ ಯಾಕೆ ದೇವದಾಸಿಯರಾಗಬೇಕು? ಮೇಲಿನವರ ಹೆಣ್ಣು ಮಕ್ಕಳಿಗೇನಾಗಿದೆ? ನಮ್ಮ ಕುಲದ ಹೆಣ್ಣುಮಕ್ಕಳೇ ಆಗಬೇಕೂ ಅಂತ ಆ ದೇವರು ಹೇಳಿದ್ದಾನಾ? ಎಂದು ಪ್ರಶ್ನೆ ಮಾಡುತ್ತಾಳೆ. ಇದಕ್ಕೆಲ್ಲಾ ತಾನು ಒಪ್ಪುವುದಿಲ್ಲ. ತನ್ನ ತಂಗಿ ದೇವದಾಸಿಯಾಗುವುದನ್ನು ತಪ್ಪಿಸಿಯೇ ಬಿಡುತ್ತೇನೆ ಎಂದು ಹೇಳಿ ಹೊರನಡೆಯುತ್ತಾಳೆ. ತಾಯಿ ಮತ್ತು ಅಕ್ಕನ ನಡುವೆ ನಡೆಯುವ ಈ ಮಾತುಗಳು, ಜಗಳಗಳ ತಲೆ ಬುಡ ಅರಿಯದ ಮುಗ್ಧೆ ಕಲ್ಪನಾಳಿಗೆ ಮಾತ್ರ ಯಾವ ಸಂಪ್ರದಾಯ, ಆಚರಣೆ, ದೇವರು, ಶಾಪಗಳ ಬಗ್ಗೆ ತಿಳಿಯದೇ ಹೋಗುತ್ತದೆ. ಒಟ್ಟಾರೆಯಾಗಿ ಕಥೆಯಲ್ಲಿ ಕಲ್ಪನಾ ದೇವದಾಸಿ ಯಾಗುತ್ತಾಳಾ?. ಇಲ್ಲಾ ಮದುವೆಯಾಗಿ ಸಂಸಾರಿಯಾಗುತ್ತಾಳಾ? ಎನ್ನುವ ಮೇಲೆ ಕಥೆಯನ್ನು ಚಿತ್ರಿಸಲಾಗಿದೆ. ಈ ಧಾರಾವಾಹಿಯ ಪ್ರಮುಖ ಪಾತ್ರ ನಿರ್ವಹಿಸಿದ ಕಥಾನಾಯಕಿ ಕಲ್ಪನಾಳನ್ನು ಕುರಿತು ಕಥಿಸುತ್ತದೆ.

ಕಲ್ಪನಾ ಎಲ್ಲರ ಬಾಯಿಯಲ್ಲಿಯೂ ಕಲ್ಪಿಯೆಂದು ಕರೆಸಿಕೊಂಡು, ಚುರುಕಾಗಿ ಓಡಾಡುವ ಹದಿನಾರರ ಹುಡುಗಿ ಜೀವನವೆಂದರೆ, ತಾಯಿ, ಅಕ್ಕ, ಆಟ, ಮತ್ತು ತನ್ನೂರು ಅಷ್ಟೆ, ಇದೇ ಅವಳ ಪ್ರಪಂಚವಾಗಿರುತ್ತದೆ. ಇದಕ್ಕೆ ಹೊರತಾಗಿ ಇನ್ನೊಂದು ಬದುಕನ್ನು ಕಂಡಿರದವಳು. ಇಂತಹ ಮುಗ್ಧ ಹುಡುಗಿಯನ್ನು ಈಗ ಅನಿಷ್ಟ ಪದ್ಧತಿಗೆ ಬಲಿಕೊಡಲು ಸಿದ್ಧತೆ ನಡೆಸಿರುತ್ತಾರೆ. ಕಲ್ಪನಾಳಿಗೆ ದೇವದಾಸಿ ಪದ್ಧತಿಯ ಕ್ರೂರತೆಯ ಸತ್ಯವನ್ನು ಮುಚ್ಚಿಡಲಾಗುತ್ತದೆ. ಇದು ನಮ್ಮ ಹಿರಿಯರೆಲ್ಲರೂ ಪಾಲಿಸಿಕೊಂಡು ಬಂದಂತಹ ಸಂಪ್ರದಾಯವಾಗಿದ್ದು ತಾನು, ಮಂಜಿ ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದೇವೆ. ಆದ್ದರಿಂದಲೇ ನಮ್ಮ ಊರಿಗೆ ಕಾಲಕಾಲಕ್ಕೆ ಮಳೆ ಬೆಳೆಯಾಗುತ್ತಿದೆ. ಜನರಿಗೆ ಯಾವುದೇ ತೊಂದರೆಯಿಲ್ಲದೇ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಒಂದು ವೇಳೆ ಈ ಸಂಪ್ರದಾಯವೇನಾದರೂ ನಿಂತು ಹೋದರೆ ದೇವರು

ಮತ್ತು ಊರವರ ದೃಷ್ಟಿಯಲ್ಲಿ ಕೆಟ್ಟವರಾಗಬೇಕಾಗುತ್ತದೆ. ಇದನ್ನು ಮೀರಿ ನಡೆಯುವ ಶಕ್ತಿ, ಸಾಮರ್ಥ್ಯ, ಅಧಿಕಾರ ತಮಗಿಲ್ಲವೆಂದು, ಈ ಪದ್ಧತಿಯನ್ನು ಪಾಲಿಸುವಂತೆ ಕಲ್ಪಿಗೆ ಹೇಳುತ್ತಾಳೆ. ಕಲ್ಪಿ ಏನು ಅರಿಯದಂತಹ ಮುಗ್ಧೆ. ತನ್ನ ತಾಯಿಗೆ ಈ ಪದ್ಧತಿಯ ಕುರಿತು ಕೇಳುತ್ತಾಳೆ. ಈ ಪದ್ಧತಿಯನ್ನು ಹೇಗೆ ಮಾಡುತ್ತಾರೆ? ಯಾಕೆ ಮಾಡುತ್ತಾರೆ? ಎಂದು ವಿಚಾರಿಸುತ್ತಾಳೆ. ಆಗ ಯಮುನಾ ಕಲ್ಪನಾಳಿಗೆ ನೀನೀಗ ಮದುವೆಯ ವಯಸ್ಸಿಗೆ ಬಂದಿದ್ದು, ನಿನಗೆ ದೇವರೊಂದಿಗೆ ಮದುವೆ ಗೊತ್ತಾಗಿದೆ. ಅರಿಶಿಣ, ಕುಂಕುಮ ಹಚ್ಚಿ ಹೊಸ, ಬಟ್ಟೆಗಳು, ಒಡವೆಗಳನ್ನು, ಹಾಕಿ ತಲೆ ತುಂಬಾ ಹೂವು ಮುಡಿಸಿ ಕೈತುಂಬಾ ಬಳೆ ತೊಡಿಸಿ, ಕಾಲ್ಗೆಜ್ಜೆ ಹಾಕಿ ಮದುಮಗಳಂತೆ ಶೃಂಗಾರ ಮಾಡಿ ಮುತ್ತೈದೆಯರೆಲ್ಲ ಸೇರಿ ಈ ಕೆಲಸವನ್ನು ಮಾಡಿ ಪೂಜಾರಿ ಕೈಯಿಂದ ನಿನಗೆ ತಾಳಿಕಟ್ಟಿಸುತ್ತಾರೆ. ತಾಳಿಕಟ್ಟಿದ ಮೇಲೆ ನೀನು ದೇವರ ಸೇವೆಗೆ ಮುಡಿಪಾಗಿರುತ್ತೀಯಾ ಮುಂದೆ ನಮ್ಮಲ್ಲಿಗೆ ಬರುವವರನ್ನು ದೇವರಂತೆ ಕಂಡು ಉಪಚರಿಸಬೇಕೆಂದು ಕಲ್ಪನಾಳಿಗೆ ಹೇಳುತ್ತಾಳೆ.

ತಾಯಿ ಹೇಳುವ ಇಷ್ಟೆಲ್ಲಾ ಮಾತುಗಳಲ್ಲಿ ಕಲ್ಪಿಗೆ ಕೇವಲ ತನಗೆ ಮದುವೆ ಗೊತ್ತಾಗಿದೆ ಆ ಮದುವೆಯನ್ನು ನಾನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಡೆಯಬಾರದ ಅನಾಹುತಗಳು ನಡೆಯುತ್ತವೆ ಎಂದಷ್ಟೇ ತಿಳಿದುಕೊಳ್ಳುತ್ತಾಳೆ. ಆದರೆ ಕಲ್ಪನಾಳಿಗೆ ಒಂದು ಸಂಶಯ ಕಾಡುತ್ತದೆ ತನ್ನ ಅಮ್ಮ ಇಷ್ಟೊಂದು ಸಂತೋಷವಾಗಿದ್ದರೆ ಅಕ್ಕನಿಗೇಕೆ ಸಂತೋಷವಿಲ್ಲ? ತನಗೆ ದೇವರೊಂದಿಗೆ ಮದುವೆಯಾಗುವುದು ಅವಳಿಗೆ ಇಷ್ಟವಿಲ್ಲವೇ? ಎಂದು ತಾಯಿಗೆ ಕೇಳುತ್ತಾಳೆ. ಅದಕ್ಕೆ ಉತ್ತರಿಸುವ ತಾಯಿ ಅವಳೊಂಥರಾ ಹಾಗೆ, ಅವಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ ಮದುವೆಯ ತಯಾರಿ ಮಾಡೋಣ ನಡಿ ಎಂದು ಒಳ ಹೋಗುತ್ತಾರೆ. ಇದು ಕಥೆಯಲ್ಲಿ ದೇವದಾಸಿ ಯಾಗಬೇಕಾದ ಕಲ್ಪಿಯ ಮನೆಯ ಕಥೆ. ಕಥೆಯ ಭಾಗವಾಗಿ ಧರ್ಮಯ್ಯನ ಮನೆಯ ಚಿತ್ರಣವಿದೆ.

ಧರ್ಮಯ್ಯ ೫೧ ವರ್ಷದ ಶ್ರೀಮಂತ ವ್ಯಕ್ತಿ, ಕಾಫಿ ತೋಟಗಳನ್ನು ಹೊಂದಿರುವ ಈತನಿಗೆ ಇರುವ ಒಂದು ಕೆಟ್ಟ ಹವ್ಯಾಸ ಹೆಣ್ಣುಬಾಕುತನ ವಯಸ್ಸು ೫೦ ಆದರೂ ಕೂಡ ಚಪಲ ಚೆನ್ನಿಗರಾಯ ಮನೆಯಲ್ಲಿ ದೇವಿಯಂತಹ ಹೆಂಡತಿ ರುಕ್ಮಿಣಿ ಇದ್ದರೂ, ಬೇರೊಬ್ಬ ಳೊಂದಿಗೆ ಸಂಬಂಧ ಬಯಸುವವನು. ಈತನಿಗೆ ಗುರುಪ್ರಸಾದ, ಹರಿಪ್ರಸಾದ ಮತ್ತು ಅಮಿತಾ ಎಂಬ ಮಕ್ಕಳು ಹಿರಿಯ ಮಗ ಗುರುಪ್ರಸಾದ್‌ಗೆ ಚಿತ್ರ ಎಂಬ ಹೆಂಡತಿಯಿದ್ದು, ಚೀಟಿ ವ್ಯವಹಾರದಲ್ಲಿ ಅವ್ಯವಹಾರ ಮಾಡಿ ತಲೆಮರೆಸಿಕೊಂಡು ಬಂದಿರುತ್ತಾಳೆ. ಎರಡನೆ ಮಗ ಹರಿಪ್ರಸಾದನಿಗೆ ವಯಸ್ಸ ೨೨ ಆದರೂ ಬುದ್ಧಿ ಸರಿ ಇರುವುದಿಲ್ಲ. ಮಗಳು ಅಮಿತಾ ಇನ್ನು ಓದುತ್ತಿರುವ ಯುವತಿ. ತುಂಬು ಸಂಸಾರ ಹೊಂದಿರುವ ಧರ್ಮಯ್ಯನಿಗೆ ಹೊರಗಿನ ಚಟ ಜಾಸ್ತಿ ಇರುತ್ತದೆ. ದೇವರು, ಧರ್ಮ, ಸಂಪ್ರದಾಯದ ಹೆಸರಿನಲ್ಲಿ ಕೆಳವರ್ಗದ ನೋಡಲು ಸುಂದರವಾಗಿರುವ ಮಹಿಳೆಯರನ್ನು ದೇವದಾಸಿ ಪದ್ಧತಿಗೆ ಒಳಗಾಗಿಸುವುದು. ದೇವದಾಸಿ ಪದ್ಧತಿಗೆ ಒಳಗಾದ ನಂತರ ಅವಳಿಗೆ ಹೆಚ್ಚಿನ ಬೆಲೆಕಟ್ಟಿ ಖರೀದಿ ಮಾಡುವುದು.

ಮನತೃಪ್ತಿಯಾಗುವವರೆಗೂ ಅವಳೊಂದಿಗೆ ಇದ್ದು ನಂತರ ಅವಳನ್ನು ಬಿಟ್ಟುಬಿಡುವುದು. ಇದು ಧರ್ಮಯ್ಯನಿಗಿದ್ದ ಹೆಂಗಸರ ಚಟ. ಅವನ ಈ ಚಟಕ್ಕೆ ಬಲಿಯಾಗಿದ್ದವಳು ಕಲ್ಪಿಯ ಅಕ್ಕ ಮಂಜಿ.

ಗೆಜ್ಜೆ ಕಟ್ಟಿಸಲು ಯಮುನೆ ಕಲ್ಪಿಯನ್ನು ಒಪ್ಪಿಸುತ್ತಾಳೆ. ಮಂಜಿ ಈ ಅನಿಷ್ಟ ಪದ್ಧತಿಯಿಂದ ತನ್ನ ತಂಗಿಯನ್ನು ಉಳಿಸಬೇಕೆಂದು ಹಲವು ಪ್ರಯತ್ನ ಮಾಡುತ್ತಾಳೆ. ಆದರೆ ಅದರಲ್ಲಿ ಸೋಲು ಅನುಭವಿಸುತ್ತಾಳೆ. ಹರಕೆಯ ಎಲ್ಲ ತಯಾರಿಗಳನ್ನು ಮಾಡಿಕೊಳ್ಳುತ್ತಾರೆ. ಹಿಂದಿನ ದಿನ ದೇವದಾಸಿಯರನ್ನು ಕರೆಸಿ ಕಲ್ಪಿಗೆ ಅರಿಶಿನ, ಕುಂಕುಮ, ಬಳೆ, ಹೂವು, ಹೀಗೆ ಮದುವೆ ಹೆಣ್ಣಿಗೆ ಏನೇನು ಶೃಂಗಾರ ಮಾಡಬೇಕೊ ಅದನ್ನೆಲ್ಲಾ ಮಾಡಿಕೊಂಡು ದೇವಸ್ಥಾನಕ್ಕೆ ಬರುತ್ತಾರೆ. ದೀಪಗಳಿಂದ ಅಲಂಕೃತವಾಗಿರುವ ದೇವಸ್ಥಾನಕ್ಕೆ ಕರೆದುಕೊಂಡು ಬರಲಾಗುತ್ತದೆ. ದೇವಸ್ಥಾನದ ತುಂಬೆಲ್ಲಾ ಜನರು ಕಿಕ್ಕಿರಿದು ನಿಂತಿರುತ್ತಾರೆ. ಪೂಜಾರಿ ಊರಿನ ಹಿರಿಯರು, ಪಕ್ಕದ ಊರಿನವರು, ಸಾಮಾನ್ಯ ಜನರು, ಹೀಗೆ ಎಲ್ಲಾ ವರ್ಗದ ಜನರು ಅಲ್ಲಿ ಸೇರಿರುತ್ತಾರೆ. ಈ ಸಂದರ್ಭದಲ್ಲಿ ಧರ್ಮಯ್ಯ ಅವನ ಮಗನಾದ ಹರಿಯೊಂದಿಗೆ ಈ ಕಾರ್ಯವನ್ನು ನೋಡಲು ಬಂದಿರುತ್ತಾನೆ. ಧರ್ಮಯ್ಯನು 'ಗೆಜ್ಜೆ' ಕಟ್ಟಿದ ಮೇಲೆ ಅವಳಿಗೆ ನಿಗದಿತ ಬೆಲೆ ಕಟ್ಟಿ ತಾನೇ ಕೊಂಡೊಯ್ಯಬೇಕೆಂದು ಬಂದಿರುತ್ತಾನೆ. ದೇವಸ್ಥಾನದ ಪೂಜಾರಿ ಗೆಜ್ಜೆ ಕಟ್ಟಿಸಿಕೊಳ್ಳಬೇಕಾದ ಕಲ್ಪಿಗೆ ಶಾಸ್ತ್ರವಾಗಿ ನೀರು ಮುಟ್ಟಿ ಬಾ ಎಂದು ಹೇಳುತ್ತಾನೆ. ಅವಳು ನೀರು ಮುಟ್ಟಿಬರಲು ಹೋಗುತ್ತಾಳೆ. ಅಲ್ಲಿಂದ ಬಂದ ಮೇಲೆ ಪೂಜಾರಿಯೇ ತಾಳಿಯನ್ನು ಕಟ್ಟುವುದರ ಮೂಲಕ ಅವಳನ್ನು ದೇವದಾಸಿಯನ್ನಾಗಿ ಮಾಡುವುದಿತ್ತು. ಇದು ಕಥೆಯಲ್ಲಿ ನಡೆಯಬೇಕಾದ ಅಂಶವಾಗಿರುತ್ತದೆ. ಆದರೆ ಕಥೆಯಲ್ಲೊಂದು ತಿರುವು ಬರುತ್ತದೆ. ಕಲ್ಪಿ ನೀರು ಮುಟ್ಟಿ ದೇವಸ್ಥಾನದ ಬಾಗಿಲ ಮುಂದೆ ನಿಂತುಕೊಳ್ಳುತ್ತಾಳೆ. ದೇವಸ್ಥಾನದ ಪೂಜಾರಿಯು ತಾಳಿ (ಅರಿಶಿಣದ ಕೊಂಬ)ನ್ನು ಕಟ್ಟಲು ತಯಾರಿ ಮಾಡಿಕೊಂಡಿರುತ್ತಾನೆ. ಇನ್ನೇನು ತಾಳಿಕಟ್ಟಿ, ಗೆಜ್ಜೆ ಕೊಡಬೇಕು ಅಷ್ಟರಲ್ಲಿಯೇ ದೀಪಗಳೆಲ್ಲ ಆರಿ ಹೋಗುತ್ತವೆ. ಮತ್ತೆ ದೀಪ ಹತ್ತಿದಾಗ ಪೂಜಾರಿಯ ತಟ್ಟೆಯಲ್ಲಿ ಇದ್ದ ಅರಿಶಿಣದ ಕೊಂಬು ಕಲ್ಪಿಯ ಕೊರಳಲ್ಲಿರುತ್ತದೆ. ಇದನ್ನು ಎಲ್ಲರೂ ಗಾಬರಿಯಾಗಿ, ಆಶ್ಚರ್ಯದಿಂದ ನೋಡುತ್ತಾರೆ. ಇದು ಕಥೆಯಲ್ಲಿ ಒಂದು ಹೊಸ ತಿರುವನ್ನು ತಂದೊಡ್ಡುತ್ತದೆ.

ಕಥೆಯಲ್ಲಿ ಬರುವ ಈ ಅನಿರೀಕ್ಷಿತ ತಿರುವಿನಿಂದಾಗಿ ನೆರೆದಿದ್ದ ಎಲ್ಲರಿಗೂ ಕ್ಷಣಕಾಲ ಬೆಚ್ಚಿ ಬೀಳುವಂತೆ ಆಗುತ್ತದೆ. ದೀಪ ಆರಿದ ನಂತರ ನಡೆದ ಈ ಘಟನೆಯು ಯಾವುದೋ ಅಶುಭದ ಸಂಕೇತವಾಗಿದೆ. ಮುಂದೆ ಏನು ಗಂಡಾಂತರ ಕಾದಿದೆಯೋ? ಎಂದು ತಮ್ಮ ತಮ್ಮಲ್ಲೇ ತಮಗೆ ತಿಳಿದಂತೆ ಮಾತನಾಡ ತೊಡಗುತ್ತಾರೆ. ಇತ್ತ ಧರ್ಮಯ್ಯ ಮತ್ತು ಪಕ್ಕದ ಊರಿನ ಸಾಹುಕಾರನಿಗೆ ಸಂಕಟ ಶುರುವಾಗುತ್ತದೆ. ಶಾಸ್ತ್ರೋಕ್ತವಾಗಿ ದೇವದಾಸಿಯನ್ನಾಗಿ ಮಾಡಿ ತಾವು ದುಡ್ಡುಕೊಟ್ಟು ತೆಗೆದುಕೊಂಡು ಹೋಗಬೇಕಿದ್ದ ಬಾಲೆಗೆ ಯಾರೋ ತಾಳಿ ಕಟ್ಟಿಬಿಟ್ಟಿದ್ದಾರೆ. ಯಾರಿಂದ ಈ ಕೃತ್ಯ ನಡೆದಿದೆ? ದೇವರ ಪೂಜೆಯಲ್ಲಿ ಭಂಗ ತಂದವರ್ಯಾರು?

ಎಂದು ಕೂಗಾಡುತ್ತಾರೆ. ದೇವಸ್ಥಾನದ ಪೂಜಾರಿಗೂ ಕ್ಷಣಕಾಲ ಬೆಚ್ಚಿಬೀಳುವ ಪರಿಸ್ಥಿತಿ, ಏನೋ ನಡೆಯಬಾರದು ನಡೆದು ಹೋಯಿತು. ಎಂದು ಅಸಮಧಾನ ವ್ಯಕ್ತಪಡಿಸುತ್ತಾನೆ. ಕಟ್ಟಿದ ತಾಳಿಯನ್ನು ಬಿಚ್ಚುವಂತಿಲ್ಲ. ಹಾಗಾಗಿ ಅವಳ ಬದಲಿಗೆ ಇನ್ನೊಬ್ಬರನ್ನು ಈ ಪದ್ಧತಿಗೆ ಒಳಗಾಗಿಸಬೇಕು ಎಂದು ಹೇಳುತ್ತಾನೆ. ಪೂಜಾರಿಯ ಈ ಮಾತು ಕೆಲವರಿಗೆ ಅಸಮಾಧಾನ ತರುತ್ತದೆ ಮತ್ತೆ ಕೆಲವರಿಗೆ ಸಮಾಧಾನ ತರುತ್ತದೆ. ಮತ್ತೆ ಕೆಲವರು ನಮ್ಮ ಊರಿಗೆ ಯಾವುದೇ ಗಂಡಾಂತರವಾಗದಂತೆ ಕಾಪಾಡಿದರೆ ಸಾಕು ಎಂದು ತಮ್ಮಲ್ಲಿಯೇ ಮಾತಾಡಿ ಕೊಳ್ಳುತ್ತಿರುತ್ತಾಳೆ. ಬಂದೊದಗಿದ ಈ ಸಮಸ್ಯೆಗೆ ಪರಿಹಾರವೇನೋ ಸಿಕ್ಕಿತು ಆದರೆ ಈಗ ಎಲ್ಲರ ಮನದಲ್ಲಿಯೂ ಕಾಡಿದ ಪ್ರಶ್ನೆಯೆಂದರೆ ತಾಳಿ ಕಟ್ಟಿದವರು ಯಾರು?

ಬಹಳ ಸಮಯದವರೆಗೂ ಉತ್ತರ ಸಿಗುವುದಿಲ್ಲ, ನೆರೆದಿದ್ದ ಎಲ್ಲರಿಗೂ ಕೇಳಲಾಗುತ್ತದೆ ಆದರೆ ಯಾರು ಕೂಡಾ ಮುಂದೆ ಬರುವುದಿಲ್ಲ. ಕೇಲ ಹೊತ್ತಿನ ನಂತರ ಧರ್ಮಯ್ಯನ ಎರಡನೆಯ ಮಗ ಹರಿಯು ಕಲ್ಪನಾಳ ಕೊರಳಿಗೆ ತಾಳಿಯನ್ನು ಕಟ್ಟಿದ್ದಾನೆಂದು ಗೊತ್ತಾಗುತ್ತದೆ. ಹರಿ ಒಬ್ಬ ಮಾನಸಿಕ ಅಸ್ವಸ್ಥ, ವಯಸ್ಸು, ದೇಹ ಬೆಳೆದಿದ್ದರೂ ಬುದ್ಧಿ ಬೆಳೆದಿರುವುದಿಲ್ಲ. ಹುಡುಗಾಟ ಮಾಡಿಕೊಂಡು ಇದ್ದ ಇವನು ಹುಡುಗಾಟದಲ್ಲೇ ಕಲ್ಪನಾಳಿಗೆ ತಾಳಿ ಕಟ್ಟಿರುತ್ತಾನೆ. ಈಗ ಕಲ್ಪನಾ ಒಬ್ಬ ದೇವದಾಸಿ ಅಲ್ಲ ಅವಳಿಗ ಹರಿಯ ಹೆಂಡತಿ, ಊರಿನವರ ಎದುರೇ ಹರಿ (ಕತ್ತಲೆಯಲ್ಲಿಯೇ ಇರಬಹುದು) ತಾಳಿ ಕಟ್ಟಿರುತ್ತಾನೆ. ಅವಳೀಗ ಧರ್ಮಯ್ಯನ ಸೊಸೆ, ಯಾರ ಕೆಟ್ಟ ದೃಷ್ಟಿಯು ಅವಳ ಮೇಲೆ ಬೀಳುವಂತಿಲ್ಲ. ಹರಿ ಕಲ್ಪನಾಳಿಗೆ ಮಾಂಗಲ್ಯಧಾರಣೆ ಮಾಡಿದ ಮೇಲೆ ಅಲ್ಲಿ ನಡೆಯಬೇಕಿದ್ದ ಕಾರ್ಯ ಸ್ಥಗಿತಗೊಳ್ಳುತ್ತದೆ. ಊರವರೆಲ್ಲ ಅಲ್ಲಿ ನಡೆದುಹೋದ ಆಚಾತುರ್ಯವನ್ನು ಮಾತಾಡಿಕೊಳ್ಳುತ್ತಾ ತಮ್ಮ ತಮ್ಮ ಮನೆಗೆ ಹೊರಡುತ್ತಾರೆ. ಕಲ್ಪಿಯ ತಾಯಿ ಯಮುನವ್ವ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಿದೆಯೇನೋ ಎಂಬಂತೆ ತಲೆ ಮೇಲೆ ಕೈ ಹೊತ್ತು ಕುಳಿತಿರುತ್ತಾಳೆ. ತಮ್ಮ ಮಗಳು ದೇವದಾಸಿ ಆಗಿದ್ದರೆ ಯಾರಾದರು ಶ್ರೀಮಂತರು ತಮಗೆ ಒಳ್ಳೆಯ ಬೆಲೆಯನ್ನು ಕೊಡುತ್ತಿದ್ದರು. ಈ ಮೂಲಕ ತಮಗೆ ಹಣ ದೊರೆಯುತ್ತಿತ್ತು. ಈಗ ಅದು ತಪ್ಪಿ ಹೋಯಿತಲ್ಲಾ ಎಂದು ಚಿಂತಿಸುತ್ತಿರುತ್ತಾಳೆ. ಇತ್ತ ಧರ್ಮಯ್ಯ ತನ್ನ ಮಗನಿಗೆ ಕರೆದುಕೊಂಡು ಮನೆ ಕಡೆ ಹೊರಡುತ್ತಾನೆ. ಇತ್ತ ಕಲ್ಪಿಗೆ ಏನಾಗಬೇಕಿತ್ತು? ಏನಾಯ್ತು? ಯಾಕೆ ಎಲ್ಲರೂ ಹೀಗೆ ಆಡುತ್ತಿದ್ದಾರೆ? ತನ್ನಿಂದ ಯಾವ ತಪ್ಪು ನಡೆದುಹೋಯ್ತು? ಎಂದು ತಾಯಿ, ಅಕ್ಕನಿಗೆ ಕೇಳುತ್ತಾ ದುಃಖ ಪಡುತ್ತಾಳೆ. ಮಗಳ ಪ್ರಶ್ನೆಗೆ ಉತ್ತರಿಸಲು ಆಗದಂತಹ ಪರಿಸ್ಥಿತಿಯಲ್ಲಿ ಯಮುನೆ ಇರುತ್ತಾಳೆ. ಆದರೆ ಮಂಜಿಯ ಮುಖದಲ್ಲಿ ಮಾತ್ರ ಒಂದು ಮಂದಹಾಸದ ಛಾಯೆ ಎದ್ದು ಕಾಣುತ್ತದೆ. ಅದನ್ನು ಹೆಚ್ಚು ಪ್ರದರ್ಶಿಸದೇ ಅವಳಿಗೂ ಈ ಘಟನೆಯಿಂದ ದುಃಖವಾಗಿರುವಂತೆ ನಟನೆ ಮಾಡುತ್ತಾಳೆ.

ಮಂಜಿ ಒಬ್ಬ ಧೈರ್ಯವಂತೆ, ಸಾಹಸಿ. ತನಗೆ ಯಾರೇ ಏನೇ ಅಂದರು ಅವರನ್ನು ತರಾಟೆಗೆ ತೆಗೆದುಕೊಂಡು ಅವರಿಗೆ ತಕ್ಕ ಶಾಸ್ತಿ ಮಾಡುವವರೆಗೂ ಬಿಡುವವಳಲ್ಲ. ತನ್ನನ್ನು ಎದುರು ಹಾಕಿ ಕೊಂಡವರಿಗೆ ಸುಮ್ಮನೇ ಬಿಡುವಂತಹ ಜಾಯಮಾನ ಅವಳದಾಗಿರುವುದಿಲ್ಲ.

ಇದರಿಂದಾಗಿ ಮಂಜಿಯನ್ನು ಊರವರೆಲ್ಲಾ ಜಗಳಗಂಟಿ ಮಂಜಿ ಎಂಬ ಹೆಸರಿನಿಂದ ಕರೆಯುತ್ತಿರುತ್ತಾರೆ. ತನ್ನ ತಂಗಿಯನ್ನು ದೇವದಾಸಿಯನ್ನಾಗಿ ಮಾಡಲು ತಾಯಿ ಮುಂದಾದಾಗ ಬಲವಾಗಿ ವಿರೋಧಿಸುವ ಎದೆಗಾರಿಕೆ ಅವಳು ತೋರಿಸುತ್ತಾಳೆ. ತನ್ನ ತಂಗಿ ಈ ಕರಾಳ ಬದುಕಿಗೆ ಒಳಗಾಗುವುದನ್ನು ತಪ್ಪಿಸಬೇಕೆಂದು ಮನದಲ್ಲೇ ಲೆಕ್ಕಾಚಾರ ಹಾಕಿರುತ್ತಾಳೆ. ಮುಂದೆ ಕಥೆಯಲ್ಲಿ ಬರುವ ತಿರುವಿಗೆ ಈ ಮಂಜಿ ಕಾರಣಳಾಗುತ್ತಾಳೆ. ತನ್ನ ತಂಗಿಗೆ ಹರಿಯಿಂದ ತಾಳಿ ಕಟ್ಟಿಸಲು ಸಹಾಯವಾಗಲು ದೀಪವನ್ನು ಆರಿಸಿರುತ್ತಾಳೆ. ಕತ್ತಲೆಯಲ್ಲಿ ಕಲ್ಪಿಗೆ ತಾಳಿ ಕಟ್ಟುವಂತೆ ಹರಿಗೆ ಹೇಳಿರುತ್ತಾಳೆ. ಮಂಜಿಯ ಮಾತಿನಂತೆ ಹರಿ ಕಲ್ಪಿಯ ಕತ್ತಲ್ಲಿ ತಾಳಿ ಕಟ್ಟಿರುತ್ತಾನೆ. ಹೀಗೆ ಮಂಜಿ ತಾನು ಅಂದು ಕೊಂಡಿರುವ ಯೋಜನೆಯನ್ನು ಯಾವುದೇ ಹೆದರಿಕೆಯಿಲ್ಲದೇ ಮಾಡಿ ಮುಗಿಸುತ್ತಾಳೆ. ತನ್ನ ತಂಗಿಗೆ ಒಂದು ಗಂಡು ಸಿಗುವಂತೆ ಮಾಡುತ್ತಾಳೆ. ತನ್ನಂತೆ ತನ್ನ ತಂಗಿಯ ಬಾಳು ಹಾಳಾಗದೇ ಹೋದರೆ ಸಾಕೆಂಬ ಬಯಕೆ ಅವಳದಾಗಿರುತ್ತದೆ. ಮಂಜಿ ತನ್ನ ತಂಗಿ ಕಲ್ಪಿ ಮತ್ತು ಹರಿಗೆ ಮಾತನಾಡಿಕೊಳ್ಳಲು ಸಹಾಯ ಮಾಡುತ್ತಾಳೆ. ಅವಳು ದೇವಸ್ಥಾನದಲ್ಲಿ ಎಲ್ಲರೂ ಮನೆಗೆ ಹೊರಡುವ ಸಮಯದಲ್ಲಿ ಕಲ್ಪಿಯನ್ನು ನೆರೆದಿದ್ದ ಜನಸಮೂಹದಿಂದ ಕರೆದುಕೊಂಡು ಬಂದು, ಯಾರು ಇಲ್ಲದ ಸ್ಥಳದಲ್ಲಿ ಹರಿಯ ಜೊತೆ ಮಾತನಾಡಲು ಬಿಡುತ್ತಾಳೆ. ಹರಿಗೆ ತನ್ನ ಹೆಂಡತಿಯನ್ನು ನೋಡಿ ಸಂತೋಷವಾಗುತ್ತದೆ. ತನ್ನ ಹೆಂಡತಿ ತನ್ನೊಂದಿಗೆ ಬರಬೇಕು ತಾನು ಎಲ್ಲಿ ಇರುತ್ತೇನೋ ಅಲ್ಲಿ ಅವಳಿರಬೇಕು ಎಂದು ಹಂಬಲಿಸುತ್ತಾನೆ. ಇದೇ ಸಮಯಕ್ಕೆ ಹರಿಯ ತಂದೆ ಧರ್ಮಯ್ಯ ಬಂದು ಕಲ್ಪಿಯೊಂದಿಗೆ ಮಾತನಾಡುವುದನ್ನು ನೋಡಿ, ಹರಿಯನ್ನು ಬಲವಂತವಾಗಿ ಕರೆದುಕೊಂಡು ಹೋಗುತ್ತಾನೆ. ಆದರೆ ಹರಿ ಕಲ್ಪಿಯನ್ನು ಬಿಟ್ಟು ಹೋಗಲು ಸಿದ್ಧನಿರುವುದಿಲ್ಲ. ಅವಳನ್ನು ನಮ್ಮ ಜೊತೆ ಕರೆದುಕೊಂಡು ಹೋಗಬೇಕೆಂದು ಹಠ ಮಾಡುತ್ತಾನೆ. ಆದರೆ ಧರ್ಮಯ್ಯ ಮಾತ್ರ ಅದು ಸಾಧ್ಯವಿಲ್ಲ. ಎಂಬಂತೆ ಅವನನ್ನು ಎಳೆದುಕೊಂಡು ಹೋಗುತ್ತಾನೆ. ಕಲ್ಪಿಯನ್ನು ಮಂಜಿ ಮನೆಗೆ ಕರೆದುಕೊಂಡು ಬರುತ್ತಾಳೆ. ತಾಯಿ ಮುಂದೇನು ಮಾಡಬೇಕು ಎಂದು ತಲೆಯ ಮೇಲೆ ಕೈಹೊತ್ತು ಕುಳಿತಿರುತ್ತಾಳೆ. ಆಗ ಮಂಜಿ ತಾಯಿಯನ್ನು ಉದ್ದೇಶಿಸಿ "ಆಗಿದ್ದಾಗೋಯ್ತು ಈಗ ಆಗಿದ್ದರ ಬಗ್ಗೆ ಚಿಂತೆ ಮಾಡುವ ಬದಲು ಮುಂದೆ ಏನು ಮಾಡಬೇಕು ಎಂಬುದನ್ನು ಯೋಚ್ನೆ ಮಾಡು" ಎಂದು ಹೇಳುತ್ತಾಳೆ. ಇದನ್ನು ಕೇಳುವ ತಾಯಿ ಮಂಜಿಯ ಮೇಲೆ ಕೋಪಗೊಳ್ಳುತ್ತಾಳೆ. ನಿನಗೆ ಕಲ್ಪಿ ಮದುವೆಯಾಗುವುದು ಇಷ್ಟವಿರಲಿಲ್ಲ. ಈಗ ಅದರಂತೆ ನಡೆದು ಹೋಯ್ತು ಈಗ ನಿನಗೆ ಸಂತೋಷವಾಯ್ತಾ ಎಂದು ಕೇಳುತ್ತಾಳೆ. ಅದಕ್ಕೆ ಮಂಜಿ ಕಲ್ಪಿಯನ್ನು ಆಕೆಯ ಗಂಡನ ಮನೆಗೆ ಬಿಟ್ಟು ಬಂದಾಗ ಮಾತ್ರ ಸಂತೋಷವಾಗುತ್ತದೆ ಎಂದು ಹೇಳಿ ಹೊರನಡೆಯುತ್ತಾಳೆ. ಮಂಜಿ ತನ್ನ ತಂಗಿಯನ್ನು ಹರಿಯ ಮನೆಗೆ ಹೋಗಲು ತಯಾರಾಗುವಂತೆ ಹೇಳುತ್ತಾಳೆ. ಇತ್ತ ಅಕ್ಕ ಅತ್ತ ತಾಯಿಯ ಮಧ್ಯೆ ಕಲ್ಪಿ ಬಡವಳಾಗುತ್ತಾಳೆ. ಕಥೆಯು ಮುಂದಿನ ಭಾಗದಲ್ಲಿ ಹರಿಯ ಮನೆಯ ಚಿತ್ರಣವನ್ನು ತೋರಿಸಲಾಗಿದೆ.

ದೇವಸ್ಥಾನದಿಂದ ಮನೆಗೆ ಬಂದ ಧರ್ಮಯ್ಯ ತಾನು ಬಯಸಿ ಬಯಸಿ ಹೋದಲ್ಲಿ ನಡೆಯಬಾರದ್ದು ನಡೆದುಹೋಯ್ತು ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂದು ಹರಿಯ ಮೇಲೆ ಕೂಗಾಡುತ್ತಾನೆ. ಯಾಕಾದರೂ ಇವನನ್ನು ಕರೆದುಕೊಂಡು ಹೋದೆನು? ಎಂದು ತನ್ನ ಮೇಲೆಯೇ ಕೋಪಗೊಳ್ಳುತ್ತಾನೆ. ಮನೆಯಲ್ಲಿ ನಡೆಯುತ್ತಿದ್ದ ಕೂಗಾಟವನ್ನು ಕೇಳಿ ಧರ್ಮಯ್ಯನ ಹೆಂಡತಿ ಏನಾಗಿದೆ? ಯಾಕೆ ಹೀಗೆ ಕೂಗಾಡುತ್ತಿದ್ದೀರಿ? ಎಂದು ಪ್ರಶ್ನೆ ಮಾಡುತ್ತಾಳೆ. ಅದಕ್ಕೆ ಧರ್ಮಯ್ಯ ನಡೆದ ವಿಷಯವನ್ನೆಲ್ಲ ಹೆಂಡತಿಗೆ ಹೇಳುತ್ತಾನೆ. ಹರಿ ಒಬ್ಬ ದೇವದಾಸಿಯಾಗಬೇಕಾದ ಹುಡುಗಿಗೆ ತಾಳಿಕಟ್ಟಿದ ಸುದ್ದಿ ಕೇಳಿದ ತಕ್ಷಣ ತನ್ನ ಮಗನಿಂದ ಇಂಥಹ ಒಂದು ತಪ್ಪು ನಡೆದುಹೋಯಿತೆ ಎಂದು ದುಃಖ ಪಡುತ್ತಾಳೆ. ಧರ್ಮಯ್ಯನಿಗಿರುವ ಈ ಚಟದಿಂದಾಗಿ ತಮ್ಮ ಮಗ ಇವತ್ತು ಇಂತಹ ಒಂದು ತಪ್ಪು ಮಾಡಿದ್ದಾನೆ. ಅಂದರೆ ಅದಕ್ಕೆ ನೇರವಾಗಿ ನೀವೇ ಕಾರಣರು. ನಿಮ್ಮ ಹಾಳಾದ ಈ ಚಟವೇ ಕಾರಣವೆಂದು ಕೂಗಾಡುತ್ತಾಳೆ. ಕ್ಷಣಕಾಲ ಮುಂದೆ ಏನು ಮಾಡಬೇಕೆಂದು ತೋಚದಂತೆ ತಲೆಮೇಲೆ ಕೈಹೊತ್ತು ಕುಳಿತಿರುತ್ತಾಳೆ. ಅವಳ ತಳಮಳಕ್ಕೆ ತಾಳಿಕಟ್ಟಿರುವುದು ಚಿಂತೆಗೆ ಕಾರಣವಾಗಿರುವುದಿಲ್ಲ. ಅಲ್ಲಿ ಒಬ್ಬ ತಳಸಮುದಾಯದ ಹೆಣ್ಣು ನಮ್ಮ ಮನೆಯ ಸೊಸೆಯಾಗಬೇಕೆ? ಹೀಗಾದರೆ ಸಮಾಜದಲ್ಲಿ ನಾವು ಹೇಗೆ ತಲೆ ಎತ್ತಿಕೊಂಡು ಓಡಾಡಬೇಕು? ಹರಿಯ ಈ ಒಂದು ತಪ್ಪು ಕೆಲಸದಿಂದ ಎಷ್ಟೆಲ್ಲ ಸಮಸ್ಯೆಗಳು ಎದುರಾಗುತ್ತವೆ. ಮುಂದೇ ಹೇಗಾಗುತ್ತದೆಯೋ ಎಂಬ ಚಿಂತೆ ಕಾಡುತ್ತಿರುತ್ತದೆ. ಇತ್ತ ಮಂಜಿ ತನ್ನ ತಂಗಿಯನ್ನು ಹರಿಯ ಮನೆಗೆ ಕಳಿಸಬೇಕೆಂದು ನಿರ್ಧಾರ ಮಾಡುತ್ತಾಳೆ. ತನ್ನ ತಾಯಿಗೆ ತಿಳಿಯದ ಹಾಗೆ ಕದ್ದು ಮುಚ್ಚಿ ಅವಳನ್ನು ಊರ ಹೊರಗೆ ಕರೆದುಕೊಂಡು ಬರುತ್ತಾಳೆ. ಹರಿ ಮತ್ತು ಕಲ್ಪಿ ಇಬ್ಬರನ್ನು ಜೊತೆ ಮಾಡಿ ಚಂದ್ರಗಿರಿಯಿಂದ ಉಪಾಯವಾಗಿ ಯಾರಿಗೂ ಕಾಣಿಸದಂತೆ ಕಳಿಸಿಬಿಡುತ್ತಾಳೆ. ಕಳಿಸಿದ ಮೇಲೆ ಮನೆಗೆ ಬಂದು ಏನೂ ನಡದೇ ಇಲ್ಲವೆಂಬಂತೆ ಇದ್ದು ಬಿಡುತ್ತಾಳೆ. ಹರಿ ಕಲ್ಪಿಯನ್ನು ಕರೆದುಕೊಂಡು ತನ್ನ ಮನೆಗೆ ಬರುತ್ತಾನೆ. ಕಥೆಯು ಧರ್ಮಯ್ಯನ ಮನೆಗೆ ಸ್ಥಳಾಂತರಗೊಳ್ಳುತ್ತದೆ.

ಹರಿ ತನ್ನ ಮನೆಗೆ ಕಲ್ಪಿಯನ್ನು ಕರೆದುಕೊಂಡು ಬಂದಾಗ ಕತ್ತಲಾಗಿರುತ್ತದೆ. ತನ್ನ ಹೆಂಡತಿಯನ್ನು ಮನೆಯಲ್ಲಿ ಯಾರು ನೋಡದಂತೆ ಉಪಾಯವಾಗಿ ಕರೆದುಕೊಂಡು ಹೋಗಿ ತನ್ನ ಅತ್ತಿಗೆಯಿರುವ ಕೋಣೆಯಲ್ಲಿ ಬಿಟ್ಟು ಬರುತ್ತಾನೆ. ತನ್ನ ಅತ್ತಿಗೆಯನ್ನು ಅವಳಿಗೆ ಯಾರಿಂದಲೂ, ಯಾವುದೇ ರೀತಿಯಿಂದಲೂ ತೊಂದರೆಯಾಗದಂತೆ ನೋಡಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಹರಿಯ ಅತ್ತಿಗೆ ಕಲ್ಪನಾಳನ್ನು ಮೊದ ಮೊದಲು ಮಾತನಾಡಿಸುವ ಗೋಜಿಗೆ ಹೋಗುವುದಿಲ್ಲ, ತನ್ನ ಪಾಡಿಗೆ ತಾನು ಇದ್ದು ಬಿಡುತ್ತಾಳೆ. ಒಂದೇ ಕೋಣೆಯಲ್ಲಿ ಎರಡು ಜೀವಂತ ದೇಹಗಳು ಕಾಲ ಕಳೆಯುವಂತೆ, ಕಾಲ ಕಳೆಯುತ್ತಿರುತ್ತಾರೆ. ಹೊರಗಿನ ಪ್ರಪಂಚದಲ್ಲಿ ಆಟವಾಡಿಕೊಂಡು ಸ್ವಚ್ಛಂದವಾಗಿ ಬೆಳೆದಿರುವಂತಹ ಕಲ್ಪಿಗೆ ಈ ಮನೆಯಲ್ಲಿ ಮಾತಿಲ್ಲದೇ, ಬದುಕುವುದೆಂದರೆ ಸೆರೆಮನೆಯಲ್ಲಿ ಬಂಧಿಯಾಗಿರುವಂತಹ ಅನುಭವವಾಗುತ್ತಿರುತ್ತದೆ.

ಆವಾಗ ಆವಾಗ ಬರುವ ಹರಿಯಿಂದಾಗಿ ಸ್ವಲ್ಪ ಸಂತಸವಾಗುತ್ತದೆ. ಆದರೆ ತನ್ನೊಂದಿಗೆ ಹಗಲು, ರಾತ್ರಿಯಿರುವ ಚಿತ್ರಕ್ಕನ ಮೌನ ಅವಳಲ್ಲಿ ಒಂದು ರೀತಿಯಾದ ಅಸಹಾಕತೆಯನ್ನು ತಂದೊಡ್ಡಿರುತ್ತದೆ. ಕಲ್ಪಿ ನಿಧಾನವಾಗಿ ಹರಿಯ ಅತ್ತಿಗೆ ಚಿತ್ರಳೊಂದಿಗೆ ಸಣ್ಣ ಧ್ವನಿಯಲ್ಲಿ ಮಾತನಾಡಲು ಪ್ರಾರಂಭಿಸುತ್ತಾಳೆ.

ಮೊದಮೊದಲು ಮಾತನಾಡಲು ಇಷ್ಟಪಡದ ಚಿತ್ರ ದಿನ ಕಳೆದಂತೆ ಕಲ್ಪಿ ಜೊತೆ ಬೆರೆಯಲು ಅವಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ. ತಮ್ಮ ತಮ್ಮ ಬಗ್ಗೆ ಹೇಳಿಕೊಳ್ಳುತ್ತಾ, ಅವರ ಕಷ್ಟ, ಸುಖಗಳನ್ನೂ ಮಾತಾಡಿಕೊಂಡು ಹೋಗುತ್ತಾರೆ, ಈ ಮೂಲಕ ಧರ್ಮಯ್ಯನ ಸೊಸೆಯಂದಿರು ಒಳ್ಳೆಯ ಅಕ್ಕ ತಂಗಿಯರಾಗುತ್ತಾರೆ. ಇತ್ತ ದೇವದಾಸಿ ಪದ್ಧತಿಯು ಅರ್ಧಕ್ಕೆ ನಿಂತುಹೋಗಿದ್ದಕ್ಕೆ ಅಕ್ಕಪಕ್ಕದ ಊರಿನ ಸಾಹುಕಾರರು ಪೂಜಾರಿಯ ಮೇಲೆ ಒತ್ತಡ ತರುತ್ತಾರೆ. ಈ ಸಮಸ್ಯೆಗೆ ಪರಿಹಾರ ಹೇಳಬೇಕೆಂದು ಒತ್ತಡ ಹೇರುತ್ತಾರೆ. ಈ ಸಮಯದಲ್ಲಿ ಏನು ಅರಿಯದಂತಹ ಪರಿಸ್ಥಿತಿಯಲ್ಲಿ ಪೂಜಾರಿಯಿದ್ದಾಗ. ಚಂದ್ರಗಿರಿಯ ಅಕ್ಕಪಕ್ಕದ ಊರವರು ಇದಕ್ಕೆ ಪರಿಹಾರವೆಂಬಂತೆ ಯಾರಿಂದ ಈ ಕಾರ್ಯಕ್ಕೆ ಭಂಗ ಬಂದಿದೆಯೋ ಅವರಿಂದಲೇ ಈ ಕಾರ್ಯ ಪೂರ್ಣಗೊಳ್ಳಬೇಕು ಎಂದು ಹೇಳುತ್ತಾರೆ. ಅಂದರೆ ಧರ್ಮಯ್ಯನ ಮಗ ಹರಿಯಿಂದ ಈ ಕಾರ್ಯ ನಿಂತಿರುವುದರಿಂದ, ಧರ್ಮಯ್ಯನ ಮನೆಯಿಂದಲೇ ಮದುವೆಯಾಗದ ಕನ್ಯೆಯೊಬ್ಬಳನ್ನು ತರಬೇಕೆಂದು, ಅವಳಿಗೆ ಮುತ್ತು ಕಟ್ಟಿ ದೇವತಾ ಕಾರ್ಯವನ್ನು ಮುಂದುವರೆಸಬೇಕೆಂದು ಹೇಳುತ್ತಾರೆ. ಅದರಂತೆ ಧರ್ಮಯ್ಯನ ಮಗಳು ಅಮಿತಾಳನ್ನು ಈ ಕಾರ್ಯಕ್ಕೆ ಬಿಡಬೇಕೆಂದು ಒತ್ತಾಯ ಹೇರಲಾಗುತ್ತದೆ. ಇತ್ತ ಧರ್ಮಯ್ಯನಿಗೆ ತನ್ನ ಮಗಳಿಗೆ ದೇವದಾಸಿಯನ್ನಾಗಿ ಮಾಡುವ ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿದ ತಕ್ಷಣ ಭೂಮಿಯೇ ಬಾಯಿ ತೆರೆದಂತಹ ಅನುಭವವಾಗುತ್ತದೆ. ಧರ್ಮಯ್ಯನಿಗೆ ತನ್ನ ಗತಕಾಲದ ನೆನಪುಗಳು ಒಂದು ಕ್ಷಣಕ್ಕೆ ಎದುರಾಗುತ್ತವೆ. ದೇವದಾಸಿ ಪದ್ಧತಿಗೆ ಒಂದು ಹೆಣ್ಣು ಒಳಗಾಗುತ್ತಿದ್ದಾಳೆ ಎಂದು ತಿಳಿದುಬಂದರೆ ಅಲ್ಲಿ ಹೋಗಿ ಹುಡುಗಿಗೆ ಹೆಚ್ಚಿನ ಬೆಲೆಕಟ್ಟಿ ಕರೆದುಕೊಂಡು ಬರುವಾಗ ತಾನು ಎಷ್ಟೊಂದು ಸಂತೋಷಪಡುತ್ತಿದ್ದೆ. ತನ್ನ ಪುರುಷ ಅಹಂಕಾರಕ್ಕೆ ಇನ್ನೊಂದು ಗರಿಯನ್ನು ಏರಿಸಿಕೊಂಡು ಮೆರೆದಾಡುತ್ತಿದ್ದೆ. ಆದರೆ ಇಂದು ತನ್ನೊಳಗೆ ಏನೊ ಒಂದು ಅಸಮಾಧಾನ, ಅಸಹನೆ, ದ್ವೇಷ, ತಳಮಳ, ಹುಟ್ಟಿಕೊಂಡಿವೆ. ನನ್ನ ಮಗಳಿಗೆ ಮುತ್ತುಕಟ್ಟುವ ಸಂಪ್ರದಾಯಕ್ಕೆ ಬಲಿಕೊಡುತ್ತಿದ್ದಾರಲ್ಲಾ. ತನ್ನ ಪಾಪದ ಪ್ರಾಯಶ್ಚಿತವಾಗಿ ಮಗಳಿಗೆ ಶಿಕ್ಷೆಯಾಗುತ್ತಿದೆಯಲ್ಲಾ ಎಂದು ಕೊರಗುತ್ತಾನೆ. ನನ್ನ ಮಗಳಿಗೆ ಹೇಗಾದರೂ ಮಾಡಿ ಈ ಅನಿಷ್ಟ ಪದ್ಧತಿಯಿಂದ ದೂರ ಇಡಬೇಕೆಂದು ಯೋಜನೆ ಹಾಕುತ್ತಾನೆ. ಮಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾನೆ. ಆದರೆ, ಅಮಿತಾಳನ್ನು ದೇವದಾಸಿ ಯನ್ನಾಗಿ ಮಾಡಲೇಬೇಕೆಂಬ ಉದ್ದೇಶದಿಂದ ಖಳನಾಯಕನ ಕಡೆಯವರು ರಾತ್ರಿ ಹೊತ್ತು ಬಂದು ಅವಳನ್ನು ಅಪಹರಿಸಿಕೊಂಡು ಹೋಗುತ್ತಾರೆ. ಮುಂದೆ ಅಮಿತಾಳನ್ನು ದೇವದಾಸಿ ಯನ್ನಾಗಿ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ.

ಅಮಿತಾಳನ್ನು ಬಲವಂತವಾಗಿ ಅಪಹರಿಸಿಕೊಂಡು ಬರಲಾಗುತ್ತದೆ. ರಾತ್ರಿಯ ಕತ್ತಲೆಯಲ್ಲಿಯೇ ದೇವದಾಸಿ ಮಹಿಳೆಯರಿಂದ ಅಮಿತಾಳಿಗೆ ಅರಿಶಿನ, ಕುಂಕುಮ ಹಚ್ಚಲಾಗುತ್ತದೆ. ಕೈಗೆ ಬಳೆಗಳನ್ನು ಹಾಕಿ ಮದುಮಗಳಂತೆ ಶೃಂಗರಿಸಲಾಗುತ್ತದೆ. ಇದನ್ನೆಲ್ಲ ನಿರೀಕ್ಷಿಸಿರದ ಅಮಿತಾ ತನ್ನೊಂದಿಗೆ ಏನಾಗುತ್ತಿದೆ ಎಂದು ಅರಿಯದಂತಹ ಪರಿಸ್ಥಿತಿಗೆ ಸಿಲುಕಿರುತ್ತಾಳೆ. ಅವಳು ಹೆಜ್ಜೆ ಹೆಜ್ಜೆಗೂ ವಿರೋಧ ಮಾಡಿದರೂ ಬಲವಂತದಿಂದಲೇ ಅಮಿತಾಳಿಗೆ ಮುತ್ತು ಕಟ್ಟಲಾಗುತ್ತದೆ. ಈ ಮೂಲಕ ಧರ್ಮಯ್ಯನ ಮಗಳು ದೇವದಾಸಿ ಪದ್ಧತಿಗೆ ಒಳಗಾಗುತ್ತಾಳೆ. ಹೀಗೆ ದೇವದಾಸಿಯಾಗುವ ಅಮಿತಾಳನ್ನು ಬಲವಂತವಾಗಿ ಪಕ್ಕದೂರಿನ ಯಜಮಾನ ಹೆಚ್ಚಿನ ದುಡ್ಡುಕೊಟ್ಟು ಖರೀದಿ ಮಾಡಿ ಹೊತ್ತುಕೊಂಡು ಹೋಗುತ್ತಿರುತ್ತಾನೆ. ಇದೇ ಸಮಯಕ್ಕೆ ಅಮಿತಾಳ ಗೆಳೆಯ ಪ್ರಣವ ಚಂದ್ರಗಿರಿಗೆ ಬಂದಿರುತ್ತಾನೆ. ಅಮಿತಾ ಕಷ್ಟದಲ್ಲಿರುವುದನ್ನು ಕಂಡು ಅವಳನ್ನು ಪುಂಡರಿಂದ ರಕ್ಷಿಸಿ ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಇತ್ತ ತನ್ನ ಮಗಳನ್ನು ಅಪಹರಿಸಿಕೊಂಡು ಹೋಗಿರುವ ಸುದ್ದಿ ತಿಳಿದು ಧರ್ಮಯ್ಯ ಆತಂಕಕ್ಕೆ ಒಳಗಾಗುತ್ತಾನೆ. ತನ್ನ ಮಗಳನ್ನು ಬಲವಂತವಾಗಿ ದೇವದಾಸಿಯನ್ನಾಗಿ ಮಾಡಿದ ವಿಷಯ ತಿಳಿದು ಎಲ್ಲರಿಗೂ ಗುಂಡಿಕ್ಕಿ ಕೊಲೆ ಮಾಡುವುದಾಗಿ ಹೇಳಿ ಮನೆಯಲ್ಲಿ ಕೂಗಾಡುತ್ತಿರುತ್ತಾನೆ. ತನ್ನ ಮಗಳಿಗೆ ಎಂಥ ಪರಿಸ್ಥಿತಿ ಬಂತು ಎಂದು ಅಮಿತಾಳ ತಾಯಿ ಕೂಡಾ ದುಃಖಪಡುತ್ತಾಳೆ. ಇಲ್ಲಿಂದ ಕಥೆಯು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಹರಿ ಮದುವೆಯಾಗಿದ್ದ ಕಲ್ಪಿಯನ್ನು ತಂದು ಮನೆಯಲ್ಲಿ ಇಟ್ಟಿರುವ ವಿಷಯ ಧರ್ಮಯ್ಯ ಮತ್ತು ಆತನ ಹೆಂಡತಿಗೆ ಗೊತ್ತಾಗುತ್ತದೆ. ಧರ್ಮಯ್ಯನ ಹೆಂಡತಿಗೆ ಕಲ್ಪನಾಳನ್ನು ಒಪ್ಪಿಕೊಳ್ಳಲು ಆಗದ ಅತ್ತ ತಿರಸ್ಕರಿಸಲು ಆಗದ ಪರಿಸ್ಥಿತಿ ಎದುರಾಗಿರುತ್ತದೆ. ಹರಿಯು ಮಾನಸಿಕ ಅಸ್ವಸ್ಥನಾಗಿ ಕಲ್ಪಿಗೆ ತಾಳಿಕಟ್ಟಿದ್ದರಿಂದ ಕಲ್ಪಿಯನ್ನು ಹರಿಯ ಹೆಂಡತಿಯೆಂದು ಒಪ್ಪಿಕೊಂಡಿರುತ್ತಾನೆ. ಆದರೆ ಹರಿಯ ತಂದೆ ತಾಯಿಯರು ಮನೆಯ ಇತರ ಸದಸ್ಯರು ಒಬ್ಬ ಕೆಳವರ್ಗದ ದೇವದಾಸಿಯ ಮಗಳನ್ನು ತಮ್ಮ ಮನೆಯ ಸೊಸೆ ಎಂದು ಒಪ್ಪಿಕೊಳ್ಳಲು ಮನಸ್ಸು ಮಾಡುವುದಿಲ್ಲ. ತಮ್ಮ ಘನತೆ, ಗೌರವ, ಮರ್ಯಾದೆಗೆ ಧಕ್ಕೆ ಆಗುತ್ತದೆ. ನಾಲ್ಕು ಜನರ ಮಧ್ಯೆ ತಲೆ ಎತ್ತಿ ತಿರುಗಾಡದಂತೆ ಆಗುತ್ತದೆ ಎಂಬ ಚಿಂತೆ ಕಾಡುತ್ತಿರುತ್ತದೆ. ಇತ್ತ ಕಲ್ಪಿ ತನ್ನ ಮುಗ್ಧತೆಯಿಂದ ಮನೆಯ ಎಲ್ಲ ಸದಸ್ಯರ ಮನ ಗೆಲ್ಲುವಲ್ಲಿ ಸಫಲಳಾಗುತ್ತಾಳೆ.

ಸಮಯ ಎಲ್ಲದಕ್ಕೂ ಮದ್ದು ಅನ್ನುವ ಮಾತಿನಂತೆ ಕಲ್ಪಿಯನ್ನು ನಿಧಾನವಾಗಿ ಮನೆಯಲ್ಲಿ ಎಲ್ಲರೂ ಒಪ್ಪಿಕೊಳ್ಳಲು ಪ್ರಾರಂಭಿಸುತ್ತಾರೆ. ಆದರೆ ಧರ್ಮಯ್ಯ ಮಾತ್ರ ಕಲ್ಪಿಯನ್ನು ಸೊಸೆ ಎಂದು ಒಪ್ಪಿಕೊಳ್ಳಲು ತಯಾರಿರುವುದಿಲ್ಲ, ಬದಲಿಗೆ ಹರಿಗೆ ಇನ್ನೊಂದು ಮದುವೆ ಮಾಡಲು ತಯಾರಿ ನಡೆಸುತ್ತಾನೆ. ಅದರಂತೆಯೇ ತನ್ನ ತಂಗಿಯ ಮಗಳನ್ನು ಹರಿಗೆ ತಂದುಕೊಳ್ಳುವ ನಿರ್ಧಾರ ಮಾಡುತ್ತಾನೆ. ತನ್ನ ತಂಗಿಯ ಮಗಳಿಗೆ ಈಗಾಗಲೇ ಮದುವೆಯಾಗಿದ್ದು, ಆಕೆಯ ಗಂಡ ಅಕಾಲಿಕ ಮರಣ ಹೊಂದಿರುತ್ತಾನೆ. ಹಾಗಾಗಿ ಅವಳನ್ನು ತನ್ನ ಮಗ ಹರಿಗೆ ತಂದುಕೊಳ್ಳಬೇಕೆಂದು ಧರ್ಮಯ್ಯ ನಿರ್ಧರಿಸುತ್ತಾನೆ. ಧರ್ಮಯ್ಯ ಅಂದುಕೊಂಡಂತೆ ಅವಳನ್ನು

ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಲು ಮದುವೆಯ ತಯಾರಿ ಮಾಡಿಕೊಳ್ಳುತ್ತಾನೆ. ಮದುವೆಯ ದಿನ ಎಲ್ಲ ಸಂಬಂಧಿಕರು ಊರಿನ ಜನರೆಲ್ಲಾ ಬಂದಿರುತ್ತಾರೆ. ಮದುವೆಯ ಮೂಹೂರ್ತದ ಶುಭಗಳಿಗೆಯಲ್ಲಿ ಇನ್ನೇನು ತಾಳಿಕಟ್ಟಬೇಕಾದಾಗ ಒಂದು ಅನಿರೀಕ್ಷಿತ ಘಟನೆ ನಡೆಯುತ್ತದೆ. ಹರಿಯ ತಂಗಿ ಅಮಿತಾ ಕಲ್ಪನಾಳನ್ನು ತಂದು ಹರಿಯ ಕೈಯಿಂದ ತಾಳಿ ಕಟ್ಟಿಸುತ್ತಾಳೆ. ಹರಿಯೂ ಕೂಡ ತನ್ನ ತಂದೆ ನೋಡಿದ ಹುಡುಗಿಗೆ ತಾಳಿಕಟ್ಟದೇ ಕಲ್ಪನಾಳಿಗೆ ತಾಳಿ ಕಟ್ಟುತ್ತಾನೆ. ಕ್ಷಣಕಾಲ ಎಲ್ಲರೂ ಆಶ್ಚರ್ಯ ಚಕಿತರಾಗುತ್ತಾರೆ. ಈ ನಡುವೆ ಧರ್ಮಯ್ಯ ಮತ್ತು ಅಮಿತಾ ಇಬ್ಬರ ಮಧ್ಯೆ ದೊಡ್ಡ ವಾದವೇ ನಡೆದು ಹೋಗುತ್ತದೆ. ಈ ವಾದದಲ್ಲಿ ಧರ್ಮಯ್ಯ ತನ್ನ ಮಗಳ ಪ್ರಶ್ನೆಗೆ ಉತ್ತರಿಸಲಾಗದೇ ಹೋಗುತ್ತಾನೆ.

ಸಮಾಜದ ಕರಾಳ ದೃಷ್ಟಿ ತನ್ನ ಮೇಲೆ ಬಿದ್ದು ಹಾಳಾಗಿ ಹೋಗಿದೆ. ಈಗ ಕಲ್ಪನಾಳ ಮೇಲೆ ಅದೇ ದೃಷ್ಟಿ ಬೀಳುವುದು ಬೇಡ. ಅವಳಿಗೆ ಒಳ್ಳೆಯ ಬಾಳು ಕೊಡಬೇಕೆಂದು ಅಮಿತಾ ತಂದೆಗೆ ಬೇಡಿಕೊಳ್ಳುತ್ತಾಳೆ. ಇತ್ತ ತಮ್ಮ ಮಗಳ ಮದುವೆಯ ಕನಸು ಹೊತ್ತು ಬಂದಿದ್ದ ಧರ್ಮಯ್ಯನ ತಂಗಿ, ಗಂಡ, ಮಗಳಿಗೆ ಮದುವೆಯಾಗದೇ ಹೋದರಿಂದ ದುಃಖ ಪಡುತ್ತಾರೆ. ಧರ್ಮಯ್ಯ ನಡೆಯಬೇಕಾದ ಮದುವೆ ನಡೆಯದೇ ಹೋದರಿಂದ ತಂಗಿಗೆ ಕ್ಷಮೆ ಕೇಳುತ್ತಾನೆ. ಆದರೆ ಅಣ್ಣನಿಗೆ ಕ್ಷಮಿಸುವ ಮನಸ್ಸು ತಂಗಿಗಾಗಲಿ, ತಂಗಿಯ ಗಂಡನಿಗಾಗಲಿ ಇರುವುದಿಲ್ಲ. ತಮ್ಮ ಮಗಳನ್ನು ಧರ್ಮಯ್ಯನ ಸೊಸೆ, ಹರಿಯ ಹೆಂಡತಿಯೆಂದು ಊರಿನಲ್ಲಿ ಹೇಳಿಕೊಂಡು ಬಂದಿದ್ದೇವೆ. ಈಗ ತಮ್ಮ ಮಗಳಿಗೆ ಮದುವೆಯಾಗಲಿಲ್ಲ ತಮ್ಮ ಮಗಳಿಗೆ ಮದುವೆಯಾಗಿರಬೇಕಾದವನು ಇನ್ಯಾರಿಗೋ ತಾಳಿ ಕಟ್ಟಿದ್ದಾನೆ ಎಂದು ಊರಲ್ಲಿ ಗೊತ್ತಾದರೆ ನಮ್ಮ ಮಾನ ಮರ್ಯಾದೆ ಎಳ್ಳಷ್ಟು ಇರುವುದಿಲ್ಲ. ಈ ಸಂದರ್ಭದಲ್ಲಿ ನಾವು ಯಾವ ಮುಖ ಹೊತ್ತುಕೊಂಡು ಊರಿಗೆ ಹೋಗಬೇಕು. ಅದು ನಮ್ಮಿಂದ ಸಾದ್ಯವಿಲ್ಲ ನಮ್ಮ ಮಗಳಿಗೆ ಇನ್ನೊಂದು ಮದುವೆ ಮಾಡುತ್ತೇವೆಂದು ಹೇಳಿ ಅವಳ ಮನಸ್ಸಿನಲ್ಲಿ ಇಲ್ಲದ ಆಸೆ ಹುಟ್ಟಿಸಿದ್ದೇವೆ. ನಿಮ್ಮಿಂದಾಗಿ ಅವಳ ಭಾವನೆಗಳಿಗೆ ನೋವುಂಟಾಗಿದೆ. ಮಗಳಿಗೆ ಆದ ನೋವನ್ನೆಲ್ಲ ಮರೆತು ಹೊಸ ಜೀವನ ಪ್ರಾರಂಭಿಸಬೇಕೆಂದರೆ ತಮ್ಮ ಮಗಳಿಗೆ ಅನ್ಯಾಯ ಆಗಿರುವುದನ್ನು ಸರಿಪಡಿಸಿ ಎಂದು ಧರ್ಮಯ್ಯನ ತಂಗಿ ಜಗಳ ತೇಗೆಯುತ್ತಾಳೆ. ಆಗ ಧರ್ಮಯ್ಯ ಅಸಹಾಯಕನಾಗಿ ನಾನೇನು ಮಾಡಲು ಸಾಧ್ಯವಿದೆ ಎಂದು ಕೇಳುತ್ತಾನೆ. ಅದಕ್ಕೆ ತಂಗಿ ತನ್ನ ಮಗಳನ್ನು ಜನರ ಎದುರು ತಾಳಿ ಕಟ್ಟದಿದ್ದರೆ ಏನಂತೆ ದೇವರ ಎದುರು ತಾಳಿಕಟ್ಟಲು ಹರಿಗೆ ಹೇಳಿ, ಹರಿಯ ಕೈಯಿಂದ ತಾಳಿಕಟ್ಟಿದ ಮೇಲೆ ಹರಿಯ ಹೆಂಡತಿಯಾಗುತ್ತಾಳೆ. ಆಗ ನಮಗೂ ಸಂತೋಷವಾಗುತ್ತದೆ. ನೆಮ್ಮದಿಯಿಂದ ಊರಿಗೆ ಹೋಗಬಹುದು ಎಂದು ಹೇಳುತ್ತಾಳೆ. ಆಗ ತಾವು ತಿಳಿದೋ ತಿಳಿಯದೆಯೋ ತಪ್ಪು ನಡೆದು ಹೋಗಿದೆ ಆದ್ದರಿಂದ ಈ ಮೂಲಕವಾದರು ತಮ್ಮ ತಪ್ಪನ್ನು ಸರಿಪಡಿಸಬಹುದು ಎಂದು ಹೇಳಿ ಧರ್ಮಯ್ಯನ ಮಗ ಹರಿಗೆ ದೇವರ ಕೋಣೆಯಲ್ಲಿ ತಾಳಿ ಕಟ್ಟುವಂತೆ ಹೇಳುತ್ತಾನೆ. ತಾಳಿಕಟ್ಟಿದ ಮೇಲೆ ಅವಳನ್ನು ಮನೆಯಲ್ಲಿ ಬಿಟ್ಟು ಧರ್ಮಯ್ಯನ ತಂಗಿ ಮತ್ತು

ತಂಗಿ ಗಂಡ ತಮ್ಮ ಊರಿಗೆ ಹೊರಡುತ್ತಾರೆ. ಕಥೆಯಲ್ಲಿ ಮತ್ತೆ ಹೊಸ ಹೊಸ ತಿರುವುಗಳು ಬರುತ್ತವೆ.

ಕಥೆಯ ಮಧ್ಯೆ ಭಾಗದಲ್ಲಿ ಅಮಿತಾಳಿಂದ ತನ್ನ ಬಾಳು ಹಾಳಾಯಿತೆಂದು ಹರಿಯ ಎರಡನೆಯ ಹೆಂಡತಿ ಅಮಿತಾ ಮೇಲೆ ದ್ವೇಷ ಕಾರುತ್ತಾಳೆ. ಅಮಿತಾ ತನ್ನ ಸ್ನೇಹಿತನಾದ ಪ್ರಣವನನ್ನು ಪ್ರೀತಿಸುತ್ತಿರುವ ವಿಷಯ ತಿಳಿದುಕೊಂಡಿರುತ್ತಾಳೆ. ಈ ವಿಷಯವನ್ನು ತನ್ನ ಅನೂಕೂಲಕ್ಕಾಗಿ ಬಳಸಿಕೊಳ್ಳುತ್ತಾಳೆ. ಅವರಿಬ್ಬರ ಮಧ್ಯೆ ಇರುವ ಸಂಬಂಧ ಹಾಳಾಗುವಂತೆ ತಂತ್ರಗಳನ್ನು ರೂಪಿಸುತ್ತಾಳೆ. ಪ್ರಣವನ ದೂರವಾಣಿ ಸಂಖ್ಯೆಯನ್ನು ಉಪಾಯವಾಗಿ ಪಡೆದು ಕೊಳ್ಳುತ್ತಾಳೆ. ತಾನು ಸುಮನ್ ಅಮಿತಾಳ ಗೆಳತಿ ಎಂದು ಹೇಳಿ ದೂರವಾಣಿಯ ಮೂಲಕ ಮಾತನಾಡುವುದಕ್ಕೆ ಪ್ರಾರಂಭಿಸುತ್ತಾಳೆ. ದಿನೇ ದಿನೇ ಇಬ್ಬರ ಮಧ್ಯೆ ಮಾತು ಕತೆಗಳು ನಡೆಯುತ್ತವೆ. ಇದರ ಉಪಯೋಗ ಪಡೆದುಕೊಂಡು ಪ್ರಣವಗೆ ಅಮಿತಾಳ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡುವಂತೆ ಮಾಡುತ್ತಾಳೆ. ಹೀಗೆ ಅವರಿಬ್ಬರ ಮಧ್ಯೆ ಕಂದರವನ್ನು ಸೃಷ್ಟಿ ಮಾಡುತ್ತಾಳೆ. ಪ್ರಣವ ಅಮಿತಾ ಮಾತು ಕೇಳಿದರೆ ಕೆಂಡವಾಗತೊಡಗುತ್ತಾನೆ. ಅವಳಿಂದ ದೂರ ಇರುವ ಪ್ರಯತ್ನ ಮಾಡುತ್ತಾನೆ. ತನ್ನ ಮರ್ಯಾದೆಯನ್ನು ನಾಲ್ಕು ಜನರ ಮಧ್ಯೆ ಹರಾಜಿಗೆ ಹಾಕಿ, ತನಗೆ ಸಿಗಬೇಕಾದ ಸಂತೋಷ, ಘನತೆ, ಗೌರವಗಳನ್ನು ಕಸಿದುಕೊಂಡು ಇನ್ಯಾರಿಗೋ ಆ ಸುಖ ಸಿಗುವಂತೆ ಮಾಡಿದ್ದೀಯಾ, ಈಗ ದುಃಖ, ಅವಮಾನ ಎಂದರೆ ಏನು, ಎಂದು ಅವಳಿಗೂ ಅರ್ಥ ಆಗಬೇಕು ಎಂದು ಈ ರೀತಿಯಲ್ಲಿ ದ್ವೇಷ ಸಾಧಿಸುತ್ತಾಳೆ.

ಇತ್ತ ಪ್ರಣವ ಮತ್ತು ಅಮಿತಾಳ ಮಧ್ಯೆ ಕಂದರವನ್ನು ತರುವ ಕೆಲಸ ಇವಳು ಮಾಡಿದರೆ, ಅತ್ತ ಕಲ್ಪನಾ ಪ್ರಣವ ಮತ್ತು ಅಮಿತಾಳ ಮಧ್ಯೆ ಇರುವ ಈ ಕಂದರವನ್ನು, ತಪ್ಪು ತಿಳುವಳಿಕೆಯನ್ನು ಬಗೆಹರಿಯುವಂತೆ ಮಾಡುತ್ತಾಳೆ. ಅವರಿಬ್ಬರಿಗೂ ಒಳ್ಳೆಯ ಸಂಬಂಧವನ್ನು ರೂಪಿಸುವಲ್ಲಿ ಶ್ರಮ ಪಡುತ್ತಾಳೆ. ಕಥೆಯು ತನ್ನ ತಿರುವನ್ನು ಪಡೆದುಕೊಳ್ಳುತ್ತದೆ. ಹರಿಯು ಮಾನಸಿಕ ಅಸ್ವಸ್ಥನಾಗಿದ್ದವನು. ಕಥೆಯ ಮಧ್ಯೆದಲ್ಲಿ ಎಲ್ಲರಂತೆ ಆರೋಗ್ಯವಂತ ನಾಗುತ್ತಾನೆ. ಮಾನಸಿಕ ಅಸ್ವಸ್ಥನಾಗಿದ್ದಾಗ ಹರಿಗೆ ಕಲ್ಪನಾಳೇ ತನ್ನ ಹೆಂಡತಿಯೆಂದು ಅವಳೊಂದಿಗೆ ಇರುತ್ತಾನೆ. ಯಾವಾಗ ಹರಿ ಆರೋಗ್ಯವಂತನಾಗುತ್ತಾನೋ, ಆಗ ಕಲ್ಪನಾಳನ್ನು ಹೆಂಡತಿಯೆಂದು ಒಪ್ಪಿಕೊಳ್ಳಲು ನಿರಾಕರಿಸುತ್ತಾನೆ. ಎರಡನೆಯ ಹೆಂಡತಿಯನ್ನು ತನ್ನ ಹೆಂಡತಿಯೆಂದು ಹೇಳುವುದರ ಮೂಲಕ ಅವಳೊಂದಿಗೆ ಇರಲು ಪ್ರಾರಂಭಿಸುತ್ತಾನೆ. ಇದರಿಂದ ಮನೆಯಲ್ಲಿ ಆಗಾಗ ಶೀತಲ ಸಮರಗಳು ನಡೆಯುತ್ತಿರುತ್ತವೆ. ಈ ಶೀತಲ ಸಮರಗಳೇ ಮುಂದೇ ಒಂದೇ ಮನೆ ಯಲ್ಲಿ ಎರಡು ಭಾಗಗಳಾಗಲು ಕಾರಣವಾಗುತ್ತದೆ. ಅಡುಗೆ ಮನೆ, ದೇವರ ಮನೆ ಎಲ್ಲವೂ ಎರಡು ಭಾಗಗಳಾಗಿ ಹೋಗುತ್ತವೆ. ಹರಿಯು ತನ್ನ ತಂದೆ ತಾಯಿ ಹೆಂಡತಿಯೊಂದಿಗೆ, ಇರದೇ ತನ್ನ ಅತ್ತೆ ಮಾವ ಹೆಂಡತಿಯೊಂದಿಗೆ ಇನ್ನೊಂದು ಭಾಗದಲ್ಲಿ ವಾಸಿಸುತ್ತಾನೆ.

ಕಲ್ಪನಾಗೆ ಬಂದೊದಗಿದ ಈ ಅನಿರೀಕ್ಷಿತ ತಿರುವಿನಿಂದ ಘಾಸಿಗೊಳ್ಳುತ್ತಾಳೆ. ತನ್ನ ಜೀವನದಲ್ಲಿ ಯಾವ ಯಾವ ಕಷ್ಟಗಳು ಬರಲಿವೆಯೋ ಏನೊ ಆ ದೇವರಿಗೆ ಗೊತ್ತು

ಎಂದು ದುಃಖಪಡುತ್ತಾಳೆ. ಇದರ ಮಧ್ಯೆ ಧರ್ಮಯ್ಯ ಮತ್ತವನ ಹೆಂಡತಿ ಕಲ್ಪನಾಳ ಮುಗ್ಧತೆಗೆ ಅವಳ ಒಳ್ಳೆತನಕ್ಕೆ, ವಿಚಾರಗಳಿಗೆ ಮನಸೋತು ತಾವು ಎಂತಹ ತಪ್ಪು ಮಾಡಿದ್ದೇವೆ, ತಮಗೆ ಅಪ್ಪಟ ಬಂಗಾರದಂತಹ ಸೊಸೆ ಸಿಕ್ಕರೂ ಅದನ್ನು ಗುರುತಿಸದೇ ಹೋದೆವಲ್ಲಾ ಎಂದು ವ್ಯಥೆ ಪಡುತ್ತಾರೆ. ಇದರ ಮಧ್ಯೆ ಕಲ್ಪನಾ ಗರ್ಭಿಣಿಯಾಗುತ್ತಾಳೆ ಸೊಸೆ ಗರ್ಭಿಣಿಯಾದ ಸುದ್ದಿ ತಿಳಿದ ಧರ್ಮಯ್ಯ ಸಂತೋಷದಿಂದಿರುತ್ತಾನೆ. ತಮ್ಮ ಮನೆಗೆ ಪುಟ್ಟ ಕಂದನ ಆಗಮನವಾಗುತ್ತದೆ. ಎಂದು ಸಂತೋಷ ಪಡುತ್ತಿರುತ್ತಾರೆ. ಈ ಸಂತೋಷವನ್ನು ಕಂಡು ಹರಿಯ ಅತ್ತೆ ಮಾವ ಮಗಳು ಹೊಟ್ಟೆಕಿಚ್ಚು ಪಡುತ್ತಾರೆ. ಕಥೆಯಲ್ಲಿ ಬರುವ ಹೊಸ ಹೊಸ ತಿರುವುಗಳು ಸಮಾಜದಲ್ಲಿ ಅಸ್ತಿತ್ವವಿರುವ ಮೌಲ್ಯಗಳು ಅವುಗಳಿಂದಾಗುವ ಅನುಕೂಲ ಅನಾನುಕೂಲಗಳು ಜೊತೆಗೆ ಕುಟುಂಬ. ಕುಟುಬಂಬದ ಯಜಮಾನ ಇತರ ಸದಸ್ಯರ ಮಧ್ಯೆ ನಡೆಯುವ ಶೀತಲ ಸಮರಗಳು ತಂತ್ರಕ್ಕೆ ಪ್ರತಿತಂತ್ರಗಳು ಅಸಹಾಯಕತೆ ಅವಲಂಬನೆ ಹೀಗೆ ನಮ್ಮ ದಿನನಿತ್ಯದ ಬದುಕಿನ ಘಟನೆಗಳು ಇಲ್ಲಿ ಜನ್ಮ ಪಡೆದು ಚಿತ್ರಿತವಾಗಿವೆ.

ಕಥೆಯಲ್ಲಿ ಮುಂದೆ ಕಲ್ಪನಾಳನ್ನು ಮನೆಯ ಹೊರಗೆ ಹಾಕಲಾಗುತ್ತದೆ. ಕಲ್ಪನಾಳ ಅಕ್ಕ ಮಂಜಿ ತನ್ನ ಅಧಿಕಾರವನ್ನು ಈ ಮನೆಯಲ್ಲಿ ಸ್ಥಾಪಿಸಬಹುದುದೆಂದು ಧರ್ಮಯ್ಯನ ಮನೆಗೆ ಬರುತ್ತಾಳೆ. ಏಕೆಂದರೆ ಧರ್ಮಯ್ಯನ ಹಾಳಾದ ಚಟಕ್ಕೆ ಬಲಿಯಾಗಿರುತ್ತಾಳೆ. ಹಾಗಾಗಿ ಈ ಮನೆಯಲ್ಲಿ ಅಧಿಕಾರ ಸ್ಥಾಪಿಸಬಹುದು ಎನ್ನುತ್ತಾಳೆ. ಆದರೆ ಹಾಗೆ ಮಾಡುವುದಿಲ್ಲ ಬದಲಿಗೆ ತನ್ನ ತಂಗಿಗೆ ಒಳ್ಳೆಯ ಬಾಳು ಕೊಟ್ಟರೆ ಅದೇ ಸಂತೋಷವೆಂದು ಮಂಜಿ ಹೇಳುತ್ತಾಳೆ.

ಇತ್ತ ಅಮಿತಾಳನ್ನು ಮದುವೆಯಾಗಲು ಪ್ರಣವ ತನ್ನ ತಂದೆ ತಾಯಿಯನ್ನು ಧರ್ಮಯ್ಯನ ಮನೆಗೆ ಬರುತ್ತಾನೆ. ಬಂದಾಗ ಸುಮನ್ ಅಂತ ಸುಳ್ಳು ಹೇಳಿರುವ ಹುಡುಗಿ ಎದುರಾಗುತ್ತಾಳೆ. ಆಗ ಆ ಸುಮನ ಆಗಿರುವವಳು ಹರಿಯ ಹೆಂಡತಿಯೆಂದು ತಿಳಿದುಬರುತ್ತದೆ. ಆಗ ಪ್ರಣವ ತನಗೆ ಮೋಸ ಮಾಡಲಾಯಿತೆಂದು ದುಃಖಪಡುತ್ತಾನೆ. ಆಗ ತನ್ನ ತಪ್ಪಿನ ಅರಿವಾಗಿ ವ್ಯಥೆಪಡುತ್ತಾನೆ. ಅಮಿತಾಳ ಜೊತೆ ಮದುವೆಯಾಗಲು ಇಚ್ಛೆ ವ್ಯಕ್ತಪಡಿಸುತ್ತಾನೆ. ಕಥೆಯಲ್ಲಿ ಪ್ರಣವ ತನ್ನ ಅಜ್ಞಾನದಿಂದ ಒಳ್ಳೆಯ ಹುಡುಗಿ ಅಮಿತಾಳನ್ನು ಮೋಸ ಮಾಡಿದೆ ಎಂದು ತಿಳಿದು ವ್ಯಥೆಪಡುತ್ತಾ ಮದುವೆಗೆ ತಯಾರು ಮಾಡುವಂತೆ ಹೇಳುತ್ತಾನೆ. ಗೆಜ್ಜೆಪೂಜೆ ಧಾರಾವಾಹಿಯ ಒಟ್ಟು ಕಥೆಯ ಸಾರಾಂಶ ಇದಾಗಿದ್ದು, ಕಥೆಯು ಇಲ್ಲಿ ಅರ್ಧಕ್ಕೆ ನಿಲ್ಲಿಸಲಾಗಿದೆ.

ವಿಶ್ಲೇಷಣೆ

"ಗೆಜ್ಜೆಪೂಜೆ" ಹೆಸರೇ ಹೇಳುವಂತೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ರೂಪಿಸಿದ ತನ್ನ ಲೈಂಗಿಕ ಬಯಕೆಗಳನ್ನು ಈಡೇರಿಸಿಕೊಳ್ಳಲು ದೇವರು, ಧರ್ಮ ಎಂಬ ಹೆಸರಿನಿಂದ ಕೆಳವರ್ಗದ ಕೆಳಜಾತಿಯ ಸುಂದರವಾದ ಹೆಣ್ಣುಮಕ್ಕಳನ್ನು ತನ್ನ ಕಾಮತನಕ್ಕೆ ಬಳಸಿಕೊಳ್ಳಲು ಅಪ್ರತ್ಯಕ್ಷವಾಗಿ ಆಯ್ದುಕೊಂಡ ಮಾರ್ಗವಾಗಿ ಈ ಗೆಜ್ಜೆಪೂಜೆಯಂತಹ ಅನಿಷ್ಟ ಪದ್ಧತಿ ಬೆಳೆದುಬಂದಿದೆ. ಇದು ಇಂದು ನಿನ್ನೆ ಅಸ್ತಿತ್ವ ಪಡೆದಂತಹ ಪದ್ಧತಿಯಲ್ಲ. ಅದಕ್ಕೆ ಸಾವಿರಾರು

ವರ್ಷಗಳ ಇತಿಹಾಸವಿದೆ. ಹೆಸರೇ ಸೂಚಿಸುವಂತೆ ದೇವರಿಗೆ ಹೆಣ್ಣುಮಕ್ಕಳನ್ನು ದಾಸಿಯರಾಗಿ ಬಿಡುವುದು ಅಂದರೆ ದೇವರ ಹೆಸರಿನಲ್ಲಿ ಅವಿವಾಹಿತ ಕನ್ನೆಯರನ್ನು ದೇವಸ್ಥಾನಗಳ ಕಾರ್ಯಕ್ಕಾಗಿ ನರ್ತನಗಳಿಗಾಗಿ ಅರ್ಪಿಸುವುದು. ಒಮ್ಮೆ ದೇವಸ್ಥಾನಕ್ಕೆ ಅರ್ಪಿಸಿದ ಹೆಣ್ಣು ಮಕ್ಕಳನ್ನು ವಿವಾಹ ಮಾಡಲು ಬರುವುದಿಲ್ಲ. ಇದು ಧರ್ಮದ ಹೆಸರಿನಲ್ಲಿ ಹೆಣ್ಣಿನ ಲೈಂಗಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ಶೋಷಣೆಗೈಯುವ ಹುನ್ನಾರವಾಗಿದೆ.

ಇಂತಹ ಒಂದು ಅನಿಷ್ಟ ಪದ್ಧತಿಯನ್ನು ಹಿರಿತೆರೆಯ ಮೇಲೆ ಪುಟ್ಟಣ ಕಣಗಾಲ ಅವರ "ಗೆಜ್ಜೆಪೂಜೆ" ಸಿನಿಮಾ ೧೯೭೦ರಲ್ಲಿ ತೆರೆಕಂಡ ಜನಪ್ರಿಯ ಚಿತ್ರ. ಇಂತಹ ಕಥೆಯನ್ನೇ ಇಟ್ಟುಕೊಂಡು ವಿನು ಬಳಂಜ ಅವರು "ಗೆಜ್ಜೆಪೂಜೆ"ಯನ್ನು ಕಿರುತೆರೆಯ ಮೇಲೆ ಚಿತ್ರಿಸಿದ್ದಾರೆ. ಝೀ ಕನ್ನಡ ವಾಹಿನಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ ೮ರಿಂದ ೮.೩೦ರವರೆಗೆ ಪ್ರಸಾರವಾದ ಈ ಧಾರಾವಾಹಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅನಿಷ್ಟ ಪದ್ಧತಿಗಳ ಬಲಿಗೆ ಬೀಳುವ ಹೆಣ್ಣಿನ ಮನಸ್ಥಿತಿಯನ್ನು ನವಿರಾಗಿ ಕಟ್ಟಿಕೊಡಲಾಗಿದೆ. ಇಲ್ಲಿ ಮುಖ್ಯವಾಗಿ ಎರಡು ವರ್ಗಗಳ, ಎರಡು ಜಾತಿಗಳ ಮಧ್ಯೆ ನಡೆಯುವ ವೈಪರೀತ್ಯವನ್ನು ಚಿತ್ರಸಿದ್ದಾರೆ. ಕೆಳವರ್ಗದ ಕೆಳಜಾತಿಯ ಮನೆಯವರಾಗಿ ಯಮುನೆ, ಮಂಜಿ, ಕಲ್ಪನಾ, ನಾಗು ರೂಪುಗೊಂಡಿದ್ದರೆ, ಮೇಲ್ವರ್ಗದ, ಮೇಲ್ಜಾತಿಯ ಮನೆಯವರಾಗಿ ಧರ್ಮಯ್ಯ, ಹೆಂಡತಿ, ಮಕ್ಕಳು ರೂಪಿತ ಗೊಂಡಿದ್ದಾರೆ. ಕಥೆಯಲ್ಲಿ ಹಲವು ರೀತಿಯಾ ಬದಲಾವಣೆಗೆ ತುಡಿಯುವಂತಹ ಚಿತ್ರಣವನ್ನು ನೀಡುತ್ತದೆ. ವಾಸ್ತವದಲ್ಲಿರುವ ಆಚರಣೆಯನ್ನು ಪಲ್ಲಟಗೊಳಿಸಿರುವುದನ್ನು ಇಲ್ಲಿ ಕಾಣಬಹುದು.

ದೇವದಾಸಿಯಾಗಬೇಕಾದ ಕಲ್ಪನಾಳನ್ನು ಆ ಪದ್ಧತಿಯಿಂದ ದೂರ ಸರಿಸಿ, ಈ ಅನಿಷ್ಟ ಪದ್ಧತಿಯ ಆಚರಣೆಗೆ ಒಳಗಾಗದಂತೆ ಚಿತ್ರಿಸಲಾಗಿದೆ. ವ್ಯವಸ್ಥೆಯಲ್ಲಿರುವ ಪದ್ಧತಿಯಿಂದ ಹೊಸ ದಾರಿಯನ್ನು ಇಲ್ಲಿ ಕಲ್ಪಿಸಲಾಗಿದೆ. ದೇವದಾಸಿ ಪದ್ದತಿಗೆ ಒಳಗಾಗಬೇಕಾಗಿರುವುದನ್ನು ತಪ್ಪಿಸಿ ಆ ಹುಡುಗಿಗೆ ತಾಳಿ ಕಟ್ಟಿದ. ಮೇಲೆ ಆ ಜಾಗಕ್ಕೆ ಬೇಕೆಂದು ಹೇಳಿದಾಗ ಅದಕ್ಕೆ ಮೇಲ್ಜಾತಿಯ ಹುಡುಗಿಯನ್ನು ತಂದು ನಿಲ್ಲಿಸಿ ದೇವದಾಸಿಯನ್ನಾಗಿ ಮಾಡುವುದನ್ನು ತೋರಿಸ ಲಾಯಿತು. ಕೆಳವರ್ಗದ ಮಹಿಳೆಯರಿಗೆ ದೇವತಾಕಾರ್ಯವಾದರೆ ಮೇಲ್ವರ್ಗದ ಹೆಣ್ಣುಮಕ್ಕಳಿಗೆ ಅನಿಷ್ಟ ಪದ್ಧತಿ ಇದನ್ನು ಪಲ್ಲಟಗೊಳಿಸಿ ತೋರಿಸಿದಾಗ ವ್ಯವಸ್ಥೆಯ ವಿರುದ್ಧ ಹೋದಾಗ ಯಾವ ರೀತಿಯಾದ ವಿರೋಧಗಳು ಬರಬಹುದೆಂಬ ಚಿತ್ರಣ ನೀಡಲಾಗಿದೆ.

ದೇವದಾಸಿ ಪಂಥದ ಬಹುಪಾಲು ಆಚರಣೆಗಳಲ್ಲಿ ಹೆಣ್ಣು ಭಾಗವಹಿಸುತ್ತಾಳೆ. ದೇವರ ಸನ್ನಿಧಿಯಲ್ಲಿ ಮುತ್ತು ಕಟ್ಟುವ ಕಾರ್ಯದಲ್ಲಿ ದೇವಸ್ಥಾನದ ಪುರೋಹಿತನ ಪಾತ್ರವಿರುತ್ತದೆ. ಅಂದಿನ ರಾತ್ರಿ ಆಕೆಯನ್ನು ಶ್ರೀಮಂತ ಅಥವಾ ಪುರೋಹಿತನೊಂದಿಗೆ ಬಿಡುವ ಕ್ರಿಯೆ ಇರುತ್ತದೆ. ಇದು ಹಣದ ಮೂಲವನ್ನೇ ಹೆಚ್ಚು ಆಶ್ರಯಿಸಿರುತ್ತದೆ. ಇದರಿಂದಾಗಿಯೇ ಈ ಪಂಥವು ಬಹುಪಾಲು ಬಡಜನರ ಹಾಗೂ ಶ್ರೇಣೀಕರಣದಲ್ಲಿ ಕೆಳಜಾತಿಯವರಲ್ಲಿ ಮಾತ್ರ ರೂಢಿಯಲ್ಲಿದೆ. ಹೆಣ್ಣಿನ ದೇಹದಿಂದ ಆಗುವ ಸಂಪಾದನೆಯನ್ನು ಮನೆ ಮಂದಿ ಕುಳಿತು

ಉಣ್ಣುವುದು ಇಂಥಲ್ಲಿ ಕಂಡುಬರುತ್ತದೆ(ಪು.ಸಂ. ೧೩೧, ೨೦೦೫). ಇಂತಹ ಕಥೆಯನ್ನು ಹೊತ್ತುಕೊಂಡು ಚಿತ್ರಿಸಲಾಗಿರುವ ಧಾರಾವಾಹಿ ಗೆಜ್ಜೆಪೂಜೆ.

ದೇವದಾಸಿಯನ್ನಾಗಿ ಬಿಡುತ್ತಿದ್ದಾರೆಂದು ಗೊತ್ತಾದ ಕೂಡಲೇ ಅಲ್ಲಿಗೆ ಹೋಗಿ ಹೆಣ್ಣನ್ನು ಹೆಚ್ಚು ಹಣಕೊಟ್ಟು ಅವತ್ತಿನ ರಾತ್ರಿ ಅನುಭವಿಸಲು ಸಿದ್ದವಾಗುವಂತಹ ಧರ್ಮಯ್ಯನಂತವರು ನಮ್ಮ ಸಮಾಜದಲ್ಲಿ ನಮ್ಮ ಸುತ್ತಮುತ್ತಲೇ ಇರುವುದು ಕಾಣಬಹುದು. ಒಂದು ಕಡೆ ಹೆಣ್ಣಿಗೆ ದೇವತೆಯ ಸ್ಥಾನಕೊಟ್ಟು ಪೂಜಿಸುವ ಪುರುಷರು, ಇನ್ನೊಂದು ಕಡೆ ಅದೇ ಧರ್ಮದ ದೇವರ ಹೆಸರಲ್ಲಿ ಹೆಣ್ಣನ್ನು ಕಾಮದ ಗೊಂಬೆಯಂತೆ ಕಾಣುವ, ದುಡ್ಡಿನಲ್ಲಿ ಅಳೆದು ತೂಗುವ ಪುರುಷರದು ಒಂದು ಭಾಗ. ಇಂತಹ ವೈರುಧ್ಯಗಳಿರುವ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನದ ಕುರಿತು, ಅಸ್ತಿತ್ವದ ಕುರಿತು ಮಾತನಾಡುವ ಅವಳಿಗಾಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಕಾರ್ಯಗಳು ನಡೆಯಬೇಕಾದ ಅವಶ್ಯಕತೆ ಇಂದಿನ ಪರಿಸ್ಥಿತಿಯಾಗಿದೆ. ವಿಮೋಚನೆಯನ್ನು ತರುವಲ್ಲಿ ಮಾಧ್ಯಮಗಳು ವಹಿಸಬೇಕಾದುದು ಬಹಳ ದೊಡ್ಡ ಪಾತ್ರವಿದೆ. ಮಾಧ್ಯಮ ತನಗಿರುವ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಂಡರೆ, ಇಂತಹ ಪದ್ಧತಿಗಳು ಸಂಕೋಲೆಗಳು ಕಳಚಿ ಬೀಳಬಹುದು.

ತನ್ನ ವರ್ಗ ಶೋಷಣೆಯನ್ನು ನ್ಯಾಯ ಸಮ್ಮತಗೊಳಿಸಲು ಮತ್ತು ಪುರುಷ ಅಧಿಕಾರದ ಕರಾಳತೆಯನ್ನು ಭದ್ರಗೊಳಿಸಿ ನೆಲೆಯೂರಲು ಒಂದು ಸಾಧನ ಸಲಕರಣೆಯಾಗಿ ಮಾಧ್ಯಮವನ್ನು ದುಡಿಸಿಕೊಳ್ಳುತ್ತಿದೆ. ಮಾಧ್ಯಮವು ಪತ್ರಿಕೆಗಳ ಅಥವಾ ಚಲನಚಿತ್ರದಂಥ ಸಾಧನಗಳ ಮೂಲಕ ತಾನೂ ಬಿತ್ತರಿಸುವ ಚಿಂತನೆಗಳು ಹಾಗೂ ಸೃಷ್ಟಿಸುವ ಸಂಕೇತಗಳ ಸಹಾಯದಿಂದ ಸಮಾಜ ವನ್ನೆಲ್ಲ ವ್ಯಾಪಿಸಿರುವ ಊಳಿಗಮಾನ್ಯ ಮತ್ತು ಜಮೀನ್ದಾರೀ ಪದ್ಧತಿಯ ಸಂಸ್ಕೃತಿಯನ್ನು ಗಟ್ಟಿಗೊಳಿಸಿ ಸ್ಥಿರಪಡಿಸಲಾಗಿರುತ್ತದೆ. ಮಹಿಳೆಯರನ್ನು ಕುರಿತು ಒಂದೆಡೆ ಕಾಮದ ಬೊಂಬೆ ಗಳಂತೆಯೂ ಇರುವ ಪ್ರತಿಮೆಗಳನ್ನು ಪ್ರತಿಫಲಿಸುವ ಮೂಲಕ ಅದು ಪುರುಷ ಶ್ರೀಮಂತಿಕೆಯ ನಿಲುವುಗಳನ್ನು ನಿರಂತರವಾಗಿ ಪ್ರಸಾರ ಮಾಡುತ್ತದೆ. ಸಂಗೀತ ಮತ್ತು ನೃತ್ಯಗಳಲ್ಲಿ ದಟ್ಟವಾಗಿರುವ ಅಶ್ಲೀಲ ಮತ್ತು ಮಹಿಳಾ ವಿರೋಧಿ ಅಂಶಗಳು ಅಸಹ್ಯಕರವಾಗಿದ್ದು, ಮಹಿಳೆಯರ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಚಿತ್ರಕಲೆ ಮತ್ತು ಶಿಲ್ಪಕಲೆಗಳಂತಹ ಕಲಾ ಪ್ರಕಾರಗಳೂ ಸಹ ಮಹಿಳೆಯರಿಗೆ ಸಂಬಂಧ ನಿಜಾವಾದ ವಿಷಯಗಳನ್ನು ಬಿಟ್ಟು ವ್ಯಾಪಾರಿ ಮಾರುಕಟ್ಟೆಯ ದೃಷ್ಟಿಯಿಂದ ಅವರ ದೇಹರಚನೆಯ ಬಗೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ.

ಸಂಭಾಷಣೆ : ಆನಂದೂರು ಕೃಷ್ಣಮೂರ್ತಿ

ನಿರ್ದೇಶಕರು : ವಿನು ಬಳಂಜ

ತಾರಾಗಣ : ಅರುಣಾ ಬಾಲರಾಜ, ಉಷಾ ಭಂಡಾರಿ ಜ್ಯೋತಿರಾಯ, ಸುಮ, ಅಶೋಕಹೆಗ್ಡೆ ಮಧು ಹೆಗಡೆ, ಕೆ.ವಿ. ನಾಗರಾಜಮೂರ್ತಿ ನಿಶಿತಗೌಡ, ಇತರರು.

೩.೧.೫. ಜೋಗುಳ

ಕಥೆಯ ಸಾರಾಂಶ

ಜೋಗುಳ ಕಥೆಯು ಇಂದಿನ ವಿದ್ಯಮಾನಗಳಲ್ಲಿ ಬಹುಚರ್ಚಿತವಾಗುತ್ತಿರುವ ಬಾಡಿಗೆ ತಾಯಿ ಕಲ್ಪನೆಯನ್ನು ಇಟ್ಟುಕೊಂಡು ಚಿತ್ರಿತವಾಗಿರುವ ಧಾರಾವಾಹಿಯಾಗಿದೆ. ಧಾರವಾಹಿಯಲ್ಲಿ ಒಂದು ಅತ್ಯಂತ ಶ್ರೀಮಂತ ಮನೆ. ಇನ್ನೊಂದು ಮಧ್ಯಮವರ್ಗದ ಕುಟುಂಬ ಕಥೆಯಲ್ಲಿ ಕಥಾನಾಯಕಿ ದೇವಕಿ ಕಾಲಸೆಂಟರ್‌ನಲ್ಲಿ ಕೆಲಸ ಮಾಡುವವಳು. ರಾತ್ರಿಯಲ್ಲಿ ಕೆಲಸ ಮಾಡುವ ಹಗಲು ನಿದ್ದೆ ಮಾಡುವುದು ಅವಳ ದಿನನಿತ್ಯದ ಕಾಯಕವಾಗಿರುತ್ತದೆ. ಬೆಂಗಳೂರಿನಲ್ಲಿ ತನ್ನ ದೊಡ್ಡಪ್ಪನ ಮಗನಾದ ವಿದ್ಯಾಧರನ ಮನೆಯಲ್ಲಿ ಅತ್ತಿಗೆ, ಅಣ್ಣನ ಮಗನೊಂದಿಗೆ ವಾಸವಾಗಿರುವಾಕೆ. ದೇವಕಿ ಅಕ್ಕ, ತಂಗಿ ಒಟ್ಟು ಮೂರು ಜನ ಹೆಣ್ಣುಮಕ್ಕಳು.

ದೇವಕಿಯ ಅಣ್ಣ ವಿದ್ಯಾಧರ ಕಾಲೇಜಲ್ಲಿ ಅಧ್ಯಾಪಕನಾಗಿರುತ್ತಾನೆ. ನಾಟಕವನ್ನು ಕಲಿಸಿಕೊಡುವ ಹವ್ಯಾಸ ಇರುತ್ತದೆ. ಅದಕ್ಕೆ ತನ್ನ ವಿದ್ಯಾರ್ಥಿಗಳಿಗೆ ಬಿಡುವಿನ ವೇಳೆಯಲ್ಲಿ ಮನೆಗೆ ಕರೆದುಕೊಂಡುನಾಟಕ ಅಭ್ಯಾಸ ಮಾಡಿಸುತ್ತಿರುತ್ತಾನೆ. ಅಣ್ಣನಿಗೆ ಸಂಪಾದನೆ ಕಡಿಮೆ. ಬೆಂಗಳೂರಿನಲ್ಲಿ ಎಲ್ಲದಕ್ಕೂ ಖರ್ಚು, ಮನೆ ಬಾಡಿಗೆ, ಕರೆಂಟ್, ಬಿಲ್ಲು, ವಾಟರ್ ಬಿಲ್ಲು ಜೊತೆಯಲ್ಲಿ ಗೊತ್ತಿಲ್ಲದ ಖರ್ಚುಗಳು ಇದರ ನಡುವೆ ಯಾವುದೋ ಸಾಲಕ್ಕೆ ಜಾಮೀನಾಗಿದ್ದ ಅಣ್ಣ ಈಗ ಆ ಸಾಲವನ್ನೇ ತಿರಿಸುವ ಪರಿಸ್ಥಿತಿ ಎದುರಾಗಿದೆ. ಆದರೆ ಮನೆಯಲ್ಲಿ ದುಡ್ಡಿಲ್ಲ ಗೊಂದಲಗೊಳ್ಳುತ್ತಾಳೆ. ಈ ಹಂತದಲ್ಲೇ ಈಕೆ ಪ್ರೀತಿಸುತ್ತಿರುವ ಹುಡುಗ ವಾಸುವಿಗೆ ಅಮೇರಿಕದಲ್ಲೊಂದು ಒಳ್ಳೆಯ ಅವಕಾಶ ಸಿಕ್ಕಿದೆ. ಇದರಿಂದಾಗಿ ದೇವಕಿಗೆ ಸಂತೋಷವಾಗಿದೆ. ಆದರೆ ವಾಸು ಅಮೇರಿಕಾಕ್ಕೆ ಹೋಗಲು ದೊಡ್ಡ ಮೊತ್ತದ ಶೂರಿಟಿಯನ್ನು ಬ್ಯಾಂಕಗೆ ಕೊಡಬೇಕು. ಆದರೆ ವಾಸುವಿನ ಬಳಿಯೂ ದುಡ್ಡಿಲ್ಲ. ದೇವಕಿ ಗೊಂದಲಗೊಳ್ಳುತ್ತಾಳೆ. ಅವಳಿಗೆ ಈಗ ತುರ್ತಾಗಿ ಕನಿಷ್ಟ ಆರು ಲಕ್ಷ ದುಡ್ಡು ಬೇಕು. ಅದನ್ನು ಹೇಗಾದರೂ ಮಾಡಿ ಹೊಂದಿಸಬೇಕೆಂಬುದು ಅವಳ ಗುರಿಯಾಗಿರುತ್ತದೆ. ಆದರೆ ಹೇಗೆ ಇಷ್ಟೊಂದು ಹಣವನ್ನು ಹೊಂದಿಸುವುದು ಯೋಚಿಸುತ್ತಿರುತ್ತಾಳೆ. ಕಥೆಯ ಇನ್ನೊಂದು ಭಾಗದಲ್ಲಿ ದೊಡ್ಡ ಶ್ರೀಮಂತರ ಮನೆಯ ಚಿತ್ರಣ ದೊರೆಯುತ್ತದೆ.

ಅದೊಂದು ದೊಡ್ಡ ಬಡಾವಣೆ ಬೆಂಗಳೂರಿನಂತಹ ನಗರದಲ್ಲಿ ಹೆಚ್ಚಾಗಿ ಶ್ರೀಮಂತರೇ ವಾಸಿಸುವ ಬಡಾವಣೆ. ಆ ಬಡಾವಣೆಯಲ್ಲಿ ರಘು ಮತ್ತು ಯಶೋಧಾ ಎಂಬ ದಂಪತಿಗಳು ವಾಸಿಸುತ್ತಿರುತ್ತಾರೆ ಹಣ, ಪ್ರೀತಿ ಅನ್ಯೋನ್ಯತೆ, ಯಾವುದೇ ರೀತಿಯ ಕೊರತೆಯಿರುವುದಿಲ್ಲ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತೆ ಪ್ರೀತಿಸುವ ಗಂಡನಿದ್ದರೂ ಯಶೋಧಾಳಿಗೆ ಸದಾ ಒಂದು ಕೊರಗು ಕಾಡುತ್ತಾ ಇರುತ್ತದೆ. ಆ ಕೊರಗು ಮಕ್ಕಳಿಲ್ಲದಿರುವುದು. ದತ್ತು ತಗೆದುಕೊಳ್ಳಲು ಯಶೋಧಾಗೆ ಮನಸ್ಸಿಲ್ಲ. ಬೇರೆ ಮದುವೆಯಾಗುವ ಕುರಿತು ರಘು ಯೋಚನೆ ಮಾಡಲ್ಲ. ಹೀಗಿರುವಾಗ ಮಗುವಿಗಾಗಿ ಬಾಡಿಗೆ ತಾಯಿಯನ್ನು ನೋಡುವಂತೆ ಒಬ್ಬ ಡಾಕ್ಟರ್ ಸಲಹೆ ಕೊಡುತ್ತಾರೆ. ಬಾಡಿಗೆ ತಾಯಿ ಎಂಬ ಪದವೇ ಯಶೋಧಾಗೆ ಮೊದಲು ರೇಜಿಗೆ ಹುಟ್ಟಿಸಿದರೂ ನಂತರ ಯೋಚಿಸಿ ನೋಡಿದಾಗ ಇದು ಒಪ್ಪಿಗೆಯಾಗುತ್ತದೆ.

ಬಾಡಿಗೆ ತಾಯಿಬೇಕು. ಒಂಭತ್ತು ತಿಂಗಳು ತಮ್ಮ ಮನೆಯಲ್ಲೇ ಇದ್ದು ಮಗು ಹೆತ್ತು ಕೊಡಬೇಕು. ರಹಸ್ಯ ಕಾಪಾಡಲಾಗುತ್ತದೆ. ಒಳ್ಳೆಯ ಹಣ ಕೊಡಲಾಗುತ್ತದೆ ಎಂದು ಜಾಹೀರಾತು ಕೊಡುತ್ತಾರೆ. ಈ ಜಾಹೀರಾತು ನೋಡುವ ದೇವಕಿ ಹಣಕ್ಕಾಗಿ ಈ ಕೆಲಸ ಒಪ್ಪಿಕೊಳ್ಳುತ್ತಾಳೆ. ಮನೆಯ ಸಮಸ್ಯೆ ಬಗೆಹರಿಯುವಂತೆ ನೋಡಿಕೊಳ್ಳುತ್ತಾಳೆ. ಒಂಬತ್ತು ತಿಂಗಳು ರಘು ಮತ್ತು ಯಶೋಧಾ ಮನೆಯಲ್ಲಿ ರಹಸ್ಯವಾಗಿ ಉಳಿದುಕೊಂಡು ಮಗು ಹೆತ್ತು ಕೊಡಲು ಒಪ್ಪಿದರೂ ಮನೆಯಲ್ಲಿ ಯಾರಿಗೂ ತಾನು ಬಾಡಿಗೆ ತಾಯಿಯಾಗುತ್ತಿದ್ದೇನೆ ಎಂದು ಹೇಳುವುದಿಲ್ಲ. ತನ್ನ ಪ್ರಿಯಕರ ವಾಸುವಿಗೂ ಕೂಡಾ ಹೇಳುವುದಿಲ್ಲ. ಇಷ್ಟೊಂದು ದುಡ್ಡು ನಿನಗೆ ಹೇಗೆ ಸಿಕ್ಕಿತು ಎಂದು ಮನೆಯಲ್ಲಿ ಪ್ರಶ್ನೆ ಮಾಡಿದಾಗ ಸರಿಯಾದ ಉತ್ತರವನ್ನು ಕೊಡಲು ಆಗದೇ ಮುಂಬೈಯ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿದೆ ಅದಕ್ಕಾಗಿ ಮುಂಗಡ ಹಣವನ್ನು ಕೊಡಲಾಗಿದೆ ಎಂದು ಸುಳ್ಳು ಹೇಳುತ್ತಾಳೆ. ತಮ್ಮ ಮನೆಯಿಂದ ರಘು ಮತ್ತು ಯಶೋದಾ ಮನೆಗೆ ಬರುತ್ತಾಳೆ. ಅವರ ಮನೆಗೆ ಬಂದ ಮೇಲೂ ಕೂಡಾ ಅವಳಲ್ಲಿ ಗೊಂದಲಗಳು ಹೆಚ್ಚಾಗುತ್ತವೆ. ತಾನು ತೆಗೆದುಕೊಂಡ ಈ ಒಂದು ನಿರ್ಧಾರದಿಂದ ತನ್ನ ಮತ್ತು ಪ್ರಿಯಕರ ವಾಸುವಿನ ಮಧ್ಯ ತಪ್ಪು ಗ್ರಹಿಕೆಗಳು ಎದುರಾಗುತ್ತವೆಯಾ? ತನ್ನ ಸತ್ಯ ಗೊತ್ತಾಗುವುದೇ? ಗೊತ್ತಾದ ಮೇಲೆ ಅವನ ಪ್ರತಿಕ್ರಿಯೆಯೇನಾಗಬಹುದು? ದೇವಕಿಯನ್ನು ಒಪ್ಪಿಕೊಳ್ಳಬಹುದೇ? ನಿರಾಕರಿಸಬಹುದಾ? ದೇವಕಿ ತಾನು ತೆಗೆದುಕೊಂಡ ಈ ಒಂದು ದಿಟ್ಟ ಹೆಜ್ಜೆ ಅವಳ ಬಾಳಲ್ಲಿ ಏನೆಲ್ಲ ಸಮಸ್ಯೆಗಳಿಗೆ ಕಾರಣವಾಗಬಹುದು? ಎನ್ನುವುದೇ ಈ ಕಥೆಯ ಮುಖ್ಯ ಸಾರಾಂಶ.

ಕಥೆಯಲ್ಲಿ ದೇವಕಿಯು ತಾನು ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿ ಒಂಬತ್ತು ತಿಂಗಳುಗಳವರೆಗೆ ರಘು ಮತ್ತು ಯಶೋಧಾ ಮನೆಯಲ್ಲಿ ಇದ್ದು ಮಗುವನ್ನು ಹೆತ್ತು ಕೊಡುವುದಾಗಿ ಸಹಿ ಮಾಡಿರುತ್ತಾಳೆ. ಒಬ್ಬ ನುರಿತ ವೈದ್ಯೆಯಿಂದ ದೇವಕಿಗೆ ಗರ್ಭದಾನ ಮಾಡಲಾಗುತ್ತದೆ.ಈ ಕೆಲಸವಾದ ಮೇಲೆ ಗರ್ಭಿಣಿಯಾದ ಮೇಲೆ ಯಾವ ಯಾವ ಚಿಕಿತ್ಸೆಗಳನ್ನು, ಯಾವ ಯಾವ ಕಾಲಕ್ಕೆ ತೆಗೆದುಕೊಳ್ಳಬೇಕು. ಯಾವೆಲ್ಲಾ ಮುಂಜಾಗ್ರತ ಕ್ರಮಗಳನ್ನು ಅನುಸರಿಸಬೇಕು. ಅವರ ಆಹಾರ, ಬಟ್ಟೆ, ಮಾನಸಿಕ ಚೈತನ್ಯ ಓಡಾಟ. ಎಲ್ಲವನ್ನು ವ್ಯವಸ್ಥಿತವಾಗಿ ದೇವಕಿಗೆ, ರಘು, ಯಶೋಧಾಗೆ ತಿಳಿಸಿ ಹೇಳಲಾಗುತ್ತದೆ. ರಘು ಮತ್ತು ಯಶೋಧಾ ತಮಗೆ ತಮ್ಮದೇ ಆದ ಮಗು ಇನ್ನು ಒಂಭತ್ತು ತಿಂಗಳ ನಂತರ ತಮ್ಮ ಮಡಿಲಿಗೆ ಬರುತ್ತದೆ ಎಂದು ಸಂತೋಷಪಡುತ್ತಾರೆ. ಆದರೆ ದೇವಕಿಯ ಮನಸ್ಥಿತಿ ಬೇರೆಯದೇ ಆಗಿರುತ್ತದೆ ಇಲ್ಲಿಯೂ ಕೂಡ ಅವಳಿಗೆ ಗೊಂದಲಗಳು, ಉತ್ತರಿಸಲಾಗದಂತಹ ಪ್ರಶ್ನೆಗಳು ಕಾಡುತ್ತಿರುತ್ತವೆ. ತಾನು ತೆಗೆದುಕೊಂಡ ನಿರ್ಧಾರ ಸರಿಯಾ? ತಪ್ಪಾ? ಎಂದು ನಿರ್ಧರಿಸಲು ಆಗದಂತಹ ಪರಿಸ್ಥಿತಿಯಲ್ಲಿರುತ್ತಾಳೆ.

ಗರ್ಭಿಣಿಯಾದ ಮೇಲೆ ಒಮ್ಮೆ ತನ್ನ ಅಣ್ಣನ ಮನೆಗೆ ಹೋಗಬೇಕೆಂದು ಯಶೋದಾಗೆ ಹೇಳುತ್ತಾಳೆ. ಆಗ ಯಶೋಧಾ ಮೊದಲು ಒಪ್ಪಿಗೆ ಕೊಡುವುದಿಲ್ಲ ನಂತರ ಹೋಗಿ ಬೇಗ

ಬರಬೇಕು. ಹುಷಾರಾಗಿರಬೇಕೆಂದು ಒಲ್ಲದ ಮನಸ್ಸಿನಿಂದ ಕಳಿಸಿಕೊಡುತ್ತಾಳೆ. ಇತ್ತ ಮನೆಗೆ ಬರುವ ದೇವಕಿ ಮನೆಯಲ್ಲಿ ಅಣ್ಣ ಅತ್ತಿಗೆ, ಅಕ್ಕ ಎಲ್ಲರೂ ಸಂತೋಷವಾಗಿದ್ದಾರೆ. ಅವರಿಗೆ ನನ್ನಿಂದ ಸಂತೋಷ ಆಗಿದೆ. ಅವರ ಕಷ್ಟಗಳಿಗೆ ಪರಿಹಾರ ದೊರೆಯಿತೆಂದು ದೇವಕಿ ಸಂತೋಷಪಡುತ್ತಾಳೆ. ಅವಳ ಒಳಮನಸ್ಸಿನ ದುಃಖ ಪಡುತ್ತಿರುತ್ತಾಳೆ. ತಾನು ಅವರಿಗೆ ಮೋಸ ಮಾಡುತ್ತಿದ್ದೇನೆಂದು? ವ್ಯಥೆಪಡುತ್ತಾಳೆ. ಈ ಸಮಯದಲ್ಲಿ ಅವಳಿಗೆ ತನ್ನ ಗೆಳತಿ ಸುನೀತಾಳ ತಂದೆಯವರ ಭೇಟಿಯಾಗುತ್ತದೆ. ದೇವಕಿಯ ಚಲನವಲನಗಳ ಬಗ್ಗೆ ಸಂದೇಹ ಬಂದಿರುತ್ತದೆ. ಆಗ ದೇವಕಿ ಬಾಡಿಗೆ ತಾಯಿಯಾಗಲು ಇಂತಹ ನಿರ್ಧಾರ ತೆಗೆದುಕೊಳ್ಳಲು ಕಾರಣವೇನು? ಎಂದು ಎಲ್ಲ ವಿಷಯದ ಕುರಿತು ವಿವರವಾಗಿ ಹೇಳುತ್ತಾಳೆ. ತಾನು ಮಾಡಿದ್ದು ಸರಿನಾ? ತಪ್ಪಾ? ಎಂದು ಕೇಳುತ್ತಾಳೆ. ಕೆಲಸ ಆಗಿದೆ. ಆದ ಮೇಲೆ ಸರಿ ತಪ್ಪಿನ ಬಗ್ಗೆ ತಿಳಿದುಕೊಂಡು ಗೊಂದಲಕ್ಕೀಡಾಗಬಾರದು ಎಂದು ಮುಂದೆ ಹೇಗಾಗುತ್ತೋ ಆಗಲಿ ಎಂದು ಸಾಂತ್ವಾನ ಹೇಳುತ್ತಾರೆ.

ದೇವಕಿ ಮೂಲತಃ ಹಳೇಬಿಡಿನವಳು. ಹಳೇಬಿಡಿನಲ್ಲಿ ಒಂದು ಪುಟ್ಟ ಹೋಟೆಲ್ ಇಟ್ಟುಕೊಂಡಿರುತ್ತಾರೆ. ಆ ಹೋಟಲನ್ನು ನಂಬಿ ಜೀವನ ಮಾಡುತಿರುತ್ತಾರೆ. ತಮಗಿದ್ದ ಮೂವರು ಹೆಣ್ಣು ಮಕ್ಕಳಲ್ಲಿ ಇಬ್ಬರು ಬೆಂಗಳೂರಿನಲ್ಲಿ ಇದ್ದು ಇನ್ನೊಬ್ಬಳು ಸುಮತಿ ತಂದೆ ತಾಯಿಯೊಂದಿಗೆ ಇರುತ್ತಾಳೆ. ತಂದೆ ತಾಯಿಯರ ಪ್ರೀತಿಯ ಮಡಿಲಲ್ಲಿ ಬೆಳೆದಿರುವ ಮಗಳಾಗಿರುತ್ತಾಳೆ. ಸುಮತಿ ಸ್ವಭಾವತಃ ಒಳ್ಳೆಯ ಹುಡುಗಿ. ಎಲ್ಲರೊಂದಿಗೆ ನಕ್ಕು ನಗಿಸಿಕೊಂಡು ಇರುವ ಸ್ವಭಾವ ಸುಮತಿ. ಇದ್ದ ಕಡೆ ನಗುವಿನ ಹೊನಲು ಹರಿಯುತ್ತಿರುತ್ತದೆ. ಅಣ್ಣ ವಿಧ್ಯಾಧರನ ಮನೆಗೆ ಹೋದಾಗಲೆಲ್ಲ ಅಲ್ಲಿರುವ ಸುತ್ತ ಮುತ್ತಲಿನ ಜನರೊಂದಿಗೆ ಬೆರೆಯುವ ಬೆರೆತು ಒಂದಾಗುವಂತಹ ಕಲೆ ಸುಮತಿಗೆ ಕರಗತವಾಗಿರುತ್ತದೆ. ದೇವಕಿಯ ಅಕ್ಕನಿಗೆ ಮದುವೆಯ ವಯಸ್ಸು ಆದರೆ ಗಂಡು ಸಿಗುತ್ತಿಲ್ಲ. ಇದು ದೇವಕಿಗೆ ಬಾಡಿಗೆ ತಾಯಿಯಾಗಲು ತೆಗೆದುಕೊಂಡ ನಿರ್ಧಾರವಾಗುತ್ತದೆ ಕಥೆಯು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಕಥೆಯಲ್ಲಿ ವಾಸುವಿನ ಅಮೇರಿಕಾ ಯಾತ್ರೆ ಯಶಸ್ವಿಯಾಗುತ್ತದೆ. ಮುಂದೆ ದೇವಕಿಯ ಅಕ್ಕನಿಗೆ ಪೋಲಿಸ್ ಅಧಿಕಾರಿಯೊಂದಿಗೆ ಮದುವೆಯಾಗುತ್ತದೆ. ಅಣ್ಣ ವಿದ್ಯಾಧರನು ತನ್ನ ವೃತ್ತಿಯಲ್ಲಿ ಮುಂದುವರೆಯುತ್ತಾನೆ. ದೇವಕಿ ಮಗುವನ್ನು ಹೆತ್ತು ಕೊಡಲು ಯಶೋಧಾಳ ಮನೆಗೆ ಬರುತ್ತಾಳೆ. ದೇವಕಿ ಯಶೋಧಾಳ ಮನೆಗೆ ಬಂದ ಮೇಲೆ ಅಲ್ಲಿ ಹಲವು ಶೀತಲಸಮರಗಳು ನಡೆಯುತ್ತಿರುತ್ತವೆ. ಯಶೋಧಾ ತಮ್ಮ ಮಗುವಿನ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಲು ದೇವಕಿಗೆ ಪ್ರತಿಯೊಂದರಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಹಾಕುತ್ತಾಳೆ. ಚೆನ್ನಾಗಿ ಊಟ ಮಾಡುವುದು. ನಿದ್ದೆ ಮಾಡುವುದು. ಓಡಾಟ ಕುಳಿತುಕೊಳ್ಳುವುದು ಅತಿಯಾಗಿ ಮಾತನಾಡದಂತೆ. ಅತಿಯಾಗಿ ಓಡಾಡದಂತೆ. ಮಾತ್ರೆಗಳನ್ನು ತೆಗೆದುಕೊಳ್ಳುವುದು. ಹೀಗೆ ಪ್ರತಿಯೊಂದರಲ್ಲಿಯೂ ನಿಯಮಗಳನ್ನು ಜಾರಿಗೆ ತರುತ್ತಿರುತ್ತಾಳೆ.

ಇದು ತಾಯಿಯ ಸ್ಥಾನದಲ್ಲಿರುವ ಯಶೋಧಾಗೆ ತಾನು ಮಾಡುತ್ತಿರುವುದು ಸರಿಯೆನಿಸಿದರೂ, ದೇವಕಿಗೆ ಇದು ಸರಿಯೆನಿಸುವುದಿಲ್ಲ. ಅವಳಿಗೆ ಹೆಜ್ಜೆ ಹೆಜ್ಜೆಗೂ ಹೀಗೆ ನಿರ್ಬಂಧನೆಗಳನ್ನು ಹಾಕುವುದು ಇಷ್ಟವಿರುವುದಿಲ್ಲ. ಈ ಸಂದರ್ಭಗಳಲ್ಲಿ ದೇವಕಿ ಮತ್ತು ಯಶೋಧಾ ಇಬ್ಬರ ಮಧ್ಯೆಯು ಶೀತಲಸಮರ ಏರ್ಪಡುತ್ತಿರುತ್ತದೆ. ಇದಕ್ಕೆ ರಘು ಇಚ್ಛೆಯಿದ್ದರೂ ಇಬ್ಬರಿಗೂ ಏನೂ ಹೇಳದಂತಹ ಪರಿಸ್ಥಿತಿ ಅವನದಾಗಿರುತ್ತದೆ. ಹೀಗೆ ಇರುವಾಗ ಒಮ್ಮೆ ರಘು ಹಬ್ಬದ ಶುಭ ಸಂದರ್ಭದಲ್ಲಿ ದೇವಕಿ ಮತ್ತು ಯಶೋಧಾಗೆ ಸೀರೆಯನ್ನು ತಂದು ಉಡುಗೊರೆಯಾಗಿ ನೀಡುತ್ತಾನೆ. ಇದನ್ನು ಗಮನಿಸುವ ಯಶೋಧಾಗೆ ತನ್ನ ಗಂಡ ದೇವಕಿಗೆ ಹೆಚ್ಚಿನ ಬಲವನ್ನು ತೋರುತ್ತಿದ್ದಾನೆ. ಅವಳಿಗೆ ಸೀರೆ ಕೊಡಿಸುವ ಅಗತ್ಯವೇನಿತ್ತು? ತನ್ನನ್ನು ಅವಮಾನ ಮಾಡಬೇಕೆಂದೇ ಹೀಗೆ ನಡೆದುಕೊಳ್ಳುತ್ತಿದ್ದಾನೆಂದು? ಯಶೋಧಾ ಅಸಮಾಧಾನ ಗೊಳ್ಳುತ್ತಾಳೆ. ದೇವಕಿ ಮತ್ತು ರಘು ಇಬ್ಬರ ಮಧ್ಯೆ ಪ್ರೀತಿಯೇನಾದರೂ ಹುಟ್ಟಿಕೊಂಡಿರಬಹುದಾ? ಎಂದು ಕಳವಳಗೊಳ್ಳುತ್ತಾಳೆ. ಈ ಘಟನೆಯ ಬಳಿಕ ಯಶೋಧಾ ದೇವಕಿಯೊಂದಿಗೆ ಚೆನ್ನಾಗಿ ಮಾತನಾಡುವುದೇ ನಿಲ್ಲಿಸಿ ಬಿಡುತ್ತಾಳೆ. ಇದನ್ನು ಸಹಿಸದ ದೇವಕಿ ತಾನೇನು ಮಾಡಬಾರದ್ದೇನೋ, ಮಾಡಿದ್ದೇನೇನೋ ಅದಕ್ಕೆ ಹೀಗೆ ಮಾಡುತ್ತಿದ್ದಾಳೆ. ಇಂತಹ ಮನೆಯಲ್ಲಿ ತಾನಿರುವುದಿಲ್ಲವೆಂದು ಹೊರಗೆ ಹೋಗುತ್ತಾಳೆ. ಆಗ ಯಶೋಧಾ ತಡೆಯುವ ಮನಸ್ಸು ಮಾಡುವುದಿಲ್ಲ. ದೇವಕಿಗೆ ತಾನು ನಿರ್ಧಾರ ತೆಗೆದುಕೊಂಡು ಬಹಳ ತಪ್ಪು ಮಾಡಿದೇನೆಂದು ಒಳಗೊಳಗೆ ಸಂಕಟ ಅನುಭವಿಸುತ್ತಾಳೆ. ತನ್ನ ತಾಯಿಗೆ ನೋಡಬೇಕೆಂಬ ಆಸೆ ಆಗುತ್ತದೆ. ಆಗ ದೇವಕಿ ತನ್ನ ಗೆಳತಿಯ ತಂದೆಗೆ ತನ್ನ ಮನಸ್ಸಿನ ಆಸೆಯನ್ನು ಹೇಳುತ್ತಾಳೆ. ಆಗ ಅವರು ಅವಳನ್ನು ಹಳೇಬೀಡಿಗೆ ಕರೆದುಕೊಂಡು ಹೋಗುತ್ತಾರೆ. ಇಲ್ಲಿ ಕಥೆಯು ಹೊಸ ತಿರುವು ಪಡೆದುಕೊಳ್ಳುತ್ತಾದೆ.

ಹಳೇಬೀಡಿಗೆ ಹೋದ ಮೇಲೆ ಅವಳ ತಾಯಿಯನ್ನು ಬಿಗಿದಪ್ಪಿ ದುಃಖಿಸಿ ಅಳಬೇಕೆಂದು ದೇವಕಿ ಹಂಬಲಿಸುತ್ತಾಳೆ. ಆದರೆ ಹಾಗೆ ಮಾಡಲು ಅವಳಲ್ಲಿ ಶಕ್ತಿಯಿರುವುದಿಲ್ಲ. ತಾನು ತುಂಬ ಗರ್ಭಿಣಿಯಾಗಿದ್ದು, ಯಾರೆಂದು ಕೇಳಿದರೆ ಏನು ಹೇಳುವುದು ಎಂದು, ತನ್ನ ಅಸಹಾಯಕತೆಗೆ ತಾನೇ ಮರಗುತ್ತಾಳೆ. ಹಳೇಬೀಡಿನಿಂದ ವಾಪಸು ಬೆಂಗಳೂರಿಗೆ ಬರುತ್ತಾರೆ. ಆದರೆ ಯಶೋಧಾ ಮನೆಗೆ ಹೋಗುವುದಿಲ್ಲ. ಬೇರೊಂದು ಮನೆ ಮಾಡಿ ಅಲ್ಲಿ ಇರಲು ಪ್ರಾರಂಭಿಸುತ್ತಾಳೆ. ಯಶೋಧಾ ಮತ್ತು ರಘುಗೆ ಏನು ಮಾಡಬೇಕೆಂದು ಗೊತ್ತಾಗುವುದಿಲ್ಲ. ವೈದ್ಯರಿಗೂ ಕೂಡ ದೇವಕಿಯ ನಡೆ ಸರಿಯೆನಿಸುವುದಿಲ್ಲ. ತುಂಬು ಗರ್ಭಿಣಿಯಾದ ದೇವಕಿ ಯಾಕೆ ಇಂತಹ ನಿರ್ಧಾರ ತೆಗೆದುಕೊಂಡಳು ಎಂದು ತಿಳಿಯದಂತಹ ಪರಿಸ್ಥಿತಿಯಲ್ಲಿರುತ್ತಾರೆ. ಇತ್ತ ದೇವಕಿಯ ಗೆಳತಿಯ ತಂದೆ ತುಂಬು ಗರ್ಭಿಣಿಯ ಆರೈಕೆಯಲ್ಲಿ ತೊಡಗಿಕೊಂಡಿರುತ್ತಾರೆ. ಈ ಮಧ್ಯೆ ದೇವಕಿಯ ಅತ್ತಿಗೆ ಪದ್ಮಾಳನ್ನು ಸಂಪರ್ಕಿಸಿ ದೇವಕಿಯ ಕಥೆಯೆಲ್ಲವನ್ನೂ ಹೇಳುತ್ತಾರೆ. ನೊಂದಿರುವಂತಹ ಈ ಯುವತಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ.

ದೇವಕಿಯ ಅತ್ತಿಗೆ ಪದ್ಮಾ ಒಂದು ಸ್ವಸಹಾಯ ಸಂಘವನ್ನು ನೋಡಿಕೊಂಡು ಹೋಗುತ್ತಿದ್ದು ಸ್ಪಂದಿಸುವ ತುಡಿಯುವ ಮನಸ್ಸು ಪದ್ಮಾಳದಾಗಿರುತ್ತದೆ. ಸುನಿತಾರ ತಂದೆ ತಮಗೆ ತೀರಾ ಹತ್ತಿರದವರಾಗಿರುವುದರಿಂದ ಯಾವುದೇ ಪ್ರಶ್ನೆಯನ್ನು ಕೇಳದೇ ತಮ್ಮ ಕೈಯಿಂದ ಅಗುವಷ್ಟು ಸಹಾಯ ಮಾಡುತ್ತೇವೆಂದು ಹೇಳುತ್ತಾಳೆ. ಈ ಮಧ್ಯೆ ದೇವಕಿಯು ಎಲ್ಲಿರಬಹುದೆಂದು ಎಲ್ಲರ ಮನಸ್ಸಿನಲ್ಲಿಯೂ ಕಾಡುತ್ತಿರುತ್ತದೆ. ದೇವಕಿ ಮುಂಬೈಯಲ್ಲಿದ್ದರೆ ಯಾಕೆ ಮನೆಗೆ ಬರುತ್ತಿಲ್ಲ? ಅವಳು ಬರೀ ಫೋನಿನಲ್ಲಿಯೇ ಮಾತನಾಡುತ್ತಾಳೆ. ಯಾಕೆ? ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಳೆಂದು ದೇವಕಿ ಕೆಲಸ ಮಾಡುತ್ತಿದ್ದ ಕಾಲಸೆಂಟರ್‌ನಲ್ಲಿ ವಿಚಾರಣೆ ನಡೆಸಿದಾಗ ದೇವಕಿ ಯಾವ ಕಂಪನಿಯಲ್ಲಿಯೂ ಕೆಲಸ ಮಾಡುತ್ತಿಲ್ಲ ಬದಲಿಗೆ ಆ ಕಾಲ್‌ಸೆಂಟರ್‌ನಿಂದ ಬೇರೊಂದು ಉದ್ಯೋಗಕ್ಕೆ ಕಳಿಸಿಲ್ಲ ಎಂಬ ಮಾಹಿತಿ ತಿಳಿದುಬರುತ್ತದೆ. ಈ ಮಧ್ಯೆ ವಾಸು ಅಮೇರಿಕಾದಿಂದ ಬರುತ್ತಾನೆ. ತನ್ನ ಪ್ರೀತಿಯ ಹುಡುಗಿಯ ಬಗ್ಗೆ ತಿಳಿಯಲು ಬಯಸುತ್ತಾನೆ. ಆಗ ಅವನಿಗೆ ಎಲ್ಲವೂ ಅಸ್ಪಷ್ಟವಾದ ಮಾಹಿತಿ ಸಿಗುತ್ತದೆ. ಹೆಚ್ಚಿನ ವಿವರಣೆಗಾಗಿ ಹುಡುಕಾಟ ಮಾಡಿದಾಗ ದೇವಕಿಯು ಬಾಡಿಗೆ ತಾಯಿಯಾಗಲು ಒಪ್ಪಿಕೊಂಡಿರುವ ವಿಷಯ ತಿಳಿದುಬರುತ್ತದೆ. ತಾನು ನಂಬಿರುವ ಹುಡುಗಿ ಮನಸಾರೆ ಪರಿಸ್ಥಿತಿ, ಮದುವೆಯಾಗಿ ಜೀವನಪೂರ್ತಿ ಸಂತೋಷವಾಗಿರಬೇಕೆಂದು ಕನಸು ಕಟ್ಟಿರುವ ನನಗೆ ಇಷ್ಟೊಂದು ದೊಡ್ಡ ಮೋಸ ಮಾಡಬಹುದಾ? ಎಂದು ಚಿಂತಿಸಿ ಮಾನಸಿಕ ಭಿನ್ನತೆಗೆ ಒಳಗಾಗುತ್ತಾನೆ. ಇದರ ಮಧ್ಯೆ ಜಿಗುಪ್ಸೆಗೊಂಡು ಆತ್ಮಹತ್ಯೆಗೂ ಪ್ರಯತ್ನ ಪಡುತ್ತಾನೆ. ತಾನು ನಂಬಿರುವ ಹುಡುಗಿಯೇ ತನಗೆ ಮೋಸ ಮಾಡಿದಳೆಂದು ಈ ದಾರಿ ತುಳಿದಿರುತ್ತಾನೆ. ವಾಸು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿರುವ ಸುದ್ದಿ ತಿಳಿಯುತ್ತಿದ್ದಂತೆ ಪದ್ಮಾ ಬಂದು ಅವನನ್ನು ಸರಿಯಾದ ಸಮಯಕ್ಕೆ ಚಿಕಿತ್ಸೆ ಕೊಡಿಸಿ ಉಳಿಸಿಕೊಳ್ಳುತ್ತಾಳೆ.

ಇತ್ತ ದೇವಕಿಯ ಹೆರಿಗೆಯ ದಿನ ಸಮೀಪಿಸುತ್ತಿರುತ್ತದೆ. ಆ ಸಂದರ್ಭದಲ್ಲಿ ಸುನೀತಾಳ ತಂದೆ ಪದ್ಮಾಳನ್ನು ಒಂದು ಗೊತ್ತು ಮಾಡಿದ ನಿಗೂಢವಾಗಿರುವ ಸ್ಥಳಕ್ಕೆ ಕರೆಸಿ ದೇವಕಿಯನ್ನು ಭೇಟಿ ಮಾಡಿಸುತ್ತಾನೆ. ಆ ಗರ್ಭಿಣಿ ಹೆಂಗಸು ಯಾರಿರಬಹುದು? ಹೇಗೆ ಮೋಸ ಹೋಗಿರ ಬಹುದು? ತಾನು ಯಾವ ರೀತಿಯಲ್ಲಿ ಸಹಾಯ ಮಾಡಬಹುದು? ಎಂದೆಲ್ಲಾ ಯೋಚನೆ ಮಾಡುತ್ತಿರುವಾಗಲೇ ಎದುರಿಗಿದ್ದ ಹೆಣ್ಣು ಮಗಳನ್ನು ನೋಡಿದಾಗ ಪದ್ಮಾಳಿಗೆ ತನ್ನ ಕಣ್ಣುಗಳನ್ನೇ ನಂಬದಂತಹ ಪರಿಸ್ಥಿತಿ ಎದುರಾಗುತ್ತದೆ. ತಾನು ಮರುಕ ವ್ಯಕ್ತಪಡಿಸುತ್ತಿರುವ ಹೆಣ್ಣು ಬೇರೆ ಯಾರೋ ಆಗಿರಬಹುದೆಂದು ಊಹಿಸಿದವಳಿಗೆ, ದೇವಕಿಯನ್ನು ನೋಡಿ ದೊಡ್ಡ ಆಘಾತ ವಾಗಿರುತ್ತದೆ. ಪದ್ಮಾಳಿಗೆ ದೇವಕಿ ಯಾಕೆ ಹೀಗೆ ಮಾಡಿದಳೆಂದು ತಿಳಿಯದಿಲ್ಲ. ಮದುವೆ ಯಾಗದೇನೇ ಇಂಥ ಒಂದು ದೊಡ್ಡ ನಿರ್ಧಾರವನ್ನು ಯಾಕೆ ತೆಗೆದುಕೊಂಡಳು? ಆ ಹಿನ್ನೆಲೆ ಏನು? ಎಂದು ಎಲ್ಲವನ್ನು ವಿವರವಾಗಿ ತಿಳಿದುಕೊಂಡ ನಂತರ ದೇವಕಿಗೆ ಮನೆ ಮತ್ತು ಮನೆಯ ಸದಸ್ಯ ಒಳ್ಳೆದಾಗಲಿ ಎನ್ನುವ ಕಾರಣಕ್ಕೆ ಇಷ್ಟೊಂದು ದೊಡ್ಡ ಹೆಜ್ಜೆ ಇಟ್ಟು ದೊಡ್ಡ ತ್ಯಾಗವನ್ನೇ ಮಾಡಿದ್ದಾಳೆಂದು ಅವಳಿಗೆ ಹೆಮ್ಮೆಯಾಗುತ್ತದೆ. ಮನಸ್ಸಿನಲ್ಲಿ ದೇವಕಿಯು

ತಪ್ಪು ನಿರ್ಧಾರ ತೆಗೆದುಕೊಂಡಳಾ ಎಂದು ಕಳವಳ ಎನಿಸಿದರೂ ದೇವಕಿಯ ನಿರ್ಧಾರದಿಂದ ಅಸಮಾಧಾನಗೊಂಡರು. ದೇವಕಿಯ ಎದುರು ಅದನ್ನು ವ್ಯಕ್ತಪಡಿಸುವುದಿಲ್ಲ. ಹೀಗೆ ಕಥೆಯು ಮುಂದುವರೆಯುತ್ತಾ ಹೋಗುತ್ತದೆ.

ಕಥೆಯಲ್ಲಿ ದೇವಕಿಯ ತಂಗಿ ಸುಮತಿಯ ಪಾತ್ರವು ಕೂಡ ಅಲ್ಲಲ್ಲಿ ಪ್ರಾಶಸ್ತ್ಯವನ್ನು ಪಡೆದುಕೊಳ್ಳುತ್ತಿರುತ್ತದೆ. ಒಂದೊಮ್ಮೆ ಯಶೋಧಳ ತಮ್ಮ ಚೇತನ ಅವನಿಗೆ ಮತ್ತು ದೇವಕಿಯ ತಂಗಿ ಸುಮತಿ ಇಬ್ಬರ ಮಧ್ಯೆ ಪರಿಚಯವಾಗಿ ಮಾತುಕತೆ ಬೆಳೆದು ಆ ಮಾತುಕತೆ ಪ್ರೀತಿಗೆ ತಿರುಗುತ್ತದೆ. ಪ್ರೀತಿಸಿದ ಇಬ್ಬರು ಮದುವೆಯಾಗಬೇಕೆಂದು ಅಂದುಕೊಳ್ಳುತ್ತಾರೆ. ಅಂತೆಯೇ ತಮ್ಮ ಚೇತನ ತನ್ನ ಅಕ್ಕ ಯಶೋಧಾಗೆ ಪ್ರೀತಿಯ ವಿಷಯ ತಿಳಿಸುತ್ತಾನೆ. ತಮ್ಮ ಒಂದು ಹುಡುಗಿಯನ್ನು ಪ್ರೀತಿಸುತ್ತಿದ್ದಾನೆ ಅವನಿಗೆ ಮದುವೆ ಮಾಡಬೇಕೆಂದು ಅಂದುಕೊಳ್ಳುವಾಗ ಚೇತುವಿನ ಆಯ್ಕೆ ಹೇಗಿದೆಯೋ ನೋಡಬೇಕೆಂದು ಮನೆಗೆ ಕರೆಸಿಕೊಳ್ಳುತ್ತಾಳೆ. ಸುಮತಿಯ ಊರು, ಹಿನ್ನೆಲೆ ಎಲ್ಲವನ್ನು ಕೇಳುತ್ತಾಳೆ. ಯಶೋಧಾಗೆ ಸುಮತಿಯ ಊರು ಹಳೇಬೀಡು ಎಂದು, ತನಗೆ ಇಬ್ಬರು ಅಕ್ಕಂದಿರಿದ್ದಾರೆ ಎಂದು, ಹೇಳಿದಾಗ ಯಶೋಧಾಗೆ ಕೊಂಚ ಸಂದೇಹ ಬರುತ್ತದೆ. ಸುಮತಿಯ ಅಕ್ಕ ದೇವಕಿಯಿರಬಹುದಾ? ಎಂದು ಸಂಶಯ ಬರುತ್ತದೆ. ಆಗ ಸುಮತಿಗೆ ಈ ವಿಷಯವಾಗಿ ಕೇಳಿದಾಗ ಹೌದೆಂದು ಹೇಳುತ್ತಾಳೆ. ಇಲ್ಲಿಂದಲೇ ಸಮಸ್ಯೆಗಳು ಶುರುವಾಗುತ್ತವೆ. ಕಥೆಯಲ್ಲಿ ತಿರುವುಗಳು ಬರುತ್ತವೆ.

ದೇವಕಿ ಗರ್ಭದಾನ ಮಾಡಿಸಿಕೊಂಡ ನಂತರ ಕೆಲವು ತಿಂಗಳು ತಮ್ಮ ಮನೆಯಲ್ಲಿದ್ದು ಈಗ ಮತ್ತೆ ಬೇರೊಂದು ಕಡೆ ಇರಲು ಹೋಗಿದ್ದು ಯಶೋಧಾಳ ಅಸಮಾಧಾನಕ್ಕೆ ಕಾರಣವಾಗಿರುತ್ತದೆ. ಈ ಸಂದರ್ಭದಲ್ಲಿ ಸುಮತಿಯನ್ನು ನೋಡಿದ ಯಶೋಧಾ ಅವಳನ್ನು ತನ್ನ ತಮ್ಮನೊಂದಿಗೆ ಮದುವೆಯಾಗಲು ಇಷ್ಟ ಪಡುವುದಿಲ್ಲ. ದೇವಕಿಯು ತಮ್ಮ ನಂಬಿಕೆಗೆ ಮೋಸ ಮಾಡಿದಳು ಅವಳು ಕೆಟ್ಟವಳು ಎಂಬ ಭಾವನೆ ಯಶೋಧಾಳ ಮನಸ್ಸಿನಲ್ಲಿರುವುದರಿಂದ ಸುಮತಿಯಲ್ಲಿಯೂ ಕೂಡ ಅದೇ ತೆರನಾದ ಭಾವನೆ ಇರುತ್ತದೆ. ಸುಮತಿ ಒಂದು ವೇಳೆ ಮದುವೆಯಾಗಿ ಈ ಮನೆಗೆ ಬಂದರೆ ತಮಗೆ ಕಷ್ಟವಾಗುತ್ತದೆ ಎಂದು ಯಶೋಧಾಳು ಮನಸ್ಸಿನಲ್ಲಿ ವಿಚಾರ ಮಾಡಿ ಅವರ ಮದುವೆಗೆ ವಿರೋಧ ವ್ಯಕ್ತಪಡಿಸುತ್ತಾಳೆ. ಇತ್ತ ದೇವಕಿಗೆ ದಿನಗಳು ತುಂಬಿ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಅತ್ತಿಗೆ ಪದ್ಮಾ ಅವಳ ಜೊತೆಯಿದ್ದು ಹೆರಿಗೆ ಮಾಡಿಸುತ್ತಾಳೆ. ಕಥೆಯು ಇಲ್ಲಿಂದ ಹೊಸ ತಿರುವೊಂದನ್ನು ಪಡೆದುಕೊಳ್ಳುತ್ತದೆ. ಕೆಲವು ಹೊಸ ಪಾತ್ರಗಳು ಹುಟ್ಟಿಕೊಳ್ಳುತ್ತವೆ. ಕೆಲವು ಹಳೆಯ ಪಾತ್ರಗಳು ತಾವು ಮುಚ್ಚಿಟ್ಟಿರುವ ರಹಸ್ಯವನ್ನು ಕಾಪಾಡಿಕೊಂಡು ಬರಲು ಆಗದೇ ಹೊರಬೀಳುತ್ತವೆ. ಇಲ್ಲಿ ದೇವಕಿಯ ಅಣ್ಣ ವಿದ್ಯಾಧರನ ಜನ್ಮರಹಸ್ಯ ಹೊರಬೀಳುತ್ತದೆ. ವಿದ್ಯಾಧರನಿಗೆ ತನ್ನ ತಂದೆ ಎನಿಸಿಕೊಂಡವನಿಗೆ ಮದುವೆಯೇ ಆಗಿರಲಿಲ್ಲ ಎಂಬ ಸತ್ಯ ಗೊತ್ತಾಗುತ್ತದೆ. ಮದುವೆ ಆಗದೇನೇ ನಾನು ಹೇಗೆ ಜನ್ಮ ಪಡೆದೇ? ನಾನು ನನ್ನ ತಂದೆಯ ಮಗನಲ್ಲವೇ? ನನ್ನ ತಂದೆ ನನ್ನನ್ನು ಸಾಕಿದ್ದರೆ? ನನ್ನ ನಿಜವಾದ ಅಪ್ಪ ಅಮ್ಮ ಯಾರು? ನಾನು ಯಾರ ಮಗ? ಎಂಬೆಲ್ಲ ಪ್ರಶ್ನೆಗಳು

ಕಾಡುತ್ತವೆ. ತನ್ನ ತಂದೆಯಾರೆಂದು ತಿಳಿದುಕೊಳ್ಳಬೇಕೆಂಬ ಹಂಬಲ ಅವನಲ್ಲಿ ದಿನೇ ದಿನೇ ಹೆಚ್ಚಾಗಲು ಕಾರಣವಾಗುತ್ತದೆ.

ಇದೇ ಸಮಯಕ್ಕೆ ವಿದ್ಯಾಧರನಿಗೆ ಒಬ್ಬ ಶ್ರೀಮಂತ ವ್ಯಕ್ತಿಯ ಪರಿಚಯವಾಗುತ್ತದೆ. ವಿದೇಶದಿಂದ ಮರಳಿದ ಇತನಿಗೆ ದೇಶಿಯ ಹಂಬಲ ಇಲ್ಲಿನ ಪರಿಸರ ಆ ಮುಗ್ಧತೆ ಎಲ್ಲದರ ಮಧ್ಯೆ ತನ್ನ ಮುಪ್ಪಿನ ವಯಸ್ಸನ್ನು ಕಳೆಯಬೇಕೆಂಬ ಹಂಬಲದಿಂದ ದೇಶಕ್ಕೆ ಮರುಳುತ್ತಾನೆ. ಇವನಿಗೆ ವಿದ್ಯಾಧರನ ಪರಿಚಯವಾಗುತ್ತದೆ. ವಿದ್ಯಾಧರನಿಗೆ ನಾಟಕದಲ್ಲಿ ಆಸಕ್ತಿಯಿದ್ದುದರಿಂದ, ತನಗೂ ನಾಟಕದಲ್ಲಿ ಆಸಕ್ತಿಯಿದೆ ಎಂದು ಹೇಳಿಕೊಳ್ಳುತ್ತಾನೆ. ಇಬ್ಬರ ಮಧ್ಯೆ ಒಂದು ಒಳ್ಳೆಯ ಸಂಬಂಧ ಬೆಳೆಯುತ್ತದೆ. ಈ ವ್ಯಕ್ತಿಯು ಎಲ್ಲ ಇದ್ದೂ ಒಂಟಿತನವನ್ನು ಅನುಭವಿಸುತ್ತಿರುತ್ತಾನೆ. ತನ್ನ ಒಂಟಿತನ ಕಳೆಯಲು ತನ್ನ ತೋಟದ ಮನೆಗೆ ಬರುತ್ತಿರುತ್ತಾನೆ. ಅಲ್ಲಿಗೆ ಒಂದಾಗಲೊಮ್ಮೆ ವಿದ್ಯಾಧರನೊಂದಿಗೆ ಇರಬೇಕೆಂಬ ಬಯಕೆ ವ್ಯಕ್ತಪಡಿಸುತ್ತಾನೆ. ವಿದ್ಯಾಧರನಲ್ಲಿರುವ ಕಾಳಜಿ ತೋರಿಸುವ ಗುಣ ಪ್ರೀತಿಸುವ ಗುಣ ಅವನಿಗೆ ಇಷ್ಟವಾಗುತ್ತದೆ. ಅವನನ್ನು ತನ್ನ ಮಗನಂತೆ ಕಾಣಲು ಪ್ರಾರಂಭಿಸುತ್ತಾನೆ. ವಿದ್ಯಾಧರನ ಹೆಂಡತಿ ಮಗುವನ್ನು ನೋಡಲು ಭೇಟಿ ಮಾಡಿ ಮಾತನಾಡಿಸುವ ಇಚ್ಛೆಯನ್ನು ವಿದ್ಯಾಧರನಿಗೆ ಹೇಳುತ್ತಾನೆ. ಅದಕ್ಕೆ ಯಾವುದಾದರೂ ಶುಭ ಸಂದರ್ಭಗಳು ಬಂದಾಗ ತಮ್ಮನ್ನು ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿರುತ್ತಾನೆ. ಕಥೆಯಲ್ಲಿ ವಿದ್ಯಾಧರನಿಗಿದ್ದ ಪ್ರಶ್ನೆಗಳು ಹೆಚ್ಚಾಗಿ ಕಾಡಲಾರಂಭಿಸಿದಾಗ ಅವುಗಳಿಗೆ ಉತ್ತರಕ್ಕಾಗಿ ಹಾತೊರೆಯುತ್ತಾನೆ.

ಈ ಕುರಿತು ತನ್ನ ತಂದೆಗೆ ಪ್ರಶ್ನೆ ಮಾಡುತ್ತಾನೆ. ತನ್ನ ಹುಟ್ಟಿನ ಬಗ್ಗೆ ಕೇಳುತ್ತಾನೆ. ಇದಕ್ಕೆ ವಿದ್ಯಾಧರ ಬೇರೆಯಾರದ್ದೋ ಮಗುವಾಗಿರದೇ ತನ್ನ ತಮ್ಮನ ಹೆಂಡತಿ ದೇವಕಿಯ ತಾಯಿಯ ಮಗನಾಗಿರುವುದು ತಿಳಿದುಬರುತ್ತದೆ. ದೇವಕಿಯ ತಾಯಿಯು ಮದುವೆಗೂ ಮುಂಚೆ ಒಬ್ಬ ಶ್ರೀಮಂತ ಪ್ರೀತಿಸುತ್ತಿದ್ದಳು. ಈ ಶ್ರೀಮಂತನ ತೋಟದಲ್ಲಿ ಇವಳ ತಂದೆ ಕೆಲಸಗಾರನಾಗಿದ್ದ ವನ ಮಗಳಾಗಿರುತ್ತಾಳೆ. ಈ ಶ್ರೀಮಂತರಿಗೂ ಇವರ ಮಧ್ಯೆ ಜಾತಿ, ಅಂತಸ್ತುಗಳ ಅಂತರ ಬಂದಿರುವುದರಿಂದ ಪ್ರೀತಿಸುತ್ತಿದ್ದ ಇಬ್ಬರು ದೂರವಾಗಿರುತ್ತಾರೆ. ಅವರ ಮಧ್ಯೆ ದೈಹಿಕ ಸಂಪರ್ಕ ಏರ್ಪಟ್ಟು ಗರ್ಭಿಣಿಯಾಗುತ್ತಾಳೆ. ಗರ್ಭಿಣಿಯಾಗಿ ಹೆರಿಗೆಯಾದ ಮೇಲೆ ಅನೇಕ ಅವಮಾನಗಳನ್ನು ಅನುಭವಿಸುತ್ತಿರುವಾಗ ಮಗುವಿನೊಂದಿಗೆ ಆತ್ಮಹತ್ಯೆಗೆ ಯತ್ನಿಸುತ್ತಿರುವಾಗ, ತಾನು ಕಾಪಾಡಿ ಅವಳ ಹಿನ್ನೆಲೆ ತಿಳಿದು ಅವಳ ಜೀವನದಲ್ಲಿ ನಡೆದ ಇಂತಹ ಕಹಿ ಘಟನೆಯಿಂದ ಹೊರಬರುವಂತೆ ಹೇಳಿ ತನ್ನ ತಮ್ಮನೊಂದಿಗೆ ಆಕೆಯ ಮದುವೆ ಮಾಡುವುದರ ಮೂಲಕ ಅವಳ ಬಾಳಿಗೆ ಒಂದು ಹೊಸ ದಿಕ್ಕನ್ನು ಕೊಡುತ್ತಾನೆ. ಅವಳ ಮಗುವನ್ನು ತನ್ನ ಮಗುವೆಂದು ಹೇಳಿ ಸಾಕಿ ಬೆಳೆಸುತ್ತಿದ್ದೇನೆಂದು ಮುಚ್ಚಿಟ್ಟಿದ್ದ ಎಲ್ಲ ರಹಸ್ಯವನ್ನು ಹೊರ ಹಾಕುತ್ತಾನೆ. ಇದನ್ನು ಕೇಳುವ ವಿದ್ಯಾಧರನಿಗೆ ಅವನ ಮನಸ್ಸಿನಲ್ಲಿ ಸಾವಿರಾರು ಬಾಂಬುಗಳು ಒಮ್ಮೆಲೆ ಸ್ಫೋಟಗೊಂಡ ಅನುಭವವಾಗುತ್ತದೆ. ತನ್ನ ತಾಯಿ ಎದುರಿಗೆ ಇದ್ದರೂ ಅವಳನ್ನು ಗುರುತಿಸದಷ್ಟು ದೂರವಾದೆನಲ್ಲ. ಅವಳನ್ನು ತಾಯಿ ಎಂದು

ಅರಿಯದೇ ಹೋದೆನಲ್ಲ? ತನ್ನ ತಾಯಿ ಎದುರಿಗೆ ಇದ್ದರು ಅಮ್ಮ ಎಂದು ಕರೆಯಲು ಆಗುತ್ತಿಲ್ಲವಲ್ಲ ಎಂದು ಕೊರಗುತ್ತಾನೆ.

ಇದರ ಮಧ್ಯೆ ವಿದ್ಯಾಧರನಿಗೆ ಶ್ರೀಮಂತ ವ್ಯಕ್ತಿಯೊಬ್ಬರು ಭೇಟಿಯಾದಾಗ ತನ್ನ ಹಿಂದಿನ ಕಥೆಯನ್ನು ಹೇಳಿಕೊಂಡಿರುತ್ತಾರೆ. ಅವರು ಒಬ್ಬ ಹುಡುಗಿಯನ್ನು ಪ್ರೀತಿಸಿದ್ದು ಮದುವೆಯಾಗಬೇಕೆಂದಿರುವುದು ಅದು ತಪ್ಪಿ ಹೋಗಿ ತಾನು ಬೇರೊಬ್ಬಳೊಂದಿಗೆ ಮದುವೆಯಾಗಿದ್ದು ಅಲ್ಲಿ ಹೆಂಡತಿ, ಮಕ್ಕಳು, ಹಣ, ಐಶ್ವರ್ಯ ಎಲ್ಲವೂ ಇದ್ದರೂ ಅದರ ಮಧ್ಯೆ ಒಂಟಿತನವನ್ನು ಅನುಭವಿಸುತ್ತಿದ್ದುದ್ದು ಎಲ್ಲವನ್ನು ಕುರಿತು ಹೇಳಿಕೊಂಡಿರುತ್ತಾರೆ. ವಿದ್ಯಾಧರನಲ್ಲಿ ತನಗೆ ಮಗನ ರೂಪ ಕಾಣಿಸುತ್ತಿದ್ದ ಎಂದು ಪದೇ ಪದೇ ಹೇಳಿಕೊಳ್ಳುತ್ತಾರೆ. ಕಥೆಯಲ್ಲಿ ಒಂದು ಹೊಸ ತಿರುವಿನ ಪ್ರಾರಂಭವಾಗುತ್ತದೆ. ಮನೆಯಲ್ಲಿ ಶುಭಕಾರ್ಯ ನಡೆಯುತ್ತಿದ್ದು ಅದಕ್ಕೆ ಎಲ್ಲರೂ ಬಂದಿರುತ್ತಾರೆ. ದೇವಕಿಯ ತಂದೆ ತಾಯಿ ಎಲ್ಲರೂ ಬಂದಿರುತ್ತಾರೆ. ಅಲ್ಲಿಗೆ ಶ್ರೀಮಂತ ಗೆಳೆಯರು ಕೂಡ ಬಂದಿರುತ್ತಾರೆ. ಆ ಸಮಯದಲ್ಲಿ ಶ್ರೀಮಂತ ಗೆಳೆಯರು ದೇವಕಿಯ ತಾಯಿಯನ್ನು ಗುರುತಿಸುತ್ತಾರೆ. ಹಿಂದೆ ತಾವು ಅನುಭವಿಸಿದ ಮಾನಸಿಕ ಹಿಂಸೆಗಳು, ಎಲ್ಲವನ್ನೂ ಒಂದು ಕ್ಷಣಕ್ಕೆ ಮೆಲುಕು ಹಾಕಿಕೊಳ್ಳುತ್ತಾರೆ. ದೇವಕಿಯ ತಾಯಿಯೊಂದಿಗೆ ಮಾತನಾಡುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ತಾನು ಜೀವನದಲ್ಲಿ ಮತ್ತೊಮ್ಮೆ ಯಾರ ಮುಖ ನೋಡಬಾರದು ಎಂದುಕೊಂಡಿದ್ದೇನೋ ಅವರು ಮತ್ತೆ ಎದುರಾಗಿದ್ದಾರೆ. ತನ್ನೊಂದಿಗೆ ಮಾತನಾಡಬೇಕೆಂದಿದ್ದಾರೆ. ತನ್ನ ಜೀವನವನ್ನೇ ಹಾಳು ಮಾಡಿದ ಆ ವ್ಯಕ್ತಿಯನ್ನು ಹೇಗೆ ಮಾತನಾಡಿಸಲಿ ಎಂದು ತನ್ನಲ್ಲಿರುವ ಸಿಟ್ಟನ್ನೆಲ್ಲ ಹೊರ ಹಾಕುತ್ತಾಳೆ. ಅವಳ ಸಿಟ್ಟು ಸರಿಯಾದುದೇ ಆಗಿದೇ ಆದರೆ ತಾನು ಒಂದು ಬಾರಿ ಅವಳೊಂದಿಗೆ ಮಾತನಾಡಬೇಕಿದೆ ದಯವಿಟ್ಟು ಒಪ್ಪಿಕೊಳ್ಳುವಂತೆ ಹೇಳಿ ಎಂದು ದೇವಕಿಯ ತಂದೆ ಬಳಿ ಮಾತನಾಡುತ್ತಾನೆ. ಇವರು ಇಷ್ಟೊಂದು ಕೇಳುತ್ತಿರುವಾಗ ತಾನು ಒಪ್ಪಿಕೊಳ್ಳದೇ ಬೇರೆ ದಾರಿಯೇ ಇರುವುದಿಲ್ಲ. ಈ ಸಮಯದಲ್ಲಿ ಅವರಿಬ್ಬರು ಪ್ರಶಾಂತವಾದ ಸ್ಥಳಕ್ಕೆ ಹೋಗಿ ತಮ್ಮ ಜೀವನದಲ್ಲಿ ಬಂದ ಹೋದ ಕಹಿ ಘಟನೆಗಳನ್ನು ಹಂಚಿಕೊಳ್ಳುತ್ತಾರೆ. ಕೊನೆಗೆ ತನ್ನಿಂದಾದ ಪ್ರಮಾದಕ್ಕೆ ಕ್ಷಮೆ ಕೇಳುತ್ತಾನೆ. ಈ ಸಂದರ್ಭದಲ್ಲಿ ವಿದ್ಯಾಧರ ತನ್ನ ಸ್ವಂತ ಮಗನೆಂದು ತಿಳಿದು ಸಂತಸಗೊಳ್ಳುತ್ತಾನೆ. ಆದರೆ ಆ ಸಂತೋಷ ಹಂಚಿಕೊಳ್ಳುವಂತಿ ರುವುದಿಲ್ಲ. ಹೀಗಾಗಿ ತನ್ನಿಂದ ಇಷ್ಟೊಂದು ಅವಮಾನ ಹಿಂಸೆ ಅನುಭವಿಸಿದ ದೇವಕಿಯ ತಾಯಿಗೂ ತನ್ನ ಮಗ ವಿದ್ಯಾಧರನಿಗೂ ಕ್ಷಮ ಕೇಳುತ್ತಾನೆ.

ಕೊನೆಯಲ್ಲಿ ತನ್ನ ಹೆಸರಿನಲ್ಲಿರುವ ಆಸ್ತಿಯನ್ನು ವಿಧ್ಯಾಧರನ ಹೆಸರಿಗೆ ಬರೆದು ಅಲ್ಲಿಂದ ಹೊರಟು ಹೋಗುತ್ತಾನೆ. ವಿದ್ಯಾಧರನಿಗೆ ಬಯಸದೇ ಬಂದ ಭಾಗ್ಯಕ್ಕೆ ಸಂತೋಷಪಡಬೇಕೋ, ದುಃಪಡಬೇಕೋ ಒಂದು ತಿಳಿಯದ ಗೊಂದಲದ ಗೂಡಾಗಿರುತ್ತಾನೆ. ಇತ್ತ ದೇವಕಿಯ ತಂದೆಗೆ ದೇವಕಿಯ ತಾಯಿಗೂ ಆ ಶ್ರೀಮಂತ ವ್ಯಕ್ತಿಗೂ ಯಾವ ರೀತಿಯಾದ ಸಂಬಂಧವಿರ ಬಹುದು. ಅವನನ್ನು ಕಂಡು ಇವಳೇಕೆ ಹೀಗೆ ವರ್ತನೆ ಮಾಡುತ್ತಿದ್ದಳು. ಹೀಗೆ ಅನೇಕ

ವಿಚಾರಗಳನ್ನು ತನ್ನ ಮನಸ್ಸಿನಲ್ಲಿ ತಂದುಕೊಂಡು ದೇವಕಿಯ ತಾಯಿಗೆ ನಿಜಾಂಶ ಹೇಳಬೇಕೆಂದು ಕೇಳಿಕೊಳ್ಳುತ್ತಾನೆ. ಆಗ ಅನಿವಾರ್ಯವಾಗಿ ದೇವಕಿಯ ತಾಯಿಯು ತಮ್ಮಿಬ್ಬರ ಕುರಿತು ಹೇಳುತ್ತಾಳೆ. ಇದನ್ನು ಕೇಳುವ ದೇವಕಿಯ ತಂದೆ ಬೆನ್ನಿ ಹಿಂದೆ ನಡೆದಂತಹ ಈ ಮೋಸದಾಟಕ್ಕೆ ತಾನು ಬಲಿಯಾದನೆಲ್ಲ. ತನ್ನೊಂದಿಗೆ ಇಂತಹ ಅನ್ಯಾಯ ಆಗಬೇಕಿತ್ತಾ, ತನ್ನ ಅಣ್ಣನು ಈ ಮೋಸದಲ್ಲಿ ಭಾಗಿಯಾದನಲ್ಲಾ ಎಂದು ಮನಸ್ಸಿನಲ್ಲಿ ಕೊರಗುತ್ತಾನೆ. ತನಗೆ ದುಃಖ ನೀಡಿದ ಹೆಂಡತಿ ಮತ್ತು ಅಣ್ಣನಿಂದ ದೂರ ಹೋಗಲು ನಿರ್ಧಾರಿಸುತ್ತಾನೆ. ಕಥೆಯು ಹೀಗೆ ಮುಂದುವರೆಯುತ್ತಿರುತ್ತದೆ.

ಕಥೆಯ ಇನ್ನೊಂದು ಭಾಗವಾಗಿ ದೇವಕಿಯು ಮಗುವನ್ನು ಹೇರುತ್ತಾಳೆ. ಆ ಮಗುವನ್ನು ಯಶೋಧಾ ಮತ್ತು ರಘು ಅವರಿಗೆ ಒಪ್ಪಿಸುವುದಿಲ್ಲ. ತನ್ನಲ್ಲಿಯೇ ಇಟ್ಟುಕೊಳ್ಳುತ್ತಾಳೆ. ಇದರ ಮಧ್ಯೆಯೆ ಯಶೋಧಾಳ ಅತ್ತೆಯ ಪ್ರವೇಶವಾಗುತ್ತದೆ. ಯಶೋಧಾ ಮತ್ತು ರಾಜೇಶ್ವರಿಯ ಇಬ್ಬರು ಅತ್ತೆ ಸೊಸೆ ಇವರ ಮಧ್ಯೆ ಒಳ್ಳೆಯ ಸಂಬಂಧವಿರುವುದಿಲ್ಲ. ರಾಜೇಶ್ವರಿ ಒಬ್ಬ ಪ್ರಭಾವಿ ವ್ಯಕ್ತಿಯಾಗಿರುತ್ತಾಳೆ. ಅವಳಿಗೆ ತನ್ನ ಮಗ ರಘು ತಾನು ಹೇಳಿದ ಹುಡುಗಿಯೊಂದಿಗೆ ಮದುವೆ ಮಡಿಕೊಳ್ಳಬೇಕೆಂದು ಆಸೆ ಇಟ್ಟುಕೊಂಡಿರುತ್ತಾಳೆ. ಆದರೆ ರಘು ಮಾತ್ರ ತಾಯಿಯ ಆಸೆಯನ್ನು ಪೂರೈಸದೇ ಪ್ರೀತಿಸಿದ ಹುಡುಗಿ ಯಶೋಧಾಳೊಂದಿಗೆ ವಿವಾಹವಾಗಿರುತ್ತಾನೆ. ಇದೇ ಕಹಿಯನ್ನು ಮನಸ್ಸಿನಲ್ಲಿಟ್ಟುಕೊಂಡು ರಾಜೇಶ್ವರಿ ತನ್ನ ಮಗ ಮತ್ತು ಸೊಸೆಯ ಮೇಲೆ ದ್ವೇಷ ಸಾಧಿಸುತ್ತಿರುತ್ತಾಳೆ. ಆದ್ದರಿಂದ ಮಗ ಸೊಸೆಯ ಜೀವನದಲ್ಲಿ ನಡೆಯುತ್ತಿರುವ ವಿದ್ಯಾಮಾನಗಳನ್ನು ತಿಳಿದುಕೊಂಡು, ದೇವಕಿಯ ಮನೆಯಲ್ಲಿರುವ ಮಗುವನ್ನು ಕದ್ದು ಮುಚ್ಚಿ ರಾತ್ರಿಯ ವೇಳೆಯಲ್ಲಿ ಅಪಹರಿಸಿಕೊಂಡು ಬಂದಿರುತ್ತಾರೆ. ಮುಂದೆ ತನ್ನ ಮನೆಯಲ್ಲೇ ಇಟ್ಟುಕೊಂಡು ಸಾಕುತ್ತಾಳೆ. ಇತ್ತ ರಘು ಯಶೋಧಾ ತಮ್ಮ ಮಗುವಿನ ಮುಖವನ್ನು ನೋಡಲು ಕಾತರಿಸುತ್ತಾರೆ.

ಇದರ ಮಧ್ಯೆ ಸುಮತಿಯ ಕಥೆಯ ತೆರೆದುಕೊಳ್ಳುತ್ತದೆ. ಸುಮತಿ ಮತ್ತು ಚೇತನ ಇಬ್ಬರು ಇಷ್ಟಪಟ್ಟು ಮದುವೆಯಾಗಬೇಕೆಂದಿರುತ್ತಾರೆ. ಆದರೆ ಒಂದು ಸಮಸ್ಯೆಯಲ್ಲಿ ಸಿಕ್ಕಿಹಾಕಿಕೊಂಡು ಚೇತು ಜೈಲು ಸೇರಿಬೇಕಾಗುತ್ತದೆ. ಸುಮತಿ ತಾನು ಇಷ್ಟೆಲ್ಲ ಕಷ್ಟಗಳಿಗೆ ಒಳಗಾಗಬೇಕಾಯಿತಲ್ಲ ಎಂದು ವ್ಯಥೆ ಪಡುತ್ತಾಳೆ. ಇತ್ತ ವಾಸು ತಾನು ಇಷ್ಟ ಪಟ್ಟ ಹುಡುಗಿ ತನಗೆ ಮೋಸ ಮಾಡಲು ಕಾರಣವೇನು? ಯಾಕೆ ಹೀಗಾಯಿತು ಎಂದು, ಎಲ್ಲ ವಿಚಾರವನ್ನು ತಿಳಿದುಕೊಂಡು, ದೇವಕಿ ತನ್ನ ಯಶಸ್ವಿಗಾಗಿ ಇಂತಹ ದೊಡ್ಡ ತ್ಯಾಗ ಮಾಡಿದ್ದಾಳಲ್ಲ ಎಂದು, ಇಂತಹ ತ್ಯಾಗ ಮಾಡಿದ ದೇವಕಿಯ ಬಗ್ಗೆ ತಾನು ತಪ್ಪು ತಿಳಿದುಕೊಂಡೆನಲ್ಲ ಎಂದು ವ್ಯಥೆ ಪಡುತ್ತಾನೆ. ದೇವಕಿಯ ಜೊತೆ ಇರಲು ಬಂದು ಬಿಡುತ್ತಾನೆ.

ಕಥೆಯಲ್ಲಿ ಪ್ರಭಾವಿ ವ್ಯಕ್ತಿಯಾದ ರಾಜೇಶ್ವರಿಯು ಹಲವು ಸವಾಲುಗಳನ್ನು ಮಗ ಮತ್ತು ಸೊಸೆಯ ಮುಂದೆ ಇಡುತ್ತಾಳೆ. ಕಷ್ಟಗಳ ಮೇಲೆ ಕಷ್ಟಗಳನ್ನು ಕೊಡುತ್ತಾಳೆ. ಸಂಚುಗಳನ್ನು ರೂಪಿಸಿ ಯಶೋಧಾ, ರಘು, ದೇವಕಿ ಹೀಗೆ ಎಲ್ಲರನ್ನು ಆಟ ಆಡಿಸುತ್ತಾಳೆ. ಆದರೆ

ಕಥೆಯಲ್ಲಿ ಕೊನೆಗೆ ರಾಜೇಶ್ವರಿಯನ್ನು ಪೋಲಿಸರು ಬಂಧಿಸುತ್ತಾರೆ. ಯಶೋಧಾಗೆ ಎರಡು ಮಕ್ಕಳು ಸಿಕ್ಕುತ್ತವೆ. ದೇವಕಿ ವಾಸು ಹೀಗೆ ಎಲ್ಲರ ಬದುಕಿನಲ್ಲಿಯೂ ಸಂತೋಷವಾಗಿ ಜೋಗುಳ ಧಾರಾವಾಹಿಯು ಕೊನೆಯಲ್ಲಿ ಸುಖಾಂತ್ಯಗೊಳ್ಳುತ್ತದೆ.

ವಿಶ್ಲೇಷಣೆ

ಧಾರಾವಾಹಿಯಲ್ಲಿ ತಾಯ್ತನಕ್ಕೆ ಸಮಾಜದಲ್ಲಿರುವ ಮಹತ್ವವನ್ನು ಕುರಿತು ವಿವರಣೆ ನೀಡುತ್ತದೆ. ಒಂದು ಹೆಣ್ಣಿನ ಜೀವನದಲ್ಲಿ ತನ್ನ ವೈಯಕ್ತಿಕ ನೆಲೆಗಳಿಗಿಂತ ಸಾಮಾಜಿಕ ಸ್ಥಾನಗಳಲ್ಲಿಯೇ ವ್ಯವಸ್ಥೆ ಕಟ್ಟಿರುವುದರಿಂದ ಇದರಿಂದಾಗಿ ವೈಯಕ್ತಿಕವಾದ ಹಲವು ರೀತಿ ನೀತಿಗಳು ಸಾಮಾಜಿಕ ನಿಯಮಗಳಿಂದ ನಿಯಂತ್ರಣಕ್ಕೆ ಒಳಗಾಗುತ್ತವೆ. ಹೆಣ್ಣಿನ ಜೀವನದ ವೈಯಕ್ತಿಕ ಗಳಿಗೆಗಳಾದ ಮದುವೆ, ಶೋಭಾನ, ತಾಯ್ತನ ಮುಂತಾದ ಮೌಲ್ಯಗಳು ಜೀವನದ ಮೌಲ್ಯಗಳಾಗಿ ಸಾರ್ವತ್ರಿಕವಾಗಿ ಮಾತನಾಡಿಕೊಳ್ಳುವ ಘನತೆಯ ವಿಚಾರಗಳಾಗುತ್ತವೆ. ಅಂತಹ ವಿಚಾರಗಳ ಮೂಲಕವೇ ಆಕೆಯ ಶ್ರೇಷ್ಠತೆಯನ್ನು ವಿವರಿಸುತ್ತಾರೆ. ಹೆಣ್ಣಿಗೆ ಅವಳ ಬದುಕಿನ ಪ್ರತಿಯೊಂದು ನೆಲೆಯಲ್ಲಿಯೂ ಈ ರೀತಿಯಾದ ಶ್ರೇಷ್ಠತೆ ಕನಿಷ್ಠತೆಗೆ ಒಳಗಾಗುವಂತೆ ಪಿತೃಪ್ರಧಾನ ವ್ಯವಸ್ಥೆ ರೂಪಿಸುತ್ತಲೇ ಬರುತ್ತಲಿದೆ. ಹೆಣ್ಣಿಗೆ ಮದುವೆಯೆಷ್ಟು ಪ್ರಾಮುಖ್ಯ ವಾಗಿರುತ್ತದೆಯೋ ಅಷ್ಟೇ ಪ್ರಾಮುಖ್ಯತೆ ತಾಯ್ತನಕ್ಕೆ ನೀಡಲಾಗಿದೆ.

ಹೆಣ್ಣು ಮದುವೆಯಾದ ಮೇಲೆ ಮಗುವಿನ ಜನ್ಮ ನೀಡದೇ ಹೋದರೆ ಅವಳಿಗೆ "ಬಂಜೆ" ಎಂಬ ಶಬ್ದವನ್ನು ಹೆಸರನ್ನು ಹಚ್ಚಿ ಕರೆಯಲಾಗುತ್ತದೆ. "ಬಂಜೆ" ಎಂಬ ಶಬ್ದ ಕೇವಲ ಮಹಿಳೆಯರಿಗೆ ಮಾತ್ರ ಮೀಸಲಿರಿಸಿ ಪುರುಷನಿಗೆ ಈ ವಲಯದಿಂದ ದೂರವಿಟ್ಟಿರುವ ಹುನ್ನಾರ ಎದ್ದು ಕಾಣುತ್ತದೆ. ಎಲ್ಲ ನೆಲೆಗಳಿಂದಲೂ ಹೆಣ್ಣಿಗೆ ಅವಮಾನ ಶೋಷಣೆಯನ್ನು ಅನುಭವಿಸಬೇಕು. ಆ ಶಬ್ದದಿಂದ ಹೊರಬರಲು ಪಡುವ ಕಷ್ಟಗಳನ್ನು ಈ ಧಾರಾವಾಹಿಯಲ್ಲಿ ಚಿತ್ರಿಸಲಾಗಿದೆ. ಮಹಾನಗರದಲ್ಲಿ ವಾಸವಿರುವ ಶ್ರೀಮಂತ ಮನೆ ಯಾವುದಕ್ಕೂ ಕೊರತೆ ಯಿರದಿದರೂ ತಮಗೆ ಒಂದು ಮಗು ಇಲ್ಲವೆಂಬ ಕೊರಗು ಅವಳಲ್ಲಿ ಕಾಡುತ್ತಿರುತ್ತದೆ. ಇನ್ನೊಂದು ಕಡೆ ಮಧ್ಯಮ ವರ್ಗದ ಕುಟುಂಬ ಹಣವಿಲ್ಲದೇ ಪರದಾಡುವಂತಹ ಪರಿಸ್ಥಿತಿ. ಇಂತಹ ಸಮಯದಲ್ಲಿ ಬಾಡಿಗೆ ತಾಯಿಯಾಗಬೇಕೆಂಬ ಜಾಹೀರಾತು ನೋಡಿ ತನ್ನೆಲ್ಲಾ ಸಂತೋಷಗಳನ್ನು ಬಲಿ ಕೊಟ್ಟು ತ್ಯಾಗ ಮಾಡುವ ದೇವಕಿಯ ಪಾತ್ರ ಹೆಣ್ಣು ಎಲ್ಲ ತ್ಯಾಗಕ್ಕೂ ಸಿದ್ಧಳಾಗಬೇಕು ಎಂಬುದನ್ನು ಈ ಕಥೆಯಲ್ಲಿ ಕಟ್ಟಿಕೊಡಲಾಗಿದೆ.

ಕಥೆಯ ನಿರ್ದೇಶಕರು ವಿನುಬಳಂಜ ಅವರದ್ದು. ಸಂಭಾಷಣೆ ಸತ್ಯಮೂರ್ತಿಯವರದಾಗಿದ್ದು; ಕಿರುತೆರೆಯ ಕಲಾವಿದರಾದ ಮಂಜುನಾಥ ಹೆಗಡೆ, ಅಪರ್ಣಾ ನಂದಿನಿ, ಆರ್ಯನ್, ಗ್ರೀಷ್ಮಾ ಜ್ಯೋತಿರೈ, ಸುರೇಶರೈ, ಸುಂದರಶ್ರೀ, ಸಿದ್ಧರಾಜ ಕಲ್ಯಾಣಕರ್ ಮುಂತಾದವರ ಪರಿಣಾಮಕಾರಿ ಅಭಿನಯದಲ್ಲಿ ಮೂಡಿಬಂದಿದೆ.

ಮಗುವಿಲ್ಲದ ತಾಯಿಯ ಗೊಂದಲ, ಅವಮಾನಗಳ ನಡುವೆ ನವಿರಾದ ಪ್ರೇಮಕತೆ, ಹಣ, ಯಶಸ್ಸು ಮತ್ತು ಭಾವನೆಗಳ ನಡುವೆ ಹುಡುಗಿಯೊಬ್ಬಳ ತಲ್ಲಣಗಳು ಈ ಧಾರಾವಾಹಿಯಲ್ಲಿ

ಚಿತ್ರಿತವಾಗಿವೆ. ಇತ್ತೀಚಿನ ದಿನಗಳಲ್ಲಿ ಬೇಡಿಕೆಯನ್ನು ಪಡೆದುಕೊಳ್ಳುತ್ತಿರುವ "ಬಾಡಿಗೆ ತಾಯಿ" ಕಲ್ಪನೆಯನ್ನು ಕಥಾವಸ್ತುವಾಗಿ ಕಟ್ಟಿಕೊಡುತ್ತಿದೆ. ಭಾರತದಲ್ಲಿ ಬಾಡಿಗೆ ತಾಯಿಯ ಕಲ್ಪನೆಯ ಕುರಿತು ಒಂದು ಸೂಕ್ಷ್ಮವಾದ ದೃಷ್ಟಿಕೋನವಾಗಿ ಇದು ಮೂಡಿ ಬಂದಿದೆ.

ಭಾರತದಲ್ಲಿ ಸಂತಾನ ಆರೋಗ್ಯ : ಬಾಡಿಗೆ ತಾಯಿಯ ಕಲ್ಪನೆ

"ಜೋಗುಳ" ಧಾರಾವಾಹಿಯಲ್ಲಿ ಚಿತ್ರಿಸಲಾಗಿರುವ "ಬಾಡಿಗೆ ತಾಯಿ"ಯ ಕಲ್ಪನೆಯು ಇಂದು ಭಾರತದಲ್ಲಿ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಭಾರತದಲ್ಲಿ ಸಂತಾನ ಪ್ರವಾಸೋದ್ಯಮದ ಕಾಲವಾಗಿದೆ. ಒಂದು ಅಂದಾಜಿನಂತೆ ವರ್ಷಕ್ಕೆ ಎರಡೂವರೆ ಸಾವಿರ ಕೋಟಿ ರೂಪಾಯಿ ವಹಿವಾಟಿನ ಉದ್ಯಮವಾಗಿದೆ. ಇದಕ್ಕೆ ಹೆಚ್ಚಾಗಿ ಮಕ್ಕಳಾಗದ ವಿದೇಶಿಯರು ನೇರ ಭಾರತಕ್ಕೆ ಬಂದು ಬಾಡಿಗೆ ತಾಯಿಯ ಗರ್ಭದಲ್ಲಿ ಭ್ರೂಣವನ್ನು ಹಾಕಿ ಹುಟ್ಟಿದ ಬಳಿಕ ಮಗುವನ್ನು ಎತ್ತಿಕೊಂಡು ಹೋಗಬಹುದು. ಬಾಡಿಗೆ ತಾಯಿಯಾಗಲು ೨ ರಿಂದ ೩ ಲಕ್ಷ ರೂಪಾಯಿಗಳನ್ನು ನಿಗದಿಗೊಳಿಸಿರುತ್ತಾರೆ.

ಮೂಲತಃ ಬಾಡಿಗೆ ತಾಯಿಯ ಉದ್ಯಮದ ಹುಟ್ಟು ಅಮೇರಿಕಾದಲ್ಲಿ. ೧೯೯೨ ಇದು ಹೆಚ್ಚು ಜನಪ್ರಿಯಗೊಂಡಿತು. ೪೦೦೦ ಮಕ್ಕಳು ಆ ವರ್ಷ ಜನಿಸಿದವು. ಅಲ್ಲಿ ಬಾಡಿಗೆ ತಾಯಿಗೆ ೧೫,೦೦೦ ಡಾಲರ್ ಏಜೆನ್ಸಿಗೆ ೩೦,೦೦೦ ಡಾಲರ್ ಕೊಡಬೇಕು. ಜೊತೆಗೆ ಚಿಕಿತ್ಸೆಯ ವೆಚ್ಚ ಸೇರಿ ಒಟ್ಟು ಪ್ರಕ್ರಿಯೆಗೆ ತಗಲುವ ಖರ್ಚು ಸುಮಾರು ೭೦-೮೦ ಸಾವಿರ ಡಾಲರ್ (೩೫-೪೦ ಲಕ್ಷ ರೂಪಾಯಿ).

ಭಾರತದಲ್ಲಿ ಇಂದು ಬಾಡಿಗೆ ತಾಯಿಯರ ಬಗ್ಗೆ ಹೆಚ್ಚಿನ ಒಲವನ್ನು ವಿದೇಶಿಯರು ಇಟ್ಟುಕೊಂಡು ಬರುತ್ತಿದ್ದಾರೆ. "ಬೇಬಿ ಬೂಮಗೆ" ಹೆಸರಾಗಿರುವ ಭಾರತದಲ್ಲಿ ಸಂತಾನಹೀನತೆಗೆ ಚಿಕಿತ್ಸೆ ನೀಡಲು ನೂರಾರು ಆಸ್ಪತ್ರೆಗಳಿಗೆ. ಈ ಆಸ್ಪತ್ರೆಗಳಿರುವುದು ಪ್ರಮುಖ ಮೆಟ್ರೊಗಳಾದ ಮುಂಬೈ, ದೆಹಲಿ, ಕೊಲ್ಕತ್ತಾ, ಬೆಂಗಳೂರು, ಚೆನ್ನೈಗಳಲ್ಲಿ. ಆದರೆ ಜಗತ್ತಿನ ಮುಂದುವರಿದ ರಾಷ್ಟ್ರಗಳ ಮಕ್ಕಳಿಲ್ಲದ ದಂಪತಿಗಳು ಅಭಿವೃದ್ಧಿಶೀಲ ದೇಶದ ಗರ್ಭಧಾರಣಾ ನೆರವು ಕೇಂದ್ರಗಳಾದ ಅಹ್ಮದಾಬಾದ್, ಹೈದರಾಬಾದ್, ಭೂಪಾಲ್, ಇಂದೂರ್ ಮೊದಲಾದ ಕಡೆಗಳಲ್ಲಿ ಮಗುವನ್ನು ಹೊರಲು ಆಸಕ್ತವಾದ ಗರ್ಭ ಹೊಂದಿದವರನ್ನು ಪ್ರೋತ್ಸಾಹಿಸುವ ಚಟುವಟಿಕೆಗಳು ಉದ್ಯಮವಾಗಿ ನಡೆಯುತ್ತಿವೆ. ಇಂಗ್ಲೀಷ್ ಮಾತನಾಡಬಲ್ಲಂಥ ಪರಿಣಿತ ವೈದ್ಯರು ಇಸ್ರೇಲಿನ ಪುರುಷ ಸಲಿಂಗಿ ದಂಪತಿಯಿರಲಿ ಅಥವಾ ಫರಿಷ್‌ನ ಮಹಿಳಾ ಸಲಿಂಗಿ (ಲೆಸ್ಬಿಯನ್) ದಂಪತಿಯಿರಲಿ ಮುಗ್ಧ ಮಗುವಿನ ಪೋಷಕರಾಗಲು ನೆರವು ನೀಡಬಲ್ಲ ಸಿದ್ಧಹಸ್ತರು ಇಲ್ಲಿ ಸಾಕಷ್ಟು ಮಂದಿ ಇದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತದಲ್ಲಿ ಈ ಇಡೀ ಪ್ರಕ್ರಿಯ ಬಹಳ ಅಗ್ಗದಲ್ಲಿ ನಡೆಯುತ್ತದೆ(ಸುಧಾ ಡಿಸೆಂಬರ್ ೧೮.೨೦೦೮ರ ಸಂಚಿಕೆ).

ಚಲನ ಚಿತ್ರಗಳಲ್ಲಿ ಬಾಡಿಗೆ ತಾಯಿಯ ಕಲ್ಪನೆ

೨೦೦೧ರಲ್ಲಿ ಸಲ್ಮಾನ್‌ಖಾನ್ ರಾಣಿ ಮುಖರ್ಜಿ, ಪ್ರೀತಿ ಜಿಂಟಾ ಅಭಿನಯದ ಪ್ರಖ್ಯಾತ ನಿರ್ದೇಶಕರಾದ ಅಬ್ಬಾಸ್ ಮುಸ್ತಾನ್ ಅವರು ನಿರ್ದೇಶಿಸಿದ ಹಿಂದಿ ಚಿತ್ರ "ಜೋರಿ ಜೋರಿ

ಚುಪ್ಕೆ ಚುಪ್ಕೆ" ಈ ಚಲನಚಿತ್ರದಲ್ಲಿಯೂ ಕೂಡ ಮಗುವಿಲ್ಲದ ಶ್ರೀಮಂತ ದಂಪತಿಗಳು, ತಮಗೆ ತಮ್ಮದೇ ಆದ ಮಗು ಬೇಕೆಂದು ಬಾಡಿಗೆ ತಾಯಿಯ ಮೂಲಕ ಪಡೆಯುವಂತಹ ಚಿತ್ರಣವಿದೆ. ಇಲ್ಲಿ ಪ್ರೀತಿ ಝಿಂಟಾ ಒಬ್ಬ ವೇಶ್ಯೆಯಾಗಿದ್ದು ಅವಳಿಂದ ಒಂದು ಮಗುವನ್ನು ಪಡೆಯಬೇಕೆಂಬ ಬಯಕೆ ಸಲ್ಮಾನ ಖಾನ ಅವರದಾಗಿರುತ್ತದೆ. ಕಥೆಯಲ್ಲಿ ಬಾಡಿಗೆ ತಾಯಿಯ ಮೂಲಕ ಮಗುವನ್ನು ಪಡೆಯುವ ಹಂಬಲದಿಂದ ದೂರದ ವಿದೇಶದಲ್ಲಿ ಹೋಗಿ ಪಡೆಯುವ ಚಿತ್ರಣ ಈ ಚಲನಚಿತ್ರದಲ್ಲಿ ನೋಡುತ್ತೇವೆ. ಇಂತಹ ವಿಷಯವನ್ನಿಟ್ಟುಕೊಂಡೇ "ಜೋಗುಳ" ಧಾರಾವಾಹಿಯನ್ನು ಚಿತ್ರಿಸಲಾಗಿದೆ.

ಒಂದು ಹೆಣ್ಣು ಪರಿಪೂರ್ಣವೆನಿಸಿಕೊಳ್ಳಬೇಕಾದರೆ ಅವಳು ತಾಯಿಯಾಗಲೇಬೇಕು, ತಾಯಿಯಾಗಬೇಕು, ಅದು ಗಂಡು ಮಗುವಿನ ತಾಯಿಯಾಗಬೇಕು. ಅಂದಾಗಲೇ ಸಮಾಜದಲ್ಲಿ ಅವಳಿಗೊಂದು ಮರ್ಯಾದೆ, ಘನತೆಯೆನಿಸಿಕೊಳ್ಳುತ್ತದೆ. 'ಬಂಜೆ' ಎಂದು ಕರೆಸಿಕೊಳ್ಳದ ಅನೇಕ ಮಹಿಳೆಯರು ಈ ಒಂದು ದಾರಿಯನ್ನು ತುಳಿದು ತಾಯ್ತನವನ್ನು ಅನುಭವಿಸುತ್ತಿದ್ದಾರೆ.

ಬಾಡಿಗೆ ತಾಯಿಯಾದವಳ ಮಾತು

೨೦೦೯ರಲ್ಲಿ ನಾನು ಬೆಂಗಳೂರಿನ ಒಬ್ಬ ಶ್ರೀಮಂತ ದಂಪತಿಗಳ ಮಗುವನ್ನು ಹೆತ್ತುಕೊಡಲು ಒಪ್ಪಿದೆ. ಅವರು ತನಗೆ ಮುಂಗಡವಾಗಿ ೫೦ ಸಾವಿರ ಕೊಟ್ಟಿದ್ದರು. ಒಂಬತ್ತು ತಿಂಗಳುಗಳವರೆಗೆ ಅವರೊಂದಿಗೆ ಇದ್ದು, ಮಗುವನ್ನು ಹೆತ್ತು ಕೊಟ್ಟ ನಂತರ ೨.೫೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದಕ್ಕೆ ನನ್ನ ಗಂಡನು ಒಪ್ಪಿಕೊಂಡಿದ್ದ. ನನಗೆ ಈಗಾಗಲೇ ಐದು ಮಕ್ಕಳಿದ್ದು ಮನೆಯಲ್ಲಿ ಬಡತನ ಹೆಚ್ಚಾಗಿರುವುದರಿಂದ ನಾನು ಈ ಕೆಲಸಕ್ಕೆ ಒಪ್ಪಿಕೊಂಡೆ. ಮೊದಮೊದಲು ನನಗೆ ತುಂಬಾ ಅಸಹ್ಯವೆನಿಸಿತು(ದೈಹಿಕವಾಗಿ ಬಳಸಿಕೊಳ್ಳಬಹುದೆಂಬ ಕಾರಣದಿಂದ). ಆದರೆ ಇಲ್ಲಿ ಹಾಗೇನು ಇರದೇ ಮಹಿಳಾ ವೈದ್ಯರೇ ಅದನ್ನು ಮಾಡುತ್ತಾರೆಂದು ತಿಳಿದ ಮೇಲೆ ಸಂತೋಷದಿಂದ ಒಪ್ಪಿಗೆ ಕೊಟ್ಟಿದ್ದೆ. ಕೃಷಿಯನ್ನೇ ಅವಲಂಬಿಸಿರುವ ನಾವು ಈಗ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ. ಆ ದಂಪತಿಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಸುಮಾ(ಹೆಸರು ಬದಲಾಯಿಸಲಾಗಿದೆ) ಬಾಡಿಗೆಯಾಯಿಯಾದವಳು ಯಾದಗಿರಿ ಜಿಲ್ಲೆಯವಳು.

೩.೧.೬. ಚಿತ್ರಲೇಖ

ಕಥೆಯ ಸಾರಾಂಶ

ಚಿತ್ರಲೇಖ ಧಾರಾವಾಹಿಯಲ್ಲಿ ಸಮಾಜದಲ್ಲಿ ಪ್ರತಿಷ್ಠಿತವಾದ ಸ್ಥಾನಮಾನವನ್ನು ಹೊಂದಿ ರುವಂತಹ ಚಿತ್ರಲೇಖ ಪತ್ರಿಕೆಯನ್ನು ಹುಟ್ಟುಹಾಕಿದಂತಹ ಸತ್ಯದೇವ ಅವರ ಕುಟುಂಬದ ಸುತ್ತಲೂ ಚಿತ್ರಿತವಾಗಿರುವ ಕಥೆಯಾಗಿದೆ. ಕಥೆಯಲ್ಲಿ ಸತ್ಯದೇವ ಅವರಿಗೆ ಆದಿತ್ಯ, ಅನಿರುದ್ಧ ಮತ್ತು ಚೈತ್ರಾ ಎಂಬ ಮಕ್ಕಳಿರುತ್ತಾರೆ. ಗಂಡುಮಕ್ಕಳಿಬ್ಬರಿಗೆ ಮದುವೆ ಮಾಡಿರುತ್ತಾರೆ. ಆದಿತ್ಯನ ಹೆಂಡತಿ ತೇಜಸ್ವಿನಿ ಮತ್ತು ಅನಿರುದ್ಧನ ಹೆಂಡತಿ ಜಾಹ್ನವಿ. ಒಂದೇ ಮನೆಯಲ್ಲಿ ಎಲ್ಲರೂ ಸಹಬಾಳ್ವೆ ನಡೆಸುತ್ತಿರುತ್ತಾರೆ. ಚಿತ್ರಲೇಖ ಪತ್ರಿಕೆಯನ್ನು ಕಷ್ಟಪಟ್ಟು ಶ್ರಮವಹಿಸಿ ಕಟ್ಟಿ

ಬೆಳೆಸಿರುವ ಸತ್ಯದೇವ ಅವರು, ನ್ಯಾಯ, ನಿಷ್ಠೆ, ಆದರ್ಶಗಳನ್ನು ಇಟ್ಟುಕೊಂಡು ಪತ್ರಿಕೆಯನ್ನು ಬೆಳೆಸಿರುತ್ತಾರೆ. ಅವರ ಈ ಹಾದಿಯನ್ನೇ ಅನುಸರಿಸಿ ಮಕ್ಕಳಿಬ್ಬರು ಈ ಪತ್ರಿಕೆಯನ್ನು ಉನ್ನತಮಟ್ಟಕ್ಕೆ ಕೊಂಡ್ಯೊಯ್ಯಬೇಕೆಂಬ ಮಹಾದಾಸೆ ಹೊಂದಿರುತ್ತಾರೆ. ಪತ್ರಿಕೆಯನ್ನು ಹಿರಿಯಮಗ ಆದಿತ್ಯ ನೋಡಿಕೊಂಡು ಹೋಗುತ್ತಿರುತ್ತಾನೆ. ತಂದೆಯಂತೆ ನ್ಯಾಯ, ನಿಷ್ಠೆಯಿಂದ, ಹಗಲು ರಾತ್ರಿಯೆನ್ನದೇ ಪತ್ರಿಕೆಯ ಯಶಸ್ವಿಗೆ ದುಡಿಯುತ್ತಿರುತ್ತಾನೆ. ಈ ಮೂಲಕ ಪತ್ರಿಕೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುತ್ತಾನೆ. ಹೀಗಿರುವಾಗಲೆ ಕಥೆಯಲ್ಲಿ ತಿರುವೊಂದು ಬರುತ್ತದೆ. ಕುಟುಂಬದವರೆಲ್ಲರೂ ಪ್ರೇಕ್ಷಣಿಯ ಸ್ಥಳವೊಂದಕ್ಕೆ ಹೋಗಿದ್ದಾಗ ಆದಿತ್ಯ ಏಕಾಏಕಿ ಕಣ್ಮರೆಯಾಗುತ್ತಾನೆ. ಆದಿತ್ಯನನ್ನು ತಂದೆ, ತಾಯಿ, ಹೆಂಡತಿ, ತಮ್ಮ ಎಲ್ಲರೂ ಸೇರಿ ಹುಡುಕಾಡಿದರೂ ಅವನ ಸುಳಿವು ಸಿಗುವುದಿಲ್ಲ. ಖಾಲಿ ಕೈಯಿಂದ ಮನೆಗೆ ವಾಪಸ್ಸಾಗುತ್ತಾರೆ. ಮಗನಿಗಾಗಿ ಹುಡುಕಾಡುವ ಸರ್ವ ಪ್ರಯತ್ನವನ್ನು ಮಾಡಲಾಗುತ್ತದೆ. ಕೊನೆಗೆ ಯಾವುದೇ ಸುಳಿವು ಸಿಗದಿದ್ದಾಗ ಕೈಚೆಲ್ಲಿ ಕುಳಿತಿರುತ್ತಾರೆ. ಮಗ ಹೀಗೆ ಇದ್ದಕ್ಕಿದಂತೆ ಕಣ್ಮರೆಯಾಗಿರುವುದಕ್ಕೆ ಕಾರಣ ಗೊತ್ತಿಲ್ಲದೇ ಕೊರಗುತ್ತಾ ಮನೆಯವರು ಕಾಲ ದೂಡುತ್ತಿರುತ್ತಾರೆ. ಮನೆಯವರಿಗಿಂತ ಹೆಚ್ಚಿನ ನೋವು ಯಾತನೆಯನ್ನು ಅನುಭವಿಸುವ ತೇಜಸ್ವಿನಿ, ತನ್ನ ಜೀವನದ ಎದುರಾದ ಅತಿ ದೊಡ್ಡ ದುರಂತವನ್ನು, ತುಟಿಕಚ್ಚಿಕೊಂಡು ಎದುರಿಸುತ್ತಾ ದಿನಗಳನ್ನು ದೂಡುತ್ತಿರುತ್ತಾಳೆ. ತನ್ನ ಗಂಡ ಎಲ್ಲೋ ಒಂದು ಕಡೆ ಆರೋಗ್ಯವಾಗಿದ್ದು,ಇಂದಲ್ಲ ನಾಳೆ ಬಂದೇ ಬರುತ್ತಾರೆಂದು ಕಾಯುತ್ತಿರುತ್ತಾಳೆ.

ಕಥೆಯಲ್ಲಿ ತೇಜಸ್ವಿನಿ ಒಬ್ಬ ಪ್ರಭಾವಿ ಪತ್ರಕರ್ತೆ, ತನ್ನ ಪ್ರಭಾವಶಾಲಿ ಬರವಣಿಗೆಯಿಂದ ಸಮಾಜದಲ್ಲಿ ಒಳ್ಳೆಯ ಹೆಸರು ಪಡೆದುಕೊಂಡಿರುತ್ತಾಳೆ. ನ್ಯಾಯ, ನಿಷ್ಠೆ, ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿರುವಂತಹ, ಎಂತಹ ಪರಿಸ್ಥಿತಿಯಲ್ಲಿಯೂ ಯಾರಿಗೂ ಹೆದರದ ಎದೆಗಾರಿಕೆ ಇರುವಂತಹ ಧೈರ್ಯವಂತ ಹೆಣ್ಣು, ಆದರೆ ತನ್ನ ವೈಯಕ್ತಿಕ ಬದುಕು ಅವಳ ಕಣ್ಮುಂದೆ ಬಂದಾಗ, ಸಣ್ಣ ನಡುಕ, ಹುಟ್ಟಿಸಿ ಅವಳನ್ನು ನಡುಗಿಸಿ ಬಿಡುತ್ತದೆ. ಇಂತಹ ಸ್ಥಿತಿಯಿದ್ದಾಗ್ಯೂ ಅವಳಿಗೆ ಮಾವ ಸತ್ಯದೇವ ಅವರ ಸಹಕಾರವಿರುವುದರಿಂದ ಮಾನಸಿಕವಾಗಿ ಕುಗ್ಗಿ ಹೋಗಿರುವವಳಿಗೆ ಧೈರ್ಯವನ್ನು ತುಂಬುತ್ತಾ ಅವಳಿಗೆ ಬೆಂಗಾವಲಾಗಿ ನಿಂತಿರುತ್ತಾರೆ.

ಕಥೆಯ ಪ್ರಮುಖ ಪಾತ್ರಗಳಲ್ಲಿ ಅನಿರುದ್ದನ ಪಾತ್ರವು ಒಂದು, ಅನಿರುದ್ದ ಚಿತ್ರಲೇಖ ಪತ್ರಿಕೆಯ ಎಂಡಿ ಆಗಿರುತ್ತಾನೆ. ಕಛೇರಿಯ ಎಲ್ಲ ಕೆಲಸಗಳನ್ನು ನೋಡಿಕೊಂಡು ಹೋಗುತ್ತಿರುತ್ತಾನೆ. ಅನಿರುದ್ಧನ ಪಾತ್ರವು ಒಬ್ಬ ಸ್ವಾರ್ಥಿಯಂತೆ, ಕೆಟ್ಟ ವ್ಯಕ್ತಿಯಂತೆ ಚಿತ್ರಿತವಾಗಿದೆ. ಅನಿರುದ್ದ ಒಬ್ಬ ಸ್ವಾರ್ಥಿಯಾಗಿರುತ್ತಾನೆ. ಅನಿರುದ್ಧ ತನ್ನ ಸಾಧನೆಗಾಗಿ ಯಾವ ಹೆಜ್ಜೆಯನ್ನು ತುಳಿಯಲು ಸಿದ್ಧನಿರುತ್ತಾನೆ. ಅನಿರುದ್ಧ ತನ್ನ ಸ್ವಾರ್ಥ ಸಾಧನೆಗಾಗಿ ತನ್ನ ಅಣ್ಣನ ಹೆಂಡತಿ ತೇಜಸ್ವಿನಿಯನ್ನು ಅವಳು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ತಡೆಯುಂಟು ಮಾಡುವುದರ ಮೂಲಕ ತೇಜಸ್ವಿನಿಯನ್ನು ಕೆಳಗಿಳಿಸಬೇಕೆಂಬ ಹುನ್ನಾರ ನಡೆಸುತ್ತಿರುತ್ತಾನೆ. ಅವಳ ಪ್ರಭಾವ,

ಸಾಧನೆಗಳನ್ನು ಕಂಡು ಸಹಿಸದ ಅನಿರುದ್ಧ, ಅವಳನ್ನು ಪತ್ರಿಕೆಯಿಂದ, ಅವಳಿಗಿರುವ ಸಂಪಾದಕಿ ಸ್ಥಾನದಿಂದ ಕಿತ್ತು ಹಾಕುವ ಪ್ರಯತ್ನ ಮಾಡುತ್ತಾನೆ. ಆ ಜಾಗಕ್ಕೆ ಸಾಕ್ಷಿಯನ್ನು ತಂದು ಕೂರಿಸುತ್ತಾನೆ. ಸಾಕ್ಷಿ ಅನಿರುದ್ಧನ ಚಿತ್ರಲೇಖ ಪತ್ರಿಕೆಯಲ್ಲಿ ಒಬ್ಬ ವರದಿಗಾರಳಾಗಿರುತ್ತಾಳೆ. ಅವಳಿಗೆ ಪತ್ರಿಕೆಯ ಗಂಧ ಗಾಳಿಯು ಗೊತ್ತಿರುವುದಿಲ್ಲ. ಆದರೂ ಅವಳನ್ನು ಚಿತ್ರಲೇಖ ಪತ್ರಿಕೆಯ ಸಂಪಾದಕಳಾಗಿ ನೇಮಕ ಮಾಡುತ್ತಾನೆ. ತೇಜಸ್ವಿನಿಯನ್ನು ತನ್ನ ದರ್ಪ, ಆಕ್ರೋಶ ಸಿಟ್ಟಿನಿಂದ ಕೆಳಗಿಳಿಸುವ ಸರ್ವ ಪ್ರಯತ್ನವನ್ನು ಅನಿರುದ್ಧ ಮಾಡುತ್ತಾನೆ. ಕಥೆಯಲ್ಲಿ ಅನಿರುದ್ಧನ ಪಾತ್ರವು ಶೋಷಕನಾಗಿ ಚಿತ್ರಿತವಾಗಿದೆ. ಇತರ ಹೆಣ್ಣು ಪಾತ್ರಗಳು ಅವನ ಶೋಷಣೆಗೆ ಒಳಗಾಗಿರುವಂತಹ ಪಾತ್ರಗಳೇ ಆಗಿವೆ. ಅನಿರುದ್ಧನ ಅತ್ತಿಗೆ ತೇಜಸ್ವಿನಿಯನ್ನು ಕಛೇರಿಯಲ್ಲಿ, ಎಲ್ಲರೆದುರು ಅವಮಾನ ಮಾಡುವ, ತನ್ನ ಅತ್ತಿಗೆ ಹೇಳುವ ಪ್ರತಿಯೊಂದು ಮಾತಿಗೂ ಪ್ರಶ್ನೇ ಮಾಡುವ ಅವಳ ಕೆಲಸವನ್ನು ಸರಿಯಾಗಿ ಮಾಡಿಲ್ಲವೆಂದು ಸಂಬಳ ತೆಗೆದುಕೊಳ್ಳರು. ಹೀಗೆ ಬೇಜವಾಬ್ದಾರಿಯಿಂದ ಕೆಲಸ ಮಾಡಿದರೆ ನಾವು ನಮ್ಮ ಪತ್ರಿಕೆಯನ್ನು ಹಗಲಲ್ಲೇ ಮುಚ್ಚಿಕೊಂಡು ಹೋಗಬೇಕಾಗುತ್ತದೆ ಎಂದು ಚುಚ್ಚು ಮಾತುಗಳನ್ನು ಆಡುತ್ತಿರುತ್ತಾನೆ. ಹೀಗೆ ಮಾಡುವ ಮೂಲಕ ಶೋಷಕನಾಗುತ್ತಾನೆ. ಇದೇ ಕಛೇರಿಯಲ್ಲಿ ಕೆಲಸ ಮಾಡುವ ಸಾಕ್ಷಿಯನ್ನು ರಹಸ್ಯವಾಗಿ ಮದುವೆಯಾಗಿರುತ್ತಾನೆ. ತನ್ನ ಹೆಂಡತಿಗೆ ವಿಚ್ಛೇದನೆ ಕೊಟ್ಟು, ಅವಳನ್ನು ಒಪ್ಪಿಕೊಳ್ಳುತ್ತೇನೆಂದು ಹೇಳಿ ನಾಟಕವಾಡುತ್ತಿರುತ್ತಾನೆ. ಸಾಕ್ಷಿಗೆ ಬಹಿರಂಗವಾಗಿ ಒಪ್ಪಿಕೊಳ್ಳದ ಅನಿರುದ್ಧ ಸಾಕ್ಷಿಯ ಭಾವನೆಗಳೊಂದಿಗೆ ಆಕೆಯ ಬದುಕಿನೊಂದಿಗೆ ಆಟವಾಡುತ್ತಿರುತ್ತಾನೆ. ಸಾಕ್ಷಿಯನ್ನು ರಹಸ್ಯವಾಗಿ ಮದುವೆಯಾಗುವುದರ ಮೂಲಕ ಮೊದಲ ಹೆಂಡತಿ ಜಾಹ್ನವಿಗೆ ಮೋಸ ಮಾಡುವುದಲ್ಲದೇ ಸಾಕ್ಷಿಯನ್ನು ಮೋಸ ಮಾಡುತ್ತಾನೆ.

ಇಷ್ಟಕ್ಕೆ ನಿಲ್ಲದೇ ತನ್ನ ಒಡಹುಟ್ಟಿದ ತಂಗಿ ಚೈತ್ರಾಳಿಗೂ ಕೂಡ, ಪರೋಕ್ಷವಾಗಿ ಮೋಸ ಮಾಡುತ್ತಿರುತ್ತಾನೆ. ತನ್ನ ತಂಗಿ ಚೈತ್ರಾಳನ್ನು ಜಾಹ್ನವಿಯ ಗೆಳೆಯ ದುಷ್ಯಂತ ಮದುವೆಯಾಗುತ್ತೇನೆಂದು ಮುಂದೆ ಬಂದಿರುತ್ತಾನೆ. ಅನಿರುದ್ಧನ ತಂಗಿ ಚೈತ್ರಾ ಒಂದು ಅಪಘಾತದಲ್ಲಿ ಕಾಲುಗಳ ಸ್ವಾಧೀನ ಕಳೆದುಕೊಂಡಿತ್ತಾಳೆ. ಚೈತ್ರಾಳಿಗೆ ಭವಿಷ್ಯದಲ್ಲಿ ನಡೆಯ ಬಹುದಾದಂತಹ ಘಟನೆಗಳನ್ನು ನೋಡುವ ದೃಷ್ಟಿಯನ್ನು ಹೊಂದಿರುತ್ತಾಳೆ. ಚೈತ್ರಾಳ ಈ ಪರಿಸ್ಥಿತಿಯ ಅರಿವಿದ್ದರು ದುಷ್ಯಂತ ಅವಳನ್ನು ಮದುವೆ ಆಗುವ ಆಕೆಗೊಂದು ಸುಂದರ ಬದುಕು ಕೊಡಬೇಕೆಂಬ ಇಚ್ಛೆ ಹೊಂದಿರುತ್ತಾನೆ. ಆದರೆ ಇಲ್ಲಿಯೂ ಕೂಡ ಅನಿರುದ್ಧ ತನ್ನ ಸ್ವಾರ್ಥ ಬುದ್ಧಿಯಿಂದ ತನ್ನ ತಂಗಿಯ ಬಾಳನ್ನು ಅಂದಗೊಳಿಸುವ ಬದಲು ಹಾಳು ಮಾಡುವ ಹುನ್ನಾರ ನಡೆಸುತ್ತಾನೆ. ಅನಿರುದ್ಧ ನಡೆಸುವ ಹುನ್ನಾರಕ್ಕೆ ದುಷ್ಯಂತ ಬಲಿಪಶುವಾಗುತ್ತಾನೆ. ದುಷ್ಯಂತನ ಒಳ್ಳೆಯತನವನ್ನು ಅರಿಯದೇ ಹೋಗುತ್ತಾನೆ. ಅನಿರುದ್ಧನಿಗೆ ತನ್ನ ಮತ್ತು ಸಾಕ್ಷಿಯ ಮಧ್ಯೆ ಇರುವಂತಹ ಸಂಬಂಧವನ್ನು ದುಷ್ಯಂತ ತಿಳಿದಿರುವುದರಿಂದ ಅನಿರುದ್ಧ ದುಷ್ಯಂತನನ್ನು ತನ್ನ ತಂಗಿಯ ಜೊತೆ ಮದುವೆ ಮಾಡಲು ಹಿಂದೇಟು

ಹಾಕುತ್ತಾನೆ. ದುಷ್ಯಂತ ಒಳ್ಳೆಯವನಿದ್ದರೂ, ಅವನನ್ನು ಕೆಟ್ಟವನನ್ನಾಗಿಸುವ ಪ್ರಯತ್ನ ಮಾಡುತ್ತಾನೆ. ದುಷ್ಯಂತನ ಮನೆಯಲ್ಲಿ ಡ್ರಗ್ಸ್ ಇಟ್ಟು ಅವನನ್ನು ಬಂಧಿಸುವಂತೆ ಮಾಡುತ್ತಾನೆ. ಅನಿರುದ್ಧನ ಕುತಂತ್ರಕ್ಕೆ ದುಷ್ಯಂತ ಬಲಿಯಾಗುತ್ತಾನೆ. ಹೀಗೆ ದಿನಗಳು ಉರುಳಿದ ಮೇಲೆ ದುಷ್ಯಂತ ಈ ಎಲ್ಲಾ ಸಮಸ್ಯೆಗಳನ್ನು ದಾಟಿ ಹೊರಬರುತ್ತಾನೆ ಬಂದ ಮೇಲೆ ಚೈತ್ರಾಳೊಂದಿಗೆ ಈಗಾಗಲೇ ನಿಶ್ಚಿತಾರ್ಥ ಕಾರ್ಯ ಮುಗಿದಿರುವುದರಿಂದ ಅವಳನ್ನು ಮದುವೆಯಾಗುತ್ತೇನೆಂದು ಸತ್ಯದೇವ ಅವರಿಗೆ ತಿಳಿಸುತ್ತಾನೆ. ಇಲ್ಲಿ ಮತ್ತೆ ಅನಿರುದ್ಧ ಅಡ್ಡಗಾಲು ಹಾಕುತ್ತಾನೆ. ಆಗ ದುಷ್ಯಂತ ಅನಿವಾರ್ಯವಾಗಿ ಚೈತ್ರಾಳನ್ನು ಜಾಹ್ನವಿ ಮತ್ತು ತೇಜಸ್ವಿನಿಯವರ ಸಹಾಯದಿಂದ ಮನೆಯಲ್ಲಿ ಯಾರಿಗೂ ಗೊತ್ತಾಗದ ಹಾಗೆ ದೇವಸ್ಥಾನದಲ್ಲಿ ಸರಳವಾಗಿ ಮದುವೆಯಾಗುತ್ತಾನೆ. ಅನಿರುದ್ಧ ತನ್ನ ತಂಗಿಯ ಬಾಳಲ್ಲಿ ಪರೋಕ್ಷವಾಗಿ ಸಮಸ್ಯೆಗಳನ್ನು ತಂದೊಡ್ಡುತ್ತಿರುತ್ತಾನೆ. ಹೀಗೆ ಕಥೆಯಲ್ಲಿ ಬರುವ ಎಲ್ಲ ತಿರುವುಗಳು ಅನಿರುದ್ಧ ಮಾಡುವ ಕಪಟ, ಮೋಸ, ವಂಚನೆಗೆ ಸಾಕ್ಷಿಯಾಗುತ್ತವೆ. ಮುಂದುವರೆದು ತಂದೆಯ ಪತ್ರಿಕೆಯ ವಿರುದ್ಧ ತನ್ನದೇ ಆದ ಹೊಸ ಪತ್ರಿಕೆಯೊಂದನ್ನು ಪ್ರಾರಂಭಿಸುತ್ತಾನೆ.

ಹೀಗೆ ಅನಿರುದ್ಧ ಮನೆಯ ಪ್ರತಿಯೊಬ್ಬ ಸದಸ್ಯರಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಮಾನಸಿಕ ಕಿರುಕುಳವನ್ನು ಕೊಡುತ್ತಿರುವುದು ಚಿತ್ರಿತವಾಗಿದೆ. ಅನಿರುದ್ಧ ಕಥೆಯ ಉದ್ದಕ್ಕೂ ಶೋಷಕನಾಗಿ ನಿಲ್ಲುತ್ತಾನೆ. ಅನಿರುದ್ಧನ ತಾಯಿ, ತಂಗಿ, ಹೆಂಡತಿ, ಅತ್ತಿಗೆ, ಸಾಕ್ಷಿ ಎಲ್ಲರೂ ಅವನ ಶೋಷಣೆಗೆ ಒಳಗಾಗುತ್ತಾರೆ. ಇದು ಸಮಾಜದಲ್ಲಿ ಪುರುಷನ ಪ್ರಾಬಲ್ಯವನ್ನು ಎತ್ತಿ ತೋರಿಸುತ್ತದೆ. ಇಲ್ಲಿ ಅನಿರುದ್ಧ ಕೆಟ್ಟ ವ್ಯಕ್ತಿತ್ವದವನಾಗಿ ಚಿತ್ರಿತವಾಗಿದ್ದರೆ ತಂದೆ ಸತ್ಯದೇವ ಅವರ ಚಿತ್ರ ಸಕಾರಾತ್ಮಕವಾಗಿ ಚಿತ್ರಿತವಾಗಿದೆ.

ಸತ್ಯದೇವ ಅವರ ಪಾತ್ರ :– ಸತ್ಯದೇವ ಒಬ್ಬ ನಿಷ್ಠಾವಂತ ವ್ಯಕ್ತಿ. ನ್ಯಾಯ ನೀತಿ, ತತ್ವ ಆದರ್ಶಗಳನ್ನು ಅಳವಡಿಸಿಕೊಂಡು ನ್ಯಾಯಯುತವಾಗಿ ಬದುಕುವಂತಹ ವ್ಯಕ್ತಿಯಾಗಿದ್ದಾನೆ. ತನ್ನ ಮಕ್ಕಳನ್ನು ಸೊಸೆಯಂದಿರನ್ನು ಆತ್ಮೀಯದಿಂದ ಗೌರವದಿಂದ, ಪ್ರೀತಿಯಿಂದ ಕಾಣುವಂತಹ ವ್ಯಕ್ತಿ ತನ್ನ ಮಗ ಆದಿತ್ಯನ ಕಣ್ಮರೆಯಿಂದ ಒಬ್ಬಂಟಿಗಳಾದ ತೇಜಸ್ವಿನಿಯನ್ನು ಯಾವುದೇ ಕಾರಣಕ್ಕೂ ಹೆದರದೆ ಅಂಜದೆ ಎದೆತಟ್ಟಿ ನಿಲ್ಲುವಂತೆ ಮಾಡಿರುವ ವ್ಯಕ್ತಿಯಾಗಿರುತ್ತಾನೆ. ತೇಜಸ್ವಿನಿಯನ್ನು "ಮಗೂ" ಎಂದೇ ಕರೆಯುವ ಸೊಸೆಯನ್ನು ಮಕ್ಕಳಂತೆ ನೋಡಿಕೊಳ್ಳುತ್ತಾರೆ. ತೇಜಸ್ವಿನಿಯ ಪ್ರತಿಭೆಗೆ ಸೂಕ್ತ ಸ್ಥಾನ ಮಾನವನ್ನು ತಮ್ಮ ಪತ್ರಿಕೆಯಲ್ಲಿ ಒದಗಿಸಿ ಕೊಟ್ಟಿರುತ್ತಾರೆ. ಅನಿರುದ್ಧ ತಂದೊಡ್ಡುವ ಸವಾಲುಗಳಿಗೆ ವಿರೋಧಿಸುವ ತನ್ನ ಸೊಸೆಯ ಪರವಾಗಿ ನಿಲ್ಲುವ ವ್ಯಕ್ತಿತ್ವ ಹೊಂದಿರುವಂತವರು. ಕಥೆಯಲ್ಲಿ ಅತ್ತೆಯ ಪಾತ್ರಕ್ಕಿಂತಲೂ ಮಾವನ ಪಾತ್ರವನ್ನು ಸಕಾರಾತ್ಮಕವಾಗಿ ಕಟ್ಟಿಕೊಡಲಾಗಿದ್ದು; ಸಾಂಪ್ರದಾಯಿಕ ಮಾದರಿಯನ್ನು ಬದಲಿಸುವ ಪ್ರಯತ್ನ ಈ ಧಾರಾವಾಹಿಯಲ್ಲಿ ಕಂಡುಬರುತ್ತದೆ.

ಚಿತ್ರಲೇಖಾ ಧಾರಾವಾಹಿಯಲ್ಲಿ ಸತ್ಯದೇವ ಅವರ ಒಳ್ಳೆಯತದನಿಂದ ಸೊಸೆಯಂದಿರನ್ನು ಮಕ್ಕಳಂತೆ ನೋಡುವ ದೃಷ್ಟಿಕೋನವನ್ನು ಕಲ್ಪಿಸಲಾಗುತ್ತದೆ. ಆದರೆ ತೇಜಸ್ವಿನಿಯ ಅತ್ತೆಯಾದ

ಅಹಲ್ಯಾ ಮತ್ತೆ ಇಲ್ಲಿ ಶೋಷಕಳಾಗಿ ನಿಲ್ಲುತ್ತಾಳೆ. ತನ್ನ ಮಗ ಅನಿರುದ್ಧ ಮಾಡುವ ಎಲ್ಲ ಕೆಟ್ಟ ಕೆಲಸಗಳಲ್ಲಿಯೂ ಭಾಗಿಯಾಗುವುದರ ಮೂಲಕ ಮಗನ ಪರವಾಗಿ ಸೊಸೆಗೆ ವಿರೋಧವಾಗಿ ನಿಲ್ಲುವ ಪಾತ್ರವಾಗಿ ಸೃಷ್ಟಿಯಾಗಿದೆ.

ತೇಜಸ್ವಿನಿ ಮೈದುನನಾದ ಅನಿರುದ್ಧನ ತಂತ್ರಗಳಿಗೆ ಒಳಗಾಗುವುದು. ಅವುಗಳಿಂದ ಹೊರಬರಲು ಆಗದ ಮನಸ್ಥಿತಿ, ಇಲ್ಲ ಸಲ್ಲದ ಆರೋಪಗಳನ್ನು ಮಾಡುವುದರ ಮೂಲಕ ತೇಜಸ್ವಿನಿಯ ಚಾರಿತ್ರ್ಯವಧೆ ಮಾಡುವ ಸರ್ವಪ್ರಯತ್ನ ಅನಿರುದ್ಧ ಮಾಡುತ್ತಿರುತ್ತಾನೆ. ಹೆಣ್ಣಿನ ಅಭಿವೃದ್ಧಿ ಸಹಿಸದ ಗಂಡು ಹೇಗೆಲ್ಲಾ ವರ್ತಿಸಬಹುದೆಂಬುದನ್ನು ಈ ಧಾರಾವಾಹಿ ಕಟ್ಟಿಕೊಡುತ್ತದೆ. ಇದು ಕಥೆಯಲ್ಲಿ ಪ್ರಸಾರವಾದ ಕೆಲವು ಸಂಚಿಕೆಗಳ ಸೂಕ್ಷ್ಮ ನೋಟವಾಗಿದ್ದೇ ಈ ಕಥೆಯು ಇನ್ನು ಪ್ರಸಾರದ ಹಂತದಲ್ಲಿದೆ.

೩.೧.೭. ಇದ್ರೆ ಇರಬೇಕು ನಿನ್ಹಂಗ...

ಕಥೆಯ ಸಾರಾಂಶ

ಉತ್ತರ ಕರ್ನಾಟಕದ ಸತ್ಯಕಥೆಯೊಂದನ್ನು ಆಧರಿಸಿದ ಈ ಧಾರಾವಾಹಿಯಾಗಿದೆ. ಸುವರ್ಣವಾಹಿನಿಯಲ್ಲಿ ಪ್ರತಿ ಸೋಮವಾರದಿಂದ ಶುಕ್ರವಾರದವರೆಗೂ ರಾತ್ರಿ ೯.೩೦ಕ್ಕೆ ಪ್ರಸಾರವಾಗುತ್ತಿತ್ತು. ಧಾರಾವಾಹಿಯು ಎರಡು ಸಾಂಪ್ರದಾಯಿಕ ಕುಟುಂಬಗಳ ಕಥೆಯನ್ನು ಚಿತ್ರಿಸಲಾಗಿದ್ದು; ಈ ಕುಟುಂಬದಲ್ಲಿ ಸ್ವಾಭಿಮಾನಿ ಹೆಣ್ಣೊಬ್ಬಳು, ಭ್ರಷ್ಟ ಅಧಿಕಾರಿಯ ವಿರುದ್ಧ, ಅವನ ಆಡಳಿತದ ವಿರುದ್ಧ ಧ್ವನಿ ಎತ್ತುವ ಮಹಿಳೆಯಾಗಿ ಅಹಲ್ಯಾಳ ಪಾತ್ರವನ್ನು ಕಟ್ಟಿಕೊಡಲಾಗಿದೆ. ಕಥಾನಾಯಕಿ ಅಹಲ್ಯಾ ಒಬ್ಬ ಸ್ವಾಭಿಮಾನಿ, ನಿಷ್ಠಾವಂತ ತತ್ವಾದರ್ಶಗಳನ್ನು ಇಟ್ಟುಕೊಂಡಿರುವಂತಹ, ಎಲ್ಲರನ್ನೂ ಪ್ರೀತಿಸುವ ಗುಣ ಹೊಂದಿರುವಂತಹ ಯುವತಿಯಾಗಿದ್ದಾಳೆ. ಈ ಧಾರಾವಾಹಿಯಲ್ಲಿ ಉತ್ತರ ಕರ್ನಾಟಕದ ಭಾಷೆಯನ್ನೇ ಬಳಸಿಕೊಂಡು ಧಾರಾವಾಹಿ ನಿರ್ದೇಶಿಸಲಾಗಿದ್ದು, ಅಹಲ್ಯಾ ಊರಿನಲ್ಲಿ ಯಾವುದಾದರೂ ಅನ್ಯಾಯ ನಡೆಯುತ್ತಿದ್ದರೇ ಅನ್ಯಾಯದ ವಿರುದ್ಧ ಮಾತನಾಡುವಂತಹವಳಾಗಿರುತ್ತಾಳೆ. ಕಥಾನಾಯಕಿ ಅಹಲ್ಯಾಳ ಮನೆಯವರು ಮತ್ತು ಕಥಾನಾಯಕ ಸಂತೋಷನ ಮನೆಯವರ ಇಬ್ಬರ ಮನೆಗಳ ಮಧ್ಯೆ ಒಳ್ಳೆಯ ಬಾಂಧವ್ಯ ಇರುತ್ತದೆ. ಅಹಲ್ಯಾ ಮತ್ತು ಸಂತೋಷನ ತಂಗಿಯು ಒಳ್ಳೆಯ ಗೆಳತಿಯರಾಗಿರುತ್ತಾರೆ. ಈ ಗೆಳೆತನವನ್ನು ಮುಂದುವರೆಸಿ ಸಂಬಂಧಿಗಳಾಗಬೇಕೆಂದು ಅಹಲ್ಯಾ ಮತ್ತು ಸಂತೋಷನ ತಂದೆಯರು ನಿರ್ಧರಿಸಿರುತ್ತಾರೆ. ಆದರೆ ಸಂತೋಷನ ತಾಯಿ ಮಾತ್ರ ಇದಕ್ಕೆ ಒಪ್ಪದೇ ವಿರೋಧಿಸುತ್ತಿರುತ್ತಾಳೆ. ಅವಳಿಗೆ ಅಹಲ್ಯಾಳಿಗಿಂತ ಬೇರೆ ಹುಡುಗಿಯನ್ನು ತಂದು ಮಗನಿಗೆ ಮದುವೆ ಮಾಡಿಸಬೇಕೆಂಬ ಆಸೆ ಇಟ್ಟುಕೊಂಡಿರುತ್ತಾಳೆ. ಸಂತೋಷ ಮತ್ತು ಅಹಲ್ಯಾ ಒಬ್ಬರಿಗೊಬ್ಬರು ಪರಸ್ಪರ ಇಷ್ಟಪಡುತ್ತಿರುತ್ತಾರೆ. ಆದರೆ ಸಂತೋಷ ತಾಯಿಯನ್ನು ಒಪ್ಪಿಸುವಲ್ಲಿ ಸೋಲುತ್ತಾನೆ. ಸಂತೋಷ ಕೊನೆಯಲ್ಲಿ ತಾಯಿಯ ಮಾತಿಗೆ ಸೋತು ಅಹಲ್ಯಾನ ಬಿಟ್ಟು ಬೇರೊಬ್ಬಳೊಂದಿಗೆ ವಿವಾಹ ಮಾಡಿಕೊಳ್ಳಲು ಒಪ್ಪಿಗೆ ಕೊಡುತ್ತಾನೆ. ಸಂತೋಷನ ತಾಯಿ

ಅಹಲ್ಯಾ ಮತ್ತು ಸಂತೋಷ ಇಬ್ಬರು ಪರಸ್ಪರ ಪ್ರೀತಿಸುತ್ತಿರುವ ವಿಷಯ ಗೊತ್ತಿದ್ದರು. ಸಂತೋಷನ ತಾಯಿ, ಸಂತೋಷನಿಗೆ ಒಪ್ಪಿಗೆ ಕೊಡದಿದ್ದರೇ ತಾನು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸುತ್ತಾಳೆ. ತಾಯಿಯ ಈ ಮಾತಿಗೆ ಸಂತೋಷ ಅನಿವಾರ್ಯವಾಗಿ ಒಪ್ಪಿಗೆ ಕೊಡಲೇಬೇಕಾಗುತ್ತದೆ. ಸಂತೋಷನ ಮದುವೆ ಬೇರೊಂದು ಹುಡುಗಿಯ ಜೊತೆ ನೆರವೇರುತ್ತದೆ. ಸಂತೋಷನ ತಂಗಿಯನ್ನು ಅಹಲ್ಯಾನ ಅಣ್ಣನಿಗೆ ತೆಗೆದುಕೊಳ್ಳಬೇಕೆಂಬ ಮಾತುಗಳಾಗಿರುತ್ತವೆ. ಹಾಗೆಯೇ ಅಹಲ್ಯಾನ ತಂದೆ ಸಂತೋಷನ ತಂಗಿಗೆ ತಮ್ಮ ಮಗನಿಗೆ ತೆಗೆದುಕೊಳ್ಳಲು ಹಿಂದೆ ಸರಿಯುವುದಿಲ್ಲವೆಂದು ಭರವಸೆ ಕೊಡುತ್ತಾರೆ.

ಈ ಕಥೆಯಲ್ಲಿಯೇ ಇನ್ನೊಂದು ಕುಟುಂಬದ ಚಿತ್ರಣ ಕೊಡಲಾಗುತ್ತದೆ. ಅದು ಮೋಹನ ಮೋಹನದು ಒಬ್ಬ ಸರಕಾರಿ ಅಧಿಕಾರಿಯಾಗಿದ್ದು, ನ್ಯಾಯ, ನಿಷ್ಠೆ, ತತ್ವಾದರ್ಶಗಳನ್ನು ಇಟ್ಟುಕೊಂಡು ಸರಕಾರದ ಕೆಲಸ ದೇವರ ಕೆಲಸವೆಂದು ಪರಿಗಣಿಸದೇ ತನ್ನ ಅಧಿಕಾರವಧಿಯಲ್ಲಿ ಎಷ್ಟಾಗುತ್ತದೆಯೋ ಅಷ್ಟು ದುಡ್ಡನ್ನು ವಾಮಮಾರ್ಗವನ್ನು ಅನುಸರಿಸಿ ಲಂಚವನ್ನು ಪಡೆಯುತ್ತಿರುತ್ತಾನೆ. ಲಂಚವನ್ನು ನೇರವಾಗಿ ತೆಗೆದುಕೊಳ್ಳದೇ ತಾನು ಗೊತ್ತು ಮಾಡಿದ ವ್ಯಕ್ತಿಯೊಬ್ಬನ ಕಡೆಗೆ ಕೊಡುವಂತೆ ಸೂಚಿಸಿ ಆ ನಂತರ ಆ ವ್ಯಕ್ತಿಗೆ ಅವನ ಪಾಲು ಕೊಟ್ಟು ಉಳಿದ ಪಾಲನ್ನು ತಾನು ತೆಗೆದುಕೊಳ್ಳುತ್ತಿರುತ್ತಾನೆ. ಈ ಮೂಲಕ ಒಬ್ಬ ಭ್ರಷ್ಟ ಅಧಿಕಾರಿಯೆಂದು ಕರೆಸಿಕೊಳ್ಳುತ್ತಿರುತ್ತಾನೆ. ಮೋಹನನಿಗೆ ಈಗಾಗಲೇ ಮದುವೆಯಾಗಿದ್ದು ಹೆಂಡತಿ ಇಬ್ಬರು ಮಕ್ಕಳು, ತಂದೆ ತಾಯಿ ಇರುವ ಚಿಕ್ಕ ಕುಟುಂಬವಿರುತ್ತದೆ. ಮೋಹನನ ತಂದೆ ಒಬ್ಬ ಸ್ವಾತಂತ್ರಯೋಧರಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿರುವಂತಹ ವ್ಯಕ್ತಿಯಾಗಿರುತ್ತಾರೆ. ನ್ಯಾಯ ನಿಷ್ಠೆ, ಧರ್ಮವೆಂದು ಹೋರಾಡುವ ಅವರಿಗೆ ಮೋಹನನಂತಹ ಭ್ರಷ್ಟ ಮಗ ಹುಟ್ಟಿರುವುದಕ್ಕೆ ತಮ್ಮ ಮಗನ ಕರಾಳ ಮುಖ ಗೊತ್ತಿರುವುದರಿಂದ ಮಗನನ್ನು ಅವನ ಭ್ರಷ್ಟತೆಯನ್ನು ವಿರೋಧಿಸುತ್ತಾ ಬರುತ್ತಾರೆ. ಆದರೆ ಮೋಹನ ಮಾತ್ರ ತಂದೆಯ ಮಾತಿಗೆ ಕಿವಿಗೊಡುವುದಿಲ್ಲ. ಬದಲಿಗೆ ಅವರನ್ನೇ ಹಿಯಾಳಿಸಿ ಮಾತನಾಡುವ ಗುಣಹೊಂದಿರುತ್ತಾನೆ. ಮೋಹನನ ಹೆಂಡತಿ ಇನ್ನಷ್ಟು ಮತ್ತಷ್ಟು ಹಣ ತೆಗೆದುಕೊಂಡು ಬಾ, ನಾವು ಬೇರೊಂದು ಮನೆ ಮಾಡಿ ಸುಖವಾಗಿ ಇರೋಣ ಎಂದು ಮೋಹನನಿಗೆ ಹೇಳುತ್ತಿರುತ್ತಾನೆ. ಹೆಂಡತಿಯ ಮಾತಿನಂತೆ ಮೋಹನ ಮತ್ತಷ್ಟು ಹಣವನ್ನು ಪಡೆಯುತ್ತಿರುತ್ತಾನೆ. ಬಂದ ಹಣವನ್ನು ಹೆಂಡತಿಯ ಕೈಗಿಡುತ್ತಾ ಒಂದು ಗೋಣಿಚೀಲದಲ್ಲಿ ಹಾಕಿ ಭದ್ರವಾಗಿ ಇಡು ಮುಂದೆ ಯಾವುದಾದರೂ ಅಧಿಕಾರಿಯೋ ಇಲ್ಲಾ ಲೋಕಾಯುಕ್ತದವರೋ ಬಂದರೆ ದುಡ್ಡಿಗೆ ದುಡ್ಡು ಕೆಲಸಕ್ಕೆ ಕೆಲಸ ಹೋಗುತ್ತದೆ ಎಂದು ಎಚ್ಚರಿಸುತ್ತಾನೆ. ಗಂಡ ಹೆಂಡತಿ ಇಬ್ಬರದು ಒಂದೇ ಭಕ್ತಿ, ಒಂದೇ ಭಾವವಿರುತ್ತದೆ. ಹೀಗಿರುವಾಗ ಮೋಹನ ಒಂದು ದಿನ ಆಕಸ್ಮಿಕವಾಗಿ ಅಹಲ್ಯಾಳನ್ನು ಭೇಟಿಯಾಗುತ್ತಾನೆ. ಮೊದಲನೇ ಭೇಟಿಯಲ್ಲಿಯೇ ಅಹಲ್ಯಾಳ ಸೌಂದರ್ಯಕ್ಕೆ, ಸರಳತೆಗೆ ಮನಸೋತು ಅವಳನ್ನು ಮದುವೆಯಾಗಬೇಕೆಂದು ಕನಸು ಕಟ್ಟುತ್ತಾನೆ. ಅಹಲ್ಯಾಳ ಪೂರ್ವಾಪರ ತಿಳಿದುಕೊಂಡು, ಅವಳ ದಿನದ ಪ್ರತಿಯೊಂದು ಚಲನ ವಲನಗಳ

ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಿ, ಅವಳನ್ನು ತನ್ನ ಪ್ರೀತಿಯ ಬಲೆಗೆ ಬೀಳುವಂತೆ ಮಾಡಲು ತಂತ್ರಗಳನ್ನು ರೂಪಿಸುತ್ತಾನೆ. ಅಹಲ್ಯಾಳನ್ನು ಪದೇ ಪದೇ ಭೇಟಿಯಾಗುವಂತಹ ಸಂದರ್ಭವನ್ನು ಸೃಷ್ಟಿಸುತ್ತಾನೆ.

ಇದೇ ಸಮಯಕ್ಕೆ ಸರಿಯಾಗಿ ಅಹಲ್ಯಾಳ ಅಣ್ಣನನ್ನು ಒಂದು ಅಪರಾಧದ ಹಿನ್ನೆಲೆಯಲ್ಲಿ ಪೋಲೀಸರು ಬಂದಿಸುತ್ತಾರೆ. ಅಹಲ್ಯಾಳ ಅಣ್ಣ ಸರಕಾರಿ ಕೆಲಸಕ್ಕೆಂದು ಸಂದರ್ಶನ ಕೊಡಲು ಮೋಹನನ ಕಾರ್ಯಾಲಯಕ್ಕೆ ಬರುತ್ತಾನೆ. ಆಗ ಮೋಹನ ಅಹಲ್ಯಾಳ ಅಣ್ಣನಿಗೆ ಕೆಲಸ ಬೇಕಾದರೆ ಇಂತಿಷ್ಟು ದುಡ್ಡು ಕೊಡಬೇಕೆಂದು ಸೂಚಿಸುತ್ತಾನೆ.. ಆದರೆ ಇದಕ್ಕೆ ಅಹಲ್ಯಾಳ ಅಣ್ಣ ವಿರೋಧ ವ್ಯಕ್ತಪಡಿಸುತ್ತಾನೆ. ಅಹಲ್ಯಾಳ ಅಣ್ಣ ದಿಟ್ಟತನವನ್ನು ಮೆರೆದು, ಮೋಹನನ ವಿರುದ್ಧ ಸಾಕ್ಷಿ ಹೇಳುವುದಾಗಿ ಅವನು ಮಾಡುತ್ತಿರುವ ಅನ್ಯಾಯವನ್ನು ಸರಕಾರದ ಗಮನಕ್ಕೆ ತರುತ್ತೇನೆ. ಎಂದು ಹೇಳಿ ಹೋಗುತ್ತಿರುತ್ತಾನೆ. ಇದೇ ವೇಳೆಯಲ್ಲಿ ಮೋಹನನ ಬಲಗೈ ಭಂಟ, ಅಹಲ್ಯಾಳ ಅಣ್ಣನಿಗೆ ತಲೆಯ ಮೇಲೆ ಕಟ್ಟಿಗೆಯಿಂದ ಬಲವಾಗಿ ಹೊಡೆದು ಅವನ ಪ್ರಜ್ಞೆ ತಪ್ಪುವಂತೆ ಮಾಡುತ್ತಾನೆ. ಆ ಪರಿಸ್ಥಿತಿಯಲ್ಲಿ ಮೋಹನನಿಗೆ ಅಹಲ್ಯಾಳ ಅಣ್ಣ ನುಂಗಲಾರದ ತುತ್ತಾಗಿರುತ್ತಾನೆ. ಹೀಗಾಗಿ ಮೋಹನ ಅವನನ್ನು ತನ್ನ ಕಾರ್ಯಾಲಯದಿಂದ ಹೊರ ಹಾಕುತ್ತಾನೆ. ಅಹಲ್ಯಾಳ ಅಣ್ಣನಿಗೆ ತಲೆಗೆ ಬಿದ್ದ ಭಾರಿ ಪೆಟ್ಟಿನಿಂದಾಗಿ ತನ್ನ ಮಾನಸಿಕ ಸ್ಥಿಮಿತವನ್ನು ಕಳೆದುಕೊಳ್ಳುತ್ತಾನೆ. ಯಾರಿಗೂ ಗುರುತಿಸುವದಿಲ್ಲ. ತನ್ನ ಹಿಂದಿನ ನೆನಪನ್ನೆಲ್ಲಾ ಕಳೆದುಕೊಳ್ಳುತ್ತಾನೆ. ಅಹಲ್ಯಾಳಿಗೆ ತನ್ನ ಅಣ್ಣ ಎಷ್ಟೊಂದು ಒಳ್ಳೆಯವನಿದ್ದ ನೌಕರಿಗಾಗಿ ಸಂದರ್ಶನ ಕೊಡಲಿಕ್ಕೆ ಹೋಗಿದ್ದ ಇದ್ದಕ್ಕಿದ್ದ ಹಾಗೆ ಏನಾಯ್ತು, ಯಾಕೆ ನಮ್ಮಣ್ಣ ಹೀಗಾದ ಅವನಿಗೆ ಯಾರು ಶತ್ರುಗಳಿದ್ದಾರೆ. ಆ ಕಛೇರಿಯಲ್ಲಿ ನಮ್ಮಣ್ಣನ ಜೊತೆ ಏನಾಯಿತು ಎಂದು ತಿಳಿದುಕೊಳ್ಳಬೇಕೆಂದುಕೊಳ್ಳುತ್ತಾಳೆ. ಆ ಪ್ರಯತ್ನವಾಗಿ ಕಛೇರಿಗೆ ಹೋಗಿ ಎಲ್ಲಾ ಮಾಹಿತಿಯನ್ನು ಸಂಗ್ರಹಿಸುತ್ತಾಳೆ. ಮಾಹಿತಿ ಎಲ್ಲ ಸಂಗ್ರಹಿಸಿದ ಬಳಿಕ ಅವಳಿಗೆ ಗೊತ್ತಾಗುವ ವಿಷಯವೇನೆಂದರೆ, ತನ್ನ ಅಣ್ಣ ಮತ್ತು ಒಬ್ಬ ಅಧಿಕಾರಿಯ ಮಧ್ಯೆ ಸಣ್ಣದಾಗಿ ಜಗಳವಾಗಿ ಆ ಜಗಳ ವಿಕೋಪಕ್ಕೆ ತಿರುಗಿ ಈ ರೀತಿಯಾಗಿ ಹೊಡೆತ ತನ್ನಣ್ಣನಿಗಾಗಿದೇ ಎಂದು ತಿಳಿದುಕೊಳ್ಳುತ್ತಾಳೆ. ಇಲ್ಲಿಂದ ಅಹಲ್ಯಾಳ ಮುಂದೇ ಇರುವ ಏಕಮಾತ್ರ ಗುರಿ ತನ್ನಣ್ಣನಿಗೆ ಇಂತಹ ಪರಿಸ್ಥಿತಿಯನ್ನು ತಂದಿರುವಂತಹ ಆ ಅಧಿಕಾರಿ ಯಾರು ಎಂದು ತಿಳಿದುಕೊಳ್ಳುವುದು. ಅವನು ಮಾಡಿದ ತಪ್ಪಿಗೆ ಸೂಕ್ತ ಶಿಕ್ಷೆ ಕೊಡಿಸುವುದೇ ಅವಳ ಉದ್ದೇಶವಾಗುತ್ತದೆ. ಈ ವಿಷಯದ ಕುರಿತು ತನ್ನ ಗೆಳತಿಯ ಹತ್ತಿರ ಹೇಳಿಕೊಳ್ಳುತ್ತಿರುತ್ತಾಳೆ. ತನ್ನ ತಂದೆಯ ಮಾರ್ಗದರ್ಶನ ಸಹಾಯವನ್ನು ಪಡೆಯುತ್ತಾಳೆ. ಮೋಹನ ಒಬ್ಬ ಚಾಣಾಕ್ಷ ಬುದ್ಧಿಯವನಾಗಿರುತ್ತಾನೆ. ಅವನು ಯಾವುದೇ ಕೆಲಸ ಮಾಡಿದರೂ ಎಡಗೈ ಮಾಡಿದ ಕೆಲಸ ಬಲಗೈಗೆ ಗೊತ್ತು ಮಾಡದಂತಹ ವ್ಯಕ್ತಿಯಾಗಿರುವುದರಿಂದ ಅಹಲ್ಯಾಳ ಭೇಟಿಯಾದಾಗ ಅಹಲ್ಯಾಳ ಮನಸ್ಸಿನಲ್ಲಿರುವ ಇಂಗಿತವನ್ನು ಅರ್ಥಮಾಡಿಕೊಂಡು ತನ್ನ ಯಾವುದೇ ಕೆಲಸವನ್ನು ಬಹಳ ಚಾಣಾಕ್ಷತೆಯಿಂದ ಮಾಡುತ್ತಿರುತ್ತಾನೆ. ಎಲ್ಲಿಯೂ ತಪ್ಪಿತಸ್ಥನಾಗದಂತೆ ನೋಡಿಕೊಂಡು

ಹೋಗುತ್ತಾನೆ. ಇದರ ಮಧ್ಯೆ ಅಹಲ್ಯಾ ಹುಡುಕುತ್ತಿರುವ ಅಧಿಕಾರಿ ತಾನೆ ಎಂದು ಅರಿವಾದಾಗ ಇನ್ನಷ್ಟು ಸೂಕ್ಷ್ಮ ಬುದ್ಧಿಯನ್ನು ತೋರಿಸುತ್ತಾನೆ. ಮೋಹನ ತನಗೆ ಮದುವೆಯಾಗಿದ್ದರು ಅಹಲ್ಯಾಳನ್ನು ಬಯಸುತ್ತಿರುತ್ತಾನೆ. ಅವಳನ್ನು ಒಮ್ಮೆ ಮದುವೆಯಾಗಿ ಬಿಟ್ಟರೇ ತನ್ನ ಜೀವನ ಸಾರ್ಥಕವಾದಂತೆ ಎಂದು ಅಂದುಕೊಳ್ಳುತ್ತಿರುತ್ತಾನೆ. ಅಹಲ್ಯಾಳನ್ನು ಭೇಟಿಯಾಗುವಂತಹ ಸಂದರ್ಭಗಳನ್ನು ಸೃಷ್ಟಿಸಿ ಅವಳನ್ನು ಭೇಟಿಯಾಗುತ್ತಿರುತ್ತಾರೆ. ಅಹಲ್ಯಾ ಹುಡುಕುತ್ತಿರುವ ಆ ಭ್ರಷ್ಟ ಅಧಿಕಾರಿಯನ್ನು ಹಿಡಿಯಲು ತಾನು ಸಹಾಯ ಮಾಡುವವನಂತೆ ಸಭ್ಯಸ್ಥ ನ್ಯಾಯಯುತವಾಗಿ ನಡೆದುಕೊಳ್ಳುವ ದಕ್ಷ ಅಧಿಕಾರಿಯೆಂದು ಅಹಲ್ಯಾಳ ಮುಂದೆ ಹೇಳಿ ಕೊಳ್ಳುತ್ತಿರುತ್ತಾನೆ. ಈ ಮೂಲಕ ಅಹಲ್ಯಾಳ ಮನಸ್ಸಿನಲ್ಲಿ ತಾನೊಬ್ಬ ನಿಷ್ಠಾವಂತ ದಕ್ಷ ಸರಕಾರಿ ಅಧಿಕಾರಿಯೆಂಬ ಮನೋಭಾವ ಬಿತ್ತುತ್ತಿರುತ್ತಾನೆ. ಯಾವುದೇ ಕಪಟ ಮೋಸ, ವಂಚನೆ, ಸ್ವಾರ್ಥವಿಲ್ಲದ ವ್ಯಕ್ತಿ ಎಂದು ತಾನು ಬಿಂಬಸಿಕೊಳ್ಳುತ್ತಿರುತ್ತಾನೆ. ಅಹಲ್ಯಾ ಮಾತ್ರ ಯಾವುದೇ ಉದ್ದೇಶವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ ಅವನನ್ನು ತನ್ನ ದಾರಿಯಲ್ಲಿ ಒಬ್ಬ ಮಾರ್ಗದರ್ಶಕರಂತೆ ಕಾಣುತ್ತಾಳೆ.

ಇದರ ಮಧ್ಯೆ ಅಹಲ್ಯಾಳನ್ನು ನೋಡಲು ಹುಡುಗನೊಬ್ಬ ಬರುತ್ತಾನೆ. ಇಲ್ಲಿ ಅಹಲ್ಯಾ ಮತ್ತು ಹುಡುಗನ ಕಡೆಯವರು ಪರಸ್ಪರ ಮಾತನಾಡಿಕೊಂಡು ವಿಚಾರ ವಿನಿಮಯ ಮಾಡಿಕೊಂಡಾಗ ತಮ್ಮ ಮಗಳು ಅಹಲ್ಯಾಳಿಗೆ ರಮೇಶ ಸರಿಯಾದ ಜೋಡಿ ಎಂದು ತೀರ್ಮಾನಿಸಿ ಮದುವೆ ಮಾಡುವುದಾಗಿ ನಿರ್ಧರಿಸುತ್ತಾರೆ. ಈ ವಿಷಯ ತಿಳಿಯುವ ಮೋಹನ ಮನದಲ್ಲೇ ಕುದಿಯುತ್ತಿರುತ್ತಾನೆ. ಹೇಗಾದರೂ ಮಾಡಿ ಈ ಮದುವೆ ನಿಲ್ಲಸಬೇಕೆಂದು ಪಣ ತೊಡುತ್ತಾನೆ. ಮದುವೆಯ ತಯಾರಿಗಳು ನಡೆದು ಇನ್ನೇನು ಅಕ್ಷತೆ ಹಾಕಬೇಕಾದ ಸಂದರ್ಭದಲ್ಲಿ ಹುಡುಗನ ಕಡೆಯಿಂದ ಈ ಮದುವೆ ನಡೆಯುವುದಿಲ್ಲ. ತಮಗೆ ಈ ಮದುವೆ ಇಷ್ಟವಿಲ್ಲವೆಂಬ ಸಂದೇಶ ಬರುತ್ತದೆ. ಈ ಸಂದೇಶ ಕೇಳಿ ಅಹಲ್ಯಾರ ತಂದೆಗೆ ಮತ್ತು ನೆರೆದಿದ್ದ ಎಲ್ಲರಿಗೂ ಆಶ್ಚರ್ಯವಾಗುತ್ತದೆ. ಈಗ ಮದುವೆಮಂಟಪದಲ್ಲಿ ಅಹಲ್ಯಾಳನ್ನು ಯಾರು ಮದುವೆಯಾಗುತ್ತಾರೆ ಎಂಬ ಪ್ರಶ್ನೆ ಕಾಡಲು ಶುರುವಾಗುತ್ತದೆ. ಆಗ ಮೋಹನ ಒಳ್ಳೆತನದ ಮುಖವಾಡ ಧರಿಸಿ ಒಂದು ಹೆಣ್ಣಿನ ಬಾಳು ಹೀಗೆ ಹಾಳಾಗಬಾರದು ನೀವೆಲ್ಲರೂ ಒಪ್ಪಿಗೆ ಕೊಟ್ಟರೇ ತಾನೇ ವಿವಾಹವಾಗುವುದಾಗಿ ಹೇಳುತ್ತಾನೆ. ಇದಕ್ಕೆ ಅಹಲ್ಯಾಳ ತಂದೆ ಒಪ್ಪಿಗೆ ಕೊಡುತ್ತಾರೆ. ಈ ಮೂಲಕ ಮೋಹನ ತನ್ನ ಕುಶಾಗ್ರ ಬುದ್ಧಿಯನ್ನು ಉಪಯೋಗಿಸಿ, ಅಹಲ್ಯಾಳ ಸುತ್ತ ಚಕ್ರವ್ಯೂಹವನ್ನು ನಿರ್ಮಿಸಿ, ಅದರಲ್ಲಿ ಅಹಲ್ಯಾ ಬೀಳುವಂತೆ ಮಾಡಿ ಈ ಆಟದಲ್ಲಿ ಮೋಹನ ಅಹಲ್ಯಾಳನ್ನು ಮದುವೆಯಾಗುವುದರ ಮೂಲಕ ಗೆಲ್ಲುತ್ತಾನೆ. ತನ್ನ ಮನಸ್ಸಿನ ಎಲ್ಲ ಆಸೆಗಳು ಈ ರೀತಿಯಾಗಿ ಪೂರೈಸಿಕೊಳ್ಳುತ್ತಾನೆ. ಅಹಲ್ಯಾಳ ಅಣ್ಣ ಬುದ್ಧಿ ಭ್ರಮಣೆ ಯಾಗಿದ್ದವನು ಮೋಹನನನ್ನು ಕಂಡೊಡನೆ ಈ ವ್ಯಕ್ತಿಯನ್ನು ನಾನೆಲ್ಲೋ ನೋಡಿದ್ದೇನೆ ಎಂದು ಹೇಳುತ್ತಿರುತ್ತಾನೆ. ಆದರೆ ಅಹಲ್ಯಾ ತನ್ನ ಅಣ್ಣನ ಮಾತುಗಳಿಗೆ ಕಿವಿಕೊಡುವುದಿಲ್ಲ ಬದಲಿಗೆ ಅವನನ್ನು ಗದರಿಸಿ ಸುಮ್ಮನಾಗುವಂತೆ ಸೂಚಿಸುತ್ತಾಳೆ. ಮೋಹನನಿಗೆ ಈ ಮೊದಲೇ

ವಿವಾಹವಾಗಿದ್ದರೂ ಕೂಡ ಅಹಲ್ಯಾಳನ್ನು ಎರಡನೇ ಮದುವೆಯಾಗುತ್ತಾನೆ. ತನ್ನ ಮೊದಲನೇ ಹೆಂಡತಿ ತನ್ನನ್ನು ಲಂಚ ತೆಗೆದುಕೊಳ್ಳಬೇಕೆಂದು ಹೇಳಿ ಪೀಡಿಸುತ್ತಿದ್ದಳು. ರೊಕ್ಕಾ, ರೊಕ್ಕಾ, ಎಂದು ಬಾಯಿ ಬಡಿದುಕೊಳ್ಳುವಂತಹ ಹೆಣ್ಣು, ಅಂತಹ ಹೆಣ್ಣಿನೊಂದಿಗೆ ಸಂಸಾರ ಮಾಡುವುದು ಕಷ್ಟವಾಗಿರುವುದರಿಂದ ಅವಳನ್ನು 'ಸೋಡಾಚೀಟಿ' ಕೊಟ್ಟು ಬಿಟ್ಟಿದ್ದೇನೆ ಎಂದು ಅಹಲ್ಯಾಳ ಎದುರು ಹೇಳುತ್ತಾನೆ. ಇತ್ತ ಮೋಹನನ ಮೊದಲನೆ ಪತ್ನಿಗೆ ಅಹಲ್ಯಾಳ ಬಗ್ಗೆ ಇನ್ನೊಂದು ಸುಳ್ಳನ್ನು ಸೃಷ್ಟಿಸಿ ಅವಳ ಎದುರು ಹೇಳುತ್ತಾನೆ. ಅಹಲ್ಯಾ ಮತ್ತು ಚಿಂತಾಮಣಿಯ ಮಧ್ಯೆ ಮೋಹನ ಸುಳ್ಳಿನ ಹಂದರವನ್ನು ಸೃಷ್ಟಿಸಿರುತ್ತಾನೆ. ಮೋಹನ ಲಂಚವನ್ನು ಸ್ವೀಕರಿಸಿದ ಎಲ್ಲ ಹಣವನ್ನು ಚಿಂತಾಮಣಿಯ ಮನೆಯಲ್ಲಿಯೇ ಇಡುತ್ತಿರುತ್ತಾನೆ. ಒಟ್ಟಿನಲ್ಲಿ ಕಥೆಯು ಒಬ್ಬ ಭ್ರಷ್ಟ ಅಧಿಕಾರಿಯನ್ನು ಹುಡುಕಿ ಅವನ ಭ್ರಷ್ಟತೆಯನ್ನು ಮಟ್ಟಹಾಕಬೇಕೆಂದುಕೊಂಡು ಹೋರಾಟ ಮಾಡಿದ ಧೀರ ಮಹಿಳೆಯೊಬ್ಬಳು ಹೇಗೆ ಅವನ ಕುತಂತ್ರಕ್ಕೆ ಬಲಿಯಾಗಿ ಅವನನ್ನೇ ಮದುವೆಯಾಗುತ್ತಾಳೆ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ.

೩.೨. ಆಯ್ದ ಹಿಂದಿ ಧಾರಾವಾಹಿಗಳ ವಿಶ್ಲೇಷಣೆ

ಇಲ್ಲಿಯವರೆಗೂ ಆಯ್ದ ಕನ್ನಡ ಧಾರಾವಾಹಿಗಳಲ್ಲಿ ಪ್ರಸಾರವಾದಂತಹ ಸಂಚಿಕೆಗಳ ಕಥಾವಸ್ತುವನ್ನು ವಿವರಿಸಿ, ವಿಶ್ಲೇಷಣೆಯನ್ನು ಕೈಗೊಳ್ಳಲಾಯಿತು. ಈಗ ಆಯ್ದ ಹಿಂದಿ ಧಾರಾವಾಹಿಗಳಲ್ಲಿ ಮಹಿಳಾ ಪಾತ್ರಗಳ ನಿರ್ವಚನವನ್ನು ಮಾಡಲಾಗುವುದು. ಹೆಣ್ಣಿನ ಅಸ್ತಿತ್ವವನ್ನು ಕುಟುಂಬದೊಂದಿಗೆ ಸಮೀಕರಿಸಿ ನೋಡುವ ದೃಷ್ಟಿಕೋನವನ್ನು ಪ್ರತಿಯೊಂದು ಕನ್ನಡ ಧಾರಾವಾಹಿಗಳಲ್ಲಿಯೂ ಕಾಣಲಾಯಿತು. ವಿವಾಹದ ವ್ಯವಸ್ಥೆಯೊಳಗೆ ಕಥಾನಾಯಕಿಯರು ಬಂಧಿಯಾಗುವುದರ ಮೂಲಕ ಪಿತೃಪ್ರಧಾನ ವ್ಯವಸ್ಥೆಯ ಕಪಿಮುಷ್ಠಿಗೆ ಸಿಲುಕಿ ಪರದಾಡುವ ಪರಿಸ್ಥಿತಿಯನ್ನು ಕಲ್ಯಾಣಿ ಧಾರಾವಾಹಿಯಾಗಿರಬಹುದು. ಲಕುಮಿ ಧಾರಾವಾಹಿಯಾಗಿರಬಹುದು. ಇಲ್ಲವೆ ಇದ್ರ ಇರಬೇಕು ನಿನ್ನಹಾಂಗದ ಅಹಲ್ಯಾಳ ಪಾತ್ರವಾಗಿರಬಹುದು. ಈ ಎಲ್ಲಾ ಪಾತ್ರಗಳೂ ವಿವಾಹದ ಚೌಕಟ್ಟಿನೊಳಗೆ ಒಳಗಾದಾಗ ಅವರು ಅನುಭವಿಸುವ ಯಾತನೆ, ತಳಮಳ, ಎಲ್ಲದರ ವಿವರಣೆ ಈ ಧಾರಾವಾಹಿಗಳಲ್ಲಿ ಕಟ್ಟಿಕೊಡಲಾಗಿದೆ. ಇದು ಕನ್ನಡ ಧಾರಾವಾಹಿಗಳ ಚಿತ್ರಣವಾದರೆ, ಹಿಂದಿ ಧಾರಾವಾಹಿಗಳಲ್ಲಿ ಪ್ರತಿನಿಧಿತವಾಗುವ ಮಹಿಳೆಯ ಬದುಕಿನ ಅನಾವರಣ ಹೇಗಾಗುತ್ತದೆ? ಕನ್ನಡ ಧಾರಾವಾಹಿಯಲ್ಲಿ ನಿರ್ವಚನಗೊಳ್ಳುವ ಮಹಿಳೆಗೂ ಮತ್ತು ಹಿಂದಿ ಧಾರಾವಾಹಿಯಲ್ಲಿ ನಿರ್ವಚನಗೊಳ್ಳುವ ಮಹಿಳಾ ಬದುಕಿಗೂ ನಡುವೆ ಇರುವ ಸಾಮ್ಯತೆ ಎಷ್ಟು? ಭಿನ್ನತೆ ಎಷ್ಟು ಎಂಬುದನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆಯ್ದ ಹಿಂದಿ ಧಾರಾವಾಹಿಗಳಲ್ಲಿ ಪ್ರತಿನಿಧಿತವಾಗಿರುವ ಮಹಿಳಾ ಪಾತ್ರಗಳ ನಿರ್ವಚನವನ್ನು ಮುಂದೆ ಮಾಡಲಾಗುವುದು.

೩.೨.೧. "ಸಾಥ ನಿಭಾನಾ ಸಾಥಿಯಾ"

ಕಥೆಯ ಸಾರಾಂಶ

ಕಥಾ ನಾಯಕಿ ಗೋಪಿ. ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡ ನತದೃಷ್ಟೆ. ಬಂಧು. ಬಳಗ ಆತ್ಮೀಯರು ಯಾರು ಇಲ್ಲದ ಜೀವನ. ಇವಳ ಜೀವನಕ್ಕೆ

ಆಧಾರವಾಗಿ ನಿಂತವರು ದೂರದ ಸಂಬಂಧಿಕರಾದ ಜೀತು ಮಾಮಾ ಮತ್ತು ಊರ್ಮಿಳಾ ಮಾಮಿ. ತಂದೆ ತಾಯಿಗಳ ಪ್ರೀತಿ, ವಾತ್ಸಲ್ಯದಿಂದ ವಂಚಿತಳಾದ ಇವಳಿಗೆ ಇವರೇ ಬಾಳಿನ ಆಧಾರ ಸ್ತಂಭವಾಗಿರುತ್ತಾರೆ.

ಗೋಪಿ ಮನೆಯ ಎಲ್ಲ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿಕೊಂಡು ಹೋಗುತ್ತಿರುತ್ತಾಳೆ. ಯಾವುದೇ ಕೆಲಸ ಕೊಟ್ಟರೂ ಮರು ಮಾತನಾಡದೆ ಕೆಲಸ ಮಾಡಿಕೊಂಡು ಹೋಗುವ ಸದಾ ಹಸನ್ಮುಖಿಯಾಗಿರುವಂತಹ ಹುಡುಗಿ. ಗೋಪಿಯ ಮಾಮಿ ಊರ್ಮಿಳಾ ಒಬ್ಬ ಮುಂಗೋಪಿ ಹೆಂಗಸು ಪ್ರತಿಯೊಂದನ್ನು ತನಗೆ ಸಿಗಬೇಕೆಂಬ ಅತಿಯಾದ ಆಸೆ. ಇವಳಿಗೆ ರಾಶಿ ಎಂಬ ಮಗಳಿರುತ್ತಾಳೆ. ರಾಶಿ ಆಧುನಿಕ ಮನೋಭಾವದ, ವಿಚಾರಗಳನ್ನು ಹೊಂದಿರುವ ಹುಡುಗಿ. ತಾನು ಆಸೆಪಟ್ಟದ್ದನ್ನು ಪಡೆಯಲು ಎಂತಹ ಕೆಲಸವನ್ನು ಕೂಡಾ ಮಾಡುವಂತಹ ಸ್ವಭಾವವಿರುವವಳು. ತನಗೆ ಸಿಗಬೇಕಾದದ್ದು ಸಿಗದೇ ಹೋದರೆ ಅದನ್ನು ವಾಮಮಾರ್ಗವನ್ನು ಅನುಸರಿಸಿಯಾದರೂ ಪಡೆಯುವಂತಹ ಗುಣಗಳಿರುತ್ತವೆ. ರಾಶಿ ಕಾಲೇಜಿಗೆ ಹೋಗಬೇಕಾದಾಗ ಅವಳ ಪ್ರತಿಯೊಂದು ಕೆಲಸವನ್ನು ಗೋಪಿಯೇ ಮಾಡಬೇಕು, ರಾಶಿಯ ಕೈಕೆಳಗೆ ಆಳಿನಂತೆ ಓಡಾಡುವುದು ಗೋಪಿಯ ನಿತ್ಯಜೀವನವಾಗಿರುತ್ತದೆ. ಇದೇ ಸಮಯದಲ್ಲಿ ಕಥೆಯ ಇನ್ನೊಂದು ಭಾಗದ ಅನಾವರಣವಾಗುತ್ತದೆ. ಅದ ಆಗರ್ಭ ಶ್ರೀಮಂತರ ಭವ್ಯವಾದ ಮನೆ, ಸಾಮಾನು ಸರಂಜಾಮುಗಳು ಮನೆಯ ಒಳಗೆ ದೇವಲೋಕವೇ ಭೂಮಿಯ ಮೇಲೆ ಇಳಿದಿದೆಯೋ ಏನೋ ಎನ್ನುವ ಭಾವ ಚಿತ್ರಿಸಿರುವಂತಹ ಭವ್ಯವಾದ ಬಂಗಲೆ ಈ ಮನೆ ಸಮಾಜದಲ್ಲಿ ಪ್ರತಿಷ್ಠಿತರೆನಿಸಿರುವ ಮೇಲ್ವರ್ಗದ ಮನೆತನ.

ಈ ಮನೆಯಲ್ಲಿ ಹಿರಿಯ ತಾಯಿ ಮಕ್ಕಳು ಸೊಸೆಯಂದಿರು ಮತ್ತು ಮೊಮ್ಮಕ್ಕಳು ಇರುವ ದೊಡ್ಡ ಕುಟುಂಬ. ಈ ಕುಟುಂಬ ಗುಜರಾತಿ ಸಮುದಾಯವನ್ನು ಪ್ರತಿನಿಧಿಸುವ "ಮೋದಿ" ಮನೆತನ. ಈ ಮನೆತನದ ಹಿರಿಯ ಮಗ ಚಿರಾಗ, ಚಿರಾಗ ಮತ್ತು ಹೇತಲ ದಂಪತಿಗಳು ಇವರಿಗೆ ಜಿಗರ ಎಂಬ ಒಬ್ಬ ಮಗ, ಚಿರಾಗ ಮೋದಿ ತಮ್ಮ ಮೋದಿ ಎಂಪೈರನ್ನು ನೋಡಿಕೊಂಡು ಹೋಗುತ್ತಿರುತ್ತಾನೆ. ಈತನ ಹೆಂಡತಿ ಮನೆಯ ಹಿರಿಸೊಸೆ ಮುಗ್ಧ ಮನಸ್ಸಿನ ಹಸನ್ಮುಖಿ ಹೆಣ್ಣುಮಗಳು, ಇವಳು ಮನೆಯ ಎಲ್ಲ ಜವಾಬ್ದಾರಿಯನ್ನು ಹೊತ್ತುಕೊಂಡು ಸುಖಿ ಜೀವನ ನಡೆಸುತ್ತಿರುತ್ತಾಳೆ. ಇವರಿಗೆ ಮದುವೆ ವಯಸ್ಸಿಗೆ ಬಂದಿರುವಂತಹ ಒಬ್ಬ ಮಗನಿರುವುದರಿಂದ ಅವನ ಮದುವೆ ಮಾಡುವ ತಯಾರಿಯಲ್ಲಿರುತ್ತಾರೆ. ಹುಡುಗಿಯ ಅನ್ವೇಷಣೆಯಲ್ಲಿರುತ್ತಾರೆ. ಈ ಮನೆಯ ಎರಡನೆ ಮಗ ಪರಾಗ. ಪರಾಗ ಹೆಂಡತಿ ಕೋಕಿಲಾ ಈ ದಂಪತಿಗಳಿಗೆ ಏಹೆಮ್ ಮತ್ತು ಕಿಂಜಲ್ ಎಂಬ ಇಬ್ಬರು ಮಕ್ಕಳು ಪರಾಗ ತನ್ನ ಅಣ್ಣನೊಂದಿಗೆ ತಂದೆಯ ವ್ಯವಹಾರವನ್ನು ನೋಡಿಕೊಂಡು ಹೋಗುತ್ತಿರುತ್ತಾನೆ. ಆಗಾಗ ಕವಿತೆಗಳನ್ನು ಬರೆಯುವ ಹವ್ಯಾಸವನ್ನಿಟ್ಟು ಕೊಂಡಿರುತ್ತಾನೆ. ಪರಾಗನ ಹೆಂಡತಿ ಕೋಕಿಲಾ ಮೋದಿ. ಕೋಕಿಲಾ ಮೋದಿ ಮನೆಯಲ್ಲಿ ಕಿರಿ ಸೊಸೆ. ಮನೆಯ ಎಲ್ಲ ಜವಾಬ್ದಾರಿಗಳನ್ನು ಹೊತ್ತುಕೊಂಡಿರುತ್ತಾಳೆ. ಕೋಕಿಲಾ ಮಾಡುವ ಎಲ್ಲ ಕೆಲಸಗಳಲ್ಲಿಯೂ ಪೂರ್ಣತೆಯಿರಬೇಕು.

ಯಾವುದೇ ಕೆಲಸವನ್ನು ಅಪೂರ್ಣ ಮಾಡುವುದಾಗಲಿ ಕೆಲಸದಲ್ಲಿ ನಿಷ್ಠೆಯಿಲ್ಲದೆ, ಶಿಸ್ತು ಇಲ್ಲದ ಕೆಲಸಗಳನ್ನು ಮಾಡಿದರೆ ತರಾಟೆಗೆ ತೆಗೆದುಕೊಂಡು ಬಿಡುವ ಸ್ವಭಾವ, ಮನೆಯ ಪ್ರತಿಯೊಂದು ವಸ್ತುವಿನ ಲೆಕ್ಕಾಚಾರ ಕೋಕಿಲಾಗೆ ಗೊತ್ತಿರುತ್ತದೆ. ಯಾವುದೇ ಹಬ್ಬ ಹರಿದಿನಗಳು, ಪೂಜೆ ಪುನಸ್ಕಾರಗಳು ಬಂದಾಗ ಅವುಗಳ ಮುಂದಾಳತ್ವವನ್ನು ವಹಿಸಿಕೊಂಡು ಸುಗಮವಾಗಿ ಮಾಡಿ ಮುಗಿಸುವಂತಹವಳಾಗಿರುತ್ತಾಳೆ. ಕೋಕಿಲಾ ತನ್ನ ಜೀವನದಲ್ಲಿ ಶಿಸ್ತು, ಸಂಯಮ, ನಿಷ್ಠೆ, ಗೌರವ, ಹೀಗೆ ಭಾರತೀಯ ಸಂಪ್ರದಾಯದಲ್ಲಿ ಒಬ್ಬ ಹೆಣ್ಣಿಗೆ ಇರಬೇಕಾದ ಸಂಸ್ಕಾರ ಗಳೆಲ್ಲವೂ ಕೋಕಿಲಾ ಮೋದಿಯಲ್ಲಿ ಕಾಣಬಹುದಾಗಿತ್ತು. ಅಂತೆಯೇ ತನ್ನ ಮಗನಿಗೆ ಚಿಕ್ಕಂದಿನಲ್ಲಿಯೇ ಮುಂದೆ ಗುರಿ ಇಟ್ಟು ಹಿಂದೆ ಗುರುವಾಗಿ ಮಗನ ಭವಿಷ್ಯವನ್ನು ರೂಪಿಸಿ ರುತ್ತಾಳೆ. ಮಗ ಇಂದು ಯಶಸ್ವಿ ವ್ಯಾಪಾರಸ್ಥರಲ್ಲಿ ಒಬ್ಬ ಎಂಬ ಹೆಗ್ಗಳಿಕೆಗೆ ಪಾತ್ರನಾಗಿರುತ್ತಾನೆ. ಮಗನ ಈ ಯಶಸ್ಸಿನ ಹಿಂದೆ ಕೋಕಿಲಾಳ ಪರಿಶ್ರಮವಿರುತ್ತದೆ. ತನ್ನ ಒಬ್ಬನೆ ಮಗ ಎಹೆಮಗೆ ಈಗ ಮದುವೆಯ ವಯಸ್ಸಾಗಿದ್ದು ಅವನಿಗೆ ಕನ್ಯೆಯನ್ನು ತರುವ ಪ್ರಯತ್ನ ಮಾಡುತ್ತಿರುತ್ತಾಳೆ. ತನ್ನ ಮಗನಿಗೆ ಹೆಂಡತಿಯಾಗಿ ಬರುವವಳು ಅನಕ್ಷರಸ್ಥೆಯಾಗಿರಬೇಕು. ನಯ, ವಿನಯ, ಪೂಜೆ, ಪುನಸ್ಕಾರಗಳನ್ನು ಮಾಡಿಕೊಂಡು ಗುರು ಹಿರಿಯರಿಗೆ ಬಾಗಿ ನಡೆಯುವಂತಹ ಗುಣ ಹೊಂದಿರುವ ಹೆಣ್ಣನ್ನು ಹುಡುಕುತ್ತಿರುತ್ತಾಳೆ.

ಕೋಕಿಲಾ ಹುಡುಕುತ್ತಿರುವ ಸರ್ವಗುಣ ಸಂಪನ್ನೆಯರ ಸಂಖ್ಯೆ ಹೆಚ್ಚಾಗುತ್ತ ಹೋಗುತ್ತದೆ ವಿನಃ ಆದರೆ ಬಯಸಿದಂತಹ ಹುಡುಗಿ ಮಾತ್ರ ಸಿಗುವುದಿಲ್ಲ. ಕೊನೆಯ ಪ್ರಯತ್ನವಾಗಿ ಗೋಪಿಯ ಮನೆಗೆ ಕನ್ಯೆ ನೋಡಲು ಹೋಗುತ್ತಾಳೆ. ಕೋಕಿಲಾ ಇಲ್ಲಿ ರಾಶಿಯನ್ನು ನೋಡಲು ಬಂದಿರುತ್ತಾಳೆ. ರಾಶಿಯ ತಾಯಿ ಊರ್ಮಿಳಾ ತನ್ನ ಮಗಳ ಬಗ್ಗೆ, ಅವಳ ಉದಾರವಾದ ಗುಣಗಳ ಬಗ್ಗೆ ಹೊಗಳುತ್ತಾ ಹೋಗುತ್ತಾಳೆ. ಆಗ ಕೋಕಿಲಾ ರಾಶಿಗೆ ಕೆಲವೊಂದು ಪ್ರಶ್ನೆಗಳನ್ನು ಕೇಳುತ್ತಾಳೆ. ಆಕೆಯ ಹಾವ ಭಾವಗಳನ್ನು ಅವಳ ಅಂತರ್ಯವನ್ನು ಅರಿಯುವ ಪ್ರಯತ್ನ ಮಾಡುತ್ತಾಳೆ. ಈ ಮೂಲಕ ವಧು ಪರೀಕ್ಷೆ ಮಾಡುತ್ತಾಳೆ. ಆದರೆ ಕೋಕಿಲಾಳಿಗೆ ರಾಶಿ ತನ್ನ ಮಗನಿಗೆ ಮತ್ತು ತಮ್ಮ ಮನೆತನಕ್ಕೆ ತಕ್ಕಳಾದವಳಲ್ಲ ಎಂದು ಅನಿಸುತ್ತದೆ. ಆಗ ಕೋಕಿಲಾ ಮೋದಿಯ ಕಣ್ಣು ಬಾಗಿಲ ಮೂಲೆಯಲ್ಲಿ ನಿಂತಿರುವ ಗೋಪಿಯ ಕಡೆ ಹೋಗುತ್ತದೆ. ಗೋಪಿಯ ಸರಳ ಉಡುಗೆ ತೊಡುಗೆ, ಹಸನ್ಮುಖ, ಸಹಜ ಸೌಂದರ್ಯ, ನಿಷ್ಕಪಟ ಪ್ರೀತಿ, ಮುಗ್ಧಭಾವ ಇವನ್ನೆಲ್ಲ ನೋಡಿ ಗೋಪಿಯನ್ನೇ ತನ್ನ ಮನೆಯ ಸೊಸೆಯಾಗಿ ಮಾಡಿಕೊಳ್ಳಬೇಕೆಂದು ನಿರ್ಧರಿಸುತ್ತಾಳೆ. ನಿರ್ಧರಿಸಿದ ತಕ್ಷಣವೇ ಗೋಪಿ ಇವತ್ತಿನಿಂದ ತಮ್ಮ ಮನೆಯ ಸೊಸೆ ಎಂದು ಹೇಳಿ ತಮ್ಮ ಮನೆತನ ಗುರುತಾಗಿ ಬಳೆಯನ್ನು ತೊಡಿಸಿ ಹೋಗುತ್ತಾಳೆ. ಹೋಗುವಾಗ ಊರ್ಮಿಳಾಗೆ ಗೋಪಿಯನ್ನು ತಮ್ಮನೆಯ ಸೊಸೆಯಾಗಿ ಮಾಡಿಕೊಳ್ಳುತ್ತೇವೆ. ಇನ್ನು ಕೆಲವೇ ದಿನಗಳಲ್ಲಿ ಮದುವೆಯನ್ನು ಮಾಡುವುದಾಗಿ ಅದಕ್ಕೆ ಬೇಕಾಗುವ ಎಲ್ಲಾ ತಯಾರಿಗಳನ್ನು ಮಾಡಿಕೊಳ್ಳಬೇಕೆಂದು ಹೇಳಿ ಹೋಗುತ್ತಾಳೆ.

ಈಗ ಊರ್ಮಿಳಾಗೆ ಗೋಪಿಯ ಮೇಲೆ ಮತ್ತಷ್ಟು ಕೋಪ ಅಸಹನೆ ಉಕ್ಕತೊಡಗುತ್ತದೆ. ಮೋದಿ ಮನೆಗೆ ತನ್ನ ಮಗಳು ಸೊಸೆಯಾಗಿ ಹೋಗಬೇಕಾಗಿತ್ತು. ಇವಳಿಗೆ ಇಂತಹ ರಾಜ ವೈಭೋಗ ದೊರೆಯಿತಲ್ಲ ಎಂದು ಗೋಪಿಗೆ ಬೈಯುವುದು, ಚುಚ್ಚು ಮಾತುಗಳನ್ನಾಡುವುದು ಮಾಡುತ್ತಾಳೆ. ಇತ್ತ ಗೋಪಿ ತನಗೆ ಬಯಸದೇ ಬಂದ ಈ ಭಾಗ್ಯವನ್ನು ಸಂತೋಷದಿಂದ ಸ್ವೀಕರಿಸಬೇಕೋ ತನ್ನ ತಂಗಿಗೆ ಸಿಗಬೇಕಾದ ಸ್ಥಾನ ತನಗೆ ಸಿಕ್ಕಿತಲ್ಲ ಎಂದು ದುಃಖ ಪಡಬೇಕೋ ತಿಳಿಯದ ಪರಿಸ್ಥಿತಿಯಲ್ಲಿರುತ್ತಾಳೆ. ಹಾಗಾಗಿ ತನಗೆ ಬಂದ ಈ ಭಾಗ್ಯವನ್ನು ಬೇಡವೆಂದು ತಿರಸ್ಕರಿಸುತ್ತೇನೆ ಎಂದು ಊರ್ಮಿಳಾಗೆ ಹೇಳುತ್ತಾಳೆ. ಆದರೆ ಊರ್ಮಿಳಾ ಇಲ್ಲಿಯೂ ಕೂಡ ಚುಚ್ಚುಮಾತುಗಳನ್ನಾಡುತ್ತಾಳೆ. ಅವರು ಬಳೆ ಹಾಕುವಾಗ ಇದೇ ಮಾತುಗಳ ನ್ನಾಡಬೇಕಿತ್ತು. ಆಗ ಸುಮ್ಮನಿದ್ದು ಈಗ ಬೇಡವೆನ್ನುತ್ತೀಯಾ ಎಂದು ಬೈಯುತ್ತಾಳೆ. ಮಾಮಿಯ ಈ ಮಾತುಗಳಿಂದ ಗೋಪಿ ಅಸಹಾಯಕಳಾಗಿ ನಿಂತುಬಿಡುತ್ತಾಳೆ.

ಇತ್ತ ಕೋಕಿಲಾ ಮನೆಗೆ ಬಂದು ಎಲ್ಲ ವಿಷಯವನ್ನು ಹೇಳಿ ಮದುವೆಗೆ ತಯಾರಿ ಮಾಡಿಕೊಳ್ಳಬೇಕೆಂದು ಹೇಳುತ್ತಾಳೆ. ಮನೆಯ ಎಲ್ಲ ಸದಸ್ಯರು ಹುಡುಗಿಯ ಫೋಟೋ ನೋಡಿ ಒಪ್ಪಿಗೆಯನ್ನು ಸೂಚಿಸುವುದರ ಮೂಲಕ ಸಂತಸಪಡುತ್ತಾರೆ. ಮದುವೆಯ ಗಂಡು ಏಹೆಮ ಮಾತ್ರ ಹುಡುಗಿಯ ಫೋಟೊ ನೋಡುವುದಿಲ್ಲ. ತನ್ನ ತಾಯಿ ತನಗೆ ಒಳ್ಳೆಯ ಹುಡುಗಿಯನ್ನೇ ಹುಡುಕಿರುತ್ತಾಳೆ. ಅವಳ ಫೋಟೊ ನೋಡುವ ಅವಶ್ಯಕತೆ ಇಲ್ಲವೆಂದು ಹೇಳಿ ಹೊರಟು ಹೋಗುತ್ತಾನೆ. ಸಮಯ ಕಳೆದಂತೆ ಮದುವೆಯ ದಿನಗಳು ಹತ್ತಿರ ಬರುತ್ತವೆ. ಇತ್ತ ಊರ್ಮಿಳಾ ಮನೆಗೆ ಎಲ್ಲ ರೀತಿಯ ತಯಾರಿಗಳನ್ನು ಮಾಡಲು ಮೋದಿ ಮನೆಯಿಂದ ಆಳುಗಳನ್ನು ಕಳಿಸಿರುತ್ತಾರೆ. ಮನೆಗೆ ಬೇಕಾಗುವ ಸುಣ್ಣ ಬಣ್ಣ, ಒಳ್ಳೆ ಒಳ್ಳೆ ಅಲಂಕಾರಿಕ ವಸ್ತುಗಳು, ಆಧುನಿಕ ಸಾಧನ ಸಲಕರಣೆಗಳು. ಈ ಎಲ್ಲಾ ಸೌಲಭ್ಯಗಳು ಒದಗಿ ಬರುತ್ತವೆ. ಮೋದಿ ಮನೆತನ ಸಮಾಜದಲ್ಲಿ ಪ್ರತಿಷ್ಠಿತ ಮನೆತನ ಆಗಿರುವುದರಿಂದ ತಮ್ಮ ಪ್ರತಿಷ್ಠೆಗೆ ತಕ್ಕಂತಹ ಮನೆ ಇರಬೇಕೆಂದು ಈ ಎಲ್ಲ ಸೌಲಭ್ಯಗಳನ್ನು ಕೊಡ ಮಾಡಲಾಗುತ್ತದೆ. ಒಟ್ಟಾರೆಯಾಗಿ ಮದುವೆಯ ತಯಾರಿ ಅದ್ದೂರಿಯಾಗಿ ನಡೆಯುತ್ತಿರುತ್ತದೆ.

ಇತ್ತ ಊರ್ಮಿಳಾ ಈ ಎಲ್ಲಾ ಐಶ್ವರ್ಯ, ಅಂತಸ್ತನ್ನು ನೋಡಿ ಮನಸ್ಸಿನಲ್ಲಿ ತನ್ನ ಮಗಳು ಇದೇ ಮನೆಗೆ ಸೊಸೆಯಾಗಿ ಹೋದರೆ, ತನ್ನ ಮಗಳು ಈ ಮನೆಯಲ್ಲಿ ಮಹಾರಾಣಿಯಾಗಿ ಇರಬಹುದು ತನ್ನ ಈ ಆಸೆಯನ್ನು ಪೂರೈಸಿಕೊಳ್ಳಲು ಯಾವ ದಾರಿಯನ್ನಾದರು ತುಳಿಯುತ್ತೇನೆ ಎಂದು ಮನದಲ್ಲೆ ನಿರ್ಧಾರ ಮಾಡುತ್ತಾಳೆ. ಇದೇ ಸಮಯಕ್ಕೆ ಸರಿಯಾಗಿ ಮೋದಿ ಮನೆಯಲ್ಲಿ ಮದುವೆಯ ವಯಸ್ಸಿಗೆ ಬಂದಿರುವ ಇನ್ನೊಬ್ಬ ಹುಡುಗನಿದ್ದಾನೆ ಎಂದು ತಿಳಿದುಬರುತ್ತದೆ. ಈ ವಿಷಯ ತಿಳಿಯುವ ಊರ್ಮಿಳಾಗೆ ಸಂತಸದ ಅಲೆಯಲ್ಲಿ ತೇಲಿ ಹೋದಂತಾಗುತ್ತದೆ. ತನ್ನ ಮಗಳನ್ನು ಈ ಮನೆಯ ಸೊಸೆಯನ್ನಾಗಿ ಮಾಡೇ ಮಾಡುತ್ತೇನೆ ಎಂದು ಮನಸ್ಸಿನಲ್ಲಿಯೇ ದೃಢ ನಿರ್ಧಾರ ಮಾಡುತ್ತಾಳೆ. ಆದರೆ ಇಲ್ಲಿ ಮತ್ತೊಂದು ಸಮಸ್ಯೆ ಎದುರಾಗುತ್ತದೆ.

ಅದೇನೆಂದರೆ ಜಿಗರಗೆ ಈಗಾಗಲೇ ಸೋನಲ ಎಂಬ ಹುಡುಗಿಯೊಂದಿಗೆ ಮದುವೆ ನಿಶ್ಚಯವಾಗಿದ್ದು ಇಷ್ಟರಲ್ಲಿಯೇ ಮದುವೆಯಾಗುತ್ತದೆ. ಎಂದು ತಿಳಿದುಬರುತ್ತದೆ. ಇದನ್ನು ಕೇಳಿ ಸ್ವಲ್ಪ ಆಘಾತಗೊಳ್ಳುತ್ತಾಳೆ. ಮದುವೆ ನಿಶ್ಚಯವಾಗಿದೆ, ಇನ್ನೂ ಮದುವೆಯಾಗಿಲ್ಲವಲ್ಲ ಎಂದು ಹೇಳಿ ಆ ಸಮಸ್ಯೆಗೆ ಪರಿಹಾರ ಕಂಡು ಹಿಡಿದೇ ಹಿಡಿಯುತ್ತೇನೆಂದು ಹೇಳುತ್ತಾಳೆ. ತನ್ನ ಮಗಳಿಗೆ ಆದಷ್ಟು ಜಿಗರಗೆ ಹತ್ತಿರವಾಗಿ ಇರಲು ಸೂಚಿಸುತ್ತಾಳೆ. ತನ್ನ ಮೇಲೆ ಜಿಗರಗೆ ಪ್ರೀತಿ ಹುಟ್ಟುವಂತೆ ಮಾಡು ಎಂದು ಹೇಳುತ್ತಾಳೆ. ಅವನನ್ನು ತಾನು ತುಂಬಾ ಹಚ್ಚಿಕೊಂಡಿದ್ದೇನೆ ಮದುವೆ ಆಗಬೇಕೆಂದಿದ್ದೇನೆ ಎಂದು ಪರೋಕ್ಷವಾಗಿ ತಿಳಿಸು, ಒಳ್ಳೆ ಮಾತುಗಳಿಂದ ನಿನ್ನತ್ತ ಸೆಳೆದುಕೋ ಎಂದೆಲ್ಲಾ ಹೇಳುತ್ತಾಳೆ. ರಾಶಿ ಕೂಡ ತನ್ನ ತಾಯಿ ಹೇಳಿದ ಪ್ರತಿಯೊಂದು ಮಾತನ್ನು ಚಾಚು ತಪ್ಪದೇ ಪಾಲಿಸುತ್ತಾಳೆ. ಇದೇ ಸಮಯದಲ್ಲಿ ಮೋದಿ ಮನೆಯಲ್ಲಿ ಒಂದು ಪೂಜೆಯನ್ನು ಹಮ್ಮಿಕೊಂಡಿರುತ್ತಾರೆ. ಈ ಪೂಜೆಯಲ್ಲಿ ಪಾಲ್ಗೊಳ್ಳಲು ಗೋಪಿ ಮನೆಯವರಿಗೆ, ಜಿಗರನನ್ನು ಮದುವೆಯಾಗುವ ಕೋಮಲನ ಮನೆಯವರಿಗೆ, ಸಂಬಂಧಿಕರಿಗೆ, ನೆರೆಮನೆಯವರಿಗೆ ಎಲ್ಲರಿಗೂ ಕರೆದಿರುತ್ತಾರೆ. ಊರ್ಮಿಳಾ ಇಂತಹ ಒಂದು ಸಮಯಕ್ಕೆ ಕಾಯುತ್ತಿರುತ್ತಾಳೆ. ಇದೇ ಸಮಯದಲ್ಲಿ ರಾಶಿ ಜಿಗರಗೆ ಒಳ್ಳೆಯ ಸ್ನೇಹಿತೆಯಾಗಿರುತ್ತಾಳೆ. ಜಿಗರನನ್ನು ತುಂಬಾ ಸಲುಗೆಯಿಂದ ಮಾತನಾಡಿಸುತ್ತಾಳೆ. ಅವರಿಬ್ಬರ ಮಧ್ಯೆ ಮಾತುಕತೆ ನಡೆಯುವಾಗ, ನೀನು ಮದುವೆಯಾಗುವ ಹುಡುಗಿಗೆ ನೀನು ಪ್ರೀತಿಸುತ್ತಿರುವ ವಿಷಯ ಹೇಳಿದೆಯಾ ಎಂದು ಕೇಳುತ್ತಾಳೆ. ಆಗ ಜಿಗರ ನನಗೆ ಆ ಅವಕಾಶವೇ ಸಿಗಲಿಲ್ಲ. ಕೋಮಲಗೆ ತಾನು ಬಹಳ ಪ್ರೀತಿಸುತ್ತಿದ್ದೇನೆ. ಎಂದು ಹೇಳಬೇಕೆಂದು ಎಷ್ಟೋ ಸಾರಿ ಅಂದುಕೊಂಡಿದ್ದೇ ಆದರೆ ಆ ಅವಕಾಶವೇ ಸಿಗಲಿಲ್ಲ. ನನಗೆ ಹೇಳುವ ಧೈರ್ಯವೂ ಆಗಲಿಲ್ಲವೆಂದು ರಾಶಿಗೆ ಹೇಳುತ್ತಾನೆ.

ಈ ಸಮಯವನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದು ಹೇಳಿ ರಾಶಿ ಜಿಗರ ಕುರಿತು ನೀನು ಸೋನಲಗೆ ಹೇಗೆ ಹೇಳಬೇಕೆಂದು ಅಂದುಕೊಂಡಿದ್ದಿಯೋ ಅದನ್ನು ನನಗೆ ಹೇಳುವ ಮೂಲಕ ಅಭ್ಯಾಸ ಮಾಡು, ಆವಾಗ ಸೋನಲಗೆ ಹೇಳಲು ಸಾಧ್ಯವಾಗುತ್ತದೆ. ಎಂದು ಹೇಳುತ್ತಾಳೆ. ಆಗ ಜಿಗರಗೂ ಕೂಡ ರಾಶಿಯ ಈ ಸಲಹೆ ಒಪ್ಪಿಗೆಯಾಗುತ್ತದೆ. ತನ್ನ ಹುಡುಗಿಗೆ ಹೇಳಬೇಕೆಂದಿರುವುದನ್ನು ರಾಶಿಗೆ ಹೇಳಿ ಮೊದಲು ಅಭ್ಯಾಸ ಮಾಡಿ ಧೈರ್ಯ ತಂದುಕೊಂಡು ನಂತರ ಸೊನಲಗೆ ಹೇಳಬಹುದು ಎಂದು ಯೋಚಿಸುತ್ತಾನೆ. ಮನೆಯಲ್ಲಿ ಪೂಜೆಯ ತಯಾರಿ ನಡೆಯುತ್ತಿರುವಾಗ ಊರ್ಮಿಳಾ ತನ್ನ ಕುತಂತ್ರ ಬುದ್ಧಿಯನ್ನು ಉಪಯೋಗಿಸಿ ಸೊನಲಗೆ ಹೊರಗೆ ಹೋಗುವಂತೆ ಮಾಡುತ್ತಾಳೆ. ಇತ್ತ ಜಿಗರ ರಾಶಿಯ ಕೈ ಹಿಡಿದು ನಾನು ನಿನ್ನನ್ನು ತುಂಬಾ ಪ್ರೀತಿಸುತ್ತಿದ್ದೇನೆ. ನನ್ನೊಂದಿಗೆ ಮದುವೆಯಾಗುತ್ತಿಯಾ ಎಂದು ಹೇಳುತ್ತಿರುತ್ತಾನೆ. ಇದನ್ನು ನೋಡುವ ಸೊನಲಗೆ ನನ್ನ ಬೆನ್ನ ಹಿಂದೆ ಇಷ್ಟೊಂದು ದೊಡ್ಡ ಪಿತೂರಿ. ಮೋಸ. ನಡೆಯುತ್ತಿದೆಯಲ್ಲ ಎಂದು ತಿಳಿದು. ಈ ಮೋಸದಾಟವನ್ನು ತನ್ನ ತಾಯಿಗೆ ಹೇಳುತ್ತಾಳೆ. ಜಿಗರ ನನಗೆ ಒಂದು ಬಾರಿಯೂ ಪ್ರೀತಿಸುತ್ತೇನೆಂದು

ಹೇಳಿರಲಿಲ್ಲ, ಇದಕ್ಕೆ ಕಾರಣವೇನೆಂದು ಈಗ ಗೊತ್ತಾಯಿತು. ನಮಗೆ ಮೋದಿ ಮನೆಯವರಿಂದ ದೊಡ್ಡ ಮೋಸವಾಗಿದೆ ಎಂದು ತಾಯಿಗೆ ಹೇಳುತ್ತಾಳೆ. ಇದನ್ನು ಕೇಳಿಸಿಕೊಂಡು ಸೊನಲ ತಾಯಿ ಮದುವೆಗೆ ಮುಂಚೆಯೇ ನಿಮ್ಮ ಒಳ್ಳೆತನ ನೋಡಿದೆವು ಮದುವೆಯಾದ ಮೇಲೆ ಗೊತ್ತಾಗಿದ್ದರೆ ನಮ್ಮ ಮಗಳ ಬಾಳು ನಾವೇ ಹಾಳು ಮಾಡಿದಂತಾಗುತ್ತಿತ್ತು ಎಂದು ಹೇಳಿ ಜಿಗರ ಮತ್ತು ಸೊನಲ ಮದುವೆಯನ್ನು ಮುರಿದು ಈ ಮದುವೆ ನಮಗೆ ಇಷ್ಟವಿಲ್ಲವೆಂದು ಹೇಳಿ ಹೊರಟು ಹೋಗುತ್ತಾರೆ.

ಇತ್ತ ಜಿಗರಗೆ ನಾನು ಯಾವ ತಪ್ಪು ಮಾಡದೆಯೇ ಇಂತಹ ಪರಿಸ್ಥಿತಿ ಎದುರಾಯಿತಲ್ಲ ಎಂದು ವ್ಯಥೆ ಪಡುತ್ತಾನೆ. ತನ್ನದು ತಪ್ಪಿಲ್ಲ ಎಂದು ಹೇಳಿದರೂ ಅವನ ಮಾತು ಕೇಳುವ ಸ್ಥಿತಿಯಲ್ಲಿ ಯಾರು ಇರುವುದಿಲ್ಲ. ಇದೇ ಸಮಯವನ್ನು ಸದುಪಯೋಗ ಮಾಡಿಕೊಳ್ಳಲು ಮುಂದಾಗುವ ಊರ್ಮಿಳಾ, ತನ್ನ ಮಗಳ ಬಾಳು ಹಾಳಾಯಿತಲ್ಲಾ ಜಿಗರನೊಂದಿಗೆ ಸಂಬಂಧ ಇದೆ ಎಂದು ಹೇಳಿದರೆ ನಾಳೆ ನನ್ನ ಮಗಳನ್ನು ಯಾರು ಮದುವೆಯಾಗುತ್ತಾರೆ. ನನ್ನ ಮಗಳ ಭವಿಷ್ಯ ಹೇಗೆ ಎಂದು ಬಂದಿದ್ದ ಜನರ ಎದುರು ಗೊಳೋ ಅಂತ ಅಳಲು ಶುರುಮಾಡುತ್ತಾಳೆ. ಇದಾವುದನ್ನು ನಿರೀಕ್ಷಿಸಿರದ ಮೋದಿ ಮನೆಯವರಿಗೆ ಈ ಅನಿರೀಕ್ಷಿತ ಘಟನೆ ವಿಚಲಿತರನ್ನಾಗಿ ಮಾಡುತ್ತದೆ. ಈ ಘಟನೆಯಿಂದ ಒಂದು ಹುಡುಗಿಯ ಬಾಳು ಹಾಳಾಗಬಾರದು ಮೋದಿ ಮನೆತನಕ್ಕೆ ಕೆಟ್ಟ ಹೆಸರು ಬರಬಾರದೆಂದು ಯೋಚಿಸಿ ರಾಶಿಗೆ ಆಗಿರುವ ಈ ಅನ್ಯಾಯವನ್ನು ತಪ್ಪಿಸಲು ರಾಶಿಯನ್ನು ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳುತ್ತೇವೆಂದು ಹೇಳಿ ಕೋಕಿಲಾ ಮೋದಿ ಹೇಳುತ್ತಾಳೆ. ಈ ಮಾತು ಕೇಳುತ್ತಿದ್ದಂತೆಯೇ ಅವಳ ಸಂತಸಕ್ಕೆ ಪಾರವೇ ಇರುವುದಿಲ್ಲ. ಈ ಘಟನೆಯಿಂದ ತನ್ನ ಮಗಳಿಗೆ ಮೋದಿ ಮನೆತನದ ಸೊಸೆ ಮಾಡುವ ಕನಸು ನನಸಾಗುತ್ತದೆ. ರಾಶಿ ಮತ್ತು ಜಿಗರ, ಗೋಪಿ ಮತ್ತು ಅಹೆಮ ಇವರ ಮದುವೆಯು ಸರಾಗವಾಗಿ ನಡೆಯತ್ತದೆ. ಮದುವೆ ನಡೆಯುವಾಗಲೂ ಕೆಲವೊಂದು ಚಿಕ್ಕ ಪುಟ್ಟ ಘಟನೆಗಳು ನಡೆಯುತ್ತದೆ. ಆದರೆ ಒಟ್ಟಿನಲ್ಲಿ ಮದುವೆ ನಡೆದು ಹೋಗುತ್ತದೆ. ರಾಶಿ ಮತ್ತು ಗೋಪಿ ಇಬ್ಬರು 'ಮೋದಿ' ಮನೆತನ ಹಿರಿಯ ಮತ್ತು ಕಿರಿಯ ಸೊಸೆಯಾಗಿ ಹೋಗುತ್ತಾರೆ.

ಇಲ್ಲಿಂದ ಅವರ ಬದುಕಿನ ಇನ್ನೊಂದು ಪುಟದ ಆರಂಭವಾಗುತ್ತದೆ. ಗೋಪಿ ಮದುವೆಯಾದ ಹೊಸತರಲ್ಲಿ ಗಂಡನ ಅನಾದರಕ್ಕೆ ಒಳಗಾಗುತ್ತಾಳೆ. ಅಹೆಮ ಹೆಂಡತಿಯ ನೆರಳು ಕಂಡರೆ ಆಗದಂತಹ ಮನಸ್ಥಿತಿಯನ್ನು ಹೊಂದಿರುತ್ತಾನೆ. ತನ್ನ ತಾಯಿ ಇಷ್ಟಪಟ್ಟು ಮದುವೆ ಮಾಡಿಸಿದ್ದಾಳೆ. ಅವಳು ಈ ಮನೆಗೆ ಸೊಸೆಯಾಗಿರಲು ಯಾವುದೇ ತೊಂದರೆಯಿಲ್ಲ. ಆದರೆ ನನಗೂ ಇದಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳುತ್ತಾನೆ. ಕೆಲವು ದಿನ ಕಳೆದ ಮೇಲೆ ಅಹೆಮ ಗೋಪಿಯನ್ನು ಕುರಿತು. ನಾನು ಮದುವೆಗೂ ಮುಂಚೆ ನಿನಗೆ ಒಂದು ಪತ್ರ ಬರೆದು ಕೊಟ್ಟಿದ್ದೆ. ಅದರಲ್ಲಿ ನಾನು ಈ ಮದುವೆಯ ಕುರಿತು ನನ್ನ

ಅಭಿಪ್ರಾಯವನ್ನು ತಿಳಿಸಿದ್ದೆ, ಆ ಪತ್ರವನ್ನು ನೀನು ಓದಿದೆಯಾ ಎಂದು ಕೇಳುತ್ತಾನೆ. ಇದನ್ನು ಕೇಳಿದ ಗೋಪಿ, ನೀವು ಬರೆದ ಪತ್ರ ನಾನು ಓದಲಿಲ್ಲ. ನಿಮ್ಮ ತಂಗಿ ಆ ಪತ್ರವನ್ನು ಓದಿ ತಿಳಿಸಿದಳು, ನಿಮಗೆ ನನ್ನ ಮದುವೆಯಾಗಲು ಯಾವುದೇ ಅಭ್ಯಂತರವಿಲ್ಲವೆಂದು, ಈ ಮದುವೆಗೆ ನಿಮ್ಮ ಒಪ್ಪಿಗೆ ಇದೇ ಎಂದು ಬರೆದಿದ್ದೀರಿ, ಅದನ್ನ ಕೇಳಿ ನನಗೆ ತುಂಬಾ ಸಂತೋಷವಾಯಿತು ಎಂದು ಹೇಳುತ್ತಾಳೆ. ಆಗ ಏಹಮ ಗೋಪಿಯ ಮಾತು ಕೇಳಿ ಕೋಪಗೊಳ್ಳುತ್ತಾನೆ. ನೀನು ಪತ್ರ ಓದಿಯೂ ಓದಿಲ್ಲ ಎಂದು ಸುಳ್ಳು ಹೇಳುತ್ತಿಯಾ, ಎಲ್ಲಾ ಗೊತ್ತಿದ್ದು ಗೊತ್ತಿಲ್ಲದಂತೆ ನಾಟಕವಾಡುತ್ತೀಯಾ ಎಂದು ಕೇಳುತ್ತಾನೆ. ಆಗ ಗೋಪಿ ತಾನು ಯಾವುದೇ ಪತ್ರವನ್ನು ಓದಿಲ್ಲ. ಅಷ್ಟಕ್ಕೂ ತನಗೆ ಓದಲು, ಬರೆಯಲು ಬರುವುದಿಲ್ಲ ಎಂದು ಸರಳವಾಗಿ ಉತ್ತರಿಸುತ್ತಾಳೆ. ಗೋಪಿಯ ಈ ಮಾತು ಎಹೆಮಗೆ ಬಹಳ ಆಘಾತವನ್ನು ಉಂಟುಮಾಡುತ್ತದೆ.

ತನ್ನ ಹೆಂಡತಿಯಾಗಿ ಬಂದವಳು ಒಬ್ಬ ಅನಕ್ಷರಸ್ಥೆಯಾಗಿದಾಳೆಂಬ ಮಾತು ಕೇಳಿದೊಡನೆ ಎಹೆಮ್‌ಗೆ ನಿಂತ ನೆಲ ತನ್ನದಲ್ಲವೆನೋ ಎಂದೆನಿಸುತ್ತದೆ. ಇದರಿಂದ ಮಾನಸಿಕವಾಗಿ ಕುಗ್ಗಿ ಹೋಗುತ್ತಾನೆ. ತನ್ನ ತಾಯಿ ತನಗೆ ಇಷ್ಟೊಂದು ದೊಡ್ಡ ಮೋಸ ಮಾಡಿದಳಾ? ನನ್ನ ತಾಯಿ ಹೀಗೇಕೆ ಮೋಸ ಮಾಡಿದಳು? ಎಂದು ದುಃಖಿಸುತ್ತಾನೆ. ತನ್ನ ತಾಯಿಗೆ ಈ ವಿಷಯದ ಕುರಿತು ಕೇಳುತ್ತಾನೆ. ಆಗ ಕೊಕಿಲಾ ಗೋಪಿ ಒಬ್ಬ ಅನಕ್ಷರಸ್ಥಳು ಎಂದು ಹೇಳುತ್ತಾಳೆ. ಈ ವಿಷಯದಿಂದ ತಾಯಿ ಮತ್ತು ಮಗನ ಮಧ್ಯೆ ತಪ್ಪು ತಿಳುವಳಿಕೆಗಳು ಉಂಟಾಗುತ್ತವೆ. ತನ್ನ ತಾಯಿಯನ್ನು ನಂಬಿದ್ದಕ್ಕೆ ನನಗೆ ಇಂತಹ ಮೋಸ ಮಾಡಬಹುದೇ? ತನ್ನ ವ್ಯಕ್ತಿತ್ವಕ್ಕೆ ತಕ್ಕದಲ್ಲದ ಹುಡುಗಿಯನ್ನು ಗಂಟುಹಾಕಿದ್ದಾಳೆಂದು ಕೋಪಗೊಂಡು ದುಃಖಿಸುತ್ತಾನೆ. ಎಹೆಮನ ಮನಸ್ಥಿತಿಯನ್ನು ಅರಿಯುವ ತಾಯಿ ಮಗನಿಗೆ ಎಲ್ಲವೂ ಕೂಲಂಕುಷವಾಗಿ ವಿವರಿಸುತ್ತಾಳೆ. ನಮ್ಮ ಮನೆಗೆ ಹೆಚ್ಚು ಓದಿರುವ ಹುಡುಗಿ ಬೇಡವೆಂದು ನಾನು ಓದಿರದ ಹುಡುಗಿಯನ್ನು ಹೆಚ್ಚು ಓದಿರದ ಹುಡುಗಿಯನ್ನು ಉದ್ದೇಶ ಪೂರ್ವಕವಾಗಿ ಆಯ್ಕೆಮಾಡಿದ್ದೇನೆ ಎಂದು ಹೇಳುತ್ತಾಳೆ. ಇದಾದ ನಂತರ ಕೆಲವು ದಿನಗಳವರೆಗೂ ತಾಯಿ ಮಗನ ಮಧ್ಯೆ ಶೀತಲ ಸಮರಗಳು ಏರ್ಪಡುತ್ತವೆ. ನಂತರದ ದಿನಗಳಲ್ಲಿ ಸಿಟ್ಟು, ಅಸಹನೆ ಕಡಿಮೆಯಾಗಿ ವಾಸ್ತವದ ಜೊತೆ ಬದುಕಲು ಪ್ರಾರಂಭಿಸುತ್ತಾನೆ.

ಇಲ್ಲಿಂದ ಎಹೆಮ ಗೋಪಿಯ ನೆರಳನ್ನು ಕಂಡರು ಆಗದಂತೆ ವರ್ತಿಸುತ್ತಾನೆ. ಗೋಪಿಯನ್ನು ತನ್ನ ಕೋಣೆಯಿಂದ ದೂರವಿರುವಂತೆ ಹೇಳುತ್ತಾನೆ. ತನ್ನ ವಸ್ತುಗಳನ್ನು ಮುಟ್ಟದಿರುವಂತೆ ಸೂಚಿಸುತ್ತಾನೆ. ಹೀಗೆಯೇ ಹಲವು ದಿನಗಳವರೆಗೂ ನಡೆದು ಬರುತ್ತದೆ. ಇದು ದಿನನಿತ್ಯದ ಅಭ್ಯಾಸವಾಗಿ ಹೋಗುತ್ತದೆ. ಆಗ ಗೋಪಿಗೆ ಜೀವನವೆಂದರೆ ಕೇವಲ ದುಃಖದ ನೋವಿನ ಕಡಲಾಗುತ್ತದೆ. ಅವಳಿಗೆ ಬೆಂಕಿಯಿಂದ ಬಾಣಲೆಗೆ ಬಿದ್ದ ಅನುಭವ ವಾಗುತ್ತದೆ. ತನ್ನ ಜೀವನವೆಂದರೆ ಕೇವಲ ಕಷ್ಟಗಳನ್ನು ಎದುರಿಸುವುದೇ ಆಗಿದೆ ಎಂದು

ತನ್ನ ಬದುಕಿಗೆ ಕಣ್ಣೀರು ಹಾಕುತ್ತಾಳೆ. ಕಥೆಯ ಮುಂದುವರೆದ ಭಾಗದಲ್ಲಿ ಕೋಕಿಲಾ ಮತ್ತು ಪರಾಗ ಇಬ್ಬರು ತಮ್ಮ ಮಗಳಾದ ಕಿಂಜಲಳ ಮದುವೆ ಮಾಡಲು ಯೋಚನೆ ಮಾಡುತ್ತಾರೆ. ಅಂತೆಯೇ ತಮ್ಮ ಮಗಳಿಗೆ ಯೋಗ್ಯವಾದ ವರನನ್ನೇ ಹುಡುಕುತ್ತಾರೆ. ಹುಡುಗಿ ನೋಡಲು ತಮ್ಮ ಮನೆಗೆ ಬರುವಂತೆ ಕೇಳಿಕೊಳ್ಳುತ್ತಾರೆ. ಅದರಂತೆ ಹುಡುಗನ ಮನೆಯವರು ಕಿಂಜಲನನ್ನು ನೋಡಲು ಮನೆಗೆ ಬರುತ್ತಾರೆ. ಬಂದವರು ಕಿಂಜಲನನ್ನು ನೋಡಿ ಒಪ್ಪಿಗೆ ಸೂಚಿಸುತ್ತಾರೆ. ತಡ ಮಾಡದೆ ಮದುವೆ ಮಾಡಿಬಿಡೋಣ ಎಂದು ತೀರ್ಮಾನಿಸುತ್ತಾರೆ. ಈ ವಿಷಯ ಮೋದಿ ಮನೆಯವರಲ್ಲಿ ಸಂತೋಷವನ್ನು ತರುತ್ತದೆ.

ಎಲ್ಲರೂ ಮನೆಯಲ್ಲಿ ಸಂತೋಷದಿಂದ ಇದ್ದರೆ, ಕಿಂಜಲ ಮಾತ್ರ ಈ ವಿಷಯ ತಿಳಿದು ದುಃಖಿಸುತ್ತಾಳೆ. ಕಾರಣ ಕಿಂಜಲ ಬೇರೊಬ್ಬ ಹುಡುಗನನ್ನು ಪ್ರೀತಿಸುತ್ತಿರುತ್ತಾಳೆ. ಮದುವೆಯಾದರೆ ಅವನನ್ನೇ ಮದುವೆಯಾಗಬೇಕೆಂದು ಅಂದುಕೊಂಡಿರುತ್ತಾಳೆ. ಹಾಗಾಗಿ ಈ ಮದುವೆಯನ್ನು ಹೇಗಾದರು ಮಾಡಿ ತಪ್ಪಿಸಬೇಕೆಂದು ಗೋಪಿಯಲ್ಲಿ ಕೇಳಿಕೊಳ್ಳುತ್ತಾಳೆ. ಮನೆಬಿಟ್ಟು ಓಡಿ ಹೋಗುವ ಪ್ರಯತ್ನ ಮಾಡುತ್ತಾಳೆ. ವಿದೇಶಕ್ಕೆ ಹೋಗಬೇಕೆಂದು ವೀಸಾ ಕೂಡ ತಯಾರು ಮಾಡಿಕೊಂಡಿರುತ್ತಾಳೆ. ಇದಕ್ಕಿಂತಲೂ ಹೆಚ್ಚಾಗಿ ತಾನು ಗರ್ಭಿಣಿಯಾಗಿದ್ದು; ಈಗ ಮದುವೆ ಯಾಗಲು ಸಾಧ್ಯವಿಲ್ಲವೆಂದು ಹೇಳುತ್ತಾಳೆ. ಕಿಂಜಲ ಮತ್ತು ಗೋಪಿಯ ಮಧ್ಯೆ ಮಾತುಕತೆ ನಡೆಯುವುದನ್ನು ಕೋಕಿಲಾ ಕೇಳಿಸಿಕೊಳ್ಳುತ್ತಾಳೆ. ತಮ್ಮ ಮಗಳು ನಮಗೆ ಇಷ್ಟೊಂದು ದೊಡ್ಡ ಮೋಸ ಮಾಡಿದಳಾ? ಎಂದು ದುಃಖ ಪಡುತ್ತಾಳೆ. ಆದರೆ ಸಮಯ ಮೀರಿ ಹೋಗಿರುತ್ತದೆ. ಆಗ ಕೊಕಿಲಾ ಕಿಂಜಲಗೆ ಮನಸೋ ಇಚ್ಛೆ ಬೈಯುತ್ತಾಳೆ. ಕಿಂಜಲಗಾಗಿ ಒಳ್ಳೆ ಮನೆತನದ, ಶ್ರೀಮಂತ ಹುಡುಗನನ್ನು ಹುಡುಕಿದ್ದೆವು. ಮಗಳ ಮದುವೆ ವಿಜೃಂಭಣೆಯಿಂದ ಮಾಡಬೇಕೆಂದು ಅಂದುಕೊಂಡಿದ್ದೇವು, ಆದರೆ ತಮ್ಮ ಆಸೆಗಳಿಗೆ ತಣ್ಣೀರೆರಚಿದೆ ಎಂದು ಹೇಳಿ ದುಃಖಿಸುತ್ತಾಳೆ. ಕೊನೆಗೆ ತಮ್ಮ ಮಗಳು ಪ್ರೀತಿಸಿದ ಹುಡುಗನನ್ನೇ ಮದುವೆಯಾಗಲಿ ಎಂದು ಹುಡುಗನ ಮನೆಗೆ ಕಿಂಜಲನನ್ನು ಕರೆದುಕೊಂಡು ಹೋಗುತ್ತಾರೆ.

ಆದರೆ ಆ ಹುಡುಗ ಕಿಂಜಲನನ್ನು ಮದುವೆಯಾಗಲು ನಿರಾಕರಿಸುತ್ತಾನೆ. ಬದಲಿಗೆ ತಾನು ಯಾವತ್ತು ಅವಳನ್ನು ಪ್ರೀತಿಸಿಯೇ ಇರಲಿಲ್ಲ ಇನ್ನೂ ಮದುವೆಯಾಗುವ ಮಾತು ತುಂಬಾನೆ ದೂರವೆಂದು ನಿಷ್ಠುರವಾಗಿ ಹೇಳುತ್ತಾನೆ. ಹುಡುಗನ ಈ ಮಾತು ಕೇಳಿದ ಕಿಂಜಲ ಮತ್ತು ಮನೆಯವರಿಗೆ ಆಶ್ಚರ್ಯವಾಗುತ್ತದೆ. ಕಿಂಜಲಗೆ ತಾನು ನಂಬಿ ಮೋಸ ಹೋದೆ. ತನ್ನ ತಂದೆ ತಾಯಿಯರ ಮಾತು ಪಾಲಿಸದೇ ಇದ್ದದ್ದಕ್ಕೆ ನನಗೆ ತಕ್ಕ ಪಾಠ ಕಲಿತಂತಾಯಿತು ಎಂದು ನೊಂದುಕೊಳ್ಳುತ್ತಾಳೆ, ತನ್ನ ತಪ್ಪಿನ ಅರಿವಾಗುತ್ತದೆ. ಇತ್ತ ಕೋಕಿಲಾ ತನ್ನ ಮಗಳು ಮಾಡಿದ ಈ ತಪ್ಪಿನಿಂದಾಗಿ ನಾವೆಲ್ಲರೂ ನಮಗೆ ಆಗದೇ ಇರುವವರ ಮುಂದೇ ಕೈಚಾಚಬೇಕಾಯಿತು. ಕೈಚಾಚಿದರು ಅದಕ್ಕೆ ತಕ್ಕ ಪ್ರತಿಫಲ ದೊರೆಯಲಿಲ್ಲವೆಂದು ವ್ಯಥೆ ಪಡುತ್ತಾಳೆ. ತನ್ನ ಮಗಳನ್ನು ಕರೆದುಕೊಂಡು ಮನೆಗೆ ಹಿಂತಿರುಗುತ್ತಾರೆ. ತಮ್ಮ

ಮಗಳ ಬದುಕು ಹೀಗಾಯಿತಲ್ಲ ಎಂದು ದುಃಖಪಡುತ್ತಾರೆ. ಮುಂದೆ ಅವಳಿಗೆ ಯಾರು ಮದುವೆ ಆಗುತ್ತಾರೆ ಎಂಬುದು ದೊಡ್ಡ ಪ್ರಶ್ನೆಯಾಗಿ ಕಾಡುತ್ತದೆ. ಇದೇ ಸಮಯಕ್ಕೆ ರಾಶಿಯ ಅಣ್ಣ ಧವಲಕುಮಾರ ಕಿಂಜಲಗೆ ಮದುವೆಯಾಗುತ್ತೇನೆಂದು ಮುಂದೆ ಬರುತ್ತಾನೆ. ಧವಲಕುಮಾರನ ಈ ಮಾತಿನಿಂದ ಕೋಕಿಲಾಗೆ ತುಂಬಾ ಸಂತೋಷವಾಗುತ್ತದೆ. ತನ್ನ ಮಗಳ ಬಾಳು ಹಾಳಾಗಲಿಲ್ಲ, ಒಳ್ಳೆ ಹುಡುಗನೇ ಅಳಿಯನಾಗಿ ಸಿಕ್ಕಿದ್ದಾನೆ ಎಂದು ಸಂತೋಷ ಪಡುತ್ತಾಳೆ. ಧವಲಕುಮಾರ ಮನೆಯವರು ಅಷ್ಟೊಂದು ಶ್ರೀಮಂತರಲ್ಲ. ತಮ್ಮ ಪ್ರತಿಷ್ಠೆಗೆ, ಘನತೆಗೆ ತಕ್ಕಂತಹ ಮನೆತನದವರೂ ಅಲ್ಲ. ಆದರೂ ಕೋಕಿಲಾ ಧವಲಕುಮಾರನೊಂದಿಗೆ ಕಿಂಜಲಳ ಮದುವೆ ಮಾಡಲು ಒಪ್ಪಿಕೊಳ್ಳುತ್ತಾಳೆ. ಧವಲಕುಮಾರ ಮತ್ತು ಕಿಂಜಲ ಮದುವೆ ನಡೆದು ಸತಿಪತಿಗಳಾಗುತ್ತಾರೆ.

ಮುಂದೆ ಕಿಂಜಲ ಧವಲಕುಮಾರ ಮನೆಗೆ ಬಂದಾಗ ಅಲ್ಲಿ ಅವಳಿಗೆ ಅಂತಸ್ತಿನ ಕೊರತೆ ಎದ್ದುಕಾಣುತ್ತದೆ. ತನ್ನ ಮನೆಯಲ್ಲಿ ರಾಜಕುಮಾರಿಯ ಹಾಗಿದ್ದವಳು. ಈ ಮನೆಯಲ್ಲಿ ಮನೆ ಕೆಲಸದವಳಂತೆ ಇರುವುದು. ಮನೆ ಕೆಲಸ ಮಾಡಿಕೊಂಡು ಹೋಗುವುದು ಅವಳಿಂದ ಸಾಧ್ಯವಾಗುವುದಿಲ್ಲ. ಇಂತಹ ಬದುಕಿಗೆ ತಾನೇ ಕಾರಣಳೆಂದು ತನ್ನನ್ನು ತಾನೇ ಶಪಿಸಿಕೊಳ್ಳುತ್ತಾಳೆ. ತನ್ನ ತಂಗಿ ಮಾಡಿದ ತಪ್ಪಿನಿಂದಾಗಿ ಎಲ್ಲರೂ ತಲೆ ಕೆಳಗೆ ಮಾಡುವಂತೆ ಆಗಿತ್ತು. ಆದರೆ ಧವಲಕುಮಾರ ಅವರ ದೊಡ್ಡ ಮನಸ್ಸಿನಿಂದಾಗಿ ತನ್ನ ತಂಗಿಗೆ ಅವರಂತಹ ಒಳ್ಳೆ ಹುಡುಗ ಸಿಕ್ಕಿದನೆಂದು ಎಹೆಮ ಸಂತಸಗೊಳ್ಳುತ್ತಾನೆ. ಆ ಸಂತೋಷವನ್ನು ಹೆಂಡತಿ ಗೋಪಿಯೊಂದಿಗೆ ಹಂಚಿಕೊಳ್ಳುವುದಿಲ್ಲ. ಇಬ್ಬರು ದೂರ ದೂರವೇ ಇರುತ್ತಾರೆ. ಕಥೆಯಲ್ಲಿ ಹಲವು ಚಿಕ್ಕ ಪುಟ್ಟ ಘಟನೆಗಳನ್ನೇ ದೊಡ್ಡ ಮಟ್ಟದಲ್ಲಿ ತೋರಿಸುವುದು. ಚಿಕ್ಕ ಚಿಕ್ಕ ವಿಷಯಗಳನ್ನೇ ದೊಡ್ಡದು ಮಾಡಿ ತೋರಿಸುವುದು. ನಮ್ಮ ದೈನಂದಿನ ಬದುಕಿನಲ್ಲಿ ನಡೆಯುವ ವಿದ್ಯಮಾನಗಳ ಅನಾವರಣವನ್ನೇ ಈ ಕಥೆಯಲ್ಲಿ ಚಿತ್ರಿಸಲಾಗಿದೆ. ದೊಡ್ಡ ದೊಡ್ಡ ತಿರುವುಗಳು ಬರುವುದು. ಎಂದೊ ಮುಚ್ಚಿಟ್ಟ ಸತ್ಯಗಳು ಹೊರಗೆ ಬರುವುದು, ತಮ್ಮ ಸ್ವಾರ್ಥ ಸಾಧನೆಗಾಗಿ ಇನ್ನೊಬ್ಬರ ಬಲಿ ಪಡೆಯುವುದು ಇವೆಲ್ಲವನ್ನು ಇಲ್ಲಿ ಚಿತ್ರಿಸಲಾಗಿದೆ.

ಇಲ್ಲಿ ವಿವರಿಸಿದ ಕಥಾಸಾರಾಂಶವು ಕೆಲವೇ ಕೆಲವು ಸಂಚಿಕೆಗಳದ್ದಾಗಿದ್ದು ಕಥೆಯು ಮುಂದುವರೆಯುತ್ತಿದೆ. ಇಲ್ಲಿಯವರೆಗೂ ಕಥೆಯಲ್ಲಿ ನಡೆದ ಘಟನೆಗಳ ಕುರಿತ ಒಂದು ಸೂಕ್ಷ್ಮ ವಿಶ್ಲೇಷಣಾ ನೋಟವನ್ನು ಇಲ್ಲಿ ಮುಂದೆ ಕೊಡಲಾಗಿದೆ.

ವಿಶ್ಲೇಷಣೆ

"ಸಾಥ ನಿಭಾನಾ ಸಾಥಿಯಾ" (ಕೈ ಬಿಡದೆ ಕಾಪಾಡು ಅಥವಾ ಜೊತೆಯಿರು) ಪ್ರತಿ ಸೋಮವಾರದಿಂದ ಶುಕ್ರವಾರದವರಗೆ ರಾತ್ರಿ ೭.೦೦ ಘಂಟೆಗೆ ಸ್ಟಾರ್‌ಪ್ಲಸ್ ಚಾನೆಲ್‌ನಲ್ಲಿ ಪ್ರಸಾರವಾಗುವ ಹಿಂದಿ ಧಾರಾವಾಹಿಯಾಗಿದೆ. ಈ ಧಾರಾವಾಹಿಯು ಮುಖ್ಯವಾಗಿ

ಸಂಪ್ರದಾಯಸ್ಥ ಕುಟುಂಬ, ಆ ಕುಟುಂಬದಲ್ಲಿ ಹೆಣ್ಣಾದವಳು ಹೇಗಿರಬೇಕು, ಹೇಗಿರಬಾರದು ಎಂಬುದರ ಚಿತ್ರಣವಿದೆ. ಹಿಂದೂ ಧರ್ಮದ ಮೌಲ್ಯಗಳನ್ನೇ ಹೊತ್ತಿರುವಂತಹ, ಚಿತ್ರಣವನ್ನು ಈ ಧಾರಾವಾಹಿಯಲ್ಲಿ ಉದ್ದಕ್ಕೂ ಕಾಣಬಹುದು. ಮೇಲ್ವರ್ಗದ ಜನರ ಪ್ರತಿಷ್ಠೆ, ಅಂತಸ್ತು, ವೈಭವ, ಇದರ ನಡುವೆ ಮಧ್ಯಮವರ್ಗದ ಹೆಣ್ಣುಮಕ್ಕಳಿಬ್ಬರು ಸೊಸೆಯಂದಿರಾಗಿ ಹೋದಾಗ, ಅಲ್ಲಿ ಅವರು ಅನುಭವಿಸುವ "ಸಾಮಾಜಿಕ ಹಿಂಜರಿಕೆ"ಯನ್ನು ಈ ಧಾರಾವಾಹಿಯಲ್ಲಿ ಕಟ್ಟಿಕೊಡಲಾಗಿದೆ. ಮೇಲ್ವರ್ಗದ ಪ್ರತಿಷ್ಠಿತರ ಸಭೆ ಸಮಾರಂಭಗಳು, ದೊಡ್ಡ ದೊಡ್ಡ ಪೂಜೆಗಳು, ಹಬ್ಬ ಹರಿದಿನಗಳ ಆಚರಣೆಗಳು, ಹೆಜ್ಜೆ ಹೆಜ್ಜೆಗೂ ಶಿಸ್ತು, ಸಂಯಮ, ಪ್ರತಿಷ್ಠೆಯನ್ನು ಮೆರೆಯುವ ಅತ್ತೆ ಸ್ಥಾನದಲ್ಲಿ ಕೋಕಿಲಾ, ಮನೆಯಲ್ಲಿ ತನ್ನ ಮುಗ್ಧತೆಯಿಂದಲೇ ಎಲ್ಲರ ಗಮನವನ್ನು ಮತ್ತು ಮನಸ್ಸನ್ನು ಸೆಳೆಯುವ ಸೊಸೆ(ಗೋಪಿ)ಯ ಪಾತ್ರವನ್ನು ಇಲ್ಲಿ ಕಾಣಬಹುದು. ಕಥೆಯಲ್ಲಿ ಒಬ್ಬಳನ್ನು ಆಧುನಿಕ ಮನೋಭಾವದವಳಾಗಿ(ರಾಶಿ) ರೂಪಿಸಿದರೆ, ಮತ್ತೊಬ್ಬಳನ್ನು ಸಾಂಪ್ರದಾಯಿಕ(ಗೋಪಿ) ಪಾತಳಿಯಲ್ಲಿ ಕಟ್ಟಿಕೊಡಲಾಗುತ್ತದೆ. ಆಧುನಿಕತೆ ಮತ್ತು ಸಂಪ್ರದಾಯಕತೆಯ ಮಧ್ಯೆ ವೈರುಧ್ಯ ವೇರ್ಪಡುವಂತಹ ಚಿತ್ರಣವನ್ನು ಕೊಡುತ್ತದೆ. ಆ ಮೂಲಕ ಅಲ್ಲಿ ಸ್ಥಿರಮಾದರಿಯ ಪಾತ್ರವನ್ನು ಗೆಲ್ಲುವಂತೆ ಮಾಡುವುದು. ಆಧುನಿಕ ಮಾದರಿಯನ್ನು ಹೆಜ್ಜೆ ಹೆಜ್ಜೆಗೂ ಸೋಲಿಸುವುದನ್ನು ಇಲ್ಲಿ ಕಾಣಬಹುದು. ಇದು ನೋಡುಗರಲ್ಲಿ ಪುರುಷಪ್ರಧಾನ ಸಮಾಜ ರೂಪಿಸಿದ ಸಾಂಪ್ರದಾಯಿಕ ಮೌಲ್ಯಗಳನ್ನು ಎತ್ತಿ ಕೊಂಡಾಡುವ ಕಾರ್ಯವನ್ನು ಈ ಧಾರಾವಾಹಿಗಳ ಮೂಲಕ ನಡೆಯುತ್ತಿದೆ. ಆ ಮೂಲಕ ಹೆಣ್ಣಿನ ಅಸ್ತಿತ್ವದ ಗುರುತನ್ನು ಸಾಂಪ್ರದಾಯಿಕ ಪಾತಳಿಗೆ ಸೀಮಿತಗೊಳಿಸುತ್ತಿವೆ ಎಂದು ತಿಳಿದುಬರುತ್ತದೆ.

ಧಾರಾವಾಹಿಯಲ್ಲಿಯೂ ಕೂಡಾ ಪುರುಷ ಪ್ರಧಾನ ವ್ಯವಸ್ಥೆಯು ರೂಪಿಸಿದ ಮೌಲ್ಯಗಳನ್ನು ಚಾಚು ತಪ್ಪದೇ ಪಾಲಿಸಿಕೊಂಡು ಬರುವಂತೆ ಮಾಡಲು ಮತ್ತೆ ಹೆಣ್ಣನ್ನೇ ಆಶ್ರಯಿಸುತ್ತದೆ. ಅದು ಅತ್ತೆಯ ಪಾತ್ರವಾಗಿರಬಹುದು ಅಥವಾ ಗಂಡನ ಮನೆಯ ಇತರ ಸದಸ್ಯರಾಗಬಹುದು. ಇವರ ಮೂಲಕ ಹೊಸದಾಗಿ ಮದುವೆಯಾಗಿ ಬಂದ ಹೆಣ್ಣಿಗೆ ಹೇಗೆ ಇರಬೇಕೆಂಬ, ಸಂದೇಶಗಳು ದೊರೆಯುತ್ತಿರುತ್ತವೆ. ಇಲ್ಲಿ ಗೋಪಿ ಮತ್ತು ರಾಶಿಗೆ ತಮ್ಮ ಮನೆಯಲ್ಲಿರುವ ಸಂಪ್ರದಾಯ, ಆಚರಣೆಗಳು, ದೊಡ್ಡವರೊಂದಿಗೆ ಚಿಕ್ಕವರೊಂದಿಗೆ, ಮನೆಯ ಹೊರಗಿನವ ರೊಂದಿಗೆ, ಸಂಬಂಧಿಕರೊಂದಿಗೆ ಹೇಗೆ ಇರಬೇಕು. ಎಷ್ಟು ಮಾತನಾಡಬೇಕು, ಎಷ್ಟು ಮಾತನಾಡಬಾರದು, ಅವರು ಹೇಗೆ ಇರಬೇಕು, ಮನೆಯನ್ನು ಒಪ್ಪ ಓರಣವಾಗಿ ಹೇಗೆ ಇಟ್ಟುಕೊಳ್ಳಬೇಕು. ಅಡುಗೆ, ಪೂಜೆ, ಮನೆಯ ಸ್ವಚ್ಛತೆ ಹೀಗೆ ಪ್ರತಿಯೊಂದು ವಿಷಯದ ಕುರಿತು ಹೀಗೆಯೇ ಇರಬೇಕೆಂದು ಸೂಚಿಸುತ್ತಾರೆ. ತಪ್ಪಿದ್ದಲ್ಲಿ ದಂಡನೆಯನ್ನು ಕೊಡುವ ಕೆಲಸವು ನಡೆಯುತ್ತದೆ ಅದು ಅತ್ತೆಯಿಂದ. ಒಟ್ಟಾರೆಯಾಗಿ ಪುರುಷ ತನ್ನ ಅನುಕೂಲಕ್ಕಾಗಿ ಮಾಡಿಕೊಂಡಿರುವ ಈ ಮೌಲ್ಯಗಳಿಗೆ ತಲೆಬಾಗಿ ಕೊಂಡರೆ ಅಪ್ಪಿಕೊಳ್ಳುವ, ತಿರಸ್ಕರಿಸಿದರೆ ನಿರಾಕರಿಸುವ ರಾಜಕಾರಣಗಳನ್ನು ಗೋಪಿ ಮತ್ತು ರಾಶಿಯ ಪಾತ್ರಗಳಲ್ಲಿ ನಿರೂಪಿಸಲಾಗಿದೆ.

೩.೨.೨. ದಿಯಾ ಔರ್ ಬಾತಿ ಹಮ್

ಕಥೆಯ ಸಾರಾಂಶ

ಕಥಾನಾಯಕಿ ಸಂಧ್ಯಾ ಒಬ್ಬ ಪ್ರತಿಭಾವಂತೆ, ಚಾಣಾಕ್ಷೆ, ಬುದ್ಧಿವಂತೆ, ಸ್ಫುರದ್ರೂಪಿಯಾದ, ಹತ್ತೊಂಬತ್ತು ವರ್ಷದ ಹುಡುಗಿ. ತನ್ನ ಜೀವನದ ಏಕೈಕ ಗುರಿ ಐ.ಪಿ.ಎಸ್. ಅಧಿಕಾರಿಯಾಗಬೇಕು. ಆ ಮೂಲಕ ದೇಶದ ಸೇವೆಯನ್ನು ಮಾಡಬೇಕೆಂಬ ಆಸೆಯನ್ನು ಹೊಂದಿರುತ್ತಾಳೆ. ತನಗಿರುವ ಆಸೆಯನ್ನು ತಂದೆ ತಾಯಿಗೆ ಹೇಳಿರುತ್ತಾಳೆ. ಅದರಂತೆ ಸಂಧ್ಯಾಳ ತಂದೆ ಅರವಿಂದ ಕೊಠಾರಿ ಮತ್ತು ತಾಯಿ ಕಂಚನ ತಮ್ಮ ಮಗಳ ಈ ಆಸೆಯನ್ನು ಪೂರೈಸಬೇಕೆಂಬ ಆಸೆ ಇಟ್ಟುಕೊಂಡಿರುತ್ತಾರೆ. ಮಗಳಿಗೊಂದು ಸುಂದರವಾದ ಭವಿಷ್ಯ ರೂಪಿಸುವ ಗುರಿ ಹೊಂದಿರುತ್ತಾರೆ. ಅದರಂತೆ ಮಗಳಿಗೆ ಓದುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುತ್ತಾರೆ. ಮಧ್ಯಮ ವರ್ಗದ ಮನೆಯಾದರೂ ಸಂಧ್ಯಾಳ ಓದಿಗೆ ಯಾವುದೇ ರೀತಿಯಿಂದಲೂ ವಂಚಿತಳನ್ನಾಗಿ ಮಾಡಿರುವುದಿಲ್ಲ. ಹೀಗೆ ಕಥೆಯು ಸರಾಗವಾಗಿ ನಡೆಯುತ್ತಿರಬೇಕಾದಾಗ, ಅನಿರೀಕ್ಷಿತ ತಿರುವೊಂದು ಬರುತ್ತದೆ. ಸಂಧ್ಯಾಳ ತಂದೆ ತಾಯಿ ಒಂದು ಅಪಘಾತದಲ್ಲಿ ಸಾವನ್ನಪ್ಪುತ್ತಾರೆ. ತಂದೆ ತಾಯಿಯರ ಈ ರೀತಿಯಾದ ಅಕಾಲಿಕ ಮರಣದಿಂದ ಸಂಧ್ಯಾಳ ಬದುಕು ಕತ್ತಲೆಯಲ್ಲಿ ಕಳೆದು ಹೋದಂತಾಗುತ್ತದೆ.

ಸಂಧ್ಯಾಳ ಅಣ್ಣ ಅಂಕೂರ ಕಂಪನಿಯೊಂದರಲ್ಲಿ ಚಾರ್ಟಡ್‌ಅಕೌಂಟ್ ಆಗಿ ಕೆಲಸ ಮಾಡುತ್ತಿರುತ್ತಾನೆ. ಅಂಕೂರಗೆ ಮದುವೆಯಾಗಿದ್ದು ತನ್ನ ಹೆಂಡತಿಯೊಂದಿಗೆ ಅಮೆರಿಕದಲ್ಲಿ ನೆಲೆಸಬೇಕೆಂಬ ಆಲೋಚನೆ ಹೊಂದಿರುತ್ತಾನೆ. ಆದರೆ ತಂದೆ ತಾಯಿಯರ ಅಕಾಲಿಕ ಮರಣದಿಂದಾಗಿ ತನ್ನ ತಂಗಿ ಸಂಧ್ಯಾಳ ಜವಾಬ್ದಾರಿ ಅಂಕೂರ ಮೇಲೆ ಬೀಳುತ್ತದೆ. ಈಗ ಅಂಕೂರಗೆ ತನ್ನ ತಂಗಿಗೆ ಆದಷ್ಟು ಬೇಗ ಮದುವೆ ಮಾಡಿ, ಗಂಡನ ಮನೆಗೆ ಕಳಿಸಿದರೆ ತಾನು ನೆಮ್ಮದಿಯಿಂದ ವಿದೇಶದಲ್ಲಿ ನೆಲಸಬಹುದೆಂಬ ಗುರಿ ಹೊಂದಿರುತ್ತಾನೆ. ಇದು ಕಥಾ ನಾಯಕಿ ಸಂಧ್ಯಾಳ ಮನೆಯ ಚಿತ್ರಣ.

ಈ ಧಾರಾವಾಹಿಯ ಕಥಾನಾಯಕನ ಮನೆಯ ಚಿತ್ರಣ ನೋಡುವುದಾದರೆ, ಕಥೆಯ ನಾಯಕ ಸೂರಜ ಒಬ್ಬ ಸಂಭಾವಿತ ಹುಡುಗ ಮಿತಭಾಷಿ, ತನ್ನ ಕೆಲಸವನ್ನು ಶ್ರದ್ಧೆಯಿಂದ, ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುವವನು. ಚಿಕ್ಕ ವಯಸ್ಸಿನಲ್ಲಿಯೇ ಮನೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುವುದರಿಂದ, ಕೇವಲ ಹತ್ತನೆ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮುಗಿಸಿರುತ್ತಾನೆ. ತನ್ನದೇ ಆದ ಸಿಹಿ ತಿಂಡಿಯ ಹೋಟಲೊಂದು ತೆಗೆದು ಆ ಹೋಟೆಲನಲ್ಲಿ ತಾನೇ ಅಡುಗೆ ಭಟ್ಟನಾಗಿರುತ್ತಾನೆ. ಇವನ ಹೋಟೆಲ್‌ನಲ್ಲಿ ತಯಾರಾಗುವ ಜಿಲೇಬಿಯು ಸುತ್ತ ಮುತ್ತಲಿನ ಜನರಿಗೆಲ್ಲ ಹೊಸ ರುಚಿಯೊಂದು ಕೊಟ್ಟಿರುತ್ತದೆ. ಕಥಾನಾಯಕ ಸೂರಜನ ಈ ಜಿಲೇಬಿಯ ಹೋಟೆಲನಿಂದಾಗಿ ಜನರು ಅವನನ್ನು ಗುರುತಿಸುತ್ತಿರುತ್ತಾರೆ. ಈ ಕಥಾನಾಯಕನ ತಾಯಿ ಭಾಬೊ ಅವನಿಗೊಂದು ಮದುವೆ ಗೊತ್ತು ಮಾಡಿರುತ್ತಾಳೆ. ಅವನ

ಮದುವೆಯ ದಿನ ಬಂಧು, ಬಳಗದವರು, ಅಕ್ಕಪಕ್ಕದವರು ಎಲ್ಲರು ಬಂದಿರುತ್ತಾರೆ. ಮದುವೆಗೆ ಬೇಕಾಗಿರುವ ಎಲ್ಲ ತಯಾರಿಗಳನ್ನು ಮಾಡಿಕೊಂಡಿರುತ್ತಾರೆ. ಮದುವೆಗೆ ಇನ್ನೇನು ಕೆಲವೇ ಕ್ಷಣಗಳಿರುವಾಗ ಹುಡುಗಿಯ ಕಡೆಯಿಂದ, ಮದುವೆಯನ್ನು ನಿಲ್ಲಿಸಬೇಕೆಂದು, ಈ ಮದುವೆ ನಡೆಯುವುದಿಲ್ಲವೆಂದು ಹೇಳಿ ಮದುವೆಯನ್ನು ನಿಲ್ಲಿಸುತ್ತಾರೆ. ಈ ಮದುವೆ ನಿಲ್ಲಿಸಲು ಮುಖ್ಯವಾಗಿ ಕಥಾನಾಯಕನ ಕಡಿಮೆ ಓದು ಕಾರಣವಾಗಿರುತ್ತದೆ. ಮದುಮಗ ಕಡಿಮೆ ಓದಿರುವವನೆಂದು ತಿಳಿದು ಮದುವೆಯನ್ನು ನಿರಾಕರಿಸಿ ಹೋಗುತ್ತಾರೆ. ಮದುವೆ ಮಂಟಪದಲ್ಲಿ ಬಂದ ಎಲ್ಲ ಅತಿಥಿಗಳು, ಸಂಬಂಧಿಕರ ಮುಂದೆ ಭಾಬೋಗೆ ದೊಡ್ಡ ಅವಮಾನವಾಗುತ್ತದೆ. ತನಗೆ ಆದ ಈ ಅವಮಾನವನ್ನು ಸರಿ ಮಾಡಬೇಕಾದರೆ ಇನ್ನು ಹದಿನೈದು ದಿನಗಳಲ್ಲಿ ತನ್ನ ಮಗನಿಗೆ ಒಳ್ಳೆ ಮನೆತನದ ಹುಡುಗಿಯನ್ನು ಹುಡುಕಿ ಮದುವೆ ಮಾಡಿದಾಗ ಮಾತ್ರ ತನಗೆ ಸಮಾಧಾನ ಎಂದು ಭಾಬೋ ಆಕ್ರೋಶದಿಂದ ಮಾತನಾಡುತ್ತಾಳೆ. ತನಗಾದ ಅವಮಾನವನ್ನು ತಣ್ಣಗಾಗಿಸಲು ಈ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತಾಳೆ. ಇದರ ಮಧ್ಯೆ ಭಾಬೋ ತನಗೆ ಪರಿಚಯವಿರುವ ಕಡೆಗಳಲೆಲ್ಲಾ ಒಳ್ಳೆಯ ಹುಡುಗಿಯನ್ನು ಹುಡುಕಲು ಹೇಳುತ್ತಾಳೆ. ಭಾಬೋಗೆ ತನ್ನ ಮಗನ ಮದುವೆಯನ್ನು ಹದಿನೈದು ದಿನಗಳಲ್ಲೇ ಮಾಡಿಮುಗಿಸಬೇಕಾದ ತುರ್ತು ಇರುತ್ತದೆ.

ಇತ್ತ ಕಥೆಯ ಇನ್ನೊಂದು ಭಾಗದಲ್ಲಿ ಸಂಧ್ಯಾಳ ಅಣ್ಣನು ಕೂಡ ತಂಗಿಗೆ ಒಳ್ಳೆಯ ಮನೆತನದ, ಚೆನ್ನಾಗಿ ಓದಿ ಕೆಲಸದಲ್ಲಿರುವ ಹುಡುಗನನ್ನು ಹುಡುಕುತ್ತಿರುತ್ತಾನೆ. ಇದೇ ವೇಳೆಯಲ್ಲಿ ನಾಯಕಿಯ ಅಣ್ಣನಿಗೆ ನಾಯಕ ಸೂರಜನ ಸಂಬಂಧದ ಬಗ್ಗೆ ತಿಳಿದುಬರುತ್ತದೆ. ಅವರಿಗೆ ಹದಿನೈದು ದಿನಗಳಲ್ಲಿಯೇ ಮದುವೆ ಮಾಡಬೇಕಾಗಿದೆ ಎಂದು ತಿಳಿದು ಸಂಧ್ಯಾಳ ಅಣ್ಣನಿಗೆ ಸಂತೋಷವಾಗುತ್ತದೆ. ಹುಡುಗನ ಹಿನ್ನಲೆಯನ್ನು ತಿಳಿದುಕೊಳ್ಳುತ್ತಾನೆ. ತನ್ನ ತಂಗಿಯ ಪರವಾಗಿ ಒಪ್ಪಿಗೆ ಕೊಡುತ್ತಾನೆ. ಹುಡುಗನ ಮನೆಯಲ್ಲಿ ಮದುವೆಗೆ ತಯಾರಿಯನ್ನು ನಡೆಸಬೇಕೆಂದು ಹೇಳಿ ಕಳಿಸುತ್ತಾನೆ. ಮನೆಗೆ ಬಂದು ತನ್ನ ತಂಗಿಗೆ ಹುಡುಗನ ಫೋಟೊ ತೋರಿಸುತ್ತಾನೆ. ಈ ಹುಡುಗ ಒಳ್ಳೆಯ ಮನೆತನದವನಾಗಿದ್ದು ಒಳ್ಳೆಯ ಕೆಲಸದಲ್ಲಿದ್ದಾನೆ. ಹುಡುಗನ ಮನೆಯಲ್ಲಿ ಹದಿನೈದು ದಿನಗಳಲ್ಲಿಯೇ ಮದುವೆ ಮಾಡಿ ಮುಗಿಸಬೇಕೆಂದು ಹೇಳಲಾಗಿದೆ. ಈ ಹುಡುಗನನ್ನು ಬಿಟ್ಟರೇ ಮತ್ತೆ ಇಂತಹ ಒಳ್ಳೆಯ ಸಂಬಂಧ ಮುಂದೆ ನಮಗೆ ಸಿಗಲಿಕ್ಕಿಲ್ಲ, ನನಗೆ ಈ ಹುಡುಗ ಇಷ್ಟ ಆಗಿದ್ದಾನೆ. ನೀನು ಒಪ್ಪಿಗೆ ಕೊಟ್ಟರೇ ಮದುವೆಯ ತಯಾರಿ ಮಾಡುತ್ತೇವೆ. ಮದುವೆ ಮುಗಿದ ಮೇಲೆ ನಾವು ಅಮೇರಿಕಕ್ಕೆ ಹೋಗಿ ನೆಲೆಸುತ್ತೇವೆಂದು ಎಲ್ಲವೂ ಒಂದೆ ಉಸಿರಿಗೆ ಹೇಳಿ ಮುಗಿಸುತ್ತಾನೆ.

ಇದ್ಯಾವುದರ ಅರಿವಿರದ ನಾಯಕಿಗೆ ತನ್ನ ಜೊತೆ ಏನು ನಡಿತೀದೆ? ತಾನೇನು ಮಾಡಬೇಕು?ತನಗೆ ಎದುರಾದ ಈ ಅನಿರೀಕ್ಷಿತ ಸನ್ನಿವೇಶದಿಂದ ಅಶಕ್ತಳಾಗಿ ಕುಳಿತಿರುತ್ತಾಳೆ. ತನ್ನ ಅಣ್ಣ ಹೇಳಿದ ಈ ಸಂಬಂಧದ ಬಗ್ಗೆ ತುಂಬಾ ಗೊಂದಲಗೊಂಡು ಎರಡು

ದಿನಗಳಾದ ಮೇಲೆ ತಾವು ತಿಳಿದವರು ತಮಗೆ ಯಾವುದು ಸರಿ ಕಾಣುತ್ತದೆಯೋ ಅದನ್ನೇ ಮಾಡಿ ಎಂದು ಹೇಳಿ ತನ್ನ ಒಪ್ಪಿಗೆಯನ್ನು ಸೂಚಿಸುತ್ತಾಳೆ. ತನ್ನ ತಂಗಿ ಒಪ್ಪಿಗೆ ಕೊಟ್ಟ ಬೆನ್ನಲ್ಲೇ ಮದುವೆಗೆ ಬೇಕಾಗಿರುವ ಎಲ್ಲ ತಯಾರಿಯನ್ನು ಮಾಡಿಕೊಳ್ಳುತ್ತಾರೆ. ಎಲ್ಲಾ ಶಾಸ್ತ್ರಗಳು ಮುಗಿದು ಮದುವೆಯೂ ಆಗುತ್ತದೆ. ಮದುವೆ ಮುಗಿದ ಮೇಲೆ ತನ್ನ ತಂಗಿಯನ್ನು ಗಂಡನ ಮನೆಗೆ ಬಿಟ್ಟು ಬರುತ್ತಾರೆ. ತಾವು ಇನ್ನು ಅಮೇರಿಕಕ್ಕೆ ನೆಮ್ಮದಿಯಿಂದ ಹೋಗ ಬಹುದೆಂದು ಹೇಳಿ ನಾಯಕಿಯ ಅಣ್ಣ ಅತ್ತಿಗೆ ಹೊರಡುತ್ತಾರೆ. ಇತ್ತ ತನಗೆ ಪರಿಚಯವಿಲ್ಲದ ಮನೆಗೆ ಹೊಸದಾಗಿ ಬಂದ ತನ್ನನ್ನು ಹೇಗೆ ನಡೆಸಿಕೊಳ್ಳುತ್ತಾರೋ? ತನ್ನ ಅತ್ತೆಯ ಮನೆ, ಆ ಮನೆಯ ಸದಸ್ಯರು ತನ್ನ ಬಾಳಸಂಗಾತಿ ಇವರೆಲ್ಲರ ಮನಸ್ಥಿತಿ ಹೇಗಿದೆಯೋ? ಈ ಮನೆಯಲ್ಲಿ ನನಗೆ ತಂದೆ ತಾಯಿಯರ ಪ್ರೀತಿ ಸಿಗಬಹುದಾ? ಒಂದು ಒಳ್ಳೆಯ ಕುಟುಂಬ ಸಿಗಬಹುದಾ? ಎಂಬ ಪ್ರಶ್ನೆಗಳನ್ನು ಹಾಕಿಕೊಂಡೆ ತನ್ನ ಅತ್ತೆ ಮನೆಗೆ ಕಾಲಿಡುತ್ತಾಳೆ. ನಾಯಕಿಯ ಅತ್ತೆಯ ಹೆಸರು ಸಂತೋಷ ಎಲ್ಲರೂ ಸಂತೋಷಳನ್ನು ಭಾಬೋ ಎಂದು ಕರೆಯುತ್ತಿರುತ್ತಾರೆ. ಭಾಬೋ ಮಾತೃ ಹೃದಯ ಹೊಂದಿರುವಾಕೆ. ಆದರೆ ಸಿಟ್ಟು ಜಾಸ್ತಿ, ಮನೆಯಲ್ಲಿ ಎಲ್ಲ ಕೆಲಸವು ಅಚ್ಚುಕಟ್ಟಾಗಿ ನಿಗದಿತ ಅವಧಿಯಲ್ಲಿಯೇ ಆಗಬೇಕು.

ಮನೆಯ ಎಲ್ಲ ನಿಯಮಗಳು ಭಾಬೋ ಹೇಳಿದಂತೆ ಇರಬೇಕು, ಭಾಬೋಳ ಗಂಡನಾಗಲಿ ಮಕ್ಕಳಾಗಲಿ, ಸೊಸೆಯಂದಿರಾಗಲಿ ಪ್ರಶ್ನೆ ಮಾಡುವಂತಿಲ್ಲ. ಭಾಬೋಗೆ ಒಟ್ಟು ಮೂರು ಗಂಡು ಮಕ್ಕಳಿದ್ದು ಮೊದಲನೆಯವ ವಿಕ್ರಮ ಸೀರೆ ಅಂಗಡಿಯೊಂದನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುತ್ತಾನೆ. ವಿಕ್ರಮಗೇ ಮದುವೆ ಮಾಡಲಾಗಿದ್ದು, ಅವನ ಹೆಂಡತಿ ಮೀನಾಕ್ಷಿ ಮನೆಯಲ್ಲಿ ಕೆಲಸಗಳನ್ನು ಮುಗಿಸಿಕೊಂಡು ತನ್ನ ಗಂಡನೊಂದಿಗೆ ಸೀರೆ ಅಂಗಡಿಗೆ ಹೋಗಿ ವ್ಯಾಪಾರ ಮಾಡುತ್ತಿರುತ್ತಾಳೆ. ಗಂಡನಿಗೆ ಸಹಾಯ ಮಾಡುವ ನೆಪದಲ್ಲಿ ದುಡ್ಡನ್ನು ಮುಚ್ಚಿಟ್ಟುಕೊಳ್ಳುವ ಸ್ವಭಾವ ಹೊಂದಿರುತ್ತಾಳೆ. ಮನಸ್ಸಿನಲ್ಲಿ ಕಪಟವಿದ್ದರೂ ಒಳ್ಳೆತನದ ಮುಖವಾಡವನ್ನು ಪ್ರದರ್ಶಿಸುವಂತಹ ಪಾತ್ರ ಮೀನಾಕ್ಷಿಯದಾಗಿದೆ. ಇನ್ನು ಎರಡನೇ ಮಗ ಸೂರಜ ಕಥಾನಾಯಕ ಇತ ಬಹಳ ಸಂಭಾವಿತನಾಗಿದ್ದು ಮೃದು ಭಾಷಿಯನಾಗಿರುತ್ತಾನೆ. ತನ್ನ ಒಳ್ಳೆತನದಿಂದ ಸುತ್ತಮುತ್ತಲಿನ ಜನರಿಗೆ ಚಿರಪರಿಚಿತನಾಗಿರುತ್ತಾನೆ. ಈ ನಾಯಕನಿಗೆ ಹೆಂಡತಿಯಾಗಿ ಸಂಧ್ಯಾ ಬರುತ್ತಾಳೆ. ಭಾಬೋಳ ಮೂರನೆ ಮಗ ವಿದ್ಯಾಭ್ಯಾಸ ಮಾಡುತ್ತಿರುತ್ತಾನೆ. ಇದು ಸಂಧ್ಯಾಳ ಅತ್ತೆ ಮನೆಯ ಚಿತ್ರಣ. ಮನೆಯಲ್ಲಿ ಶಿಸ್ತು, ನಿಯಮ, ಅಚ್ಚುಕಟ್ಟುತನ ಹೆಚ್ಚಾಗಿಯೇ ಇರುತ್ತದೆ. ಮದುವೆ ಆದ ಮೇಲೆ ಗಂಡನ ಮನೆಗೆ ಬರುವ ಸಂಧ್ಯಾಳ ಬಾಳಿನ ಇನ್ನೊಂದು ಅಧ್ಯಾಯ ಈ ಮನೆಯಲ್ಲಿ ಹೇಗೆ ತೆರೆದುಕೊಳ್ಳುತ್ತದೆ? ಆ ಮನೆಯಲ್ಲಿ ಸಂಧ್ಯಾ ಎದುರಿಸುವ ಸಮಸ್ಯೆಗಳು, ಅತ್ತೆ, ಓರಗಿತ್ತಿ ಕೊಡುವ ಹಿಂಸೆಗಳಿಗೆ, ಅವರ ಜೊತೆ ಸಂಧ್ಯಾ ಹೇಗೆ ಹೊಂದಿಕೊಳ್ಳುತ್ತಾಳೆ. ಗಂಡ ಸೂರಜನ ಜೊತೆ ಅವಳ ಮುಂದಿನ ಜೀವನ ಹೇಗೆ? ಎಂಬುದು ಕಥೆಯ ಮುಂದಿನ ಸಾರಾಂಶ.

ಸಂಧ್ಯಾ ಮದುವೆಯಾಗಿ ಅತ್ತೆ ಮನೆಗೆ ಬಂದಾಗ ಅವಳಿಗೆ ಅಲ್ಲಿ ಆತ್ಮೀಯವಾದ ವಾತಾವರಣ ಸಿಗುವುದಿಲ್ಲ. ಬದಲಿಗೆ ತನ್ನ ಓರಗಿತ್ತಿಯ ಚುಚ್ಚು ನೋಟ, ಚುಚ್ಚು ಮಾತುಗಳನ್ನು ಎದುರಿಸಬೇಕಾಗುತ್ತದೆ. ಸಂಧ್ಯಾಳ ಪ್ರತಿಯೊಂದು ಕೆಲಸದಲ್ಲಿಯೂ ತಪ್ಪನ್ನು ಕಂಡು ಹಿಡಿದು ಅತ್ತೆಗೆ ದೂರು ಕೊಡುವುದೇ ಮೀನಾಕ್ಷಿಯ ಕೆಲಸವಾಗಿರುತ್ತದೆ. ಸಂಧ್ಯಾಳಿಗೆ ಮನೆಯಲ್ಲಿ ಅಡುಗೆ ಮಾಡುವಂತೆ ಹೇಳಲಾಗುತ್ತದೆ. ಈ ಸಮಯದಲ್ಲಿ ಸಂಧ್ಯಾಳಿಗೆ ನಿಜವಾದ ಪರೀಕ್ಷೆಯ ಕಾಲವೆಂಬಂತೆ ಕಂಡುಬರುತ್ತದೆ. ತಾಯಿಯ ಮನೆಯಲ್ಲಿದ್ದಾಗ ಅಡುಗೆ ಮನೆಯನ್ನು ತುಳಿಯದವಳಿಗೆ ಅಡುಗೆ ಮಾಡು ಎಂದರೆ ಹೇಗಾಬೇಕೋ ಅಂತಹ ಸ್ಥಿತಿಯಲ್ಲಿ ಸಂಧ್ಯಾ ಇರುತ್ತಾಳೆ. ಈ ವಿಷಯಕ್ಕೆ ತನಗೆ ಯಾರಾದರೂ ಸಹಾಯ ಮಾಡಬಹುದೇ ಎಂದು ಯೋಚಿಸುತ್ತಾಳೆ. ಆದರೆ ತನಗೆ ಸಹಾಯ ಮಾಡುವವರು ಯಾರು ಇಲ್ಲವೆಂದು ಗೊತ್ತಾಗಿ ಬಿಡುತ್ತದೆ. ಈ ಅವಧಿಯಲ್ಲಿ ದೇವರ ಮೇಲೆ ಭಾರ ಹಾಕಿ, ಅಡುಗೆಯೊಂದನ್ನು ಸಿದ್ಧಪಡಿಸುತ್ತಾಳೆ. ಅವಳ ಅಡುಗೆಯ ರುಚಿಯನ್ನು ನೋಡಬಯಸಿ ಎಲ್ಲರೂ ಊಟಕ್ಕೆ ಸಿದ್ದವಾಗಿ ಕುಳಿತಿರುತ್ತಾರೆ. ಸಂಧ್ಯಾ ಅಡುಗೆ ಮಾಡಿ ಬಡಿಸುತ್ತಾಳೆ. ಅಷ್ಟೊಂದು ಚೆನ್ನಾಗಿ ಅಡುಗೆ ಮಾಡಿರದ ಕಾರಣ ಅತ್ತೆ ಸಂಧ್ಯಾಳಿಗೆ ಚೆನ್ನಾಗಿ ಅಡುಗೆ ಮಾಡುವುದನ್ನು ಈಗಿನಿಂದಲೆ ಕಲಿಯಬೇಕೆಂದು ಸಲಹೆ ಕೊಡುತ್ತಾಳೆ. ಮನೆಯ ಸದಸ್ಯರೆಲ್ಲರೂ ಅಡುಗೆ ಚೆನ್ನಾಗಿ ಆಗಿಲ್ಲದ ಕಾರಣ ಊಟ ಬಿಟ್ಟು ಏಳುವಂತಾಗುತ್ತದೆ. ತನಗೆ ಚೆನ್ನಾಗಿ ಅಡುಗೆ ಮಾಡಲು ಬರುತ್ತಿದ್ದರೆ ಇಂತಹ ಸಮಸ್ಯೆ ಬರುತ್ತಿರಲಿಲ್ಲವೆಂದು ನೊಂದುಕೊಳ್ಳುತ್ತಾಳೆ. ಸಂಧ್ಯಾ ವೇದನೆ ಪಡುತ್ತಿರುವುದನ್ನು ಕಂಡ ಸೂರಜ ಹೊಸತರಲ್ಲಿ ಇದು ಸಾಮಾನ್ಯ ಮುಂದೆ ಚೆನ್ನಾಗಿ ಅಡುಗೆ ಮಾಡುವುದನ್ನು ಕಲಿತರಾಯಿತು. ಎಲ್ಲ ಸರಿ ಹೋಗುತ್ತೆ ಚಿಂತೆ ಬಿಡಿ ಎಂದು ಹೆಂಡತಿಗೆ ಸಾಂತ್ವಾನ ಹೇಳುತ್ತಾನೆ. ಗಂಡನ ಈ ಮಾತುಗಳಿಂದ ಸಂಧ್ಯಾಳಿಗೆ ಸ್ವಲ್ಪ ಧೈರ್ಯ ಬರುತ್ತದೆ. ತನ್ನೊಂದಿಗೆ ಗಂಡ ಇದ್ದಾನಲ್ಲ ಎಂಬ ನಂಬಿಕೆ ಬಲವಾಗುತ್ತದೆ. ಕಥೆಯು ಹೀಗೆಯೇ ಮುಂದುವರೆಯುತ್ತಿರುವಾಗ ಮತ್ತೊಂದು ತಿರುವು ಬರುತ್ತದೆ.

ಸಂಧ್ಯಾಳಿಗೆ ತಿಳಿಯದ ಸತ್ಯವೊಂದು ಗೊತ್ತಾಗಿ ಹೋಗುತ್ತದೆ. ಆ ಸತ್ಯವೇನೆಂದರೆ ತನ್ನ ಬಾಳಸಂಗಾತಿಯೊಬ್ಬ ಕಡಿಮೆ ಕಲಿತಿರುವ ಅನಕ್ಷರಸ್ಥನಲ್ಲದಿದ್ದರೂ, ಅವನು ತುಂಬಾ ಕಡಿಮೆ ಓದಿರುತ್ತಾನೆ. ಕೇವಲ ಹತ್ತನೆ ತರಗತಿಯವರೆಗೆ ಮಾತ್ರ ಓದಿದ್ದಾನೆಂದು ತಿಳಿದು ದುಃಖ ಪಡುತ್ತಾಳೆ. ಮದುವೆಗೆ ಮುಂಚೆ ಮದುವೆ ಗಂಡು ಚೆನ್ನಾಗಿ ಓದಿಕೊಂಡಿದ್ದಾನೆ. ಒಳ್ಳೆಯ ಕೆಲಸದಲ್ಲಿದ್ದಾನೆ. ತನ್ನ ಯೋಗ್ಯತೆಗೆ ತಕ್ಕಂತಹ ಸಂಬಂಧ ಇದಾಗಿದೆ. ಎಂದು ಹೇಳಿದ ತನ್ನಣ್ಣನ ಮಾತುಗಳು ಒಮ್ಮೆ ಹಾದು ಹೋಗುತ್ತದೆ. ತನ್ನ ಒಡಹುಟ್ಟಿದ ಅಣ್ಣ ಹೀಗೆ ಯಾಕೆ ಮೋಸ ಮಾಡಿದ? ಮೋಸ ಮಾಡಬೇಕಾದ ಅನಿವಾರ್ಯತೆ ಏನಿತ್ತು? ನನ್ನ ಅಣ್ಣ ತನ್ನ ಭವಿಷ್ಯದ ಚಿಂತೆ ಮಾತ್ರ ಮಾಡಿದ ಅದಕ್ಕೆ ತನ್ನ ಭವಿಷ್ಯವನ್ನು ಬಲಿಕೊಟ್ಟನಾ? ಎಂದು ಮನಸ್ಸಿನಲ್ಲಿಯೇ ಪ್ರಶ್ನೆಗಳ ಸುರಿಮಳೆಯನ್ನು ಹರಿಸಿಕೊಂಡು ದುಃಖ ಪಡುತ್ತಿರುತ್ತಾಳೆ. ಸಂಧ್ಯಾಳಿಗೆ

ಈ ಪರಿಸ್ಥಿತಿಯನ್ನು ಅತ್ತ ನುಂಗಲೂ ಆಗದ ಉಗುಳಲೂ ಆಗದ ಸ್ಥಿತಿಯಲ್ಲಿ ತಂದು ನಿಲ್ಲಿಸಿರುತ್ತದೆ.

ತನಗೆ ಎದುರಾದ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ತನ್ನ ಅಣ್ಣನ ಮನೆಗೆ ಹೋಗಿ ಕೇಳುತ್ತಾಳೆ. ಅಣ್ಣನಾದವನು ತನ್ನದು ತಪ್ಪಾಗಿದೆ ಮದುವೆ ಹುಡುಗ ಕೇವಲ ಹತ್ತನೆ ತರಗತಿಯವರೆಗೆ ಮಾತ್ರ ಕಲಿತಿದ್ದು, ಹೋಟೆಲ್ ಒಂದನ್ನು ನಡೆಸುತ್ತಿದ್ದದು, ಎಲ್ಲವೂ ನನಗೆ ಮೊದಲೇ ಗೊತ್ತಿತ್ತು. ಆದರೆ ನಿನ್ನಿಂದ ಈ ವಿಷಯಗಳನ್ನು ಮುಚ್ಚಿಟ್ಟಿದ್ದೆ, ಆ ಮನೆತನ ತುಂಬಾ ಒಳ್ಳೆಯದು ಮನೆಯವರು ಶ್ರೀಮಂತರಲ್ಲದಿದ್ದರೂ ತುಂಬಾ ಒಳ್ಳೆಯವರು. ಹಾಗಾಗಿ ಈ ತಪ್ಪು ಮಾಡಿದೇ ಎಂದು ಹೇಳುತ್ತಾನೆ. ತನ್ನ ವಿದೇಶದಲ್ಲಿ ಸಿಕ್ಕಿರುವ ಕೆಲಸವನ್ನು ಕಳೆದುಕೊಳ್ಳಲು ಇಷ್ಟವಿಲ್ಲದ ಕಾರಣ ತಾನು ಇಂಥ ತಪ್ಪು ಮಾಡುವಂತಾಯಿತು ತನಗೆ ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತಾನೆ. ಅಣ್ಣನ ಈ ಉತ್ತರದಿಂದ ಸಂಧ್ಯಾ ಕುಬ್ಜಳಾಗಿ ಹೋಗುತ್ತಾಳೆ. ತನಗೆ ಬಂದ ಈ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕೆಂದು ತಿಳಿಯದಾಗುತ್ತದೆ. ತನ್ನ ತಂದೆ ತಾಯಿಯನ್ನು ಕಳೆದುಕೊಂಡಾಗ ಅನುಭವಿಸಿದ ಕತ್ತಲೆಯ ಬದುಕು ಮತ್ತೊಮ್ಮೆ ಪುನರಾವರ್ತನೆಯಾಗಿರುತ್ತದೆ. ಈ ವಿಷಯ ಸಂಧ್ಯಾಳ ಗಂಡ ಸೂರಜನಿಗೂ ತಿಳಿಸುತ್ತಾಳೆ. ಆಗ ಸೂರಜ ಕೂಡ ಆಶ್ಚರ್ಯಗೊಳ್ಳುತ್ತಾನೆ. ತನಗೆ ಮದುವೆಯಾಗುತ್ತಿರುವ ಹುಡುಗಿ ಅನಕ್ಷರಸ್ಥೆಯಾಗಿದ್ದಾಳೆಂದು ಹೇಳಿದಾಗಲೇ ನಾವು ಮದುವೆಗೆ ಒಪ್ಪಿರುವುದಾಗಿ ಸೂರಜ ನಿಜಾಂಶ ಹೇಳುತ್ತಾನೆ. ಈ ಮಾತು ಕೇಳಿದ ಸಂಧ್ಯಾಳಿಗೆ ಮತ್ತೊಂದು ಆಘಾತ, ತನ್ನನ್ನು ಅನಕ್ಷರಸ್ಥಳನ್ನಾಗಿ ಮಾಡಿ ಮದುವೆ ಮಾಡಲಾಯಿತೆ? ಎಂದು ಮತ್ತೆ ಕೊರಗುತ್ತಾಳೆ. ಈ ಪರಿಸ್ಥಿತಿಯಿಂದ ಹೊರ ಬರಲು ಸಾಕಷ್ಟು ಪ್ರಯತ್ನ ಮಾಡುತ್ತಾಳೆ. ಇಂತಹ ಸಂದರ್ಭದಲ್ಲಿ ಗಂಡ ಸೂರಜ ಸಂಧ್ಯಾಳಿಗೆ ಆಸರೆಯಾಗಿ ನಿಲ್ಲುತ್ತಾನೆ. ಹೆಂಡತಿಗೆ ಸಮಾಧಾನ ಮಾಡುತ್ತಾನೆ. ಗಂಡ ಹೆಂಡತಿಯ ಮಧ್ಯೆ ಒಂದು ಒಳ್ಳೆಯ ಸಂಬಂಧ ಏರ್ಪಡುತ್ತದೆ. ಈ ಮಧ್ಯೆ ಸಂಧ್ಯಾ ಮತ್ತು ಸೂರಜ ಒಬ್ಬರಿಗೊಬ್ಬರು ಆತ್ಮೀಯರಾಗುತ್ತಾರೆ. ಈ ದುಃಖವನ್ನು ಮರೆಯುವಂತೆ ಹೆಂಡತಿಗೆ ಸಲಹೆ ನೀಡುತ್ತಾನೆ. ಸಂಧ್ಯಾ ಪರಿಸ್ಥಿತಿಯು ತಿಳಿಯಾದ ಮೇಲೆ ತನ್ನ ಗಂಡನಿಗೆ ತನ್ನ ಓದಿನ ಹಂಬಲವನ್ನು ಹೇಳಿಕೊಳ್ಳುತ್ತಾಳೆ. ಆಗ ಸೂರಜ ತನ್ನ ಹೆಂಡತಿಯ ಗುರಿಯನ್ನು ತಾನು ಪೂರೈಸುವುದಾಗಿ ಹೇಳಿ ಭಾಷೆ ಕೊಡುತ್ತಾನೆ. ತಾನು ಕಡಿಮೆ ಕಲಿತಿದ್ದರು ತನ್ನ ಹೆಂಡತಿ ಹೆಚ್ಚಿನ ಓದು ಬರಹ ಕಲಿಯಲಿ ಎಂಬ ಉದ್ದೇಶದಿಂದ ಹೆಂಡತಿಗೆ ಸಹಾಯ ಮಾಡುತ್ತಾನೆ.

ಈ ತಿರುವಿನಿಂದ ಸಂಧ್ಯಾಳಿಗೆ ತನ್ನ ಗುರಿಯನ್ನು ಮುಟ್ಟಲು ಸಹಕರಿಸುವಂತಹ ಬಾಳಸಂಗಾತಿ ಸಿಕ್ಕಿದ ಸಂತೋಷವಾಗುತ್ತದೆ. ಸಂಧ್ಯಾ ಹಗಲು ರಾತ್ರಿ ಕಷ್ಟಪಟ್ಟು ಓದುತ್ತಾಳೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಗಂಡ ಸೂರಜ ಒದಗಿಸುತ್ತಾನೆ. ತನ್ನ ಓದನ್ನು ಒರೆಗೆ ಹಚ್ಚುವ ಪರೀಕ್ಷೆಯ ದಿನ ಬಂದೇ ಬಿಡುತ್ತದೆ.

ಸಂಧ್ಯಾ ಗಂಡನ ಸಹಕಾರದಿಂದ ಪರೀಕ್ಷೆಯನ್ನು ಚೆನ್ನಾಗಿ ಬರೆದಿರುತ್ತಾಳೆ. ಪರೀಕ್ಷೆಯ ಫಲಿತಾಂಶ ಹೊರಬಂದ್ದದ್ದು ಸಂಧ್ಯಾಳಿಗೆ ಗೊತ್ತೇ ಇರುವುದಿಲ್ಲ. ಆಗ ಸಂಧ್ಯಾ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದು ಪ್ರಥಮ ರ್‍ಯಾಂಕ್ ಬಂದಿರುತ್ತಾಳೆ. ಇಂತಹ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುವುದನ್ನು ಕಂಡು ಮಾಧ್ಯಮದವರು, ಸಂಧ್ಯಾಳ ಅತ್ತೆ ಮನೆಗೆ ಸಂದರ್ಶನಕ್ಕಾಗಿ ಬರುತ್ತಾರೆ. ಆಗ ಕಥೆಯಲ್ಲಿ ಹೊಸ ತಿರುವೊಂದು ಬರುತ್ತದೆ. ಅಂದು ಭಾಬೋಳಿಗೆ ಆಶ್ಚರ್ಯದ ಸಂಗತಿಯೊಂದು ಎದುರಾಗುತ್ತದೆ. ತನ್ನ ಮನೆಗೆ ಬಂದ ಈ ಮಾಧ್ಯಮದವರನ್ನು ಕುರಿತು ತಾವೆಲ್ಲರೂ ಇಲ್ಲಗೇಕೆ ಬಂದಿದ್ದೀರಿ? ಇಲ್ಲಿ ಯಾರನ್ನು ಸಂದರ್ಶನ ಮಾಡಬೇಕು? ನಮ್ಮ ಮನೆಯಲ್ಲಿ ಅಂತಹ ಪ್ರಭಾವಿ ವ್ಯಕ್ತಿ ಯಾರು ಇಲ್ಲ? ಎಲ್ಲರೂ ಹೊರಡಬೇಕೆಂದು ಹೇಳುತ್ತಾಳೆ. ಆಗ ಮಾಧ್ಯಮದ ಕಡೆಯವರು ನಿಮ್ಮ ಮನೆಯ ಸೊಸೆ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಬಂದಿದ್ದಾಳೆ. ಅವಳನ್ನು ಭೇಟಿಯಾಗಿ ಸಂದರ್ಶನ ಮಾಡಬೇಕೆಂದು ಹೇಳುತ್ತಾರೆ. ಈ ಮಾತುಗಳನ್ನು ಕೇಳಿ ಭಾಬೋಗೆ ಆಶ್ಚರ್ಯವಾಗುತ್ತದೆ. ತಮಗೆ ಮೋಸ ಮಾಡಲಾಗಿದೆ. ತಮ್ಮ ಮಗನಿಗೆ ಮದುವೆ ಮಾಡಬೇಕೆಂದು ಕೇಳಿದಾಗ ನಾವು ಅನಕ್ಷರಸ್ಥೆಯನ್ನೇ ಆಯ್ಕೆ ಮಾಡಿದ್ದೆವು. ಈಗ ಹುಡುಗಿ ಅಕ್ಷರಸ್ಥಳೆಂದು ತಿಳಿದು ಗೊಂದಲಗೊಳ್ಳುತ್ತಾಳೆ. ನಮಗೆ ಇಷ್ಟೊಂದು ದೊಡ್ಡ ಸುಳ್ಳು ಹೇಳಿ, ಮೋಸ ಮಾಡಿದರೂ ಎಂದು ಸಂಧ್ಯಾ ಮತ್ತು ಅವಳ ಅಣ್ಣನ ಮೇಲೆ ಭಾಬೋ ಕೋಪಗೊಳ್ಳುತ್ತಾಳೆ. ಈ ಘಟನೆಯ ಬಳಿಕ ಭಾಬೋ ಸಂಧ್ಯಾಳೊಂದಿಗೆ ಮಾತನಾಡುವುದನ್ನು ನಿಲ್ಲಿಸುತ್ತಾಳೆ. ಈ ಪರಿಸ್ಥಿತಿಯಲ್ಲಿಯೂ ಗಂಡ ಸೂರಜ ಸಂಧ್ಯಾಳಿಗೆ ಹೆಗಲಾಗಿ ನಿಲ್ಲುತ್ತಾನೆ. ಅತ್ತೆ ಸೊಸೆಯರ ಮಧ್ಯೆ ಮಾತಿಲ್ಲದಾಗ, ಮನೆಯ ಹಿರಿಯ ಸೊಸೆ ಈ ಕಂದಕವನ್ನು ತನ್ನ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುತ್ತಾಳೆ. ಅತ್ತೆ ಸೊಸೆ ಮಧ್ಯೆ ನಡೆಯುತ್ತಿರುವ ಶೀತಲ ಸಮರಕ್ಕೆ ಮತ್ತಷ್ಟು ಎಣ್ಣೆ ಹಾಕುವ ಕೆಲಸ ಮಾಡುತ್ತಿರುತ್ತಾಳೆ. ಸಂಧ್ಯಾಳಿಗೆ ಎದುರಾಗುವ ಈ ಸಂಕಟದಲ್ಲಿ ಗಂಡನ ಜೊತೆ ಬಿಟ್ಟರೇ ಉಳಿದವರ ಜೊತೆ ಸಿಗುವುದಿಲ್ಲ. ಆಗ ಸಂಧ್ಯಾ ತಾನು ಗುರಿಯಾಗಿ ಇಟ್ಟುಕೊಂಡಿರುವ ಐ.ಪಿ.ಎಸ್. ಅಧಿಕಾರಿಯಾಗಬೇಕೆಂಬ ಆಸೆ ಇಂದು ಮುಳ್ಳಾಗಿ ಚುಚ್ಚುತ್ತಿರುವ ಅನುಭವವಾಗುತ್ತದೆ.

ಕಥೆಯು ಅನೇಕ ತಿರುವುಗಳನ್ನು ಪಡೆದುಕೊಂಡು ಮುಂದುವರೆಯುತ್ತಿರುತ್ತದೆ. ಮನೆಯಲ್ಲಿ ನಡೆಯುವ ಕೆಲವೊಂದು ಚಿಕ್ಕ ಪುಟ್ಟ ವ್ಯಾಜ್ಯಗಳನ್ನೇ ಹಿಂಜಿ, ಹಿಂಜಿ ತೋರಿಸುವುದು. ಯಾವುದೋ ಒಂದು ವಿಷಯವನ್ನು ಮುಚ್ಚಿಡುವುದು. ಆ ವಿಷಯ ಹೊರಬಂದಾಗ ಮನೆಯಲ್ಲಿ ನಡೆಯುವ ಶೀತಲ ಸಮರಗಳು ಇವುಗಳ ಕುರಿತ ಚಿತ್ರಣ ಧಾರಾವಾಹಿಯಲ್ಲಿದೆ ಉಳಿದಂತೆ ಸೊಸೆಯ ಬುದ್ಧಿವಂತಿಕೆಯನ್ನು ಪರೀಕ್ಷಿಸುವ ಸ್ಪರ್ಧೆಗಳು ನಡೆಯುತ್ತದೆ. ಉದಾಹರಣೆಗೆ ಅಡುಗೆ ಸ್ಪರ್ಧೆಯಲ್ಲಿ ಭಾಗವಹಿಸುವುದು. ಗೆಲುವು ಪಡೆಯುವುದು. ಹೀಗೆ ದಿನಕ್ಕೊಂದು ನವೀನ ರೋಚಕವೆನಿಸುವಂತಹ ಪ್ರಸಂಗಗಳನ್ನು ಧಾರಾವಾಹಿಯಲ್ಲಿ ಚಿತ್ರಿಸಿದ್ದಾರೆ.

ಕಥೆಯಲ್ಲಿ ಸೊಸೆಯನ್ನು, ಮನೆಯನ್ನು, ಹೇಗೆ ನಡೆಸಿಕೊಂಡು ಹೋಗಬೇಕು, ಸದಸ್ಯರನ್ನು ಹೇಗೆ ನೋಡಿಕೊಳ್ಳಬೇಕು. ಗಂಡ ಹೆಂಡತಿಯ ಸಂಬಂಧ ಹೇಗಿರಬೇಕೆಂಬುವುದರ ಕಲಿಕೆಯನ್ನು ಭಾಬೋಳ ಮೂಲಕ ಹೆಜ್ಜೆ ಹೆಜ್ಜೆಗೂ ಕಲಿಸಲಾಗುತ್ತದೆ. ಹಿರಿಸೊಸೆ,ಕಿರಿಸೊಸೆ ಮಧ್ಯೆ ನಡೆಯುವ ಶೀತಲ ಸಮರಗಳ ಚಿತ್ರಣವಿದೆ. ಗಂಡ ತನ್ನ ಹೆಂಡತಿಯೊಂದಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಹೇಗೆ ನಡೆದುಕೊಳ್ಳಬೇಕೆಂಬುದರ ಚಿತ್ರಣ ಕಥೆಯ ಉದ್ದಕ್ಕೂ ಪ್ರಸ್ತಾಪವಾಗುತ್ತದೆ. ಇದು ಇಲ್ಲಿಯವರೆಗೂ ಪ್ರಸಾರವಾದ ಸಂಚಿಕೆಗಳಲ್ಲಿನ ಚಿತ್ರಣವನ್ನು ಒಟ್ಟು ಕಥೆಯ ಆಶಯವನ್ನು ಸ್ಥೂಲವಾಗಿ ವಿವರಿಸಲಾಗಿದೆ. ಈ ಧಾರಾವಾಹಿಯು ಹಲವು ತಿರುವುಗಳನ್ನು ಪಡೆದುಕೊಳ್ಳುತ್ತಾ ಪ್ರಸಾರವಾಗುತ್ತಿದೆ.

ವಿಶ್ಲೇಷಣೆ

ಸೋಮವಾರದಿಂದ ಶುಕ್ರವಾರದವರೆಗೂ ರಾತ್ರಿ ೯ ಗಂಟೆಗೆ ಸ್ಟಾರ್ ಪ್ಲಸ್ ವಾಹಿನಿಯಲ್ಲಿ ಪ್ರಸಾರವಾಗುವ "ದಿಯಾ ಔರ ಬಾತಿ ಹಮ್" (ಎಣ್ಣೆ ಮತ್ತು ದೀಪ) ಹಿಂದಿ ಧಾರಾವಾಹಿಯಲ್ಲಿ ಒಬ್ಬ ಪ್ರತಿಭಾವಂತ ಹುಡುಗಿಗೆ ಮದುವೆ ಎಂಬ ಮುಖ್ಯವಾದ ಸುಳ್ಳು ಹೇಳುವ ಮೂಲಕ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸಲಾಗುತ್ತದೆ. ಒಂದು ಹೆಣ್ಣು ಚೆನ್ನಾಗಿ ಓದಿ ಐ.ಪಿ.ಎಸ್. ಅಧಿಕಾರಿಯಾಗಬೇಕೆಂಬ ಕನಸು ಹೊತ್ತವಳಿಗೆ, ಒಬ್ಬ ಸಾಮಾನ್ಯವಾಗಿರುವ. ಹತ್ತನೆ ತರಗತಿಯನ್ನು ಪಾಸು ಮಾಡಿರುವ ಹುಡುಗನೊಂದಿಗೆ ವಿವಾಹ ನಿಶ್ಚಯ ಮಾಡಿ, ಮದುವೆ ಮಾಡಲಾಗುತ್ತದೆ. ಮದುವೆಯ ಆಯ್ಕೆಯಾಗಲಿ ಮತ್ತು ಅದರ ನಿರಾಕರಣೆಯಾಗಲಿ ಸಂಧ್ಯಾಳಿಗೆ ಸಂಬಂಧ ಪಟ್ಟಿರುವುದಿಲ್ಲ ಎಂಬಂತಹ ಚಿತ್ರಣ ಧಾರಾವಾಹಿಯಲ್ಲಿದೆ. ಸಂಧ್ಯಾಳ ಅಣ್ಣ ತನ್ನ ತಂಗಿಗೆ ಮದುವೆಯಾಗಬೇಕಾದ ಹುಡುಗನನ್ನು ಆಯ್ಕೆ ಮಾಡುತ್ತಾನೆ. ಸಂಧ್ಯಾಳ ತಂದೆ ತಾಯಿಯರು ಮಕ್ಕಳಲ್ಲಿ ಯಾವುದೇ ರೀತಿಯಲ್ಲಿ ಲಿಂಗತಾರತಮ್ಯವಾಗಲಿ, ಅಸಮಾನತೆಯಿಂದ ಕಾಣುವುದಾಗಲಿ ಮಾಡಿರುವುದಿಲ್ಲ. ಬದಲಿಗೆ ತನ್ನ ಮಗಳಲ್ಲಿರುವ ಓದಿನ ಹಂಬಲಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ. ತಂದೆ ತಾಯಿಯರ ಅಕಾಲಿಕ ಮರಣದಿಂದ ಕಥಾನಾಯಕಿಗೆ ದಿಕ್ಕೇ ತೋಚದಂತಾಗುತ್ತದೆ. ತನ್ನ ಮುಂದಿನ ಭವಿತವ್ಯದ ನಿರ್ಮಾಣದ ಹಕ್ಕು ಮತ್ತು ಜವಾಬ್ದಾರಿಯನ್ನು ಅಣ್ಣನ ಹೆಗಲಿಗೆ ಹಾಕುತ್ತಾಳೆ. ತನ್ನ ಅಣ್ಣ ತನ್ನ ನಂಬಿಕೆ, ವಿಶ್ವಾಸಕ್ಕೆ ಎಂದೂ ಮೋಸ ಮಾಡುವುದಿಲ್ಲವೆಂಬ ಬಲವಾದ ನಂಬಿಕೆ ಅವಳಲ್ಲಿರುತ್ತದೆ.

ಆದರೆ ನಾಯಕಿಯ ಅಣ್ಣ ಮಾತ್ರ ತಂಗಿಗೆ ಒಂದು ಮದುವೆ ಮಾಡಿ ಗಂಡನ ಮನೆಗೆ ಕಳಿಸಿದರೆ ಸಾಕು. ತಾನು ಅಂದುಕೊಂಡಂತೆ ವಿದೇಶದಲ್ಲಿ ನೆಲೆಸುವ ಕನಸು ಪೂರ್ಣಗೊಳ್ಳುತ್ತದೆ ಎಂಬ ಉದ್ದೇಶದಿಂದ ತಾನು ನೋಡಿದ ಗಂಡು ಒಬ್ಬ ಅಡುಗೆಯವನು. ಕೇವಲ ಹತ್ತನೆ ತರಗತಿಯವರೆಗೂ ಮಾತ್ರ ಓದಿರುವನೆಂದು ಗೊತ್ತಿದ್ದರೂ ಸಹ ಅವನೊಂದಿಗೆ ಮದುವೆ ಮಾಡುವುದರ ಮೂಲಕ ತಂಗಿಯ ವಿಶ್ವಾಸಕ್ಕೆ ದ್ರೋಹ ಮಾಡುತ್ತಾನೆ. ನಾಯಕನ ಬಗ್ಗೆ ಮಾತ್ರ ಸುಳ್ಳು ಹೇಳಿರದೆ ನಾಯಕಿಯೂ ಕೂಡ ಅನಕ್ಷರಸ್ಥಳೆಂದು ಹೇಳಲಾಗುತ್ತದೆ.

ಕಥೆಯಲ್ಲಿ ಹೆಣ್ಣು ಯಾವಾಗಲೂ ಗಂಡಿನ ನಿರ್ಧಾರದ ಮೇಲೆ ಅವಲಂಬಿತಳು ಎಂಬ ಸಂದೇಶ ಕೊಡುತ್ತಾ ಹೋಗುತ್ತದೆ. ಕಥಾನಾಯಕಿ ಮೊದಲು ತಂದೆ ನಂತರ ಅಣ್ಣ ಆನಂತರ ಗಂಡನ ಮೇಲೆ ಹೀಗೆ ಹೆಣ್ಣಿನ ಬದುಕಿನ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಅವಳನ್ನು ಅವಲಂಬನೆಗೆ ಹೇಗೆ ಒಳಪಡಿಸಬೇಕೆಂಬುದು ಧಾರಾವಾಹಿಯಲ್ಲಿ ತೋರಿಸಲಾಗಿದೆ.

ಕಥೆಯಲ್ಲಿ ಹೆಣ್ಣನ್ನು ಸಮರ್ಥಳು, ಶಕ್ತಿವಂತಳು, ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವವಳು ಎಂದು ತೋರಿಸಿದರೂ ಕೂಡ ಹೆಣ್ಣು, ಹೆಣ್ಣುಗಳ ಮಧ್ಯೆ ವೈಮನಸ್ಸು, ಶೀತಲ ಸಮರಗಳನ್ನು ಚಿತ್ರಿಸಿದ್ದಾರೆ. ಅತ್ತೆಯನ್ನು ಶ್ರೇಷ್ಠವಾಗಿಸಿ ಅಧಿಕಾರವನ್ನು ಕೊಡಲಾಗುತ್ತದೆ. ಆ ಅಧಿಕಾರವನ್ನು ಸೊಸೆಯಂದಿರ ಮೇಲೆ ನಡೆಸುವ ಹಕ್ಕನ್ನು ಕೊಡಲಾಗುತ್ತದೆ. ಸೊಸೆಯಾದವಳು ಅತ್ತೆಯ ಮುಂದೆ ಅಸಹಾಯಕಳಾಗಿ ನಿಲ್ಲುವಂತಹ ಚಿತ್ರಣವನ್ನು ನೀಡಲಾಗಿದೆ. ಸೊಸೆ ಅತ್ಯಂತ ಚಾಣಾಕ್ಷಳಾಗಿದ್ದರೂ ಬುದ್ಧಿವಂತಳಾಗಿದ್ದರೂ ಕೂಡ ಅವಳಿಗೆ ಅಂತಿಮವಾಗಿ ಕೌಟುಂಬಿಕ ಬಂಧನಗಳಲ್ಲಿಯೇ ನಿರ್ವಚನಗೊಳ್ಳುವ ಅನಿವಾರ್ಯತೆಯನ್ನು ಇಲ್ಲಿ ತೋರಿಸುತ್ತಾರೆ. ಒಬ್ಬ ಉತ್ತಮ ಸೊಸೆ ಎಂದರೆ ಅವಳು ಒಬ್ಬ ಗೃಹಿಣಿಗೆ ಬೇಕಾದ ಎಲ್ಲ ಅರ್ಹತೆಗಳನ್ನು ಹೊಂದಿದಾಗ ಮಾತ್ರ ಅವಳು ಯೋಗ್ಯಳಾಗುತ್ತಾಳೆ ಎಂಬ ಸಂದೇಶ ಕೊಡುತ್ತಾರೆ. ಶಿಕ್ಷಿತ ಅಶಿಕ್ಷಿತ ಏನೇ ಆಗಿದ್ದರೂ ಎಲ್ಲೋ ಒಂದು ಕಡೆ ಅದು ಸಮಸ್ಯೆಯಾಗಿ ಕಾಡಬಹುದು. ಈ ಸಮಸ್ಯೆ ಕ್ಷಣಿಕ ಆದರೆ ಅಂತಿಮವಾಗಿ ಒಂದು ಹೆಣ್ಣಿಗೆ ಬೇಕಾಗಿರುವುದು ಒಂದು ಪರಿಪೂರ್ಣವಾದ ಕುಟುಂಬ, ಒಳ್ಳೆಯ ಗಂಡ ಅಂತಹ ಗಂಡ, ಒಳ್ಳೆಯ ಮನೆ ಸಿಕ್ಕರೆ ಹೆಣ್ಣಿನ ಬದುಕು ಸಾರ್ಥಕ ಎಂಬುದನ್ನು ಈ ಧಾರಾವಾಹಿ ಸಾರುತ್ತದೆ.

ಈ ಧಾರಾವಾಹಿಯನ್ನು ಹೆಚ್ಚಾಗಿ ಇಷ್ಟಪಡುವವರ ಸಾಲಿನಲ್ಲಿ ಮಧ್ಯಮ ವರ್ಗದ ಗೃಹಿಣಿಯರಿದ್ದಾರೆ. ಇವರು ಈ ಧಾರಾವಾಹಿಯ ಪ್ರತಿಯೊಂದು ಸಂಚಿಕೆಯನ್ನು ಬಿಡಲಾರದ ಹಾಗೆ ನೋಡುವುದಾಗಿ ಕ್ಷೇತ್ರಕಾರ್ಯದಲ್ಲಿ ಹೇಳಿಕೊಂಡಿದ್ದಾರೆ. ಸ್ಟಾರ್‌ಪ್ಲಸ್ ವಾಹಿನಿಯ ಕಾರ್ಯಕ್ರಮಗಳನ್ನು ಹೆಚ್ಚಾಗಿ ನೋಡುತ್ತಾರೆ. ಅದಕ್ಕೆ ಅವರು ಕೊಡುವ ಕಾರಣಗಳೆಂದರೆ. ಈ ವಾಹಿನಿಯಲ್ಲಿ ಪ್ರಸಾರವಾಗುವ ಧಾರಾವಾಹಿಗಳು ತುಂಬಾ ಪ್ರಭಾವಿಯಾಗಿರುತ್ತವೆ. ನಮ್ಮನ್ನು ಕಣ್ಣೆವೆ ಬಡಿಯದ ಹಾಗೆ ಟಿವಿ ಮುಂದೆ ಕುಳಿತುಕೊಳ್ಳುವಂತೆ ಮಾಡುತ್ತವೆ. ಹಾಗಾಗಿ ನಾವು ಈ ಧಾರಾವಾಹಿಗಳನ್ನು ನೋಡುತ್ತೇವೆಂದು ಉತ್ತರಿಸುತ್ತಾರೆ. ಇದರಿಂದ ತಿಳಿದು ಬರುವ ಬಹುಮುಖ್ಯವಾದ ಅಂಶವೆಂದರೆ ಮಾಧ್ಯಮಗಳು ಹೇಗೆ ವೀಕ್ಷಕರನ್ನು ಸೆಳೆದುಕೊಂಡು ಕೂಡಬೇಕು. ವಿಕ್ಷಕರಿಗೆ ಏನನ್ನು ತೋರಿಸಿದರೆ ಹೆಚ್ಚು ಆಕರ್ಷಿತರಾಗುತ್ತಾರೆ. ಎಂಬುದರ ಸೂಕ್ಷ್ಮ ತಿಳಿದು ವಿಕ್ಷಕರು ಬಯಸಿದ್ದನ್ನೇ ಕೊಡುವ ಪ್ರಯತ್ನ ಮಾಡುವುದರ ಮೂಲಕ ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಈ ಧಾರಾವಾಹಿಯ ಮೂಲಕ ಸ್ಥಾಪಿತವಾಗಿರುವ ಸ್ಥಿರಮಾದರಿಗಳನ್ನೇ ಒಪ್ಪಿಸುವ ಕೆಲಸ ನಡೆಯುತ್ತಿರುತ್ತದೆ. ಆದರೆ ಮಹಿಳೆಯರಿಗೇ ತಾವೂ ಪರೋಕ್ಷವಾಗಿ ಈ ಸ್ಥಿರ ಮಾದರಿಗಳನ್ನು ಒಪ್ಪಿಕೊಳ್ಳುತ್ತಿದ್ದೇವೆಂಬ

ಅರಿವು ಅವರಿಗಿರದೇ ಇರುವುದು ಶೋಚನೀಯವೆನಿಸುತ್ತದೆ. ಇದು ಇಂದು ಪ್ರಸಾರವಾಗುವ ಬಹುತೇಕ ಎಲ್ಲ ಧಾರಾವಾಹಿಗಳಲ್ಲಿಯೂ ಕಂಡು ಬರುವ ಸಾಮಾನ್ಯ ದೃಶ್ಯವಾಗಿದೆ.

ಈ ಧಾರಾವಾಹಿಯು ಜನಪ್ರಿಯವಾಗುತ್ತಿದ್ದಂತೆ ಇದರ ರೀಮೇಕ್‌ನ್ನು ಕನ್ನಡದಲ್ಲಿಯೂ ಪ್ರಾರಂಭವಾಯಿತು. ಈ ಕಥಾವಸ್ತುವನ್ನಿಟ್ಟುಕೊಂಡು 'ಆಕಾಶ ದೀಪ'ಎಂಬ ಧಾರಾವಾಹಿಯು ಸೋಮವಾರದಿಂದ ಶುಕ್ರವಾರದವರೆಗೂ ರಾತ್ರಿ ೮.೦೦ ಘಂಟೆಗೆ ಸುವರ್ಣವಾಹಿನಿಯಲ್ಲಿ ಪ್ರಸಾರವಾಗುತ್ತಿದೆ.

೩.೨.೩. ಕಹಾನಿ ಘರ್ ಘರ್ ಕೀ

ಕಥೆಯ ಸಾರಾಂಶ

ಕಹಾನಿ ಘರ ಘರ ಕೀ (ಮನೆ ಮನೆಯ ಕಥೆ) ಸೋಮವಾರದಿಂದ ಶುಕ್ರವಾರದರೆಗೂ ರಾತ್ರಿ ೧೦.೦೦ ಘಂಟೆಗೆ ಸ್ಟಾರ್‌ಪ್ಲಸ್‌ನಲ್ಲಿ ಪ್ರಸಾರವಾಗುತ್ತಿದ್ದ ಧಾರಾವಾಹಿ ನಿರ್ದೇಶಕಿ ಏಕ್ತಾ ಕಪೂರ ನಿರ್ದೇಶನದಲ್ಲಿ ಮೂಡಿಬಂದಿದೆ. ಈ ಧಾರಾವಾಹಿ ದೊಡ್ಡ ದೊಡ್ಡ ಬಂಗಲೆ, ಕಾರು, ಐಶರಾಮಿಯಾದ ಬದುಕು, ದುಬಾರಿಯಾದ ಉಡುಗೆ ತೊಡುಗೆ, ಅಲಂಕಾರಿಕ ವಸ್ತುಗಳು ಎಲ್ಲವೂ ಅತೀ ವೈಭವದಿಂದ ಕೂಡಿತ್ತು. ಕಥೆಯು ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದಕ್ಕಿಂತ ಕಥೆಯಲ್ಲಿ ಪಾತ್ರ ಮಾಡುವ ಮಹಿಳೆಯರನ್ನು ಸೂತ್ರದ ಗೊಂಬೆಯಂತೆ ಅಲಂಕಾರಿಕ ವಸ್ತುವಿನಂತೆ ಪ್ರದರ್ಶನ ಮಾಡುವುದೇ ಕಥೆಯ ಮುಖ್ಯ ತಿರುಳಲ್ಲಿ ಒಂದಾಗಿತ್ತು. ಕಹಾನಿಯಲ್ಲಿ ಸಂಪ್ರದಾಯಸ್ಥ ಕುಟುಂಬ, ಆ ಕುಟುಂಬದಲ್ಲಿ ಮದುವೆಯಾಗುವುದರ ಮೂಲಕ ಕಥಾನಾಯಕಿ ಪಾರ್ವತಿಯ ಆಗಮನ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಸ್ತ್ರೀತ್ವದ ಗುಣಗಳಾದ ಭಾವುಕತೆ, ಕೋಮುಲತೆ ಪರಾವಲಂಬಿತ ಸ್ಥಿತಿ ಭಯಭೀರುತನ, ವಿಧೇಯತೆ, ಕ್ಷಮೆ, ಸಹನೆ, ತಾಳ್ಮೆ, ಕಷ್ಟಸಹಿಷ್ಣುತೆ ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಬೆಳೆಯಬಹುದು. ಈ ಎಲ್ಲಾ ಗುಣಗಳಿರುವ ಹೆಣ್ಣನ್ನಾಗಿ ಪಾರ್ವತಿಯ ಚಿತ್ರಣ ದೊರೆಯುತ್ತದೆ.

ಭಾರತದಲ್ಲಿ ದೊರೆಯುವ ಸೊಪ್ ಓಪೆರಾ ಸಿದ್ಧ ಮಾದರಿಯ ಚಿತ್ರಣವನ್ನು ಕಥೆಯ ಉದ್ದಕ್ಕೂ ಪ್ರಸ್ತಾಪಿಸಲಾಗುತ್ತದೆ. ಇಂತಹ ಪಾತ್ರದ ಎದುರು ಖಳನಾಯಕಿಯ ಪಾತ್ರವನ್ನು ಸೃಷ್ಟಿಸಲಾಗುತ್ತದೆ. ಕಥೆಯಲ್ಲಿ ಪಾರ್ವತಿ ಮನೆಯ ಹಿರಿಮಗ ಓಂ ನ ಹೆಂಡತಿ, ಅಗರವಾಲ ಮನೆತನದ ಹಿರಿಸೊಸೆ, ಮಾದರಿ ಸೊಸೆ ಎಂದೇ ಬಿಂಬಿಸಲಾಗಿದೆ. ಇನ್ನೊಂದು ಪಾತ್ರ ಪಲ್ಲವಿ ಅಗರವಾಲ ಮನೆತನದ ಎರಡನೇ ಮಗ ಅಜಯನನ್ನು ಮದುವೆಯಾಗಬೇಕಾಗಿರುತ್ತದೆ. ಆದರೆ ಅಜಯ ಈಗಾಗಲೇ ತನ್ನ ಯಜಮಾನನ ಮಗಳೊಂದಿಗೆ ಸಂಬಂಧವಿಟ್ಟು ಕೊಂಡಿರುವುದರಿಂದ ಅಜಯನ ಯಜಮಾನ ತನ್ನ ಮಗಳೊಂದಿಗೆ ವಿವಾಹವಾಗುವಂತೆ ಒತ್ತಡ ಹೇರುತ್ತಾನೆ. ಇದರ ಫಲವಾಗಿ ಪಲ್ಲವಿ ಮತ್ತು ಅಜಯನ ನಿಶ್ಚಿತಾರ್ಥ ಮುರಿದು ಬೀಳುತ್ತದೆ. ಇದರಿಂದ ಮಾನಸಿಕವಾಗಿ ಕುಗ್ಗಿ ಹೋಗುವ ಪಲ್ಲವಿಗೆ ಪಾರ್ವತಿ, ತನ್ನ ಇನ್ನೊಬ್ಬ ಮೈದುನ ಕಮಲನೊಂದಿಗೆ ಮದುವೆ ಮಾಡಿಕೊಳ್ಳುವಂತೆ ಸಲಹೆ ಕೊಡುತ್ತಾಳೆ.

ಈ ಸಲಹೆ ಮನೆಯವರಿಗೂ ಮತ್ತು ಪಲ್ಲವಿಗೂ ಒಪ್ಪಿಗೆಯಾಗಿ ಮದುವೆ ನಡೆದು ಹೋಗುತ್ತದೆ. ಇದು ಪಲ್ಲವಿಯ ಮನಸ್ಸಿನಲ್ಲಿ ತನಗಾದ ಅವಮಾನ, ಮಾನಸಿಕ ಹಿಂಸೆಯನ್ನು ದ್ವೇಷ ತೀರಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಮದುವೆಯ ನಂತರ ಅವಳ ಜೀವನದ ಏಕಮಾತ್ರ ಗುರಿ ಅಗರವಾಲ ಮನೆತನದವರನ್ನು ನಾಶ ಮಾಡುವುದು. ಈ ಮೂಲಕ ತನಗಾದ ಅವಮಾನವನ್ನು ತೀರಿಸಿಕೊಳ್ಳುವುದೇ ಆಗಿರುತ್ತದೆ. ಇದು ಕಥೆಯನ್ನು ಎಳೆಯುವಲ್ಲಿ ಪ್ರಮುಖ ವಸ್ತುವಾಗುತ್ತದೆ. ಮನೆಯನ್ನು, ಕುಟುಂಬವನ್ನು ಒಡೆಯುವ ಮತ್ತು ಉಳಿಸಿಕೊಳ್ಳುವ ಎರಡು ಜವಾಬ್ದಾರಿಗಳು ಹೆಣ್ಣಿನ ಮೇಲೆಯೇ ಇರುವುದೆಂಬ ಸಂದೇಶ ಪ್ರತಿಯೊಂದು ಸಂಚಿಕೆಯಲ್ಲಿಯೂ ಚಿತ್ರಿತವಾಗುತ್ತದೆ. ಒಳ್ಳೆಯ ಮನಸ್ಸಿರುವ ಹೆಣ್ಣು ಮಕ್ಕಳಿಗೆ ದೇವರು ಕೈಬಿಡುವುದಿಲ್ಲವೆಂಬಂತಹ ಚಿತ್ರಣ ಕೂಡ ಇಲ್ಲಿದೆ.

ಒಟ್ಟಾರೆಯಾಗಿ ಕಥೆಯಲ್ಲಿ ಹೆಣ್ಣಿನ ವಿರುದ್ಧ ಹೆಣ್ಣು ಸೇಡು, ಪ್ರತೀಕಾರ, ದ್ವೇಷ, ಅಸೂಯೆಯನ್ನು ಹೊಂದಿರುವುದು ಮಾದರಿಯನ್ನು ಚಿತ್ರಿಸಲಾಗಿದೆ. ಒಬ್ಬಳನ್ನು ಅಳಿಸಲು ಇನ್ನೊಬ್ಬಳು ಹೋರಾಡುವುದು ತಂತ್ರ ಕುತಂತ್ರಗಳನ್ನು ಮಾಡುವ ಮೂಲಕ ಹೆಣ್ಣಿಗೆ ಹೆಣ್ಣೆ ಶತ್ರು ಎಂಬಂತಹ ಮನುವಿನ ಧೋರಣೆಯನ್ನು ಬಿತ್ತುವುದನ್ನು ಕಥೆಯಲ್ಲಿ ಕಾಣಬಹುದು. ಹೆಣ್ಣಿನ ಪ್ರಗತಿಗೆ ಅಭಿವೃದ್ಧಿಗೆ ಅವಳ ಒಳ್ಳೆಯತನಕ್ಕೆ ಪುರುಷರಗಿಂತ ಹೆಣ್ಣೆ ವಿರೋಧಿಸುತ್ತಾಳೆಂಬ ಧೋರಣೆ ನೋಡುಗರ ದೃಷ್ಟಿಕೋನಗಳನ್ನು ಸಂಕುಚಿತಗೊಳಿಸುತ್ತದೆ. ಕಥೆಯಲ್ಲಿ ಚಿಕ್ಕಪುಟ್ಟ ಘಟನೆಗಳಿಗೆ ದೊಡ್ಡ ಘಟನೆಯೆಂಬಂತೆ ಬಿಂಬಿಸುವುದು. ಕಥಾನಾಯಕ ಆರ್ಥಿಕವಾಗಿ ದಿವಾಳಿಯಾಗಿ ಬಡತನದ ಜೀವನಕ್ಕೆ ಮರುಳುವುದು. ಇಂತಹ ಸಂದರ್ಭದಲ್ಲಿ ಹೆಂಡತಿ ಯಾದವಳು ಗಂಡ, ಅತ್ತೆ, ಮೈದುನ ಮಕ್ಕಳು ಇತರ ಸದಸ್ಯರ ಬೇಕು–ಬೇಡಗಳಿಗೆ ಸ್ಪಂದಿಸುವ ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಬರುವ ಎಲ್ಲ ಕಷ್ಟಗಳನ್ನು ಎದುರಿಸುವ ಪಾರ್ವತಿಗೆ ಕೇವಲ ಸದಸ್ಯರ ಆಶೋತ್ತರಗಳಿಗೆ ಸ್ಪಂದಿಸುವವಳಾಗಿಯೇ ಚಿತ್ರಿತವಾಗುತ್ತಾಳೆ. ಆದರೆ ಪಾರ್ವತಿಯ ಭಾವನೆಗಳು ಆಕೆಯ ಮಾನಸಿಕ ಹೊಯ್ದಾಟಗಳಿಗೆ ಯಾರು ಕೇಳುವ ಗೋಜಿಗೆ ಹೋಗುವುದಿಲ್ಲ. ಹೆಣ್ಣೆಂದರೆ ಕೇವಲ ಕೌಟುಂಬಿಕ ಸಂಬಂಧಗಳನ್ನು ತಲೆ ಮೇಲೆ ಹೊತ್ತುಕೊಂಡು ಹೆಗಲಾಗಿ ಇರುವುದರಲ್ಲಿಯೇ ಸಾರ್ಥಕತೆ ಎಂಬುದನ್ನು ಇಲ್ಲಿ ಚಿತ್ರಿಸಲಾಗುತ್ತದೆ. ಉಳಿದಂತೆ ಕೆಲವು ಬಾರಿ ಮಕ್ಕಳ ಸಮಸ್ಯೆ ಎದುರಾದರೆ ಮಗದೊಮ್ಮೆ ಪಲ್ಲವಿಯ ಕಾಟ ಗಂಡನ ವ್ಯವಹಾರ ದಿವಾಳಿಯಾಗುವುದು. ಗಂಡನ ಕಣ್ಮರೆ ನಂತರ ಸಿಕ್ಕಾಗ ಬುದ್ಧಿ ಭ್ರಮಣೆಯಾಗುವುದು. ಮನೆಯ ಹಿರಿಯರ ಸಮಸ್ಯೆ ಎಲ್ಲವೂ ಹೆಣ್ಣಿಗೆ ಅವಳ ಬದುಕಿನ ಸುತ್ತಲೂ ಸುತ್ತುವ ಕಥೆ ಇದಾಗಿದೆ. ಈ ಎಲ್ಲದರ ಮಧ್ಯೆ ಮೇಲ್ವರ್ಗದ ಮನೆತನದಲ್ಲಿ ನಡೆಯುವ ಹೆಣ್ಣಿನ ಶೋಷಣೆಯ (ಪಲ್ಲವಿ, ಪಾರ್ವತಿ) ಮುಖವನ್ನು ತೋರಿಸಲಾಗುತ್ತದೆ.

೩.೨.೪. ಕ್ಯೂಂಕಿ ಸಾಸ್ ಭೀ ಕಭೀ ಬಹು ಥೀ

ಕ್ಯೂಂಕಿ ಸಾಸ್ ಭಿ ಕಭಿ ಬಹು ಥೀ (ಅತ್ತೆಯು ಒಂದು ಕಾಲದಲ್ಲಿ ಸೊಸೆಯಾಗಿದ್ದಳು) ಮತ್ತು ಕಸೌಟ ಜೀಂದಗೀ ಕೀ (ಜೀವನದ ಸಂಘರ್ಷ) ಈ ಎರಡು ಧಾರಾವಾಹಿಗಳೂ

ಕೂಡ ಏಕ್ತಾ ಕಪೂರ ನಿರ್ದೇಶನದಲ್ಲಿ ಪ್ರಸಾರಗೊಂಡ ಜನಪ್ರಿಯತೆಯ ತುತ್ತ ತುದಿಯಲ್ಲಿ ನಿಂತಿದ್ದ ಧಾರಾವಾಹಿಗಳಾಗಿದ್ದವು. ೨೧ನೇ ಶತಮಾನದಲ್ಲಿ ಅತಿ ಹೆಚ್ಚಿನ ವೀಕ್ಷಕರನ್ನು ಹೊಂದಿರುವಂತಹ ಧಾರಾವಾಹಿಗಳೆಂದೇ ಖ್ಯಾತಿ ಪಡೆದಿದ್ದವು. ಈ ಧಾರಾವಾಹಿಗಳನ್ನು ಪ್ರಸಾರ ಮಾಡಿದ ಸ್ಟಾರ್‌ಪ್ಲಸ್ ಚಾನೆಲ್‌ನ ಜನಪ್ರಿಯತೆ ಏಕಾಏಕಿ ಉತ್ತುಂಗದ ಮಟ್ಟಕ್ಕೇರಿತು. ಒಳ್ಳೆಯ ಕಥೆಯಿರುವ ಧಾರಾವಾಹಿಗಳನ್ನು ಪ್ರಸಾರ ಮಾಡುವ ಚಾನಲ್ ಎಂದರೆ ಅದು ಸ್ಟಾರ್‌ಪ್ಲಸ್ ಎಂದೇ ಖ್ಯಾತಿಪಡೆದಿತ್ತು.

ಕ್ಯೂಂಕಿ ಸಾಸ್ ಭಿ ಕಭೀ ಬಹು ಥೀ ಈ ಧಾರಾವಾಹಿಯ ಕಥಾನಾಯಕಿ ತುಳಸಿ ಮದುವೆಯಾಗುವುದರ ಮೂಲಕ ಗಂಡನ ಮನೆಗೆ ಕಾಲಿರಿಸುತ್ತಾಳೆ. ಆ ಮನೆಯ ಮುಂದಿರುವ ತುಳಸಿ ಕಟ್ಟೆಯಂತೆ ಸದಾ ಜಾಗೃತವಾಗಿರುವ ಎಲ್ಲ ಕಷ್ಟಗಳಿಗೂ ಹೆಗಲಾಗುವ ಶಾಂತಿ, ನೆಮ್ಮದಿಯ, ಬಾಳನ್ನು ಇತರ ಸದಸ್ಯರಿಗೆ ನೀಡುವ ತನ್ನ ಮನದಲ್ಲಿ ಅಲ್ಲೋಲ ಕಲ್ಲೋಲಗಳಾದರು ಹೊರಗೆ ತೋರಿಸದೇ ಇತರರ ಸಂತೋಷಕ್ಕೆ ಪಾಲುದಾರರಾಗುವ ಕಥೆಯನ್ನೇ ಹೊಂದಿದೆ. ನಾಯಕಿಗೆ ವೈಯಕ್ತಿಕ ಬದುಕೇ ಇರುವುದಿಲ್ಲ. ಹೆಣ್ಣಿನ ಅಸ್ತಿತ್ವದ ನೆಲೆಯನ್ನು ಕುಟುಂಬದಲ್ಲೇ ಕಾಣುವ ಚಿತ್ರಣ ಕಥೆಯ ಉದ್ದಕ್ಕೂ ಪ್ರಸ್ತಾಪವಾಗುತ್ತದೆ.

೩.೨.೫. ಕಸೌಟಿ ಜಿಂದಗೀ ಕೀ

ಕಥೆಯ ಸಾರಾಂಶ

ಕಸೌಟಿ ಜಿಂದಗೀ ಕೀ (ಜೀವನದ ಸಂಘರ್ಷ) ಧಾರಾವಾಹಿಯೂ ಕೂಡ ಪ್ರೀತಿಸುವ ಎರಡು ಜೀವಗಳು ಇನ್ನೇನು ಮದುವೆಯಾಗಬೇಕೆಂಬ ಕನಸು ಕಾಣುತ್ತಿದ್ದವರಿಗೆ ಗುಡುಗು ಸಿಡಿಲಿನ ಹೊಡೆತ, ತಾನು ಕಾರ್ಯ ನಿರ್ವಹಿಸುತ್ತಿರುವ ಕಂಪನಿಯ ಮಾಲೀಕರಾದ ಮೀ. ಬಜಾಪ ಸಂದಿಗ್ಧ ಸ್ಥಿತಿಯಿಂದ ಪಾರು ಮಾಡಬೇಕಾದರೆ ಅವಳು ತನ್ನನ್ನು ವಿವಾಹವಾಗಬೇಕೆಂಬ ಷರತ್ತು ಹಾಕಿ ಪ್ರೇರಣಾಳ ಅಸಹಾಯಕ ಪರಿಸ್ಥಿತಿಯ ಲಾಭ ಪಡೆಯುತ್ತಾರೆ. ಪ್ರೇರಣಾ ತಾನು ಪ್ರೀತಿಸುತ್ತಿದ್ದ ಅನುರಾಗ ಬಸುನ ಮಗವಿಗೆ ತಾಯಿಯಾಗುವ ವಿಷಯ ತಿಳಿದು ಕೂಡ ಬಜಾಜ್ ಅವಳ ಮುಂದೆ ಮದುವೆಯ ಪ್ರಸ್ತಾಪವಿಡುತ್ತಾನೆ. ಮದುವೆಯಾಗದೆ ಒಂದು ಮಗುವನ್ನು ಹೊಟ್ಟೆಯಲ್ಲಿಟ್ಟುಕೊಂಡು ಪ್ರೇರಣಾ ಅನುಭವಿಸುವ ನರಕದ ಚಿತ್ರಣ, ಇತ್ತ ಪ್ರೇಮಿಯನ್ನು ವರಿಸಲು ಆಗದ, ಅತ್ತ ಮಾಲೀಕನನ್ನು ಮದುವೆಯಾಗಲು ಆಗದ ಸಂದಿಗ್ಧ ಪರಿಸ್ಥಿತಿಯಲ್ಲಿ ಅವಳ ಬದುಕನ್ನು ಚಿತ್ರಿಸಲಾಗಿದೆ. ಇದೇ ಸಂಘರ್ಷದ ಬದುಕನ್ನು ಕಥೆಯ ಉದ್ದಕ್ಕೂ ಎಳೆಯಲಾಗುತ್ತದೆ.

ಶ್ರೀಮಂತ ಮನೆತನದ ಎಲ್ಲ ಐಶ್ವರ್ಯವು ಹೊಂದಿರುವ ಬಜಾಜ ಅನ್ನು ಕೊನೆಗೆ ಮದುವೆಯಾಗುವ ಪ್ರೇರಣಾ ಬಜಾಜಗೇ ಮೊದಲ ಪತ್ನಿಯಿಂದ ಮೂವರು ಮಕ್ಕಳಿದ್ದು ಆ ಮಕ್ಕಳು ತಂದೆಯ ಮಾತಿಗೆ ಬೆಲೆ ಕೊಡದೆ ದಾರಿ ತಪ್ಪುವುದನ್ನು ತಮ್ಮ ಕಣ್ಮುಂದೆ ನೋಡಲು ಆಗದೆ ಇರುವುದರಿಂದ ತಮ್ಮ ಮಕ್ಕಳಿಗೆ ಒಳ್ಳೆದಾರಿ ತೋರಿಸಲು ಒಬ್ಬ ತಾಯಿಯ

ಅವಶ್ಯಕತೆಯಿದೆ. ಆ ತಾಯಿಯನ್ನು ಪ್ರೇರಣಾಳ ರೂಪದಲ್ಲಿ ತಮ್ಮ ಮಕ್ಕಳಿಗೆ ತಾಯಿಯ ಕೊರತೆಯನ್ನು ನೀಗಿಸುವ ಪ್ರಯತ್ನ ಮಿ.ಬಜಾಜ ಅವರದ್ದಾಗಿರುತ್ತದೆ. ಮದುವೆಯ ಸುಖವನ್ನೇ ಕಾಣದ ಪ್ರೇರಣಾ ಬೆಳೆದುನಿಂತ ಮಕ್ಕಳ ಜವಾಬ್ದಾರಿಯನ್ನು ಯಾವ ನಿರೀಕ್ಷೆಯಿರದೇ ನಿಸ್ವಾರ್ಥವಾಗಿ ಸೇವೆ ಸಲ್ಲಿಸುವ ತಾಯ್ತತನ ವ್ಯಾಪ್ತಿಯೊಳಗೆ ಪ್ರವೇಶ ಮಾಡುವ ಆ ಮೂಲಕ ಅವಳು ಎದುರಿಸುವ ಮಾನಸಿಕ ತೊಳಲಾಟ, ಯಾತನೆ ದುಃಖ, ನೋವುಗಳ ಸಂಘರ್ಷಗಳ ಚಿತ್ರಣವನ್ನೇ ಧಾರಾವಾಹಿ ಉದ್ದಕ್ಕೂ ಕೊಡಲಾಗುತ್ತದೆ. ಪ್ರೇರಣಾ ಈ ಮೂರು ದಾರಿ ತಪ್ಪಿದ ಮಕ್ಕಳಿಗೆ ಸರಿ ದಾರಿಗೆ ತರುತ್ತಾಳೆಯೇ? ತನ್ನ ಪ್ರೇಮಿಯ ಮಗುವಿಗೆ ಜನ್ಮ ಕೊಡುವವಳೇ? ಪ್ರೇರಣಾ ಹೊಸ ಸಂಬಂಧ ಮಿ.ಬಜಾಜ ಅವರ ಜೊತೆ ಹೇಗೆ ನಿಭಾಯಿಸುತ್ತಾಳೆ? ಅನುರಾಗ ಮತ್ತು ಪ್ರೇರಣಾಳ ಸಂಬಂಧ ಇಲ್ಲಿಗೆ ಕೊನೆಯಾಯಿತೆ? ಇದಕ್ಕೆ ಉತ್ತರ ಕಥೆಯ ಸಾರಾಂಶವಾಗಿರುತ್ತದೆ. ಮುಂದೆ ಕಥೆಯು ಹಲವು ತಿರುವುಗಳನ್ನು ಏರಿಳಿತಗಳನ್ನು ಪಡೆದುಕೊಂಡು ಪ್ರಸಾರವಾಗುತ್ತದೆ. ಒಂದರ ಮೇಲೆ ಒಂದರಂತೆ ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ಹೇಗೆ ಎದುರಿಸುತ್ತಾಳೆ ಎಂಬುದು ಕಥೆಯ ತಿರುಳು ಇಲ್ಲಿಯೂ ಕೂಡ ಹೆಣ್ಣಿನ ಅಸ್ತಿತ್ವಕ್ಕೆ ಬೆಲೆಯಿರದೇ ಅವಳ ಪಾತ್ರ ಅಸ್ತಿತ್ವವಿರುವುದು ಕುಟುಂಬದ ರಕ್ಷಣೆಯಲ್ಲಿ ಎಂಬಂತಹ ಸಂದೇಶವಿದೆ.

ಏಕ್ತಾ ಕಪೂರ ನಿರ್ದೇಶನದ ಈ ಮೂರು ಧಾರಾವಾಹಿಗಳು ಹೆಣ್ಣಿನ ಬದುಕಿನಲ್ಲಿ ಎದುರಾಗುವ ಕಷ್ಟಗಳಿಗೆ ಹೆಣ್ಣು ಯಾವ ರೀತಿಯಾಗಿ ಸ್ಪಂದಿಸಬೇಕು. ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು. ಮನೆಯ ಸದಸ್ಯರ ಸುಖ, ದುಃಖಕ್ಕೆ ಹೇಗೆ ಸ್ಪಂದಿಸಬೇಕು ಎಂಬುದರ ಚಿತ್ರಣ ಕೊಡುತ್ತದೆ. ಆದರೆ ಹೆಣ್ಣಿಗೆ ಪ್ರಬಲವಾದ ವ್ಯಕ್ತಿತ್ವವಾಗಲಿ ಅಸ್ತಿತ್ವವಾಗಲೀ ಕೊಡುವುದಿಲ್ಲ. ಇಂತಹ ಧಾರಾವಾಹಿಗಳು ನೋಡುಗರ ಮೇಲೆ ಹೆಚ್ಚು ಪ್ರಭಾವ ಬೀರುವುದರ ಜೊತೆಗೆ ಹೆಣ್ಣಿನ ಕುರಿತು ಇರುವಂತಹ ಸಾಂಪ್ರದಾಯಿಕ ಮಾದರಿಯನ್ನೇ ಇನ್ನಷ್ಟು ಸ್ಥಿರೀಕರಿಸುವ ದೃಷ್ಟಿಕೋನವನ್ನು ಹೊಂದುವಂತೆ ಮಾಡಲಾಗುತ್ತದೆ. ಕ್ಷೇತ್ರಕಾರ್ಯದಲ್ಲಿ ಅತಿಹೆಚ್ಚು ಮಾಹಿತಿ ದಾರರು ವಿವರಿಸಿದ ಧಾರಾವಾಹಿಗಳಲ್ಲಿ ಈ ಮೂರು ಧಾರಾವಾಹಿಗಳು ಜನಪ್ರಿಯವಾಗುವುದು. ಹೆಣ್ಣಿನ ಅಧೀನ ಬದುಕನ್ನು ತೋರಿಸುವುದು. ಹೆಣ್ಣಿಗೆ ಕಷ್ಟದ ಮೇಲೆ ಕಷ್ಟಗಳು ಎದುರಾದಾಗ ಅಲ್ಲಿ ನೋಡುವವರ ಸಂಖ್ಯೆ ಹೆಚ್ಚಾಗಬಹುದೆಂಬ ನಿರ್ದೇಶಕಿಯ ಧೋರಣೆ ಅಸ್ಪಷ್ಟವಾಗಿ ಕಾಣುತ್ತದೆ.

ಸತತವಾಗಿ ಎಂಟು ವರ್ಷಗಳ ಅವಧಿಯವರೆಗೂ ಪ್ರಸಾರವಾದ ಧಾರಾವಾಹಿಗಳೆಂದರೆ ಕಹಾನಿ ಘರ ಘರ ಕೀ, ಕ್ಯೂಂಕಿ ಸಾಸ್ ಭೀ ಕಭೀ ಬಹು ಥೀ ಮತ್ತು ಕಸೌಟಿ ಜಿಂದಗೀ ಕೀ, ಏಕ್ತಾ ಕಪೂರ ನಿರ್ದೇಶನದಲ್ಲಿ ಪ್ರಸಾರವಾದ ಈ ಧಾರಾವಾಹಿಗಳ ಮುಖ್ಯ ಕಥಾವಸ್ತು. ದೊಡ್ಡದಾದ ಅವಿಭಕ್ತ ಕುಟುಂಬ. ಆ ಕುಟುಂಬದ ಸದಸ್ಯರ ನಡುವಿನ ದ್ವೇಷ, ತಿಕ್ಕಾಟ, ಅಸೂಯೆ, ಪ್ರೀತಿ, ಮಮಕಾರ ಇವುಗಳ ಸುತ್ತವೇ ಸುತ್ತುವ ಕಥಾವಸ್ತು. ಆಧುನಿಕ ಚಿಂತನೆಗಳಿಗಿಂತ

ಪುರುಷಪ್ರಧಾನ ಯಾಜಮಾನ್ಯ ಸಂಸ್ಕೃತಿಗೆ ಹೆಚ್ಚಿನ ಮನ್ನಣೆ. ಕಥಾನಾಯಕಿಯ ಕಷ್ಟದ ಬದುಕು, ಈ ಕುಟುಂಬಗಳ ಸದಸ್ಯರು ವಾಸಿಸುವುದು. ವೈಭವೋಪೇತವಾದ ಬಂಗಲೆಯಲ್ಲಿ, ಓಡಾಡುವುದು ಐಷಾರಾಮಿ ಕಾರುಗಳಲ್ಲಿ, ವಿವಾಹೇತರ ಸಂಬಂಧಗಳ ಸರಮಾಲೆ, ಹಲವು ವರ್ಷಗಳ ನಂತರ ಒಮ್ಮೆಗೆ ಎದುರಾಗುವ ಹಳೆಯ ಸಂಬಂಧಗಳು, ಆದಿ ಅಂತ್ಯವೇ ಇಲ್ಲದ ಕೊನೆಗೆ ಅರ್ಥವೂ ಇಲ್ಲದ, ಅರ್ಥವಾಗದ ಕಥೆ. ಧಾರಾವಾಹಿಯ ನಿರ್ಮಾಪಕರು ಮತ್ತು ನಿರ್ದೇಶಕರ ಮನಸ್ಸಿನಂತೆ, ಟಿಆರ್‌ಪಿ ರೇಟಿಂಗ್‌ಗೆ ತಕ್ಕಂತೆ ಬದಲಾಗುವ ಸನ್ನಿವೇಶಗಳು. ಈ ಧಾರಾವಾಹಿಯಲ್ಲಿ ಹೆಣ್ಣಿನ ಅಸ್ತಿತ್ವದ ಕುರಿತಾಗಲಿ, ವ್ಯಕ್ತಿತ್ವದ ಕುರಿತಾಗಲಿ ಮಾತನಾಡದೇ ಇರುತ್ತದೆ. ಹೆಣ್ಣಿನ ಬಾಳು ಎಂದರೆ ಅದು ಗಂಡನ ಮನೆ. ಪುರುಷ ಪ್ರಧಾನವಾದ ಮೌಲ್ಯಗಳಿಗೆ ಕತ್ತು ಕೊಟ್ಟು ಬದುಕುವ ಪರಿಸ್ಥಿತಿ. ಈ ಎಲ್ಲದರ ಚಿತ್ರಣ ಧಾರಾವಾಹಿಯಲ್ಲಿರುವುದು ಕಂಡುಬರುತ್ತದೆ.

ಕಥಾನಾಯಕಿಯರಿಗೆ ಕೊಡುವ ಕಷ್ಟಗಳ ಸರಮಾಲೆಯಿಂದಾಗಿಯೇ ಈ ಧಾರಾವಾಹಿಗಳು ಹೆಚ್ಚಿನ ಜನಪ್ರಿಯತೆ ಪಡೆದುಕೊಂಡಿವೆ. ಇದಕ್ಕೆ ಕಾರಣವೂ ಇದೆ. ಕಹಾನಿಯ ಪಾರ್ವತಿ, ಕ್ಯೂಂಕಿಯ ತುಳಿಸಿ, ಕಸೌಟಿಯ ಪ್ರೇರಣಾ ಈ ಮೂವರು ನಾಯಕಿಯರು. ಒಮ್ಮೆ ಕುಟುಂಬದ ಒಳಗೆ ಕಷ್ಟಗಳನ್ನು ಎದುರಿಸಿದರೆ ಮಗದೊಮ್ಮೆ ಮನೆಯ ಹೊರಗಿನ ಸಮಸ್ಯೆಗಳು ಇವರಿಗೆ ಎದುರಾಗುತ್ತವೆ. ಇಲ್ಲಿ ಆ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ದೇವರ ಮೊರೆಹೋಗುವುದು. ಪೂಜೆ, ಪುನಸ್ಕಾರಗಳೆಂದು ಕೂಡುವುದು. ಇವೆಲ್ಲ ಹೆಣ್ಣಿನಲ್ಲಿ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಇಲ್ಲವೆಂಬಂತೆ ಚಿತ್ರಿಸುತ್ತವೆ. ಹೀಗೆ ಚಿತ್ರಿಸುವುದರ ಮೂಲಕ ನಿರ್ದೇಶಕಿ, ಮತ್ತೆ ಸಾಂಪ್ರದಾಯಿಕ ಮಾದರಿಯನ್ನು ಒಪ್ಪಿಕೊಳ್ಳುವುದು ಕಾಣುತ್ತೇವೆ.

೩.೨.೬. ನಾ ಆನಾ ದೇಶ್ ಮೇರೆ ಲಾಡೋ

ಕಥೆಯ ಸಾರಾಂಶ

ಕಲರ್ಸ ಚಾನೆಲ್‌ನಲ್ಲಿ ಸೋಮವಾರದಿಂದ ಶುಕ್ರವಾರ ರಾತ್ರಿ ೧೦.೩೦ಕ್ಕೆ ಪ್ರಸಾರವಾಗುವ ಧಾರಾವಾಹಿ ನಾ ಆನಾ ದೇಶ್ ಮೇರೆ ಲಾಡೊ (ಈ ದೇಶಕ್ಕೆ ಬರಬೇಡಾ ನನ್ನ ಕಂದ) ಹೆಸರೇ ಸೂಚಿಸುವಂತೆ ಈ ಧಾರಾವಾಹಿಯು ಹೆಣ್ಣು ಭ್ರೂಣ ಹತ್ಯೆಯಂತಹ ಸಾಮಾಜಿಕ ಅನಿಷ್ಟ ಪದ್ಧತಿಯ ಕರಾಳ ಮುಖದರ್ಶನ ಮಾಡಿಸುವಂತಹ ಕಥೆಯನ್ನು ಹೊಂದಿರುವ ಧಾರಾವಾಹಿಯಾಗಿದೆ. ವೀರಪುರ ಭೂಗ್ರಾಮವೊಂದರಲ್ಲಿ, ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶುಹತ್ಯೆಯಂತಹ ಕ್ರೂರ ಕಾರ್ಯಗಳು ನಡೆಯುವುದನ್ನು ಚಿತ್ರಿಸಿದ್ದಾರೆ. ಕಥೆಯಲ್ಲಿ ಬರುವ ಅಮ್ಮಾಜಿಯ ಪಾತ್ರವು ಆ ಇಡೀ ಕುಗ್ರಾಮವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಳ್ವಿಕೆ ನಡೆಸುತ್ತಿರುವ ಪ್ರಭಾವಿ ಮಹಿಳೆ. ಅಮ್ಮಾಜಿಯ ಈ ಪಾತ್ರ ಹೆಣ್ಣಿನ ಅಸ್ತಿತ್ವಕ್ಕೆ ಹೊಸ ಆಯಾಮವನ್ನು ಕೊಡುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣೊಬ್ಬಳು ತನ್ನ ಬುದ್ಧಿವಂತಿಕೆ ಯಿಂದ, ಇಡೀ ಗ್ರಾಮವನ್ನು ಆಳುವುದು ಸಂತಸದ ವಿಷಯವೆನಿಸುತ್ತದೆ. ಆದರೆ ಇದೇ

ಅಮ್ಮಾಜಿಯ ಪಾತ್ರವನ್ನು ನಕಾರಾತ್ಮಕ ದೃಷ್ಟಿಕೋನದಲ್ಲಿ ಕಟ್ಟಿಕೊಡಲಾಗುತ್ತದೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಪುರುಷರೂಪಿತ ಗಾದೆ ಮಾತನ್ನು ಇಲ್ಲಿ ಸತ್ಯವಾಗುತ್ತದೆ.

ಅಮ್ಮಾಜಿ ತನ್ನ ಗ್ರಾಮದಲ್ಲಿ ಹುಟ್ಟುವ ಮಗು ಪ್ರತಿಯೊಂದು ಗಂಡೇ ಆಗಿರಬೇಕು. ಗಂಡು ಮಕ್ಕಳು ಮೋಕ್ಷಕ್ಕೆ ದಾರಿ, ಹೆಣ್ಣು ಹುಣ್ಣು ಇದ್ದಂತೆ ಎಂಬ ಮನೋಭಾವ ಹೊಂದಿರುವಂತವಳು. ಅವಳ ಗ್ರಾಮದಲ್ಲಿ ಹೆಣ್ಣು ಹುಟ್ಟಿದರೆ ಆ ಮಗುವನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸುವ ಕೆಲಸ ಮಾಡುತ್ತಾಳೆ. ತನ್ನ ಗ್ರಾಮದಲ್ಲಿ ಹೆಣ್ಣು ಮಕ್ಕಳೇ ಹುಟ್ಟಬಾರದೆಂಬ ಅಲಿಖಿತ ಸಂವಿಧಾನ ಜಾರಿಯಾಗಿರುತ್ತದೆ. ಹೆಣ್ಣನ್ನು ಮತ್ತು ಹೆಣ್ಣು ಶಿಶುಗಳನ್ನು ದ್ವೇಷಿಸುವ ಪಾತ್ರದಲ್ಲಿ ಅಮ್ಮಾಜಿ ಚಿತ್ರತವಾದರೆ, ಹೆಣ್ಣಿನ ಜೀವನ ಆಕೆಯ ಬದುಕನ್ನು ಪ್ರೀತಿಸುವ ಸಿಯಾ ಈ ಕಥಾನಾಯಕಿಯಾಗಿದ್ದಾಳೆ. ಇದೇ ಅಮ್ಮಾಜಿಯ ಮಗ ರಾಘವನೊಂದಿಗೆ ವಿವಾಹವಾಗುವುದರ ಮೂಲಕ ಅಮ್ಮಾಜಿಯ ಸೊಸೆಯಾಗುತ್ತಾಳೆ.

ಹೆಣ್ಣಿನ ವಿರುದ್ಧ ಮತ್ತು ಪರವಾಗಿ ನಿಲ್ಲುವ ಎರಡು ಪಾತ್ರಗಳು ಒಂದೇ ಸೂರಿನಡಿನಲ್ಲಿ ವಾಸವಾಗುತ್ತಾರೆ. ಅಮ್ಮಾಜಿ ಊರೊಳೊಗೆ ಯಾವುದೇ ಮಹಿಳೆ ಮಗುವಿಗೆ ಜನ್ಮವಿತ್ತಾಗ, ಅದು ಹೆಣ್ಣು ಮಗುವೇ ಆಗಿದ್ದರೆ, ಅದನ್ನು ನಿರ್ದಾಕ್ಷಿಣ್ಯವಾಗಿ ಹಿಂಸೆ ಕೊಟ್ಟು ಅಥವಾ ಕುತ್ತಿಗೆ ಹಿಸುಕಿಯೋ ಒಟ್ಟಿನಲ್ಲಿ ಹಿಂಸಾ ಪ್ರವೃತ್ತಿಯನ್ನು ಅನುಸರಿಸಿ ಹತ್ಯೆ ಗೈಯುವ, ಮುಂದಿನ ವರ್ಷ ಗಂಡು ಮಗುವನ್ನು ಕರುಣಿಸು ಎಂದು ಕುದಿಯುವ ಹಾಲಿನೊಳಗೆ ಹಾಕಿ ಸಾಯಿಸುವ ಕ್ರೂರ ಪದ್ಧತಿಯನ್ನು ಈ ಕಥೆಯಲ್ಲಿ ಚಿತ್ರಸಲಾಗಿದೆ. ಹೀಗೆ ಸಾಯಿಸುವಾಗ ಒಂಭತ್ತು ತಿಂಗಳು ಹೊಟ್ಟೆಯಲ್ಲಿಟ್ಟುಕೊಂಡು ಆ ಮಗುವಿನ ಪ್ರತಿಯೊಂದು ಚಲನೆಯನ್ನು ಆಸ್ವಾಧಿಸುವ ಒಂಭತ್ತು ತಿಂಗಳು ತುಂಬಿದ ನಂತರ ಕಷ್ಟದಾಯಕವಾದ ಹೆರಿಗೆಯನ್ನು ಎದುರಿಸಿದ ತಾಯಿಯ ಭಾವನೆಗಳಿಗೆ ತಾಯ್ತನಕ್ಕೆ, ಆಕೆಯ ಮಾನಸಿಕ ಹೊಯ್ದಾಟಗಳಿಗೆ ದೈಹಿಕ ಯಾತನೆಗಳಿಗೆ ಯಾವುದೇ ಬೆಲೆ ಇಲ್ಲದಂತಾಗುತ್ತದೆ. ಹೆಣ್ಣಿನ ಈ ಎಲ್ಲ ಪ್ರಕ್ರಿಯೆಗಳು ಗಂಡು ಹುಟ್ಟಿದರೇ ಮಾತ್ರ ಸಂತೈಸುವ ಆ ನೋವನ್ನು ಮರೆಯುವ ಧೈರ್ಯ ಮಾಡುತ್ತಾಳೆ. ಹೆಣ್ಣು ಹುಟ್ಟಿದರೆ ಆ ತಾಯಿಗೆ ತನ್ನ ಮಗುವಿನ ಮುಖ ನೋಡುವ ಭಾಗ್ಯವಿಲ್ಲ. ಎದೆಯಲ್ಲಿ ಬೆಂಕಿ ಹುಟ್ಟಿಸಿಕೊಂಡು ತನ್ನ ಕಣ್ಣ ಮುಂದೆಯೇ ತನ್ನ ಕರಳುಬಳ್ಳಿ ಹಿಂಸೆಯನ್ನು ಅನುಭವಿಸಿ ಸಾಯುವುದನ್ನು ನೋಡಲಾಗದ ಪರಿಸ್ಥಿತಿಯನ್ನು ಇಲ್ಲಿ ಚಿತ್ರಿಸಿದ್ದಾರೆ.

ಇಂತಹ ಅನುಭವ ಅಮ್ಮಾಜಿಯ ಹಿರಿ ಸೊಸೆ ಸಂತೋಷ ಮತ್ತು ಎರಡನೇ ಸೊಸೆಗೂ ಆಗಿರುತ್ತದೆ. ತಮಗೆ ಹುಟ್ಟಿದ ಹೆಣ್ಣು ಮಗುವನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆಗೈಯುವದನ್ನು ತಪ್ಪಿಸಲು ಕೆಲಸದವರ ಮಗಳಾಗಿ ಸಾಕುವಂತಹ ಅನಿವಾರ್ಯತೆ ಸಂತೋಷಳದ್ದಾಗಿರುತ್ತದೆ. ಸಂತೋಷಗೆ ಹೆಣ್ಣು ಮಗುವಿನ ಮೇಲೆ ಅತಿಯಾದ ಪ್ರೀತಿಯಿಂದ ತನ್ನ ಮಗಳನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅಮ್ಮಾಜಿಗೆ ಹೆಣ್ಣು ಮಗುವನ್ನು ಸಾಯಿಸಿದ್ದಾಗಿ ಹೇಳಿ, ಕದ್ದು ಮುಚ್ಚಿ ತನ್ನ ಮಗಳನ್ನು ಕೆಲಸದವರ ಮಗಳಾಗಿ ಬೆಳೆಸುತ್ತಾಳೆ. ಇನ್ನು ಕಥಾನಾಯಕಿ

ಸಿಯಾ, ಮದುವೆಯಾಗಿ ಬಂದ ಹೊಸತರಲ್ಲಿ ಅಮ್ಮಾಜಿಯ ಮನೆಯಲ್ಲಿದ್ದ ಯಜಮಾನಿಕೆಯನ್ನು ಪ್ರಶ್ನಿಸುತ್ತಾಳೆ. ಹೆಣ್ಣು ಮಕ್ಕಳ ಉದ್ದಾರ ಮಾಡುವುದಕ್ಕೆ ಸತತವಾಗಿ ಹೋರಾಡುತ್ತಾಳೆ. ಸಿಯಾ ಆಧುನಿಕ ವಿಚಾರಗಳನ್ನು ಹೊಂದಿರುವ ಶಿಕ್ಷಿತ ಯುವತಿಯಾಗಿದ್ದಾಳೆ. ತಂದೆಯ ಉದ್ಯೋಗದ ನಿಮಿತ್ಯ ಈ ಗ್ರಾಮಕ್ಕೆ ಬಂದಿರುತ್ತಾರೆ. ಆ ಗ್ರಾಮದಲ್ಲಿ ನಡೆಯುವ ಅಮಾನುಷ ಆಚರಣೆ (ಹೆಣ್ಣು ಶಿಶುಹತ್ಯೆ)ಯನ್ನು ಪ್ರಬಲವಾಗಿ ವಿರೋಧಿಸುತ್ತ ಬಂದಿರುತ್ತಾಳೆ. ಮುಂದೆ ಸಿಯಾಳು ರಾಘವನನ್ನು ಮದುವೆಯಾಗಿ ಆ ಮನೆಗೆ ಸೊಸೆಯಾಗಿ ಹೋಗುತ್ತಾಳೆ.

ಮದುವೆಯಾದ ಮೇಲೆ ಅಲ್ಲಿ ಅವಳಿಗೆ ಹೊಸ ಪ್ರಪಂಚವೊಂದು ತೆರೆದುಕೊಳ್ಳುತ್ತದೆ. ಅಮ್ಮಾಜಿಯ ನಿಯಂತ್ರಣದಲ್ಲಿ ಮನೆಯ ಹೆಣ್ಣು ಮಕ್ಕಳು ಜೀವಂತ ದೇಹಗಳಂತೆ ಓಡಾಡುತ್ತಿರುತ್ತಾರೆ. ಗಾಣದೆತ್ತಿನಂತೆ ದಿನವು ದುಡಿಯುತ್ತಿರುತ್ತಾರೆ. ಯಾವುದೇ ಲವಲವಿಕೆಯಿಂದ, ಜೀವಂತಿಕೆಯಿಂದ ಬದುಕುವುದಾಗಿ ವಿಚಾರ ಮಾಡುವುದನ್ನಾಗಲೀ ಅವರು ಮಾಡುವುದಿಲ್ಲ. ತಮಗೂ ಅಂತಹ ಸಂಬಂಧವಿಲ್ಲದಂತೆ ಬದುಕುತ್ತಿರುತ್ತಾರೆ. ಈ ವ್ಯವಸ್ಥೆಯನ್ನು ಸಿಯಾ ಪ್ರಬಲವಾಗಿ ವಿರೋಧಿಸುತ್ತಾಳೆ. ಅಮ್ಮಾಜಿಯ ಈ ನಿಯಂತ್ರಣವನ್ನು ಸಡಿಲಿಸುವ ಪ್ರಯತ್ನ ಮಾಡುತ್ತಾಳೆ. ಸೊಸೆಯಂದಿರು ಮನೆ ಬೆಳಗೊ ದೀಪಗಳಂತೆ ಅವರನ್ನು ಸಂತೋಷದಿಂದ ಬದುಕುವಂತೆ ಮಾಡಿ ಈ ರೀತಿಯಾಗಿ ನಡೆದುಕೊಂಡರೇ ಅದು ಹೆಣ್ಣಿಗೆ ಅವಮಾನವೆಂದು ಅಮ್ಮಾಜಿಗೆ ಹೇಳುತ್ತಾಳೆ. ಆದರೆ ಅಮ್ಮಾಜಿಯು ತನ್ನ ಈ ಮನೋಭಾವದಿಂದ ಹೊರಬರುವುದಿಲ್ಲ. ಈ ಆಳ್ವಿಕೆ ಹಿಂದಿನಿಂದಲೂ ಹುಟ್ಟಿ ಬಂದಿದೆ ಅದನ್ನು ಯಾವ ಕಾರಣಕ್ಕಾಗಿಯೂ ಬದಲಾಯಿಸಲು ಸಾಧ್ಯವಿಲ್ಲ. ಏನೂ ನಡಿತಿದೆಯೋ ಅದನ್ನು ನಡೆಯಲು ಬಿಡಬೇಕೆಂದು ಅನಾವಶ್ಯಕವಾಗಿ ಸಂಬಂಧವಿಲ್ಲದ ವಿಷಯಕ್ಕೆ ತಲೆಹಾಕಬಾರದು ಎಂದು ಸಿಯಾಗೆ ಅಮ್ಮಾಜಿ ಎಚ್ಚರಿಕೆ ನೀಡುತ್ತಾಳೆ. ಮುಂದೆ ಸಿಯಾ ಗರ್ಭಿಣಿಯಾಗುತ್ತಾಳೆ. ಅಮ್ಮಾಜಿಯ ಒತ್ತಾಯದ ಮೇರೆಗೆ ಸಿಯಾಳ ಹೊಟ್ಟೆಯಲ್ಲಿರುವ ಮಗು ಹೆಣ್ಣೋ, ಗಂಡೋ ಎಂದು ತಿಳಿಯಲು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗುತ್ತದೆ. ಸಿಯಾಳ ಹೊಟ್ಟೆಯಲ್ಲಿ ಹೆಣ್ಣು ಮಕ್ಕಳಿವೆ ಅವು ಅವಳಿ-ಜವಳಿ ಎಂದು ಗೊತ್ತಾಗುತ್ತದೆ. ಸಿಯಾಳಿಗೆ ಈ ಮಕ್ಕಳಿಂದ ಅವಳ ದೇಹಾರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ ಮಗುವನ್ನು ತೆಗೆಸಬೇಕೆಂದು ವೈದ್ಯರು ಸೂಚಿಸುತ್ತಾರೆ. ಆದರೆ ಸಿಯಾ ಮಾತ್ರ ವೈದ್ಯರ ಮಾತಿಗೆ ಬೆಲೆ ಕೊಡುವುದಿಲ್ಲ. ತನ್ನ ಹೊಟ್ಟೆಯಲ್ಲಿರುವ ಹೆಣ್ಣುಮಕ್ಕಳಿಗೆ ತಾನು ಜನ್ಮ ಕೊಟ್ಟೆ ಕೊಡುತ್ತೇನೆ. ತನ್ನ ಸಾವು ಬಂದರೂ ಸರಿಯೇ, ಎಂತಹ ಘೋರ ಪರಿಸ್ಥಿತಿ ಬಂದರೂ ಅದನ್ನು ಎದುರಿಸಿಯೇ ಎದುರಿಸುತ್ತೇನೆಂದು ಹೇಳುತ್ತಾಳೆ.

ಸಿಯಾಳ ಹೊಟ್ಟೆಯಲ್ಲಿ ಹೆಣ್ಣು ಮಗುವಿರುವ ಸುದ್ದಿ ತಿಳಿದ ಅಮ್ಮಾಜಿ ಸಿಯಾಳ ಹೊಟ್ಟೆಯಲ್ಲಿರುವ ಮಗುವನ್ನು ತೆಗೆಸಲು ಅನೇಕ ತಂತ್ರಗಳನ್ನು ರೂಪಿಸುತ್ತಾಳೆ. ಸಿಯಾಳಿಗೆ ಕಷ್ಟದ ಮೇಲೆ ಕಷ್ಟ, ಪರೀಕ್ಷೆಯ ಮೇಲೆ ಪರೀಕ್ಷೆ ಒಡ್ಡುತ್ತಾಳೆ. ಆದರೆ ಸಿಯಾಳ ಧೋರಣೆ ಬದಲಾಗುವುದಿಲ್ಲ. ಸಿಯಾಳ ಈ ಹೋರಾಟದಲ್ಲಿ ಪತಿ ರಾಘವ ಕೈಗೂಡಿಸುತ್ತಾನೆ. ಹೆಂಡತಿ

ಮಕ್ಕಳನ್ನು ಕಾಯುವ ರಕ್ಷಕನಾಗಿ ನಿಲ್ಲುತ್ತಾನೆ. ಎಲ್ಲ ಸವಾಲುಗಳನ್ನು ಎದುರಿಸಿ ಹೆಣ್ಣುಮಕ್ಕಳಿಬ್ಬರಿಗೆ ಜನನ ಕೊಡುತ್ತಾಳೆ. ಅವಳ ದೈಹಿಕ ಅನಾರೋಗ್ಯ ಸಮಸ್ಯೆಯನ್ನುಂಟು ಮಾಡುತ್ತದೆ. ಸಿಯಾಳ ಮಕ್ಕಳನ್ನು ಅಮ್ಮಾಜಿ ತನ್ನ ಕೆಲಸದ ಆಳುಗಳಿಂದ ಅಪಹರಣ ಮಾಡಿಸುತ್ತಾಳೆ. ಒಂದು ಮಗು ಕೈತಪ್ಪಿ ಬೇರೊಂದು ಪ್ರದೇಶ ಸೇರುತ್ತದೆ. ಒಂದು ಮಗು ಅಮ್ಮಾಜಿ ಮಡಿಲು ಸೇರುತ್ತದೆ. ಮಕ್ಕಳ ಈ ಅಕಾಲಿಕ ದೂರಿನಿಂದ ಸಿಯಾ ಮಾನಸಿಕವಾಗಿ, ದೈಹಿಕ ವಾಗಿ ಕುಗ್ಗಿ ಹೋಗುತ್ತಾಳೆ.

ಈ ಮಧ್ಯೆ ಅವಳ ದೈಹಿಕ ನೋವು ಹೆಚ್ಚಾಗಿ ಸಾವನ್ನಪ್ಪುತ್ತಾಳೆ. ರಾಘವ ಕೂಡ ಹೋರಾಟ ಮಾಡುತ್ತಲೇ ಸಾವನ್ನಪ್ಪುತ್ತಾನೆ. ಮುಂದೆ ಸಿಯಾಳ ಮಕ್ಕಳು ಬೆಳೆದು ದೊಡ್ಡವರಾಗುತ್ತಾರೆ. ಒಬ್ಬಳು ತುಂಬಾ ಸೂಕ್ಷ್ಮವಾಗಿ ಅಮ್ಮಾಜಿಯ ಕೈಯಲ್ಲಿ ಬೆಳೆದರೆ, ಇನ್ನೊಬ್ಬಳು ಅತ್ಯಂತ ಚಾಣಾಕ್ಷ ಬುದ್ಧಿಯಿರುವ ಎಂತಹ ಸವಾಲನ್ನು ಎದುರಿಸುವ ಗಟ್ಟಿಗಿತ್ತಿಯಾಗಿ ಬೆಳೆಯುತ್ತಾಳೆ. ಕಥೆಯಲ್ಲಿ ಮುಂದೆ ಸಿಯಾಳ ಮಕ್ಕಳ ಜೀವನ, ಅವರ ಬದುಕಿನಲ್ಲಿ ಬರುವ ಹಲವು ಏರಿಳಿತಗಳು ಇವನ್ನೆಲ್ಲ ಇಲ್ಲಿ ಕಟ್ಟಿಕೊಡಲಾಗಿದೆ. ಅಮ್ಮಾಜಿಯ ದರ್ಪ, ದೌಲತ್ತು, ಯಜಮಾನಿಕೆ, ಕಠೋರವಾದ ಮನಸ್ಸು ಇವನ್ನೆಲ್ಲಾ ಕಾಲಕ್ಕೆ ತಕ್ಕಂತೆ ಹೆಚ್ಚುತ್ತಾ ಹೋಗುತ್ತವೆ. ಅಮ್ಮಾಜಿಯ ದರ್ಪವನ್ನು ಇಳಿಸುವ ಸಲುವಾಗಿ ಪುರುಷನ ಆಗಮವಾಗುತ್ತದೆ. ಅಮ್ಮಾಜಿಯ ಮೇಲೆ ಸೇಡು ತೀರಿಸಿಕೊಳ್ಳುವ ಅವಳ ಅಹಂಕಾರಕ್ಕೆ ದರ್ಪಕ್ಕೆ, ಕಠೋರವಾದ ಮನಸ್ಥಿತಿಗೆ ಒಂದು ಬದಲಾವಣೆಯಾಗಬೇಕಾದ ಅವಶ್ಯಕತೆಯಿರುವುದರಿಂದ ಸಿಯಾಳ ಎರಡನೇ ಮಗಳು ಜಾಹ್ನವಿ, ಅಜ್ಜಿಯ ಮನಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಯನ್ನು ತರುತ್ತಾಳೆ. ಮುಂದೆ ಜಾಹ್ನವಿಯ ಬದುಕು ಹೇಗೆ ರೂಪಗೊಳ್ಳುತ್ತದೆ. ಅಜ್ಜಿಯ ಪ್ರೀತಿಗೆ ಪಾತ್ರಳಾಗುತ್ತಾಳಾ ಅಥವಾ ಅನಾದರಕ್ಕೆ ಒಳಗಾಗುತ್ತಾಳಾ ಎಂಬುದು ಕಥೆಯು ಮುಂದುವರೆದ ಭಾಗದಲ್ಲಿ ತೋರಿಸಲಾಗುತ್ತದೆ.

ಜಾಹ್ನವಿ ಮದುವೆಯಾಗಿ ಗಂಡನ ಮನೆಗೆ ಹೋಗುತ್ತಾಳೆ. ಅಲ್ಲಿ ಮತ್ತೆ ಇದೇ ಯಜಮಾನಿಕೆಯ ದರ್ಪ, ಗಂಡನ ಸಿಟ್ಟು, ಕೋಪ, ಅಸಹನೆ ಅವಳನ್ನು ಮತ್ತೆ ಕುಗ್ಗಿ ಹೋಗುವಂತೆ ಮಾಡುತ್ತದೆ. ಇದರ ಮಧ್ಯೆ ಜಾಹ್ನವಿ ತನಗೆ ಎದುರಾಗುವ ಎಲ್ಲ ಕಷ್ಟಗಳನ್ನು ಧೈರ್ಯವಾಗಿ ಎದುರಿಸುತ್ತಾಳೆ. ತನ್ನ ಮನೆಯಲ್ಲಿಯೇ ತನ್ನ ಗಂಡನ ತಮ್ಮನಿಂದ ಮಾನಸಿಕವಾಗಿ ಹಿಂಸೆಗಳನ್ನು ಎದುರಿಸಬೇಕಾಗುತ್ತದೆ. ಮೈದುನನ ಒಳಮರ್ಮವನ್ನು ಅರಿಯುವ ಜಾಹ್ನವಿ ತನ್ನ ಗಂಡನಿಗೆ, ತಮ್ಮನ ಕುರಿತು ಹೇಳುತ್ತಾಳೆ. ಆಗ ಜಾಹ್ನವಿಯ ಗಂಡ ತನ್ನ ತಮ್ಮ, ತನ್ನ ಹೆಂಡತಿಯ ಮೇಲಿಟ್ಟಿರುವ ಕೆಟ್ಟ ದೃಷ್ಟಿಯನ್ನು ಕಣ್ಣಾರೆ ಕಂಡು ಅವನನ್ನು ಶಿಕ್ಷಿಸುತ್ತಾನೆ. ಕಥೆಯಲ್ಲಿ ಹಲವು ಕಷ್ಟಗಳು, ಏರಿಳಿತಗಳು ಎದುರಾಗಿ, ಕೊನೆಯಲ್ಲಿ ಕಥೆಯು ಜಾಹ್ನವಿ ಮತ್ತು ಆಕೆಯ ಗಂಡನ ನಡುವೆ ಒಳ್ಳೆಯ ಬಾಂಧವ್ಯವನ್ನು ತರುವುದರ ಮೂಲಕ ಸುಖಾಂತ ಕಾಣುತ್ತದೆ.

ವಿಶ್ಲೇಷಣೆ

೨೦೦೫ರಲ್ಲಿ ಮಾತೃಭೂಮಿ ಎಂಬ ಹಿಂದಿ ಸಿನಿಮಾ ಒಂದು ತೆರೆ ಕಂಡಿತು. ಮನೀಶ್ ಝಾ ನಿರ್ದೇಶನದ ಈ ಚಲನಚಿತ್ರದಲ್ಲಿ ಹೆಣ್ಣೇ ಇಲ್ಲದ ರಾಷ್ಟ್ರ ಹೇಗಿರಬಹುದು ಎಂಬ ಕಾಲ್ಪನಿಕ ಸನ್ನಿವೇಶದ ಕಂಥಾ ಹಂದರವಿದೆ. ಇದರ ಶೀರ್ಷಿಕೆಯಲ್ಲೇ 'ಎ ನೇಷನ್ ವಿತೌಟ್ ವುಮೆನ್' ಎಂದೇ ಹೆಸರಿಸಲಾಗಿದ್ದು; ಹೆಣ್ಣು ಭ್ರೂಣಹತ್ಯೆಯ ಭೀಕರ ಪರಿಸ್ಥಿತಿಯನ್ನು ಇದು ಬಿಂಬಿಸುತ್ತದೆ.

ಗಂಡು ಮಗುವನ್ನೇ ಆಪೇಕ್ಷಿಸುತ್ತಿದ್ದ ಹಳ್ಳಿಯ ಬಡ ಕುಟುಂಬದಲ್ಲಿ ಹೆಣ್ಣು ಮಗುವೊಂದು ಹುಟ್ಟಿದಾಗ ಆ ಮಗುವನ್ನು ತಂದೆಯೇ ಕೊಲ್ಲುವ ಹೃದಯ ವಿದ್ರಾವಕ ಘಟನೆಯಿಂದ ಸಿನಿಮಾ ಆರಂಭವಾಗುತ್ತದೆ. ಮುಂದೆ ಇಡೀ ಹಳ್ಳಿಯಲ್ಲಿ ಹೆಣ್ಣು ಮಕ್ಕಳೇ ಇಲ್ಲದಾಗುತ್ತದೆ. ಇದೇ ಊರಿನಲ್ಲಿ ಒಬ್ಬ ತಂದೆಗೆ ಐವರು ಗಂಡು ಮಕ್ಕಳು ಮದುವೆಗೆ ಸಿದ್ಧರಾಗುತ್ತಾರೆ. ಅವರಿಗೆ ಹೆಣ್ಣು ಸಿಗದೇ ಇದ್ದಾಗ ಪಕ್ಕದ ಹಳ್ಳಿಯಿಂದ ಒಬ್ಬ ಹೆಣ್ಣು ಮಗಳನ್ನು ದುಡ್ಡುಕೊಟ್ಟು ಕೊಂಡುಕೊಳ್ಳುತ್ತಾರೆ. ಇವಳನ್ನೇ ಐವರೂ ಮದುವೆಯಾಗುತ್ತಾರೆ. ಕಾಮುಕ ತಂದೆಯೂ ಇದೇ ಹೆಣ್ಣು ಮಗಳನ್ನು ವಾರದಲ್ಲಿ ಒಂದು ದಿನ ತನ್ನ ಮನೆಯಲ್ಲಿ ಇರಿಸಿಕೊಳ್ಳುತ್ತಾನೆ. ದ್ವೇಷ ಅಸೂಯೆ ತಾಂಡವಾಡಿ ಇಡೀ ಕುಟುಂಬವೇ ನಾಶವಾಗುತ್ತದೆ.[೬] ಈ ಚಲನಚಿತ್ರ ಹೆಣ್ಣು ಇರದೇ ಹೋದರೆ ಸಮಾಜದ ಪತನ ಹೇಗಾಗುತ್ತದೆ ಎಂಬುದಕ್ಕೆ ಹಿಡಿದ ಕನ್ನಡಿಯಾಗಿದೆ.

ಇದೇ ವಸ್ತುವನ್ನಿಟ್ಟುಕೊಂಡು ಕಲರ್ಸ್ ಚಾನೆಲ್‌ನಲ್ಲಿ ನಾ ಆನಾ ದೇಶ್ ಮೇರೆ ಲಾಡೋ ಧಾರಾವಾಹಿಯನ್ನು ಚಿತ್ರಿಸಲಾಗಿದೆ. ಧಾರಾವಾಹಿಯಲ್ಲಿಯೂ ಹೆಣ್ಣು ಶಿಶುಗಳ ಹತ್ಯೆಯನ್ನು ವ್ಯಕ್ತಪಡಿಸುವ ವೀರಪುರ ಗ್ರಾಮದ ಚಿತ್ರಣವಿದೆ. ಈ ಧಾರಾವಾಹಿಯಲ್ಲಿ ಹೆಣ್ಣು ಮಗುವು ಹುಟ್ಟಿದ ಮೇಲೆ ಅದನ್ನು ಜೀವಂತವಾಗಿರಲು ಬಿಡದ ಪುರುಷ ಪ್ರಧಾನ ಸಮಾಜ ಆ ಮಗುವನ್ನು ಕುದಿಯುವ ಹಾಲಿನಲ್ಲಿ ಹಾಕಿ ಹಿಂಸೆ ಕೊಟ್ಟು ಸಾಯಿಸುವ ಚಿತ್ರ ಎಂತಹವರನ್ನು ಕ್ಷಣ ಅಲುಗಾಡುವಂತೆ ಮಾಡುವ ದೃಶ್ಯವನ್ನು ತೋರಿಸಲಾಗುತ್ತದೆ. ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಹುಟ್ಟಿದ ತಕ್ಷಣ ಸಾಯಿಸುವ ಪಾಪ ಕೃತ್ಯಕ್ಕೆ ಉದಾಹರಣೆಯಾಗಿ "೧೯೮೦-೮೧ರಲ್ಲಿ ಅನಯಾಯಿ ಪ್ರಾಂತ್ಯದಲ್ಲಿ ಒಂದೇ ದಿನ ನಲವತ್ತಕ್ಕೂ ಹೆಚ್ಚು ಹೆಣ್ಣು ಶಿಶುಗಳನ್ನು ಕೊಂದದ್ದು ವರದಿಯಾಗಿತ್ತು. ೧೯೮೨ರಲ್ಲಿ ದಕ್ಷಿಣ ಗ್ವಾಂಗ್‌ಹಾಂಗ್ ಪ್ರಾಂತ್ಯದ ಎರಡು ಪ್ರದೇಶಗಳಲ್ಲಿ ಒಮ್ಮೆಲೆ ೨೦೦ ಶಿಶುಗಳನ್ನು ಕೊಂದದ್ದು. ಹೆರಿಗೆಯ ಸಮಯ ತಾಯಿಯ ಹಾಸಿಗೆಯ ಬಳಿ ಒಂದು ಬಕೆಟ ನೀರನ್ನು ಇಟ್ಟು ಹುಟ್ಟಿದ ಮಗು ಹೆಣ್ಣು ಎಂದ ಕೂಡಲೇ ಅದನ್ನು ಬಕೆಟ್ ನೀರಿನಲ್ಲಿ ಮುಳುಗಿಸಿ ಸಾಯಿಸಿದ ಬಗ್ಗೆ ಮಾಹಿತಿಗಳು ದೊರೆಯುತ್ತವೆ."[೭]

ಹುಟ್ಟಿದ ಮಗುವಿನ ಕತ್ತು ಹಿಸುಕಿ ಉಸಿರುಗಟ್ಟಿಸಿ ಸಾಯಿಸುವ ವಿಧಾನ. ಆ ಹಂತದಲ್ಲಿ ಮಗು ವಿಕಾರವಾಗಿ ಮುಖ ಮಾಡುವುದನ್ನು ಅವರಿಗೂ ನೋಡುವುದು ಕಷ್ಟವೆಂದು

ರಾತ್ರಿಯೆಲ್ಲ ನಿದ್ರೆ ಬರುವುದಿಲ್ಲವಂತೆ. ಅದಕ್ಕಾಗಿ ಅವರು ಬೇರೆ ಬೇರೆ ರೀತಿಗಳನ್ನು ಹುಡುಕಿಕೊಂಡಿದ್ದಾರೆ. ಹುಟ್ಟಿದ ಮಗುವನ್ನು ಮಡಕೆಯೊಂದರಲ್ಲಿ ಇಟ್ಟು ಅದರ ಮೇಲೆ ಉಧ್ಧಿನ ಹುದುಗು ತುಂಬಿಸಿ ಬಟ್ಟೆ ಕಟ್ಟಿಬಿಡುವುದು. ಮಗು ಅಲ್ಲೇ ಸತ್ತಿರುತ್ತದೆ. ಹಾಗೆಯೇ ಹೂತುಬಿಡುತ್ತಾರೆ. ಮಗುವಿನ ಬಾಯಿಗೆ ಭತ್ತದ ಹೊಟ್ಟನ್ನು ತುಂಬಿ ಸಾಯಿಸುವುದು ಮತ್ತೊಂದು ವಿಧಾನ, ಸಗಣಿ ತುಂಬಿದ ಬುಟ್ಟಿಯಲ್ಲಿ ಮಗುವನ್ನು ತುರುಕಿ ಸಾಯಿಸುವುದು ಉಂಟು.[೮] ಹೀಗೆ ಹೆಣ್ಣು ಎಂದರೆ ಹುಣ್ಣು ಎನ್ನುವಂತ ವ್ಯವಸ್ಥೆ ಇರುವುದರಿಂದ ಹೆಣ್ಣು ಮಗುವನ್ನು ಸಾಯಿಸಿರುವುದಕ್ಕೆ ನೇಹಾ ಆಫ್ರಿನ್ ಇದಕ್ಕೆ ಉತ್ತಮ ಉದಾಹರಣೆಯಾಗುತ್ತಾಳೆ. ಗರ್ಭದಲ್ಲಿಯೇ ಮಗುವಿನ ಲಿಂಗ ಪತ್ತೆ ಮಾಡುವುದರ ಮೂಲಕ ಹತ್ಯೆಗೈಯುವುದು ನಡೆದೇ ಇರುವುದರಿಂದ ಅನೇಕ ಪುರುಷರಿಗೆ ಹೆಣ್ಣು ಸಿಗದೇ ಮದುವೆಯ ಭಾಗ್ಯ ಇಲ್ಲದಂತಹ ಪರಿಸ್ಥಿತಿ ಎದುರಾಗಿದೇ ಇಂತಹ ಸಾಮಾಜಿಕ ಅನಿಷ್ಟ ಪದ್ಧತಿಯನ್ನು ವಿರೋಧಿಸುವ, ಮನದಟ್ಟು ಮಾಡುವಲ್ಲಿ ಈ ಧಾರಾವಾಹಿಯ ಪಾತ್ರ ಹೆಚ್ಚಾಗಿದೆ ಎನ್ನಬಹುದು. ಬದಲಾಯಿಸಿ ಹೆಣ್ಣು ಎಂದರೆ ನಮ್ಮ ಆಸ್ತಿ ಎಂಬ ಭಾವ ಮೂಡಿಸಿರುವಾಗ ಹೇಳಿಕೊಂಡಿದ್ದಾರೆ. ಕ್ಷೇತ್ರಕಾರ್ಯ ಮಾಹಿತಿಯಿಂದ ಇದು ತಿಳಿದುಬಂದಿದೆ.

ರಾಜ್ಯದಲ್ಲಿ ಗಂಡು ಹೆಣ್ಣು ಮಕ್ಕಳ ಜನನ ಅನುಪಾತ ಕುರಿತಂತೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್.ಆರ್.ಎಚ್.ಎಂ) ಬಿಡುಗಡೆ ಮಾಡಿರುವ ಅಂಕಿ ಅಂಶಗಳೂ ಸಮಾಜಕ್ಕೆ ಹೆಣ್ಣು ಮಗು ಬೇಡವಾಗಿದ್ದಾಳೆ ಎಂಬುದನ್ನು ಎತ್ತಿ ತೋರುತ್ತಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಎನ್.ಆರ್.ಎಚ್.ಎಂ. ವರದಿ ಪ್ರಕಾರ ಕರ್ನಾಟಕದಲ್ಲಿ ೨೦೧೦-೧೧ರಲ್ಲಿ ೧೦೦೦ ಗಂಡುಶಿಶುಗಳಿಗೆ ಕೇವಲ ೯೨೬ ಹೆಣ್ಣು ಶಿಶುಗಳು ಹುಟ್ಟಿವೆ. ಕಳೆದ ವರ್ಷ ಈ ಪ್ರಮಾಣ ೯೪೮ ಇತ್ತು. ೨೦೦೮-೦೯ರಲ್ಲಿ ರಾಜ್ಯದಲ್ಲಿ ಒಟ್ಟು ೪.೬೪.೪೭೨ ಗಂಡು ಹಾಗೂ ೪.೩೪೯.೯೯೭ ಹೆಣ್ಣು ಶಿಶುಗಳು ಜನಿಸಿದ್ದವು. ಈ ಅಂಕಿ ಅಂಶಗಳ ಪ್ರಕಾರ, ಹೆಣ್ಣು ಶಿಶು ಲಿಂಗ ಅನುಪಾತ ೯೩೭. ೨೦೦೯-೧೦ರಲ್ಲಿ ಅನುಪಾತ ೯೪೮ಕ್ಕೆ ಸ್ವಲ್ಪಮಟ್ಟಿಗೆ ಏರಿಕೆ ಆಗಿತ್ತು. ಈಗ ಇದು ಮತ್ತೆ ೯೨೬ಕ್ಕೆ ತೀವ್ರ ಮಟ್ಟದಲ್ಲಿ ಇಳಿಕೆಯಾಗಿದೆ.[೯] ಇಂತಹ ವಾಸ್ತವ ಚಿತ್ರಣಕ್ಕೆ ಮೇಲೆ ಚಿತ್ರಿಸಲಾದಂತಹ ಧಾರಾವಾಹಿಗಳು ಮತ್ತೆ ಮತ್ತೆ ಹೆಣ್ಣು ಭ್ರೂಹತ್ಯೆ ಮತ್ತು ಹೆಣ್ಣು ಶಿಶುಹತ್ಯೆಗಳಿಗೆ ಪ್ರೋತ್ಸಾಹಿಸುತ್ತಿರುವುದೇ ಕಾರಣವಾಗಿದೆ ಎಂದು ಹೇಳಬಹುದಾಗಿದೆ.

೩.೨.೭. ಬಾಲಿಕಾವಧು

ಕಥೆಯ ಸಾರಾಂಶ

ಬಾಲಿಕಾವಧು ಹೆಸರೇ ಸೂಚಿಸುವಂತೆ ಬಾಲಿಕೆಯನ್ನು ವಧುವನ್ನಾಗಿ ಚಿತ್ರಿಸುವ ಆಶಯವನ್ನು ಹೊಂದಿದೆ. ಬಾಲ್ಯದಲ್ಲಿಯೇ ಎರಡು ಅಪ್ರಾಪ್ತ ಗಂಡು, ಹೆಣ್ಣು ಮಕ್ಕಳನ್ನು ವಿವಾಹದ ಬಂಧನದಲ್ಲಿ ಬಂಧಿಸಿ, ಆಟವಾಡುವ ವಯಸ್ಸಿನಲ್ಲಿ ಗಂಡು ಹೆಂಡತಿಯರನ್ನಾಗಿ

ಮಾಡಿ ಹಿರಿಯರು ಹಾರೈಸುವ ಕಥೆ ಇರುವ ಧಾರಾವಾಹಿ ಇದಾಗಿದೆ. ಬಾಲ್ಯದಲ್ಲಿ ಗಂಡ ಹೆಂಡತಿ ಪದಗಳ ಅರ್ಥ ಗೊತ್ತಿರದ ಮಕ್ಕಳು ಮದುವೆಯ ಬಂಧನದಲ್ಲಿ ಒಂದಾಗುವ ಮೂಲಕ ತಮ್ಮ ಬಾಲ್ಯವನ್ನೆಲ್ಲಾ ಕಳೆದುಕೊಳ್ಳುವ, ಮದುವೆಯಾಗಿರುವ ಹೆಣ್ಣು ಮಗುವನ್ನು ತಾನಿನ್ನು ಹುಡುಗಿಯಲ್ಲ ಬದಲಿಗೆ ಒಂದು ಮನೆಯ ಸೊಸೆ, ಒಬ್ಬನ ಹೆಂಡತಿ, ಸೊಸೆಯಾಗಿ ಒಂದು ಮನೆಯ ಗೃಹಿಣಿ ಆಗಿ ಹೋಗುವುದನ್ನು ನೋಡಿಕೊಂಡು, ಹಿರಿಯರ ಎದುರು ತಗ್ಗಿ ಬಗ್ಗಿ ನಡೆಯುವಂತಹ ಎಳೆಯ ಪ್ರಾಯದ ಹುಡುಗಿಗೆ ವಿವಾಹದ ಜವಾಬ್ದಾರಿಯನ್ನು ಹೇರುವ ಚಿತ್ರಣವಿದೆ. ಬಾಲ್ಯವಿವಾಹದಂತಹ ಸಾಮಾಜಿಕ ಅನಿಷ್ಟ ಪದ್ಧತಿಯಿಂದ ಎರಡು ಮಕ್ಕಳ ಬಾಲ್ಯ, ಓದು, ಆಟ, ಸ್ನೇಹಿತರ ಜೊತೆ ನಲಿದಾಟ, ಇವೆಲ್ಲವೂ ಕಳೆದುಹೋಗುವುದರ ಜೊತೆಗೆ ಅಕಾಲಿಕ ಯೌವನಕ್ಕೆ ಕಾಲಿಡುವುದು. (ಬಲವಂತದಿಂದ) ಮನೆಯ ಹಿರಿಯರ ಎದುರು ಸುಳಿಯದೇ ಮಾತನಾಡದೇ ಪ್ರಶ್ನೆಮಾಡದೇ ನಗದೇ ಇರುವಂತಹ ಕಟ್ಟಳೆ, ಸಂಪ್ರದಾಯಗಳ ಹೆಸರಿನಲ್ಲಿ ಹೆಣ್ಣಿನ ಬಾಲ್ಯವನ್ನು ಬಲವಂತವಾಗಿ ಸಮಾಧಿ ಮಾಡುವ ಹುನ್ನಾರವನ್ನು ಇಲ್ಲಿ ಚಿತ್ರಿಸಲಾಗಿದೆ. ಇದಕ್ಕೆ ಕಾವಲುದಾರಳಾಗಿ ಹೆಣ್ಣನ್ನೇ ನೇಮಿಸುವುದು(ಮಾಸಾ). ಇದೆಲ್ಲವೂ ನಮ್ಮ ವ್ಯವಸ್ಥೆ ಹೆಣ್ಣಿನ ಕುರಿತಾಗಿ ತೋರಿರುವ ಧೋರಣೆಯನ್ನು ವಿವರಿಸುತ್ತದೆ.

ಹೆಣ್ಣನ್ನು ಯಾವಾಗಲೂ ಅಧೀನ ನೆಲೆಯಲ್ಲಿ ಕಾಣುವ ರಾಜಕಾರಣ ಕಥೆಯ ಉದ್ದಕ್ಕೂ ಪ್ರಸ್ತಾಪವಾಗುತ್ತದೆ. ಬಾಲ್ಯದಲ್ಲಿ ನಡೆದ ಮದುವೆಯನ್ನು ಒಪ್ಪದ ಕಥನಾಯಕ ಯೌವನಾವಸ್ಥೆಗೆ ಕಾಲಿರಿಸಿದಾಗ ತನ್ನ ಸಹ ಪಾಠಿಯನ್ನೇ ಮದುವೆಯಾಗುವುದು ಕಥಾನಾಯಕಿಗೂ ತನಗೂ ಯಾವುದೇ ಸಂಬಂಧ ಇಲ್ಲದಂತೆ ಇದ್ದು ಬಿಡುವ ಕಥಾನಾಯಕ ನಾಯಕಿಗೆ ಹೆಜ್ಜೆ ಹೆಜ್ಜೆಗೂ ಎದುರಾಗುವ ಸವಾಲುಗಳನ್ನು ಧೈರ್ಯವಾಗಿ ಎದುರಿಸಿ ತನ್ನ ಜೀವನವನ್ನು ಗಂಡನ ಮನೆಯವರ ಮತ್ತು ಊರವರ ಸಂತೋಷಕ್ಕಾಗಿ ಮುಡುಪಾಗಿಡುವ ಚಿತ್ರಣವನ್ನು ಇಲ್ಲಿ ನೀಡಲಾಗಿದೆ. ನಾಯಕಿ ತನ್ನ ಊರಿನ ಏಳ್ಗೆಗಾಗಿ ಹಗಲು ರಾತ್ರಿ ಶ್ರಮವಹಿಸಿ ಊರಿಗೆ ಒಳ್ಳೆಯ ಹೆಸರು ತಂದು ಕೊಟ್ಟು, ಮಾದರಿ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಊರಿನ ಸರಪಂಚ ಆಗಿ ತನ್ನನ್ನು ತಾನು ತೊಡಗಿಸಿಕೊಳ್ಳುವ ಕಥಾನಾಯಕಿ ಅನಾವರಣಗೊಂಡಿದ್ದಾಳೆ. ತನ್ನ ಬಾಲ್ಯದಲ್ಲಿ ನಡೆದು ಹೋದ ಮದುವೆ, ಅದರ ಶೃಂಗಾರ, ತನ್ನ ಬಾಲ್ಯದ ದಿನಗಳು, ಆಟ ಪಾಠ ಎಲ್ಲವನ್ನು ಮೆಲುಕು ಹಾಕಿಕೊಳ್ಳುತ್ತಾ ದಿನ ಕಳೆಯುವುದು ಇವೆಲ್ಲವೂ ಈ ಕಥೆಯ ಚಿತ್ರಣಗಳಾಗಿವೆ. ಇಲ್ಲಿ ಕಥಾನಾಯಕ ಬೇಗ ಮದುವೆಯಾಗುತ್ತಾನೆ. ಆದರೆ ಕಥಾನಾಯಕಿಗೆ ಆ ಅವಕಾಶ ದೊರೆಯುವುದಿಲ್ಲ. ಇಲ್ಲಿಯೂ ಕೂಡ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿಗೊಂದು ನ್ಯಾಯ, ಗಂಡಿಗೊಂದು ನ್ಯಾಯ ಮಾಡುವುದಕ್ಕೆ ಸಾಕ್ಷಿಯಾಗುತ್ತದೆ. ಕಥೆಯಲ್ಲಿ ನಾಯಕಿಯ ಬಾಳಿನಲ್ಲಿ ಹೊಸ ನಾಯಕನ ಪ್ರವೇಶವನ್ನು ದೀರ್ಘ ಅವಧಿಯವರೆಗೂ ತೋರಿಸುವುದಿಲ್ಲ. ಇಲ್ಲಿಯೂ ಕೂಡ ತಾರತಮ್ಯ ಮಾಡಿಸಲಾಗುತ್ತದೆ. ಒಂದು ವೇಳೆ

ಕಥಾನಾಯಕಿಗೆ ಹೊಸ ನಾಯಕನ ಜೊತೆ ಮಾಡಿದರೆ ಧಾರಾವಾಹಿಯಲ್ಲಿ ಆಕರ್ಷಣೆ ಕಳೆದುಕೊಳ್ಳಬಹುದೆಂಬ ನಿರೀಕ್ಷೆ ನಿರ್ದೇಶಕರದದ್ದಾಗಿರಬಹುದು. ಹಾಗಾಗಿ ಇಲ್ಲಿಯೂ ಕೂಡ ಸಾಮಾಜಿಕ ಪಾತಳಿಯನ್ನೆ ನಿರ್ದೇಶಕರು ಚಿತ್ರಿಸುತ್ತಾರೆ.

ಒಬ್ಬ ಪ್ರಾಪ್ತೆ ಬಾಲ್ಯವಿವಾಹದಂತಹ ಅನಿಷ್ಟ ಪದ್ಧತಿಗೆ ಒಳಗಾದಾಗ ಅಲ್ಲಿ ಅವಳು ಅನುಭವಿಸುವ ಸಣ್ಣ ಪುಟ್ಟ ತೊಂದರೆ ಸಮಸ್ಯೆಗಳಿಂದ ಹಿಡಿದು ಮನೆಯವರ ವಿರೋಧದ ನಡುವೆ ಮಾವನ ಸಹಾಯದಿಂದ ಓದನ್ನು ಮುಂದುವರೆಸಿ ವಿದ್ಯಾಭ್ಯಾಸ ಪಡೆಯುವವರೆಗಿನ ಗಂಭೀರ ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಒಂದು ಹೆಣ್ಣಿನ ಬದುಕಿನ ಆತ್ಯಂತಿಕ ಸುಖ ನೆಮ್ಮದಿ ಶಾಂತಿ ಅವಳ ಪರಿಪೂರ್ಣ ಕುಟುಂಬವೇ ಆಗಿದೆ ಎಂಬುದು ಈ ಕಥೆಯ ಉದ್ದಕ್ಕೂ ಪ್ರಸ್ತಾಪತವಾಗುತ್ತದೆ.

ಬಾಲಿಕಾ ವಧುವಾಗಿ ತುಂಬಾ ಕುಟುಂಬದೊಳಗೆ ಪ್ರವೇಶ ಪಡೆಯುವ ಆ ನಂದಿ ತನ್ನ ತಂದೆ-ತಾಯಿ-ಊರು, ಆಟ, ಪಾಠ, ಶಾಲೆ, ಶಿಕ್ಷಕರು, ಗೆಳತಿಯರು ಎಲ್ಲರನ್ನು ತೊರೆದು, ದೊಡ್ಡ ಮನೆಗೆ ಕಾಲಿರಿಸುತ್ತಾಳೆ. ಈ ಮನೆಯಲ್ಲಿ ಅತ್ತೆಗಿಂತಲೂ ಗಂಡ(ಜಗದೀಶ)ನ ಅಜ್ಜಿಯ ಆಳ್ವಿಕೆ ನಡೆಯುತ್ತಿರುವುದರಿಂದ, ಮನೆಯ ಸೊಸೆಯರೆಂದರೆ, ತಗ್ಗಿ–ಬಗ್ಗಿ ನಡೆಯಬೇಕು. ಎದುರು ಮಾತನಾಡದೇ, ಅಚ್ಚುಕಟ್ಟಾಗಿ ಮನೆ ನೋಡಿಕೊಂಡು ಹೋಗಬೇಕು. ಅದು ಹೆಣ್ಣಿಗೆ ಭೂಷಣವೆಂದೇ ಹೇಳುತ್ತಾಳೆ. ಇಲ್ಲಿ ಮಾಸಾ(ಜಗದೀಶನ ಅಜ್ಜಿ) ತುಂಬಾ ಕಠೋರವಾದ ನಿಯಮಗಳ ಸ್ಥಾಪಿಸುವ, ಅನುಸರಿಸಿಕೊಂಡು ಹೋಗುವ, ಇಲ್ಲದಿದ್ದರೆ ಶಿಕ್ಷೆ ವಿಧಿಸುವ ಕಾರ್ಯ ಮಾಡುತ್ತಾಳೆ. ಇದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಹೇಗೆ ತನ್ನತನವನ್ನು ಬಿಟ್ಟು, ಆ ರೂಢಿಗತವಾದ ಮೌಲ್ಯಗಳಿಗೆ ಹೇಗೆ ತಲೆಬಾಗಬೇಕೆಂಬುದು ಕಥೆಯ ಉದ್ದಕ್ಕೂ ಪ್ರಸ್ತಾಪವಾಗುತ್ತದೆ. ಬಾಲ್ಯದಲ್ಲಿಯೇ ಮದುವೆಯಾಗಿರುವುದರಿಂದ, ಯೌವನಕ್ಕೆ ಬಂದಾಗ ಆ ಮದುವೆ ಅರ್ಥ ಕಳೆದುಕೊಂಡು, ನಂತರ ವಿಚ್ಛೇದನೆ ಪಡೆದ ಮೇಲೆ, ಕಥಾನಾಯಕ ಆನಂದ ಪಡುವ ಯಾತನೆ, ನೋವುಗಳ ಚಿತ್ರಣವಿದೆ. ತನಗೆನು ಏನೇ ದುಃಖವಾದರೂ ಅದನ್ನು ವ್ಯಕ್ತಪಡಿಸದೆ ಅನುಭವಿಸಬೇಕೆಂಬುದನ್ನು ನಾಯಕಿ ಆನಂದಿಯಲ್ಲಿ ಕಟ್ಟಿಕೊಡಲಾಗುತ್ತದೆ. ಜಗದೀಶ ಕೊಡುವ ಮಾನಸಿಕ ಹಿಂಸೆಯನ್ನು ತುಟಿ ಕಚ್ಚಿಕೊಂಡು ಅನುಭವಿಸುವ ಹೆಣ್ಣನ್ನೇ ಚಿತ್ರಿಸಲಾಗಿದೆ.

ಕಥೆಯ ಮುಂದುವರೆದ ಭಾಗದಲ್ಲಿ ಆನಂದಿ ತನ್ನ ವೈದ್ಯಕೀಯ ಓದನ್ನು ಮುಗಿಸಿಕೊಂಡು, ತನ್ನ ಹಳ್ಳಿಯಲ್ಲಿರುವ ಮಕ್ಕಳಿಗೆ ಅನುಕೂಲವಾಗುವಂತೆ ಶಾಲೆಯೊಂದನ್ನು ಸ್ಥಾಪಿಸುತ್ತಾಳೆ. ಸರಕಾರದಿಂದ ಅನುದಾನವನ್ನು ಪಡೆದು. ಅಲ್ಲಿಯ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸುವ ಉದ್ದೇಶದಿಂದ ತನ್ನ ವೈದ್ಯ ವೃತ್ತಿಯನ್ನು ಮುಂದುವರೆಸದೆ ಆರ್ಧಕ್ಕೆ ನಿಲ್ಲಿಸುತ್ತಾಳೆ. ಮಧ್ಯೆ ಹಲವು ಕಷ್ಟಗಳು ಎದುರಾದರೂ ಅವನ್ನು ಸಮರ್ಥವಾಗಿ ಎದುರಿಸುತ್ತಾಳೆ. ತನ್ನ ಮನೆಯಲ್ಲಿರುವ ಸದಸ್ಯರ ಸಹಾಯದಿಂದಾಗಿ ಚುನಾವಣೆಗೆ ನಿಲ್ಲುತ್ತಾಳೆ. ಊರಿಗೆ ಸರಪಂಚಳಾಗುತ್ತಾಳೆ. ತನ್ನ

ಊರನ್ನು ಮಾದರಿ ಗ್ರಾಮವನ್ನಾಗಿ ಮಾಡಿ ಧಕ್ಕೆ ಸರಕಾರದಿಂದ ಪ್ರಶಸ್ತಿಯನ್ನು ಪಡೆಯುತ್ತಾಳೆ. ತಮ್ಮ ಊರಿಗೆ ಕಲೆಕ್ಟರ್ ಆಗಿ ಬಂದ 'ಶಿವ'ನೊಂದಿಗೆ ನಿಶ್ಚಿತಾರ್ಥವಾಗಿರುತ್ತದೆ. ಕಥೆಯು ಮುಂದೆ ಆನಂದಿ ಶಿವನೊಂದಿಗೆ ವಿವಾಹವಾಗುತ್ತಾಳೆ? ಮುಂದಿನ ಕಥೆಯು ಇನ್ನು ಪ್ರಸಾರದ ಹಂತದಲ್ಲಿದೆ.

ಟಿಪ್ಪಣಿಗಳು

೧. ಪ್ರೊ. ಬಿ.ವಿ. ವೀರಭದ್ರಪ್ಪ, ೨೦೦೬, **ಭಾರತೀಯ ಮಹಿಳೆ ಸಾಂಸ್ಕೃತಿಕ ವಿಕಾಸ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ३೮.

೨. ಜ.ಹೊ. ನಾರಾಯಣ, ೨೦೦೯, **ಮನುಸ್ಮೃತಿ ಮತ್ತು ದಲಿತರು,** ಲಡಾಯಿ ಪ್ರಕಾಶನ, ಗದಗ ಪು. ೨೨.

೩. ಅದೇ ಪು. ೧೫೪.

೪. ಡಾ. ಆರ್. ಇಂದಿರಾ, ೨೦೦೨, **ಮಹಿಳೆ ಸಮಾಜ ಮತ್ತ ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೪೧.

೫. ಅದೇ., ಪು. ೧೪೨.

೬. **ಸುಧಾ ಪತ್ರಿಕೆ,** ೨೯, ಜನವರಿ, ೨೦೦೯, ಪು. ೨೦.

೭. **ನಿಜಧ್ಯಾನ,** ಡಾ. ವಿಜಯಾ, ಪ್ರೆಸ್‌ಕ್ಲಬ್, ಬೆಂಗಳೂರು, ಪು. ೬೦.

೮. **ನಿಜಧ್ಯಾನ,** ಡಾ. ವಿಜಯಾ, ಪ್ರೆಸ್‌ಕ್ಲಬ್, ಬೆಂಗಳೂರು, ಪು. ೬೧.

೯. **ಸುಧಾ ಪತ್ರಿಕೆ,** ಸಂಪುಟ ೧೨, ೧೪, ಏಪ್ರಿಲ್, ಪು. ೧೨.

□□□

ಅಧ್ಯಾಯ : ನಾಲ್ಕು

ರಿಯಾಲಿಟಿ ಶೋಗಳಲ್ಲಿ ಮಹಿಳಾ ಪ್ರತಿನಿಧೀಕರಣ

ಅಧ್ಯಾಯ : ನಾಲ್ಕು

ರಿಯಾಲಿಟಿ ಶೋಗಳಲ್ಲಿ ಮಹಿಳಾ ಪ್ರತಿನಿಧೀಕರಣ

೪.೦. ಪ್ರಸ್ತಾವನೆ

ರಿಯಾಲಿಟಿ ಶೋಗಳು ಇಂದಿನ ದಿನಗಳಲ್ಲಿ ಅತಿಹೆಚ್ಚು ಜನಪ್ರಿಯವಾಗಿ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳಾಗಿವೆ. ಎಲ್ಲಾ ಖಾಸಗಿ ವಾಹಿನಿಗಳಲ್ಲಿ ಧಾರಾವಾಹಿಗಳಲ್ಲಿ ತೋರಿಸಲಾಗುವ ಅತ್ತೆ-ಸೊಸೆಯ ಹಳೆ ಚಿತ್ರಣವನ್ನು ನೋಡಿದ ಜನರಿಗೆ ಈ ರಿಯಾಲಿಟಿ ಶೋಗಳು ಕೊಂಚ ಹೊಸತನವನ್ನು ಕೊಡುವುದರ ಜೊತೆಗೆ ಮನರಂಜನೆಯನ್ನು ಸಹ ನೀಡಿದವು. ಈ ರಿಯಾಲಿಟಿ ಶೋಗಳ ಮುಖ್ಯ ವಿಷಯ. ವಾಸ್ತವ ಜೀವನದ ಒಳಗೊಂದು ಇಟುಕು ನೋಟದ ಥ್ರಿಲ್ (ಮೋಜು) ಒದಗಿಸುವ ಕಸರತ್ತೇ ರಿಯಾಲಿಟಿ ಶೋ ಆಗಿವೆ. ಸಾಮಾನ್ಯ ಜನರು ಅಸಾಮಾನ್ಯ ಸನ್ನಿವೇಶಗಳಲ್ಲಿ ಯಾವ ರೀತಿ ವರ್ತಿಸುತ್ತಾರೆ. ನಿರ್ದಿಷ್ಟ ಪ್ರಚೋದನೆಗಳಿಗೆ ಯಾವ ಪ್ರತಿಕ್ರಿಯೆ ತೋರಿಸುತ್ತಾರೆ ಎಂದು ತೋರಿಸುವ ಚಿತ್ರಣ ಇದರ ವಿಷಯವಾಗಿದೆ. ಇಂತಹ ಕುತೂಹಲಭರಿತ ಸಂಚಿಕೆಗಳಿಂದಾಗಿ ವೀಕ್ಷಕರು ಈ ರಿಯಾಲಿಟಿ ಶೋಗಳಿಗೆ ಮುಗಿದುಬಿದ್ದು ನೋಡುವ ಟ್ರೆಂಡ್ ಒಂದು ಪ್ರಾರಂಭವಾಯಿತೆನ್ನಬಹುದು.

೨೧ನೇ ಶತಮಾನದಲ್ಲಿ ಹಳೆಯದನ್ನೆ ತೋರಿಸಲಾಗುತ್ತಿರುವುದರ ಬದಲು ಹೊಸದಾಗಿ ರೂಪಿಸುವ ಈ ರಿಯಾಲಿಟಿ ಶೋಗಳು ಜನಪ್ರಿಯವಾಗ ತೊಡಗಿದವು. ಹೀಗೆ ಹೊಸತನವನ್ನು ಕೊಡುವ ರಿಯಾಲಿಟಿ ಶೋಗಳ ಅಲೆ ಪ್ರಾರಂಭವಾಯಿತು. ಹೀಗೆ ಎದ್ದ ಅಲೆ ಇಂದು ನಿನ್ನೆಯದಲ್ಲ. ಇದು ಆರಂಭವಾಗಿ ಹಲವು ದಶಕಗಳೇ ಕಳೆದಿವೆ. ಟಿ.ವಿ ಗೇಮ್ಸ್ ಎಂಬ ಅಪ್ಪಟ ತಮಾಷೆ ಆಟೋಟಗಳಿಂದ ಆರಂಭಿಸಿ; ಕ್ವಿಜ್,(Quez) ಟ್ಯಾಲೆಂಟ್ ಸರ್ಚ (Talent Search) ಮುಂತಾದ ಪ್ರತಿಭಾನ್ವೇಷಣೆಯಿಂದ ಸಾಗಿ, ಪ್ರೇಕ್ಷಕರನ್ನು ಉದ್ರೇಕಿಸುವ ಕಾಮುಕ ಆಟಗಳು, ಬೆಚ್ಚಿ ಬೀಳಿಸುವ ಪ್ಯಾರಾ ನಾರ್ಮಲ್ ಅಧ್ಯಯನದವರೆಗೆ ನೂರೆಂಟು ರೂಪಗಳಲ್ಲಿ ವಿಜೃಂಭಿಸಿವೆ. ಸ್ಪರ್ಧಿಗಳನ್ನು ಅವಮಾನ ಮಾಡಿ ವೀಕ್ಷಕರಿಗೆ ಮೋಜು ಕೊಡುವ ಗಾಕಿ ತ್ಸುಕಾಯಿ ಎಂಬ ಜಪಾನೀ ಪ್ರೋಗ್ರಾಂನಿಂದ ಹಿಡಿದು ವಿಭಿನ್ನ ವ್ಯಕ್ತಿಗಳನ್ನು ಒಂದೆಡೆ ಸೆರೆಹಾಕಿ ಅವರ ದಿನನಿತ್ಯದ ಬದುಕು, ಬವಣೆಗಳನ್ನು ಎಳೆಎಳೆಯಾಗಿ ವೀಕ್ಷಕರಿಗೆ ತೋರಿಸುವ 'ಬಿಗ್‌ಬ್ರದರ್'ವರೆಗೆ ಬೆಳೆದು ಬಂದಿದೆ.

ಈ ರಿಯಾಲಿಟಿ ಶೋ ಆರಂಭವಾದದ್ದು ೧೯೪೮ರಲ್ಲಿ. ಅಲೆನ್ ಫಂಟ್ ಎಂಬಾತ ಅಮಾಯಕ ಜನರನ್ನು ಕಿಡಿಗೇಡಿತನದ ಆಟಗಳಿಂದ ಬೆಸ್ತು ಬೀಳಿಸಿ, ರಹಸ್ಯ ಕ್ಯಾಮೆರಾಗಳ ಮೂಲಕ ಈ ಘಟನೆಗಳನ್ನು ಚಿತ್ರೀಕರಿಸಿ. "ಕ್ಯಾಂಡಿಡ್ ಕ್ಯಾಮೆರಾ" ಎಂಬ ಸಿರಿಯಲ್ ಆಗಿ ಪ್ರದರ್ಶಿಸಿದ್ದ. ಈ ಪ್ರಯೋಗಕ್ಕೆ ಇಂದು ರಿಯಾಲಿಟಿ ಶೋಗಳ ಗ್ರ್ಯಾಂಡ್ ಡ್ಯಾಡಿ (ತಾತ) ಎಂದೇ ಬಿರುದು. ಇಂದಿಗೂ ಬೀದಿಗಳಲ್ಲಿ ಸಾಗುವ ಅಮಾಯಕರನ್ನು ಬಕರಾ ಮಾಡುವ, ಬೆಚ್ಚಿ ಬೀಳಿಸುವ ಈ ಕುಹುಕದ ಆಟಗಳು ಎಲ್ಲ ಭಾಷೆಯ ಟಿವಿಗಳಲ್ಲಿ ನೂರೆಂಟು ರೂಪಗಳಲ್ಲಿ ಕಾಣಿಸುತ್ತವೆ.

ಈ ರಿಯಾಲಿಟಿ ಶೋಗಳು ಜನಪ್ರಿಯವಾಗಲು ಇಷ್ಟು ವಿಷಯ ಸಾಕಾಗದೇ ವಿಭಿನ್ನ ಬಗೆಯ ಕಾರ್ಯಕ್ರಮಗಳನ್ನು ತೋರಿಸಲು ಮುಂದಾಗಿ ಏಳು ವರ್ಷ ಪ್ರಾಯದ ೧೨ ಮಕ್ಕಳನ್ನು ಈ ಕಾರ್ಯಕ್ರಮಕ್ಕಾಗಿ ಆಯ್ಕೆ ಮಾಡಲಾಗಿತ್ತು. ಈ ಮಕ್ಕಳನ್ನು ಕುರಿತು ಸಂದರ್ಶನ ನಡೆಸಿ ಕುಟುಂಬ, ವಯಸ್ಸು, ಜೀವನ ಕ್ರಮ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಲಾಗಿತ್ತು. ಈ ಸಂದರ್ಶನಗಳನ್ನು ಸೀರಿಯಲ್ ರೂಪದಲ್ಲಿ ಪ್ರದರ್ಶಿಸಲಾಗಿತ್ತು. ಮುಂದೆ ಪ್ರತಿ ಏಳು ವರ್ಷಕ್ಕೊಮ್ಮೆ ಅವರನ್ನು ಟಿವಿ ಕೇಂದ್ರಕ್ಕೆ ಮತ್ತೆ ಆಮಂತ್ರಿಸಿ, ಈ ನಡುವೆ ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಹೇಗೆ ನಡೆದಿದೆ ಎಂದು ವಿಮರ್ಶೆ ನಡೆಸಿತ್ತು. ಸೆವೆನ್ ಪ್ಲಸ್ ಸೆವನ್, ಟ್ವೆಂಟಿವನ್ ಅಪ್ (೭+೭=೨೧ up)ಎಂಬ ಸಂದರ್ಶನದ ಕಾರ್ಯಕ್ರಮಗಳ ಮೂಲಕ ಈ ಮಕ್ಕಳು ವಿಭಿನ್ನ ಪರಿಸರಗಳಲ್ಲಿ ಹೇಗೆ ಬೆಳೆದು ಬಂದಿದ್ದಾರೆ ಎನ್ನುವ ವಾಸ್ತವ ಚಿತ್ರಣಗಳನ್ನು ವೀಕ್ಷಕರಿಗೆ ಒದಗಿಸಿತ್ತು.

ಮೇಲೆ ವಿವರಿಸಿದ ರಿಯಾಲಿಟಿ ಶೋ ೧೯೬೪ರಲ್ಲಿ ತೋರಿಸಲಾದ ಕಾರ್ಯಕ್ರಮ. ಈಗ ನಾವು ಕಾಣುವ ಮಾದರಿಯ ಆಧುನಿಕ ರಿಯಾಲಿಟಿ ಶೋ ಆರಂಭವಾದದ್ದು ೧೯೭೩ರ "ಆ್ಯನ್ ಅಮೆರಿಕನ್ ಫ್ಯಾಮಿಲಿ" ಎಂಬ ಟಿವಿ ಸೀರಿಯಲ್‌ನಲ್ಲಿ. ವಿವಾಹ ವಿಚ್ಛೇದನ ಪಡೆಯುತ್ತಿರುವ ಒಂದು ಕುಟುಂಬದ ನಾಲ್ವರು ಸದಸ್ಯರ (ತಂದೆ-ತಾಯಿ ಮತ್ತು ಇಬ್ಬರು ಮಕ್ಕಳು) ಬದುಕಿನ ನಿಜ ಚಿತ್ರಣವಾಗಿತ್ತು ಈ ಸಿರಿಯಲ್. ಟಿವಿ ಕ್ಯಾಮರಾಗಳು ಆ ನಾಲ್ವರು ಬಡಪಾಯಿಗಳನ್ನು ಹನ್ನೆರಡು ವಾರಗಳ ಕಾಲ ಹಗಲು ರಾತ್ರಿ ಅನುಸರಿಸಿಕೊಂಡು ಹೋದವು. ಅವರ ಮಾತು, ಜಗಳ ಅಳು, ವಿಷಾದಗಳ ಚಿತ್ರೀಕರಣವನ್ನು ವೀಕ್ಷಕರಿಗೆ ಉಣಿಸಿತು. ಇದರ ಬೆನ್ನಿಗೆ ಬಂದಂತಹ ಫ್ಯಾಮಿಲಿ, ಆಸ್ಟ್ರೇಲಿಯಾದ ಸಿಲ್ವೇನಿಯಾ ವಾಟರ್ಸ್, ೧೯೭೮ರ ಲಿವಿಂಗ್ ಇನ್ ದ್ ಪಾಸ್ಟ್, ೧೯೮೯ರ ಕೋಪ್ಸ್ ಎಂಬ ಅಮೆರಿಕನ್ ಶೋ, ೧೯೭೮ರ ಹಿಂದೆ ಕ್ಯಾಮ್‌ಕೋರ್ಡರ್ ಇರಿಸಿ ಅಪರಾಧಿಗಳನ್ನು ಸೆರೆಹಿಡಿಯುವ ನೈಜ ಚಿತ್ರಣದ ಪರಿಚಯ ಕೊಟ್ಟಿತು. ಕೂತೂಹಲಕಾರಿ ಪತ್ತೆದಾರಿ ಚಲನಚಿತ್ರಗಳನ್ನು ಮೀರಿಸುವಂತೆ ದರ್ಶಕರ ಕೂತೂಹಲ ಕೆರಳಿಸಿತ್ತು. ಡಚ್ ಟೆಲಿವಿಷನ್ ನವೆಂಬರ್ ೨೮, ೧೯೯೭ರಲ್ಲಿ ಸ್ವೀಡನ್‌ನಲ್ಲಿ ತೆರೆಕಂಡ ಎಕ್ಸ್‌ಪೆಡಿಶನ್ ರಾಬಿನ್‌ಸನ್, ಅಮೆರಿಕದ ಸರ್ವೈವರ್, ೧೯೯೫ರಲ್ಲಿ

ಆರಂಭವಾದ ರೋಡ್‌ರೂಲ್ಸ್, ೨೧ನೇ ಶತಮಾನದ ಬಿಗ್‌ಬ್ರದರ್, ಅಮೆರಿಕದಲ್ಲಿ ಅತ್ಯಧಿಕ ವೀಕ್ಷಕರನ್ನು ಗಳಿಸಿದ್ದ ಟೆಂಪ್ಟೇಶನ್ ಐಲೆಂಡ್ (೨೦೦೧-೨೦೦೩) ಇದರಲ್ಲಿ ಅನೈತಿಕತೆ, ಸ್ವೇಚ್ಛಾಚಾರಗಳ ವಿಜೃಂಭಣೆ. ಕೆಲವು ದಂಪತಿಗಳನ್ನು ಮತ್ತು ಇನ್ನೂ ಮದುವೆಯಾಗಿರದ ಜೋಡಿಗಳನ್ನು ಒಂದು ಸುಂದರ ದ್ವೀಪಕ್ಕೆ ಒಯ್ಯಲಾಗಿತ್ತು. ಇವರ ನಡುವೆ ಬಿರುಗಾಳಿ ಎಬ್ಬಿಸಲು ಕೆಲವು ಸೆಕ್ಸೀ ಮಾಡೆಲ್‌ಗಳನ್ನು ಛೂ ಬಿಡಲಾಗಿತ್ತು. ಹಳೆಯ ಜೋಡಿಗಳು ಕಳಚಿಕೊಂಡು ಹೊಸ ಸಂಬಂಧಗಳನ್ನು ಬೆಳೆಸುವುದು. ಜೋಡಿಗಳ ಮೋಸ, ವಂಚನೆ, ಕಪಟ, ಆಕ್ರೋಶ, ನಿಂದನೆಗಳ ಗಮ್ಮತ್ತು ದರ್ಶಕರ ಮನಸ್ಸನ್ನು ಹಿಡಿದಿಟ್ಟುಕೊಳ್ಳಲು ಈ ಮಾದರಿಯ ಕಸರತ್ತು ಮಾಡಲಾಯಿತು.

ಇನ್ನು ಹೊಸತನವನ್ನು ಬಯಸುವ ಜನರಿಗಾಗಿಯೇ ಪ್ರತಿಷ್ಠಿತ ತಾರೆಗಳ ಜೀವನದ ಒಳಗೆ ಹೋಗುವ ಬಯಕೆ. ಇದನ್ನು ತಣಿಸಿದ್ದು ಅನ್ನ ನಿಕೋಲ್ ಶೋ, ಓಸ್ಬೋರ್ನ್, ಟೋಮಿಲಿ ಗೋಸ್‌ಟು ಕಾಲೇಜ್ ಮತ್ತು ಪ್ಲೇಬಾಯ್ ಪತ್ರಿಕೆಯ ಹ್ಯೂಹೆಫ್ನರ್ ನಿರ್ಮಾಣದ ಗರ್ಲ್ಸ್‌ನೆಕ್ಸ್ಟ್ ಡೋರ್ ಸೀರಿಯಲ್. ಅದಲ್ಲದೆ ಹೂವಾಂಟ್ಸ್ ಟು ಬಿ ಎ ಮಿಲೆನಿಯರ್ ಅನ್ನುವಂತಹ ಕಾರ್ಯಕ್ರಮಗಳು ಇದರೊಟ್ಟಿಗೆ ಗಟ್ಟಿ ಗುಂಡಿಗೆಯವರಿಗಾಗಿ ಮಾತ್ರ ಇರುವ ಫಿಯರ್ ಫ್ಯಾಕ್ಟರ್‌ನಲ್ಲಿ ಹಾವು, ಹುಳುಹುಪ್ಪಟೆ, ಜಿರಳೆ, ಕೀಟಗಳನ್ನು ತುಂಬಿಸಿದ ಪೆಟ್ಟಿಗೆಗಳಲ್ಲಿ ಮುಳುಗಿಸುವ ಭೀಭತ್ಸ ಕಾಣಬಹುದು. ಯೂ ಹ್ಯಾವ್ ಗಾಟ ದ ಜಾಬ ದ ಎಪ್ರೆಂಟೀಸ್ ಮುಂತಾದ ಗೇಮಗಳ ಸ್ಪರ್ಧಿಗಳಿಗೆ ಬಹುಮಾನವಾಗಿ ನೌಕರಿಯ ಆಶ್ವಾಸನೆ ಇತ್ತು. ಡಬ್ಲ್ಯೂ ಡಬ್ಲ್ಯೂ ಎಫ್, ಅಲ್ಟಿಮೇಟ್ ಫೈಟರ್ ಮುಂತಾದ ಕುಸ್ತಿ ಸ್ಪರ್ಧೆಗಳೂ ರಿಯಾಲಿಟಿ ಶೋ ಎಂಬ ತಲೆಪಟ್ಟಿ ಹೊತ್ತುಕೊಳ್ಳುತ್ತವೆ. ಇಲ್ಲಿ ಯಾರು ಗೆಲ್ಲುತ್ತಾರೆ ಎಷ್ಟು ನಿಮಿಷಗಳಲ್ಲಿ ಎಷ್ಟು ಬಾರಿ ಹೊಡೆತ ತಿನ್ನುತ್ತಾರೆ ಎನ್ನವುದನ್ನು ಮೊದಲೇ ನಿರ್ಧಾರವಾಗಿರುತ್ತದೆ ಎಂಬುದು ನೋಡುಗರಿಗೆ ತಿಳಿದಿರುವುದಿಲ್ಲ. ಇದನ್ನು ರಿಯಾಲಿಟಿ ಎಂದೇ ಬಿಂಬಿಸಲಾಗುತ್ತದೆ.

ಈ ರಿಯಾಲಿಟಿ ಶೋಗಳು ಜನಪ್ರಿಯತೆ ಮನರಂಜನೆಯ ನೆಪದಲ್ಲಿ ಸಮಾಜದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸುವಂತೆ ಮಾಡಿರುವುದಕ್ಕೆ ಸಾಕ್ಷಿ ಎಂಬಂತೆ ಮೋಸ್ಟ ಹಂಟೆಡ್ ಭೂತಗಳಿವೆ ಎಚ್ಚರಿಕೆ, ಭೂತ ತಜ್ಞರು ಭಯಾನಕ ಭೂತ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ವೈಜ್ಞಾನಿಕ ಉಪಕರಣಗಳ ಮೂಲಕ ಭೂತಗಳನ್ನು ಹುಡುಕುವ, ನಿಗೂಢ ರಹಸ್ಯಗಳನ್ನು ಬಯಲು ಮಾಡುವ ರಿಯಾಲಿಟಿ ಶೋ. ಇಂತಹ ಶೋ ಸಾಮಾನ್ಯ ಜನರ ಮನೋಲೋಕದ ಮೇಲೆ ಎಷ್ಟು ಪ್ರಭಾವ ಬೀರಬಹುದು ಮತ್ತು ಅದರಿಂದ ಜನರ ಜೀವನದ ಮೇಲೆ ಗಂಭಿರವಾದ ಪರಿಣಾಮಗಳು ಆಗಬಹುದಾದ ಸಾಧ್ಯತೆಗಳು ಹೆಚ್ಚು. ಇಂತಹ ಭಯಾನಕವಾದ ಕಾರ್ಯಕ್ರಮಗಳನ್ನು ನೋಡುವ ವೀಕ್ಷಕರಲ್ಲಿ ಸತ್ಯ ಮತ್ತು ಮಿಥ್ಯದ ನಡುವಣ ವ್ಯತ್ಯಾಸ ಗುರುತಿಸದಷ್ಟುಮಟ್ಟಿಗೆ ವಿವೇಚನಾ ಶಕ್ತಿಯನ್ನು ಕಬಳಿಸಿ ಬಿಡುತ್ತವೆ.

ಇನ್ನು ಸ್ವಯಂವರದ ಕಲ್ಪನೆ ಹೊತ್ತು ತಂದಿರುವ ಹೂ ವಾಂಟ್ಸ್ ಟು ಮ್ಯಾರಿ ಎ ಮಿಲಿಯನೇರ (೨೦೦೦) ಇದು ಇಂದಿನ ಎಲ್ಲ ಸ್ವಯಂವರಗಳ ಶೋಗಳ ಮುತ್ತಜ್ಜ ಎಂದೇ

ಹೇಳಬಹುದು. ಇದರಲ್ಲಿ ಕೋಟ್ಯಾಧಿಪತಿ ರಿಕ್‌ರಾಕ್‌ವೆಲ್ ಎಂಬಾತನನ್ನು ಮದುವೆಯಾಗಲು ೧೫ ತರುಣಿಯರ ನಡುವೆ ಸ್ಪರ್ಧೆ ನಡೆದಿತ್ತು. ಹಲವು ಸುತ್ತುಗಳ ಸ್ಪರ್ಧೆಯ ಕೊನೆಯಲ್ಲಿ ಗೆದ್ದಂತಹ ತರುಣಿಗೆ ವಿವಾಹವಾದ ನಂತರ ತಿಳಿದ ಸತ್ಯ ರಿಕ್‌ರಾಕ್‌ವೆಲ್ ನಿಜಕ್ಕೂ ಶ್ರೀಮಂತನಲ್ಲ ಎಂಬುದು. ನಮ್ಮ ಭಾರತೀಯ ದೂರದರ್ಶನದಲ್ಲಿ ಪ್ರಸಾರಗೊಂಡ 'ದೇಸಿಗರ್ಲ್'ನ ವಾಸ್ತವ ಚಿತ್ರಣ 'ದ ಸಿಂಪಲ್ ಲೈಫ್'ನಲ್ಲಿ ತೋರಿಸಲಾಯಿತು. ಈ ಎಲ್ಲಾ ರಿಯಾಲಿಟಿ ಶೋಗಳು ಜನಪ್ರಿಯತೆಯ ಭರಾಟೆಯಲ್ಲಿ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವಲ್ಲಿ ಕೈಜೋಡಿಸುತ್ತಿವೆ. ಯಾವುದೇ ಚಾನೆಲ್‌ನಲ್ಲಿ ಇಂದು ಪ್ರಸಾರಗೊಳ್ಳುವ ರಿಯಾಲಿಟಿ ಶೋಗಳು ಟಿಆರ್‌ಪಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ಲಾಭಗಳಿಕೆಯನ್ನೇ ಮೂಲಮಂತ್ರವಾಗಿಸಿಕೊಂಡು, ಪ್ರಸಾರ ವಾಗುತ್ತಿರುವುದರಿಂದ ಸಮಾಜಕ್ಕೆ ಒಳ್ಳೆಯ ಸಂದೇಶದ ಬದಲು ಕೆಟ್ಟ ಸಂದೇಶಗಳೇ ರವಾನೆಯಾಗುತ್ತಿವೆ. ಇದು ಕೇವಲ ಪಾಶ್ಚಾತ್ಯ ದೇಶಗಳಲ್ಲಿ ಮಾತ್ರ ಪ್ರಸಾರವಾಗದೇ ನಮ್ಮ ದೇಶದಲ್ಲಿಯೂ ಪ್ರಸಾರವಾಗುತ್ತಿದೆ. ಇಂದು ಭಾರತದ ಟಿವಿ ಮಾಧ್ಯಮಗಳಲ್ಲಿಯೂ ಕೂಡಾ ಇಂತಹ ರಿಯಾಲಿಟಿ ಶೋಗಳನ್ನು ಪ್ರಸಾರ ಮಾಡಲಾಗುತ್ತಿದೆ.[೧]

೪.೧. ಭಾರತೀಯ ದೂರದರ್ಶನದಲ್ಲಿ ರಿಯಾಲಿಟಿ ಶೋಗಳ ಪ್ರಾರಂಭ

ಇಂದು ಭಾರತೀಯ ದೂರದರ್ಶನದ ಇತರ ಖಾಸಗಿ ವಾಹಿನಿಗಳಲ್ಲಿ ಪ್ರಸಾರಗೊಳ್ಳುತ್ತಿರುವ ಎಲ್ಲ ಬಗೆಯ ರಿಯಾಲಿಟಿ ಶೋಗಳು ಪಾಶ್ಚಿಮಾತ್ಯರ ಕೊಡುಗೆಗಳೆಂದೇ ಹೇಳಬಹುದು. ಪಾಶ್ಚಿಮಾತ್ಯರನ್ನು ಅನುಸರಿಸುವ ಮೂಲಕ ಅವರು ರೂಪಿಸಿದ ಕಾರ್ಯಕ್ರಮಗಳನ್ನೇ ಯಥಾವತ್ತಾಗಿ ಭಟ್ಟಿ ಇಳಿಸುವ ಕಾರ್ಯವನ್ನು ಖಾಸಗಿ ಮತ್ತು ಆಯಾ ಪ್ರಾದೇಶಿಕ ಭಾಷೆಯ, ವಾಹಿನಿ ಗಳಲ್ಲಿಯೂ ಕೂಡ ಈ ರಿಯಾಲಿಟಿ ಶೋಗಳು ಪ್ರಾರಂಭವಾದವು. ಹೀಗೆ ಪಾಶ್ಚಿಮಾತ್ಯರ ಅನುಕರಣೆಯಿಂದ ಪ್ರಸಾರಗೊಂಡ ಕೆಲವೊಂದು ರಿಯಾಲಿಟಿ ಶೋಗಳನ್ನು ಹೀಗೆ ವಿವರಿಸಬಹುದಾಗಿದೆ.

೧. ಬಿಗ್‌ಬ್ರದರ್ – ಬಿಗ್‌ಬಾಸ್ (ಕಲರ್ಸ್ ಚಾನೆಲ್)

೨. ರೋಡ್‌ರೂಲ್ಸ್ – ರೋಡೀಸ್ (ಎಮ್‌ಟಿವಿ)

೩. ಹೂ ವಾಂಟ್ಸ್ ಟು ಬಿ ಎ ಮಿಲಿಯನೇರ್ – ಕೌನ್‌ಬನೇಗಾ ಕರೋಡಪತಿ (ಸೋನಿ ಟಿವಿ)

೪. ಅಮೆರಿಕನ್ ಐಡಲ್ – ಇಂಡಿಯನ್ ಐಡಲ್ (ಸೋನಿ ಟಿವಿ)

೫. ಫಿಯರ್ ಫ್ಯಾಕ್ಟರ್ – ಇಸ್ ಜಂಗಲ್‌ಸೇ ಮುಜೆ ಬಚಾವೊ (ಸೋನಿ ಟಿವಿ)

೬. ಹೂ ವಾಂಟ್ಸ್ ಟು ಮ್ಯಾರಿ ಎ ಮಿಲಿಯನೇರ – ಸ್ವಯಂವರ (ಎನ್‌ಡಿಟಿವಿ)

೭. ದ ಸಿಂಪಲ್ ಲೈಫ್ – ದೇಸಿ ಗರ್ಲ್ (ಎನ್‌ಡಿಟಿವಿ)

೮. ಲಿವಿಂಗ್ ಇನ್‌ದ ಪಾಸ್ಟ್ – ರಾಝು ಪಿಛಲೇ ಜನ್ಮಕಾ (ಎನ್‌ಡಿಟಿವಿ)

ಇವು ಕೆಲವೊಂದು ರಿಯಾಲಿಟಿ ಶೋಗಳು ಭಾರತೀಯ ಅವತರಣಿಕೆಯಲ್ಲಿ ಮೂಡಿ ಬಂತಹ ಕಾರ್ಯಕ್ರಮಗಳಾಗಿವೆ. ಇಂತಹ ಕಾರ್ಯಕ್ರಮಗಳಲ್ಲಿ ಯಶಸ್ವೀ ರಿಯಾಲಿಟಿ ಶೋಗಳನ್ನು ಉದಾಹರಣೆಯಾಗಿ ನೋಡುವುದಾದರೆ ಇಂಡಿಯನ್ ಐಡೀಲ್, ಕೌನ್‌ಬನೇಗಾ ಕರೋಡಪತಿ, ಬಿಗ್‌ಬಾಸ್ ಇವು ಭಾರತದ ಸರ್ವಕಾಲೀನ ಯಶಸ್ವಿ ರಿಯಾಲಿಟಿ ಶೋಗಳು. ಇವುಗಳ ಜನಪ್ರಿಯತೆ ಹೆಚ್ಚಾಗಿರುವುದರಿಂದಲೇ ಅನೇಕ ಸೀಸನ್(ಭಾಗ)ಗಳಲ್ಲಿ ಪ್ರಸಾರ ಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ೨೦೦೩ರಲ್ಲಿ ಭಾರತೀಯ ಚಾನೆಲ್‌ಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಟಿಆರ್‌ಪಿ ಗಳಿಸಿದ್ದ ರಿಯಾಲಿಟಿ ಶೋಗಳ ಒಂದು ಸ್ಥೂಲವಾದ ನೋಟ ಗಮನಿಸುವುದಾದರೆ; ಅದರಲ್ಲಿ ಮೊದಲಿಗೆ ಬರುವುದು ಎಮ್ ಟಿವಿಯ ರೋಡಿಸ್. ಇದು ಪಾಶ್ಚಾತ್ಯರಲ್ಲಿ ಜನಪ್ರಿಯವಾಗಿದ್ದ ರೋಡರೂಲ್ಸನ ಹಿಂದಿಯ ಅವತರಣಿಕೆಯಾಗಿದ್ದು; ಇಲ್ಲಿ ಉತ್ಸಾಹಿ ತರುಣ ತರುಣಿಯರನ್ನು ಎಲ್ಲೆಲ್ಲೋ ಒಯ್ದು ಅಪಾಯಕಾರಿ ಆಟಗಳಲ್ಲಿ ತೊಡಗಿಸಿ ಮೋಜು ನೋಡುವ ಗೇಮ್ ಶೋ ಇದಾಗಿತ್ತು. ಇದು ಒಂದು ಆಟ ಎನ್ನುವುದಕ್ಕಿಂತ, ಭಾಗವಹಿಸಿದ ಸ್ಪರ್ಧಿಗಳ ಮಧ್ಯೆ ನಡೆಯುವ ಶೀತಲ ಸಮರ, ಬೈದಾಟ, ಜಗಳಾಟ, ಬಿಪ್ ಧ್ವನಿಗಳದ್ದೆ ಹೆಚ್ಚಿನ ಕಾರುಬಾರಾಗಿತ್ತು. ಇದೇ ಹೋಲಿಕೆಯನ್ನು ಬೇರೊಂದು ಮಗ್ಗಲಾಗಿ ಪ್ರಸಾರವಾಗಿದ್ದು. ಇಸ್ ಜಂಗಲ್ ಸೇ ಮುಝೇ ಬಚಾವೊ ಕಾರ್ಯಕ್ರಮವಾಗಿದೆ.

ಇಸ್ ಜಂಗಲ್ ಸೇ ಮುಝೇ ಬಚಾವೊ

ಇದರಲ್ಲಿ ಭಾಗವಹಿಸಿದವರೆಲ್ಲ ಕಿರುತರೆಯ ಖ್ಯಾತ ತಾರಾಮಣಿಗಳು ಅಪಾಯಕಾರಿ ಯಾದಂತಹ ಸನ್ನಿವೇಶಗಳಲ್ಲಿ ಒದ್ದಾಡುವುದು. ಹುಳ-ಹುಪ್ಪಟೆಗಳನ್ನು ಜಗಿಯುವುದು. ಸತ್ತ ಇಲಿಯನ್ನು ಸುಟ್ಟು ತಿನ್ನುವುದು. ಕಠಿಣವಾದ ಕೆಲಸಗಳನ್ನು ಮಾಡುವುದು. ತಾವಾಗಿಯೇ ಅಡುಗೆ ತಯಾರಿಸಲು ಬೇಕಾಗುವ ಸಾಮಾನುಗಳನ್ನು ಹುಡುಕಿ ತಂದು ಬೇಯಿಸುವುದು. ಕಾಡಿನ ಮಧ್ಯೆ ಚಳಿ, ಗಾಳಿ, ಮಳೆಯಲ್ಲಿ ಯಾವುದೇ ಕಟ್ಟಡಗಳಿಲ್ಲಂತಹ ವ್ಯವಸ್ಥೆಯಲ್ಲಿ ವಾಸ ಮಾಡುವುದು. ಈ ಶೋಧದ ಮುಖ್ಯ ಉದ್ದೇಶವಾಗಿತ್ತು. ಇದು ಕೂಡ ಪಾಶ್ಚಾತ್ಯರಿಂದ ಎರವಲು ಪಡೆದದ್ದೇ ಆಗಿದೆ.

ಸಚ್‌ಕಾ ಸಾಮನಾ

ಭಾರತೀಯ ಟಿವಿಯಲ್ಲಿ ಕಾಣಿಸಿಕೊಂಡ ಅತಿ ವಿವಾದಾಸ್ಪದ ಶೋ ಇದು. ಲೈ ಡಿಟೆಕ್ಟರ್ ತಂತಿಗಳನ್ನು ಮೈಗೆ ಅಂಟಿಸಿಕೊಂಡು ಹಾಟ್ ಸೀಟ್‌ನಲ್ಲಿ ಕುಳಿತ ಸೆಲೆಬ್ರಿಟಿ ಸ್ಪರ್ಧಿಗಳು ಅತಿಥೇಯ ರಾಜೀವ್ ಖಂಡೇಲ್‌ವಾಲಾರ ಮನಸ್ಸಿಗೆ ಚುಚ್ಚುವಂತಹ ಮಾರ್ಮಿಕವಾದ, ತೀರಾ ಖಾಸಗಿ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅದಕ್ಕೆ ಉತ್ತರ ಕೊಡಲೇಬೇಕಾಗಿತ್ತು. ಅವರು ಸುಳ್ಳು ಹೇಳಿದರೆ ಲೈ ಡಿಟೆಕ್ಟರ ಪತ್ತೆ ಹಚ್ಚುತ್ತಿತ್ತು. ಪತಿ/ಪತ್ನಿಯ ಮುಂದೆ ಪ್ರಣಯ ವ್ಯವಹಾರಗಳು, ಗುಪ್ತ ಕಾಮನೆಗಳ ಗುಟ್ಟು ಬಿಚ್ಚುವುದೆಂದರೆ ಸಾಮಾನ್ಯವೇ? ಈ ಕಾರ್ಯಕ್ರಮದಲ್ಲಿ ಕಿರುತರೆಯ ಕಲಾವಿದರು. ಬೆಳ್ಳಿತೆರೆಯ ನಾಯಕ/ಕಿಯರು. ಕ್ರಿಕೆಟಿಗರು ಒಂದು ರೋಮಾಂಚಕಾರಿ

ಸತ್ಯಗಳ ಸರಮಾಲೆ ಅವರ ಮನೆಯವರನ್ನು ಬೆಚ್ಚಿ ಬೀಳಿಸಿದ್ದವು. ಇದನ್ನು ವೀಕ್ಷಿಸಿದ ಪ್ರೇಕ್ಷರನ್ನು ಹುಚ್ಚೆಬ್ಬಿಸಿತ್ತು. ಈ ಮೂಲಕ ಶೋ ಯಶಸ್ವಿಯಾಗಿತ್ತು. ಆದರೆ ಹಲವು ಆಕ್ಷೇಪಣೆ, ಪ್ರತಿಭಟನೆಗಳನ್ನು ಎದುರಿಸಿದ ಪರಿಣಾಮದಿಂದಾಗಿ ಈ ಕಾರ್ಯಕ್ರಮ ಅರ್ಧದಲ್ಲೇ ನಿಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪ್ರಸಾರಗೊಂಡ ಸಂಚಿಕೆಯಲ್ಲಿ ಒಬ್ಬ ಪ್ರಭಾವಿ ವ್ಯಕ್ತಿಯನ್ನು ಕರೆತಂದು, ಅತಿಥೇಯ ಕೇಳುವ, ಸಾರ್ವಜನಿಕ ವಿಷಯಗಳು, ಖಾಸಗಿ ವಿಷಯಗಳು ಮತ್ತು ಕೆಲವು ತೀರಾ ವೈಯಕ್ತಿಕ ವಿಚಾರಗಳ ಕುರಿತು ಪ್ರಶ್ನೆ ತೆರೆಯ ಮೇಲೆ ಕೇಳುತ್ತಿದ್ದರೆ, ಅದನ್ನು ವೀಕ್ಷಿಸುತ್ತಿದ್ದ ವೀಕ್ಷಕರ ಮೈನವಿರೇಳುತ್ತಿತ್ತು. ಯಾವ ರೀತಿಯಾದ ಉತ್ತರ ಬರಬಹುದು? ಉತ್ತರ ಸರಿಯಾಗಿದೆಯಾ? ತಪ್ಪಾಗಿದೆಯಾ? ಆ ಪ್ರಭಾವಿ ವ್ಯಕ್ತಿಯ ಹಾವ ಭಾವ ಹೇಗೆ? ಇಲ್ಲಿ ಉತ್ತರಿಸಿದ ಉತ್ತರಗಳಿಂದ ಅವನ/ಳ ಖಾಸಗಿ ಬದುಕಿನ ಮೇಲೆ ಯಾವ ಪರಿಣಾಮ ಬೀರಬಹುದು? ಎಂಬಂತಹ ಪ್ರಶ್ನೆಗಳ ಸರಮಾಲೆ ಹೊತ್ತು ಕುತೂಹಲ ಭರಿತ ನಿರೀಕ್ಷೆ ವೀಕ್ಷಕರದ್ದಾಗಿತ್ತು. ಹೀಗೆ ವೀಕ್ಷಕರನ್ನು ಕಾರ್ಯಕ್ರಮ ಬಿಟ್ಟು ಹೋಗದಂತೆ ಕೂಡಿಸುವಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತು. ಕೆಲವೊಂದು ಹಿಂದಿ ರಿಯಾಲಿಟಿ ಶೋಗಳನ್ನು ಅನುಸರಿಸಿಕೊಂಡು ಕನ್ನಡದಲ್ಲಿಯೂ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು ಪ್ರಾರಂಭವಾಯಿತು.

೪.೨. ಕನ್ನಡದಲ್ಲಿ ರಿಯಾಲಿಟಿ ಶೋಗಳ ಪ್ರಾರಂಭ

ಒಂದು ಕಾಲದಲ್ಲಿ ಧಾರಾವಾಹಿಗಳು ಪಡೆದುಕೊಂಡಿದ್ದ ಜನಪ್ರಿಯತೆಯನ್ನು ಇಂದು ರಿಯಾಲಿಟಿ ಶೋಗಳು ಪಡೆದುಕೊಳ್ಳುತ್ತಿವೆ. ಸಮಾಜ ಹೇಗೆ ನಿತ್ಯ ಪರಿವರ್ತನಶೀಲವಾಗಿದೆಯೋ, ಹಾಗೇ ಇದೇ ಸಿದ್ಧಾಂತವನ್ನು ದೃಶ್ಯ ಮಾಧ್ಯಮಗಳು ಕೂಡಾ ಅಳವಡಿಸಿಕೊಂಡು ನಿತ್ಯ ಪರಿವರ್ತನಶೀಲವಾಗುತ್ತಿವೆ. ಆಗೆಲ್ಲ ಪ್ರಸಾರವಾಗುವ ಧಾರಾವಾಹಿಗಳು ಮಹಿಳಾ ವೀಕ್ಷಕರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿತ್ತು. ಈಗ ಕಾಲ ಬದಲಾಗಿದೆ. ದೃಶ್ಯ ಮಾಧ್ಯಮವಾದ ದೂರದರ್ಶನವು ಇಂದು ಕಾರ್ಯಕ್ರಮಗಳಲ್ಲಿ ನವೀನತೆಯೊಂದಿಗೆ ಕಾರ್ಯಕ್ರಮಗಳ ರೂಪರೇಷೆಗಳಲ್ಲಿ ಬದಲಾವಣೆ ತಂದುಕೊಳ್ಳುತ್ತಿದೆ. ಅದಕ್ಕೆ ಸೂಕ್ತವಾದ ಉದಾಹರಣೆ ಎಂದರೆ ಇತ್ತೀಚಿನ ದಿನಗಳಲ್ಲಿ ಪ್ರಸಾರವಾಗುತ್ತಿರುವ ರಿಯಾಲಿಟಿ ಶೋಗಳು. ಈ ರಿಯಾಲಿಟಿ ಶೋಗಳ ಪ್ರಾರಂಭ, ಉಗಮ ಮತ್ತು ಬೆಳವಣಿಗೆಯನ್ನು ಕುರಿತು ಈಗಾಗಲೇ ಚರ್ಚಿಸಲಾಗಿದ್ದು; ಈ ರಿಯಾಲಿಟಿ ಶೋಗಳು ಕನ್ನಡದಲ್ಲಿ ಪ್ರಸಾರವಾದ ಹಿನ್ನೆಲೆಯನ್ನು ಕುರಿತು ಈ ಭಾಗದಲ್ಲಿ ಚರ್ಚಿಸಲಾಗಿದೆ.

ರಿಯಾಲಿಟಿ ಶೋಗಳು ೧೭ ಮತ್ತು ೧೮ನೇ ಶತಮಾನದಲ್ಲಿ ಪ್ರಾರಂಭಗೊಂಡಿದ್ದರೂ, ತೀರಾ ಇತ್ತೀಚಿನ ದಿನಗಳಲ್ಲಿ ಜನಪ್ರಿಯತೆಗೆ ಪಾತ್ರವಾಗುತ್ತಿವೆ. ಕನ್ನಡದಲ್ಲಿಯೂ ಕೂಡ ಅನೇಕ ರಿಯಾಲಿಟಿ ಶೋಗಳು ಆರಂಭಗೊಂಡಿದ್ದವು. ಅವು ಹಾಡು, ಕುಣಿತ, ಆಟಗಳು, ಹೀಗೆ ಭಿನ್ನ ವಿಷಯಗಳನ್ನು ಆಯ್ದುಕೊಂಡು ರಿಯಾಲಿಟಿ ಶೋಗಳಾಗಿ ಪ್ರಸಾರ ಮಾಡಲಾಯಿತು. ಕನ್ನಡದಲ್ಲಿ ಪ್ರಸಾರವಾಗುವುದಕ್ಕಿಂತಲೂ ಮೊದಲು ಇಂಗ್ಲೀಷ್‌ನಲ್ಲಿ ಅಲ್ಲಿಂದ ಹಿಂದಿಗೆ,

ಮುಂದೆ ಕನ್ನಡಕ್ಕೆ ಹೀಗೆ ಭಟ್ಟಿ ಇಳಿಸುವ ಕಾರ್ಯಕ್ರಮಗಳು ಪ್ರಾರಂಭವಾದವು. ಹೀಗೆ ಭಟ್ಟಿ ಇಳಿಸಿದ ಕಾರ್ಯಕ್ರಮಗಳಲ್ಲಿ ಕನ್ನಡದ ಸುವರ್ಣವಾಹಿನಿಯಲ್ಲಿ ಹಿರಿಯ ನಟಿ ಲಕ್ಷ್ಮಿ ಅವರು ನಡೆಸಿಕೊಡುತ್ತಿದ್ದ "ಕಥೆ ಅಲ್ಲ ಜೀವನ", ಝೀ ಕನ್ನಡದಲ್ಲಿ ನಟ ಮಾಳವಿಕಾ ಅವಿನಾಶ ಅವರು ನಡೆಸಿಕೊಡುತ್ತಿದ್ದ "ಬದುಕು ಜಟಕಾಬಂಡಿ". ಕಸ್ತೂರಿ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ "ಇದು ಯಾರು ಬರೆದ ಕಥೆಯೋ", ನಟಿ ತಾರಾ ಅವರು ನಡೆಸಿಕೊಡುತ್ತಿದ್ದರು. ಈ ಕಾರ್ಯಕ್ರಮಗಳು, ಸ್ಟಾರ್‌ಪ್ಲಸ್ ವಾಹಿನಿಯಲ್ಲಿ ಸೋಮವಾರದಿಂದ ಗುರುವಾರದವರೆಗೂ ರಾತ್ರಿ ೧೦.೩೦ ಘಂಟೆಗೆ (೨೦೦೯-೨೦೧೧) ಪ್ರಸಾರವಾಗುತ್ತಿದ್ದ, "ಆಫ್ ಕಿ ಕಛೇರಿ ಕಿರಣ ಕೇ ಸಾಥ್". ಕಾರ್ಯಕ್ರಮದ ಪ್ರಸಾರದ ಸ್ವರೂಪದಲ್ಲಿತ್ತು.

ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಜನರು ತಮ್ಮ ತೊಂದರೆಗಳನ್ನು, ಕಷ್ಟಗಳನ್ನು, ದುಃಖ, ದುಮ್ಮಾನಗಳನ್ನು, ಕಿರಣ ಅವರ ಮುಂದೆ ಬಿಚ್ಚಿಡುತ್ತಿದ್ದರು. ಕೌಟುಂಬಿಕ ವ್ಯಾಜ್ಯಗಳಿಗೆ, ಆಸ್ತಿಯಲ್ಲಿ ಪಾಲು ಬೇಡಿ ಬಂದವರು, ಅತ್ತೆ ಸೊಸೆಯರ ಜಗಳ, ಗಂಡ-ಹೆಂಡತಿಯ ವೈಮನಸ್ಸು, ಕಲಹ, ವರದಕ್ಷಿಣೆ ಕಿರುಕುಳ, ಹೀಗೆ ನಮ್ಮ ಸುತ್ತ ಮುತ್ತಲಿನ ಜನರ ಬದುಕಿನಲ್ಲಾಗುವ ಕಹಿ ಘಟನೆಗಳನ್ನೇ ಈ ವೇದಿಕೆಯಲ್ಲಿ ಚರ್ಚಿಸಲಾಗುತ್ತಿತ್ತು. ಸಮಸ್ಯೆಗಳಿಗೆ ಸೂಕ್ತವಾದ ನ್ಯಾಯ, ಪರಿಹಾರ ಮತ್ತು ಮಾರ್ಗದರ್ಶನವನ್ನು ಬೇಡಿ ಬಂದಂತಹ ಜನರಿಗೆ, ಅವರು ಅನುಭವಿಸುತ್ತಿರುವ ಸಮಸ್ಯೆಯ ಕುರಿತು ಕೂಲಂಕುಷವಾದ ಮಾಹಿತಿಯನ್ನು ಸಂಗ್ರಹಿಸಿ, ಯಾರು, ಯಾರಿಗೆ ಮೋಸ ಮಾಡುತ್ತಿದ್ದಾರೆ? ಯಾರಿಂದ ಯಾರಿಗೆ ವಂಚನೆಯಾಗಿದೆ? ಯಾರು ಸುಳ್ಳು, ಯಾರು ನಿಜ? ಎಂಬುದನ್ನು ತಿಳಿಯಲು, ಅವರಿಗೆ ಕಟಕಟೆಯಲ್ಲಿ ನಿಲ್ಲಿಸಿ ಪ್ರಶ್ನೆ ಕೇಳಲಾಗುತ್ತಿತ್ತು. ವಿಚಾರಣೆಯ ನಂತರ ಯಾರು ಸುಳ್ಳು ಯಾರು ನಿಜ ಎಂದು ತಿಳಿದ ಮೇಲೆ ಅವರ ಸಮಸ್ಯೆಗೆ ಕಾನೂನು ರೀತ್ಯ ಸಾಂತ್ವಾನ ಹೇಳಲಾಗುತ್ತಿತ್ತು. ಅವರು ಮುಂದೆ ಯಾವ ರೀತಿ ಬದುಕುತ್ತಾರೆ ಎಂದು ತಿಳಿಯಲು ಒಂದು ಸ್ವಯಂಸೇವಾ (ಎನ್.ಜಿ.ಒ) ಸಂಸ್ಥೆಗೆ ಒಪ್ಪಿಸಲಾಗುತ್ತಿತ್ತು ಮತ್ತು ಅವರಿಗೆ ೨೦.೦೦೦ ರೂಪಾಯಿಗಳನ್ನು ಸಹಾಯಧನವಾಗಿ ಕೊಡಲಾಗುತ್ತಿತ್ತು. ಈ ಕಾರ್ಯಕ್ರಮವನ್ನು ಐ.ಪಿ.ಎಸ್. ಅಧಿಕಾರಿಯಾಗಿದ್ದ ಕಿರಣಬೇಡಿ ಅವರು ನಡೆಸಿಕೊಡುತ್ತಿದ್ದರು. ಅವರು ಸಮಸ್ಯೆಯನ್ನು ಬಗೆಹರಿಸುವ ವಿಧಾನದಿಂದ ಪ್ರೇರಿತರಾದ ಹಲವರು ರಾತ್ರಿ ೧೦.೩೦ಕ್ಕೆ ಈ ಕಾರ್ಯಕ್ರಮ ಪ್ರಸಾರವಾಗುತ್ತಿದ್ದರೂ ಕಾರ್ಯಕ್ರಮವನ್ನು ನೋಡಿಯೇ ಮಲಗುತ್ತಿದ್ದರು. ಇದು ಈ ಕಾರ್ಯಕ್ರಮದ ಜನಪ್ರಿಯತೆಯನ್ನು ಸಹ ತೋರಿಸಿ ಕೊಡುತ್ತದೆ. ಹೀಗೆ ಹಿಂದಿಯಲ್ಲಿ ಪ್ರಸಾರವಾದ ಕಾರ್ಯಕ್ರಮವನ್ನೇ ಭಟ್ಟಿ ಇಳಿಸುವ ವಿಧಾನವನ್ನು ಕನ್ನಡದಲ್ಲಿಯೂ ಅನುಸರಿಸಲಾಯಿತು. ಅದು ಕನ್ನಡದಲ್ಲಿ ಬದುಕು ಜಟಕಾ ಬಂಡಿಯೆಂದು ಹೆಸರು ಪಡೆಯಿತು.

೪.೨.೧. ಬದುಕು ಜಟಕಾ ಬಂಡಿ

ಹಿಂದಿಯಲ್ಲಿ ಪ್ರಸಾರವಾದ "ಆಫ್ ಕಿ ಕಛೇರಿ ಕಿರಣ ಕೇ ಸಾಥ್" ಕಾರ್ಯಕ್ರಮದಂತೆ ಝೀ ಕನ್ನಡವಾಹಿನಿಯಲ್ಲಿ ಪ್ರತಿ ಸೋಮವಾರದಿಂದ ಶುಕ್ರವಾರದವರೆಗೂ ಪ್ರತಿ ರಾತ್ರಿ ೭.೦೦

ಘಂಟೆಯಿಂದ ೮.೦೦ ಘಂಟೆಗೆಯವರೆಗೂ(ಪ್ರಸಾರದ ಸಮಯವನ್ನು ಹಲವು ಬಾರಿ ಬದಲಾವಣೆಯನ್ನು ಮಾಡಿದ್ದುಂಟು) ೨೦೦೯ ಪ್ರಸಾರವಾಗುತ್ತಿದ್ದ ಕಾರ್ಯಕ್ರಮವನ್ನು ಖ್ಯಾತ ನಟಿ ಮತ್ತು ವಕೀಲರಾಗಿರುವ ಮಾಳವಿಕಾ ಅವಿನಾಶ ಅವರು ನಡೆಸಿಕೊಡುತ್ತಿದ್ದರು. ಈ ಕಾರ್ಯಕ್ರಮದಲ್ಲಿಯೂ ಕೂಡ ಕೌಟುಂಬಿಕ ಸಮಸ್ಯೆ, ಕೌಟುಂಬಿಕ ಹಿಂಸೆ, ವರದಕ್ಷಿಣೆ ಕಿರುಕುಳ, ಆಸ್ತಿಯ ವ್ಯಾಜ್ಯ ಅನೈತಿಕ ಸಂಬಂಧಗಳು, ಎರಡು ಮೂರು ಮದುವೆ ಮಾಡಿಕೊಂಡಿರುವವರು. ತಂದೆಯನ್ನು ಕಳೆದುಕೊಂಡವರು, ಗಂಡ-ಹೆಂಡತಿಯ ಮಧ್ಯೆ ಕೂಸು ಬಡವಾಯಿತು ಎನ್ನುವ ಮಾತಿನಂತೆ ಮಕ್ಕಳ ಪರಿಸ್ಥಿತಿ. ಒಟ್ಟನಲ್ಲಿ "ಎಲ್ಲರ ಮನೆ ದೋಸೆ ತೂತು" ಎಂಬಂತೆ ಈ ವೇದಿಕೆಯಲ್ಲಿ ತಮ್ಮ ಸಮಸ್ಯೆಯನ್ನು ಹೇಳಿಕೊಂಡು ರಾಜ್ಯದ ಹಲವು ಜಿಲ್ಲೆಗಳಿಂದ ನ್ಯಾಯ ಬೇಡಿ ಜನರು ಇಲ್ಲಿಗೆ ಬಂದಿದ್ದರು. ವಕೀಲರಾಗಿರುವ ಮಾಳವಿಕಾ ಅವಿನಾಶ, ಸೂಕ್ತವಾದ ಮಾರ್ಗದರ್ಶನವನ್ನು ನೀಡುತ್ತಿದ್ದರು. ಪ್ರಾರಂಭದ ಸಂಚಿಕೆಗಳು ತುಂಬಾ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿದ್ದವು. ಆದರೆ ಕಾರ್ಯಕ್ರಮ ಮುಂದುವರೆದಂತೆ ಸಮಸ್ಯೆಗೆ ನ್ಯಾಯ ಬೇಡಿ ಬಂದಂತಹ ಜನರು ವೇದಿಕೆಯ ಮೇಲೆಯೇ ಅವಾಚ್ಯ ಮತ್ತು ಅಶ್ಲೀಲ ಶಬ್ದಗಳಿಂದ ಬೈಯ್ದಾಡಿಕೊಂಡು ಚಪ್ಪಲಿಯಿಂದ ಹೊಡೆದಾಡುವುದಕ್ಕೆ ಪ್ರಾರಂಭಿಸಿದರು. ಹೀಗೆ ಹೊಡೆದಾಟ ಬಡಿದಾಟಗಳನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗದೆ ಇದ್ದಾಗ ನಿರೂಪಕಿ ಮಾಳವಿಕಾ ಅವಿನಾಶ ಅವರು ವೇದಿಕೆ ಬಿಟ್ಟು ಹೊರನಡೆದ ಪ್ರಸಂಗಗಳು ನಡೆದವು. ಕಾರ್ಯಕ್ರಮದ ರೂಪು ರೇಷೆಗಳು, ಗುರಿ ಉದ್ದೇಶಗಳೇ ಗಾಳಿಗೆ ತೂರಾಡಿ ಹೋದವು. ಇದು ಬದುಕು ಜಟಕಾ ಬಂಡಿಯ ಕಥೆಯಾದರೆ. ಇದೆ ರೂಪು ರೇಷೆಗಳು, ಗುರಿ ಉದ್ದೇಶಗಳನ್ನು ಹೊಂದಿರುವಂತಹ ಇನ್ನೊಂದು ಕಾರ್ಯಕ್ರಮ ಸುವರ್ಣ ವಾಹಿನಿಯಲ್ಲಿಯೂ ಪ್ರಸಾರವಾಯಿತು,

೪.೨.೨. ಕಥೆ ಅಲ್ಲ ಜೀವನ

ಸುವರ್ಣ ವಾಹಿನಿಯಲ್ಲಿಯೂ ಕೂಡ ಇಂತಹದೊಂದು ಪ್ರಯೋಗ ಆರಂಭವಾಯಿತು. ಹಿರಿಯ ಚಿತ್ರ ನಟಿ, ಬಹು ಭಾಷಾ ತಾರೆಯಾದ ಲಕ್ಷ್ಮೀ ಅವರು ನಡೆಸಿಕೊಡುತ್ತಿದ್ದ ಈ ಕಾರ್ಯಕ್ರಮ ಸೋಮವಾರದಿಂದ, ಶುಕ್ರವಾರದವರೆಗೂ ರಾತ್ರಿ ೮ ಘಂಟೆಯಿಂದ "ಕಥೆ ಅಲ್ಲ ಜೀವನ" ಪ್ರಾರಂಭವಾಯಿತು. "ಕಥೆ ಅಲ್ಲ ಜೀವನ" ತಮಿಳಿನ "ಕಥೆಯಲ್ಲೈ ನಿಜಂ" ಈ ಕಾರ್ಯಕ್ರಮದ ಕನ್ನಡ ಅವತರಣಿಕೆ ಆಗಿತ್ತು. ಹಿರಿತೆರೆ ಮೇಲೆ ತಮ್ಮ ಅದ್ಭುತವಾದ ಅಭಿನಯದಿಂದ ಜನಪ್ರಿಯರಾಗಿದ್ದ ಲಕ್ಷ್ಮಿ ಅವರು ಕಿರುತೆರೆಗೆ ಈ ಕಾರ್ಯಕ್ರಮದ ಮೂಲಕ ಪಾದಾರ್ಪಣೆ ಮಾಡಿದರೂ ಈ ಕಾರ್ಯಕ್ರಮದಲ್ಲಿಯೂ ಸಮಸ್ಯೆಯೆಂದು ಬಂದವರಿಗೆ ಪರಿಹಾರವನ್ನು ಒದಗಿಸುವ ಕಾರ್ಯ ನಡೆಯಿತು. ಬಾಲ್ಯದಲ್ಲಿ ತನ್ನನ್ನು ತೊರೆದು ಹೋಗಿರುವ ತಾಯಿಯನ್ನು ಹುಡುಕಿಕೊಡಬೇಕೆಂದು ಕೇಳಿಕೊಂಡು ಬಂದ ಮಗ. ಅಂಗವಿಕಲೆಯಾಗಿ ಹುಟ್ಟಿರುವ ಕಾರಣದಿಂದ ಬಾಲ್ಯದಲ್ಲಿಯೇ ಮನೆಯ ಹೊರಗೆ ಹಾಕಿದ ತಂದೆ ತಾಯಿಗಳಿಗೆ ೧೫ ವರ್ಷದ ನಂತರ ತಮ್ಮ ತಪ್ಪಿನ ಅರಿವಾಗಿ ಮತ್ತೆ ಮಗಳನ್ನು ಸೇರಲು ಬಂದ ತಂದೆ

ತಾಯಿಗಳು, ಕೌಟುಂಬಿಕ ಹಿಂಸೆ, ಗಂಡ ಹೆಂಡತಿಯರ ಅನೈತಿಕ ಸಂಬಂಧ, ಆಸ್ತಿಯ ಜಗಳ; ಹೀಗೆ ದಿನನಿತ್ಯದ ಜಂಜಾಟಗಳಿಗೆ ಇದು ಕೂಡಾ ವೇದಿಕೆಯಾಯಿತು. ಈ ವೇದಿಕೆಯಲ್ಲಿ ಪ್ರಸಾರವಾದ ಸಂಚಿಕೆಗಳಲ್ಲಿ ಎರಡು ಸಂಚಿಕೆಗಳು ಬಹಳ ಹೃದಯ ಸ್ಪರ್ಶಿಯಾಗಿದ್ದವು. ಆ ಸಂಚಿಕೆಗಳು ವೀಕ್ಷಕರಿಗೆ ಒಂದು ಆದರ್ಶವಾಗಿ ನಿಲ್ಲುತ್ತವೆ. ಮೊದಲನೆಯದು ರಾಮಕುಮಾರ ಮತ್ತು ಪದ್ಮಶ್ರೀ ದಂಪತಿಗಳದ್ದು ದಿನಾಂಕ ೧೪.೦೧.೨೦೧೦ರ ಸಂಚಿಕೆಯಲ್ಲಿ ರಾಮಕುಮಾರ ಮತ್ತು ಪದ್ಮಶ್ರೀ ದಂಪತಿಗಳು ಭಾಗವಹಿಸಿದ್ದರು. ರಾಮಕುಮಾರ ಬ್ಯಾಂಕೊಂದರಲ್ಲಿ ಉದ್ಯೋಗಿಯಾಗಿದ್ದರು. ಈ ದಂಪತಿಗಳು ಡಾ. ರಾಜ್‌ಕುಮಾರ ಅವರ ಕಟ್ಟಾ ಅಭಿಮಾನಿಗಳಾಗಿದ್ದು ಡಾ. ರಾಜ್‌ಕುಮಾರರ ಚಲನಚಿತ್ರಗಳನ್ನು ನೋಡಿ ತಮ್ಮ ಜೀವನದಲ್ಲಿ ಆದರ್ಶವನ್ನು ಪಾಲಿಸಿಕೊಂಡು ಬಂದವರೆಂದು ಹೇಳಿಕೊಂಡಿದ್ದರು.

ಪದ್ಮಶ್ರೀ ಅವರ ಮದುವೆಯಾದಾಗ ೨೨ ವರ್ಷ ವಯಸ್ಸಿನವರಾಗಿದ್ದರು ಮದುವೆಯಾದ ವರ್ಷದೊಳಗೆ ಒಂದು ಮಗುವಿನ ತಾಯಿಯಾದರೂ ಎಲ್ಲ ಹೆಣ್ಣುಮಕ್ಕಳು ತಾಯ್ತನವನ್ನು ವರವೆಂದು ಭಾವಿಸಿದರೆ(ಇದು ಎಲ್ಲ ಹೆಣ್ಣುಮಕ್ಕಳ ಅಭಿಪ್ರಾಯ ಆಗದೆ ಇರಬಹುದು) ಅದು ಪದ್ಮಶ್ರೀ ಅವರ ಬಾಳಿಗೆ ಶಾಪವಾಯ್ತು. ಕಾರಣ ಇವರ ಹೆರಿಗೆ ಶಸ್ತ್ರಚಿಕಿತ್ಸೆ (ಸಿಸರಿಯನ್) ಯ ಮೂಲಕ ಹೆರಿಗೆಯಾಯ್ತು. ಶಸ್ತ್ರಚಿಕಿತ್ಸೆ ನಡೆಯುತ್ತಿದ್ದ ಸಂದರ್ಭದಲ್ಲಿ ವಿದ್ಯುತ್ ಕೈಕೊಟ್ಟಿತು ಕತ್ತಲೆಯಲ್ಲಿ ಆದ ಅವಾಂತರದಿಂದ ಅವರ ಗರ್ಭಕೋಶ ತನ್ನ ಸ್ಥಾನದಿಂದ ಸರಿದು ಪಕ್ಕಕ್ಕೆ ಬಂದು ಕುಳಿತುಕೊಂಡಿತು. ಇದರ ಪರಿಣಾಮದಿಂದಾಗಿ ಹತ್ತು ಹಲವು ಮಾನಸಿಕ ಮತ್ತು ದೈಹಿಕ ಸಮಸ್ಯೆಗಳಿಗೆ ಒಳಗಾದರು. ರೋಗದ ಗೂಡಾಗಿರುವ ಪದ್ಮಶ್ರೀಯವರ ದೇಹ ಅವರ ಮಾತು ಕೇಳುತ್ತಿಲ್ಲ. ಈ ವಿಷಯದಲ್ಲಿ ಅವರಿಗೆ ಅಸಮಾಧಾನವಿದ್ದರೂ ಇವರಿಗೆ ಒಂದು ಸಮಾಧಾನವಿದೆ. ಅದು ಪತಿ ರಾಮಕುಮಾರರ ವಿಷಯದಲ್ಲಿ ರಾಮಕುಮಾರ ಅವರು ಬ್ಯಾಂಕಲ್ಲಿ ಉದ್ಯೋಗಿಯಾಗಿರುವುದರಿಂದ ಬೆಳಿಗ್ಗೆ ಹೋಗುವಾಗ ಮನೆಯ ಎಲ್ಲ ಕೆಲಸಗಳನ್ನು ಮಾಡಿಕೊಂಡು ಹೆಂಡತಿಯ ಬೇಕು ಬೇಡಗಳನ್ನು ಪೂರೈಸಿ ಅವರಿಗೆ ಅವಶ್ಯಕವಾಗುವ ವಸ್ತುಗಳನ್ನು ಕೊಟ್ಟು ಕೆಲಸಕ್ಕೆ ಹೋಗುತ್ತಾರೆ. ಸಾಯಂಕಾಲ ಮನೆಗೆ ಬಂದ ಮೇಲೆ ಮತ್ತೆ ಎಲ್ಲ ಕೆಲಸವನ್ನು ಯಾವುದೇ ಸಿಟ್ಟಿಲ್ಲದೇ ಮಾಡಿಕೊಂಡು ಹೋಗುತ್ತಾರೆ. ಈ ಕಷ್ಟವನ್ನು ನೋಡದ ರಾಮಕುಮಾರ ಮನೆಯವರು ಇನ್ನೊಂದು ಮದುವೆಯಾಗು ಎಂಬ ಸಲಹೆಯನ್ನು ಮತ್ತು ಒತ್ತಡವನ್ನು ಹೇರಿದ್ದರು. ಆದರೆ ರಾಮಕುಮಾರ ಮಾತ್ರ ಅವರ ಮಾತಿಗೆ ಕಿವಿಗೊಡದೇ ತಮ್ಮ ಹೆಂಡತಿಯೊಂದಿಗೆ ನೆಮ್ಮದಿಯಿಂದ ಇದ್ದೇನೆ ಸಂತೋಷವಾಗಿದ್ದೇನೆ. ಇನ್ನೊಂದು ಮದುವೆಯ ಅವಶ್ಯಕತೆ ಇಲ್ಲವೆಂದು ಹೇಳಿ, ಮದುವೆ ವಿಷಯವನ್ನು ನಯವಾಗಿ ತಳ್ಳಿಹಾಕುತ್ತಾರೆ.

ಇದು ಪ್ರಸಾರವಾದ ಸಂಚಿಕೆಯಲ್ಲಿ ತೋರಿಸಲಾಗಿತ್ತು. ಈ ಕಥೆ ಹಲವು ದೃಷ್ಟಿಕೋನಗಳಿಂದ ಸದ್ಯದ ಸಮಾಜಕ್ಕೆ ಮಾದರಿಯಾಗಿ ನಿಲ್ಲುವಂತಹದಾಗಿದೆ. ಸುಂದರವಾದ, ಆರೋಗ್ಯವಂತ ಹೆಂಡತಿಯಿದ್ದರೂ, ಮಕ್ಕಳನ್ನು ಹೆತ್ತುಕೊಟ್ಟರು. ಇನ್ನೊಂದು ಮದುವೆಯಾಗುವಂತಹ ಅನೈತಿಕ

ಸಂಬಂಧವನ್ನಿಟ್ಟುಕೊಳ್ಳುವಂತಹ ಪುರುಷರಿಗೆ ಈ ಕಾಲದಲ್ಲಿ ಯಾವ ಕೊರತೆಯು ಇಲ್ಲ. ರಾಮಕುಮಾರು ತಾವು ಅಳವಡಿಸಿಕೊಂಡಿರುವ ತತ್ವ ಆದರ್ಶಗಳ ಕಾರಣದಿಂದಾಗಿ ಇಡೀ ಪುರುಷ ವರ್ಗಕ್ಕೆ ಮಾದರಿಯಾಗುತ್ತಾರೆ. ತಮ್ಮ ಹೆಂಡತಿ ರೋಗದ ಗೂಡಾಗಿದ್ದರು ತಮ್ಮ ಹೆಂಡತಿಯ ಸ್ಥಾನ ತುಂಬಲು ಯಾರಿಂದಲು ಸಾಧ್ಯವಿಲ್ಲವೆಂದೂ "ನಾ ನಿನ್ನ ಮರೆಯಲಾರೆ, ನಿನ್ನ ಬಿಟ್ಟು ಬದುಕಲಾರೆ. ನನ್ನ ಜೀವನ ನಿನ್ನ ಜೊತೆ, ಸಾವೂ ನಿನ್ನ ಜೊತೆ" ಎಂದು ಹೇಳುತ್ತಾ, ಆದರ್ಶ ದಾಂಪತ್ಯಕ್ಕೆ ಮಾದರಿಯಾಗಿ ನಿಲ್ಲುತ್ತಾರೆ.

ರಾಮಕುಮಾರ ಮತ್ತು ಪದ್ಮಶ್ರೀ ದಂಪತಿಗಳ ಸಂಚಿಕೆಯನ್ನು ನೋಡಿದ ೩೪ ಮಹಿಳೆಯರು ರಾಮಕುಮಾರ ಅವರ ತತ್ವಾದರ್ಶಗಳನ್ನು ಮೆಚ್ಚಿಕೊಂಡು ಹೆಮ್ಮೆ ವ್ಯಕ್ತಪಡಿಸಿದ್ದರೆ, ಸುಮಾರು ೧೨ ಜನ ಮಹಿಳೆಯರು ರಾಮಕುಮಾರ ಅವರು ನಿಜವಾಗಿಯೂ ಇಂಥಾ ಒಂದು ವ್ಯಕ್ತಿತ್ವವನ್ನು ಹೊಂದಿದ್ದಾರೆಯೇ? ಇಲ್ಲಾ ಇದು ಟಿ.ವಿ.ಯವರ ಯಾವುದಾದರೂ ತಂತ್ರ ಇರಬಹುದೇ? ಎಂಬ ಸಂಶಯ ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಸದಾ ಹಿಂಸೆಯನ್ನುಂಟು ಮಾಡುವ ತಮ್ಮ ಗಂಡಂದಿರಿಗಿಂತ ಈ ವ್ಯಕ್ತಿ ಎಷ್ಟೊ ಉತ್ತಮರಾಗಿದ್ದಾರೆಂದು ಈ ಮಾಹಿತಿದಾರರು ವಿವರಿಸುತ್ತಾರೆ. ಇಲ್ಲಿ ಮಾಹಿತಿ ನೀಡಿದ ಮಹಿಳೆಯರು ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರಾಗಿದ್ದು, ೩೦ರಿಂದ ೩೮ ವರ್ಷ ವಯಸ್ಸಿನವರಾಗಿದ್ದಾರೆ, ಇವರು ತಮ್ಮ ಗಂಡನಲ್ಲಿರದ ಸಹನೆ, ತಾಳ್ಮೆ, ಹೊಂದಾಣಿಕೆ ಮತ್ತು ಪ್ರೀತಿಯನ್ನು ಇನ್ನೊಬ್ಬ ವ್ಯಕ್ತಿಯಲ್ಲಿ ಕಂಡಾಗ ಅವರ ಬಗ್ಗೆ ಹೆಮ್ಮೆಯಾಗುತ್ತದೆ ಎಂದು ವಿವರಿಸುತ್ತಾರೆ. ಅಂಥ ಗಂಡನಿಗೆ ಹೆಂಡತಿಯಾದ ಪದ್ಮಶ್ರೀ ಯಾವುದೋ ಜನ್ಮದಲ್ಲಿ ಬಹಳ ಪುಣ್ಯ ಮಾಡಿರಬೇಕು. ಈ ಜನ್ಮದಲ್ಲಿ ಅದರ ಫಲ ದೊರೆತಿದೆ ಎಂದು ಉತ್ತರಿಸುತ್ತಾರೆ.

ಹೀಗೆ ಉತ್ತರಿಸುವ ಇವರ ಮನೋಲೋಕವನ್ನು, ಯಾವ ದೃಷ್ಟಿಕೋನದಿಂದಲೂ ಪರೀಕ್ಷಿಸಿದರೂ ಅಲ್ಲಿ ಪಿತೃಪ್ರಧಾನತೆಯ ಮೌಲ್ಯಗಳಿಗೆ ಒಳಗಾಗಿರುವುದನ್ನೇ ಕಾಣಬಹುದು. ಹೆಣ್ಣಿನ ಒಳ್ಳೆಯ ಬದುಕಿಗೂ, ಕೆಟ್ಟ ಬದುಕಿಗೂ ಆಕೆಯ ಹಿಂದಿನ ಜನ್ಮದ ಪಾಪ ಪುಣ್ಯವನ್ನು ಹೋಲಿಸಿ ತೂಗಲಾಗುತ್ತದೆ. ಹೆಣ್ಣಿನ ಬದುಕು ಪಾಪ ಪುಣ್ಯದ ಮೇಲೆ ನಿಂತಿರುತ್ತದೆ ಎಂಬುದಾಗಿ ಈ ಮಹಿಳೆಯರು ವಾದಿಸುತ್ತಾರೆ. ಅವರಿಗೆ ಪುರುಷನೇನಾದರೂ ಹೀಗೆ ಮಾಡಿದರೆ ಅಲ್ಲಿ ಮತ್ತೆ ಹೆಣ್ಣನ್ನೇ ದೂಷಿಸಲಾಗುತ್ತದೆ. ಪಾಪವಾದರೂ ಹೆಣ್ಣನ್ನೇ ಗುರಿಯಾಗಿಸಲಾಗುತ್ತದೆ. ಪುಣ್ಯವಿದ್ದರೂ ಹೆಣ್ಣನ್ನೇ ಗುರಿಯಾಗಿಸಿ, ಅವಳ ವ್ಯಕ್ತಿತ್ವ ಪಾಪ-ಪುಣ್ಯಗಳೊಂದಿಗೆ ತಳುಕು ಹಾಕಿಕೊಂಡು ಬಿಟ್ಟಿದೆ ಎಂಬ ನಂಬಿಕೆ ಈ ಮಹಿಳೆಯರಲ್ಲಿರುವುದು ವಿಪರ್ಯಾಸವೇ ಸರಿ. ಪಿತೃಪ್ರಧಾನ ಮೌಲ್ಯಗಳನ್ನು ಬದುಕಿನುದ್ದಕ್ಕೂ ಅನುಸರಿಸಿಕೊಂಡು ಬಂದಿರುವಂತಹ ಈ ಮಹಿಳೆಯರಿಗೆ ಸ್ವಂತ ವ್ಯಕ್ತಿತ್ವದ ಬಗ್ಗೆಯಾಗಲಿ ಅಸ್ತಿತ್ವದ ಬಗ್ಗೆಯಾಗಲಿ ಅರಿವಿರದೇ ಇದ್ದುದ್ದು ವಿಷಾದನೀಯವೆನಿಸುತ್ತದೆ.

ಇನ್ನೂ ಇದೇ ಕಾರ್ಯಕ್ರಮದಲ್ಲಿ ದಿನಾಂಕ ೧೮.೨.೨೦೧೧ರ ಸಂಚಿಕೆಯಲ್ಲಿ "ದೇವದಾಸಿ" ಪದ್ಧತಿಯ ಕುರಿತು ಸವಿಸ್ತಾರವಾದ ಚರ್ಚೆಯನ್ನು ಕೈಗೊಳ್ಳಲಾಯಿತು. ಇಲ್ಲಿ ಪ್ರಮೀಳಾ ನೇಸರ್ಗಿ ಅವರು, ಬರಗೂರು ರಾಮಚಂದ್ರಪ್ಪ, ನಿರ್ದೇಶಕ ಫಣಿರಾಮಚಂದ್ರ, ಸಚಿವೆ ಶೋಭಾ ಕರಂದ್ಲಾಜೆ, ಸಾಮಾಜಿಕ ಕಳಕಳಿಯನ್ನು ಹೊಂದಿರುವಂತಹ ಗಣ್ಯರೊಂದಿಗೆ ವಿಷಯವನ್ನು ಕುರಿತು ಚರ್ಚೆ ನಡೆಸಲಾಯಿತು. "ದೇವದಾಸಿ"ಯಾಗಿದ್ದ ಮಹಿಳೆಯರನ್ನು ಕರೆಸಿ ಅವರೊಂದಿಗೆ ಮಾತು-ಕಥೆ ನಡೆಸಿದರು. ಈ ಎರಡು ಸಂಚಿಕೆಗಳು ಮಾಹಿತಿದಾರರ ಮನಮುಟ್ಟುವಂತಹ ಕಾರ್ಯಕ್ರಮಗಳಾಗಿದ್ದವೆಂದು ಉತ್ತರಿಸುತ್ತಾರೆ.

೪.೨.೩. ಇದು ಯಾರು ಬರೆದ ಕಥೆಯೋ

ಇನ್ನೂ ಬದುಕು ಜಟಕಾ ಬಂಡಿ, ಕಥೆ ಅಲ್ಲ ಜೀವನ ಇದೇ ಮಾದರಿಯಲ್ಲಿಯೇ ಕಸ್ತೂರಿ ವಾಹಿನಿಯಲ್ಲಿಯೂ ಕೂಡ ಆರಂಭವಾಯ್ತು. ಪ್ರತಿ ಸೋಮವಾರದಿಂದ, ಶುಕ್ರವಾರ ದವರೆಗೂ ರಾತ್ರಿ ೯ ಘಂಟೆಗೆ ಪ್ರಸಾರವಾಗುವ "ಇದು ಯಾರು ಬರೆದ ಕಥೆಯೋ" ನಟಿ ತಾರಾ ಅವರು ನಡೆಸಿಕೊಡುತ್ತಿದ್ದರು. ಇದು ಕೂಡ "ಬದುಕು ಜಟಕಾಬಂಡಿ", "ಕಥೆ ಅಲ್ಲ ಜೀವನ"ದ ಮಾದರಿಯಲ್ಲಿಯೇ ಕೌಟುಂಬಿಕ ಹಿಂಸೆ, ಶೋಷಣೆಗಳಿಗೆ, ಸ್ಪಂದಿಸುವ ಮನಸ್ಥಿತಿ ಹೊಂದಿ ರೂಪಿತವಾಗಿರುವಂತಹ ಕಾರ್ಯಕ್ರಮವಾಗಿತ್ತು.

ಈ ಕಾರ್ಯಕ್ರಮದಲ್ಲಿ ಪ್ರಸಾರವಾದ ಒಂದು ಸಂಚಿಕೆಯನ್ನು ಕುರಿತು ಇಲ್ಲಿ ಚರ್ಚಿಸಲೇ ಬೇಕು. ಅದು ದಿನಾಂಕ ೨೫.೧೧.೯ರ ಸಂಚಿಕೆಯಲ್ಲಿ ಹುಟ್ಟು ಕುರುಡರಾದ ದೇವರೆಡ್ಡಿ ಎನ್.ಚಿಂಚಳಿ ಅವರ ಯಶೋಗಾಥೆಯನ್ನು ಪ್ರಸಾರ ಮಾಡಲಾಯಿತು. ದೇವರೆಡ್ಡಿಯವರು ಹುಟ್ಟು ಕುರುಡರಾಗಿದ್ದರೂ ಕೂಡ ಅವರಿಗೆ ಈ ಅಂಗವಿಕಲತೆಯು ಯಶಸ್ಸಿನ ಶಿಖರಕ್ಕೇರಲು ಯಾವುದೇ ತೊಂದರೆಯನ್ನುಂಟು ಮಾಡಲಿಲ್ಲ. ಇವರು ಎಸ್.ಎಸ್.ಎಲ್.ಸಿ.ಯಲ್ಲಿ ಮೊದಲ ರ್‍ಯಾಂಕ ಪಡೆದರು. ಮುಂದೆ ಸಂಗೀತ ಇವರ ಆಸಕ್ತಿಯ ಕ್ಷೇತ್ರವಾಗಿದ್ದರಿಂದ ಅದರಲ್ಲಿಯೇ ಯಶಸ್ಸನ್ನು ಪಡೆಯುವ ಉದ್ದೇಶದಿಂದ ಬಿ.ಮ್ಯೂಸಿಕ್ ಅನ್ನು ಅಧ್ಯಯನಕ್ಕಾಗಿ ಆಯ್ದುಕೊಂಡರು. ಮುಂದೆ ತಮ್ಮ ಸ್ವಂತ ಖರ್ಚಿನಲ್ಲೆ ಅಂಧಬಾಲಕಿಯರಿಗಾಗಿ ಉಚಿತ ಸಂಗೀತ ಪಾಠವನ್ನು ಹೇಳಿಕೊಡಲು ಪ್ರಾರಂಭಿಸಿದರು. ಅಲ್ಲದೆ ಈ ಬಾಲಕಿಯರಿಗಾಗಿ ಉಚಿತ ವಸತಿನಿಲಯದ ವ್ಯವಸ್ಥೆಯನ್ನು ಸಹ ಮಾಡಿದರು. ದೇವರೆಡ್ಡಿಯವರ ಈ ಮಹತ್ವಕಾರ್ಯಕ್ಕೆ ಅವರ ಅಂಗವಿಕಲತೆ ಯಾವತ್ತು ಅಡ್ಡಿಯಾಗಲಿಲ್ಲ. ಸಮಾಜದಲ್ಲಿ ಇಂತಹ ವ್ಯಕ್ತಿಗಳು ಇದ್ದುದು ಸಂತೋಷದ ಸಂಗತಿಯೆನಿಸುತ್ತದೆ. ಇಂತಹ ವ್ಯಕ್ತಿಯ ಸಂದರ್ಶನ ಸಮಾಜಕ್ಕೆ ದಾರಿದೀಪವಿದ್ದಂತೆ ಎಂದೆನಿಸುತ್ತದೆ.

ಬದುಕು ಜಟಕಾ ಬಂಡಿ, ಕಥೆ ಅಲ್ಲ ಜೀವನ, ಇದು ಯಾರು ಬರೆದ ಕಥೆಯೋ. ಈ ಮೂರು ರಿಯಾಲಿಟಿ ಶೋಗಳು ಅತಿ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡು ಪ್ರಸಾರವಾದಂತಹ ಕಾರ್ಯಕ್ರಮಗಳಾಗಿದ್ದವು. ಕುಟುಂಬದೊಳಗೆ ಅತ್ತೆ-ಮಾವ, ಗಂಡ, ಇತರ ಸದಸ್ಯರು ಕೊಡುವ ಮಾನಸಿಕ, ದೈಹಿಕ, ನೋವು, ಹಿಂಸೆಯನ್ನು ಜೀವವಿರದ ಗೋಡೆ

ಕಿಟಕಿಗಳ ಮಧ್ಯೆ ಕೂತು ಕಣ್ಣೀರಿಡುವ ಮಹಿಳೆಯರಿಗೆ ಇಂತಹ ಕಾರ್ಯಕ್ರಮಗಳು ಕೊಂಚ ಮಟ್ಟಿಗೆ ಸಾಂತ್ವಾನವನ್ನು ಒದಗಿಸಿರಬಹುದು. ಎಷ್ಟೋ ಮಹಿಳೆಯರು ಹಿಂಸೆಯನ್ನು ಪ್ರತಿಭಟಿಸಿ, ಮನೆಯಿಂದ ಹೊರಬಂದವರೂ ಇದ್ದಾರೆ. ಹಿಂಸೆಯನ್ನು ಅನುಭವಿಸಲು ಆಗದೇ ಅತ್ತ ಗಂಡನನ್ನು ಬಿಡಲು ಆಗದಂತಹ ಇಕ್ಕಟ್ಟಿನ ಪರಿಸ್ಥಿತಿ ಇರುವ ಮಹಿಳೆಯರು ಇದ್ದಾರೆ. ಮಹಿಳೆಯರ ಕಷ್ಟಗಳನ್ನು ಸಮಸ್ಯೆಗಳನ್ನು ಅನಾವರಣ ಮಾಡುವಂತಹ ಪ್ರಯತ್ನಗಳು ಇಲ್ಲಿ ನಡೆದವು. ಮುಖ್ಯವಾಗಿ ತಮ್ಮ ಸಮಸ್ಯೆಗಳನ್ನು ಕೇಳುವವರು ಮಹಿಳೆಯರೇ ಆಗಿದ್ದರಿಂದ (ಲಕ್ಷ್ಮೀ, ತಾರಾ, ಮಾಳವಿಕ ಅವಿನಾಶ) ಸುಲಭವಾಗಿ ತಮ್ಮ ಸಮಸ್ಯೆಯನ್ನು ಬೇಗ ಅರ್ಥ ಮಾಡಿಕೊಳ್ಳುತ್ತಾರೆಂಬ ದೂರದೃಷ್ಟಿ ಅವರನ್ನು ಈ ವೇದಿಕೆಯವರೆಗೂ ಕರೆತಂದಿರಬಹುದು.

೪.೩. ರಿಯಾಲಿಟಿ ಶೋ ಮತ್ತು ವಾಸ್ತವ ಬದುಕು

ಈ ವೇದಿಕೆಯ ಮೇಲೆ ತಮ್ಮ ಸಮಸ್ಯೆಗೆ ಪರಿಹಾರ ಕೇಳಿ ಬಂದಂತಹ ಮಹಿಳೆಯರು, ಪುನಃ ತಮ್ಮೂರಿಗೆ, ತಮ್ಮ ಮನೆಗೆ ತೆರಳಿದ ಮೇಲೆ, ಅವರ ವಾಸ್ತವ ಬದುಕು ಹೇಗಿರುತ್ತದೆ? ಅವರ ಬದುಕಲ್ಲಿ ಯಾವುದಾದರೂ ಬದಲಾವಣೆಗಳಾಗುತ್ತವೆ? ಇತರರೊಂದಿಗೆ ಹೇಗೆ ಬೇರೆತುಕೊಳ್ಳುತ್ತಾರೆ? ಜನರು ಯಾವ ದೃಷ್ಟಿಕೋನದಿಂದ ಇವರನ್ನು ನೋಡುತ್ತಾರೆ.? ವೇದಿಕೆಯ ಮೇಲೆ ಬೈಯ್ದಾಡಿಕೊಂಡು, ಹೋದ ದಂಪತಿಗಳು ಮನೆಯಲ್ಲಿ ಹೇಗೆ ಸಂತೋಷವಾಗಿರುತ್ತಾರೆ? ತಮ್ಮ ಮನೆಯಲ್ಲಿ ಸಮಸ್ಯೆ ಇದೇ ಎಂದು ಹೋದ ಹೆಂಡತಿಯ ಬದುಕು ಹೇಗೆ ರೂಪಿತ ವಾಗುತ್ತದೆ? ಆ ಮಹಿಳೆಯನ್ನು ಸಂಬಂಧಿಗಳು ಹೇಗೆ ಕಾಣತ್ತಾರೆ? ಎಂಬಿತ್ಯಾದಿ ಪ್ರಶ್ನೆಗಳು ಕಾಡುತ್ತವೆ. ಅದಕ್ಕೆ ಕಾರಣವು ಇದೇ ಏಕೆಂದರೆ, ನಮ್ಮ ಸಮಾಜದಲ್ಲಿ ಹೆಣ್ಣನ್ನು ದ್ವಿತೀಯ ದರ್ಜೆಯವಳಾಗಿ ಕಾಣುವ ಪರಿಪಾಠ ಶತಮಾನಗಳ ಇತಿಹಾಸ ಹೊಂದಿದೆ. ಹೆಣ್ಣಿಗೆ ನೋವಿದ್ದರೂ ಸಹಿಸಬೇಕು. ನಲಿವಿದ್ದರೂ ಸಹಿಸಿಕೊಳ್ಳಬೇಕು. ಇಂಥ ಮನಸ್ಥಿತಿ ಸಮಾಜದಲ್ಲಿ ಬೇರೂರಿರುವುದರಿಂದ ಇಂತಹ ವೇದಿಕೆಯನ್ನು ಆಯ್ದುಕೊಂಡ ಮಹಿಳೆ ಇಲ್ಲಿಂದ ಮನೆಗೆ ಹೋದ ಮೇಲೆ ಎದುರಿಸುವ ಸ್ಥಿತಿ ಮಾತ್ರ ಅಸಹನೀಯವಾಗಿರುತ್ತದೆ. ಹೆಜ್ಜೆ ಹೆಜ್ಜೆಗೂ ಅವಮಾನ, ಕೊಂಕು ಮಾತುಗಳು ಕೇಳಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದು ಉದಾಹರಣೆ ಯೆಂದರೆ,

ನನಗೆ ಪರಿಚಯವಿರುವ ಮಹಿಳೆಯೊಬ್ಬರು ತನ್ನ ಗಂಡನಿಂದ ಅನುಭವಿಸುತ್ತಿದ್ದ ಹಿಂಸೆ, ಮಾನಸಿಕ ಯಾತನೆ ಕುರಿತು ಹೀಗೆ ಹೇಳಿಕೊಂಡಿದ್ದಾರೆ. ತನ್ನ ಪತಿಯ ಸ್ನೇಹಿತರೊಬ್ಬರು ತಮ್ಮ ಸಮಸ್ಯಗೆ "ಕಥೆಯಲ್ಲ ಜೀವನ" ಕಾರ್ಯಕ್ರಮದಲ್ಲಿ ಭಾಗವಹಿಸಿದರೆ, ನಿಮ್ಮ ಸಮಸ್ಯೆಗೆ ಸೂಕ್ತವಾದ ಪರಿಹಾರ ದೊರೆಯಬಹುದು ಎಂದು ಸಲಹೆ ನೀಡಿದರಂತೆ. ಅದಕ್ಕೆ ಅವರ ಪತಿ ಒಪ್ಪಿಗೆಯನ್ನು ಸೂಚಿಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ತಿಳಿಸುತ್ತಾರೆ. ಕಾರ್ಯಕ್ರಮದ ಬಗ್ಗೆ ಯಾವುದೇ ಮಾಹಿತಿ ಇರದ ಇವರು ತಾನು ಅವನಿಂದ ಪಡಬಾರದ ಕಷ್ಟ ಅನುಭವಿಸುತ್ತಿದ್ದೇನೆ. ತನ್ನೊಂದಿಗೆ ಮದುವೆಯಾಗಿದ್ದರೂ ಕೂಡ ಇನ್ನೊಬ್ಬಳೊಂದಿಗೆ

ಅನೈತಿಕ ಸಂಬಂಧ ಹೊಂದಿದ್ದಾರೆ. ಮಕ್ಕಳಿರುವ ತನಗೆ ನ್ಯಾಯ ಕೊಡಿಸಿ ಎಂದು "ಕಥೆ ಅಲ್ಲ ಜೀವನ"ದ ವೇದಿಕೆಗೆ ತಮ್ಮ ಗಂಡನ ಸ್ನೇಹಿತರ ಸಲಹೆಯ ಮೇರೆಗೆ ತಮಗೆ ಒಂದು ದಾರಿ ಸಿಗಬಹುದು. ಪರಿಹಾರ ದೊರೆಯಬಹುದೆಂದು ಹೋಗಿದ್ದರು. ವೇದಿಕೆಯ ಮೇಲೆ ಗಂಡ ಹೆಂಡತಿಯ ಮಧ್ಯ ಜಗಳ ಪ್ರಾರಂಭವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ತನ್ನ ಗಂಡನಾಡುವ ನಕಾರಾತ್ಮಕ ಮಾತುಗಳಿಂದ ತನ್ನ ಮನಸ್ಸಿಗಾಗುತ್ತಿರುವ ವೇದನೆಯನ್ನು ತಾಳಲಾರದೆ, ಇಂಥ ಗಂಡನೊಂದಿಗೆ ಬಾಳುವುದಿಲ್ಲವೆಂದೂ, ಕಟ್ಟಿದ ತಾಳಿಯನ್ನು ಗಂಡನ ಮುಖಕ್ಕೆ ಎಸೆದು ಹೊರನಡೆಯುತ್ತಾಳೆ. ಇದು ಆ ವೇದಿಕೆಯ ಮೇಲೆ ನಡೆದ ಘಟನೆ, ಇಲ್ಲಿಂದ ಮನೆಗೆ ಬಂದ ಮೇಲೆ ಅನುಭವಿಸುವುದು ನರಕಯಾತನೆ, ನೆರೆ-ಮನೆಯವರು ಕೇಳುವ ಸಾವಿರ ಪ್ರಶ್ನೆಗಳು, ಯಾಕೆ ಹೀಗಾಯ್ತು ಹೀಗಾಗಬಾರದಿತ್ತು ಎನ್ನುವ ಮಾತುಗಳಿಗಿಂತ, ಮನೆ ಜಗಳ ಮನೆಯಲ್ಲೇ ಬಗೆಹರಿಸಿಕೊಳ್ಳಬೇಕು. ಹಾದಿರಂಪ ಬೀದಿರಂಪ ಮಾಡಬಾರದು ಎಂದು ಹೇಳಿರುವವರೇ ಹೆಚ್ಚು. ಇನ್ನೂ ಮನೆಯ ಮಾನ ಮರ್ಯಾದೆ ಮೂರು ಕಾಸಿಗೆ ಹರಾಜು ಹಾಕಿ ಬಂದಿದ್ದಾಳೆಂದು ಮನೆಯವರ ಕಹಿ ನುಡಿಗಳು.

ಒಟ್ಟಾರೆಯಾಗಿ ಅವಳಿಗೆ ಒಂದು ನ್ಯಾಯಯುತವಾದ ಹೆಜ್ಜೆಯಿಡಲು ಆಗದಂತಹ ಬಿಕ್ಕಟ್ಟನ್ನು ಸಮಾಜ ಅವಳಲ್ಲಿ ಮನೆಮಾಡಿಸಿತು. ತನಗೆ ಯಾರಾದರೂ ಗುರ್ತಿಸಿದರೆ ಅದು ನೀವು "ಕಥೆ ಅಲ್ಲ ಜೀವನ"ದಲ್ಲಿ ಬಂದಿದ್ದಿರಲ್ಲ ಎಂದೇ ಕೇಳುತ್ತಿದ್ದರಂತೆ. ಹೀಗೆ ಯಾರಾದರೂ ಕೇಳಿದಾಗ ಅವರು ಎಷ್ಟೊಂದು ಹಿಂಸೆಯನ್ನು ಅವಮಾನವನ್ನು ಅನುಭವಿಸಿದ್ದಾಗಿ ಹೇಳುತ್ತಾರೆ. ಅತ್ತ ಗಂಡನ ಮನೆಯವರ ದೃಷ್ಟಿಯಲ್ಲಿ ಕೆಟ್ಟವಳಾಗಿ, ಇತ್ತ ಸಮಾಜದ ದೃಷ್ಟಿಯಲ್ಲಿಯೂ ಕೆಟ್ಟವಳಾಗಿ ಬಿಟ್ಟಿದ್ದೇನೆಂದು ನೋವಿನಿಂದ ಹೇಳಿಕೊಳ್ಳುತ್ತಾರೆ. ಗಂಡನಾದವ ಮಾತ್ರ ಆ ಮನೆಗೊಂದು ಬಾರಿ ಈ ಮನೆಗೊಂದು ಬಾರಿ ಬಂದು ಹೋಗುತ್ತಾನೆ. ಈಗ ಬರುವುದು ಕೂಡಾ ಕಡಿಮೆಯಾಗಿದೆ. ನಾನು ಅನುಭವಿಸಿದ ಈ ನೋವುಗಳಾಗಲಿ, ಹಿಂಸೆಗಳಾಗಲಿ ಗಂಡನಾದವನಿಗೆ ಮಾತ್ರ ಆಗಲಿಲ್ಲ. ಬದಲಿಗೆ ಅವನಿಗೆ ಜನರ ಸಾಂತ್ವನದ ಮಾತುಗಳು ಸಿಕ್ಕಿವೆ. ನಮ್ಮ ಸಮಾಜದಲ್ಲಿ ಗಂಡಿಗೆ ಒಂದು ನ್ಯಾಯ ಹೆಣ್ಣಿಗೆ ಇನ್ನೊಂದು ನ್ಯಾಯ, ಗಂಡು ಮಾಡುವ ತಪ್ಪಿಗೆ ಯಾವುದೇ ಶಿಕ್ಷೆ ಇರುವುದಿಲ್ಲ. ಆದರೆ ಹೆಣ್ಣಿಗೆ ಮಾತ್ರ ಘೋರ ಶಿಕ್ಷೆ, ಮಾನಸಿಕ ಹಿಂಸೆಯ ಫಲ ಸಿಗುತ್ತದೆ. ಕೆಲವು ಬಾರಿ ಹೆಣ್ಣಾದವಳು ನೋವನ್ನು, ಅನ್ಯಾಯವನ್ನು ಸಹಿಸಿಕೊಳ್ಳಬೇಕು. ಆಗ ಮಾತ್ರ ಶ್ರೇಷ್ಠಳಾಗುತ್ತಾಳೆ. ಪ್ರತಿಭಟಿಸಿದರೇ ನೋವು ಅನುಭವಿಸಬೇಕಾಗುತ್ತದೆ ಎಂಬುದಕ್ಕೆ ನಾನೇ ಜೀವಂತ ಉದಾಹರಣೆ ಎಂದು ಉತ್ತರಿಸುತ್ತಾರೆ. ಆದರೆ ಜೀವನ ನಿಂತ ನೀರಲ್ಲ. ಎಷ್ಟೇ ಕಷ್ಟ ಬಂದರೂ ಮುಂದುವರೆಸಿಕೊಂಡು ಹೋಗಲೇಬೇಕು. ಎದುರಾಗಿರುವ ಸಮಸ್ಯೆಗಳಿಗೆ ಕಣ್ಣೀರಿಡುತ್ತಾ ಕೂಡುವುದರಲ್ಲಿ ಯಾವುದೇ ಅರ್ಥವಾಗಲಿ, ಪ್ರಯೋಜನವಾಗಲಿ, ಇಲ್ಲವೆಂದು ಅರಿತು, ತಮ್ಮ ಓದನ್ನು ಮುಂದುವರೆಸಿದ್ದಾರೆ. ಸದ್ಯ ಇವರು ಪರಿಸ್ಥಿತಿಯಿಂದ ಹೊರಬಂದು ತಮ್ಮನ್ನು ಉನ್ನತ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ.

ನಾವು ಇಂದು ಎಷ್ಟೆಲ್ಲಾ ಮುಂದುವರೆದಿದ್ದರೂ ಸಹ ಇಂದಿಗೂ ಕೂಡ ಮನುವಿನ ಚಿಂತನೆಯಲ್ಲಿಯೇ ಬದುಕುತ್ತಿರುವ ಸಮಾಜವಿರುವುದಕ್ಕೆ ಮೇಲಿನ ಉದಾಹರಣೆ ಒಂದೇ ಆಗಿರದೇ ಇಂಥ ಹಲವು ಉದಾಹರಣೆಗಳನ್ನು ದಿನನಿತ್ಯದ ಬದುಕಿನಲ್ಲಿ ಕಾಣಬಹುದಾಗಿದೆ. ಒಂದು ಕಡೆ ಟೇಲರ್ ಅವರು ಹೆಣ್ಣಿನ ಬದುಕಿನ ಚಿತ್ರಣದ ಕುರಿತು ತಮ್ಮ On Liberty ಎಂಬ ಕೃತಿಯಲ್ಲಿ ವ್ಯಕ್ತಿಗತವಾದ ಖಾಸಗಿ ಹಕ್ಕುಗಳು ಅತ್ಯಗತ್ಯವೆಂಬುದಾಗಿ ಸಮರ್ಥಿಸಿದ್ದಾರೆ. ತಮ್ಮ ವಸ್ತ್ರಗಳನ್ನು ತಾವು ಹೇಗೆ ಧರಿಸಬೇಕು ಎಂಬ ಸಾಮಾನ್ಯ ಪ್ರಶ್ನೆಯಿಂದ ಹಿಡಿದು ವಿವಾಹ ಮತ್ತು ಲೈಂಗಿಕ ಸಂಬಂಧಗಳಂತಹ ಗಂಭೀರ ಸಮಸ್ಯೆಗಳ ಬಗ್ಗೆಯೂ ನಿರ್ಧರಿಸುವ ಅಧಿಕಾರ ಅವರಿಗಿದೆ. ಆದರೆ ವಾಸ್ತವವಾಗಿ ಸ್ತ್ರೀಯರನ್ನು ಮನೆಯೊಳಗಡೆ ಬಂಧಿಯಂತೆ ಇಡಲಾಗಿದೆ".[೨] ಇದು ವಾಸ್ತವವು ಹೌದು.

ಈ ಒಂದು ಉದಾಹರಣೆಯಲ್ಲಿ ಹೆಣ್ಣಿನ ಪ್ರತಿಯೊಂದು ನೋವು-ನಲಿವುಗಳಿಗೆ ತಾವೂ ಸ್ಪಂದಿಸುತ್ತೇವೆ ಎಂದು ಹೇಳಿಕೊಳ್ಳುವ ರಿಯಾಲಿಟಿ ಶೋಗಳು, ಹೆಣ್ಣು ಅನುಭವಿಸುವ ಮಾನಸಿಕ ಹಿಂಸೆ, ಯಾತನೆಯನ್ನು ಎಷ್ಟರಮಟ್ಟಿಗೆ ಸರಿ ಮಾಡಬಹುದು. ಯಾವ ರೀತಿಯಲ್ಲಿ ನ್ಯಾಯ ಒದಗಿಸಬಹುದು ಎಂಬ ಪ್ರಶ್ನೆಗೆ ಬಹುಶಃ ಉತ್ತರ ಸಿಗಲಿಕ್ಕಿಲ್ಲ. ಈ ರಿಯಾಲಿಟಿ ಶೋಗಳು ಹೆಣ್ಣಿನ ವಾಸ್ತವ ಬದುಕಿಗೆ ಹೇಗೆ ಕನ್ನಡಿಯಾಗಬಲ್ಲವು. ರಿಯಾಲಿಟಿ ಎಂದು ಹೇಳಿ ಹೆಣ್ಣಿನ ಭಾವನೆಗಳಿಗೆ, ಆಸೆಗಳಿಗೆ ಧಕ್ಕೆವುಂಟು ಮಾಡುವ ಕಾರ್ಯವೇ ನಡೆಯುತ್ತಿದೆ. ಪುರುಷ ಪ್ರಧಾನ ಮಾಧ್ಯಮ ಹೆಣ್ಣಿನ ಬದುಕನ್ನೇ ಬಂಡವಾಳವಾಗಿಟ್ಟುಕೊಂಡಿರುವುದಕ್ಕೆ ಇದು ಸಾಕ್ಷಿಯಾಗಿ ನಿಲ್ಲುತ್ತದೆ. ಇದಕ್ಕೆ ಪೂರಕವಾಗಿ ಈ ರಿಯಾಲಿಟಿ ಶೋಗಳಲ್ಲಿ ಮಹಿಳಾ ನಿರೂಪಕಿಯರೇ ಇರುವುದು ಕಾಣಬಹುದಾಗಿದೆ.

೪.೪. ರಿಯಾಲಿಟಿ ಶೋ ಮತ್ತು ಮಹಿಳಾ ನಿರೂಪಕಿಯರು

ಈ ಮೊದಲೇ ವಿವರಿಸಿದಂತೆ ರಿಯಾಲಿಟಿ ಶೋಗಳು ಹಿಂದಿ, ಇಂಗ್ಲೀಷ್ ಭಾಷೆಗಳಿಂದ ಜನ್ಮ ಪಡೆದಂತಹ ಕಾರ್ಯಕ್ರಮಗಳಾಗಿವೆ. ಈ ಭಾಷೆಗಳಲ್ಲಿ ತೋರಿಸಲಾಗುವ ಕಾರ್ಯಕ್ರಮಗಳನ್ನೇ ಕನ್ನಡದ ಅವತರಣಿಕೆಗಳಾಗಿ ರೂಪುಗೊಂಡಂತವವಾಗಿವೆ. ಹಾಗೆ ಬಂದ ಶೋಗಳಲ್ಲಿ ಗೇಮ ಶೋಗಳು ಹಾಡು, ಕುಣಿತ, ಅಡುಗೆ, ಕಾಡು, ಪೇಟೆ, ಹಳ್ಳಿ ಹೀಗೆ ಭಿನ್ನ ಭಿನ್ನ ಕಾರ್ಯಕ್ರಮಗಳನ್ನು ಪ್ರಸಾರಮಾಡಲಾಯಿತು. ನಟಿಯರೇ ನಡೆಸಿಕೊಡುವಂತಹ, ರಿಯಾಲಿಟಿ ಶೋಗಳು ಕೂಡ ಪ್ರಾಂಭವಾದವು, ಹಾಗೆ ಪ್ರಾರಂಭವಾದ ಕಾರ್ಯಕ್ರಗಳಲ್ಲಿ ನಟಿ ಲಕ್ಷ್ಮೀ, ಇದು ಯಾರು ಬರೆದ ಕಥೆಯೋದಲ್ಲಿ ನಟಿ ತಾರಾ ಅವರು, ಬದುಕು ಜಟಕಾ ಬಂಡಿಯನ್ನು ಮಾಳವಿಕಾ ಅವಿನಾಶ ಹೀಗೆ ಹಿರಿತೆರೆಯ ನಟಿಯರನ್ನು ಹಾಕಿಕೊಂಡು ಕಿರುತೆರೆಯ ಕಾರ್ಯಕ್ರಮಗಳನ್ನು ತಯಾರಿಸಿ ಪ್ರಸಾರ ಮಾಡಲಾಯಿತು. ಈ ಕಾರ್ಯಕ್ರಮಗಳ ಮೂಲ ಉದ್ದೇಶ ಮತ್ತು ಗುರಿಯೆಂದರೆ ಸಮಸ್ಯೆಯೆಂದು ಹೇಳಿಕೊಂಡು ಬರುವ ಜನರಿಗೆ (ಮಹಿಳೆಯರು, ಪುರುಷರು, ವೃದ್ಧರು, ಮಕ್ಕಳು) ಎಲ್ಲಾ ವಯೋಮಾನದವರಿಗೆ ಇಲ್ಲಿ ಬಂದು ತಮ್ಮ

ಕಷ್ಟವನ್ನು ಹೇಳಿಕೊಂಡು ಬರುವ ಜನರಿಗೆ ಸೂಕ್ತವಾದ ಸಲಹೆ, ಮಾರ್ಗದರ್ಶನ, ಸಾಂತ್ವನ ಹೇಳುವುದು. ಈ ಕಾರ್ಯಕ್ರಮಗಳಲ್ಲಿ ಪ್ರಸಾರದ ರೂಪುರೇಷೆಗಳಲ್ಲಿ ಯಾವುದೇ ಸಂದೇಹ ಗಳಿರುವುದಿಲ್ಲ. ಆದರೆ ಕಾರ್ಯಕ್ರಮದ ನಿರೂಪಕಿಯರನ್ನು ಆಯ್ಕೆ ಮಾಡಿದ್ದರಲ್ಲಿ ಹಲವು ಸಂದೇಹಗಳು ಎದುರಾಗುತ್ತವೆ.

ಕಾರ್ಯಕ್ರಮದ ಯಶಸ್ವಿಗೆ ಮಹಿಳಾ ನಿರೂಪಕಿಯರನ್ನೇ ಯಾಕೆ ಆಯ್ಕೆ ಮಾಡಿ ಕೊಳ್ಳಲಾಯಿತು? ರಿಯಾಲಿಟಿ ಶೋಗಳಿಗೂ ಈ ನಟಿಯರಿಗೂ ಏನು ಸಂಬಂಧ? ಮಹಿಳಾ ನಟಿಯರನ್ನೇ ಯಾಕೆ ಆಯ್ಕೆ ಮಾಡಿಕೊಳ್ಳಲಾಯಿತು? ಎಂಬ ಪ್ರಶ್ನೆಗಳೂ ಕಾಡುತ್ತವೆ.

ಪುರುಷ ಪ್ರಧಾನವಾದ ಮಾಧ್ಯಮದಲ್ಲಿ ಹೆಣ್ಣನ್ನು ದೇಹ ಕೇಂದ್ರಿತವಾಗಿ ನೋಡುವ ಕ್ರಮ ಸನಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವುದರಿಂದ ಧಾರಾವಾಹಿಗಳಾಗಿರಬಹುದು, ರಿಯಾಲಿಟಿ ಶೋಗಳಾಗಿರಬಹುದು ಎಲ್ಲವೂ ಹೆಣ್ಣನ್ನು, ಅವಳ ಅಸ್ತಿತ್ವವನ್ನು ದೇಹ ಕೇಂದ್ರಿತ ವಾಗಿಯೇ ನೋಡುತ್ತದೆ. ಬಂಡವಾಳಶಾಹಿ ತಂತ್ರಗಾರಿಕೆಯ ರಾಜಕಾರಣ ಇದರ ಹಿಂದೆ ಕಾರ್ಯ ನಿರ್ವಹಿಸುತ್ತದೆ. ಹೆಣ್ಣಿನ ಜೈವಿಕ ಮಾನಸಿಕ ಮತ್ತು ಕೌಟುಂಬಿಕ ಈ ಮೂರು ವಲಯಗಳ ಸಮಸ್ಯೆಗಳನ್ನು ಹೆಣ್ಣೆ ಅರ್ಥ ಮಾಡಿಕೊಳ್ಳುತ್ತಾಳೆಂದು ಹೇಳುವುದರ ಮೂಲಕ ಮತ್ತೆ ಅವಳ ಸಮಸ್ಯೆಗಳನ್ನು ಸ್ಥಿರೀಕರಿಸುವ ಕಾರ್ಯ ನಡೆಯುತ್ತಿರುತ್ತದೆ.

ಈ ಅಂಶಗಳು ಮಹಿಳೆಯರನ್ನು ಮಾಧ್ಯಮದಲ್ಲಿ ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳುವಲ್ಲಿ ಶ್ರಮ ಹಾಕುತ್ತವೆ. ಮಹಿಳೆಯನ್ನು ಕೇವಲ ಶಾರೀರಿಕವಾದ ಪಡಿಯಚ್ಚಿನಲ್ಲಿ ಗುರ್ತಿಸಲಾಗುತ್ತಿದ್ದು ಅದು ಕೌಟುಂಬಿಕ ವಲಯದೊಳಗೆ ಸಾಂಪ್ರದಾಯಿಕ ಪಾತ್ರಗಳಲ್ಲಿ ವೈಭವೀಕರಣಗೊಂಡರೆ, ಸಾರ್ವಜನಿಕ ವಲಯದೊಳಗೆ ದೇಹದ ಕಲ್ಪನೆಯಲ್ಲಿ ನೆಲೆಯೂರಲಾಗುತ್ತದೆ. ಇಂತಹ ಕಾರ್ಯಕ್ರಮಗಳ ಮೂಲ ಉದ್ದೇಶ ಬಂಡವಾಳವಾದ್ದರಿಂದ ಮಾರುಕಟ್ಟೆ ತಂತ್ರವನ್ನು ಅನುಸರಿಸಿ "ಗೆಲ್ಲುವ ಕುದುರೆಗೆ, ಹಣ ಹೂಡುವಂತೆ" ಯಾವ ಕಾರ್ಯಕ್ರಮಕ್ಕೆ ಎಂತಹ ನಟ-ನಟಿಯರನ್ನು ಹಾಕಿಕೊಂಡರೆ ತಾವೂ ಹಾಕಿದ ಬಂಡವಾಳ ವಾಪಸ್ಸಾಗುತ್ತದೆ ಎನ್ನುವ ಲೆಕ್ಕಚಾರ ಈ ವಾಹಿನಿಗಳದ್ದಾಗಿದೆ. ಯಾರದೋ ಬದುಕಿನ ವ್ಯಾಜ್ಯಗಳಿಗೆ, ಕಲಹಗಳಿಗೆ ವೇದಿಕೆಯಾಗಿ, ತಮ್ಮ ಚಾನೆಲ್‌ನ ಟಿ.ಆರ್.ಪಿ.ಗೋಸ್ಕರ ಇಂತಹ ನಟಿಯರನ್ನು ಬಳಸಿ ಕೊಳ್ಳಲಾಗುತ್ತಿದೆ.

ಇಲ್ಲಿ ಮತ್ತೆ ದೇಹ ಕೇಂದ್ರಿತವಾಗಿ ನೋಡುವ ಮನಸ್ಥಿತಿಯನ್ನು ಸ್ಥಿರೀಕರಿಸುತ್ತಾ ಹೋಗಲಾಗುತ್ತದೆ. ಸಮಾಜದಲ್ಲಿ "ಸೆಕ್ಸಿಸ್ಟ್" ಆದ ಚಿಂತನೆ ಹೇಗೆ ಮಾಧ್ಯಮದೊಳಗೆ ಕಾರ್ಯನಿರ್ವಹಿಸುತ್ತದೆ ಎಂದು ಅವಲೋಕಿಸುತ್ತಾ ಹೋದರೆ, ಹೆಣ್ಣು ಮಾಧ್ಯಮದ ಕಪಿಮುಷ್ಟಿಗೆ ಸಿಲುಕುವ, ಪ್ರತಿನಿಧಿಸುವ, ನಿರ್ವಚನಗೊಳ್ಳುವ ಕುರಿತು ವಿಶ್ಲೇಷಿಸಿದಾಗ ಈ ಕಬಂಧ ಬಾಹುಗಳಲ್ಲಿ ಸಿಲುಕಿಕೊಂಡಿರುವ ಮಹಿಳಾ ಬದುಕು ಅನಾವರಣಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಮಾಧ್ಯಮದಲ್ಲಿ ಹೆಣ್ಣು ಮತ್ತು ಹೆಣ್ಣಿನ ದೇಹದ ನಿರ್ವಚನವನ್ನು ವಿಶ್ಲೇಷಿಸಲಾಗಿದೆ.

೪.೫. ಮಾಧ್ಯಮ ಮತ್ತು ಹೆಣ್ಣಿನ ದೇಹದ ನಿರ್ವಚನ

ಖಾಸಗೀಕರಣದ ಪ್ರಭಾವದಿಂದಾಗಿ ಹೇರಳವಾದ ಬಂಡವಾಳವನ್ನು ಹಾಕಿಕೊಂಡು ಅದಕ್ಕಿಂತಲೂ ಎರಡು ಪಟ್ಟು ದುಡ್ಡು ಮಾಡಬೇಕೆಂಬ ಉದ್ದೇಶವು ಜಾಗತೀಕರಣದ ಏಜೆನ್ಸಿಗಳಾದ ಸಮೂಹ ಮಾಧ್ಯಮಗಳಲ್ಲಿ ಬೆಳೆದುಬಂದಿದೆ. ಜಾಗತೀಕರಣವು ೨೦-೨೧ ನೇ ಶತಮಾನದಲ್ಲಿ ಅತಿ ಹೆಚ್ಚು ಜನಪ್ರಿಯಗೊಂಡಿದ್ದು; ಚರ್ಚೆಯು ವಿಶಾಲವಾದ ಅರ್ಥದಲ್ಲಿ ಮಂಡಿಸಬಹುದಾಗಿದೆ. ಆದರೆ ಇಲ್ಲಿ ಕೇವಲ ಸಮೂಹ ಮಾಧ್ಯಮಗಳು ಜಾಗತೀಕರಣದ ಪ್ರಸಾರಕ್ಕೆ ಹೇಗೆ ಸಹಾಯವಾಗುತ್ತದೆ. ಅಲ್ಲಿ ಹೆಣ್ಣಿನ ದೇಹದ ನಿರ್ವಚನ ಹೇಗೆ ನಡೆಯುತ್ತದೆ ಎನ್ನುವುದರ ಕುರಿತು ಇಲ್ಲಿ ಚರ್ಚೆಯನ್ನು ಮಾಡಬಯಸುತ್ತೇನೆ.

ಬಾಯ್ಡ್-ಬೆರೆಟ್ ಅವರ ಪ್ರಕಾರ ಅಮೇರಿಕಾದಲ್ಲಿ ಮನರಂಜನೆ, ಸಂಪರ್ಕ ಮತ್ತು ಮಾಹಿತಿ(ECI=Entertainment Communication Information)ಯ ಬೆಳವಣಿಗೆಯಿಂದಾಗಿ ಅಂತರರಾಷ್ಟ್ರೀಯ ಬ್ರಾಡ್‌ಕಾಸ್ಟಿಂಗ್ ವಾಣಿಜ್ಯೀಕರಣ ಶುರುವಾಯಿತು[೯]. ಇಲ್ಲಿ ಬಾಯ್ಡ್-ಬೆರೆಟ್ ಅವರು ಹೇಳುವಂತೆ ಅಂತರರಾಷ್ಟ್ರೀಯ ವಾಣಿಜ್ಯೀಕರಣದ ಬೆಳವಣಿಗೆಗೆ ಮನರಂಜನೆಯ ಅವಶ್ಯಕತೆ ಇದೆ ಅದಕ್ಕಾಗಿ ದೊಡ್ಡ ದೊಡ್ಡ ವ್ಯಾಪಾರಿಗಳು ಬಂಡವಾಳವನ್ನು ಹಾಕಿರುತ್ತಾರೆ. ಅವರಿಗೆ ಮನಃ ತಣಿಸಲು ಮತ್ತೆ ಮಹಿಳೆಯೇ ಸಾಧನವಾಗಬೇಕು. ಜಾಗತೀಕರಣದ ಎಲ್ಲ ವಿದ್ಯಮಾನಗಳಿಗೆ ಮಹಿಳೆಯರನ್ನು ಬಳಸಿಕೊಳ್ಳುವುದನ್ನು ಕಾಣುತ್ತೇವೆ. ಉತ್ಪಾದನೆಗೂ ಸರಕಿಗೂ ಸಂಬಂಧವಿರದಿದ್ದರೂ ಆ ವಸ್ತುವಿನ ಪ್ರಚಾರಕ್ಕೆ ಹೆಣ್ಣಿನ ದೇಹ ಬೇಕು. ಮಾರುಕಟ್ಟೆಯ ತಂತ್ರಕ್ಕೆ ಆಕೆಯ ದೇಹವನ್ನೇ ಸೇತುವೆಯಾಗಿ ಬಳಸಿಕೊಳ್ಳಲಾಗುತ್ತದೆ. ಮಾಧ್ಯಮಗಳ ಮೂಲಕ ಹರಿದು ಬರುವ ಜಾಹೀರಾತುಗಳಲ್ಲಿ ಹೆಣ್ಣಿನ ದೇಹವನ್ನು ತೋರುವ ಕ್ರಮದಲ್ಲಿ ಪುರುಷ ಧೋರಣೆಯೇ ಪ್ರಧಾನವಾಗಿರುತ್ತದೆ.

ಇಲ್ಲಿ ಮಾಧ್ಯಮಗಳು ಪುರುಷನ ಚಿಂತನಾ ಕ್ರಮಕ್ಕೆ ಪೂರಕವಾದಂತಹ ಕೆಲಸ ನಿರ್ವಹಿಸುತ್ತವೆ. ಹಾಗಾಗಿ ಇದು ಪುರುಷ ಮಾನದಂಡವೆಂದು ವ್ಯಾಖ್ಯಾನಿಸಬಹುದು, ಆದ್ದರಿಂದ ಆಕರ್ಷಕ ಮೈಕಟ್ಟಿನ ಚೆಲುವೆಯರ ರೋಚಕ ದೇಹ ಪ್ರದರ್ಶನ ದೃಶ್ಯಮಾಧ್ಯಮಗಳಿಗೆ ಬೆಲೆಯುಳ್ಳದ್ದಾಗಿದೆ. ಹೆಣ್ಣಿನ ದೇಹವನ್ನು ಪ್ರದರ್ಶಿಸುವ ಮೂಲಕ ಕೋಟಿಗಟ್ಟಲೆ ದುಡ್ಡನ್ನು ಮಾಡಿಕೊಳ್ಳುತ್ತಿವೆ. ಇಲ್ಲಿ ಅಶ್ಲೀಲ ಪ್ರದರ್ಶನದ ಬಗ್ಗೆ ಯಾವುದೇ ಮುಜುಗರ ಆಗುವುದಿಲ್ಲ, ಅಲ್ಲಿ ನೋಡುಗರಿಗೆ ಹೆಣ್ಣಿನ ದೇಹ ಮಾತ್ರ ಗಣನೆಗೆ ಬಂದಿರುತ್ತದೆ ಹೊರತು ಲಿಂಗ ಸಮಾನತೆ, ಸಬಲೀಕರಣ, ಸಮಾನತೆ, ಇವೆಲ್ಲ ಕೇವಲ ಕಾಗದದಲ್ಲಿ ಸತ್ವವಿಲ್ಲದ ಅಕ್ಷರಗಳಾಗಿ ಬಿಟ್ಟಿರುತ್ತವೆ. ಈ ಮಾಧ್ಯಮಗಳು ಪುರುಷರ ನಿಯಂತ್ರಣದಲ್ಲಿರುವುದರಿಂದ ಮಹಿಳೆಯರ ಅಸ್ತಿತ್ವ ಕೇವಲ ಪ್ರದರ್ಶನದಲ್ಲಿ ಮಾತ್ರ ಗುರುತಿಸಬಹುದಾಗಿದೆ. ಇದರಿಂದ ಬರುವ ಬಂಡವಾಳವು ಮಿತಿಮೀರಿದ ಅಂಕಿಯಲ್ಲಿರುವುದೆಂದು ತಿಳಿದುಬರುತ್ತದೆ. "ಜಗತ್ತಿನಾದ್ಯಂತ ತನ್ನ ಸಂಪರ್ಕ

ಜಾಲಗಳನ್ನು ಹರಡಿರುವ ಸಮೂಹ ಮಾಧ್ಯಮಗಳಿಂದ ಅಮೇರಿಕಾ ಬಂಡವಾಳದ ಶ್ರೀಮಂತ ರಾಗುತ್ತಿರುವ ಉತ್ತರ ಅಮೇರಿಕನ್ನರಲ್ಲಿ ಬಹುಪಾಲು ಜನ ಈ ಸಮೂಹ ಮಾಧ್ಯಮಗಳಿಂದಲೇ ತಮ್ಮ ಆಸ್ತಿ ಸಂಪಾದಿಸುತ್ತಾರೆ. ೪೦೦ ಅತೀ ಶ್ರೀಮಂತ ಅಮೇರಿಕನ್ನರ ಪೈಕಿ ೧೯೪೨ರಲ್ಲಿ ಸಮೂಹ ಮಾಧ್ಯಮಗಳಿಂದಲೇ ತಮ್ಮ ಆಸ್ತಿ ಮಾಡಿದವರ ಪ್ರಮಾಣ ಶೇ. ೯.೫ ಇದ್ದರೆ ಅದು ೧೯೯೯ರ ವೇಳೆಗೆ ಶೇ. ೧೮ ಆಗಿತ್ತು. ಇವತ್ತು ಉತ್ತರ ಅಮೇರಿಕಾದ ಶ್ರೀಮಂತರ ಪೈಕಿ ಪ್ರತಿ ಐವರಲ್ಲಿ ಒಬ್ಬ ಈ ಸಮೂಹ ಮಾಧ್ಯಮಗಳಿಂದಲೇ ತನ್ನ ಆಸ್ತಿ ಸಂಪಾದಿಸುತ್ತಿದ್ದಾನೆ".*

ಮಾಧ್ಯಮ ಹೆಚ್ಚು ಬೆಳವಣಿಗೆ ಹೊಂದುತ್ತಿದ್ದು ಹೊಸ ಹೊಸ ತಂತ್ರಜ್ಞಾನಗಳ ಅವಿಷ್ಕಾರ ವಾಗುತ್ತಿದೆ. ಈ ತಂತ್ರಜ್ಞಾನಗಳೆಲ್ಲವೂ ಪುರುಷನಿಂದ ರೂಪಿಸಲ್ಪಟ್ಟಂತಹದ್ದಾಗಿದ್ದು, ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ತನ್ನೆಲ್ಲ ಅಗತ್ಯಗಳನ್ನು ಪೂರೈಸಿಕೊಳ್ಳಲು ಈ ತಂತ್ರಜ್ಞಾನವನ್ನೇ ಬಳಸಿಕೊಳ್ಳುತ್ತಿದ್ದಾನೆ. ಹೈಟೆಕ್ ವೇಶ್ಯಾವಾಟಿಕೆಯನ್ನು ರೂಪಿಸಿಕೊಳ್ಳುವ ಸಾಧನವಾಗುತ್ತಿದೆ. ಹೆಣ್ಣಿನ ದೇಹಕ್ಕೂ ಆಧುನಿಕ ತಂತ್ರಜ್ಞಾನಕ್ಕೂ ಮೇಲುನೋಟಕ್ಕೆ ಸಂಬಂಧವಿಲ್ಲ ಎಂದು ಕಂಡುಬಂದರೂ ಆಧುನಿಕ ಸಮಾಜವು ಹೆಣ್ಣನ್ನು ತನ್ನ ಹೊಸ ಕಾಲದ ಜೀವನ ಮೌಲ್ಯಕ್ಕೆ ತಕ್ಕಂತೆ ದುಡಿಸಿಕೊಳ್ಳುತ್ತಿದೆ. ಇದಕ್ಕೆ ಇನ್ನೊಂದು ಉದಾಹರಣೆಯೆಂದರೆ ಸೈಬರ್ ಸೆಕ್ಸ್ ಕೆಫೆಗಳು, ಕ್ಷಣಾರ್ಧದಲ್ಲಿಯೇ ಹೆಣ್ಣಿನ ಬೆತ್ತಲೆಯನ್ನು ತಂತ್ರಜ್ಞಾನದ ಮೂಲಕ ವ್ಯವಸ್ಥಿತವಾಗಿ ಕ್ಷಣಾರ್ಧದಲ್ಲಿಯೇ ತಲುಪಿಸುವ ಜಾಲವಾಗಿ ತಂತ್ರಜ್ಞಾನದ ಭೀಕರತೆಯನ್ನು ಎತ್ತಿ ತೋರಿಸುತ್ತದೆ. ಎಲ್ಲೋ ಒಂದು ಕಡೆ ಕುಳಿತು ಇನ್ನೆಲ್ಲಿಂದಲೋ, ಯಾವುದೋ ಹೆಣ್ಣಿನ ಬೆತ್ತಲೆ ದೇಹವನ್ನು ಆಸ್ವಾದಿಸುವ ಪುರುಷರು ಸಂಖ್ಯೆ ಹೆಚ್ಚಿನದಾಗಿದೆ.

ಇಂತಹ ಸ್ಥಿತಿಯಲ್ಲಿ ಸೈಬರ್ ಸೆಕ್ಸ್ ಕೆಫೆಗಳ ಅಪರಾಧ ತಡೆಗಟ್ಟಲು ಕಾನೂನುಗಳನ್ನು ರೂಪಿಸಿದರೂ ಪ್ರಯೋಜನವಾಗುತ್ತಿಲ್ಲ. ಒಂದು ಕಾಲಘಟ್ಟದಲ್ಲಿ ಮಾತೃಪ್ರಧಾನ ವ್ಯವಸ್ಥೆಯ ಮೂಲ ಹೊಂದಿರುವ ಭಾರತ ದೇಶದಲ್ಲಿ ಹೆಣ್ಣಿನ ಫಲವಂತಿಕೆಯ ಪರಂಪರೆಯ ಸಾಂಸ್ಕೃತಿಕ ನಂಬಿಕೆಗಳಿಗೂ ಹಾಗೂ ಇಪ್ಪತ್ತೊಂದನೆಯ ಶತಮಾನದ ಹೈಟೆಕ್ ಲೈಂಗಿಕ ಅಪರಾಧಗಳ ತಾಂತ್ರಿಕ ಜಾಲಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದು ಸ್ಪಷ್ಟವಾಗುತ್ತದೆ. ಆ ಕಾಲಘಟ್ಟದಿಂದ ಇಲ್ಲಿಯವರೆಗೂ ಲಿಂಗ ಶೋಷಣೆ ಮತ್ತು ಲೈಂಗಿಕ ಅತಿಕ್ರಮಣಗಳ ಮೂಲ ಸ್ವರೂಪ ಮಾತ್ರ ಹಾಗೇ ಮುಂದುವರೆದಿರುವುದು. ಸಮಾಜದಲ್ಲಿ ಹೆಣ್ಣಿನ ಅಸ್ತಿತ್ವವನ್ನು ದೇಹದೊಂದಿಗೆ ನಿರ್ವಚಿಸುವ ಈ ತಂತ್ರಜ್ಞಾನಗಳು ದೇಶದ ಅಭಿವೃದ್ಧಿಗೆ ಹೇಗೆ ಸಹಾಯಕವಾಗಬಲ್ಲವು? ಎಂಬ ಪ್ರಶ್ನೆ ಕಾಡುವುದಂತೂ ಸತ್ಯ. ಈ ವ್ಯವಸ್ಥೆ ಕೇವಲ ಮುಂದುವರೆದ ತಂತ್ರಜ್ಞಾನಕ್ಕೆ ಮಾತ್ರ ಸೀಮಿತವಾಗಿರದೆ ಸನಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಧರ್ಮಗಳು ಸಹ ಹೆಣ್ಣಿನ ನಿರ್ವಚನ ದೇಹ ಮಾತ್ರದಿಂದಲೇ ಮಾಡಿದೆ.

ಹೆಣ್ಣಿನ ದೇಹವನ್ನು ಧರ್ಮಗಳು ಕೀಳಾಗಿ ಕಂಡಿವೆ. ಈ ಧರ್ಮಗಳು ಪುರುಷ ರೂಪಿಸಿದ ಅವತಾರಗಳೆಂದೇ ಹೇಳಬಹುದು. ಹೆಣ್ಣಿನ ದೇಹದ ಮೇಲೆ ಹಕ್ಕು ಚಲಾಯಿಸುವ

ಪುರುಷ ಪ್ರಧಾನ ವ್ಯವಸ್ಥೆಯ ರೂಢಿ ಆಚರಣೆಗಳ ಪಟ್ಟಿ ಬಹಳ ದೊಡ್ಡದಿದೆ. ಅದನ್ನೆಲ್ಲಾ ಸಂಸ್ಕೃತಿ, ಧರ್ಮ, ಪರಂಪರೆ, ಆಚಾರ-ವಿಚಾರಗಳ ಹೆಸರಲ್ಲಿ ಬಲವಾಗಿ ಕಾಯ್ದುಕೊಂಡು ಬರಲಾಗಿದೆ. ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ವೇಶ್ಯಾವಾಟಿಕೆಯಂತಹ ಕ್ರೂರ ಆಚರಣೆಗಳು ಇವತ್ತಿಗೂ ಕೂಡ ಅಲ್ಲಲ್ಲಿ ಜೀವಂತವಾಗಿವೆ. ಹೆಣ್ಣಿನ ದೇಹದ ಮಾರಾಟವನ್ನು ಸಂಸ್ಕೃತಿಯ ಗುಣ ಎಂದು ಹೇಳಲಾಗದು. ಮಾತ್ರ ಕಲ್ಪನೆಯ ಜೊತೆಯಲ್ಲೆ ಗಂಡಸು ವೇಶ್ಯೆಯ ಕಲ್ಪನೆಯನ್ನು ಬೆಳೆಸಿಕೊಂಡು ಬಂದಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಟಿಪ್ಪಣಿಗಳು

೧. **ಸುಧಾ ಪತ್ರಿಕೆ,** ೨೦೦೮.

೨. ವಿಠ್ಠಲರಾವಗಾಯಕ್ವಾಡ, ೨೦೦೧, **ಸ್ತ್ರೀವಾದಿ ವಿಮರ್ಶೆ : ಸ್ವರೂಪ ಮತ್ತು ಪರಿಕಲ್ಪನೆಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ३೧.

३. **ಸಮಾಜ ಮತ್ತು ಜಾಗತೀಕರಣ,** ಎಸ್.ಎಲ್.ಎಮ್: ದೂರಶಿಕ್ಷಣ ನಿರ್ದೇಶನಾಲಯ ಹಂಪಿ, ೨೦೧೧, ಪು.ಸಂ. ೬೯.

೪. ಅದೇ.. ಪು.ಸಂ. ೬೯.

❑❑❑

ಅಧ್ಯಾಯ : ಐದು

ಕ್ಷೇತ್ರಕಾರ್ಯದ ಮಾಹಿತಿ ವಿವರಣೆ

ಅಧ್ಯಾಯ : ಐದು

ಕ್ಷೇತ್ರಕಾರ್ಯದ ಮಾಹಿತಿ ವಿವರಣೆ

೫.೦. ಪ್ರಸ್ತಾವನೆ

ಸಂಶೋಧನೆಯ ವಿಷಯವಾಗಿರುವ ದೂರದರ್ಶನ "ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ"ದ ವಿಷಯಕ್ಕೆ ಸಂಬಂಧಪಟ್ಟಂತೆ ಧಾರಾವಾಹಿಗಳ ಉಗಮ, ಬೆಳವಣಿಗೆ, ಬೆಳವಣಿಗೆಯಿಂದ ಹಿಡಿದು ಜನಪ್ರಿಯತೆಯವರೆಗೂ, ಒಟ್ಟಾರೆಯಾದ ನೋಟವನ್ನು ಅಧ್ಯಾಯ ಒಂದರಲ್ಲಿ ಮತ್ತು ಅಧ್ಯಾಯ ಎರಡರಲ್ಲಿ ಮಾಡಲಾಯಿತು. ಆಯ್ದ ಕನ್ನಡ ಮತ್ತು ಹಿಂದಿ ಧಾರಾವಾಹಿಗಳ ಕಥೆಯ ಸಾರಾಂಶವನ್ನು ವಿವರಿಸಿ, ವಿಶ್ಲೇಷಣೆ ಕೈಗೊಳ್ಳಲಾಯಿತು. ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣವನ್ನು ಹೇಗೆ ಮಾಡಲಾಗಿದೆ? ಧಾರಾವಾಹಿಗಳು ಸಮಾಜಕ್ಕೆ ಉಪಯುಕ್ತವಾಗಿಯೇ? ಧಾರಾವಾಹಿಗಳು ಸಮಾಜದಲ್ಲಿರುವುದನ್ನು ಚಿತ್ರಿಸುತ್ತವೆಯಾ? ಅಥವಾ ಸಮಾಜ ಎಂದರೆ ಹೀಗೆ ಇರಬೇಕು ಎನ್ನುವ ಮಾದರಿಯನ್ನು ಚಿತ್ರಿಸುತ್ತವೆಯಾ? ಧಾರಾವಾಹಿಗಳು ಬೆಳವಣಿಗೆಗೆ ಸಹಕಾರಿಯಾಗಿವೆಯಾ? ಧಾರಾವಾಹಿಗಳನ್ನು ಯಾಕೆ ನೋಡುತ್ತಾರೆ? ಧಾರಾವಾಹಿಗಳ ಕುರಿತು ಹೊಂದಿರುವ ಅಭಿಪ್ರಾಯಗಳೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಪಡೆದುಕೊಳ್ಳುವ ಉದ್ದೇಶದಿಂದ ಆಯ್ದುಕೊಂಡ ಜಿಲ್ಲೆಗಳಿಂದ ಮಾಹಿತಿದಾರರು ಹೊಂದಿರುವ ದೃಷ್ಟಿಕೋನವನ್ನು ಅರ್ಥೈಸಿಕೊಳ್ಳಲು, ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದು, ಮಾಹಿತಿದಾರರಿಗೆ ಕೇಳಿದ ಪ್ರಶ್ನೆಗಳನ್ನು ಅವರಿಂದ ಬಂದಂತಹ ವಿವರಣೆಯನ್ನು ಕೋಷ್ಟಕದಲ್ಲಿ ಕೊಡಲಾಗಿದೆ. ಮಾಹಿತಿದಾರರ, ಕೌಟುಂಬಿಕ, ಧರ್ಮದ ಸಾಕ್ಷರತೆಯ ಮಾಹಿತಿಯನ್ನು ಇಲ್ಲಿ ವಿವರಿಸಲಾಗಿದೆ.

೫.೧. ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹ ಮತ್ತು ಚರ್ಚೆ

ಆಯ್ದುಕೊಂಡ ಕನ್ನಡ ಮತ್ತು ಹಿಂದಿ ಧಾರಾವಾಹಿಗಳಿಂದ ಕಂಡುಕೊಂಡಿರುವ ಮಾಹಿತಿಯನ್ನು ವಾಸ್ತವ ಜಗತ್ತಿನಲ್ಲಿ ಜನಸಾಮಾನ್ಯರು ಒಟ್ಟಾರೆ ಹೊಂದಿರುವ ದೃಷ್ಟಿಕೋನಕ್ಕೂ ಇರುವ ವ್ಯತ್ಯಾಸ, ಸಾಮ್ಯತೆ, ದೃಷ್ಟಿಕೋನಗಳನ್ನು ಅರ್ಥೈಸಿಕೊಳ್ಳುವ ಉದ್ದೇಶದಿಂದ, ಧಾರಾವಾಹಿಗಳ ಮಾಹಿತಿಯ ವಿಶ್ಲೇಷಣೆಗೆ ಪೂರಕವಾಗುವ ಕ್ಷೇತ್ರಕಾರ್ಯದ ಮಾಹಿತಿಯನ್ನು ಪಡೆಯುವ ಉದ್ದೇಶದಿಂದ ಅರಚಿತ ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹ ಮತ್ತು ಚರ್ಚೆಯನ್ನು ಕೈಗೊಂಡಿದ್ದೇನೆ.

ಸಹಭಾಗಿ ಅವಲೋಕನದ ಮೂಲಕ ಮಾಹಿತಿ ಪಡೆದಿರುವುದರ ವಿವರಣೆಯನ್ನು, ಮಾಹಿತಿದಾರರು ಹೊಂದಿರುವ ದೃಷ್ಟಿಕೋನ, ಅಭಿಪ್ರಾಯ, ಮಹಿಳೆಯರ ಪ್ರತಿನಿಧೀಕರಣದಲ್ಲಿ ಬಯಸುವ ಬದಲಾವಣೆ, ಧಾರಾವಾಹಿಗಳ ಉದ್ದೇಶವನ್ನು ತಿಳಿದುಕೊಳ್ಳಲು ಈ ವಿಧಾನವನ್ನು ಅನುಸರಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಲಭಿಸಿದ ಮಾಹಿತಿಯನ್ನು ಸಂಗ್ರಹಿಸಿ, ಮಾಹಿತಿಯ ವಿವರಗಳ ವಿಶ್ಲೇಷಣೆಯು ಈ ಕೋಷ್ಟಕಗಳ ವಿವರಣೆಯಲ್ಲಿ ನೀಡಲಾಗಿದೆ.

ಕೋಷ್ಟಕ–೧ : ಧರ್ಮದ ವಿವರ

ಕ್ರಸಂ.	ಧರ್ಮ	ಮಾಹಿತಿದಾರರು	ಶೇಕಡಾ
೧.	ಹಿಂದೂ	೮೦	೪೦
೨.	ಮುಸ್ಲಿಂ	೫೦	೨೫
೩.	ಕ್ರಿಶ್ಚಿಯನ್	೩೫	೧೭.೫೦
೪.	ಬೌದ್ಧ	೩೫	೧೭.೫೦
ಒಟ್ಟು		೨೦೦	೧೦೦

ಸಂದರ್ಶನಕ್ಕೆಂದು ಆಯ್ಕೆ ಮಾಡಿಕೊಂಡಂತಹ ಮಾಹಿತಿದಾರರ ಧರ್ಮದ ವಿವರಣೆ ನೋಡುವುದಾದರೆ, ಹಿಂದೂ ಧರ್ಮ ಮತ್ತು ಅದರ ಒಳಪಂಗಡಗಳಿಗೆ ಸೇರಿದವರಲ್ಲಿ ೮೦(೪೦%)ರಷ್ಟಿದ್ದರೆ, ಮುಸ್ಲಿಂ ಧರ್ಮಕ್ಕೆ ಸೇರಿದ ಮಾಹಿತಿದಾರರಲ್ಲಿ ೫೦(೨೫%)ರಷ್ಟಿದ್ದಾರೆ. ಇನ್ನೂ ಬೌದ್ಧ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಲ್ಲಿ ಕ್ರಮವಾಗಿ ೩೫(೧೭.೫೦%) ಜನ ಮಾಹಿತಿದಾರರಿದ್ದಾರೆ. ಈ ಧರ್ಮಗಳಿಗೆ ಕೆಲವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮತಾಂತರಗೊಂಡವರಿದ್ದು. ಈ ಮಾಹಿತಿದಾರರಿಂದ ದೂರದರ್ಶನ ಧಾರಾವಾಹಿಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ.

ಕೋಷ್ಟಕ–೨ : ಕೌಟುಂಬಿಕ ವಿವರ

ಕ್ರಸಂ.	ಕುಟುಂಬ ವ್ಯವಸ್ಥೆ	ಮಾಹಿತಿದಾರರು	ಶೇಕಡಾ
೧.	ಅವಿಭಕ್ತ	೦೭೨	೩೬
೨.	ವಿಭಕ್ತ	೧೨೮	೬೪
ಒಟ್ಟು		೨೦೦	೧೦೦

ಮೇಲಿನ ಕೋಷ್ಟಕದ ವಿವರಣೆಯು ಕೌಟುಂಬಿಕ ವ್ಯವಸ್ಥೆಯ ಹಿನ್ನೆಲೆಯನ್ನು ವಿವರಿಸುತ್ತದೆ. ಇಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ೭೨(೩೬%)ರಷ್ಟಿದೆ. ಈ ಕುಟುಂಬಗಳಲ್ಲಿ ಮೂರರಿಂದ

ನಾಲ್ಕು ತಲೆಮಾರಿನವರು ವಾಸಿಸುತ್ತಿದ್ದು. ತಮ್ಮ ಕುಲಕಸುಬಾಗಿ ಕೃಷಿಯನ್ನು ಮತ್ತು ದೇಸಿವೈದ್ಯ ಪದ್ಧತಿಯನ್ನು ನಂಬಿದ್ದಾರೆ.ಇಲ್ಲಿ ಕೆಲವು ಮಹಿಳೆಯರು ಸೂಲಗಿತ್ತಿಯರಾಗಿ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಾ ಬಂದವರಿದ್ದಾರೆ. ಇನ್ನು ವಿಭಕ್ತ ಕುಟುಂಬಗಳ ವಿವರಣೆಯಲ್ಲಿ ೧೨೮(೬೪%) ಕುಟುಂಬಗಳಿರುವುದನ್ನು ಕಾಣಬಹುದಾಗಿದೆ. ಮೇಲೆ ಸೂಚಿಸಿದ ವಿವರಣೆಯು ಗುಲಬರ್ಗಾ ಮತ್ತು ಯಾದಗಿರಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕುಟುಂಬಗಳ ವಿವರಣೆಯಾಗಿದೆ. ವಿಭಕ್ತ ಕುಟುಂಬಗಳಲ್ಲಿ ವಾಸಿಸುವವರು ಹೆಚ್ಚಿನ ಸಂಖ್ಯೆಯಲ್ಲಿ ಅಸಂಘಟಿತ ವಲಯದ ದುಡಿಮೆಗಾರರಾಗಿದ್ದಾರೆ. ಇವರು ಚಾಪೆಗಳನ್ನು, ಪ್ಲಾಸ್ಟಿಕ್ ವಸ್ತುಗಳನ್ನು, ಬುಟ್ಟಿ ಕಸಬರಿಗೆ, ಬಟ್ಟೆಗಳನ್ನು ಮಾರಾಟ ಮಾಡುವವರಾಗಿದ್ದಾರೆ. ಇವರು ಸುಮಾರು ೨೦-೨೫ ವರ್ಷಗಳ ಹಿಂದೆ ಕೆಲಸದ ಕಾರಣದಿಂದ ನೆರೆ ಜಿಲ್ಲೆಗಳಾದ ಆಂಧ್ರಪ್ರದೇಶ, ಹೈದರಾಬಾದ್, ಮಹಾರಾಷ್ಟ್ರ, ಗೋವಾಗಳಿಂದ ವಲಸೆ ಬಂದಂತಹ ಕುಟುಂಬಗಳಿದ್ದು, ಇವರು ಇಲ್ಲಿಯೇ ನೆಲೆಸಿರುವುದನ್ನು ನೋಡಬಹುದಾಗಿದೆ.

ಕೋಷ್ಟಕ-೩ : ಸಾಕ್ಷರತೆಯ ವಿವರ

ಕ್ರಸಂ.	ಮಹಿಳಾ ಸಾಕ್ಷರರು	ಮಾಹಿತಿದಾರರು	ಶೇಕಡಾ
೧.	ಅನಕ್ಷರಸ್ಥರು	೭೮	೩೯
೨.	ಪ್ರಾಥಮಿಕ	೫೪	೨೭
೩.	ಪ್ರೌಢ	೩೬	೧೮
೪.	ಪದವಿ/ಸ್ನಾತಕೋತ್ತರ	೩೨	೧೬
ಒಟ್ಟು		೨೦೦	೧೦೦

ಈ ಕೋಷ್ಟಕವು ಮಹಿಳೆಯರ ಸಾಕ್ಷರತೆಯ ಒಟ್ಟು ವಿವರಣೆಯಾಗಿದೆ, ಕ್ಷೇತ್ರಕಾರ್ಯಕ್ಕಾಗಿ ಆಯ್ದುಕೊಂಡ ಜಿಲ್ಲೆಗಳಲ್ಲಿನ ಮಾಹಿತಿದಾರರ ಒಟ್ಟು ಸಾಕ್ಷರತೆಯ ಪ್ರಮಾಣವನ್ನು ಕಂಡುಕೊಳ್ಳುವ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಲಾಯಿತು. ಕೋಷ್ಟಕದ ವಿವರಣೆಯಲ್ಲಿ ಅನಕ್ಷರಸ್ಥ ಮಹಿಳೆಯರ ಸಂಖ್ಯೆ ಹೆಚ್ಚಾಗಿದ್ದು ೭೮(೩೯%), ಇವರು ಶಿಕ್ಷಣದಿಂದ ವಂಚಿತರಾಗಿರಲು ಹಲವು ಮುಖ್ಯವಾದ ಕಾರಣಗಳಲ್ಲಿ ಬಡತನ ಒಂದು. ಅದರೊಂದಿಗೆ ಮನೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಅವುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಎರಡನೆಯ ಕಾರಣವಾಗಿದೆ, ಎಲ್ಲರಿಗೂ ಶಿಕ್ಷಣ ಕೊಡಿಸುವ ಸಾಮರ್ಥ್ಯ ತಂದೆ-ತಾಯಿಗಳಿಗಿಲ್ಲದ ಪರಿಸ್ಥಿತಿ, ಚಿಕ್ಕ ವಯಸ್ಸಿನಲ್ಲಿಯೇ ಮನೆಯ ಜವಾಬ್ದಾರಿ, ಎಳೆ ಮಕ್ಕಳಿಗೆ ತಾಯಿಯಾಗಿ ನೋಡಿಕೊಳ್ಳುವ ಜವಾಬ್ದಾರಿ ಹೆಗಲೇರಿದ್ದರಿಂದ, ಶಾಲೆ ಕಲಿಯುವ ಮನಸ್ಸಿದ್ದರೂ ಅನಿವಾರ್ಯವಾಗಿ ಶಾಲೆ ಬಿಡಬೇಕಾದ ಸಂದರ್ಭಗಳು ಬಂದು ನಾಲ್ಕು ಅಕ್ಷರ ಕಲಿಯದಂತಾಯಿತು. ಈ ಕಾರಣಗಳಿಂದಾಗಿ

ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಬಿಡಬೇಕಾಯಿತೆಂದು ಪಶ್ಚಾತಾಪ ವ್ಯಕ್ತಪಡಿಸುತ್ತಾರೆ. ಇಲ್ಲಿ ಪ್ರಾಥಮಿಕ ಶಾಲೆಯ ಮೆಟ್ಟಲು ಹತ್ತಿದವರರಲ್ಲಿ ೫೪(೨೭%)ಮಹಿಳೆಯರಿದ್ದು, ಮುಂದೆ ಪ್ರೌಢಶಾಲೆಗೆ ಬಂದವರಲ್ಲಿ ೩೬(೧೮%) ಮಹಿಳೆಯರಿದ್ದಾರೆ. ಇನ್ನು ಪದವಿ ಮತ್ತು ಸ್ನಾತಕೋತ್ತರದಲ್ಲಿ ಅಧ್ಯಯನ ಮಾಡುತ್ತಿರುವವರು ೩೨(೧೬%) ಜನರಿದ್ದು, ಇವರಲ್ಲಿ ಕೆಲವು ಯುವತಿಯರು ಮತ್ತು ಗೃಹಿಣಿಯರು ಮುಕ್ತ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆಯುತ್ತಿರುವುದು ವಿಶೇಷವಾಗಿದೆ. ಕೋಷ್ಟಕದ ವಿವರಣೆಯನ್ನು ನೋಡಿದರೆ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಅದಕ್ಕೆ ತಂದೆ ತಾಯಿಯರ ದಿವ್ಯವಾದ ನಿರ್ಲಕ್ಷ್ಯವೂ ಕಾರಣವಾಗಿದೆ ಎನ್ನಬಹುದು.ಇದರೊಂದಿಗೆ ಹೆಣ್ಣು ಶಿಕ್ಷಣ ಪಡೆಯುವುದರಿಂದ ನಮಗೆ ಯಾವ ರೀತಿಯಿಂದಲೂ ಸಹಾಯವಾಗದು, ಬದಲಿಗೆ ಮದುವೆ ಮಾಡಿಕೊಡಬೇಕಾದರೆ ಹೆಚ್ಚು ವರದಕ್ಷಿಣೆ ವರೋಪಚಾರ ಅಂತ ಮಾಡಬೇಕಾಗುತ್ತದೆ ಅದೆಲ್ಲಾ ನಮ್ಮಂತಹ ಬಡವರ ಕೈಲಾಗದ ಕೆಲಸ ಎನ್ನುವ ಧೋರಣೆ ಈ ಪ್ರದೇಶದ ತಂದೆ ತಾಯಿಗಳಲ್ಲಿ ಮನೆಮಾಡಿರುವುದರಿಂದ ಹೆಣ್ಣುಮಕ್ಕಳ ಶಿಕ್ಷಣವನ್ನು ವಿರೋಧಿಸುವ ಮನಸ್ಥಿತಿಯನ್ನು ಇವರು ಹೊಂದಿರುವುದು ಶೋಚನಿಯವಾದ ಸಂಗತಿ ಎಂದರೆ ಅದು ತಪ್ಪಾಗಲಾರದು.

ಕೋಷ್ಟಕ–೪ : ಕುಟುಂಬ ಸಮೇತ ಟಿವಿ ನೋಡುತ್ತೀರಾ?

ಕ್ರಸಂ.	ವಿವರ	ಮಾಹಿತಿದಾರರು	ಶೇಕಡಾ
೧.	ಹೌದು	೦೬೦	೩೦
೨.	ಇಲ್ಲ	೧೪೦	೭೦
ಒಟ್ಟು		**೨೦೦**	**೧೦೦**

ಸಂದರ್ಶನಕ್ಕಾಗಿ ಭೇಟಿ ಮಾಡಿದ ಮಹಿಳೆಯರಿಗೆ ಕುಟುಂಬ ಸಮೇತ ಟಿವಿ ನೋಡುತ್ತೀರಾ? ಎಂದು ಕೇಳಲಾಯಿತು. ಅದಕ್ಕೆ ಉತ್ತರವಾಗಿ ಹೌದು ಎಂದು ಸುಮಾರು ೬೦ ಜನ (೩೦%) ಮಾಹಿತಿದಾರರು ವಿವರಿಸಿದರೆ, ಕುಟುಂಬ ಸಮೇತ ನೋಡುವಲ್ಲಿ ಹಲವಾರು ತೊಂದರೆಗಳಿದ್ದುದರಿಂದ ನೋಡಲು ಆಗುವುದಿಲ್ಲವೆಂದು ೧೪೦ (೭೦%) ಮಾಹಿತಿದಾರರು ವಿವರಿಸುತ್ತಾರೆ. ಇದಕ್ಕೆ ಅವರು ಕೊಡುವ ಕಾರಣವೆಂದರೆ ಮನೆಯ ಇತರ ಸದಸ್ಯರ ಅಭಿರುಚಿಗಳಲ್ಲಿ ಭಿನ್ನತೆ ಇರುವುದು. ಒಬ್ಬರು ಧಾರವಾಹಿ ಇಷ್ಟಪಟ್ಟರೆ, ಇನ್ನೊಬ್ಬರು ವಾರ್ತೆಗಳು ಮತ್ತೊಬ್ಬರು ಹಾಡು, ಸಿನೆಮಾ ಇಷ್ಟಪಡಬಹುದು. ಇದರಿಂದ ಟಿವಿ ನೋಡಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ಅವರು ನೀಡುವ ಇನ್ನೊಂದು ಕಾರಣವೆಂದರೆ, ಯಾವಾಗಲಾದರು ಮನೆಮಂದಿಯೆಲ್ಲಾ ಕುಳಿತು ಒಂದು ಒಳ್ಳೆಯ ಕಥೆಯಿರುವ ಸಿನಿಮಾವನ್ನು ನೋಡುತ್ತಿರಬೇಕಾದರೆ, ಸಿನಿಮಾದ ಮಧ್ಯ ಬರುವ ಕೆಲವೊಂದು ಸನ್ನಿವೇಶಗಳಾದ ಚುಂಬಿಸುವುದು, ಬಾಹುಬಂಧನ, ಅಪ್ಪುಗೆ, ಮೊದಲ ರಾತ್ರಿಯ ಸನ್ನಿವೇಶ, ಅಶ್ಲೀಲ ಹಾಡುಗಳು. ಇಂತಹ ಸನ್ನಿವೇಶಗಳು

ಬಂದಾಗ ಒಂಥರಾ ಇರಿಸು ಮುರಿಸು, ಮುಜುಗರಗಳನ್ನು ಎದುರಿಸಬೇಕಾಗುತ್ತದೆ. ಇದಲ್ಲದೆ ಸಿನಿಮಾದ ಮಧ್ಯೆ ಮಧ್ಯೆ ಬರುವ ಕೆಲವೊಂದು ಜಾಹಿರಾತುಗಳಾದ ವಿಸ್ಪರ್, ಸ್ಟೇಫ್ರಿ ಸ್ಯಾನಿಟರಿ ನ್ಯಾಪಕಿನ್ಸ್‌ಗಳು, ನಿರೋಧ, ಈ ಜಾಹಿರಾತುಗಳನ್ನು ಕುರಿತು ಇಂದು ಮುಕ್ತವಾಗಿ ತೋರಿಸುತ್ತಾರೆ. ಇವುಗಳ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ. ಇವನ್ನು ನೋಡುವ ಮಕ್ಕಳ ಮನಸ್ಸು ಆ ವಸ್ತುಗಳು ಏನು? ಯಾಕೆ ತೋರಿಸುತ್ತಾರೆ? ಎಂಬ ಪ್ರಶ್ನೆಗಳನ್ನು ಕೇಳುತ್ತಾರೆ. ಆ ಪ್ರಶ್ನೆಗಳಿಗೆ ಉತ್ತರಿಸಬೇಕಾದಾಗ ನಮಗೆ ಸಂಕೋಚ ಉಂಟಾಗುತ್ತದೆ,ಇಂತಹ ಸಂದರ್ಭಗಳನ್ನು ಎದುರಿಸಲು ಮತ್ತು ಅನುಭವಿಸಲು ಆಗದಂತಹ ಪರಿಸ್ಥಿತಿ ನಮ್ಮದಾಗಿರುತ್ತದೆ. ಹಾಗಾಗಿ ಎಲ್ಲರೂ ಕೂಳಿತು ಟಿವಿ ನೋಡುವುದು ಬಹಳ ಕಡಿಮೆ ಎಂದು ಹೇಳುತ್ತಾರೆ. ಇಲ್ಲಿ ಮಾಹಿತಿ ನೀಡಿದ ಎಲ್ಲ ಮಾಹಿತಿದಾರರು ಸುಮಾರು ೩೫ರಿಂದ ೫೦ ವರ್ಷ ವಯಸ್ಸಿನವರಾಗಿದ್ದು, ಅವರು ನಡೆಸಿದಂತಹ ಸಾಂಪ್ರದಾಯಿಕ ಜೀವನಕ್ಕೂ ಇವತ್ತಿನ ಆಧುನಿಕ ಬದುಕಿನ ಜೀವನಕ್ಕೂ ಅಜಗಜಾಂತರ ವ್ಯತ್ಯಾಸಗಳಿದ್ದು, ತಮ್ಮ ಕಾಲದಲ್ಲಿ ಮಡಿ ಮೈಲಿಗೆ ಎಂದು ಬಾಳಿದವರಿಗೂ, ಎಲ್ಲವನ್ನೂ ಗಾಳಿಗೆ ತೂರಿ ಬದುಕುವ ಇವತ್ತಿನ ಬದುಕಿಗೂ ಹೋಲಿಕೆ ಮಾಡಿ ನೋಡುವವರಾಗಿದ್ದು, ಎಲ್ಲ ವಿಷಯಗಳ ಕುರಿತು ಮುಕ್ತವಾಗಿ ಮಾತನಾಡುವ ಮತ್ತು ತೋರಿಸುವ ಈ ಬದುಕನ್ನು ಸುಲಭವಾಗಿ ಒಪ್ಪಿಕೊಳ್ಳಲು ಆಗದೇ ಹೋದಾಗ ಸಹಜವಾಗಿಯೇ ಮನೆಯಲ್ಲಿ ಮಕ್ಕಳು ಮತ್ತು ಪುರುಷರೊಂದಿಗೆ ಟಿವಿ ನೋಡಲು ಆಗುವುದಿಲ್ಲ ವೆಂದು ತಿಳಿದು ಬರುತ್ತದೆ. ಇಲ್ಲಿ ಒಂದು ಸಂಗತಿ ಗಮನ ಸೆಳೆಯುತ್ತದೆ, ಅದು ಸಾಂಪ್ರದಾಯಿಕ ಮಾದರಿಯಲ್ಲಿ ಜೀವನ ನಡೆಸಿರುವ ಮಹಿಳೆಯರು ಆಧುನಿಕ ಮನೋಭಾವನೆಯಿಂದ ದೂರ ಉಳಿಯುವ ಅದನ್ನು ಅಳವಡಿಸಿಕೊಳ್ಳಲು ಹಿಂದೆ ಸರಿಯುವದರಿಂದ ಈ ರೀತಿಯಾದ ಹಿಂಜರಿಕೆಯನ್ನು ಅನುಭವಿಸುವುದನ್ನು ಅರಿಯಬಹುದಾಗಿದೆ. ಅವರು ಕೊಡುವ ಇನ್ನೊಂದು ಕಾರಣವೆಂದರೆ, ಸಂಜೆಯ ಹೊತ್ತು ಅಡುಗೆ ಕೆಲಸಗಳಲ್ಲಿ ತೊಡಗಿಕೊಳ್ಳುವುದರಿಂದ ಸಮಯ ಸಿಗುವುದಿಲ್ಲ. ಹಾಗಾಗಿ ಟಿವಿ ನೋಡಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ಮನೆಯಲ್ಲಿ ಗೃಹಿಣಿತ್ವದ ಜವಾಬ್ದಾರಿ ಹೇಗಲೇರಿದ್ದರಿಂದ, ಅವಳ ಸಮಯ ಅಡುಗೆ ಮನೆಯಲ್ಲಿ ಕಳೆಯು ವುದರಿಂದ ಟಿವಿ ನೋಡಲು ಆಗುವುದಿಲ್ಲವೆಂದು ಉತ್ತರಿಸುತ್ತಾರೆ.

ಕೋಷ್ಟಕ-೫ : ನೀವು ಟಿ.ವಿ ನೋಡಲು ಎಷ್ಟು ಗಂಟೆ ನಿಗದಿಪಡಿಸುತ್ತೀರಾ?

ಕ್ರಸಂ.	ಗಂಟೆಗಳು	ಮಾಹಿತಿದಾರರು	ಶೇಕಡಾ
೧.	೧-೨	೬೦	೩೦
೨.	೨-೪	೨೫	೧೨.೫
೩.	೪-೫	೭೦	೩೫
೪.	ನಿಗದಿ ಮಾಡಿರುವುದಿಲ್ಲ	೪೫	೨೨.೫
ಒಟ್ಟು		೨೦೦	೧೦೦.೦೦

ಮೇಲೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಾಹಿತಿದಾರರೆಲ್ಲರೂ ತಾವು ಟಿವಿ ನೋಡಲು ಒಂದು ದಿನದಲ್ಲಿ ಎಷ್ಟು ಸಮಯವನ್ನು ನಿಗದಿಪಡಿಸುತ್ತಾರೆ ಎಂಬುದನ್ನು ವಿವರಿಸಿದ್ದಾರೆ. ಒಂದು ದಿನದಲ್ಲಿ ೧-೨ ಗಂಟೆಯವರೆಗೂ ತಮ್ಮ ಸಮಯವನ್ನು ನಿಗದಿಪಡಿಸಿದ ಮಹಿಳೆಯರು ೬೦(೩೦%)ರಷ್ಟಿದ್ದಾರೆ. ಇವರು ತಮ್ಮ ಬಿಡುವಿನ ವೇಳೆಯಲ್ಲಿ ಕೆಲವೊಂದು ಧಾರವಾಹಿಗಳನ್ನು ಮಾತ್ರ ನೋಡುವಂತಹ ಶಿಕ್ಷಕರು ಇವರಾಗಿದ್ದಾರೆ. ಇನ್ನು ಎರಡರಿಂದ ನಾಲ್ಕು ಗಂಟೆಯವರೆಗೆ ಸಮಯ ನಿಗದಿಮಾಡಿದ ಮಹಿಳೆಯರು ೨೫(೧೨.೫೦%)ರಾದರೆ, ನಾಲ್ಕರಿಂದ ಐದು ಗಂಟೆಯವರೆಗೂ ಸಮಯ ನಿಗದಿ ಮಾಡುವ ಮಹಿಳೆಯರು ೭೦(೩೫%)ರಷ್ಟಿದ್ದಾರೆ. ಸಾಮಾನ್ಯ ವಾಗಿ ಈ ಮಹಿಳೆಯರು ತಮ್ಮ ತಮ್ಮ ಕೆಲಸಗಳ ಮಧ್ಯದಲ್ಲಿ ಬಿಡುವಾದಾಗ, ಇಲ್ಲವೇ ಕೆಲಸಗಳನ್ನು ಮಾಡುತ್ತಲೇ, ಧಾರವಾಹಿಗಳನ್ನು ಮತ್ತು ಇತರ ಕಾರ್ಯಕ್ರಮಗಳನ್ನು ನೋಡು ವಂತಹ ಗೃಹಿಣಿಯರಾಗಿದ್ದಾರೆ. ಕೆಲವೊಂದು ಸಂದರ್ಭಗಳಲ್ಲಿ ರಾತ್ರಿ ೧೦ ಗಂಟೆಯವರೆಗೂ ಅದಕ್ಕೂ ಹೆಚ್ಚಿನ ಸಮಯವನ್ನು ನಿಗದಿ ಮಾಡಿರುತ್ತಾರೆಂದು ವಿವರಿಸಿದ್ದಾರೆ. ಸಮಯವನ್ನು ನಿಗದಿ ಮಾಡದೆ ಇರುವವರು ೪೫(೨೨.೫%)ಉದ್ಯೋಗಸ್ಥ ಮಹಿಳೆಯರಾಗಿದ್ದಾರೆ. ಅವರು ಮನೆಯ ಕೆಲಸಗಳು ಮತ್ತು ತಮ್ಮ ಉದ್ಯೋಗದ ಕೆಲಸಗಳನ್ನು ಮಾಡಬೇಕಾದಂತಹ ಸಂದರ್ಭಗಳಿದ್ದಾಗ, ಅದೆಲ್ಲ ಮುಗಿದ ಮೇಲೆ ಸಮಯ ಸಿಕ್ಕರೆ ಟಿವಿ ನೋಡುವುದಾಗಿ ವಿವರಿಸಿದ್ದಾರೆ. ಒಂದು ಧಾರವಾಹಿಯನ್ನು ನೋಡಬೇಕಾದರೆ ಅದಕ್ಕೆ ತುಂಬಾ ಸಮಯಬೇಕು. ಅಂದರೆ ಇವತ್ತಿನ ಸಂಚಿಕೆಯಲ್ಲಿ ಏನಾಗಿದೆಯೋ, ನಾಳಿನ ಸಂಚಿಕೆಯಲ್ಲಿ ಏನಾಗುತ್ತದೇಯೊ ಎಂದು ಕಾದು ನೋಡಬೇಕಾಗುತ್ತದೆ ಎಂಬಂತಹ ಪ್ರಶ್ನೆಗಳು ಮತ್ತು ಕೂತುಹಲಗಳೆರಡನ್ನು ಒಟ್ಟಿಗೆ ಕಟ್ಟಿಕೊಟ್ಟು ಧಾರಾವಾಹಿ ಮುಗಿಸುತ್ತಾರೆ. ಈ ಧಾರಾವಾಹಿಗಳನ್ನು ನಾಳೆಗೆ ಏನಾಗುತ್ತದೆ.ಈ ಧಾರಾವಾಹಿಗಳನ್ನು ನಾಳೆಗೆ ನೋಡಬೇಕಾದರೆ ಮನೆಯ ಇತರ ಕೆಲಸಗಳನ್ನು ಬಿಡಬೇಕಾಗುತ್ತದೆ. ಇತರ ಕೆಲಸಗಳು ಬಿಡುವುದರಿಂದ ಸಮಯದಲ್ಲಿ ತೊಂದರೆಯಾಗುತ್ತಿರುತ್ತದೆ. ಈ ಕಾರಣದಿಂದ ಆದಷ್ಟು ಧಾರವಾಹಿ ನೋಡುವುದನ್ನು ಮುಂದೆ ಹಾಕುತ್ತೇವೆ. ಅದರೆಡೆಗೆ ಕೂತುಹಲಗಳಿದ್ದರು. ಕೆಲವೊಂದು ಸಂದರ್ಭದಲ್ಲಿ ನೋಡಲಾಗುವುದಿಲ್ಲ. ಹಾಗಾಗಿ ನಾವು ಇಂತಿಷ್ಟೆ ಅಂತ ಸಮಯ ನಿಗದಿ ಮಾಡಿರುವುದಿಲ್ಲವೆಂದು ಮಾಹಿತಿ ನೀಡುತ್ತಾರೆ. ಇವರಲ್ಲಿ ಕೆಲವು ಮಾಹಿತಿದಾರರು ತಮ್ಮ ನೆಚ್ಚಿನ ಧಾರವಾಹಿಗಳನ್ನು ನೋಡುವುದಕ್ಕಾಗಿಯೇ ಸಮಯವನ್ನು ನಿಗದಿ ಮಾಡಿರುತ್ತೇ ವೆಂದು ಮಾಹಿತಿ ನೀಡಿದ್ದಾರೆ.

ಕೋಷ್ಟಕ-೬ : ಯಾವ ಯಾವ ವಾಹಿನಿಗಳನ್ನು (ಚಾನೆಲ್‌ಗಳನ್ನು) ನೋಡುತ್ತೀರಾ?

ಕ್ರಸಂ.	ವಾಹಿನಿಗಳು	ಮಾಹಿತಿದಾರರು	ಶೇಕಡಾ
೧.	ಉದಯ	೩೫	೧೭.೫೦
೨.	ಈ ಟಿವಿ	೩೫	೧೭.೫೦
೩.	ಸುವರ್ಣ	೩೦	೧೫.೦೦

೪.	ಝೀ ಕನ್ನಡ	೩೦	೧೫.೦೦
೫.	ಸ್ಟಾರ್‌ಪ್ಲಸ್	೪೦	೨೦.೦೦
೬.	ಸೋನಿ ಟಿವಿ	೩೦	೧೫.೦೦
	ಒಟ್ಟು	೨೦೦	೧೦೦.೦೦

ಅಧ್ಯಯನಕ್ಕಾಗಿ ಆಯ್ದುಕೊಂಡಿರುವ ವಾಹಿನಿಗಳಲ್ಲಿ ಹೆಚ್ಚು ವಿಕ್ಷಕರನ್ನು ಹೊಂದಿರುವ ವಾಹಿನಿ ಯಾವುದು ಎಂದು ತಿಳಿಯುವ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಲಾಯಿತು.ಅದಕ್ಕೆ ೩೫(೧೭.೫೦%)ರಷ್ಟು ಜನ ಮಹಿಳೆಯರು ಕನ್ನಡದಲ್ಲಿ ಪ್ರಸಾರವಾಗುವ ಉದಯವಾಹಿನಿಯನ್ನು ನೋಡುವುದೆಂದು ಉತ್ತರಿಸಿದರೆ, ಈ ಟಿವಿ ಕನ್ನಡ ವಾಹಿನಿಯನ್ನು ನೋಡುವ ಮಹಿಳೆಯರು ೩೫(೧೭.೫೦%)ರಷ್ಟಿದ್ದಾರೆ. ಇಲ್ಲಿ ಉದಯ ಮತ್ತು ಈಟಿವಿ ಕನ್ನಡ ವಾಹಿನಿಯನ್ನು ನೋಡುವವರ ಸಂಖ್ಯೆಯು ಸಮವಾಗಿದೆ. ಅದೇ ರೀತಿಯಾಗಿ ಸುವರ್ಣ ಮತ್ತು ಝೀ ಕನ್ನಡ ವಾಹಿನಿಯ ವಿಕ್ಷಣೆಯಲ್ಲಿಯು ಕೂಡ ಸಮಾನತೆ ಇರುವುದು ಕಂಡುಬರುತ್ತದೆ. ಇಲ್ಲಿ ಮಹಿಳಾ ವಿಕ್ಷಕರು ೩೦(೧೫%)ರಷ್ಟಿದ್ದಾರೆ. ಇನ್ನು ಹಿಂದಿ ವಾಹಿನಿಗಳ ವಿಷಯಕ್ಕೆ ಬಂದರೆ ಸ್ಟಾರ್ ಪ್ಲಸ್ ವಾಹಿನಿಯಲ್ಲಿ ಬರುವ ಧಾರವಾಹಿಗಳನ್ನು ನೋಡುವವರ ಸಂಖ್ಯೆ ೪೦(೨೦%)ರಷ್ಟಿದೆ. ಇಲ್ಲಿ ಮಾಹಿತಿ ನೀಡಿದವರು ಹೆಚ್ಚಿನ ಸಂಖ್ಯೆಯಲ್ಲಿ ಯುವತಿಯರು ಮತ್ತು ಮಧ್ಯಮವರ್ಗದ ಗೃಹಿಣಿಯರಿದ್ದಾರೆ. ಇನ್ನೂ ಸೋನಿ ಟಿವಿಯ ವಿಕ್ಷಕರು ೩೦(೧೫%)ರಷ್ಟಿದ್ದಾರೆ. ಈ ವಾಹಿನಿಯಲ್ಲಿ ಪ್ರಸಾರವಾಗುವಂತಹ ಕಾರ್ಯಕ್ರಮಗಳನ್ನು ನೋಡುವವರಲ್ಲಿ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾರಣವೆಂದರೆ ಈ ವಾಹಿನಿಯಲ್ಲಿ ಬರುವ ಕೆಲವೊಂದು ಕಾರ್ಯಕ್ರಮಗಳು ಸಮಾಜದಲ್ಲಿ ಮಹಿಳೆಯರ ಮೇಲಾಗುತ್ತಿರುವ, ಶೋಷಣೆ, ಲೈಂಗಿಕ ಹಿಂಸೆ, ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ ಮತ್ತು ಹಿಂಸೆ, ಮೋಸ, ವಂಚನೆಗಳ ಕುರಿತು ಮುಖಾಮುಖಿಯಾಗಿಸುವ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಈ ಕಾರ್ಯಕ್ರಮಗಳ ಪ್ರಸಾರದಿಂದ ನಮಗೆ ಒಂದು ನೀತಿ ಪಾಠ ದೊರೆಯುತ್ತದೆ, ಇದರಲ್ಲಿ ಒಳ್ಳೆಯ ಅಂಶಗಳು ಆಯ್ಕೆ ಮಾಡಿಕೊಂಡು ನೋಡುತ್ತೇವೆ. ನಾವು ಯಾರೊಂದಿಗೆ ಹೇಗೆ ಬೇರೆಯಬೇಕು.ನಮ್ಮ ಜಾಗೃತೆಯನ್ನು,ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಬೇಕು ಎಂಬುವುದನ್ನು ಇಂತಹ ಕಾರ್ಯಕ್ರಮಗಳಿಂದ ನೋಡಿ ಕಲಿಯುತ್ತೇವೆ. ಇಂತಹ ಕಾರ್ಯಕ್ರಮಗಳು ಧಾರಾವಾಹಿಗಳಿಗಿಂತ ಹೆಚ್ಚು ಪ್ರಭಾವ ಬೀರುತ್ತವೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇವರು ಇಷ್ಟಪಡುವ ಕಾರ್ಯಕ್ರಮಗಳಲ್ಲಿ, ಅದಾಲತ್, ಕ್ರೈಂಪೆಟ್ರೋಲ, ಸಿ.ಅಯ್.ಡಿ ಮತ್ತು ಇತರೆ ಕಾರ್ಯಕ್ರಮಗಳು ಮುಖ್ಯವಾಗಿವೆ.

ಕೋಷ್ಟಕ–೭ : ನೀವು ಧಾರಾವಾಹಿಗಳನ್ನು ನೋಡುತ್ತೀರಾ?

ಕ್ರಸಂ.	ವಿವರ	ಮಾಹಿತಿದಾರರು	ಶೇಕಡಾ
೧.	ಹೌದು	೧೩೦	೬೫
೨.	ಇಲ್ಲ	೦೭೦	೩೫
	ಒಟ್ಟು	೨೦೦	೧೦೦

ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಂಡಂತಹ ಮಾಹಿತಿದಾರರಿಗೆ ನೀವು ಧಾರಾವಾಹಿಗಳನ್ನು ನೋಡುತ್ತೀರಾ ಎಂದು ಕೇಳಲಾಯಿತು. ಅದಕ್ಕೆ ಉತ್ತರಿಸಿದ ಇನ್ನೂರು (೨೦೦) ಜನ ಮಹಿಳೆಯರಲ್ಲಿ ಹೌದು ಎಂದು ೧೩೦(೬೫%) ಮಹಿಳೆಯರು ಉತ್ತರಿಸಿದರು. ಧಾರಾವಾಹಿಗಳನ್ನು ನೋಡುವವರಲ್ಲಿ ಹೆಚ್ಚಾಗಿ ಗೃಹಿಣಿಯರು, ಮನೆಯಲ್ಲಿಯೇ ತರಕಾರಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡುವಂತವರು. ಮನೆಯಲ್ಲಿಯೇ ಪಾತ್ರೆ ಅಂಗಡಿ, ಬಟ್ಟೆ ಅಂಗಡಿ, ಟೈಲರಿಂಗ್, ಮಾಡಿಕೊಂಡಿರುವಂತಹ ಮಹಿಳೆಯರು ಮಾಹಿತಿದಾರರಾಗಿದ್ದಾರೆ. ಅದೇ ರೀತಿಯಾಗಿ ಧಾರವಾಹಿ ಗಳನ್ನು ನೋಡುವುದಿಲ್ಲವೆಂದು ೭೦(೩೫%) ಮಾಹಿತಿದಾರರು ವಿವರಿಸಿದ್ದಾರೆ. ಇವರಲ್ಲಿ ಗಾರೆಕೆಲಸದಲ್ಲಿ ತೊಡಗಿಸಿಕೊಂಡವರು,ಇಟ್ಟಂಗಿಭಟ್ಟಿಯಲ್ಲಿ ಕೆಲಸ ಮಾಡುವವರು, ದಾದಿಯರು, ಖಾನಾವಳಿಯಲ್ಲಿ ಕೆಲಸ ಮಾಡುವ ಮಹಿಳೆಯರು, ಸರ್ಕಾರಿ ಹುದ್ದೆಯಲ್ಲಿರುವವರು. ಕಾಲೇಜು ವಿದ್ಯಾರ್ಥಿನಿಯರೂ ಅದರಲ್ಲಿಯೂ ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ಯುವತಿಯರಿಗೆ ಬಿಡುವು ಸಿಗುವುದಿಲ್ಲವಾದ್ದರಿಂದ, ಅವರು ಈ ಧಾರವಾಹಿಗಳನ್ನು ನೋಡುವುದಿಲ್ಲವೆಂದು ವಿವರಿಸುತ್ತಾರೆ. ಒಂದು ವೇಳೆ ಸಮಯ ಸಿಕ್ಕರೆ ಅವರು ಕೆಲವೊಂದು ಹಿಂದಿ ಮತ್ತು ಕನ್ನಡ ಧಾರಾವಾಹಿಗಳನ್ನು ನೋಡುವುದಾಗಿ ಮಾಹಿತಿ ನೀಡಿದ್ದಾರೆ.

ಕೋಷ್ಟಕ–೮ : ನೀವು ಯಾವ ಯಾವ ಧಾರಾವಾಹಿಗಳನ್ನು ನೋಡುತ್ತೀರಿ?

ಕ್ರಸಂ.	ಧಾರಾವಾಹಿಗಳು	ಮಾಹಿತಿದಾರರು	ಶೇಕಡಾ
೧.	ಶುಭಮಂಗಳ, ಮುಕ್ತಮುಕ್ತ ಮಹಾನವಮಿ.	೬೦	೩೦
೨.	ಲಕುಮಿ, ಸಾಗುತದೂರದೂರ, ಇದ್ರೆ ಇರಬೇಕು ನಿನ್ನಹಾಂಗ	೩೫	೧೭.೫೦
೩.	ಗೆಜ್ಜೆಪೂಜೆ, ಜೋಗುಳ, ಸೂರ್ಯಕಾಂತಿ	೪೦	೨೦
೪	ಹಿಂದಿ ಧಾರಾವಾಹಿಗಳು	೬೫	೩೨.೫೦
	ಒಟ್ಟು	೨೦೦	೧೦೦

ಇಂದು ವಿವಿಧ ವಾಹಿನಿಗಳಲ್ಲಿ ಒಂದು ದಿನದಲ್ಲಿ ೫೦ರಿಂದ ೦೦ ಧಾರಾವಾಹಿಗಳು ಪ್ರಸಾರವಾಗುತ್ತಿದ್ದು, ಕೆಲವೊಂದು ಧಾರಾವಾಹಿಗಳು ಮರು ಪ್ರಸಾರವಾಗುತ್ತವೆ. ಅವುಗಳಲ್ಲಿ ಮಾಹಿತಿದಾರರು ವಿಕ್ಷಿಸುವ ಒಟ್ಟು ಧಾರವಾಹಿಗಳ ಒಂದು ಪಟ್ಟಿಯನ್ನು ತಯಾರಿಸಲಾಯಿತು. ಆ ಮೂಲಕ ಯಾವ ವಾಹಿನಿಯ ಧಾರಾವಾಹಿಗಳು ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿವೆ ಎಂದು ತಿಳಿಯಲು ಅನುಕೂಲವಾಯಿತು. ಈಟಿವಿ ಕನ್ನಡದಲ್ಲಿ ಪ್ರಸಾರವಾಗುವ ಶುಭಮಂಗಳ, ಮುಕ್ತಮುಕ್ತ, ಮಹಾನವಮಿ ಧಾರಾವಾಹಿಗಳನ್ನು ನೋಡುವವರು ೬೦(೩೦%)ರಷ್ಟು ಮಾಹಿತಿದಾರರಿದ್ದಾರೆ. ಮುಕ್ತಮುಕ್ತ ಧಾರಾವಾಹಿಯ ನಿವೇದಿತಾ ಮತ್ತು ಮಹಾನವಮಿಯ ಕಾವೇರಿ ಪಾತ್ರವನ್ನು ಈ ಮಾಹಿತಿದಾರರು ಹೆಚ್ಚು ಇಷ್ಟಪಟ್ಟಿದ್ದಾರೆ. ಸುವರ್ಣವಾಹಿನಿಯಲ್ಲಿ ಪ್ರಸಾರವಾಗುವ ಲಕುಮಿ, ಸಾಗುತ ದೂರದೂರ, ಇದ್ರೆ ಇರಬೇಕು ನಿನ್ನಹಾಂಗ ಧಾರಾವಾಹಿಗಳನ್ನು ೩೫(೧೭.೫೦%)ರಷ್ಟು ಮಾಹಿತಿದಾರರು ಇಷ್ಟಪಟ್ಟರೆ, ಝೀ ಕನ್ನಡವಾಹಿನಿಯ ಗೆಜ್ಜೆಪೂಜೆ, ಜೋಗುಳ, ಸೂರ್ಯಕಾಂತಿ ಧಾರಾವಾಹಿಗಳನ್ನು ೪೦(೨೦%)ರಷ್ಟು ಮಾಹಿತಿದಾರರು ಮೆಚ್ಚಿಕೊಂಡಿದ್ದಾರೆ. ಹಿಂದಿವಾಹಿನಿಯಲ್ಲಿ ಪ್ರಸಾರವಾಗುವ ಸಾಥ್ ನಿಭಾನಾ ಸಾಥಿಯಾ, ಬಾಲಿಕಾವಧು, ನಾ ಆನಾ ದೇಶ ಮೇರೆ ಲಾಡೊ.ಇಸ ಪ್ಯಾರ ಕೊ ಕ್ಯಾ ನಾಮ ದೇ, ಈ ಧಾರಾವಾಹಿಗಳನ್ನು ೬೫(೩೨.೫೦%) ಮಾಹಿತಿದಾರರು ಇಷ್ಟಪಟ್ಟಿದ್ದಾರೆಂದು ಕ್ಷೇತ್ರಕಾರ್ಯ ದಿಂದ ಕಂಡುಕೊಂಡ ಮಾಹಿತಿಯಾಗಿದೆ. ಇಂದು ಪ್ರಸಾರವಾಗುವ ಎಲ್ಲ ಧಾರಾವಾಹಿಗಳಲ್ಲಿ ಚಿತ್ರಿತವಾಗಿರುವ ಮಹಿಳಾ ಪಾತ್ರವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿ ಕೌಟುಂಬಿಕ ವಲಯಕ್ಕೆ ಸೀಮಿತವಾಗಿರುವಂತಹ ಸಂಪ್ರದಾಯಸ್ಥ ಕುಟುಂಬದ ಸೊಸೆ, ಮನೆಯ ಸದಸ್ಯರ ಬೇಕು ಬೇಡಗಳಿಗೆ ಸ್ಪಂದಿಸುವ, ಎಂಥ ಕಷ್ಟದ ಸಂಧರ್ಭಗಳಲ್ಲಿಯು ತಾಳ್ಮೆ, ಸಹನೆ, ಹೊಂದಾಣಿಕೆಯಾಗುವಂತಹ ಗುಣಗಳಿರುವ ಸ್ತ್ರೀ ಪಾತ್ರವನ್ನು ಇಲ್ಲಿ ತೋರಿಸಲಾಗುತ್ತದೆ. ಸ್ತ್ರೀತ್ವದ ಗುಣಗಳನ್ನೇ ವೈಭವೀಕರಿಸುವ ಮೌಲ್ಯಗಳನ್ನು ಪಸರಿಸುವುದರ ಜೊತೆಗೆ, ಪಿತೃಪ್ರಧಾನ ವ್ಯವಸ್ಥೆಯು ಕುಟುಂಬದೊಳಗಿನ ನಿಯಂತ್ರಕ ಶಕ್ತಿಯಾಗಿ ಹೇಗೆ ನಿರ್ವಚಿಸಲ್ಪಡುತ್ತದೆ ಎಂಬುದನ್ನ ಈ ಧಾರಾವಾಹಿಗಳಲ್ಲಿ ಕಾಣಬಹುದು. ಆ ಮೂಲಕ ಪುರುಷ ಸೃಷ್ಟಿಸಿದ ಸ್ತ್ರೀತ್ವವನ್ನೆ ಒಪ್ಪಿಕೊಳ್ಳುವಂತಹ ಚಿಂತನೆಗಳನ್ನು ಧಾರಾವಾಹಿ ವಿಕ್ಷಿಸುವ ಮಹಿಳೆಯರ ಮನೋಲೋಕದ ಮೇಲೆ ಹೇರಲಾಗುತ್ತದೆ. ಇಂತಹ ಚಿಂತನೆಗಳನ್ನೇ ಒಪ್ಪಿಕೊಳ್ಳುವ ಮಹಿಳಾ ವಿಕ್ಷಕರು, ಸಹಜವಾಗಿಯೇ ಆಧುನಿಕತೆಯನ್ನು ವಿರೋಧಿಸುವ ಮನೋಧರ್ಮ ಹೊಂದಿದ್ದರಾಗಿರುತ್ತಾರೆ.

ಕೋಷ್ಟಕ–೯ : ನೀವು ಧಾರಾವಾಹಿಗಳನ್ನು ಏಕೆ ನೋಡುತ್ತೀರಿ?

ಕ್ರಸಂ.	ವಿವರಣೆ	ಮಾಹಿತಿದಾರರು	ಶೇಕಡಾ
೧.	ಸಮಯ ಕಳೆಯಲು	೬೮	೩೪
೨.	ಮನರಂಜನೆಗಾಗಿ	೨೦	೧೦
೩.	ಕುತೂಹಲಕ್ಕಾಗಿ	೩೨	೧೬
೪.	ಧಾರಾವಾಹಿಗಳು ಸಮಾಜದಲ್ಲಿರುವುದನ್ನು ತೋರಿಸುತ್ತವೆಯೆಂದು	೮೦	೪೦
	ಒಟ್ಟು	೨೦೦	೧೦೦

ಮಾಹಿತಿದಾರರಿಗೆ ಕೇಳಿದ ಈ ಪ್ರಶ್ನೆಗೆ ಅವರು ಕೊಟ್ಟಂತಹ ಅಭಿಪ್ರಾಯಗಳನ್ನೇ ಮೇಲಿನ ಕೋಷ್ಟಕದಲ್ಲಿ ವಿವರಿಸಲಾಗಿದೆ. ಕೋಷ್ಟಕದ ವಿವರಣೆಯಲ್ಲಿ ಧಾರಾವಾಹಿಗಳನ್ನು ಕೇವಲ ಸಮಯ ಕಳೆಯಲು ನೋಡುತ್ತೇವೆಂದು ೬೮(೩೪%)ರಷ್ಟು ಮಾಹಿತಿದಾರರು ಹೇಳಿದ್ದಾರೆ, ತಮ್ಮ ಮನೆಕೆಲಸದ ನಡುವೆ ಸಿಗುವ ಬಿಡುವಿನ ಸಮಯದಲ್ಲಿ, ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ, ಈ ಧಾರಾವಾಹಿಗಳನ್ನು ನೋಡುತ್ತೇವೆಂದು ಹೇಳಿದ್ದಾರೆ. ಮನರಂಜನೆಗಾಗಿ ನೋಡುತ್ತೇವೆಂದು ೨೦(೧೦%)ರಷ್ಟು ಮಾಹಿತಿದಾರರು ಹೇಳಿದರೆ, ಧಾರಾವಾಹಿಯಲ್ಲಿ ನಾಳೆ ಏನಾಗಬಹುದು? ಕಥೆ ಹೇಗೆ ಮುಂದುವರೆಯಬಹುದು? ಯಾರು ಯಾರೊಂದಿಗೆ ಜಗಳವಾಡಬಹುದು? ಅವರಿಬ್ಬರ ಮದುವೆ ನಡೆಯುತ್ತದೆಯೆ? ಎಂಬ ಕುತೂಹಲವಿರುತ್ತದೆ. ಹಾಗಾಗಿ ನೋಡುತ್ತೇವೆಂದು ೩೨(೧೬%) ಮಾಹಿತಿದಾರರು ವಿವರಿಸಿದ್ದಾರೆ. ಇನ್ನೂ ಕೆಲವೊಂದು ಧಾರಾವಾಹಿಗಳಲ್ಲಿ ಕೆಲವೊಂದು ವಿಷಯಗಳ ಕುರಿತಾದ ಮಾಹಿತಿ ಸಿಗುತ್ತದೆ. ಧಾರಾವಾಹಿಗಳಲ್ಲಿ ಸಮಾಜದಲ್ಲಿರುವುದನ್ನೇ ತೋರಿಸುತ್ತವೆ. ಸಮಾಜದಲ್ಲಿ ದಿನ ನಿತ್ಯನಡೆಯುವ ಮತ್ತು ನಡೆಯುತ್ತಿರುವ ವಿದ್ಯಮಾನಗಳನ್ನೇ ಈ ಧಾರಾವಾಹಿಗಳ ಕಥಾಹಂದರವಾಗಿ ಹೆಣೆದು ವಿಕ್ಷಕರಿಗೆ ತೋರಿಸಲಾಗುತ್ತದೆ ಹಾಗಾಗಿ ನೋಡುತ್ತೇವೆಂದು ವಿವರಣೆ ನೀಡುತ್ತಾರೆ.

ಉದಾ: ಬಾಲ್ಯವಿವಾಹ ಪದ್ಧತಿಯನ್ನು ವಿವರಿಸುವ ಲಕುಮಿ(ಸುವರ್ಣ), ದೇವದಾಸಿ ಪದ್ಧತಿಯ ಕಥೆ ಹೇಳುವ ಗೆಜ್ಜೆಪೂಜೆ, ಬಾಡಿಗೆ ತಾಯಿಯ ಕಲ್ಪನೆಕೊಟ್ಟಂತಹ ಜೋಗುಳ (ಝಿ ಕನ್ನಡ) ಹೀಗೆ ಕೆಲವು ಧಾರಾವಾಹಿಗಳು ಸಮಾಜದಲ್ಲಿ, ಕುಟುಂಬದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಕುರಿತು ತೋರಿಸುತ್ತಾರೆ. ಕೆಲವೊಂದು ಧಾರಾವಾಹಿಗಳಲ್ಲಿ ನಮ್ಮ ಬದುಕಿನಲ್ಲಿ ನಡೆಯುವ ಘಟನೆಗಳ ನೈಜ ಚಿತ್ರಣವಿರುತ್ತದೆ. ಇದರಿಂದ ಈ ಧಾರಾವಾಹಿಗಳನ್ನು ನಮ್ಮದೇ ಕಥೆಯೇನೊ ಎಂಬಂತೆ ನೋಡುತ್ತೇವೆಂದು ವಿವರಿಸಿಸುತ್ತಾರೆ. ತಮ್ಮ ಬಿಡುವಿನ ವೇಳೆಯ ಬಹುಪಾಲು ಭಾಗವನ್ನು ಕಸಿದುಕೊಳ್ಳುವ ಈ ಧಾರಾವಾಹಿಗಳು ಅರ್ಧಗಂಟೆಯ ಪ್ರಸಾರದಲ್ಲಿ ತನ್ನ ಚಿಂತನೆಯಲ್ಲಿಯೇ ಮಹಿಳೆಯರ ಬಹುಪಾಲು ಯೋಚನಾಶಕ್ತಿಯನ್ನು ಕಬಳಿಸಿ ಬಿಡುವ ಅವರ ಮನೋಲೋಕದ ಮೇಲೆ ಸಮಾಜದಲ್ಲಿರುವ ಮೌಲ್ಯಗಳನ್ನು ಹೆಣ್ಣಾದವಳು ಹೀಗೆಯೇ ಪಾಲಿಸಿಕೊಂಡು ಬರಬೇಕು ಅದು ಸಮಾಜ ಒಪ್ಪುವ ಸಂಸ್ಕಾರಗಳಲ್ಲಿ ಒಂದು ಎನ್ನುವ ಭಾವನೆಯನ್ನು ಈ ಧಾರಾವಾಹಿಗಳ ಮೂಲಕ ಧಾರಾವಾಹಿ ನಿರ್ದೇಶಕರು ಪ್ರತ್ಯೇಕ್ಷವಾಗಿ ಮತ್ತು ಪರೋಕ್ಷವಾಗಿ ಮಹಿಳೆಯರಿಗೆ ಒಪ್ಪಿಸುತ್ತಿದ್ದಾರೆ. ಇದನ್ನು ಒಪ್ಪಿಕೊಂಡು ನೋಡುವ ಮಹಿಳೆಯರ ಮನಸ್ಥಿತಿಯನ್ನು ಈ ಧಾರವಾಹಿಗಳು ನಿರ್ದೇಶಿಸುತ್ತಿವೆ.

ಕೋಷ್ಟಕ-೧೦ : ಧಾರಾವಾಹಿಗಳಲ್ಲಿ ಮಹಿಳೆಯರನ್ನು ಯಾವ ಪಾತ್ರದಲ್ಲಿ ನೋಡಲು ಬಯಸುತ್ತೀರಿ?

ಕ್ರಸಂ.	ಪಾತ್ರಗಳು	ಮಾಹಿತಿದಾರರು	ಶೇಕಡಾ
೧.	ಗೃಹಿಣಿ	೮೫	೪೨.೫೦
೨.	ವ್ಯಾಪಾರಸ್ಥಳಾಗಿ ಅಥವಾ ಉದ್ಯೋಗಸ್ಥಳಾಗಿ	೫೦	೨೫

೩.	ಗ್ಲಾಮರ್ ಆಗಿ	೪೦	೨೦.೫೦
೪.	ಸ್ವತಂತ್ರವಾಗಿ ಬದುಕುವ ಪಾತ್ರದಲ್ಲಿ	೨೫	೧೨.೫೦
	ಒಟ್ಟು	೨೦೦	೧೦೦

ಧಾರಾವಾಹಿಗಳಲ್ಲಿ ಮಹಿಳೆಯರನ್ನು ಯಾವ ಪಾತ್ರದಲ್ಲಿ ನೋಡಲು ಬಯಸುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಾಹಿತಿದಾರರು, ಹೆಣ್ಣನ್ನು ಪುರುಷ ಪ್ರಧಾನ ವ್ಯವಸ್ಥೆಯು ಕಟ್ಟಿಕೊಟ್ಟಿರುವ ಸಾಂಪ್ರದಾಯಿಕ ಪಾತ್ರವಾದ ಗೃಹಿಣಿತ್ವದಲ್ಲಿ ನೋಡಲು ಹೆಚ್ಚು ಇಷ್ಟಪಡುತ್ತಾರೆ. ಇವರ ಅಭಿಪ್ರಾಯದಂತೆ ಹೆಣ್ಣು ದುಡಿಯಲು ಹೊರಗೆ ಹೋಗಬಾರದು ಒಂದು ವೇಳೆ ಹೋದರೆ, ಗಂಡ, ಮಕ್ಕಳು, ಮನೆ, ಇತರ ಸದಸ್ಯರನ್ನು ಯಾರು ನೋಡಿ ಕೊಳ್ಳಬೇಕು? ಮನೆಯ ಕೆಲಸ ಕಾರ್ಯಗಳನ್ನು ಯಾರು ಮಾಡಬೇಕು? ಎಂದು ಪ್ರಶ್ನೆ ಮಾಡುತ್ತಾರೆ. ಇವರು ಹೇಳುವ ಇನ್ನೊಂದು ಕಾರಣ ಬಹಳ ಅಘಾತಕಾರಿಯಾದುದಾಗಿದೆ. ಹೆಣ್ಣು ಒಂದು ವೇಳೆ ದುಡಿಯಲು ಹೊರಗೆ ಹೋದರೆ ದುಡ್ಡು ಇದೆ ಎಂಬ ಅಹಂಕಾರ ಬಂದು ಬಿಡುತ್ತದೆ. ಯಾರಿಗೂ ಬೆಲೆ ಕೊಡದೆ ಇದ್ದು ಬಿಡುತ್ತಾರೆ. ನಾವು ಅಂತಹ ಹೆಣ್ಣುಮಕ್ಕಳನ್ನು ನೋಡಿದ್ದೇವೆ. ಅಂತವರು ನಮ್ಮ ಸುತ್ತಮುತ್ತಾನೇ ಇದ್ದಾರೆಂದು ಉತ್ತರಿಸುತ್ತಾರೆ. ಹೀಗೆ ಮಾಹಿತಿ ನೀಡಿದವರಲ್ಲಿ ಸಾಂಪ್ರದಾಯಿಕತೆಯನ್ನು ಒಪ್ಪಿಕೊಂಡು ಬಾಳಿ ಬದುಕಿದವ ರಾಗಿದ್ದು, ಪಿತೃಪ್ರಧಾನ ಮೌಲ್ಯಗಳಲ್ಲಿ ಬದುಕುವ ಇವರಿಗೆ ಸುಲಭವಾಗಿ ಆಧುನಿಕತೆಯನ್ನು ಒಪ್ಪಿಕೊಳ್ಳದಂತಹ ಮನಸ್ಥಿತಿಯಿರುವುದನ್ನು ಕಾಣಬಹುದಾಗಿದೆ. ಮಹಿಳೆಯರ ಮನೋಲೋಕದಲ್ಲಿರುವ ಇಂತಹ ಅಭಿಪ್ರಾಯಗಳು, ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಹೇಗೆ ತನ್ನ ಕಬಂಧ ಬಾಹುಗಳಲ್ಲಿ ಬಂಧಿಸಲಾಗಿದೆ ಎಂಬುದರ ಚಿತ್ರಣ ಕೊಡುತ್ತದೆ. ಮಹಿಳೆಯರ ಇಂತಹ ಚಿಂತನಾ ಕ್ರಮಕ್ಕೆ ಪ್ರತ್ಯೇಕ್ಷವಾಗಿ ಪರೋಕ್ಷವಾಗಿ ಈ ವ್ಯವಸ್ಥೆಯೇ ಕಾರಣವಾಗಿದೆ. ಇನ್ನು ಹೆಣ್ಣನ್ನು ಉದ್ಯೋಗಸ್ಥಳಾಗಿರಬೇಕೆನ್ನುವವರು ೪೦(೨೦%). ಇವರಲ್ಲಿ ಆಧುನಿಕತೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿಯಿರುವಂತಹ ಮಹಿಳೆಯರಿದ್ದಾರೆ. ಗ್ಲಾಮರ್ ಆಗಿ ನೋಡುವವರು ೫೦(೨೫%) ಮತ್ತು ಸ್ವತಂತ್ರವಾಗಿ ಬದುಕುವ ಪಾತ್ರಗಳಲ್ಲಿ ನೋಡಬೇಕೆನ್ನುವವರು ೨೫(೧೨.೫೦%) ಜನ ಮಹಿಳೆಯರು ಮತ್ತು ಯುವತಿಯರಿದ್ದಾರೆ. ಮಹಿಳಾ ಪಾತ್ರಗಳನ್ನು ಹೆಚ್ಚು ಹೆಚ್ಚು ಆಧುನಿಕತೆಯಲ್ಲಿ ತೋರಿಸಬೇಕೆನ್ನುವವರು. ಹೆಚ್ಚಾಗಿ ಉದ್ಯೋಗಸ್ಥ ಮಹಿಳೆಯರು, ಕಾಲೇಜು ವಿದ್ಯಾರ್ಥಿನಿಯರಿದ್ದಾರೆ. ಅಭಿಪ್ರಾಯ ವ್ಯಕ್ತಪಡಿಸಿದವರಲ್ಲಿ ಎರಡು ತಲೆಮಾರುಗಳ ನಡುವೆ ಇರುವ ಅಂತರ, ಅಭಿಪ್ರಾಯಗಳಲ್ಲಿ ಭಿನ್ನತೆ ಇರುವುದು ಕಂಡುಬರುತ್ತದೆ. ಹಳೆ ತಲೆಮಾರಿನವರಿಗೆ ಹೊಸತನ್ನು ಒಪ್ಪಿಕೊಳ್ಳುವ ಮನಸ್ಸು ಇಲ್ಲ. ಇಂತಹ ಮನಸ್ಥಿತಿಯುಳ್ಳವರಿಗೆ ಪೂರಕವಾಗುವಂತಹ ಧಾರಾವಾಹಿಗಳೇ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಪ್ರಸಾರವಾಗುತ್ತಿರುವುದ ರಿಂದಲೇ ಧಾರಾವಾಹಿಗಳು ಜನಪ್ರಿಯತೆ ಪಡೆದುಕೊಳ್ಳುತ್ತಿವೆ ಎನ್ನಬಹುದು.

ಕೋಷ್ಟಕ-೧೧ : ಧಾರವಾಹಿಗಳನ್ನು ಹೊರತುಪಡಿಸಿ ನೀವು ಇಷ್ಟಪಡುವ ಕಾರ್ಯಕ್ರಮಗಳು ಯಾವುವು?

ಕ್ರಸಂ.	ಕಾರ್ಯಕ್ರಮಗಳು	ಮಾಹಿತಿದಾರರು	ಶೇಕಡಾ
೧.	ವಾರ್ತೆಗಳು	೨೦	೧೦
೨.	ಅಡುಗೆ	೬೦	೩೦
೩.	ಸಿನೆಮಾ	೩೦	೧೫
೪.	ರಿಯಾಲಿಟಿ ಶೋ	೩೫	೧೭.೫೦
೫.	ಜ್ಯೋತಿಷ್ಯ	೫೫	೨೭.೫೦
ಒಟ್ಟು		೨೦೦	೧೦೦.೦೦

ಕೋಷ್ಟಕದ ವಿವರಣೆಯಲ್ಲಿ ವಾರ್ತೆಗಳನ್ನು ಕೇಳುವ ಮತ್ತು ನೋಡುವ ಮಾಹಿತಿದಾರರ ಸಂಖ್ಯೆ ಉಳಿದ ವಿವರಣೆಗಿಂತಲೂ ಕಡಿಮೆಯಿದೆ. ಇಲ್ಲಿ ೨೦(೧೦%)ರಷ್ಟು ಮಾಹಿತಿದಾರರು ವಾರ್ತೆಗಳನ್ನು ನೋಡುತ್ತಾರೆ. ೬೦(೩೦%)ಜನ ಮಹಿಳೆಯರು ಅಡುಗೆ ಕಾರ್ಯಕ್ರಮಗಳನ್ನು ನೋಡುತ್ತಾರೆಂದು ವಿವರಿಸಿದ್ದಾರೆ. ಈ ಕಾರ್ಯಕ್ರಮಗಳ ಮೂಲಕ ಅನೇಕ ಪ್ರಾದೇಶಿಕ ಅಡುಗೆಗಳನ್ನು ಕಲಿಯಬಹುದು ಮತ್ತು ಋತುಮಾನಕ್ಕನುಸಾರವಾಗಿ ಮಾಡಬಹುದಾದಂತಹ ಅಡುಗೆಗಳನ್ನು ನೋಡಿ ಕಲಿಯಬಹುದೆಂದು ಉತ್ತರಿಸಿದ್ದಾರೆ.ಇಲ್ಲಿ ಉತ್ತರಿಸಿದ ಮಾಹಿತಿ ದಾರರೆಲ್ಲರೂ ಗೃಹಿಣಿಯರಾಗಿದ್ದು, ತಮ್ಮ ಹೆಚ್ಚಿನ ಅವಧಿಯನ್ನು ಒಗ್ಗರಣೆ ಡಬ್ಬಿ ಮತ್ತು ಬೊಂಬಾಟ ಭೋಜನದಲ್ಲಿ ಕಳೆದು ಹೋಗುತ್ತದೆಂದು ವಿವರಿಸುತ್ತಾರೆ. ಇನ್ನು ಸಿನೆಮಾ ನೋಡುವವರು ೩೦(೧೫%)ರಷ್ಟು, ರಿಯಾಲಿಟಿ ಶೋಗಳಾದ ಪ್ಯಾಟೆಹುಡ್ಗೀರ್ ಹಳ್ಳಿ ಲೈಫು ೧-೨, ಯಾರಿಗುಂಟು ಯಾರಿಗಿಲ್ಲ, ಡೀಲ ಆರ್ ನೋಡಿಲ್, ಹಳ್ಳಿ ಹೈದ ಪ್ಯಾಟೆಗೆ ಬಂದ ಬದುಕು ಜಟಕಾ ಬಂಡಿ, ಕಥೆಯಲ್ಲ ಜೀವನ, ಇದು ಯಾರು ಬರೆದ ಕಥೆಯೋ, ಹಾಡು, ಕುಣಿತ ಇರುವ ಇತ್ಯಾದಿ ರಿಯಾಲಿಟಿ ಶೋಗಳನ್ನು ನೋಡುವ ಮಹಿಳೆಯರು ೩೫(೧೭.೫೦%) ಇದ್ದಾರೆ. ಯಾವ ರಾಶಿಯವರಿಗೆ ಯಾವ ಫಲವಿದೆ? ಯಾವ ದೋಷವಿದೆ? ದೋಷದಿಂದ ಮುಕ್ತಿ ಹೇಗೆ ಪಡೆಯಬೇಕು? ಇವತ್ತಿನ ನಿಮ್ಮ ಭವಿಷ್ಯ ಹೇಗಿದೆ? ಎಂಬುದನ್ನು ತಿಳಿಸಿಕೊಡುವ ಜ್ಯೋತಿಷ್ಯ ಕಾರ್ಯಕ್ರಮವನ್ನು ನೋಡುವವರು ೫೫(೨೭.೫೦%)ರಷ್ಟು ಮಹಿಳೆಯರಿದ್ದಾರೆ. ಈ ಕೋಷ್ಟಕದಲ್ಲಿ ವಿವರಿಸಿದ ಮಹಿಳೆಯರು ತಮ್ಮ ಹೆಚ್ಚಿನ ಕಾಲವನ್ನು ಅಡುಗೆ ಮತ್ತು ಜ್ಯೋತಿಷ್ಯ ಕಾರ್ಯಕ್ರಮಗಳಲ್ಲಿ ಕಳೆಯುವವರಾಗಿದ್ದು, ಪ್ರಚಲಿತದ ವಿದ್ಯಮಾನಗಳನ್ನು ತಿಳಿದು ಕೊಳ್ಳುವ ಒಲವನ್ನು ತೋರಿಸುವುದಿಲ್ಲ.

ಕೋಷ್ಟಕ-೧೨ : ಮನರಂಜನೆಯ ಜೊತೆಗೆ ಬುದ್ಧಿಗೆ ಕೆಲಸ ಕೊಡುವ ಕಾರ್ಯಕ್ರಮಗಳು ಯಾವುವು?

ಕ್ರಸಂ.	ಕಾರ್ಯಕ್ರಮಗಳು	ಮಾಹಿತಿದಾರರು	ಶೇಕಡಾ
೧.	ರಾಣಿಮಹಾರಾಣಿ	೫೦	೨೫
೨.	ಯಾರಿಗುಂಟು ಯಾರಿಗಿಲ್ಲ	೬೫	೩೨.೫೦
೩.	ಪ್ಯಾಟೆ ಹುಡ್ಗಿರ್ ಹಳ್ಳಿ ಲೈಫು	೫೫	೨೭.೫೦
೪.	ಜೀನ್ಸ್	೩೦	೧೫
	ಒಟ್ಟು	೨೦೦	೧೦೦

ಟಿವಿ ನೋಡುವುದು ಮಾಹಿತಿ ಮತ್ತು ಮನರಂಜನೆಗಾಗಿ. ಕೆಲಹೊತ್ತು ಕೆಲಸದ ಬಿಡುವಿನ ವೇಳೆಯಲ್ಲಿ ಟಿವಿ ಮುಂದೆ ಕುಳಿತರೆ ಆಯಾಸ ಕಡಿಮೆಯಾಗುತ್ತದೆ ಎಂಬ ಭಾವ ಮಾಹಿತಿದಾರರಲ್ಲಿರುವುದನ್ನು ಕಂಡುಕೊಳ್ಳಲಾಗಿದೆ. ಇಂದು ಪ್ರತಿಯೊಂದು ಭಾಷೆಗಳ, ಚಾನೆಲ್‌ಗಳಲ್ಲಿ ಮನರಂಜನೆಯನ್ನು ಕೊಡುವಂತಹ ಕಾರ್ಯಕ್ರಮಗಳ ಪ್ರಸಾರ ಹೆಚ್ಚಿದೆ. ಆ ಕಾರ್ಯಕ್ರಮಗಳಲ್ಲಿ ಕೆಲವೊಂದು ಜನಪ್ರಿಯ ಕಾರ್ಯಕ್ರಮಗಳ ಪಟ್ಟಿಯನ್ನು ಇಲ್ಲಿ ವಿವರಿಸಲಾಗಿದೆ. ಮಾಹಿತಿದಾರರು ಕಸ್ತೂರಿ ವಾಹಿನಿಯಲ್ಲಿ ಪ್ರಸಾರವಾಗುವಂತಹ ರಾಣಿಮಹಾರಾಣಿ(೧, ೨) ಕಾರ್ಯಕ್ರಮವನ್ನು ನೋಡುವುದಾಗಿ ೫೦(೨೫%) ಮಾಹಿತಿದಾರರು ಹೇಳಿದರೆ, ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಯಾರಿಗುಂಟು ಯಾರಿಗಿಲ್ಲ ಕಾರ್ಯಕ್ರಮವನ್ನು ವೀಕ್ಷಿಸುವ ಮಹಿಳೆಯರ ಸಂಖ್ಯೆ ೬೫(೩೨.೫೦%) ಆಗಿದೆ. ಇನ್ನು ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಪ್ಯಾಟೆ ಹುಡ್ಗಿರ್ ಹಳ್ಳಿಲೈಫು ಕಾರ್ಯಕ್ರಮ ನೋಡುವವರ ಸಂಖ್ಯೆ ೫೫(೨೭.೫೦%)ರಷ್ಟಿದೆ. ಮತ್ತು ಈಟಿವಿ ಕನ್ನಡದಲ್ಲಿ ಪ್ರತಿ ಶನಿವಾರ ಪ್ರಸಾರವಾಗುವ ಜೀನ್ಸ್ ಕಾರ್ಯಕ್ರಮವನ್ನು೩೦(೧೫%) ಜನ ಮಾಹಿತಿದಾರರು ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಾರೆ ಎಂದು ವಿವರಿಸಿದ್ದಾರೆ. ಜೀನ್ಸ್ ಕಾರ್ಯಕ್ರಮವನ್ನು ವೀಕ್ಷಿಸುವವರಲ್ಲಿ ಬಿಎಡ್ ಮತ್ತು ಡಿಎಡ್ ಓದುತ್ತಿರುವ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬುವುದು ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ, ಏಕೆಂದರೆ ಜೀನ್ಸ್ ಕಾರ್ಯಕರಮದಲ್ಲಿ ಮಾನವ ಸಂಬಂಧಗಳನ್ನು ಗುರ್ತಿಸುವ (ಜೇನುಗೂಡು) ಭಾಗವಿದ್ದು, ಈ ವಿದ್ಯಾರ್ಥಿನಿಯರು ತಮ್ಮ ಮಾನಸಿಕ ಸಾಮರ್ಥ್ಯವನ್ನು ಕಂಡುಕೊಳ್ಳಲು ಸಹಾಯವಾಗುತ್ತದೆ ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ನೋಡುವುದಾಗಿ ಹೇಳುತ್ತಾರೆ.

ಕೋಷ್ಟಕ–೧೩ : ಧಾರಾವಾಹಿಗಳಿಂದ ಸಮಾಜದ ಸುಧಾರಣೆ ಸಾಧ್ಯವಿದೆಯೇ?

ಕ್ರಸಂ.	ವಿವರ	ಮಾಹಿತಿದಾರರು	ಶೇಕಡಾ
೧.	ಹೌದು	೦೯೨	೪೬
೨.	ಇಲ್ಲ	೧೦೮	೫೪
	ಒಟ್ಟು	೨೦೦	೧೦೦

ಧಾರಾವಾಹಿಗಳಿಂದ ಸಮಾಜದಲ್ಲಿ ಸುಧಾರಣೆ ಸಾಧ್ಯವಿದೆ ಎಂದು ೯೨(೪೬%) ಮಹಿಳೆಯರು ಉತ್ತರಿಸುತ್ತಾರೆ. ಸಮಾಜದಲ್ಲಿ ಏನೇನು ನಡಿಯುತ್ತೀದೆ. ನಾವು ಹೇಗೆ ಮುಂದುವರೆಯಬೇಕು ಎನ್ನುವುದನ್ನು ಇಲ್ಲಿ ತೋರಿಸುತ್ತಾರೆ. ವಿಕ್ಷಕರಿಗೆ ಮನರಂಜನೆಯ ಜೊತೆಗೆ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುವಂತಹ ಕಾರ್ಯಕ್ರಮಗಳನ್ನು ನೀಡುತ್ತವೆ. ಹಾಗಾಗಿ ಸಮಾಜ ಸುಧಾರಣೆಯಾಗುತ್ತದೆ ಎಂದು ಉತ್ತರಿಸಿದ್ದಾರೆ. ಇನ್ನು ಧಾರಾವಾಹಿಗಳಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ೧೦೮(೫೪%) ಜನ ಮಹಿಳೆಯರು ಉತ್ತರಿಸುತ್ತಾರೆ. ಇವರಿಗೆ ಧಾರಾವಾಹಿಯನ್ನು ತಯಾರಿಸುವಾಗ ಅದರಲ್ಲಿ ಸಿನೆಮಾದ ವಿಷಯವೇ ಅಡಗಿದ್ದು, ಮೂರು ಗಂಟೆಯ ಸಿನೆಮಾವನ್ನು ಉದ್ದವಾಗಿ ಎಳೆಯುತ್ತಾ ಹೋಗುತ್ತಾರೆ ಎಂದು ಹೇಳುತ್ತಾರೆ. ಕೆಲವೊಂದು ಧಾರವಾಹಿಗಳು ಸಮಾಜದಲ್ಲಿ ನಡೆಯುವ ವಿದ್ಯಮಾನಗಳನ್ನಿಟ್ಟುಕೊಂಡು ಕಥೆ ತಯಾರಿಸುತ್ತಾರೆ. ಅಲ್ಲಿ ಮತ್ತೆ ಮಹಿಳೆಯರನ್ನು ಕೌಟುಂಬಿಕ ಪಾತ್ರಗಳಲ್ಲಿ ಕಟ್ಟಿಕೊಡುತ್ತಾರೆ. ಉದ್ಯೋಗಸ್ಥಳಾಗಿದ್ದರೂ ಮನೆಯಲ್ಲಿ ಸೇವೆ ಮಾಡುವುದು ತಪ್ಪುವುದಿಲ್ಲ. ಪುರುಷರನ್ನು ದುಡಿಮೆಯಲ್ಲಿ ತೊಡಗಿರುವ ಚಿತ್ರಣ ತೋರಿಸುತ್ತಾರೆ, ಮಹಿಳೆಯರನ್ನು ಕುಟುಂಬ, ಮಕ್ಕಳು, ಉದ್ಯೋಗ ಈ ಮೂರು ಸಂಬಂಧಗಳನ್ನು ಹೊತ್ತುಕೊಂಡು ಹೋಗುವ ಜವಾಬ್ದಾರಿಯನ್ನು ತೋರಿಸುತ್ತಾರೆ. ಇಲ್ಲಿಯೇ ವ್ಯತ್ಯಾಸ ಮಾಡಿ ತೋರಿಸುತ್ತಾರೆ. ಪುರುಷರೇ ನಿರ್ಮಿಸುವ ಧಾರವಾಹಿಗಳಲ್ಲಿ ಮಹಿಳೆಯರ ಪಾತ್ರ ಅಡುಗೆ ಮನೆ ಮತ್ತು ಸಾಂಪ್ರದಾಯಿಕ ಪಾತ್ರಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಧಾರವಾಹಿಗಳು ಸಮಾಜದಲ್ಲಿ ಯಾವುದೇ ರೀತಿಯ ಬದಲಾವಣೆಯಾಗಲೀ, ಸುಧಾರಣೆಗಳಾಗಲೀ ತರುವುದಿಲ್ಲವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮಾಹಿತಿ ನೀಡಿದವರಲ್ಲಿ ಹೆಚ್ಚಾಗಿ ಉದ್ಯೋಗಸ್ಥ ಮಹಿಳೆಯರಿದ್ದು, ಧಾರಾವಾಹಿಗಳಿಂದ ಯಾವ ರೀತಿಯಾಗಿ ಸುಧಾರಣೆಯಾಗುತ್ತದೆ ಎಂದು ವಿವೇಚಿಸುವ ಸಾಮರ್ಥ್ಯ ಹೊಂದಿರುವುದರಿಂದ ಧಾರಾವಾಹಿಗಳನ್ನು ವಿಶ್ಲೇಷಿಸಿ, ವಿವೇಚನೆಯಿಂದ ಈ ಉತ್ತರವನ್ನು ನೀಡುತ್ತಾರೆ. ಆದರೆ ಇವರಿಗೆ ವಿರುದ್ಧವಾಗಿ ವಿವರಣೆ ನೀಡುವವರು ವೃದ್ಧೆಯರು, ಗೃಹಿಣಿಯರಿದ್ದು, ಧಾರಾವಾಹಿಗಳು ಮಹಿಳೆಯರ ಸುಧಾರಣೆ ಮಾಡುತ್ತವೆ. ಸುತ್ತಮುತ್ತಲಿನ ಜಗದ ಮಾಹಿತಿಯನ್ನು ಒದಗಿಸುವುದರ ಮೂಲಕ ನಮ್ಮ ಜ್ಞಾನವನ್ನು ಹೆಚ್ಚಿಸುತ್ತವೆ ಎಂಬುದಾಗಿ

ವಿವರಿಸುತ್ತಾರೆ. ಇಲ್ಲಿ ಮುಖ್ಯವಾಗಿ ಎರಡು ತಲೆಮಾರಿನ ಮಹಿಳೆಯರ ಅಭಿಪ್ರಾಯವನ್ನು ಗ್ರಹಿಸಲಾಗಿದೆ. ಇಲ್ಲಿ ವಿವರಣೆ ನೀಡುವವರು ತಮ್ಮ ವಿವೇಚನಾಶಕ್ತಿಯನ್ನು ಬಳಸದೇ, ಧಾರಾವಾಹಿಗಳು ಕೊಡುವ ಮಾಹಿತಿಯನ್ನೇ ಒಪ್ಪಿಕೊಂಡಿರುವವರಾಗಿದ್ದಾರೆ.

ಕೋಷ್ಟಕ-೧೪ : ಮಹಿಳೆಯರ ಅಭಿವೃದ್ಧಿಗೆ ಧಾರಾವಾಹಿಗಳು ಸಹಾಯಕವಾಗಿವೆಯೇ?

ಕ್ರಸಂ.	ವಿವರ	ಮಾಹಿತಿದಾರರು	ಶೇಕಡಾ
೧.	ಹೌದು	೦೮೫	೪೨.೫೦
೨.	ಇಲ್ಲ	೧೧೫	೫೭.೫೦
	ಒಟ್ಟು	೨೦೦	೧೦೦

ಎಂದು ಕೇಳಿದ ಪ್ರಶ್ನೆಗೆ ಮಾಹಿತಿದಾರರಲ್ಲಿ ೮೫(೪೨.೫೦%)ರಷ್ಟು ಮಹಿಳೆಯರು ಅಭಿವೃದ್ಧಿ ಆಗುತ್ತದೆ ಎಂದು ಹೇಳುತ್ತಾರೆ. ಅವರ ಪ್ರಕಾರ ಮಹಿಳೆಯರು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದಾರೆ. ಹಲವು ವಲಯಗಳಲ್ಲಿ ಗುರ್ತಿಸಿಕೊಳ್ಳುತ್ತಿದ್ದಾರೆ. ಉನ್ನತವಾದ ಹುದ್ದೆಗಳನ್ನು ಪಡೆಯುತ್ತಿದ್ದಾರೆ. ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಈ ಧಾರವಾಹಿಗಳು ಕೂಡಾ ಎಲ್ಲೋ ಒಂದು ಕಡೆ ಮಹಿಳೆಯರ ಮನಸ್ಸಿನ ಆಲೋಚನೆಗಳನ್ನು ವಿಸ್ತರಿಸಲು ಅವಕಾಶ ಮಾಡಿ ಕೊಡುತ್ತವೆ. ಹಾಗಾಗಿ ಮಹಿಳೆಯರ ಅಭಿವೃದ್ಧಿಗೆ ಧಾರವಾಹಿಗಳು ಸಹಾಯಕವಾಗಿವೆ ಎಂದು ವಿವರಿಸುತ್ತಾರೆ. ಇನ್ನು ಧಾರವಾಹಿಗಳಲ್ಲಿ ಮಹಿಳೆಯರ ಅಭಿವೃದ್ಧಿಯೇನು ಆಗುವುದಿಲ್ಲ. ಒಂದು ವೇಳೆ ಏನಾದರೂ ಅಭಿವೃದ್ಧಿ ಅಥವಾ ಪ್ರಯೋಜನಗಳೇನಾದರೂ ಆದರೆ ಅದು ಮನೆಗಳಲ್ಲಿ ಯಾವ ಯಾವ ವಿಷಯಕ್ಕೆ ಜಗಳ ಮಾಡಬೇಕು, ಹೇಗೆ ಮಾಡಬೇಕು, ಸಂಚುಗಳನ್ನು ಹೇಗೆ ರೂಪಿಸಬೇಕು ಎಂಬುದರ ಬಗ್ಗೆ ತೋರಿಸುವುದರಿಂದ ಕೆಲವು ಮಹಿಳೆಯರು ಇದನ್ನು ತಮ್ಮ ಜೀವನದಲ್ಲಿ ಅನುಸರಿಸಿಕೊಂಡು ಹೋಗಬಹುದಾಂತಹ ಸಂದರ್ಭಗಳಿರುತ್ತವೆ, ಹೀಗಿರುವಾಗ ಧಾರಾವಾಹಿಗಳು ಮಹಿಳೆಯರ ಅಭಿವೃದ್ದಿಗೆ ಹೇಗೆ ಸಹಾಯಕವಾಗುತ್ತವೆ? ಎಂದು ಕೇಳುತ್ತಾರೆ. ಈ ಮಾಹಿತಿ ನೀಡಿದ ಮಾಹಿತಿದಾರರಲ್ಲಿ ಕೇಲವರು ಆಧುನಿಕ ಮನೋಭಾವವನ್ನು ಹೊಂದಿರುವ ಮಹಿಳೆಯರಾಗಿದ್ದಾರೆ. ಸರಕಾರಿ ಉದ್ಯೋಗಿಗಳು,ವೃದ್ದ ಮಹಿಳೆಯರು ಈ ಅಭಿಪ್ರಾಯವನ್ನು ನೀಡುತ್ತಾರೆ. ಅವರ ಪ್ರಕಾರ ಮಹಿಳೆಯರ ಅಭಿವೃದ್ಧಿಯಲ್ಲಿ ಧಾರವಾಹಿಗಳು ಯಾವುದೇ ಸಹಾಯ ಮಾಡುವುದಿಲ್ಲ ಎಂದು ಹೇಳುತ್ತಾರೆ.

೫.೨. ಸಂದರ್ಶನದ ಆಯ್ದ ಭಾಗಗಳು

ಅರಚಿತ ಪ್ರಶ್ನಾವಳಿಯ ಮೂಲಕ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ದೊರೆತ ಮಾಹಿತಿಯ ವಿಶ್ಲೇಷಣೆಯನ್ನು ಕೋಷ್ಟಕಗಳಲ್ಲಿ ವಿವರಿಸಲಾಗಿದ್ದು, ಈ ಕ್ಷೇತ್ರಕಾರ್ಯದಲ್ಲಿ ದೊರೆತ ಹಲವು ಮಾಹಿತಿಗಳಲ್ಲಿ ಕೆಲವು ಮಾಹಿತಿದಾರರು ಧಾರಾವಾಹಿಗಳ ಕುರಿತು ಹೊಂದಿರುವಂತಹ ದೃಷ್ಟಿಕೋನವನ್ನು ಅವರ ಆಡುಭಾಷೆಯಲ್ಲಿಯೇ ವಿವರಿಸಲಾಗಿದೆ. ಈ ಮೂಲಕ ಧಾರಾವಾಹಿಗಳು

ವಾಸ್ತವ ಜನರೊಂದಿಗೆ ಹೊಂದಿರುವ ನಿಕಟ ಸಂಪರ್ಕವನ್ನು ತಿಳಿಯಲಾಗಿದ್ದು ಈ ಪ್ರಯತ್ನವನ್ನು ಇಲ್ಲಿ ನೀಡಲಾಗಿದೆ.

ಹೆಸರು : ಅಂಬಿಕಾ

ವಯಸ್ಸು : ೨೫

ಶಿಕ್ಷಣ : ಹತ್ತನೇ ತರಗತಿ

ಊರು : ಮೇದಾರ ಓಣಿ, ಗುರುಮಠಕಲ, ಯಾದಗಿರಿ ಜಿಲ್ಲೆ

ನನ್ನ ಹೆಸರು ಅಂಬಿಕಾ ಅಂತರೀ, ನಾವು ಈ ಊರಿಗೆ ಬಂದು ಈಗ ೩೦ ವರ್ಷ ಆಯ್ತುರಿ. ನಮ್ಮಪ್ಪ ದುಡಿಲಕ್ಕಂತ ಈ ಊರಿಗೆ ಬಂದುನರ್ರಿ, ಅವಾಗ ನಮ್ಮವ್ವಗ ನೋಡಿ ಮೆಚ್ಚಗೊಂಡು ಮದಿ ಆಗತ್ತಿನಿ ಅಂತ ಅಂದನಂತರೀ, ನಮ್ಮ ಆಯಿ ಹೂಂ ಅಂತ ಹೇಳಿ ಮದುವಿ ಮಾಡಿ ಕೊಟ್ಟಳರ್ರಿ, ನಮ್ಮಪ್ಪ ಆಂದ್ರದವರು ಹರಾರ್ರಿ ಅವರು ತೆಲಗು ಮಾತಾಡ್ತಾರಿ, ನನಗನೂ ತೆಲಗು ಮಾತಾಡಲ್ಲಕ ಬರ್ತದರ್ರಿ, ನಮ್ಮಪ್ಪ ಮದಿ ಮಡ್ಕೊಂಡ ಮ್ಯಾಲ ನಮ್ಮ ಆಯಿ ಜೊತೆ ಇರಬೇಕೆಂದು ಇಲ್ಲೇ ಇರಸಕೊಂಡಾರಿ. ಯಾಕಂದ್ರ ನಮ್ಮಾಯಿಗಿ ಒಬ್ಬಕ್ಕಿನೆ ಮಗಳು ಹಳಾರೀ ಅಣ್ಣಿಲ್ಲ ತಮ್ಮಿಲ್ಲರೀ ಅದಕ ನಮ್ಮಪ್ಪ ಮನಿ ಅಳೀತನಕ ಬಂದು ಇಲ್ಲೆ ಇದ್ದನರ್ರಿ, ನಾವು ಬಿದರಿನಿಂದ ಸಾಮಾನಗೊಳು ಮಾಡತಿವಿ ಬಿದಿರಿನಿಂದ ಬುಟ್ಟಿ, ಮರಾ, ಗಾಳಿ ಹೊಡಕೊಳಾದು, ದಾಬಾ ಹೋಟಲಗಳಿಗೆ ತಟ್ಟಿ ಮಾಡಾದು, ನಿಚ್ಚಣಿಕೆ ಇವೆಲ್ಲಾ ಮಾಡತ್ತೀವರ್ರಿ, ನಾವು ಮನ್ಯಾಗನೂ ಮಾರತ್ತೇವ್ರಿ, ಮತ್ತ ಇಲ್ಲಿ ಸುತ್ತ ಹಳ್ಳಿಗಳದಾಗ ಸಂತಿ ನಡಿತಾದಲ್ಲರ್ರಿ ಅವಾಗ ಹೋಗಿ ಮಾರಕೊಂಡ ಬರ್ತೇವರ್ರಿ, ನಮ್ಮ ಅವ್ವೋರು ಮತ್ತು ನಮ್ಮ ಮನಿಯೋರು ಹೋತಾರ್ರಿ, ಈಕಿ ನಮ್ಮ ಆಯಿ ಹಳಾರಿ ಈಕಿಗಿ ಈಗ ತೊಂಬತ್ತು ಮ್ಯಾಲ ಆಗ್ಯಾವ ನೋಡರ್ರಿ, ಇನ್ನಾನು ದುಡಿತಾಳರ್ರೀ. ಕೂತು ತಿಂಬಾ ಮಾತೇ ಆಡಲರ್ರಿ ಆಕಿ. ಆಕಿಗೀ ತಾಸಿಗೊಂದು ಕಪ್ ಚಾ ಮಾಡಕೊಟ್ಟರ ಸಾಕರಿ ಊಟಾನೇ ಬೇಕಿಲ್ಲ ನೋಡರಿ ಮೇಡಂ ಛಂತಾನಾ ಹಿಂಗೆ ಕೂತು ಬಿದರ್ ಬಿಡಸ್ತಾಳ್ರಿ ಅಕಿಗಿ ನೋಡದ್ರ ನಾ, ಇನ್ನ ಹರೆದಕ್ಕಿ ಇದ್ದೀನಿ ಆದರ ನನಗ ವಯಸ್ಸು ಆಗ್ಯಾದೇನೊ ಅನ್ಸತ್ತಾದರ್ರಿ, ಒಂದು ಸಲುಪ ಕೆಲ್ಸಾ ಹೆಚ್ಚು ಕಮ್ಮಿ ಆದರನೂ ನನಗ ಸುಸ್ತು ಆಗತದರ್ರಿ ಆದರ ಈಕಿಗಿ ಮಾತ್ರ ಸುಸ್ತಾಗಲ್ಲರ್ರಿ ,ಅವರೆಲ್ಲಾ ಜವಾರಿ ಮಂದಿ ಹರಾರಿ ನಾವೆಲ್ಲಾ ಹೈಬ್ರಿಡ್ ಮಂದಿ ನೋಡರ್ರಿ,

ಮೇಡಂವೊರೆ ನಾನು ಹತ್ತನೇ ತಂಕಾ ಕನ್ನಡ ಮೀಡಿಯಂದಾಗ ಸಾಲಿ ಕಲತಿನ್ರಿ, ನಾ ಅವಾಗ ಇನಾ ಸಣ್ಣಕ್ಕಿ ಇದ್ದರೀ. ಅವಾಗೇ ನಮ್ಮ ಮುತ್ಯಾ ಸರಿಹೋದರಿ ಅವರು ಹೋದ ಎರಡು ವರ್ಷಕ್ಕೆ ನಮ್ಮಪ್ಪನು ಸರಿಹೋದ್ರಿ ನಾನು ನಮ್ಮವ್ವಗ ಒಬ್ಬಾಕಿನೆ ಇದ್ದೀಸರ್ರಿ, ಅಣ್ಣ ತಮ್ಮದೇರಿಲ್ಲರಿ ಈ ಮನಿದೆಲ್ಲ ನಮ್ಮನೆಯೋರೆ ನೋಡಕೊಂಡ ಹೋತಾರ್ರಿ ನಮ್ಮಪ್ಪ ಇದ್ದಾಗ ನಮ್ಮಮ್ಮನ ಕೈಗ್ಯಾಗೆ ರೊಕ್ಕ ಓಡಾಡ್ತಿತ್ತುರಿ. ಬಿದಿರು ತರೋದು, ಬಿಡಸೋದು, ಮಾರಕೊಂಡು ಬರಾದು ಮಾಡತ್ತಿದ್ದರ್ರಿ, ನಮ್ಮಪ್ಪ ಆದರ ಎಲ್ಲಾದಕ್ಕೂ ನಮ್ಮಮ್ಮನೇ ರೊಕ್ಕ ಕೊಡತಿದ್ದಳರ್ರಿ,

ನಮ್ಮ ಆಯಿ ಬಾಳ ಶ್ಯಾಣ್ಯಾ ಹಳಾರಿ.ನಮ್ಮವ್ವನು ಶಾಣ್ಯಾ ಹಳಾರಿ ರೊಕ್ಕ ಆಗಲಿ, ಯಾವದರೇ ವಿಷ್ಯಾದಾಗ ಆಗಲಿ ನಮ್ಮವ್ವನೇ ತೀರ್ಮಾನ ತಗೊತಾಳರ್ರಿ, ಅಕಿಗಿ ಮಾತ ಕರೆಕ್ಟಾಗಿ ಕಂಡರ, ಕರೆಕ್ಟಾಗಿನೇ ಪೈಸಲಾ ಮಾಡ್ತಾಳರ್ರಿ, ಹೂಂ... ರೀ...

ಮೇಡಂ ನಮ್ಮನ್ಯಾಗ ಟ.ವಿ. ಅದಾರಿ, ಡಿಶ್ ಹಾಕ್ಸಿವರಿ ಕೆಲಸಾ ಮಾಡಿ ಮಾಡಿ ಬ್ಯಾಸರ್ ಆತಾದಲ್ಲರೀ ಅವಾಗ ಟೈಂಪಾಸ್ ಆಗಲಕ್ಕಂತ ಟಿವಿ ನೋಡತಿವರ್ರಿ, ಕೆಲಸ ಇದ್ದಾಗ ಟಿವಿ ನೋಡಲ್ಲರಿ, ಇರಲಾರದಾಗ ನೋಡ್ತಿನರ್ರಿ, ನಮ್ಮಾಯಿ ಹಳಾಲ್ಲರೀ ಅಕಿ ಮುಂಜಾನಿ ಐದಕ್ಕೆಲ್ಲ ಏಳತಾಳರಿ ಅಕಿ ಎದ್ದು ಮಾರಿತಕ್ಕೊಂಡು ಬಂದು ತನ್ನ ಜಾಗಕ್ಕ ಕೂಡತಾಳರ್ರಿ ಮುಂಜಾನಿ ಏಳು, ಏಳೂವರಿಗೆಲ್ಲಾ ಟವಿ ಹಚ್ಚತ್ತೀವಿ. ಅವಾಗ ಟವಿ ಹಚ್ಚದೇವಂದರ ಸಂಜೀತನಕ ಚಾಲುನೇ ಇರ್ತತದ್ರಿ, ಎಲ್ಲಾ ಬರೋ ಧಾರವಾಯಿ ನೋಡ್ತಾಳರ್ರಿ ಅಕಿ ಕಣ್ಣ ಸ್ವಲ್ಪ ಮಂಜ, ಮಂಜ ಆಗ್ಯಾವರ್ರಿ ಆದರ ಕಿವಿ ಮಾತ್ರ ಭಾಳ ಚುರುಕ ಅದಾವರ್ರಿ ನಾವಿಲ್ಲೆನರೇ ಮಾತಾಡದರ ಅಕಿಗಿ ಕೇಳಿಸ್ತದ್ರಿ, ಧಾರವಾಹಿ ಅಂದ್ರ ಉದಯದಾಗ ಬರ್ತಾವಲ್ಲರ್ರಿ ಕಲ್ಯಾಣಿ, ಮನೆಮಗಳು, ಸಂಬಂಧ, ಪ್ರೇರಣಾ ಇವನ್ನ ನೋಡ್ತನಿರ್ರಿ, ಮತ್ತ ಸುವರ್ಣದಾಗ ಲಕ್ಷ್ಮಿ ಬರ್ತಾಳಲ್ಲರೀ ಅದು “ಕಥೆ ಅಲ್ಲ ಜೀವನ” ಮತ್ತ “ಬದುಕು ಜಟಕಾ ಬಂಡಿ” ಇವನ್ನೆಲ್ಲಾ ನೋಡ್ತಿನ್ರಿ. ನನಗೆ ಕಲ್ಯಾಣಿ ಧಾರಾವಾಯಿ ಭಾಳ ಇಷ್ಟ ಆಗತದರ್ರಿ ಅಕಿನ ಮದ್ವಿ ಆದರನೂ ಅಕಿಗಿ ಗಂಡ ಸೇರಾಂಗಿಲ್ಲಲ್ಲರೀ, ಅತ್ತಿ,ಮಾವ ಭಾಳ ಛಂದ ಇರ್ತಾರ್ರಿ ಆದ್ರ ಗಂಡೇ ಛಂದ ಇಲ್ಲ ಅಂದ್ರ ಏನ ಮಾಡಬೇಕ್ರಿ ಮೇಡಂ. ಇಂತವು ನಮ್ಮ ಸುತ್ತಮುತ್ತ ನಡೀತಾವಲ್ಲರೀ ನಾವು ನೋಡತ್ತೀವರ್ರಿ, ನಮ್ಮ ಕಣ್ಣ ಮುಂದೆ ನಡಿತಾವಲ್ಲರಿ. ಕಲ್ಯಾಣಿದು ಕತಿ ಭಾಳ ಗೋಳಾ ಅದಾ ನೋಡರ್ರಿ, ನನಗ ಅಕಿಗಿ ನೋಡದ್ರ ಅಳು ಬರ್ತಾದರ್ರಿ, ಅಕಿಗಿ ಧಾರವಾಯ್ಯಾಗ ಭಾಳಾ ಗೋಳಾ ತೋರಸ್ಯಾರಿ. ಗೋಳಾ ಇದ್ದುವು, ಕಷ್ಟದ್ದು, ಮನಿತನದ ಕಥಿ ಇದ್ದುವು ಅಂದರ ನೋಡತೇನರ್ರಿ, ಕುಣ್ಯಾದು ಗಿಣ್ಯಾದು ಇದ್ದರ ನೋಡಂಗಿಲ್ಲರಿ. ಆಮ್ಯಾಲ ಲಕ್ಷ್ಮಿದು ಭಾಳ ಛಂದ ಬರ್ತಾದರ್ರಿ ಅಕಿ ಅಂದ್ರ ಭಾಳ ಇಷ್ಟ ಆಗತದ್ರಿ, ಆಕಿನ ಸಂಬಂಧನೇ ನೋಡತಿನರಿ. ನಮ್ಮ ಆಯಿಗನೂ ಅಕಿ ಭಾಳ ಇಷ್ಟ ಆಗ್ತಾಳಲ್ರಿ, ಅಕಿ ಎಷ್ಟು ಛಂದ ಬುದ್ಧಿಮಾತ ಹೇಳತಾಳರಿ. ಯಾರರೇ ಅತ್ತಿ ಸೊಸಿ ಜಗಳ ಆಡಿದ್ದರ, ಮಗ ಸೊಸಿ, ತಾಯಿ ಮಗ, ಗಂಡ ಹೆಂಡತಿಗೊಳದು ಜಗಳ ಇದ್ದರ ಅವರಿಗಿ ಬುದ್ಧಿ ಮಾತ ಹೇಳತ್ತಾರ್ರಿ, ಜಗಳ ಬಿಡಿಸ್ತಾಳರಿ. ಇವರಿಗೆಲ್ಲ ಒಂದು ಮಾಡಾ ಕೆಲ್ಸಾ ಮಾಡತಾಳಲ್ಲರಿ ಅದಕ್ಕೆ ಖುಷಿ ಆಗ್ತದ್ದರಿ.

ಮೇಡಂ ಇವೆಲ್ಲ ಮನ್ಯಾಗಿನ ಜಗಳಗಳು ಅವಾರಿ ಇವೆಲ್ಲ ಮನ್ಯಾಗೇ ಇರಬೇಕರೀ. ಇಂತವೆಲ್ಲ ಬಯಲಿಗೆ ತಂದರ ಮರ್ಯಾದಿ ಯಾರ್ದ ಹೋತಾದರಿ.ನಾಕ ಮಂದ್ಯಾಗ ಹೋದ ಮರ್ಯಾದಿ ಮತ್ತ ಹೊಳ್ಳಿ ಬರತಾದೆನರ್ರಿ ಅದಕ್ಕ ಏನೇ ಸಮಸ್ಯೆಗಳಿದ್ದರು ಅದನ್ನು ನಾವೇ ಬಗೆಹರಿಸಿಕೊಳ್ಳಬೇಕು ಅಂತ ನನ್ನ ಅನಿಸಿಕೆ ಅದಾರಿ. ಹಂಗಂತ ಗಂಡ ಹೊಡಿಲತಿಸು ಅಂದರ ಅದನು ನುಂಗಕೊಂಡು ಇರಬಾರದ್ರಿ. ಇದರಿಂದ ಗಂಡಸರಿಗಿ ಸಲಗಿ ಕೊಟ್ಟಂಗ

ಆಗತಾದರ್ರಿ, ಹಂಗಾಗಿ ಅವರಿಗೀ ಚಂದ ಬುದ್ಧಿ ಕಲ್ಸಬೇಕರಿ. ಅಲ್ಲಿ ತಂಕಾ ಹೋಗಿ ಅಲ್ಲಿ ಬುದ್ಧಿ ಹೇಳಿಸಗೊಂಡು ನಕ್ಕೋತ ಒಂದಾಗಿ ಬಂದೋರು ಮತ್ತ ಮನ್ಯಾಗ ಬಂದು ಜಗಳ ಮಾಡ್ಕೊಂಡರ ಅವಾಗ ಯಾರಿಗಿ ಹೇಳ್ತಾರಿ. ಹಂಗೆ ಇವನ್ನೆಲ್ಲ ನಮ್ಮಲ್ಲೆ ತೀರ್ಮಾನ ಮಾಡಕೊಬೇಕು ಅಂತ ನನಗ ಅನ್ನಿಸ್ತದರ್ರಿ..

ನನಗರೀ ಮೇಡಂ ಹೆಣ್ಣುಮಕ್ಕಳು ಓದಬೇಕರ್ರಿ, ಬರಿಬೇಕು ಮದಿನು ಮಾಡ್ಕೋಬೇಕ್ರಿ ಛಂದ ಓದಿ ಪಾಸಾಗಿ ನೌಕರಿ ಹಿಡಿಬೇಕರಿ. ನೌಕರಿ ಇದ್ದರ ಕಿಮ್ಮತ್ ಕೊಡತಾರರ್ರಿ, ಮಂದಿ ಸಲಾಮ ಹೊಡಿತಾರ್ರಿ, ಹಂಗಾಗಿ ಹೆಣ್ಣುಮಕ್ಕಳ ಓದಬೇಕರ್ರಿ, ನನಗ ವಿದ್ದೇನೆ ತಲಿಗಿ ಹತ್ತಲಿಲ್ಲರ್ರಿ ಅದಕ್ಕ ಹತ್ತನೇ ಪಾಸ ಆದಮ್ಯಾಲ ಮದಿ ಮಾಡ್ಬರ್ರಿ ಒಂದು ಹಡ್ಡ ಕುಂತಿನೋಡ್ರಿ, ಈಗೆಲ್ಲ ಓದು ತಲಿಗಿ ಹತ್ತಲ್ರಿ, ಇದೇ ಕೆಲ್ಸಾನೇ ನೋಡಕೊಂಡು ಹೋಗ್ತಿನರ್ರಿ, ಧಾರವಾಹ್ಯಾಗ ಪಾರ್ಟ ಮಾಡತ್ತಾರಲ್ಲರೀ ಅವರಿಗೀ ಬರೇ ಅಳಾ ಪಾತ್ರಾನೇ ಕೊಡತಾರ್ರಿ, ಹಂಗಾಗಿ ಒಮ್ಮೊಮ್ಮೆ ಅವರ ಜೊತಿ ನಮಗನು ಅಳು ಬರ್ತದರ್ರಿ ಆದರ ಒಂದೊಂದು ಸಾರಿ ಇದು ಭಾಳ ಆಯ್ತು ಅಂತ ಅನ್ನಿಸಾಕ ಶುರುಮಾಡತದರೀ. ಹೆಣ್ಣುಮಕ್ಕಳಿಗೆ ಅಧಿಕಾರ ಕೊಡಬೇಕರಿ. ನಾವು ಮನಿ ಮಂದಿಗೆಲ್ಲ ನೋಡಕ್ಕೋತ್ತೀವಿ, ಅದರಾಗ ದೇಶ ನೋಡಾದು ಕೊಟ್ಟರರೇ ಇನ್ನೂ ಛಲೊ ನೋಡ್ಕೋತಿವರ್ರಿ, ನಾವು ಯಾರಿಗಿಂತ ಏದರಾಗನು ಕಮ್ಮಿ ಇಲ್ಲಲ್ಲರ್ರಿ, ನಾ ಹೇಳಾದ ಇಷ್ಟೆರೀ ಹೆಣ್ಣುಮಕ್ಕಳನು ಕಷ್ಟ ಪಡತಾರ್ರಿ, ಅವರಿಗಿನೂ ಗಂಡಸರಂಗ ಅಧಿಕಾರ ಸಿಗಬೇಕರ್ರಿ, ಅದು ಟಿವಿದೋರು ಹೇಳಿದರಂದರ ಭಾಳ ಛಂದ ಆತಾದರಿ.ಯಾಕಂದರ ಟಿವಿ ಭಾಳ ಮಂದಿ ನೋಡತಾರಲ್ಲರ್ರಿ..

ಹೆಸರು : ಸಂಗೀತಾ ದೇಸಾಯಿ

ವಯಸ್ಸು : ೨೫

ಶಿಕ್ಷಣ : ಬಿ.ಇ.

ಊರು : ಜಯನಗರ, ಗುಲಬರ್ಗಾ

• Hi. How r u. Im fine. ಇವಾಗ ಇಂಜನಿಯರಿಂಗ್ ಓದುತ್ತೀದ್ದಿನಿ ಇಲ್ಲೆ ಅಪ್ಪಾ ಎಂಜನಿಯರಿಂಗ್ ಕಾಲೇಜಿನಲ್ಲಿ.ಮನೇಲಿ ನಾನು ಅಮ್ಮ ಅಪ್ಪ ಅಕ್ಕ ಅಣ್ಣ ಇಷ್ಟು ಜನ ಇದ್ದಿವಿ. ನಾವು ಒಳ್ಳೆ ಶಿಕ್ಷಣವನ್ನು ಪಡೆದುಕೊಂಡಿದ್ದಿವಿ.ನನಗೆ ಟಿವಿ ನೋಡಲಿಕ್ಕೆ ಟೈಮ್ ಸಿಗಲ್ಲ. almost all ನಾನು ಕಾಲೇಜ್‌ನಲ್ಲಿರತೀನಿ ಅದಕ್ಕೇ time manage ಆಗಲ್ಲ. ಬೆಳಿಗ್ಗೆ ೭.೩೦ಕ್ಕೆ ಮನೆ ಬಿಟ್ಟರೆ ಮತ್ತೆ ೫.೩೦ಕ್ಕೆ ಮನೆಗೆ ಬರ್ತೀನಿ. ಮತ್ತೆ libarary workge ಹೋಗ್ತೀನಿ. ಹೀಗಾಗಿ ಟಿವಿ ನೋಡೋದು ಭಾಳ ಕಡಿಮೆ. ನಮ್ಮ collegeನಲ್ಲಿ mobile ಕೂಡಾallow ಇಲ್ಲ ಹಾಗಾಗಿ mobileನಿಂದಲೂ ದೂರನೇ ಇರ್ತೀನಿ. ನಮಗೆ ಸೋಮವಾರ ದಿನಾ ರಜೆ ಸಿಗತ್ತದೆ.ಆವಾಗ ಮತ್ತೆ holidaysನಲ್ಲಿ ಟೈಮ ಸಿಕ್ಕಾಗ ಹಾಡುಗಳನ್ನು ಇಷ್ಟಪಟ್ಟು ಕೇಳ್ತೀನಿ, ಮತ್ತ ನನಗೆ ಉದಯ, ಈಟಿವಿ ಕನ್ನಡ, ಸ್ಟಾರ್ ಪ್ಲಸ್, ಸೋನಿ ಟಿವಿ, ಕಲರ್ಸ್ ಚಾನೆಲಗಳು ಹೆಚ್ಚು ಇಷ್ಟ ಆಗ್ತಾವ. ಧಾರವಾಹಿಗಳು ಅಂತ ಅಂದರ ಮೊದಲೆಲ್ಲಾ ಸ್ಟಾರ್‌ಪ್ಲಸ್‌ಲ್ಲಿ

ಬರುತ್ತಿದ್ದವಲ್ಲ "ಕ್ಯೂಂಕಿ ಸಾಸ್ ಭೀ ಕಭಿ ಬಹೂ ಥೀ", "ಕಹಾನಿ ಘರ್ ಘರ್ ಕೀ", "ಕಸೌಟ ಜಿಂದಗೀ ಕಿ" ಈ ಧಾರವಾಹಿಗಳು ಹೆಚ್ಚು ಇಷ್ಟ ಆಗುತ್ತಿದ್ದವು. ಇದರಲ್ಲಿ ಪಾತ್ರವಹಿಸಿದ ತುಳಸಿ ವಿರಾನಿ (ಕ್ಯೂಂಕಿ) ಪಾರ್ವತಿ (ಕಹಾನಿ) ಪ್ರೇರಣಾ (ಕಸೌಟ) ಇವರು ತುಂಬಾನೆ ಚೆನ್ನಾಗಿ ಪಾರ್ಟ್ ಮಾಡತ್ತಿದ್ರು, ಅಲ್ಲಿ ಹೆಣ್ಣುಮಗಳೊಬ್ಬಳು ಮದುವೆ ಆದ ಮೇಲೆ ಬರುವ ಕಷ್ಟಗಳು ಆ ಕಷ್ಟಗಳಿಂದ ಅವಳು ಏನೆಲ್ಲಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಚೆನ್ನಾಗಿ ತೋರ್ಸ್ತಾರೆ. ಅವರು ಪಾರ್ಟ ಮಾಡೊದು ನೋಡಿದರೆ ಎಲ್ಲವೂ ತಮ್ಮ ಜೀವನದಲ್ಲಿಯೇ ನಡೆಯುತ್ತೀದೆಯೆನೋ ಅಂತ ಅನಿಸುತ್ತಿತ್ತು, ಕಷ್ಟಗಳು ಹೊಸ ಹೊಸ twistಗಳು ಬರೋದರಿಂದ ನೋಡುತ್ತಿದ್ದೆ, ಆ ಧಾರವಾಹಿಗಳನ್ನು ನಾನು ರಾತ್ರಿ ನೋಡತ್ತಿದ್ದೆ ಕೆಲವೊಮ್ಮೆ libarary work ಮಾಡ್ತಿದ್ದೆ ಆವಾಗ ನೋಡಕ್ಕಾಗತ್ತಿದ್ದಿಲ್ಲ. ಅದಾದ ಮೇಲೆ ಈಗ ಕಲರ್ಸ್ ಚಾನೆಲನಲ್ಲಿ ಬರ್ತಿದಾವಲ್ಲ "ಬಾಲಿಕಾವಧು", "ನಾ ಆನಾ ದೇಶ್ ಮೇರೆ ಲಾಡೋ", "ಬಿಗ್‌ಬಾಸ್" ಇವು ನೋಡ್ತೀನಿ. ನನಗೆ ಟೈಮ ಸಿಗತದಲ್ಲ ಅವಾಗಲೇ ಈ ಧಾರಾವಾಹಿಗಳನ್ನು ನೋಡತೀನಿ, ನನಗೆ ಹೆಚ್ಚ ಇಷ್ಟ ಆಗೋ ಧಾರಾವಾಹಿ ಅಂದರ "ನಾ ಆನಾ ದೇಶ್ ಮೇರೆ ಲಾಡೋ" ಯಾಕಂದ್ರೆ ಇದು ಕಲರ್ಸನಲ್ಲಿ ರಾತ್ರಿ ೧೦.೩೦ಕ್ಕೆ ಪ್ರಾರಂಭ ಆಗುತ್ತಿತ್ತು. ಈ ಧಾರಾವಾಹಿಯಲ್ಲಿ ಫ಼ಸ್ಟಿಗೇ ಒಂದು ಹೆಣ್ಣು ಪಾಪುನ ಕುದ್ಯಾ ಹಾಲಿನಾಗ ಹಾಕಿ ಮುಂದ ಹುಟ್ಟಾ ಮಗು ಗಂಡೇ ಆಗಲೀ, ನನಗೆ ಗಂಡು ಮಗುವನ್ನೇ ಕರುಣಿಸು ದೇವರೇ ಎಂದು ಕುದಿವ ಹಾಲಿನಲ್ಲಿ ಹಾಕುವ ದೃಶ್ಯ ನೋಡಿ ಭಾಳ ಕೆಟ್ಟ ಅನಸ್ತು, ಇದನ್ನ ನೋಡಿ ಎಂಥಾ ಸಮಾಜದಲ್ಲಿ ಬದುಕುತ್ತಿದ್ದೀವಲ್ಲಾ? ಇಂತಹ ಘಟನೆಗಳು ಈಗನೂ ನಡೆಯುತ್ತವಾ? ಸಮಾಜದಲ್ಲಿ ಎಷ್ಟೊಂದು ಕಠೋರವಾದ ಬದುಕು ಇದೆಯಲ್ಲ? ಅಂತ Questionಗಳು ಕಾಡಿದ್ದು ಇದೆ. ಆಮೇಲೆ ಕಥಾನಾಯಕಿ ಸಿಯಾ ತನ್ನ ಅತ್ತೆ ಕೊಡೊ ಕಷ್ಟಗಳನ್ನು ಎದುರಿಸುವಾಗ ಎಷ್ಟೋ ಸಾರಿ ಹೆಣ್ಣಿಗೆ ಹೆಣ್ಣೆ ಶತ್ರು ಹಳಾ ಏನೋ ಅಂತ ಅನಸ್ಯಾದ, ಆಮ್ಯಾಲ ಅಕಿ ಧೈರ್ಯದಿಂದ ಹೋರಾಟ ಮಾಡಿ ಎಲ್ಲರ ಮನಸ್ಸನ್ನು ಗೆಲ್ಲತ್ತಾಳ, ಅಕಿ ಅಷ್ಟು ಹುಷಾರ ಇರತಾಳ ತನ್ನ ಗಂಡಗ ಸರಿ ದಾರಿಗಿ ತರತಾಳ. ಸಮಾಜದಾಗ ನಡ್ಯಾವ ಎಲ್ಲಾ ಕೆಟ್ಟ ಕೆಲಸಗಳನ್ನು ವಿರೋಧಿಸುತ್ತಾಳೆ. ಮುಂದ ತನ್ನ ಹೊಟ್ಯಾಗ ಹೆಣ್ಣಮಕ್ಕಳ ಅವಾ ಅಂತ ಗೊತ್ತಾದಾಗ ಆ ಹೆಣ್ಣಮಕ್ಕಳಿಗಿ ಜನ್ಮ ಕೊಡಲೇಬೇಕು ಅಂತ ನಿರ್ಧಾರ ಮಾಡತಾಳ. ಅಕಿನ ಅತ್ತಿ,ಭಾವ ಎಷ್ಟೆ ಕಷ್ಟ ಕೊಟ್ಟರನು ಅಕಿ ಅವನ್ನ ಧೈರ್ಯವಾಗಿ ಎದರಸ್ತಾಳ ಮುಂದ ಅವಳಿ ಜವಳಿ ಹೆಣ್ಣು ಮಕ್ಕಳಿಗೆ ಜನ್ಮನೀಡಿ ಸಾಯತಾಳ. ಆ ಎಳೆಯ ಮಕ್ಕಳು ಮನೆಯವರ ತಂತ್ರಕ್ಕೆ ಬಲಿಯಾಗಿ ಬೇರೆ ಬೇರೆ ಆಗೋದು. ಒಂದು ಮಗು ಮೃದು ಸ್ವಭಾವದವಳಾಗಿ ಬೆಳೆಯೊದು, ಇನ್ನೊಬ್ಬಾಕಿ ಧೈರ್ಯಶಾಲಿಯಾಗಿ ಬೆಳೆಯೊದು ಸಮಾಜದ ವಿರುದ್ಧ ಫೈಟ್ ಮಾಡೋದು ಅದೆಲ್ಲ ನನಗೆ ಭಾಳಾನೆ ಇಷ್ಟವಾಗಿತ್ತು. ಮುಂದೆ ತನ್ನ ಅಜ್ಜಿಯ ದ್ವೇಷವನ್ನು,ಸಿಟ್ಟನ್ನು ಕಡಿಮೆ ಮಾಡೊದು ಅವಳಲ್ಲಿರುವ ಹಳೆ ವಿಚಾರಗಳನ್ನು ಬದಲಾಯಿಸುವುದು ತನ್ನ ಅಜ್ಜಿಯಲ್ಲಿರುವ ಹಳೆಯ ವಿಚಾರಗಳಲ್ಲಿ ಸಾಕಷ್ಟು ಬದಲಾವಣೆ ತರುತ್ತಾಳೆ. ಹೆಣ್ಣೆಂದರೆ ಹುಣ್ಣು ಎಂಬ ಮನೋಭಾವವನ್ನು ಬದಲಿಸುವಲ್ಲಿ ಬಹಳ ಶ್ರಮ ವಹಿಸುತ್ತಾಳೆ ಈ ಬದಲಾವಣೆಯನ್ನು ತರುವುದು ಎಲ್ಲವೂ

ಇಷ್ಟವಾಗುತ್ತದೆ. ಇದು ಬಿಟ್ಟರೆ ನಂಗೆ ಬಾಲಿಕಾವಧು ತುಂಬಾ ಇಷ್ಟ ಆಗತ್ತಾದ. ಇದು ಕೂಡಾ ಭಾಳ ಚೆನ್ನಾಗಿದೆ. ಆದರ ನೋಡ್ಲಿಕ್ಕೆ ಟೈಮ್ ಸಿಗಲ್ಲ ಅದಕ್ಕ ನೋಡಾದು ಆಗಲ್ಲ. ಇದು ಬಿಟ್ಟರ ಸ್ಟಾರ್‌ಪ್ಲಸ್‌ನಲ್ಲಿ ಬರೋ ಸಾಥ ನಿಭಾನ ಸಾಥಿಯಾ. ಮಾಸ್ಟರ್ ಸೇಫ್ ಆಫ್ ಇಂಡಿಯಾ, ಇಸ್ ಪ್ಯಾರಕೋ ಕ್ಯಾ ನಾಮದೇ. ಇಮೋಷನಲ್ ಅತ್ಯಾಚಾರ್ (ಯುಟಿವಿ ಬಿಂದಾಸ್) ಲವನೆಟ, ಡೆರ್‌ಟು ಡೆಟ (ಚಾನೆಲ ವಿ) ನೋಡ್ತೇನೆ.

ನಾನು ಈಗಿನ ಕಾಲದ ಹುಡುಗಿ ನನಗೆ ಧಾರಾವಾಹಿಯಲ್ಲಿ ಸದಾ ಅಳೋ ಪಾರ್ಟ್ ಮಾಡೋ ನಟಿಯರಿಗೆ ನೋಡದ್ರೆ ಸಿಟ್ಟು ಬರ್ತದೆ. ಈಗಿನ ಕಾಲದಲ್ಲಿ ಎಷ್ಟೊಂದು Development ಆಗ್ಯಾದ, ಹೆಣ್ಣುಮಕ್ಕಳೆಲ್ಲರೂ Empowermentt ಅಂತ ಮಾತಾಡತಾರ. ಅದನ್ನು ನೋಡಿನಿ ಹಾಗಾಗಿ ಹೇಳ್ತಿತ್ತಿದ್ದಿನಿ. ಚೆನ್ನಾಗಿ ಓದ್ದೊರಿದ್ದಾರೆ. ದೊಡ್ಡ ದೊಡ್ಡ ಕೆಲ್ಸದಲ್ಲಿದ್ದೊರಿದ್ದಾರೆ. ಮನೆ ಕೆಲ್ಸ Job ಎಲ್ಲವನ್ನು ನೋಡ್ಕಂಡು ಹೋಗುತ್ತಾರೆ. ಹೆಣ್ಣುಮಕ್ಕಳೇ ಸ್ಟ್ರಾಂಗ್ ಅದಾರ ಆದರೆ ಮೀಡಿಯಾದಲ್ಲಿ ಈ ಪಾರ್ಟ್‌ಗಳನ್ನು ಹೆಚ್ಚು ತೋರ್ಸೊದೆ ಇಲ್ಲ. ಯಾವಾಗಲೂ ಮನೆಯಲ್ಲಿ ರೋದು ಮನೆ, ಮಕ್ಕಳು, ಸೇವೆ ಅಂತ ಇದ್ದು ಬಿಡೋದು ಹೀಗೆ ತೋರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ Societyನು Change ಆಗಿದೆ. ಹೆಣ್ಣುಮಕ್ಕಳೆಲ್ಲರು ಓದಕ್ಕೆ ಬರ್ತಿದ್ದಾರೆ. ಹಳ್ಳಿಯಿಂದಲೂ ಓದಕ್ಕಂತ ಹುಡುಗಿರು ಬರ್ತಾರೆ. ನಾವು ಮುಂದೆ ಮುಂದೆ ನಡಿಬೇಕು ಹಿಂದಕ್ಕಲ, ಇದು ನಿಯಮ ಆದರೆ ಮೀಡಿಯಾದಲ್ಲಿ ಹೆಣ್ಣುಮಕ್ಕಳನ್ನು ಹಳೆ ಮಾದರಿಯಲ್ಲೆ ತೋರ್ಸತಾರ, ಅಳಕ್ಕಿಯ ಪಾತ್ರದಾಗ ತೋರಸ್ತಾರ ಎಲ್ಲ ಕಷ್ಟನು ಅಕಿಗೆ ಯಾಕೆ? ಮಕ್ಕಳು ಹಡಿಬೇಕು. ಅತ್ತಿ, ಮಾವಂಗ ನೋಡಕೊಬೇಕು ಎಲ್ಲಾನು ಹೆಣ್ಣುಮಕ್ಕಳೇ ಯಾಕ ಮಾಡಬೇಕು? ಗಂಡಸಮಕ್ಕಳಿಗನೂ ಕೆಲಸ ಅಂತ ಕೊಡಲಿ? ಗಂಡು ಮಕ್ಕಳು ಯಾಕೆ ಮನೆ ಕೆಲಸಾ ಮಾಡಬಾರದು? ನಾವು ಈಗ ಡಾಕ್ಟರಾಗಿದಿವಿ, ಎಂಜಿನಿಯರ, IAS, IPS, ಪೊಲೀಸ್, ಕಂಡಕ್ಟರ್ ಆಗಿದಿವಿ ಮನಿನು ನೋಡತಿವಿ ಖರೇ ಹೇಳಬೇಕಂದರ ನಾವೇ ಗಂಡಸಮಕ್ಕಳಿಗಿಂತ ಸ್ಟ್ರಾಂಗ್ ಇದ್ದೀವಿ. ಈ ಸೀರಿಯಲ್‌ನಲ್ಲಿ ಮತ್ತ ಮತ್ತ ಅಳಾದೆ ತೋರ್ಸಿತಾರ. ಅದೇ ನನಗೆ ಇಷ್ಟ ಆಗಲ್ಲ. ಮುಂದ ಚೆನ್ನಾಗಿರೋ ಸೀರಿಯಲ್ ಬರ್ಲಿ ಅಂತ ಆಸೆಪಡ್ತೀನಿ.

ಹೆಸರು : ಕರಿಂಪಾಷಾ ತಂದೆ ಚಾಂದಪಾಷ

ವಯಸ್ಸು : ೩೮

ಶಿಕ್ಷಣ : ೭ನೇ ತರಗತಿ (ಉರ್ದು)

ಕೆಲಸ : ಗಾರೆ ಕೆಲಸ/ಟೆಲರಿಂಗ/ಪಾತ್ರೆ ಮಾರುವುದು

ಊರು : ಶಿರ್ಖಿಮೊಹಲ್ಲಾ ತಿಮ್ಮಾಪೂರ. ಯಾದಗಿರಿ

ಮೇಡಂ ನಮ್ದು ಹೊಲಾಮನಿ ಇಲ್ಲರೀ ನಾವ್ ದುಡಕೊಂಡೆ ತಿಂಬೇಕರ್ರಿ ಅದಕ ನಾ ಟೇಮ ಯಾವಾಗ ಸಿಗತಾದ ಅವಾಗ ಕೆಲ್ಸಾ ಮಾಡ್ತಿನ್ರಿ. ನಾ ಮಾಡೋದು ಬಿಗಾರಿ

ಧಂಧಾರೀ, ನಮ್ದು ತಿಂಗಳದಾಗ ಪಂದ್ರಾದಿನ ಕೆಲಸ ಇರತಾದರ್ರಿ, ಇನ್ ಪಂದ್ರಾ ದಿನ ಕೆಲ್ಸಾ ಇರಲ್ಲರೀ. ಮಳಿ ಗಿಳಿ ಅಂತ ಬಂದರ ಸ್ವಲ್ಪ ಕೆಲಸಾ ಇರತಾದರಿ, ಕೆಲಸಾ ಇಲ್ಲದಾಗ ನಮ್ಮ ಬಡೇಭಾಯಜಾನ ಟೆಲರಿಂಗ ಕೆಲ್ಸಾ ಮಾಡ್ತಾರಿ, ಇನ್ನೊಬ್ಬಾವ ಭಾಂಡಿಯಾಪಾರ ಮಾಡ್ತಾನರ್ರೀ. ಯಾವಾಗ ಕೆಲ್ಸಾ ಇರಲ್ಲ ನೋಡ್ರಿ ಆ ಟೇಮನ್ಯಾಗ ನಮ್ಮಣ್ಣನ ದುಕಾನಕ ಹೋಗತಿನರ್ರಿ ಅಲ್ಲಿ ನಾ ಬಟ್ಟಗೊಳಿಗಿ, ಗುಂಡಿ ಹಚ್ಚಾದು, ಮಾಡ್ತಿನರ್ರಿ, ಗಾರೆ ಕೆಲ್ಸಾ ಭಾಳ ಇತ್ತ ಅಂದ್ರ, ಮೈ ಕೈ ನೋಸದಂಗ, ಬ್ಯಾನಿ ಆಗಲಿಕತ್ತಿವ ಅಂದರ ನಾ ಗುಂಡಿ ಹಚ್ಚದು ಮಾಡಲ್ಲರೀ, ಇನ್ನೊಬ್ಬಾವ ಭಾಯಿಜಾನನ ಗೂಡಾ ಭಾಂಡಿ ಮಾರಲಾಕ ಒತ್ತಾ ಘಾಡ್ಯಾಗ ಹಾಕೊಂಡು ಹೋಗಿ ಮಾರ್ತಿವರ್ರಿ, ಶಹಾಪೂರ, ಸುರಪುರ, ಸಂಗಾಯಿ, ಜೇವರ್ಗಿ, ಗುಲಬರ್ಗಾ, ಹಿಂಗ ಹೋತೀವರ್ರಿ, ಗುಲಬರ್ಗಾದಾಗ ನಮ್ಮ ಮಂದಿ ಹರಾನೋಡರ್ರಿ, ರೋಜಾದಾಗ ಇರತಾರ್ರಿ, ನಮ್ಮ ಅಕ್ಕ ತಂಗೇರಗಳಿಗೆ ಗುಲಬರ್ಗಾದಾಗ ಕೊಟ್ಟೇವರ್ರಿ

ನಮ್ಮ ಅವ್ವಾ ಅಪ್ಪಗ ನಾವ್ ಒಟ್ಟ ೧೪ ಮಂದಿ ಮಕ್ಕಳಿದ್ದೇವರ್ರಿ, ಅದರಾಗ ಐದು ಮಂದಿ ಸಣ್ಣವರ್ರಿದ್ದಾಗ ಯಾವದೋ ಜಡ್ಡ ಬಂದು ಖಾಲಿ ಆಗ್ಯಾರ್ರಿ, ಆವಾಗ ನಾ ಭಾಳ ಸಣ್ಣಾವ ಇದ್ದರೀ. ಈಗ ನಮ್ಮ ಮನ್ಯಾಗ ನಾ ನಮ್ಮ ಭಾಯಿಜಾನಗೊಳ, ಭಾಬಿಗೊಳ, ನಮ್ದು ಮಕ್ಕಳ ಮತ್ತ ನಮ್ಮಣ್ಣನ ಮಕ್ಕಳು ಎಲ್ಲಾರು ಕೂಡೆ ಇದ್ದಿವರ್ರಿ ಈಗ ನಾವೆಲ್ಲಾರೂ ಸೇರಿ ಒಂದ ಬಿಸ್ ಮಂದಿ ಇದ್ದೀವರೀ.ನಮ್ಮಮನ್ಯಾಗ ಯಾವದರ ಬಾರೆದಾಗ ಫೈಸಲಾ ಮಾಡಬೇಕಾದರೆ ಅದು ನಮ್ಮ ದೊಡ್ಡ ಭಯ್ಯಾನೇ ಫೈಸಲಾ ಮಾಡ್ತಾರ್ರಿ, ಮೊದಲು ನಮ್ಮ ಅಬ್ಬು ಫೈಸಲಾ ಮಾಡತ್ತಿದ್ದರ್ರಿ, ಈಗ ಅವರದ ವಯಸ್ಸಾಗೇತಲ್ಲರಿ,ಅದಕ ಹಿರ್‍ಯಾಂವ ಅಣ್ಣಂದೇ ಫೈಸಲಾ ನಡಿತಾದರ್ರಿ, ನಮ್ಮ ಅಮ್ಮಿಗಿ ಕೇಳತಿವರಿ ಆದರೂ ಅಕಿ ಬೇಟಾ ನೀವೇ ನೋಡ್ರೆಪ್ಪಾ ತಿಳದೊರಿದ್ದಿರಿ ಅಂತಾರಿ. ಒಂದೊಂದು ಸಲಾ ಸರಿ ಕಾಣಲಿಲ್ಲ ಅಂದರ ಹೀಂಗ ಮಾಡಬ್ಯಾಡರ್ರಿ ಅಂತ ಹೇಳತಾರ. ನಮ್ಮವ್ವಗಂತ ಸುಮ್ ಮಾತಿಗಿ ಕೇಳ್ತಿವ್ರಿ ಮೇಡಂ, ನಮ್ಮ ಹೆಂಡರಿಗಾಗಲಿ, ಭಾಬಿಗಳಿಗಾಗಲಿ ಕೇಳೋದಿಲ್ಲರಿ. ಹೆಣ್ಣಮಗಳಿಗ್ಯಾಕ ಕೇಳಬೇಕರ್ರಿ, ಅವರ್ರಿಗಿ, ಉಟಕೊಲಾಕ, ತೊಟಕೊಲಾಕ, ಉಳ್ಳಾಕ, ತಿಲ್ಲಾಕ ಕಮ್ಮಿ ಇದ್ದರ ಕೇಳಬೇಕರ್ರಿ ಅಂತ ನನಗ ಅನಸ್ತದರಿ, ನಮ್ಮ ಬೇಗಂ ಹೆಸರ ಮುನ್ನಿಬೇಗಂ ಅಂತರೀ ಅಕಿ ಸಾಲಿ ಗಿಲಿ ಏನು ಕಲತ್ತಿಲ್ಲರಿ, ಅಕಿಗಿ, ಮನಿ, ಮಕ್ಳು ಅಂದರ ಜೀಂವಾ ಹಳಾರ್ರಿ ಅದಕ್ಕ ಅಕಿ ಮನ್ಯಾಗೆ ಇರತಾಳರಿ,ಮತ್ತ ನಾವ ಮನಿ ಹೆಣಮಕ್ಳಿಗಿ ಕೆಲ್ಸಾಕ್ಕ ಕಳ್ಸಾಂಗಿಲ್ಲರಿ, ನಮ್ಮನ್ಯಾಗರಿ ಮೇಡಂ ಓರೇ ನಮ್ಮ ಅಮ್ಮಿ ಭಾಳಾ ಶಾಂತ ಹಳಾರಿ ಅಕಿಗಿ ಜಗಳ ಕಲಗತಿ ಅಂದರ ಹಿಡಸಲ್ಲರಿ ಅಕಿನೂ ಮೊದಲ ಜಗಳ ಮಾಡತಿದ್ದಳರಿ ಆದರ ಈಗ ವಯಸ್ಸಾದ ಮೇಲೆ ಜಗಳ ಕಡಿಮೆ ಮಾಡಿದ್ದಾಳರಿ. ನಮ್ಮ ಮನ್ಯಾಗ ಯಾವದಕ್ಕರೇ ಜಗಳ ಬಂದ್ರನೂ ನಮ್ಮವ್ವನೇ ಬಿಡಸ್ತಾಳರಿ. ನನ್ನ ಹೆಂಡ್ತಿ ಸಲುಪ ಸಿಟ್ಟನಾಕಿ ಮತ್ತು ಜಗಳಗಂಟಿ ಅದಾಳರಿ, ಮನ್ಯಾಗ ಓಟು ಕೆಲ್ಸಾ ಮಾಡಕೊಂಡು ಹೋತಾಳರ್ರಿ ಆದರ ಸಿಟ್ಟು ಮಾತ್ರ ಭಾಳ ಅದಾರಿ ನಮ್ಮ ಅಮ್ಮಿ ಮಾತ್ರ ಎಲ್ಲರಿಗೀ ಛಂದ ನೋಡ್ಕೋಂಡು ಹೋಗತಾಳರಿ.

ನಮ್ಮ ಬೇಗಂ ಹಳಾ ಅಲ್ಲರೀ ಅಕಿಗೀ ಧಾರವಾಹಿಗಳಂದ್ರ ಭಾಳ ಜೀಂವಾರೀ ನಾ ಯಾವಾಗಾರ ಟೈಮ ಸಿಕ್ಕಾಗ ನೋಡ್ತಿನರ‍್ರಿ ಇಲ್ಲಾಂದ್ರ ಇಲ್ಲರೀ. ಯಾಕಂದ್ರ ಟಿಬಿ ನಮ್ಮಗೇನು ಅನ್ನಾ ಹಾಕಂಗಿಲ್ಲರಿ ನೋಡಕೋತ ಕೂಡ್ಲಾಕ. ಹಂಗೇನರೆ ಟೈಮ ಸಿಕ್ಕು, ಕೆಲ್ಸಾ ಇರಲಿಲ್ಲ ಅಂದರ ಹಿಂದಿ, ಉರ್ದು ಚಾನಲ ನೋಡ್ತೇನರ‍್ರಿ, ಮೊದಲ ಬರ‍್ತಿತ್ತಲ್ಲರ‍್ರಿ ಅದ್ಯಾವದೋ ಸಾಸಭಿ ಅಂತ (ಕ್ಯೂಂಕಿ ಸಾಸ್‌ಭಿ ಕಭಿ ಬಹೂಥಿ ಸ್ಟಾರ್‌ಪ್ಲಸ್) ಅದೂ ನೋಡತ್ತಿದ್ದೇರ‍್ರಿ, ನಮ್ಮನೆಯಕ್ಕಿ ದಿನಾ ರಾತ್ರಿ ಇವತ್ತು ಹಿಂಗಾತು, ಹಂಗಾತು ಅಂತ ಹೇಳಿದರಿಂದ, ಅಕಿ ಹೇಳಾದ ಕೇಳಿ ನೋಡಾಕ ಹತ್ತಿದ್ದೆರ‍್ರಿ, ಮೊದಲೆಲ್ಲಾ ನನಗನು ಭಾಳ ಪಸಂದ ಆಗತ್ತಿತ್ತರ‍್ರೀ. ಅದರಾಗ ಅಕಿ ಯಾರ‍್ರಿ, ಅಕಿ ಹೆಸರು ಏನೋ ಅದಾನೋಡರ‍್ರಿ ಮೇಡಂ (ತುಳಸಿ ವಿರಾನಿ) ಹಾಂ. ಅಕಿರಿ ಆಕಿನ ನೋಡಿ ಕಲಿಬೇಕರ‍್ರಿ ಎಟರೇ ಕಷ್ಟ ಬಂದರನೂ ನಕ್ಕೊತಾನೇ ಪಾರ್ಟ ಮಾಡತ್ತಿದ್ದಳರ‍್ರಿ, ಎಲ್ಲಾ ಕಷ್ಟಗಳೂ ಅಕಿಗೆ ಬರ‍್ತಾವಲ್ಲ ಯಾಕೆ? ಅಂತ ಅನಸ್ತಿತ್ತುರ‍್ರಿ, ಸೋನಾ ಇಂದಂಗ ನೋಡರ‍್ರಿ ಅಕಿ. ಪೈಲ ಪೈಲ ಭಾಳ ಮನಸ ಕೊಟ್ಟು ನೋಡತಿದ್ದೇನರಿ ಆದರ ಅದರಾಗ ಬರೇ ಎಡ್ಡೆಡ್ಡು ಮದಿ ಆಗಾದು, ಮನ್ಯಾಗ ಹೆಂಡತಿ ಇದ್ದರನು ಹೊರಾಗ ಇನ್ನೊಬ್ಬಕ್ಕಿಗಿ ಇಟಗೊಳಾದು, ಅಂವಾ ಸತ್ತ ಬಿಸ ವರ್ಷಕ್ಕ ಮತ್ತ ವಾಪಸ್ ಬರೋದು, ಮದಿ ಆಗಲಾರದೇ ಇನ್ನೊಬ್ಬನ ಗೂಡಾ ತಿರಗಾಡೋದು, ಬಸರಾಗೋದು, ಅಕಿನ ಮ್ಯಾಲ ಈಕಿ ಜಗಳಾ ಆಡಾದು, ಇಕಿನ ಮ್ಯಾಲ ಅಕಿ. ಹಿಂಗ ತೊರ‍್ಸಾದ ನೋಡಿ ನಂಗ ಭಾಳ ಬ್ಯಾಸರ ಆಗಿ ನೋಡಾದೇ ಬಿಟ್ಟೆನರ‍್ರಿ, ಈ ಧಾರವಾಹ್ಯಾಗ ತೋರ‍್ಸಾದು ಹಕೀಕತನ್ಯಾಗ ನಡಿತಾದೆಲ್ರಿ ಮೇಡಂವೊರೆ ನೀವು ತಿಳಿದೊರ ಇದ್ದಿರಿ ನೀವೇ ಹೇಳರ‍್ರಿ, ಮದಿ ಮುಂಚಿಗೆ ಬಸರಾಗೋದು, ಅದು ದಫನ ಮಾಡೊಕ ಬ್ಯಾರೆ ಐಡ್ಯಾ ಮಾಡಾದು ಇವೆಲ್ಲ ಎಲ್ಲರೇ ಒಂದ ಕಡಿಗೀ ನಡಿ ಚೌದು, ಇಲ್ಲ ಅನಾಂಗಿಲ್ಲ ಆದರ ಹಿಂಗ ಮಾಡದರಿಂದ ಯಾರಿಗಿ ಲೂಕಸಾನ ಆಗತದರಿ, ಇಂತವು ತೋರ‍್ಸಾದರಿಂದ ಇಂತವೆಲ್ಲಾ ನಮಗನು ಧಾರವಾಹ್ಯಾಗ ತೋರ‍್ಸಾ ಹಂಗ ನಮಗನು ಇರಬೇಕು ಅಂತ ಅನಸ್ತದರಿ ಇದು ನೋಡಿ ತಲಿ ಖರಾಬ ಮಾಡ್ಕೊಂಡು ಬಾಳೆವು ಹಾಳಾಗದಂತು. ಖರೇ ನೋಡರಿ ಮೇಡಂ. ಅದಕ್ಕ ನಾನು ಇಂತವೆಲ್ಲಾ ನೋಡತೆನಂತ. ನಮ್ಮಕ್ಕಿಗಿ ಭಾಳ ಹೊಡದಿನ್ರಿ, ಎಡ್ಡ ತಿಂಗಳ ಡಿಶ್ ತೆಗಸಿದ್ದರ‍್ರೀ. ಆಮ್ಯಾಲ ಹಾಕೀನರ‍್ರಿ, ಅಂದರಬೀ ಇವು ನೋಡಾದು ಬಿಡಲ್ಲರೀ ಅಕಿ, ನಾವ್ ಗಂಡಸಮಕ್ಕು ದುಡಕೊಂಡ ತಿಂಬಾಕ ಹೊರಗ ಹೋತಿವರಿ, ಇವಕ ಮನ್ಯಾಗ ಏನ ಇರ‍್ತದರ‍್ರಿ, ಇವಕ್ಕೇನು ಕೆಲ್ಸಾ ಇರಲ್ಲಾ ನೋಡರಿ ಅದಕ ಟಬಿ ನೋಡ್ತಾವರ‍್ರಿ, ನಾ ಏಟ ಹೊಡ್ಡೆರೇನ, ಬಡ್ಡರೇನ ಕೇಳಾಲರಿ.

ಮೇಡಂವೊರೆ ಹೆಣ್ಣು ಮಕ್ಕಳ ಮನ್ಯಾಗ ಇದ್ದರೇನೆ ಛಂದರಿ. ಅವರ‍್ಯಾಕ ದುಡಿಲಾಕ ಹೊಗ್ಬೇಕ್ರಿ, ನಾವ್ ಯೆನ ದುಡ್ಯಾಲನೆರ‍್ರಿ, ಅವರಿಗೀ ದುಡಿಲಾಕ ಕಳ್ಸಿ ನಾವ್ ಮಾಡಾದರೇ ಏನ್ ಅದಾರಿ. ಅದಕ್ಕೆ ಹೆಣ್ಣಮಕ್ಕಳು ಮನ್ಯಾಗ ಇರಾದೇ ನನಗ ಛಂದ ಕಾಣಸ್ತಾದರ‍್ರಿ, ಮನಿ, ಮಕ್ಕು, ಗಂಡ, ಅತ್ತಿ ಮಾಂವ ಅನಕೋತಾ ಇರಬೇಕರ‍್ರಿ ಅದೇ ನನಗ ಇಷ್ಟ ಆಗತಾದರೀ ಮೇಡಂ.

ಹೆಸರು : ನಿಂಗಮ್ಮ ಗಂಡ ಮರೆಪ್ಪಾ

ವಯಸ್ಸು : ೫೮

ಶಿಕ್ಷಣ : ೫ನೇ ತರಗತಿ

ಕೆಲಸ : ಗೃಹಿಣಿ

ಊರು : ಗುಲಬರ್ಗಾ

ಏನಮ್ಮಾ ಆರಾಮಿದೀರಾ, ಮನೆಯಲ್ಲಿ ಎಲ್ಲರೂ ಆರಾಮಿದೀರಾ, ನಾವ ಎಲ್ಲಾರೂ ಆರಾಮಿದ್ದೀವೆವ್ವಾ, ನೀ ಆರಾಮೀದ್ದಿ, ಬಾ ಯವ್ವಾ ಒಳಗ ಬಾ, ಮತ್ತ ಯವ್ವಾ ನೀವು ಹಿಂಗ ನಮ್ಮಕಡೀ ಬಂದಿರಲ್ಲೇವ್ವ, ಯಾಕ ಬಂದಿರೀ, ಹೌದೆವ್ವಾ ನೀ ಇನ್ನಾ ಸಾಲಿ ಕಲೀತೆವ್ವ, ನಿಂಗ ನೋಡಿ ಸರಕಾರದ ಕಡಿಯಿಂದ ಇಲ್ಲ ಸಂಗಿನ ಕಡಿಂದ ಏನಾರ ಬರಕೋಂಡು ಹೋಗಲಾಕ್ಕ ಬಂದಾಳೇನು ಅಂತ ಅನಕೊಂಡಿವೆವ್ವ... ಯವ್ವಾ ನಮ್ದು ಹಿಂದ ನಮ್ಮ ಮಾವ, ಅತ್ತೇರು ಇದ್ದಾಗಿನ ಮನಿತನ ಭಾಳ ಛಂದ ಇತ್ತೆವ್ವ, ನಮ್ಮ ಮನ್ಯಾಗ ಆಳಮಕ್ಕಳು, ನಾವು ಎಲ್ಲಾರೂ ಸೇರಿ ಒಂದು ಚಾಳಿಸ ಮಂದಿ ಇದ್ದೇವೆವ್ವ ನಮ್ಮ ಮನ್ಯಾಗ ಜ್ವಾಳಾಯೆನ, ತೊಗರ್‍ರಿಯೇನ, ಎಮ್ಮಿ, ಆಕಳ,ಎಲ್ಲಾ ಇದ್ದವೆವ್ವ ಹಾಲ, ಹೈನ, ತುಪ್ಪಕ್ಕೇನು ಬರ ಇದ್ದಿದ್ದಿಲ್ಲೆವ್ವ, ಹಂಗ ಬದಕದೊರು ನಾವು ಆದರ ಈಗ ಎಲ್ಲಾ ಅವರ ಜೊತೀನೆ ಹೋಗ್ಯಾದ ಏನೋ ಅಂತ ಅನಸ್ತದೇವ್ವ, ಆಸ್ತಿ ಭಾಳ ಇದ್ದರನು ತೊಂದ್ರಿ, ಕಮ್ಮಿ ಇದ್ದರನು ತೊಂದ್ರಿ ನೋಡೆವ್ವಾ, ಯವ್ವಾ, ನಮ್ಮಾವ ಎಡ್ನನೂರು ಎಕರಿ ಭೂಮಿ ಮಾಡಿದ್ದೆವ್ವ, ಈಗ ಅಣ್ಣ ತಮ್ಮಗೊಳ ನಡುವ ಜಗಳ, ಕಲಗತಿ ಬಂದು ಎಲ್ಲಾರೂ ತಮ್ಮ ಪಾಲಿಗಿ ಬಂದೋಟು ಆಸ್ತಿ ತಗೊಂಡು ದೂರ ಬೆಂಗಳೂರಿನ್ಯಾಗ ಹರಾಯಮ್ಮ, ಈಗ ನಮ್ಮನ್ಯಾಗ, ಭಾಳ ಮಂದಿ ಇಲ್ಲ. ಈಗ ಕಾಲ ಬದಲಾಗ್ಯಾದೆವ್ವ ಮೊದಲಿನಂಗ ಈಗೆಲ್ಲಿ ಅದಾಯವ್ವಾ ಈಗ ಹಾಲ ಬೇಕಾದರನು ಕೊಂಡು ಕುಡಿಬೇಕು. ಮೊಸರನು ರೊಕ್ಕಕ್ಕೆ ತಗೋಬೇಕು, ನಮ್ಮ ಕಾಲದಾಗೆವ್ವ ಯಾರರೇ ಹಾಲ, ಮಜ್ಜಿಗಿ ಅಂತ ಕೇಳದರ ಪುಕ್ಕಟ್ಟೆ ಕೊಟ್ಟ ಕಳಸ್ತಿದ್ದೇವೆವ್ವ, ನಮ್ಮ ಕಾಲಕ್ಕ ದೊನಸೆ ರೂಪೆ ತೊಲಿ ಬಂಗಾರ ಇತ್ತೆವ್ವ, ಅದೇ ಬಂಗಾರ ಈಗ ಏಟರೇ ಪಿರೆ ಆಗ್ಯಾದೆವ್ವ, ನಾವು ಕೂಡಿ ಇದ್ದಾಗ ನಮ್ಮನ್ಯಾಗ ಹಚ್ಚಿದ ಒಲಿ ಹಚ್ಚದಂಗ ನೋಡೆವ್ವಾ, ಮುಂಜಾನಿ ರೊಟ್ಟಿ ಬಡಿಲಕ ಕುಂತರ ಶಂಬರ, ದೊನಸೆ, ತಂಕ ರೊಟ್ಟಿ ಬಡಿತಿದ್ದೇವು. ಇನ್ನಾ ನಾ ದೋಡ್ಡಕ್ಕಿ ಆಗಿದ್ದಿಲ್ಲ ಆವಾಗೇ ಮದಿ ಮಾಡ್ಯಾರ, ಗಂಡನ ಮನಿಗಿ ಬಂದ ಮ್ಯಾಲ ನಾ ದೊಡ್ಡಕ್ಕಿ ಆಗಿನಿ, ಅವಾಗ ನನಗೆ ಕೂಡಸಿ ಹಾಡಿಸಿ ಕರಕೊಂಡು ಬಂದರೆವ್ವ, ಅವಾಗ ನಾ ಇನ ಭಾಳ ಸಣ್ಣಕ್ಕಿದ್ದ. ಮನ್ಯಾಗ ಸೀರಿ ಉಡಬೇಕು, ಸಣ್ಣಕ್ಕಿ ಇದ್ದ ನೋಡೆಯವ್ವಾ ಸೀರಿ ಉಡಲಾಕ ಬರತಿದ್ದಿಲ್ಲ.ಆದರನು ಉಡಬೇಕು ತಲಿಮ್ಯಾಲಿಂದು ಶರಗ ಬಿಳಾಂಗಿಲ್ಲ, ಹೊರಗ ಬಂದ ನಿಂದರಂಗಿಲ್ಲ. ಮಾತಾಡೋದು ಕಮ್ಮಿನೇ. ನಮ್ಮಾವಗ ಭಾಳ ಅಂಜತಿದ್ದೆವೆವ್ವಾ, ನಮ್ಮಾವಂದು ಅಂಜಿಕಿ ಭಾಳ ಮಂದಿಗಿತ್ತು.

ಆ ಕಾಲದಾಗ ನಮ್ಮನ್ಯಾಗ ಒಂದು ಸಣ್ಣದು ರೇಡು ತಂದಿದ್ದರೆವ್ವಾ. ಆಗಿನ ಕಾಲಕ್ಕ ಯಾರ ಮನ್ಯಾಗರೇ ರೇಡು ಸೈಕಲ ಇದ್ದರ ಅವರು ಭಾಳ ದೌಳೋರು ಹರಾ ಅಂತಾ ಮಾತಾಡತಿರೆವ್ವ. ನಮ್ಮ ಮನಿಗಿ ಹೊಸ ರೇಡಿವಿ ಬಂದಾಗ ನೋಡಬೇಕೆವ್ವ ನನ್ನ ಗಂಡನ ಖುಷಿ, ಅಟ್ಟ ಖುಷಿದಾಗ ಅದು ಹಚ್ಚಾದೇನು, ಬಂದ ಮಾಡಾದೇನು, ಮನ್ಯಾಗ ಸಿಹಿ ಮಾಡಿದ್ದಿವೆವ್ವ ಅದರ ಬಾರೇದಾಗ ನಮಗ ಅಟ್ಟ ಮಾಯ್ತಿ ಇದ್ದಿದ್ದೆಲ್ಲವ್ವ, ನಾವು ಕೇಳಕೋತಾ ಕುಡತಿದ್ವಿ, ಅದು ಆದಮ್ಯಾಲ ಮನ್ಯಾಗ ಒಂದು ಕರಿದು ಬಿಳಿದು ಟಿಬಿ ಬಂತು, ಅದು ನೋಡಾದಂದರೆನೆ ಹಬ್ಬ ನಮಗ, ಅದು ಹಚ್ಚದರ ಅಂದರ ನಾ ಅರೇ ಅದರ ಮುಂದೇ ಹೋಗಿ ಕುಡಕ್ಕಿ. ನಮ್ಮ ನೆಗೆಣ್ಯಾರು ಇದಕೇನಾಗ್ಯಾದ ಹಿಂಗ ಮಂಗ್ಯಾ ಮಾಡದಂಗ ಮಾಡತಾದ ಅಂತ ಬೈತಿದ್ರು, ನಾ ಅವಾಗ ಇನ್ನಾ ಸಣ್ಣಕ್ಕಿದ್ದಲ್ಲ ಅದಕ್ಕ ಮನ್ಯಾಗ ಏನಾದರ ತಂದ್ರು ಅಂದ್ರ ಕುಣಿತಿದ್ದೆ, ಈಗ ಅವೆಲ್ಲಾ ನೆಂಪ್ಪ ಮಾಡಕೋತಾ ಕೂಡತೀನಿ, ಒಮ್ಮೊಮ್ಮೆ ನಗು ಬರ್ತಾದ ಒಮ್ಮೊಮ್ಮೆ ಸಿಟ್ಟು ಬರ್ತಾದ. ಟಿಬಿ ತಂದ ಮ್ಯಾಲ ನೋಡೆಮ್ಮ ನಸಗನ್ಯಾಗ ಚಾಲು ಮಾಡದೇವಂದರ, ರಾತ್ರಿ ತಂಕ ಚಾಲು ಇರ್ತತ್ತಿತ್ತು ಆವಾಗ ಕರೆಂಟನು ಜಾಸ್ತಿ ಇರತ್ತಿರಲಿಲ್ಲ ಕರೆಂಟ ಇದ್ದಾಗ ಮಾತ್ರ ಚಾಲು ಮಾಡತಿದ್ದೆವು, ಮನಿಗಿ ಆಳುಗೊಳಿಗಿ, ಬಿಗರ, ಬಿಜ್ಜರಗಿ ಹಿಂಗ ಮನಿಗಿ, ಎಲ್ಲಾರಿಗಿ ಅಂತ ಅಡಗಿ ಮಾಡತಿದ್ದೇವು, ಊರಾಗಿನ ಮಂದಿಯೆಲ್ಲಾ ಟಿಬಿ ನೋಡಾಕಂತ ನಮ್ಮ ಮನಿಗಿ ಬರೋರು ಯಾಕಂದರ ಅವಾಗ ಊರಾಗ ಯಾರ ಮನ್ಯಾಗನು ಟಿಬಿ ಇದ್ದಿದ್ದಲ್ಲ ಅದಕ ನಮ್ಮ ಮನಿಗಿ ಬರತ್ತಿದ್ದರು,ಅದರಾಗ ಆಜು ಬಾಜು ಮಂದಿ ದನಕಾಯಾ ಚುಕ್ಕೋಳು, ಪಾರಗೋಳು, ಮುದಕ್ಯಾರು, ಸಣ್ಣಾವ್ರು, ದೊಡ್ಡಾವ್ರು, ಎಲ್ಲಾರು ಬರ್ತಿದ್ದರೆವ್ವ.

ಈಗ ನೋಡೆವ್ವ ಎಲ್ಲಾರ ಮನ್ಯಾಗ ಟಿಬಿ ಆಗ್ಯಾವ ಅವಾಗೊಂದು ಕಾಲ ಇತ್ತೆವ್ವ ಎಲ್ಲಾರ ಮನಿಗಿ ಎಲ್ಲಾರು ಹೋತಿದ್ರು, ಕೂಡತಿದ್ರು, ಮಾತಾಡತಿದ್ರು, ಛಲೊ ಅನಸ್ತಿತ್ತೆವ್ವ .ಈಗೆಲ್ಲೆವ್ವ ಮನಿ ಮನಿಗಿ ಟಿಬಿ ಬಂದಾವ ನೋಡಕ್ಕೊಂತು ಕುಂತರಂದ್ರ ತಮ್ಮನಿ ಆಯ್ತು ತಾವಾಯ್ತು ಯಾರ ಮನಿ ಬ್ಯಾಡ, ಯಾರ ಮಾರಿನು ಬ್ಯಾಡ ಅಂತ ಅನ್ನೋರೆ ಹೇಚ್ಚ ಆಗ್ಯಾರೆವ್ವ,ಈ ಮಾತು ಖರೇ ಅಂತೆನ ಸುಳ್ಳ ಅಂತಿಯವ್ವಾ

ತಂಗಿ ಅವಾಗ ಕರಿ ಟಿಬಿ ಇತ್ತು. ಈಗ ಬಣ್ಣದು ಬಂದಾವ. ಈಗ ಛಲೋ ಕಾಣ್ತದ. ಅವಾಗ ನಾವು ಗೊಂಬಿಗೊಳೇ ಕುಣಿತಾವೇನು ಅಂತ ಅನಕೊಂಡಿದ್ದೇವೆವ್ವ, ಅದರಾಗ ಮನಸ್ಯಾರು ಪಾಲ್ಟ ಮಾಡತಾರಂತ ಈಗ ಈಗ ಗೊತ್ತಾಗ್ಯಾದೆವ್ವ, ಅವಾಗ ರಾಜಕುಮಾರ ಸಿನ್ಮಾ ನೋಡತಿದ್ದೇವೆವ್ವ,ಅವರ ಸಿನ್ಮಾದಾಗ ಮನಿತನದ ಕಥಿ ಇರ್ತಿದ್ದುವು, ಈಗಿನ ಸಿನ್ಮಾ ಗೋಳೆನೆವ್ವಾ ಕುಂತು ನೋಡಾಂಗಿಲ್ಲ ಏಕಡರೆ ಬಟ್ಟಿ ಹಾಕೋತಾವ, ಏಕಡರೆ ಕುಣಿತಾವ ಅಂತವು ನೋಡಾಕ ಆಗಾಲೆವ್ವ ನಮಗ ಅದಕ ಧಾರಾವಾಯಿಗೋಳೇ ನೋಡಕೋತು ಕೂಡತಿನಿ. ಮಧ್ಯಾನದಾಗ ಟೇಮ ಸಿಗತಾದಲ್ಲೆವ್ವಾ ಆವಾಗೆ ನೋಡಕೊತಾ ಕುಡತಿನಿ. ನಂಗ

ಕಲ್ಯಾಣಿ ಧಾರಾವಾಯಿ ಭಾಳ ಇಷ್ಟ ಆಗತಾದ, ಅಕಿದು ಕಥಿ ಭಾಳ ಗೋಳಾ ಅದಾ ನೋಡೆವ್ವ, ಅಕಿ ಗಂಡ ಇದಮಾಯಿ ಅಂತದ್ದು. ಎಟರೇ ತೊಂದ್ರಿ ಕೊಡ್ತಾದ ಅಕಿಗಿ ಅಂಥಾ ಬಂಗಾರದಂತಕ್ಕಿನ ಎಟರೇ ಗೋಳ್ಯಾಡಸ್ತಾನ, ಅಕಿ ನೋಲ್ಡಾಕಾ ಗೊಂಬಿ, ಗೊಂಬೀ ಆಗ್ಯಾಳ ಆದರನೂ ಅಕಿ ಗಂಡಗ ಛಂದ ಕಾಣಾಂಗಿಲ್ಲ, ಅಕಿದು ಮಾತ್ರ ತಪ್ಪಿಲಾರದಂಗ ನೋಡ್ತಿನಿ, ಪ್ರೇರಣಾ, ಸಂಬಂಧ, ಲಕುಮಿ, ಪ್ರೀತಿಪ್ರೇಮ, ಬಂಗಾರ, ಗೋಕುಲನಿವಾಸ (ಮುಗಿದಿವೆ) ನೋಡ್ತೀನಿ ನಂಗ ಅರುಂಧತಿನೂ ಭಾಳ ಹಿಡಿಸ್ತದ. ಇದು ನೋಡಿ ದೇವರ್‍ರಿಗಿ ಕೈ ಮುಗದ ಮಕ್ಕೋತಿನಿ. ಇದು ಬಿಟ್ಟರ್‍ರ, ಈ ಟಿವಿ ಕನ್ನಡದಾಗ ಬರಾ ಮಹಾನವಮಿ, ಮುಕ್ತ, ಮುಕ್ತ ನೋಡತಿನಿ. ಮುತ್ತಿನ ತೋರಣ(ಮುಗಿದಿದೆ) ನೋಡತ್ತಿದ್ದೆ. ಆಮ್ಯಾಲ ಆಮ್ಯಾಲ ಅದು ಛಂದ ಬರಾಲಾಯ್ತು ಅದಕ ನೋಡಾದು ಬಿಟ್ಟೇ. ಮಹಾನವಮಿದಾಗ ಭಾಷೆ ಅದಾ ಅಲ್ಲಯವ್ವಾ, ಅದು ನಮ್ಮ ಕಡಿಂದೆ ಇದ್ದಂಗ ಅದಾ. ಭಾಷೆ ಸಂಬಂಧ ನೋಡತ್ತಿದ್ದೆ ಮತ್ತ ಅದರಾಗ ಕಾವೇರಿ ಅಂತ ಒಬ್ಬಕ್ಕಿ ಇದ್ದಳಲ್ಲ ಅಕಿ ನಂಗ ಭಾಳ ಇಷ್ಟ ಆತಿಳು, ಅಕಿ ಏನು ತಪ್ಪ ಮಾಡ್ತಿದ್ದಿಲ್ಲ. ಆದರನೂ ಅಕಿನ ಮ್ಯಾಲೆ ಎಲ್ಲಾ ತಪ್ಪು ಬರತ್ತಿತ್ತು. ಅಕಿ ಎಷ್ಟ ಶ್ಯಾಣ್ಯಾ ಇದ್ದರನು. ಮನ್ಯಾಗ ನೆಗೆಣ್ಣೆರು ಕಿರಿಕಿರಿ ಮಾಡತ್ತಿದ್ದರು.ಅಕಿದು ನೋಡದರ ನಂಗ ನಮ್ಮ ನೆಗೆಣ್ಣೆರು ಕೊಡಾ ಕಿರಿಕಿರಿ ನೆಪ್ಪ ಆತಾದೆವ್ವಾ, ಅದರಾಗ ಅಕಿನ ಗಂಡನು ಛಲೋ ಇರಲಿಲ್ಲ. ಇದೆಲ್ಲಾ ನೋಡಿ ನಮ್ಮದುನು ಇವರಂಗೆ ಬದುಕ ಅದಾಲಾ ಅಂತ ಅನಸಿ ನೋಡತಿದ್ದ, ಒಂದಿನಾನು ಬಿಡ್ಡಲಾರದಂಗ ನೊಡಕೊತ ಕುಡತಿದ್ದೆ. ನಾವ ಇಟ ದಿನಾ ದನಾ ದುಡದಂಗ ದುಡಿದಿವೆವ್ವಾ, ಈಗ ಕೈಕಾಲಾಗ ಉಸುರ ಇಲ್ಲ. ಮನ್ಯಾಗ ಸೊಸಿ ಮಾಡ್ತಾಳ. ಟೇಮ ಕಳ್ಯಾಕ ಟಿಬಿ ನೋಡ್ತೀನಿ. ಈಗಿನ ಕಾಲದಾಗ ಹೆಣಮಕ್ಕಳು ಭಾಳಾ ಶಾಣ್ಯಾ ಆಗ್ಯಾರೆವ್ವ, ಓದ್ತಾರ ಬರಿತಾರ ಛಲೋ ಛಲೋ ಸಿರಿ ಉಟಕೋತ್ತಾರ, ತಲಿಮ್ಯಾಲ ಶರಗ ಇಲ್ಲ. ಈಗ ಶರಗಿಗಿ ಪಿನ್ ಹಚ್ಚತಾರ, ನೋಡೆವ್ವಾ ನಾ ಒಂದ ಹೇಳತ್ತೀನಿ ಏಟ ಸಾಲಿ ಕಲತರೆನು, ದುಡುದು ತಂದು ಹಾಕದರೇನು, ಮನ್ಯಾಗಿಂದು ಕೆಲಸ ತಪ್ಪತಾದೇನೆಮ್ಮ. ಹಡ್ಯಾದು, ಹಿಂಗಾದು ಅಂತರ ತಪ್ಪಲ್ಲ. ಆದರನು ಈಸ ದಿನ ಏನ ನಡಕೊಂಡ ಬಂದದ ಹಂಗೇ ನಡಿಬೇಕಂತ ಏನಿಲ್ಲೆವ್ವ, ಈಗಿನ ಹೆಣಮಕ್ಕು ಭಾಳ ಹುಷ್ಯಾರ ಹರಾ, ಅದರಂಗ ಸಾಲಿನೂ ಕಲ್ತಾರ ಅದಕ ಅವರಿಗೀ ಮಂದಿ ಸಲಾಮನು ಹೊಡಿತಾರ, ಅನಪಡ ಇದ್ದರ್ ಯಾರ ಕಿಮ್ಮತ್ತ ಕೊಡಾಂಗಿಲ್ಲೆವ್ವ, ಕಾಲಹ್ಯಾಂಗ ಬರತದ ಹಂಗ ನಡಿಬೇಕ ತಂಗಿ.

ಹೆಸರು : ಅಶ್ವಿನಿ(ಹೆಸರು ಬದಲಿಸಲಾಗಿದೆ)

ವಯಸ್ಸು : ೩೫

ಶಿಕ್ಷಣ : ೧೦ನೇ ತರಗತಿ

ಊರು : ಯಾದಗಿರ

ಮೇಡಂ ನಾವು ಮನೆಯಲ್ಲಿ ಕುತೂ ತಾಳಿ. ಜಿರಾಮಣಿ ಘಟಾಸೋದು ಮಾಡ್ತೀವರ್‍ರಿ, ನಮ್ಮಮನೇರು ಪಲ್ಲಕ್ಕಿ,ದೇವರ ಮೂರ್ತಿ ಮಾಡೋದು, ತೊಟ್ಟಿಲ ಮಾಡಾದು,ಅವಕ್ಕ ಬಣ್ಣ

ಹಚ್ಚಾದು ಮಾಡತಾರ್ರಿ, ನಾವ ಹೆಣಮಕ್ಕು ಮನಿಕೆಲಸ ಮಾಡಕೊಂಡು ಕೆಲಸಕ್ಕ ಕೂತುಬಿಡತ್ತೀವರ್ರಿ, ತಿಂತಣಿ ಮೌನೇಶ್ವರ ಜಾತ್ರೆ ಸಂದರ್ಭಗಳಲ್ಲಿ, ಹಾಲುಮತ ದೊರ ಜಾತ್ರಿ ಮಾಡಾ ಟೈಮನ್ಯಾಗ ನಮಗ ಹಗಲ ರಾತ್ರಿ ಕೆಲಸ ಇರತದ್ರಿ, ಆಮೇಲ ಸಲುಪ ಕಡಿಮಿ ಆಗತದ್ರಿ, ನಮಗ ಕೆಲಸ ಇದ್ದಾಗ ಟಿವಿ ನೋಡಾಲ್ಲರೀ. ಕೆಲಸ ಏನು ಇಲ್ಲದಾಗ ಮಾತ್ರ ಟಿವಿ ನೋಡತೀವರ್ರಿ, ಒಮ್ಮೊಮ್ಮೆ ಕೆಲಸಾ ಮಾಡಕೋತನೆ ಟಿವಿ ನೋಡತೀವರಿ. ನಮ್ಮದು ಮಾತೃಭಾಷೆ ಮರಾಠಿ ಇದೆರಿ. ಮನ್ಯಾಗೆಲ್ಲಾ ನಾವ ಮರಾಠಿನೇ ಮಾತಾಡತೀವರ್ರಿ, ಮರಾಠಿ ಚಾಲನೆದಾಗಿನ ಧಾರಾವಾಹಿ ನೋಡ್ತೆವರ್ರಿ, ಒಂದೊಂದು ಸಾರಿ ಕನ್ನಡ ಧಾರಾವಾಹಿಗಳನ್ನು ನೋಡತ್ತೀವರ್ರಿ, ಕನ್ನಡದಾಗಂದರ ನೋಡ್ರಿ, ಕದನ, ಕಲ್ಯಾಣರೇಖೆ, ಕಾದಂಬರಿ, ರಂಗೋಲಿ, ಕುಸುಮಾಂಜಲಿ (ಮುಗಿದಿವೆ) ಈ ಧಾರಾವಾಹಿಗಳನ್ನು ನೋಡತ್ತೇವರ್ರಿ, ಸುವರ್ಣಾದಾಗ ಬರಾವು ಕಥೆ ಅಲ್ಲ ಜೀವನ, ಸಾಗುತದೂರದೂರ, ಇದ್ರಇರಬೇಕು ನಿನ್ನಹಾಂಗ (ಮುಗಿದಿವೆ) ನೋಡತ್ತೀವರ್ರಿ, ಈ ಮೂರು ಧಾರಾವಾಹಿ ನಂಗೆ ಹೆಚ್ಚು ಹಿಡಿಸ್ಯಾವರ್ರಿ, ಇದ್ರಇರಬೇಕು ನಿನ್ನಿಹಾಂಗದಾಗ ಅಹಲ್ಯ ಪಾರ್ಟ ನಂಗ ಭಾಳ ಹಿಡಸ್ಯಾದರ್ರೀ, ಹೆಣ್ಣುಮಕ್ಕಳು ಅಂದ್ರ ಹಿಂಗ ಇರಬೇಕರ್ರಿ, ಅಕಿಗಿ ಭಾಳ ಧೈರ್ಯದಕ್ಕಿ, ಮೋಸ ಆದರ ಸಹಿಸಲಾರದಕ್ಕಿ, ಎಲ್ಲರೆ ಅನ್ಯಾಯ ಆಗಲಕ್ಕತ್ತಾದ ಅಂತ ಅಂದರ ಅಲ್ಲಿ ಹೋಗಿ ಬಗಿಹರಸಿ ಬರಾಕ್ಕಿ ಹಾಂಗ ತೋರಸ್ಯಾರಿ,ಅಕಿ ಇಷ್ಟೆಲ್ಲಾ ಶ್ಯಾಣ್ಯಾ ಇದ್ದಂಗ ತೋರಿಸಿದ್ದರನು ಅಕಿನೆ ಮೋಸಗಾರನಾದ ಮೋಹನನಗುಡ ಮದಿ ಮಾಡ್ಕೋದನ್ನು ತೋರ್ಸದಲ್ಲರೀ ಅವಾಗ ನಂಗ ಭಾಳ ಬ್ಯಾಸರಾತ್ರೀ, ಯಾಕಂದ್ರ ಮೋಹನ ಭಾಳ ಕೆಟ್ಟಾಂವ ಇರತಾನರ್ರಿ, ಪೈಲ ಮದಿ ಆದರನು ಹೆಂಡ್ತಿ ಛಂದ ಇಲ್ಲ, ರೊಕ್ಕ ಬೇಕಂತಾಳಂತ ಹೇಳಿ ಅಹಲ್ಯಾನ ಗೂಡಾ ಮದುವಿ ಮಾಡಕೊತಾನ ಈಕಡಿ ಸುಳ್ಳು ಹೇಳಕೊತಾ ಮೊದಲಿನ ಹೆಂಡ್ತಿಗನೂ ಮೋಸ ಮಾಡತಾನ ಆ ಕಡಿ ಅಹಲ್ಯಾಗನೂ ಮೋಸ ಮಾಡತಾನ, ಅಹಲ್ಯ ಎಷ್ಟು ಶ್ಯಾಣ್ಯಾ ಇದ್ದರನು ಅಕಿಗಿ ದಡ್ಡರಂಗ ತೋರ್ಸ್ಯಾರ್ರಿ, ಅದಕ ಹಿಂಗ ತೋರ್ಸಬಾರ್ದದಿತ್ತು ಅಂತ ಅನಿಸ್ತಿತ್ತರೀ. ಆದರ ಹ್ಯಾಂಗರೇ ಮಾಡಿ ಕಥಿ ಮುಂದಹೋಗಬೇಕಲ್ಲರೀ.

ಮೇಡಂವೂರೆ ಧಾರಾವಾಹಿಯಿಂದ ನಮಗೇನು ಲಾಭ ಅದಾರಿ. ನಮಗ ಹೊಟ್ಟಿಗಿ, ಬಟ್ಟಿಗಿ ಆಗಲ್ಲರೀ. ನಾವ ದುಡದರೇನೆ ನಮ್ಮ ಹೊಟ್ಟಿ ತುಂಬತಾದರ್ರೀ. ಆದ್ರ ಧಾರಾವಾಹ್ಯಾ ಯಿಂದ ಹೆಣ್ಣುಮಕ್ಕಳ ಜೀವನ ಹ್ಯಾಂಗ ಅದಾ ಅವರಿಗೀ ಹ್ಯಾಂಗೆಲ್ಲ ಕಷ್ಟ ಬರತಾವ,ಮನ್ಯಾಗಿನ ಮಂದಿ ಹ್ಯಾಂಗ ಇರತಾರ. ಅಂತ ಅನಾದು ಗೋತ್ತಾತದರ್ರಿ, ಒಂದೊಂದು ದಿನ ನಂಗ ಅನಸ್ತದರ್ರಿ, ಈ ಧಾರಾವಾಹಿ ತಯಾರು ಮಾಡೋರು ನಮ್ಮ ಸುತ್ತ ಮುತ್ತ ಏನ ನಡಿಲಾಕಂತ್ತಿರತಾದಲ್ರರ್ರಿ ಅದನ್ನ ತೋರ್ಸತಾರಂತ. ಮತ್ತೊಮ್ಮಿ ಈ ಧಾರಾವಾಯಿ. ನೋಡೆ ಮಂದಿ ಕಲಿಲತಾರೇನ ಅಂತ ಅನಸತಾದರ್ರಿ.ನಮಗ ಟೈಂ ಕಳ್ಯಾಕ ಈ ಧಾರಾವಾಯಿ ನೋಡತೀವರ್ರಿ ಅಷ್ಟೇ. ಮತ್ತೇನು ಇಲ್ಲರೀ.

ಹೀಗೊಂದು ಸಂದರ್ಶನದ ಅನುಭವ

ಅದು ಒಂದು ದೊಡ್ಡ ಕುಟುಂಬ ಮನೆಯಲ್ಲಿ ಹತ್ತರಿಂದ ಇಪ್ಪತ್ತೆರಡು ಜನರಿರುವ ವಿಶಾಲವಾದ ದೊಡ್ಡ ಮನೆ ಹಳೆಯ ಕಾಲದಲ್ಲಿ ಕಟ್ಟಿದ ಕಲ್ಲಿನ ಮನೆ ಅದಾಗಿತ್ತು. ಆ ಮನೆಯ ಯಜಮಾನನಿಗೆ ೭೦-೮೦ರ ಒಳಗೇ ಹೊರಗೇ ಇರಬಹುದಾದ ವಯಸ್ಸು. ತಮ್ಮ ಕಣ್ಸನ್ನೆ, ಕೈಸನ್ನೆಯಲ್ಲಿಯೇ ಕುಟುಂಬದ ಸದಸ್ಯರನ್ನು ನಿಯಂತ್ರಿಸುತ್ತಿದ್ದರು. ಆ ಮನೆಯಲ್ಲಿ ಪ್ರತಿಯೊಂದಕ್ಕೂ ಒಂದೊಂದು ನಿಯಮಗಳಿದ್ದವು. ಪ್ರತಿಯೊಬ್ಬರಿಗೇ ತಮ್ಮದೇ ಆದ ಸ್ವತಂತ್ರ ಬದುಕು ಅಂತ ಇರಲಿಲ್ಲ. ಯಾವುದೇ ವಿಷಯದ ಕುರಿತು ನಿರ್ಧಾರ ತೆಗೆದುಕೊಳ್ಳಬೇಕಾದರೆ ಅದು ಈ ಹಿರಿಯ ವ್ಯಕ್ತಿಯ ಮೂಲಕವೇ ನಡೆಯಬೇಕು. ಅವರಿಗೆ ಕೇಳದೇ ಒಂದು ಕಡ್ಡಿಯೂ ಅಲುಗಾಡದಂತಹ ವ್ಯವಸ್ಥೆ ಈ ಮನೆಯಲ್ಲಿತ್ತು. ಈ ಮುಖ್ಯಸ್ಥನಿಗೆ ಒಟ್ಟು ಆರು ಹೆಣ್ಣು ಮಕ್ಕಳು ಐದು ಗಂಡು ಮಕ್ಕಳಿದ್ದು, ಒಟ್ಟು ಇಪ್ಪತ್ತಾರು ಮೊಮ್ಮಕ್ಕಳನ್ನು ಹೊಂದಿರುವ ಕೂಡು ಕುಟುಂಬ ಎಲ್ಲರೂ ಹಬ್ಬ, ಜಾತ್ರೆ, ಶುಭಕಾರ್ಯಗಳಲ್ಲಿ ಒಟ್ಟಾಗಿ ಸೇರುತ್ತಿದ್ದರು. ಇದು ನಾನು ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಂಡ ಯಾದಗಿರಿ ಜಿಲ್ಲೆಯ ಒಂದು ಗ್ರಾಮದಲ್ಲಿರುವ ಮನೆಯ ಚಿತ್ರಣವಾಗಿದೆ. ಈ ಮನೆಯಲ್ಲಿ ಹಿರಿಯರು ದೇಶಿವೈದ್ಯರಾಗಿ ಪರಿಣಿತಿಯನ್ನು ಹೊಂದಿರುವವರು. ಇವರ ಕೈಯಿಂದ ಔಷಧಿಯನ್ನು ಪಡೆದುಕೊಂಡವರು. ಬೇಗ ಗುಣಮುಖ ಆಗುತ್ತಿದ್ದರು. ಸುತ್ತ ಮುತ್ತಲಿನ ಹಳ್ಳಿಯವರು ಬಂದು ಔಷಧಿಯನ್ನು ಪಡೆಯುತ್ತಿದ್ದರು. ಇವರ ಮನೆಯಲ್ಲಿ ತಲೆಮಾರುಗಳಿಂದಲೂ ಈ ವೈದ್ಯ ಪದ್ಧತಿಯನ್ನು ಅಳವಡಿಸಿಕೊಂಡು ಬಂದ್ದಿದ್ದಾರೆ. ಇಂತಹ ಮನೆಯನ್ನು ತಲುಪಿದೆ. ಮಧ್ಯಾಹ್ನದ ವೇಳೆಯಾದ್ದರಿಂದ ಮನೆಯ ಯಜಮಾನ ಪಡಸಾಲೆಯಲ್ಲಿ ಗಾಳಿಬೀಸಿಕೊಂಡು ಕುಳಿತಿದ್ದರು. ನನ್ನ ಬರುವಿಕೆಯನ್ನು ಕಂಡು ಇವರ್‍ಯಾರು? ನಮ್ಮನೆಗೇಕೆ ಬಂದಿದ್ದಾರೆ? ಎಂದು ಆಳುಗಳಿಗೆ ಕೇಳಿದರು. ಆ ಆಳುಗಳು ನನ್ನ ಹತ್ತಿರ ಬಂದು ವಿಚಾರಿಸಿದಾಗ ನಾನು ಹೀಗೆ ಅಧ್ಯಯನ ಮಾಡುತ್ತಿದ್ದು ನನಗೆ ಮಾಹಿತಿ ಬೇಕಾಗಿದೆ. ಅದಕ್ಕಾಗಿ ನಿಮ್ಮ ಮನೆಗೆ ಬಂದಿದ್ದೇನೆಂದು ಹೇಳಿದೆ. ಅವರಿಗೆ ನಾನು ಹೇಳಿದ್ದರಲ್ಲಿ ಕೇವಲ ನಾನು ಓದುತ್ತಿರುವುದು ಮಾತ್ರ ಅರ್ಥವಾಯ್ತು. ಅವರಿಗೆ ಮಾಹಿತಿ ಅಂದರೇನು? ಅಂತ ಗೊತ್ತಾಗಲಿಲ್ಲ. ನನ್ನೆಡೆಗೆ ಪ್ರಶ್ನಾರ್ಥಕವಾದ ನೋಟ ನೋಡಿದರು. ನಾನು ಅವರ ಪ್ರಶ್ನೆಗೆ ಅವರಿಗೆ ಸಾಧ್ಯವಾದ ಮಟ್ಟಿಗೆ ಉತ್ತರಿಸುವ ಪ್ರಯತ್ನ ಮಾಡಿದೆ. ಅದು ಸಫಲವಾಯಿತು ಕೂಡ. ಈ ಸಮಯದಲ್ಲಿಯೇ ಮನೆಯ ಯಜಮಾನಿ ಮತ್ತು ಅವರ ಸೊಸೆಯಂದಿರು, ಮಕ್ಕಳು ಹೊರಬಂದು ನನ್ನೊಡನೆ ಮಾತಿಗಾರಂಭಿಸಿದರು. ನನ್ನ ಬಗ್ಗೆ ತಿಳಿದುಕೊಂಡ ಮೇಲೆ ಪಡಸಾಲೆಯಿಂದ ತಮ್ಮದೇ ಆದ ಕೋಣೆಗಳಿಗೆ ಕರೆದುಕೊಂಡು ಹೋದರು. ನಾನು ಬಂದ ಕೆಲವು ಸಮಯದ ಬಳಿಕ ಮನೆಯ ಹೆಣ್ಣುಮಕ್ಕಳಿಗೆ, ನನ್ನ ಸಂಶೋಧನಾ ವಿಷಯದ ಕುರಿತು ಅವರಿಂದ ಮಾಹಿತಿ ತಿಳಿದುಕೊಳ್ಳುವ ಉದ್ದೇಶವನ್ನು ತಿಳಿಸಿದೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿ, ತಮ್ಮ ಅರಿವಿಗೆ ಬಂದಷ್ಟು ಮಾಹಿತಿಯನ್ನು ನೀಡಿದರು. ೨೮ ರಿಂದ ೩೬ ವರ್ಷದವರಿದ್ದಾರೆ. ಇಲ್ಲಿ ಇವರದು ಎರಡೇ ಅಭಿರುಚಿ

ಒಂದು ಧಾರಾವಾಹಿ ನೋಡುವುದು, ಎರಡನೆಯದು ಸಿನೆಮಾ ನೋಡುವುದು ಮಿಕ್ಕಂತೆ ಯಾವ ವಿಷಯವೂ ಅವರಿಗೆ ತಿಳಿದಿರುವುದಿಲ್ಲ. ಯಾಕೆಂದರೆ ಇವರು ಶಿಕ್ಷಿತರಲ್ಲದವರು, ಮನೆಯ ಹೊರಗೆ ಹೋಗುವ ಅಧಿಕಾರ ಇವರಿಗಿಲ್ಲ ಹಾಗಾಗಿ ತಮ್ಮ ಗಂಡಂದಿರು ಹೇಳುವ ರಾಜಕೀಯ ವಿಷಯಗಳ ಕುರಿತು ಅಲ್ಪ ಸ್ವಲ್ಪ ಜ್ಞಾನವಿದೆ, ಉಳಿದಂತೆ ನಾನು ಕೇಳಿದ ಸ್ತ್ರೀವಾದದ ಬಗ್ಗೆಯಾಗಲಿ, ಲಿಂಗ ಸಮಾನತೆಯ ಕುರಿತಾಗಲಿ ಯಾವುದೇ ಜ್ಞಾನ ಅವರಲ್ಲಿರಲಿಲ್ಲ. ಮನೆಯಲ್ಲಿ ಅತ್ತೆ, ಮಾವಂದಿರೆದುರು ಗಂಡನೊಂದಿಗೆ ಸಲಿಗೆಯಿಂದ ಮಾತನಾಡುವಂತಿಲ್ಲ. ಹೊರಗೆ ಎಲ್ಲಾದರೂ ಜೊತೆಯಾಗಿ ಹೋಗುವುದಾಗಲಿ ಇಲ್ಲ. ಮದುವೆಯಾದ ಹೊಸತರಲ್ಲಿ ಮಾತ್ರ ಆ ಅವಕಾಶವಿತ್ತು. ನಂತರದ ದಿನಗಳಲ್ಲಿ ಅದು ಮಾಯವಾಯಿತು. ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಅನಿವಾರ್ಯತೆ ಇವರದಾಯಿತು, ಈ ಕುರಿತು ಪ್ರಶ್ನೆ ಕೇಳುವ ಹಾಗಿಲ್ಲ. ಎದುರು ಮಾತನಾಡುವ ಹಾಗಿಲ್ಲ, ಒಂದು ವೇಳೆ ಏನಾದರು ಕೇಳಿದರೆ ಹೆಚ್ಚು ಟಿವಿ ಧಾರಾವಾಹಿಗಳನ್ನು, ಸಿನ್ಮಾಗಳನ್ನು ನೋಡಬೇಡಿ ಎಂದು ಹೇಳುತ್ತಾರೆ. ಟಿವಿ ಧಾರಾವಾಹಿಗಳನ್ನು ಮನ ಮತ್ತು ಮನೆ ಕೆಡಿಸುವ ಮಾಧ್ಯಮವಾಗಿ ನೋಡಲಾಗುತ್ತದೆ. ಇಲ್ಲಿ ಮಾಹಿತಿದಾರರಿಗೆ ತಮ್ಮ ಮನಸ್ಸಿಗಾಗುತ್ತಿರುವ ಕಷ್ಟವನ್ನು ಹೇಳಿಕೊಂಡರೆ, ಅದು ನೇರವಾಗಿ ಧಾರವಾಹಿಗಳಿಂದಲೇ ಹೊರಗೆ ಜನ ಹಾಳಾಗುತ್ತಿದ್ದಾರೆ ಎಂದು ತಿಳಿಯಲಾಗುತ್ತಿದೆ. ಅವರ ಭಾವನೆಗಳಿಗೆ ಯಾವುದೇ ಬೆಲೆ ಇಲ್ಲದಿರುವುದು ಕಂಡುಬರುತ್ತದೆ, ಈ ಮನೆಯ ಮುಖ್ಯಸ್ಥನದು ಅಲಿಖಿತ ನಿಯಮ, ಇಲ್ಲಿ ಹೆಣ್ಣುಮಕ್ಕಳಾಗಲಿ, ಸೊಸೆಯಂದಿರನ್ನಾಗಲಿ ಹೆಚ್ಚು ಮಾತನಾಡುವ ಅವಕಾಶಗಳಾಗಲಿ, ಅಧಿಕಾರಗಳಾಗಲಿ, ಇಲ್ಲ, ಈ ಮನೆ ಹೆಣ್ಣುಮಕ್ಕಳು ಅಸ್ತಿತ್ವವಿಲ್ಲದ ಬದುಕು ಬದುಕುತ್ತಿರುವುದು ತಿಳಿದುಬರುತ್ತದೆ. ಅಂದರೆ ಹಿರಿಯರ ಅಪ್ಪಣೆಯಂತೆ ನಡೆದುಕೊಳ್ಳುವುದು.

ಟಿವಿ ನೋಡಬೇಕಾದರೂ ಅದಕ್ಕೂ ಒಂದು ಸಮಯ ನಿಗದಿಯಾಗಿದೆ ಅದು ಮಧ್ಯಾಹ್ನ ಎರಡು ಗಂಟೆಯಿಂದ ನಾಲ್ಕು ಗಂಟೆ ಮಾತ್ರ ನೋಡಬೇಕು. ಗ್ರಾಮೀಣ ಭಾಗದಲ್ಲಿ ದಿನದ ಹನ್ನೆರಡು ಗಂಟೆಯಲ್ಲಿ ಎಳರಿಂದ ಎಂಟು ಗಂಟೆಯವರೆಗೂ ವಿದ್ಯುತ್ ವ್ಯವಸ್ಥೆ ಸ್ಥಗಿತಗೊಂಡಿರುತ್ತದೆ. ಈ ಅವಧಿಯಲ್ಲಿ ಅವರು ಟಿವಿ ನೋಡುವುದು ತುಂಬಾ ಕಡಿಮೆ. ಸಾಯಂಕಾಲದ ಅವಧಿಯಲ್ಲಿ ಮನೆಯ ಕೆಲಸಗಳಲ್ಲಿ ವ್ಯಸ್ತವಾಗಿರುತ್ತಾರೆ. ಆಗೊಮ್ಮೆ ಈಗೊಮ್ಮೆ ನೋಡುವ ಧಾರಾವಾಹಿಗಳಲ್ಲಿ ನಾಲ್ಕರಲ್ಲಿ ಮೂರು ಮಹಿಳೆಯರು ಸಾಂಪ್ರದಾಯಿಕವಾದ ಪಾತ್ರದಲ್ಲಿ ಹೆಣ್ಣು ಇರಬೇಕೆಂದು ಬಯಸುತ್ತಾರೆ. ಆಧುನಿಕ ಮಾದರಿಯಲ್ಲಿ ಹೆಣ್ಣು ಬದುಕಿದರೆ ಮನೆಯ ಜವಾಬ್ದಾರಿ. ಹೊಲದ ಜವಾಬ್ದಾರಿ ಯಾರು ನೋಡಬೇಕು ಎಂಬುದು ಇವರ ಪ್ರಶ್ನೆಯಾಗಿತ್ತು. ನಾಲ್ಕನೆಯವರು ಮಾತ್ರ ಕೊಂಚ ನಿರ್ಧಾರದಲ್ಲಿ ಗಲಿಬಿಲಿಗೊಂಡು, ಆಧುನಿಕತೆಯನ್ನು ಒಪ್ಪಿಕೊಳ್ಳುತ್ತಾರೆ. ಇದು ನಾನು ಸಂದರ್ಶಿಸಿದ ಇನ್ನೂರು ಮಹಿಳೆಯರಲ್ಲಿ ನಾಲ್ಕು ಜನ ಮಹಿಳೆಯರು ತಮ್ಮ ಕೂಡು ಕುಟುಂಬದಲ್ಲಿದ್ದಾಗ. ಯಾವ ರೀತಿಯಾದ ಯಾಜಮಾನ್ಯಕ್ಕೆ ಒಳಗಾಗಿರುವುದನ್ನು ಅನುಭವಿಸಿದ್ದೇನೆ. ತಮ್ಮ ಸ್ವಂತ ಅಸ್ತಿತ್ವಕ್ಕಾಗಿ ಹೋರಾಟ ಮಾಡುವುದು

ದೂರದ ಮಾತು. ಅವರಿಗೆ ಕನಿಷ್ಠ ಪಕ್ಷ ಮನೆಯ ಹಿರಿಯ ಮುಖಂಡನೆದುರು ನಿಂತು ಮಾತನಾಡುವ ಅಧಿಕಾರವು ಕೂಡ ಅವರಿಗಿರಲಿಲ್ಲ ಎಂಬುದು ನನಗೆ ಬಹಳ ದುರಂತದ ವಿಷಯವೆನಿಸಿತು.

ಇಂದು ನಮ್ಮ ಸಮಾಜ ಬಹಳ ಮುಂದುವರೆಯುತ್ತಿದೆ. ಬದಲಾವಣೆ ಬಯಸುತ್ತಿದೆ. ಹೆಣ್ಣುಮಕ್ಕಳ ಸ್ಥಾನಮಾನದಲ್ಲಿ ಬಹಳಮಟ್ಟಿಗಿನ ಸಕಾರಾತ್ಮಕ ಧೋರಣೆಗಳು ಅಸ್ತಿತ್ವದಲ್ಲಿವೆ. ಇಷ್ಟೆಲ್ಲಾ ಇದ್ದರೂ ಕೂಡ ಈ ಮನೆಯ ಹೆಣ್ಣುಮಕ್ಕಳ ಜೀವನ ನನಗೆ ಬಹಳ ಘಾಸಿ ಮಾಡಿದ ವಿಷಯವಾಯಿತು. ಸಮಾಜ ಬದಲಾಗುತ್ತಿದೆ ಎಂದು ಹೇಳುವಾಗ ಒಂದು ರೀತಿಯ ಸಂತೋಷ ಆದರೆ ಅದು ಕೇವಲ ನಮ್ಮ ಮನಸ್ಸಿಗೆ ಮಾತ್ರ ಹೇಳಿಕೊಳ್ಳುವ ಸಮಾಧಾನದ ಮಾತಾ? ಎಂದು ಈ ಕುಟುಂಬ ನೋಡಿ ನನ್ನಗೆ ಅನಿಸಿದ್ದು. ಮೇಲ್ವರ್ಗದ ಮೇಲ್ಜಾತಿಯ ಹೆಣ್ಣುಮಕ್ಕಳ ಸ್ಥಿತಿ ಹೀಗಾದರೆ ಕೆಳವರ್ಗದ, ಕೆಳಜಾತಿಯ ಹೆಣ್ಣುಮಕ್ಕಳ ಬದುಕು ಕೂಡ ಇದಕ್ಕಿಂತ ಭಿನ್ನವಾಗಿರುವುದಿಲ್ಲ. ಇಬ್ಬರ ಮಧ್ಯ ಇರುವ ಭಿನ್ನತೆಯೆಂದರೆ, ಮೇಲ್ವರ್ಗದ ಮಹಿಳೆಗೆ ತನ್ನ ಅಸಮಾಧಾನ, ಕೋಪ, ಸಿಟ್ಟು ಹೊರಹಾಕುವ ಇರುವ ವ್ಯವಸ್ಥೆಯನ್ನು ಪ್ರತಿಭಟಿಸುವ ಅಧಿಕಾರ ಅವಳಿಗೆ ಇರುವುದಿಲ್ಲ. ಆದರೆ ಕೆಳವರ್ಗದ ಮಹಿಳೆ ಆ ಒಂದು ಅಧಿಕಾರ ಹೊಂದಿರುತ್ತಾಳೆ. ತನ್ನ ಜೊತೆ ಯಾವುದೇ ರೀತಿಯ ಅನ್ಯಾಯ, ನಡೆದರೂ ಅದನ್ನು ಪ್ರತಿಭಟಿಸುವ ಧೈರ್ಯವಿರುತ್ತದೆ. ತಮ್ಮ ಅಸಹನೆಯನ್ನು, ಕೋಪವನ್ನು ಹೊರಹಾಕುವ ಸಾಮರ್ಥ್ಯ ಇವರಿಗಿರುತ್ತದೆ. ವ್ಯವಸ್ಥೆಯ ವಿರುದ್ಧ ಬಂಡಾಯ ಏಳುವ ಧೈರ್ಯ, ಸಾಹಸ ಇವರಲ್ಲಿರುತ್ತದೆ. ಇವರನ್ನು ನಿಜವಾದ ಸ್ತ್ರೀವಾದಿಗಳೆಂದರೆ ತಪ್ಪಾಗದು. ಪುರುಷರದೇ ಪ್ರಾಬಲ್ಯವಿರುವ ಹಳ್ಳಿಗಳಲ್ಲಿ ಮಹಿಳೆಯರ ಪಾತ್ರ ಮಾತ್ರ ಮನೆಯ ಸದಸ್ಯರನ್ನು ಸಂತೈಸುವ ಜವಾಬ್ದಾರಿ, ಹೊರುವ, ಹೇರುವ ಕೆಲಸ ಮಾತ್ರ, ದುಡಿಯಲು ಕಡ್ಡಾಯವಾಗಿ ಹೋಗಲೇಬೇಕಾದ ಅನಿವಾರ್ಯತೆ. ಕೆಲವು ಮಹಿಳೆಯರು ಕೆಲಸಕ್ಕೆ ಹೋಗದೆ ಇರಬಹುದು ಆದರೆ ಹೆಚ್ಚಿನ ಮಹಿಳೆಯರು ದುಡಿಯಲು ಹೋಗುವವರೆ ಆಗಿದ್ದಾರೆ. ದುಡಿವ ಮಹಿಳೆ ಮನೆಯ ಎಲ್ಲ ಜವಾಬ್ದಾರಿಗಳನ್ನು ಮಹಿಳೆಯೇ ಹೊತ್ತುಕೊಂಡಿದ್ದರೆ, ಅಲ್ಲಿ ಪುರುಷನಿಗೆ ಮಾಡಲು ಯಾವುದೇ ಕೆಲಸಗಳಿರುವುದಿಲ್ಲ. ದುಡಿಯುವ ಮನೆಗೆ ತಂದು ಹಾಕುವ ಅನಿವಾರ್ಯತೆಯೂ ಅವನಿಗಿರುವುದಿಲ್ಲ. ಮನೆಯ ಜವಾಬ್ದಾರಿ ತನ್ನ ಹೆಂಡತಿಯ ಕೈಯಲ್ಲಿದೆ ನಾನು ಕೆಲಸಕ್ಕೆ ಬಾರದವನು, ನನ್ನನ್ನು ಮನೆಯಲ್ಲಿ ಕೂಡಿಹಾಕಿದ್ದಾರೆ ನನಗೆ ಯಾರು ಮರ್ಯಾದೆ ಕೊಡುತ್ತಿಲ್ಲ. ಇದಕ್ಕೆಲ್ಲಾ ಇವಳೇ ಕಾರಣ ಎಂದು ಕಿಡಿ ಕಾರುತ್ತಾನೆ. ಇದು ಸಾಲದೆಂಬಂತೆ ರಾತ್ರಿ ಕುಡಿದು ಬಂದು ಹೆಂಡತಿಯನ್ನು ಕೈಗೆ ಸಿಕ್ಕ ಸಿಕ್ಕ ವಸ್ತುಗಳಿಂದ ಹೊಡೆಯುವ ಬಡಿಯುವ ದೃಶ್ಯಗಳು ಹಳ್ಳಿಗಳಲ್ಲಿ ಸಾಮಾನ್ಯವೇನೊ ಅಂತ ಅನಿಸುತ್ತದೆ. ಆ ಮೂಲಕ ಹೆಂಡತಿಯ ಯಜಮಾನಿಕೆಯನ್ನು ತುಚ್ಛೀಕರಿಸಿ ನೋಡುವ ಉದಾಹರಣೆಗಳು ನನಗೆ ಈ ಭಾಗದಲ್ಲಿ ಹೆಚ್ಚು ಕಂಡುಬಂದವು.

ಮನೆ, ಹೊಲ, ಗಾರೆ ಈ ಎಲ್ಲ ಕೆಲಸಗಳಲ್ಲಿ ತೊಡಗಿಸಿಕೊಳ್ಳುವ ಈ ಮಹಿಳೆಯರನ್ನು ಸಂದರ್ಶಿಸಿದ ನನಗೆ ತಮ್ಮ ಗಂಡಂದಿರು ತಮ್ಮ ಯಜಮಾನಿಕೆಗೆ ಹೀಗೆ ಪ್ರತಿಕ್ರಿಯೆ ನೀಡುತ್ತಾರೆ ಎಂದು ಹೇಳಿದರು. ಬೆಳಗಿನ ಜಾವವೇ ಎದ್ದು ಅಡುಗೆ ಮಾಡಿ ಚಿಕ್ಕಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ದುಡಿಯಲು ನಿಲ್ಲುವ ಇವರಿಗೆ ಇದರ ಮಧ್ಯೆ ಅತ್ತೆಮಾವರ ಮಾತುಗಳನ್ನು ಕೇಳಬೇಕಾದ ಅನಿವಾರ್ಯತೆ ಜೊತೆಗೆ ಗಂಡನ ಮೊಂಡುತನ, ಅವಿವೇಕಿತನ ಇದನ್ನೆಲ್ಲಾ ಸಹಿಸಿಕೊಂಡಿರಬೇಕಾಗುವುದು. ಹೀಗೆ ತನ್ನ ಕೌಟುಂಬಿಕ ಸಮಸ್ಯೆಗಳ ಅನಾವರಣ ಮಾಡುತ್ತಾಳೆ. ಬೆಳಗಿನಿಂದ ರಾತ್ರಿಯವರೆಗೂ ದುಡಿಯುವ ಇವರು ಟಿವಿ ನೋಡುವುದು ಮಾತ್ರ ರಾತ್ರಿ ಅವಧಿಯಲ್ಲಿ, ಸಂಜೆ ಏಳುಗಂಟೆಗೆ ಟಿವಿ ಎದುರು ಕುಳಿತುಕೊಂಡರೆ ರಾತ್ರಿ ಹತ್ತುಗಂಟೆವರೆಗೂ ಏಳುವುದಿಲ್ಲ. ಇವರು ಟಿವಿ ನೋಡುವಾಗ ಆಚೆಚೆ ಅಲುಗಾಡದೇ ತಮ್ಮ ಚಿತ್ತವನ್ನು ಟಿವಿಯಲ್ಲಿ ಕೇಂದ್ರಿಕರಿಸಿ, ಯಾರು ಮಾತನಾಡಿದರು ಅವರ ಮಾತಿಗೆ ಕಿವಿಗೊಡದೆ ಧಾರಾವಾಹಿ ನೋಡುತ್ತಿರುತ್ತಾರೆ. ಧಾರಾವಾಹಿಯಲ್ಲಿ ಬರುವ ಪ್ರತಿಯೊಂದು ಸನ್ನಿವೇಶವನ್ನು ತದೇಕಚಿತ್ತದಿಂದ ನೋಡುವ, ಇವರಿಗೆ ಧಾರಾವಾಹಿಯಲ್ಲಿ ಕಥಾನಾಯಕಿಗೆ ಬರುವ ಕಷ್ಟಗಳಿಗೆ ಕಣ್ಣೀರುಹಾಕಿ, ಅವಳ ಮುಗ್ಧತೆಗೆ ಮರುಗಿ, ನಮ್ಮ ಕಥೆ ಇದ್ದಂಗೆ ಇದೆ ಎಂದು ಭಾವಿಸುತ್ತಾ ನೋಡುತ್ತಾರೆ. ಕಥಾನಾಯಕಿಗೆ ಯಾವುದಾದರೂ ತೊಂದರೆಗಳು ಎದುರಾದರೆ ಹೆಣ್ಣುಮಕ್ಕಳ ಜೀವನ ಇಷ್ಟೆ ಎಂದು ಮರುಕ ಪಡುತ್ತಾರೆ. ಅವರನ್ನು ತಮ್ಮನ್ನು ಒಂದೆ ತಕ್ಕಡಿಯಲ್ಲಿಟ್ಟು ತೂಗುತ್ತಾರೆ ಹೀಗೆ ತೂಗಿಸಿಕೊಂಡು ಅವರಿಗೂ ತಮಗೂ ಯಾವುದೇ ವ್ಯತ್ಯಾಸವಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಹೀಗೆ ಈ ಮಹಿಳೆಯರು ಧಾರಾವಾಹಿಯಲ್ಲಿ ತೋರಿಸುವುದನ್ನೇ ವಾಸ್ತವವೆಂದು ನಂಬಿರುತ್ತಾರೆ, ನಮ್ಮ ಸುತ್ತಮುತ್ತ ನಡೆಯುವಂತಹ ಘಟನೆಗಳೇ ಆಗಿವೆ ಎಂಬ ನಿರ್ಧಾರಕ್ಕೆ ಬಂದುಬಿಡುತ್ತಾರೆ. ಧಾರಾವಾಹಿಗಳು ಹೇಗೆ ಮಹಿಳೆಯರ ವಿವೇಚನಾಶಕ್ತಿಯನ್ನು ಕಸಿದುಕೊಂಡು ಬಿಡುತ್ತವೆ ಎನ್ನುವುದಕ್ಕೆ ಇದು ಉತ್ತಮವಾದ ಉದಾಹರಣೆಯಾಗಿದೆ. ಇವರು ನೋಡುವ, ಇಷ್ಟಪಡುವ ಧಾರಾವಾಹಿಗಳಲ್ಲಿ ಕಲ್ಯಾಣಿಯ ಮುಗ್ಧತೆ ಪ್ರೇರಣಾಳ ಬುದ್ಧಿವಂತಿಕೆ, ತಾಳ್ಮೆಶಕ್ತಿ, ಇದ್ರೆ ಇರಬೇಕು ನಿನ್ನಹಾಂಗ ಧಾರಾವಾಹಿಯ ಅಹಲ್ಯಾಳ ಚಾಣಾಕ್ಷತೆಯನ್ನು ಮೆಚ್ಚುಕೊಳ್ಳುತ್ತಾರೆ, ಧಾರಾವಾಹಿಯಲ್ಲಿ ನಡೆಯುವ ಯಾವುದದರೂ ಸನ್ನಿವೇಶಗಳು ನಿಮ್ಮ ಬದುಕಿನಲ್ಲಿ ನಡೆದಿದೆಯಾ? ಎಂದು ಕೇಳಿದಾಗ ಕೆಲವೊಂದು ಸನ್ನಿವೇಶಗಳು ನಡೆದಿವೆ ಅಂದರೆ ಮನೆಯ ಸದಸ್ಯರ ನಡುವೆ ಜಗಳಗಳಾಗುವುದು, ಒಬ್ಬರಿಗೊಬ್ಬರು ಮಾತುಬಿಡುವುದು, ಸಿಟ್ಟಾಗುವುದು, ತಂದೆ-ತಾಯಿ, ಗಂಡ-ಹೆಂಡತಿ, ಅಣ್ಣ-ತಮ್ಮ, ಇವರ ನಡುವೆ ನಡೆಯುವ ಜಗಳ ಇವೆಲ್ಲ ನಮ್ಮ ಬದುಕಿನಲ್ಲಿಯೂ ನಡೆಯುತ್ತವೆ ಎನ್ನುತ್ತಾರೆ. ಕೆಲವೊಂದು ಸನ್ನಿವೇಶಗಳು ನಮ್ಮ ಬದುಕಿನಲ್ಲಿ ನಡೆಯುವುದೇ ಇಲ್ಲವೆನ್ನುತ್ತಾರೆ. ಇದಕ್ಕೆ ಒಂದು ಉದಾಹರಣೆಯನ್ನು ಸಹ ಕೊಡುತ್ತಾರೆ. ಉದಯವಾಹಿನಿಯಲ್ಲಿ ಪ್ರೇರಣಾ ಧಾರಾವಾಹಿ ಪ್ರಸಾರವಾಗುತ್ತಿತ್ತು, ಈ ಧಾರಾವಾಹಿಯ ಕಥಾನಾಯಕಿ ಪ್ರೇರಣಾಳದು ಮುಗ್ಧೆ ಬುದ್ಧಿವಂತಳು. ಇತರರ ಕಷ್ಟಗಳನ್ನು ತನ್ನದೇ ಕಷ್ಟವೆಂದು ಭಾವಿಸಿ, ಸಹಾಯ ಮಾಡುವ ಎಲ್ಲರ ಸುಖ, ದುಃಖಗಳಲ್ಲಿ ಭಾಗಿಯಾಗುವಂತಹ ಪಾತ್ರ

ಇವಳದು. ಪ್ರೇರಣಾ ನಗರದಲ್ಲಿ ತನ್ನ ತಂದೆಯ ಸ್ನೇಹಿತನ ಮನೆಗೆ ಬಂದು ವಾಸವಿದ್ದಾಗ, ತಂದೆಯ ಸ್ನೇಹಿತನ ಮಗ ರವಿಯೊಂದಿಗೆ ಮದುವೆ ಮಾಡಿ ಸೊಸೆಯನ್ನಾಗಿ ಮಾಡಿಕೊಳ್ಳ ಬೇಕೆಂದು ಮನೆಯ ಯಜಮಾನ ಬಯಸುತ್ತಾನೆ. ಆದರೆ ರವಿ ಇನ್ನೊಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದು, ಮದುವೆಯಾದರೆ ಅವಳೊಂದಿಗೆ ಮಾತ್ರ ಎಂದು ಹೇಳುತ್ತಾನೆ. ಅನೇಕ ಬಾರಿ ವಿವಾಹದ ಕುರಿತು-ವಾದ-ವಿವಾದ, ಪರ-ವಿರೋಧ ವ್ಯಕ್ತವಾಗುತ್ತವೆ. ಕೊನೆಗೆ ರವಿ ಮತ್ತು ರೇಣು ಇಬ್ಬರ ಮದುವೆ ನಿಶ್ಚಯವಾಗುತ್ತದೆ. ಮದುವೆಯ ಖರೀದಿಗಳನ್ನು ಮಾಡುತ್ತಿ ರುವಾಗ ರೇಣುಕಾಳನ್ನು ಅಪಹರಿಸಲಾಗುತ್ತದೆ. ತಮ್ಮ ಕಡೆಯಿಂದ ಸಾಧ್ಯವಾದಷ್ಟುಮಟ್ಟಿಗೆ ಹುಡುಕುವ ಪ್ರಯತ್ನ ಮಾಡಿದರೂ ರೇಣು ಪತ್ತೆಯಾಗುವುದಿಲ್ಲ. ಮದುವೆಗೆ ಗೊತ್ತು ಮಾಡಿದ ದಿನಾಂಕದಂದೆ ಮದುವೆಯಾಗಬೇಕೆಂದು ಮನೆಯ ಹಿರಿಯ ಅಜ್ಜಿ ಪಟ್ಟು ಹಿಡಿದು ಕೂಡುತ್ತಾಳೆ. ಈ ಸನ್ನಿವೇಶದಲ್ಲಿ ರವಿ-ರೇಣು ಮದುವೆಯ ಬದಲು ರವಿ-ಪ್ರೇರಣಾಳ ಮದುವೆ ಮಾಡುವುದಾಗಿ ನಿಶ್ಚಯವಾಗುತ್ತದೆ. ಸರಿ ಮದುವೆಗೆಂದು ಎಲ್ಲರೂ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ರವಿ ಪ್ರೇರಣಾಳಿಗೆ ಹಾರ ಹಾಕುತ್ತಾನೆ. ಪ್ರೇರಣಾ ರವಿಗೆ ಹಾರ ಹಾಕಬೇಕು. ಆದರೆ ಪ್ರೇರಣಾ ಅಲ್ಲಿ ಹಾರ ಹಾಕುವುದಿಲ್ಲ ಬದಲಿಗೆ ರವಿ, ನಿನಗೆ ಹಾರ ಹಾಕಬೇಕಾದವಳು ನಾನಲ್ಲ ಎಂದು ಹೇಳಿ ದೂರದಲ್ಲಿ ನಿಂತಿರುವ ರೇಣುಳ ಎಡಗೆ ಕೈಮಾಡಿ ತೋರಿಸುತ್ತಾಳೆ. ನಂತರ ರವಿ-ರೇಣು ಇಬ್ಬರ ಮದುವೆ ನಡೆದು ಹೋಗುತ್ತದೆ ಇಲ್ಲಿ ಪ್ರೇರಣಾ ದುಃಖಪಡುತ್ತಾ ಮನೆಗೆ ವಾಪಸಾಗುತ್ತಾಳೆ. ಇದು ಈ ಧಾರಾವಾಹಿಯಲ್ಲಿ ಬರುವ ಒಂದು ಸನ್ನಿವೇಶ. ಇದರ ಕುರಿತು ಇವರೇ ವಿಶ್ಲೇಷಿಸುತ್ತಾರೆ. ಈ ಸನ್ನಿವೇಶ ನೋಡಿದ ೨೦ ಮಹಿಳೆಯರಲ್ಲಿ ೧೨ ಮಹಿಳೆಯರು ಪ್ರೇರಣಾಳ ಒಳ್ಳೆತನ, ತನ್ನನ್ನು ಮದುವೆಯಾಗಬೇಕಾದವನನ್ನು ಇನ್ನೊಬ್ಬಳಿಗೆ ಬಿಟ್ಟು ಕೊಡುವುದರಿಂದ ಅವಳ ಮನಸ್ಸು ಎಷ್ಟು ದೊಡ್ಡದು ಎನ್ನುವ ಭಾವನೆ ಮೂಡಿಸಿದರೆ, ೮ ಜನ ಮಹಿಳೆಯರು ಈ ಸನ್ನಿವೇಶವನ್ನು ವಾಸ್ತವ ಬದುಕಿಗೆ ಹೋಲಿಸಿ ನೋಡುತ್ತಾರೆ.ಒಂದು ವೇಳೆ ಮದುವೆಯಾದ ಮೇಲೆ ರೇಣು ಬಂದಿದ್ದರೇ? ಆಗ ಏನು ಮಾಡುತ್ತಿದ್ದಳು? ಯಾವ ಹುಡುಗಿಯಾದರೂ ವಾಸ್ತವ ಬದುಕಿನಲ್ಲಿ ಹೀಗೆ ಮಾಡಲು ಸಾಧ್ಯವೇ? ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ಧಾರಾವಾಹಿಗಳಲ್ಲಿ ವಾಸ್ತವ ಬದುಕಿನಲ್ಲಿ ನಡೆಯದೇ ಇರುವಂತಹ ಸನ್ನಿವೇಶಗಳನ್ನು ಇಲ್ಲಿ ತೋರಿಸುತ್ತಾರೆ ಎಂದು ತಮ್ಮ ವಿವೇಚನಾ ಶಕ್ತಿಯಿಂದ ಉತ್ತರಿಸುತ್ತಾರೆ. ಇಲ್ಲಿ ೧೨ ಜನ ಮಹಿಳೆಯರು ಧಾರಾವಾಹಿ ಕೊಡುವ ಯಥಾಸ್ಥಿತಿಯನ್ನು ವಿವೇಚನೇ ಮಾಡದೇ ಒಪ್ಪಿಕೊಳ್ಳುವ, ಆ ಮೂಲಕ ಸಾಂಪ್ರದಾಯಿಕತೆಯನ್ನು ಒಪ್ಪಿಕೊಂಡು ಬಿಡುವ ಆಶಯ ಇವರದಾಗಿದ್ದರೆ, ಎಂಟು ಜನ ಮಾತ್ರ ಧಾರಾವಾಹಿಯನ್ನು ವಿಶ್ಲೇಷಿಸುವ ಮನಸ್ಥಿತಿಯನ್ನು ಹೊಂದಿದ್ದಾರೆ.

ಧಾರಾವಾಹಿಗಳ ಕುರಿತು ಕೆಲವು ಅಭಿಪ್ರಾಯಗಳು

* ಧಾರಾವಾಹಿಗಳು ಇಂದು ಮಹಿಳೆಯರ ಸಬಲೀಕರಣದ ಕುರಿತು ಮಾತಾಡತಾ. ಮಾತಾಡತಾ ಮತ್ತೆ ಸಾಂಪ್ರದಾಯಿಕತೆಯನ್ನು ಒಪ್ಪಿಕೊಳ್ಳುವ ಹಂತಕ್ಕೆ ತಂದು ನಿಲ್ಲಿಸುತ್ತೀವೆ

ಅಂತ ನನ್ನ ಅನಿಸಿಕೆ. ಹೇಗೆಂದರೆ ಬಂಗಾರ ಮತ್ತು ಚಿಕ್ಕಮ್ಮ ಈ ಧಾರಾವಾಹಿಗಳಲ್ಲಿ ಕಥಾನಾಯಕಿಯರು ಜಿಲ್ಲಾಧಿಕಾರಿಯಾಗಿರುತ್ತಾರೆ. ಅವರಿಗೆ ಧಾರಾವಾಹಿಯಲ್ಲಿ ಕಷ್ಟಗಳನ್ನು ಎದುರಿಸುವವರಂತೆ, ಎಷ್ಟೆ ಕಷ್ಟ ಬಂದರು ಅದರ ವಿರುದ್ಧ ಒಂದು ಮಾತು ಆಡದಂತೆ ತೋರಿಸಲಾಗಿದೆ. ಅವರಿಗೆ ಏದುರಾಗುವ ಅಥವಾ ಅವರು ಅನುಭವಿಸುವ ಕಷ್ಟಗಳನ್ನು ನೋಡಿ ಧಾರಾವಾಹಿ ನೋಡುವ ಮಹಿಳೆಯರು ಕಣ್ಣೀರು ಹಾಕಿರುವುದನ್ನು ನೋಡಿದ್ದೇನೆ. ಅವಳಿಗೆ ಇಂಥ ಕಷ್ಟ ಬರಬಾರದಿತ್ತು. ಅವಳು ಎಷ್ಟೇ ಓದಿದ್ದರೂ,ಒಳ್ಳೆಯ ಹುದ್ದೆಯಲ್ಲಿದ್ದರು ಕೂಡ ಹೆಣ್ಣಿಗೆ ಕಷ್ಟ ತಪ್ಪುವುದಿಲ್ಲ ಎಂಬಂತಹ ಮನೋಭಾವನೆಯನ್ನು ನೋಡುಗರ ಮನಸ್ಸಿನಲ್ಲಿ ಹುಟ್ಟುಹಾಕುತ್ತದೆ.

ಇನ್ನು ಧಾರಾವಾಹಿಯ ಸಂಭಾಷಣೆಯ ವಿಷಯಕ್ಕೆ ಬಂದರೆ ಜಿಲ್ಲಾಧಿಕಾರಿಯಂತಹ ಉನ್ನತ ಹುದ್ದೆಯನ್ನೇರಿದ ಕಥಾನಾಯಕಿಯರಿಗೆ, ಸಂಭಾಷಣೆಯಲ್ಲಿಯೂ ಕೂಡ ಅಸಹಾಯಕತೆಯಲ್ಲೆ ಮೇರೆಸುತ್ತಾರೆ. ಕಥಾನಾಯಕಿಯರನ್ನು ತುಂಬಾ ತಾಳ್ಮೆ ಇರುವಂತಹ ಪಾತ್ರದಲ್ಲಿ ತೋರಿಸುವುದರಿಂದ ಇದನ್ನು ನೋಡುವ ವೀಕ್ಷಕರಿಗೆ ಅತಿಯಾಯ್ತು, ತಾಳ್ಮೆಗೂ ಒಂದು ಮಿತಿ ಇರಬೇಕು. ಇಷ್ಟೊಂದು ಸಹಿಸಿಕೋಳ್ಳುವ ಅಗತ್ಯವೇನಿದೆ ಅಂತ ಅನಿಸುತ್ತದೆ. ನಮ್ಮ ಸೊಸೈಟಿ ಇಂದು ತುಂಬಾ ಚೇಂಜ್ ಆಗಿದೆ. ಆದರೆ ನಿರ್ದೇಶಕರ ಧೋರಣೆಯಲ್ಲಿ ಮಾತ್ರ ಯಾವುದೇ ಚೇಂಜ್ ಆಗಿಲ್ಲ. ಇದರ ಹಿಂದಿರುವ ರಾಜಕಾರಣದ ಬಗ್ಗೆ ಅರಿವಿರುವ ನಮ್ಮಂತವರಿಗೆ ಓದು ಬರಹ ಕಲಿತಿರುವವಳು. ಕಷ್ಟ ಬಂದಾಗ ಅವನ್ನು ಸಮರ್ಥವಾಗಿ ಪ್ರತಿಭಟಿಸಬೇಕಿತ್ತು. ಅಲ್ಲಿ ಮೌನವಹಿಸುವ,ಸಹಿಸಿಕೋಳ್ಳುವ ಅವಶ್ಯಕತೆ ಇದೇಯಾ? ಮಹಿಳಾ ಪಾತ್ರದಲ್ಲಿ ಯಾವುದೇ ಬದಲಾವಣೆ ಬಯಸದ, ಸಾಂಪ್ರದಾಯಿಕತೆಯನ್ನು ಒಪ್ಪಿಕೊಂಡು ನೋಡುವಂತಹ ಮಹಿಳಾ ವಿಕ್ಷಕರಿಗೆ ಹೆಣ್ಣು ಅಂದರೆ ಹೀಗೆ ಇರಬೇಕು ಅಂತ ಅನ್ನಿಸೋದು ಸಹಜ. ಬದಲಾವಣೆಯನ್ನು ಬಯಸುವ ನಮ್ಮಂತವರಿಗೆ ಇದು ಅಸಮಾಧಾನ ಉಂಟು ಮಾಡುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಧಾರಾವಾಹಿಗಳು ಆಧುನಿಕತೆಯಲ್ಲಿ ಸಾಂಪ್ರದಾಯಿಕತೆಯನ್ನು ಬಿಂಬಿಸುತ್ತಾ ಬರುತ್ತೀವೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಡಾ. ಸುಕನ್ಯಾ ಹಾವನೂರ

ಮಹಿಳಾ ವಿಶ್ವವಿದ್ಯಾಲಯ

ಬಿಜಾಪುರ

* ಧಾರಾವಾಹಿಗಳು ಅಂದ್ರೆ ಸುಮ್ನೆ ಟೈಂಪಾಸ್‌ಗಾಗಿ ನೊಡ್ತೀನಿ. ಕೆಲವೊಮ್ಮೆ ಧಾರಾವಾಹಿಗಳಲ್ಲಿ ಬರುವ ತಿರುವು(twist)ಗಳಿಂದ, ಕುತೂಹಲಕ್ಕಾಗಿ ಧಾರಾವಾಹಿ ನೋಡುತ್ತೇನೆ. ಈ ಧಾರಾವಾಹಿಗಳಿಂದ ಏನು ಪ್ರಯೋಜನವಿಲ್ಲ. ಏಕೆಂದರೆ ಒಂದು ವರ್ಷ ಎರಡು ವರ್ಷ ಆದರನೂ ಕಥೆ ಎಳಿತಾನೇ ಹೋಗತಾರೆ. ಅದಕ್ಕಾಗಿ ಟೈಂ ಎಲ್ಲಿರುತ್ತೆ. ನಾನು

ಟೈಮ್ ಸಿಕ್ಕಾಗ ಮಾತ್ರ ಧಾರಾವಾಹಿ ನೋಡೋದು. ಇದರಿಂದ ಸಮಾಜಕ್ಕಾಗಲಿ, ಯುವಜನರಿಗಾಗಲಿ ಯಾವುದೇ ಪ್ರಯೋಜನವಿಲ್ಲವೆಂದೇ ನನ್ನ ಅನಿಸಿಕೆ.

ಕುಮಾರಿ ಅಶ್ವಿನಿ, ಪಾಟೀಲ
ಪಿಯುಸಿ ವಿದ್ಯಾರ್ಥಿನಿ
ಲಿಂಗಸೂಗೂರು, ರಾಯಚೂರು ಜಿಲ್ಲೆ

* ಯಾ ಧಾರಾವಾಹಿ ಬಂದ್ರೆನು ಬಿಟ್ರೇನು ನಮ್ಮ ಕೆಲಸಾ ನಾವ್ ನೋಡಕೋಬೇಕಲ್ಲಮ್ಮ. ಈ ಟಿವಿ ನಮ್ಮ ಹೊಟ್ಟೆಯೇನು ತುಂಬಿಸಂಗಿಲ್ಲಲ್ಲ. ಅದಕ್ಕೆ ಟಿವಿ ನೋಡಾದು ಕಮ್ಮಿ, ನೋಡದರನು ರಾಜಕುಮಾರರ ಸಿನ್ಮಾ ನೋಡತೀನಿ, ಛಂದಾನು ಕಥಿ ಇರ್ತಾವ. ಈ ಧಾರಾವಾಹ್ಯಾಗ ಏನಿರಲ್ಲ ಬಿಡೆವ್ವ

ಶ್ರೀಮತಿ ಯಾಸ್ಮಿನ್ ಗಂಡ ಇಂತಿಯಾಜ್ ಮುಲ್ಲಾ
ತರಕಾರಿ ವ್ಯಾಪಾರಸ್ಥರು, ಬಿಜಾಪುರ.

* ಹೌದು ನಾನು ಧಾರಾವಾಹಿಗಳನ್ನು ಹೆಚ್ಚು ಇಷ್ಟಪಡುತ್ತೇನೆ. ಗಂಡ, ಕೆಲಸಕ್ಕೆ, ಮಕ್ಕಳು ಶಾಲೆಗೆ ಹೋದ ಮೇಲೆ ನಾನು ಒಬ್ಬಳೇ ಇರ್ತಿನಿ. ಅವಾಗ ನಾನು ಧಾರಾವಾಹಿ ನೋಡಕೊಂಡೆ ಕೆಲಸ ಮಾಡತ್ತೀನಿ. ನಾನು ಹೆಚ್ಚಾಗಿ ಸ್ಟಾರ್‌ಪ್ಲಸ್, ಸೋನಿ, ಕಲರ್ಸ್ ಚಾನೆಲನಲ್ಲಿ ಪ್ರಸಾರವಾಗೋ ಎಲ್ಲಾ ಧಾರಾವಾಹಿಗಳನ್ನು ನೋಡ್ತೀನಿ. ಯಾಕೆಂದ್ರೆ ಈ ಧಾರಾವಾಹಿಗಳಲ್ಲಿ ಒಳ್ಳೆಯ ವಿಷಯಗಳನ್ನಿಟ್ಟುಕೊಂಡು ಕಥೆ ಹೆಣೆದಿರುತ್ತಾರೆ.ಇಲ್ಲಿ ಮಹಿಳಾ ಪಾತ್ರಗಳು, ಅನುಭವಿಸುವ ಕಷ್ಟಗಳು ನೋಡಿದರೆ, ನಮ್ಮದೇ ವಾಸ್ತವ ಬದುಕಿನ ಚಿತ್ರಣವನ್ನು ತೋರಿಸುತ್ತಾರೆ ಎನ್ನುವ ಭಾವನೆ ಮೂಡುತ್ತದೆ ಹಾಗಾಗಿ ನಾನು ಈ ಧಾರಾವಾಹಿಗಳನ್ನು ಇಷ್ಟಪಟ್ಟು ನೋಡ್ತೀನಿ.

ಶ್ರೀಮತಿ ಬೇಬಿ ವಾಗಮೋರೆ
ಪುಣೆ, ಮಹಾರಾಷ್ಟ್ರ

* ನಾವು ಧಾರವಾಹಿ ನೋಡುವುದಿಲ್ಲ ನೋಡೊದಾದರೆ, ಗೇಮ್ಸ್ ಇರಬೇಕು ಅಂತವು, ನೋಡ್ತೀವಿ ಸ್ಪೋರ್ಟ್ ಚಾನೆಲ್ ನೋಡ್ತೀವಿ. ಒಂದು ವೇಳೆ ನಾವೇನಾದರು ಟಿವಿ ನೋಡಬೇಕಂದರೆ ಅವತ್ತು ಕ್ರಿಕೆಟ್ ಇರಬೇಕು. ಅಂದಾಗಲೇ ಟಿವಿ ಮುಂದೆ ಕೂಡತೀವಿ. ಇಲ್ಲಾಂದರೆ ಟಿವಿ ನೋಡಲಿಕ್ಕೆ ಹೋಗೊದಿಲ್ಲ, ಹಂಗೆನರೇ ಟಿವಿ ನೋಡಬೇಕಾದರೆ ಎಮಟೀವಿ, ಚಾನೆಲ್ ವೀ., ೯, UTV Bindasನಂತಹ ಚಾನೆಲ್ ನೋಡುತ್ತೇವೆ. ಹಾಡು, ಸಿನೆಮಾ, ರಿಯಾಲಿಟಿ ಶೋಗಳು ಹೆಚ್ಚು ಇಷ್ಟವಾಗುತ್ತವೆ.ನಮ್ಮ ಓದಿನ ಮಧ್ಯ ಟೈಂ ಸಿಕ್ಕಾಗ ಎಲ್ಲಾ ಫ್ರೇಂಡ್ಸ್ ಸೇರಿ ಮೈದಾನದಲ್ಲಿ ಕ್ರಿಕೆಟ ಆಡ್ತೀವಿ ಇದರಿಂದಾಗಿ ಹೆಚ್ಚು ಹೊತ್ತು ಆಟದಲ್ಲಿ ಕಳೆದು ಬಿಡುತ್ತದೆ. ಟಿವಿ ಧಾರಾವಾಹಿಗಳೆಂದರೆ ಬೋರ ಆಗುತ್ತೆ. ಯಾಕಂದ್ರೆ ನಾಳೆಗೆ ಏನಾಗುತ್ತೆ ಅಂತ

ಕಾಯಬೇಕು ಅಷ್ಟು ಸಮಯ ಆಗಲಿ ತಾಳ್ಮೆಯಾಗಲಿ ನಮಗಿಲ್ಲ. ಈ ಧಾರಾವಾಹಿಗಳು ಸುಮ್ಮನೆ ಟೈಮ ವೆಸ್ಟ ಮಾಡುವಂತಹವೇ ಆಗಿವೆ. ಅದರಿಂದ ಯಾವುದೇ ಪ್ರಯೋಜನವಿಲ್ಲ ಅಂತ ಅನಿಸುತ್ತದೆ. ಅದಕ್ಕಾಗಿ ನಾವು ಮೂರು ಗಂಟೆಯ ಸಿನೆಮಾ ನೋಡಕ್ಕೆ ಇಷ್ಟಪಡತ್ತೀವಿ. ಆದರೆ ಧಾರಾವಾಹಿ ನೋಡಲ್ಲ.ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಹರಿ, ವಾಸು, ಆನಂದ, ಅಜೀತ, ಸಂಜು

ಬಿ.ಇ. ವಿದ್ಯಾರ್ಥಿಗಳು

ಅಪ್ಪಾ ಎಂಜನಿಯರಿಂಗ್ ಕಾಲೇಜು, ಗುಲಬರ್ಗಾ

* ಧಾರಾವಾಹಿಗಳಂದ್ರೆ ನನಗೆ ಭಾಳ ಇಷ್ಟ ಆಗತಾವೆ. ಯಾಕಂದ್ರೆ ನಾವ ಮನ್ಯಾಗ ಇರೋ ಹೆಣ್ಣುಮಕ್ಕಳು ಧಾರಾವಾಹಿ ನೋಡಾದೆ ಕೆಲಸ ಇರತಾದ. ಅದು ಸಮಾಜಕ್ಕೆ ಲಾಭ ಅದಾನೋ ಇಲ್ಲ ನಷ್ಟ ಅದಾನೋ ನಂಗೊತ್ತಿಲ್ಲ. ಆದರ ನಾನಂತರೂ ಧಾರಾವಾಹಿ ನೋಡ್ತೀನಿ. ಕೆಲವೊಂದು ಸಾರಿ ಕೆಲಸ ಮುಗಿಸಿರ್ತಿನಿ. ಮತ್ತೆ ಕೆಲವೊಂದು ಸಾರಿ ಕೆಲಸಗಳೇನಿದ್ದರೂ ಬಿಟ್ಟು ಧಾರಾವಾಹಿ ನೋಡತಿನಿ. ಮುಕ್ತ ಮುಕ್ತ, ಶುಭಮಂಗಳ, ಇದ್ರೆ ಇರಬೇಕು ನಿನ್ನಹಾಂಗ(ಮುಗಿದಿದೆ), ಬದುಕು ಜಟಕಾಬಂಡಿ(ಮುಗಿದಿದೆ), ಕಲ್ಯಾಣಿ, ಕದನ(ಮುಗಿದಿದೆ) ಇವುಗಳನ್ನು ಹೆಚ್ಚು ನೋಡುತ್ತೇನೆ. ಈ ಕಥೆಗಳಲ್ಲಿ ಕೆಲವೊಂದು ಸಾರಿ ನಾನು ಅಂದು ಕೊಂಡಿದ್ದಂಗೆ ನಡೆಯುತ್ತಿರುತ್ತದೆ. ಹಾಗಾಗಿ ನಾನು ಕರೆಕ್ಟಾಗಿ ಗೆಸ್ ಮಾಡತ್ತೀನಿ ಅಂತ ನೋಡ್ತೀನಿ. ನಮ್ಮನ್ಯಾಗ ಎಲ್ಲರಿಗಿನೂ ಇವತ್ತು ಧಾರಾವಾಹಿದಾಗ ಹಿಂಗ ಆಯ್ತು ಅಂತ ಹೇಳತೀನಿ ಮತ್ತು ನಮ್ಮ ಬೀಗರೊಳಗೆ, ಗೆಳತಿಯರೊಳಗೆ ನನ್ನಂಗೆ ಧಾರಾವಾಹಿಗಳನ್ನು ಹುಚ್ಚು ಹಿಡಿದವರಂಗೆ ನೋಡೋರಿದ್ದಾರೆ. ಅವರ ಜೊತೆ ನಾಳಿನ ಎಪಿಸೋಡ ಅಲ್ಲಿ ಏನಾಗಬಹುದು ಅಂತ ಮಾತಾಡಕೊತೀನಿ. ಹಿಂದಿಯಲ್ಲಿ ಬರುವ "ಸಾಥ ನಿಭಾನಾ ಸಾಥಿಯಾ", "ಸಸುರಾಲಗೆಂದಾ ಫೂಲ"(ಸ್ಟಾರ್‌ಪ್ಲಸ್) "ಬಡೆಅಚ್ಚೆಲಗತೆ ಹೇ" (ಸೋನಿ) "ಛೋಟಿ ಬಹು" (ಝೀ ಟಿವಿ ಹಿಂದಿ) ಇವುಗಳನ್ನು ಬಿಡಲಾರದೆ ನೋಡತೀನಿ. ಸಿನೆಮಾ ನೋಡೋದು ಕಡಿಮೆ.

ಶ್ರೀಮತಿ ಜಾನವಿ, ಸುರೇಶ

ಬಿಜಾಪುರ

ರವಿ ಆರ್. ಗರಣಿ, ಕೃಷ್ಣ ರುಕ್ಮಿಣಿ ಮತ್ತು ಅಮೃತವರ್ಷಿಣಿ ಧಾರಾವಾಹಿಯ ನಿರ್ದೇಶಕ ರೊಂದಿಗೆ ಸಂದರ್ಶನದ ವಿವರ

ಸಂ: ಸರ್ ನಿಮಗೆ ಇತ್ತೀಚೆಗೆ ಅತ್ಯತ್ತಮ ನಿರ್ದೇಶಕರೆಂದು "ಮಾಧ್ಯಮ ಸಮ್ಮಾನ" ಪ್ರಶಸ್ತಿ ಬಂತು ಅದಕ್ಕೆ ಅಭಿನಂದನೆಗಳು.

ನಿರ್ದೇಶಕರು : ಥ್ಯಾಂಕ್ಯೂ. ಥ್ಯಾಂಕ್ಯೂ ಮೆಡಮ್. ಇದೆಲ್ಲವೂ ನಮ್ಮ ಕೃಷ್ಣ ರುಕ್ಮಿಣಿ ಮತ್ತು ಅಮೃತವರ್ಷಿಣಿಯ ನಿರ್ದೇಶನಕ್ಕೋಸ್ಕರವೇ ಬಂದಂತದ್ದು ಎಲ್ಲಾ ಕ್ರೆಡಿಟ್ಟು ಅದಕ್ಕೆ ಸಲ್ಲಬೇಕು ಮತ್ತು ನಮ್ಮ ಟೀಮ್‌ಗೆ ಈ ಕ್ರೆಡಿಟ್ ಸಲ್ಲಬೇಕು ಅಂತ ಅಂದುಕೊಳ್ಳುತ್ತೇನೆ.

ಸಂ: ಪ್ರಸಾರವಾಗುತ್ತಿರುವ ಕೃಷ್ಣ ರುಕ್ಮಿಣಿ ಧಾರಾವಾಹಿಯ ಕಥಾವಸ್ತುವನ್ನು ಸ್ವಲ್ಪ ವಿವರಿಸ್ತೀರಾ? ಇದು ಹಿಂದಿಯ ರೀಮೇಕ್ ಧಾರಾವಾಹಿಯಲ್ವಾ ಸಾರ್?

ನಿರ್ದೇಶಕರು: ಹೌದು ಸ್ಟಾರ್ ಪ್ಲಸ್‌ನಲ್ಲಿ ಪ್ರಸಾರವಾಗುತ್ತಿದ್ದ ಪ್ರತಿಜ್ಞಾ ಹಿಂದಿ ಧಾರಾವಾಹಿಯಿಂದ ಪ್ರೇರಣೆ ಪಡೆದಿರುವುದು ನಿಜ. ಆದರೆ ರೀಮೆಕ್ ಅಲ್ಲ ನಾನು ಆ ಧಾರಾವಾಹಿಯ ಕಥಾವಸ್ತುವನ್ನು ಮಾತ್ರ ತೆಗೆದುಕೊಂಡಿದ್ದೇನೆ. ಉಳಿದಂತೆ ನಮ್ಮದೇ ಆದ ಭಾಷೆ, ಉಡುಗೆ ತೊಡುಗೆ, ಪಾತ್ರಗಳನ್ನು ಬೆರೆಸಿ ನಮ್ಮ ಕನ್ನಡಕ್ಕೆ ಸಂಬಂಧಿಸಿದಂತೆ ಧಾರಾವಾಹಿಯನ್ನು ನಿರ್ದೇಶಿಸಿದ್ದೇನೆ. ಇಲ್ಲಿ ಮುಖ್ಯವಾಗಿ ಎರಡು ಫ್ಯಾಮಿಲಿಯನ್ನು ತೆಗೆದುಕೊಂಡಿದ್ದೇನೆ. ಒಂದು ಫ್ಯಾಮಿಲಿ ತುಂಬಾ ಸಾಫ್ಟ್ ಆಗಿರುವ ವೆಲ್ ಎಜುಕೇಟೆಡ್ ಫ್ಯಾಮಿಲಿ. ಇನ್ನೊಂದು ತುಂಬಾ ಕ್ರೂಯೆಲ್ ಆಗಿರುವ ಗೌಡಿಕೆಯನ್ನು ಮುಂದುವರೆಸಿಕೊಂಡು ಬಂದಿರುವಂತಹ ಆನ್ ಎಜ್ಯುಕೇಟೆಡ್ ಫ್ಯಾಮಿಲಿ ಈ ಎರಡು ಫ್ಯಾಮಿಲಿಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಕಥಾನಾಯಕಿ ತುಂಬಾ ಕನಸುಗಳನ್ನು ಹೊತ್ತುಕೊಂಡಿರುವಂತಹ ಹುಡುಗಿ ಅಲ್ಲಿ ಆಕಸ್ಮಾತ ಆಗಿ ಕೃಷ್ಣ ರುಕ್ಮಿಣಿಯನ್ನು ನೋಡುತ್ತಾನೆ. ಒಬ್ಬ ರೌಡಿ ರುಕ್ಮಿಣಿಯನ್ನು ಟಟೇಜ್ ಮಾಡಬೇಕಾದಾಗ ಕೃಷ್ಣ ಬಂದು ಅವನನ್ನು ಥಳಿಸಿರುತ್ತಾನೆ. ಈ ವೇಳೆಯಲ್ಲಿ ರುಕ್ಮಿಣಿಯನ್ನು ಗಮನಿಸುವ ಕೃಷ್ಣ ಅವಳನ್ನು ಇಷ್ಟಪಡುತ್ತಾನೆ. ಈಗಾಗಲೇ ಎಂಗೇಜ್‌ಮೆಂಟ್ ಆಗಿರುವ ಹುಡುಗಿ ಎಂದು ಗೊತ್ತಿದ್ದರೂ ಅವಳನ್ನು ಬಲವಂತವಾಗಿ ಮದುವೆ ಮಾಡಿಕೊಂಡು ಮನೆಗೆ ಕರೆದುಕೊಂಡು ಬರುತ್ತಾನೆ. ಇಲ್ಲಿಗೆ ರುಕ್ಮೀಣಿಯ ಬದುಕಿನ ಇನ್ನೊಂದು ಪುಟ ತೆರೆಯುತ್ತದೆ. ತುಂಬಾ ಕ್ರೂರವಾಗಿರುವ ಫ್ಯಾಮಿಲಿ, ನರಸೇಗೌಡ, ತಾಯವ್ವ, ಕಾಳಿ, ಕೃಷ್ಣ ಇವರೆಲ್ಲರೂ ಕ್ರೂರ ಸ್ವಭಾವದವರಾಗಿರುತ್ತಾರೆ. ಅತ್ತೆಯಾದ ತಾಯವ್ವ ಮನೆಗೆ ಬರುವ ಸೊಸೆಯಂದಿರನ್ನು ಕ್ರೂರವಾಗಿ ನಡೆಸಿಕೊಳ್ಳುತ್ತಿರುತ್ತಾಳೆ. ಹೆಣ್ಣು, ಹೆಣ್ಣನ್ನೇ ದ್ವೇಷಿಸುವಂತಹ ಫ್ಯಾಮಿಲಿ ಇದಾಗಿರುತ್ತದೆ. ಈ ಎಲ್ಲಾ ಕ್ಯಾರೆಕ್ಟರ್‌ಗಳ ಮಧ್ಯೆ ಒಂದು ಅತ್ತಿಗೆ ಕ್ಯಾರೆಕ್ಟರ್ ಬರುತ್ತೆ ಅದು ತುಂಬಾ ಸಾಫ್ಟ್ ಆಗಿರುವ ಪಾತ್ರ, ಇಂತಹ ಮನೆಗೆ ಒಬ್ಬ ಉದಾರವಾಗಿ ರುವಂತಹ ಹೆಣ್ಣು ಹೋದಾಗ ಆ ಮನೆಯಲ್ಲಿ ಅವಳಿಗಾಗುವ ಮಾನಸಿಕ ತಲ್ಲಣ ಈ ಸದಸ್ಯರ ಮಧ್ಯೆ ಅವಳು ಅನುಭವಿಸುವ ಏಕಾಂಗಿತನದ ಚಿತ್ರಣ ಕೊಡಲಾಗಿದೆ.

ಸಂ: ಸರ್, ಕಥೆಯಲ್ಲಿ ಅತ್ತೆ ಸೊಸೆಯರ ಪಾತ್ರವನ್ನು ನೇತ್ಯಾತ್ರಾತ್ಮಕ ಧೋರಣೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಅತ್ತೆಯನ್ನು ಶೋಷಕಳಾಗಿ ಸೊಸೆಯನ್ನು ಶೋಷಿತಳಾಗಿ ಚಿತ್ರಿಸಿದ್ದಾರೆ. ನೀವು ಹೀಗೆ ಹೆಣ್ಣಿಗೆ ಹೆಣ್ಣೆ ಶತ್ರು ಎಂಬುದನ್ನು ಚಿತ್ರಿಸಿದ್ದೀರಲ್ಲಾ, ಯಾಕೆ ಸರ್? ಅದು ತಪ್ಪಲ್ಲವಾ

ನಿರ್ದೇಶಕರು: ನೋಡಿ, ನಾನು ಈ ಧಾರಾವಾಹಿಯಲ್ಲಿ ಸಮಾಜದಲ್ಲಿ ಇರುವುದನ್ನೇ ಧಾರಾವಾಹಿಯಲ್ಲಿ ಚಿತ್ರಿಸಿದ್ದೇನೆ. ನೀವು ಕಥೆಯನ್ನು ಕಥೆಯಾಗಿಯೇ ನೋಡಿ. ಎಲ್ಲಾ ಮನೆಯಲ್ಲಿ ಇರುವುದು ಅತ್ತೆ ಸೊಸೆ ಇಬ್ಬರೇ ಗಂಡ ಹೊರೆಗೆ ದುಡಿಯಲು ಹೋಗಿರುತ್ತಾನೆ.

ಆಗ ತನ್ನ ಮಗನೆಂದು ಅತ್ತೆ, ತನ್ನ ಗಂಡನೆಂದು ಸೊಸೆ ಜಗಳವಾಡುತ್ತಾರೆ. ಮತ್ತೆ ಒಂದಾಗುತ್ತಾರೆ. ಇದು ಪ್ರತಿಯೊಬ್ಬರ ಮನೆಯಲ್ಲೂ ಇದ್ದದ್ದೆ ಅಲ್ವಾ ಎಲ್ಲಿ ಇಲ್ಲಾ ಹೇಳಿ ನಾವು ಮಹಿಳಾ ಸಬಲೀಕರಣ ಅಂತಾ ಹೇಳತಿವಿ ಎಲ್ಲಿದೇ ಮಹಿಳಾ ಸಬಲೀಕರಣ (Last Week India Times) ತೆಗೆದು ನೋಡಿ, ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯುತ್ತಿರುವವರು ೮೮ ಪರ್ಸೆಂಟ್ ಇದ್ದಾರೆ. ೧೨ ಪರ್ಸೆಂಟ್ ಹೆಣ್ಣುಮಕ್ಕಳು ಅಭಿವೃದ್ಧಿ ಹೊಂದಿದ್ದಾರೆಂದು ಅದು ಹೇಳುತ್ತದೆ. ನಾವು ಎಲ್ಲೋ ಒಂದು ಕಡೆ ಕಲ್ಪನಾ ಚಾವ್ಲಾಳನ್ನು ಉದಾಹರಿಸಿ ಎಲ್ಲಾ ಮಹಿಳೆಯರು ಸಬಲರಾಗಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಮಹಿಳೆಯರು ಶಿಕ್ಷಣವನ್ನು ಪಡೆದು ಮುಂದೆ ಬರಲಿ ಗಂಡುಮಕ್ಕಳು ದುಡಿಯುವ ವಲಯದೊಳಗೆ ಅವರು ಬರಲಿ ಆವಾಗ ಸಬಲೀಕರಣವಾಗುತ್ತದೆ. ಎಲ್ಲ ಮಹಿಳೆಯರಿಗೂ ಶಿಕ್ಷಣ ಕೊಡಿಸಲಿ ಆವಾಗ ಸಬಲೀಕರಣವಾಗುತ್ತದೆ. ಎಲ್ಲ ಮಹಿಳೆಯರಿಗೂ ಶಿಕ್ಷಣ ಕೊಡಿಸಬೇಕಾದದ್ದು, ಸರಕಾರ ಮೊದಲು ಗ್ರಾಮೀಣ ಮಹಿಳೆಯರಿಗೆ ಶಿಕ್ಷಣ ಕೊಡಿಸಲಿ, ಆವಾಗ ಹೆಣ್ಣು ಮಕ್ಕಳ ಅಭಿವೃದ್ಧಿಯಾಗುತ್ತದೆ ಎಂದು ನಾನು ಹೇಳುತ್ತೇನೆ.

ಸಂ: ನೀವು ನಿರ್ದೇಶನಕ್ಕೆ ಬಂದು ಎಷ್ಟು ವರ್ಷವಾಯ್ತು ಸರ್?

ನಿರ್ದೇಶಕರು: ೧೯೯೨ರಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಹತ್ತು ವರ್ಷಇದ್ದೆ. ಆಮೇಲೆ ಡೈರೆಕ್ಟರ್ ಅದೇ ೨೦ ವರ್ಷದಿಂದ ಈ ಉದ್ಯಮದಲ್ಲಿದ್ದೇನೆ.

ಸಂ: ಇಲ್ಲಿಯವರೆಗೂ ಎಷ್ಟು ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರಾ?

ನಿರ್ದೇಶಕರು: ಕಾವ್ಯಾಂಜಲಿ ಮಾಡ್ದೆ, ಆಮೇಲೆ ಕಸ್ತೂರಿ ಬಂತು ಈಗ ಕೃಷ್ಣ ರುಕ್ಮಿಣಿ, ಅಮೃತವರ್ಷಿಣಿ ಮಾಡ್ತಾ ಇದ್ದೀನಿ.

ಸಂ: ಮುಂದಿನ ನಿಮ್ಮ ಪ್ರೊಜೆಕ್ಟಗಳೇನಾದರೂ ಇವೆಯಾ?

ನಿರ್ದೇಶಕರು: ತುಂಬಾ ಇವೇ ಮೆಡಮ್ ಮುಂದೆ ನೋಡಬೇಕು

ಸಂ: ನಿಮ್ಮ ವಿದ್ಯಾಭ್ಯಾಸದ ಕುರಿತು ಹೇಳ್ತಿರಾ?

ನಿರ್ದೇಶಕರು: ನಾನು ೧೯೯೦ರಲ್ಲೇ ಬೆಂಗಳೂರಿಗೆ ಬಂದೇ ನಾನು ಮೂಲತಃ ಮಧುಗಿರಿ ತಾಲ್ಲೂಕು ಗರಣಿಯವನು, ಕಾಲೇಜು ವಿದ್ಯಾಭ್ಯಾಸ ಬೆಂಗಳೂರಲ್ಲೇ ಆಯಿತು. ಮುಕ್ತ ವಿಶ್ವವಿದ್ಯಾಲಯ ಹಿಂದ ಡಿಗ್ರೀ ಮತ್ತು ಮಾಸ್ಟರ್ ಡಿಗ್ರೀ (ಸೊಷಿಯಾಲಜಿ) ಪಡೆದುಕೊಂಡೇ ನನ್ನ ಹವ್ಯಾಸ ಮತ್ತು ಆಸಕ್ತಿ ಮಾಧ್ಯಮವಾಗಿರುವುದರಿಂದ ಓದನ್ನು ಹೀಗೆ ಮಾಡಿಕೊಳ್ಳಬೇಕಾಯಿತು.

ಇಲ್ಲಿಯವರೆಗೂ ನಮ್ಮ ಪ್ರಶ್ನೆಗೆ ತಾಳ್ಮೆಯಿಂದ ಉತ್ತರಿಸಿದ ತಮಗೆ ಧನ್ಯವಾದಗಳು ಸರ್.

ಕೃಷ್ಣರುಕ್ಮಿಣಿ ಧಾರಾವಾಹಿಯಲ್ಲಿ ತಾಯವ್ವನ ಪಾತ್ರ ನಿರ್ವಹಿಸಿದ ರಂಗಭೂಮಿ ಕಲಾವಿದೆ ಶ್ರೀಮತಿ ಚಂದ್ರಕಲಾ ಮೋಹನ್ ಅವರೊಂದಿಗೆ ಸಂದರ್ಶನ

ಸಂ: ನಮಸ್ಕಾರ ಮೇಡಂ. ಇಂತಹ ಬಿಡುವಿಲ್ಲದ ಸಮಯದಲ್ಲಿ ನನಗೆ ತಮ್ಮೊಂದಿಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ತಂಬಾ ಥ್ಯಾಂಕ್ಯು ಮೇಡಂ.

ಶ್ರೀಮತಿ ಚ.ಮೋ: ನಮಸ್ಕಾರ ಪರ್ವಾಗಿಲ್ಲ, ನನಗೆ ಎಷ್ಟು ಗೊತ್ತಿದೆಯೋ ಅಷ್ಟನ್ನೂ ಹೇಳಕ್ಕೆ ಇಷ್ಟಪಡ್ತೀನಿ.

ಸಂ: ಮೇಡಂ ನೀವು ಈ ಧಾರಾವಾಹಿಗಳಲ್ಲಿ ನಟನೆಯನ್ನು ಯಾವಾಗಿನಿಂದ ಪ್ರಾರಂಭಿಸಿದಿರಿ ನಿಮ್ಮ ಹಿನ್ನೆಲೆ ಬಗ್ಗೆ ಸ್ವಲ್ಪ ತಿಳಿಸ್ತೀರಾ?

ಚಂ.ಮೋ: ಹಾಂ, ನಾನು ಬಾಲಕಲಾವಿದೆಯಾಗಿ ನಟನೆ ಪ್ರಾರಂಭಿಸಿದವಳು. ನನಗಾಗ ೧೦ ವರ್ಷ ಆವಾಗಲೇ ಬಣ್ಣ ಹಚ್ಚಿದ್ದು, ರಂಗಭೂಮಿ ಹಿನ್ನೆಲೆಯಲ್ಲಿ ಬಂದವಳು ನಾನು. ಕೆಲವೊಂದು ಸಿನಿಮಾಗಳಲ್ಲಿ ಮಾಡಿದ್ದೀನಿ, ಈಗ ಧಾರಾವಾಹಿಗಳಲ್ಲಿ ಮಾಡ್ತಾ ಇದ್ದೀನಿ. ಈ ಧಾರಾವಾಹಿಗಳಿಗೆ ಬಂದು ಹದಿನಾಲ್ಕು, ಹದಿನೈದು ವರ್ಷವಾಯ್ತು.

ಸಂ: ನಿಮಗೆ ಹೆಚ್ಚು ಇಷ್ಟವಾಗಿರುವ ಪಾತ್ರಗಳು ಮತ್ತು ಹೆಚ್ಚು ಹೆಸರು ತಂದು ಕೊಟ್ಟಂತಹ ಧಾರಾವಾಹಿಗಳು ಯಾವುವು?

ಚಂ.ಮೋ: ಹಾಂ. ಒಬ್ಬ ಕಲಾವಿದ/ದೆಗೆ ಎಲ್ಲವೂ ಇಷ್ಟಾನೇ, ಯಾವುದೇ ಪಾತ್ರಕೊಟ್ಟರು ಮಾಡ್ತೀನಿ, ಕಸಗುಡಿಸುವ ಕ್ಯಾರೆಕ್ಟರ್ ಕೊಟ್ಟರು, ರಾಣಿ ಕ್ಯಾರೆಕ್ಟರ್ ಕೊಟ್ಟರು ಕಣ್ಣಿಗೊತ್ತಿಕೊಂಡು ಮಾಡ್ತೀನಿ, ಅದು ಇಷ್ಟ ಇದು ಇಷ್ಟ ಅಂತ ಹೇಳಲ್ಲಾ ನಂಗೆ ತುಂಬಾ ಹೆಸರು ತಂದು ಕೊಟ್ಟಂತಹ ಪಾತ್ರಗಳೆಂದರೇ ಮೂಡಲಮನೆ ರಂಗೋಲಿ, ಗೋಧೂಳಿ, ತಾಯಿ, ಕುಸುಮಾಂಜಲಿ, ಹೆಸರು ಕೊಟ್ಟ ಸಿರೀಯಲಗಳು, ತುಂಬಾ ದೊಡ್ಡ ಲಿಸ್ಟೇ ಇದೆ. ಆಮೇಲೆ ಈಗ ಕೃಷ್ಣ ರುಕ್ಮಿಣಿ, ಆಮೇಲೆ ಮತ್ತೆ ಬರುವನು ಚಂದಿರ ಅಂತ, ಆಮೇಲೆ ಹೊಂಬಾಳೆ ಅಂತ, ನಾನು ಮಾಡಿರುವ ಎಲ್ಲಾ ಸಿರಿಯಲಗಳೆಲ್ಲಾ ಹೆಸರು ಕೊಟ್ಟಿರುವಂತವೇ ಏಕೆಂದರೆ, ನಾವೆಲ್ಲಾ ಅಚ್ಚುಕಟ್ಟಾಗಿ ಮಾಡ್ತಿವಲ್ಲಾ ಹಾಗಾಗಿ ಅವು ಹೆಸರು ಕೊಡುತ್ತವೆ ಗ್ಯಾರೆಂಟಿ ನಮ್ಮ ಶ್ರಮ ಇದ್ದರೆ ಅದಕ್ಕೆ ಫಲ ಸಿಕ್ಕೆ ಸಿಗುತ್ತಲ್ವಾ, ಈಗ ಮಡದಿ ಬರತ್ತಾ ಇದೆ. ತುಂಬಾ ಸಿಂಪಲ್ಲಾಗಿರೋ ಕ್ಯಾರೆಕ್ಟರ್, ವಿತೌಟ ಮೇಕಪ್ಪು, ಆ ತರಹದ ಪಾತ್ರಬೇಕು, ಅಂತ ಕಾದು ಸುಮಾರು ಪ್ರಾಜೆಕ್ಟ್ ಬಿಟ್ಟೆ, ಬಂದಿರುವ ಪ್ರಾಜೆಕ್ಟ್‌ಗಳಲ್ಲಾ ನಗೆಟಿವ್ ಕ್ಯಾರೆಕ್ಟರ್‌ಗಳೇ ಬರುತ್ತಿದ್ದವು ಹಾಗಾಗಿ ನಾನು ಅವನ್ನೆಲ್ಲಾ ಬಿಟ್ಟು ಕಲಾವಿದರು ಬಂದೆ ಪಾತ್ರಕ್ಕೆ ಬ್ರ್ಯಾಂಡ್ ಆಗಬಾರದಲ್ವಾ

ಸಂ: ಕೃಷ್ಣ ರುಕ್ಮಿಣಿಯಲ್ಲಿ ನಿಮ್ಮದು ಅತ್ತೆಯ ಪಾತ್ರ, ತಾಯವ್ವಳಾಗಿ ನೀವು ನಿಮ್ಮದಲ್ಲಾ ಪಾತ್ರವನ್ನು ಹೇಗೆ ನಿಭಾಯಿಸ್ತೀರಾ?

ಚಂ.ಮೋ: ಕಲಾವಿದರು ಅಂದ ಮೇಲೆ ನಮ್ಮದಲ್ಲದೇ ಇರುವುದನ್ನು ಕಣ್ಣಿಗೆ ಒತ್ತಿಕೊಂಡು ಮಾಡಿದಾಗಲೇ ನಾವು ಎಲ್ಲರಿಗೂ ರಿಚ್ ಆಗಕ್ಕೆ ಸಾಧ್ಯ ಅಲ್ವಾ, ಚಂದ್ರಕಲಾ ಆಗಿ

ನಿಂತುಕೊಂಡರೇ ನಾವು ಎಲ್ಲರಿಗೂ ರಿಚ್ ಆಗೋಕೆ ಸಾಧ್ಯ ಇಲ್ಲಾ ಚಂದ್ರಕಲಾನೇ ಬೇರೆ ತಾಯವ್ವನೇ ಬೇರೆ.

ಸಂ: ಈಗಿನ ಧಾರಾವಾಹಿಗಳಲ್ಲಿ ಕೆಲವೊಂದು ಧಾರಾವಾಹಿಗಳನ್ನು ಹೊರತುಪಡಿಸಿದರೆ ಉಳಿದಂತಹ ಧಾರಾವಾಹಿಗಳು ಹೆಣ್ಣಿನ ಪಾತ್ರಗಳನ್ನು ಕೌಟುಂಬಿಕ ಪಾತ್ರಗಳಿಗೆ ಸೀಮಿತಗೊಳಿಸಿ ತೋರಿಸುವುದೇ ಹೆಚ್ಚು ಇದಕ್ಕೆ ತಮ್ಮ ಅಭಿಪ್ರಾಯ ಏನು?

ಚಂ.ಮೋ: ಇಲ್ಲ ಇಲ್ಲ, ಹಂಗ ತೋರ್ಸಬಾರದು, ಹೆಣ್ಣು ಎಲ್ಲವೂ ನಿಭಾಯಿಸುತ್ತಾಳೆ. ಎಲ್ಲವೂ ನಿಭಾಯಿಸುವಾಗ, ಅವಳಿಗೆ ಸಮಾನವಾಗಿ ಕೊಡಬೇಕು. ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿ ಗಂಡನಿಗೆ ಅಡಿಗೆ ಮಾಡಹಾಕು, ಅತ್ತೆ ಶಿಕ್ಷೆ ಕೊಡವುದನ್ನು ಅನುಭವಿಸು, ಮಕ್ಕಳನ್ನು ಸ್ಕೂಲ್‌ಗೆ ಕಳಿಸು, ಓದಿಸು ಬರೀ ಇದಷ್ಟೇ ಅಲ್ಲ, ನೀವು ನೋಡಿ, ಹೊರಗಡೆ ಕೆಲಸ, ಒಳಗಡೆ ಕೆಲಸಮಾಡಿ ಎಲ್ಲನಾ ನೋಡ್ಕೊತಾಳೆ ಹಂಗೆ ನೋಡಬೇಕು ಆದರೆ ನೋಡಲ್ಲಾ, ಯಾಕೆ ನೋಡಲ್ಲಾ ಅಂದರೆ ಗಂಡಸರಿಗೆ ಎಲ್ಲೋ ಒಂದು ಕಡೆ ನಾವು ಹಿಂದೆ ಹಾಕ್ತೀವಿ ಅನ್ನೊದಿರುತ್ತೆ ಹಂಗಾಗಿ ಹೆಣ್ಣನ್ನು ಕೆಲವರು ಮೂಲೆ ಗುಂಪು ಮಾಡ್ತಾರೆ; ಕೆಲವರು ಬೆಳೆಯಕ್ಕೆ ಬಿಡಲ್ಲಾ ಅಷ್ಟೇ ಹೆಣ್ಣು ಮನೆಗಷ್ಟೇ ಸೀಮಿತವಾಗಿ ಯಾಕೆ ಇರಬೇಕು? ಹೆಣ್ಣಿಗೂ ಎಷ್ಟೊಂದು ಆಸೆ ಇರುತ್ತೆ, ನಾನೇನಾದರೂ ಸಾಧನೆ ಮಾಡಬೇಕು ಅಂತ ಇರುತ್ತೆ. ಈಗ ಕೆಳದಿ ಚೆನ್ನಮ್ಮ ಕಥೆಗಳೆಲ್ಲಾ ಬರ್ತಿದೆಯಲ್ಲಾ ನೋಡ್ತಿರಾ, ಒಂದು ಹೆಣ್ಣು ಕುದುರೆ ಮೇಲೆ ಕೂತು ಕುದುರೆ ಸವಾರಿ ಅಂತ. ಅದು, ಇದು, ಎಲ್ಲಾನು ಮಾಡ್ತಾಳೆ. ಅಂದರೆ ಅವಳಿಗೆ ಯೋಗ್ಯತೆ ಇದೆ ಅಂತಾ ತಾನೆ ಅರ್ಥ. ಅದನ್ನು ಮಾಡ್ಸಬೇಕು ಮಾಡಕ್ಕೆ ಬಿಡಬೇಕು ಕೆಲವು ಗಂಡಸರು ಮಾಡಕ್ಕೆ ಬಿಡಲ್ಲಾ ಯಾಕೆಂದರೆ ನಮ್ಮನ್ನು ತುಳಿದು ಬಿಡ್ತಾರೆ. ಅವರು ಮುಂದೆ ಹೋಗ್ತಾರೆ. ನಮ್ಮನ್ನು ಮೆಟ್ಟಿ ನಿಲ್ಲುತ್ತಾರೆ. ಅನ್ನೋ ಭಯ ಅವರಿಗೆ, ಮೀಸೆ ಹೊತ್ತ ಗಂಡಸರಲ್ವಾ ಅವರೇ ಮೇನ್‌ಲ್ಲಿ ಎಲ್ಲದಕ್ಕೆ ಮುಂದೆ ಇರೋದು ಹೆಂಗಸರು ಕೆಲವೇ ಕೆಲವು ವಿಷಯಗಳಲ್ಲಿ ಗಂಡು ಹೆಣ್ಣಾಗಕ್ಕಾಗಲ್ಲ, ಹೆಣ್ಣು ಗಂಡಾಗಕ್ಕಾಗಲ್ಲ. ಆದರೆ ಹೆಣ್ಣು ತುಂಬಾ ಧೈರ್ಯವಂತೆ, ಅದನ್ನೇ ತೋರ್ಸಬೇಕು ಅಂತ ಅಂದುಕೋತಿನಿ. ನಾ ಯಾಕೆ ಈ ಮಾತು ಹೇಳ್ತೀನಿ ಅಂದರೆ, ನನ್ನ ಮದುವೆಯಾದಾಗ ನನಗೆ ೧೩ ವರ್ಷ ನನ್ನ ಜೀವನದಲ್ಲೇ ಸಾಕಷ್ಟು ಘಟನೆಗಳಾಗಿರುವುದರಿಂದ ಹೇಳ್ತಿದ್ದೀನಿ, ನನಗೆ ಮೊದಲನೆ ಮಗುವಿಗೆ ೮ ಮುಕ್ಕಾಲು ತಿಂಗಳು ಬಸರಿ ನಾನು ಡ್ರಾಮಾ ಮಾಡ್ತಿದ್ದೆ ಊರಿಂದ ಊರಿಗೆ ಹೋಗಿ ಹಳ್ಳಿಗಳ ಸೈಡ್ ಹೋಗಿ ಡ್ರಾಮಾ ಮಾಡ್ತಿದ್ದೆ. ೧೦ ಘಂಟೆಗೆ ನಾಟಕಾ ಶುರು ಆದರೆ ಬೆಳಿಗ್ಗೆ ಐದು–ಆರು ಘಂಟೆಗೆ ನಾಟಕಾ ಬಿಡ್ತಿತ್ತು. ಅಲ್ಲಿಯವರೆಗೂ ಕಂಟಿನ್ಯೂವಸ್ ಆಗಿ ಡೈಲಾಗ್ಸ್‌ಗಳು ಡ್ಯಾನ್ಸ್‌ಗಳು ಎಲ್ಲವೂ ಮಾಡ್ತಿದ್ದೆ, ಅದು ಎಲ್ಲೂ ಗ್ಯಾಪ್ ಇಲ್ದಂಗೆ, ಮಾಡ್ತಾ ಇದ್ದೀವಿ. ನನ್ನ ಎರಡುನೇ ಬಸರಿನಲ್ಲಿ ಹಾಗೆ ಗ್ಯಾಪ್ ಇಲ್ಲದೇ ಹಾಗೆ ನಾಟಕಾ ಮಾಡಿದ್ದೆ.

ಸಂ: ನಿಮ್ಮ ಮನೆಯಲ್ಲಿ ನಾಟಕ ಮಾಡಲು ಅನುಮತಿ ಇತ್ತಾ ಮೇಡಮ್? ನಿಮ್ಮ ಮನೆಯವರ ಸಹಕಾರ ಹೇಗಿತ್ತು?

ಚಂ.ಮೋ: ನಾವೆಲ್ಲಾ ಆರ್ಟಿಸ್ಟ್‌ಗಳೇ, ನಮ್ಮದು ಗುಬ್ಬಿ ವೀರಣ್ಣ ಅವರ ಫ್ಯಾಮಿಲಿ ಚಿತ್ರನಟಿ ಶೃತಿ ಅವರ ಚಿಕ್ಕಪ್ಪ ನಮ್ಮೆಜಮಾನ್ರು ಹಾಗಾಗಿ ಅಂಡರ್ ಸ್ಟ್ಯಾಂಡಿಗೆ ಚೆನ್ನಾಗಿದೆ. ಹಂಗೇನು ತೊಂದರೆ ಇಲ್ಲ ಯಾವುದಕ್ಕೂ ರಿಸ್ಟ್ರಿಕ್ಷನ್ ಇಲ್ಲ.

ಸಂ: ಮೇಡಮ್ ನೀವೊಬ್ಬ ಕಲಾವಿದೆಯಾಗಿದ್ದೀರಾ, ಮುಂದೆ ನೀವೊಬ್ಬ ನಿರ್ದೇಶಕಿಯಾದರೆ ಅಲ್ಲಿ ಹೆಣ್ಣಿನ ಪಾತ್ರವನ್ನು ಹೇಗೆ ಕಟ್ಟಿಕೊಡಲು ಪ್ರಯತ್ನ ಮಾಡ್ತೀರಾ?

ಚಂ.ಮೋ: ನೋಡಿ, ನಾನು ಈ ಕಲಾವಿದೆಯಾಗಿದ್ದಾಗ ನಮಗೆ ಯಾವ ಪಾತ್ರ ಕೊಟ್ಟರು ಕಣ್ಣಿಗೊತ್ತಿಕೊಂಡು ಮಾಡ್ತೀನಿ, ನೀವು ಹೇಳ್ದಂಗೆ ಮಹಿಳಾ ನಿರ್ದೇಶಕಿಯೇನಾದರೂ ಆದರೆ ಅಲ್ಲಿ ಹೆಣ್ಣಿನ ಪಾತ್ರವನ್ನು ಹೆಚ್ಚಾಗಿ ಪ್ರಧಾನಧಾರೆಯಲ್ಲಿ ಬರುವಂತಹ ಚಿತ್ರಣ ಕೊಡಲು ಇಷ್ಟಪಡ್ತೀನಿ ಯಾವುದೇ ಪಾತ್ರ ಆಗಿರಬಹುದು. ಅತ್ತೆ, ಮಗಳು, ಸೊಸೆ, ಅಜ್ಜಿ ಯಾವುದೇ ಇರಲಿ ಅಲ್ಲಿ ಹೆಣ್ಣಿಗೆ ಹೆಚ್ಚಿನ ಮಹತ್ವ ಕೊಟ್ಟು ಮಾಡ್ತೀನಿ, ಯಾಕೆಂದರೆ ಹೆಣ್ಣಿಗೆ ಆ ಧೈರ್ಯ, ಶಕ್ತಿ ತಾಳ್ಮೆ ಇರೋದು, ಯಾವುದೇ ಸಂದರ್ಭ ಬಂದರೂ ಅದನ್ನು ಗಟ್ಟಿಯಾಗಿ ಎದುರಿಸುತ್ತಾಳೆ. ಗಂಡಮ್ಮಕ್ಳು ಹೀಗೆ ಇರಲ್ಲಾ ಕೆಲವೊಂದು ಕಡೆ ಸೋಗುಹೋಗಿ ಬಿಡುತ್ತಾರೆ. ನಾಂಗಾಗಿ ಹೇಳೊದು ಹೆಣ್ಣು ಮಕ್ಕಳನ್ನು ಸ್ಟ್ರಾಂಗ್ ಆಗಿ ತೋರ್ಸಬೇಕು.

ಸಂ: ಮೇಡಮ್ ಒಟ್ಟಾರೆಯಾಗಿ ಧಾರಾವಾಹಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಚಂ.ಮೋ: ಸೀರಿಯಲ್‌ಗಳು ಇವತ್ತು ತುಂಬಾ ಜನಕ್ಕೆ ಒಳ್ಳೆಯದಾಗಿ, ಅಷ್ಟೆ ಕೆಟ್ಟದ್ದು ಆಗಿದೆ. ನಾವು ಕೆಟ್ಟದನ್ನು ತಗೊಂಡರೇ ಕೆಟ್ಟದಾಗುತ್ತೆ, ಯಾಕೆಂದರೆ ಗಯ್ಯಾಳಿ ಕ್ಯಾರೆಕ್ಟರ್ಗಳು ನೋಡಿ ಕೆಲವರು ಅದೇ ತರಹ ನೋಡ್ಕೋತಾರಲ್ವಾ, ಆ ತರಹದ ಜನಾನು ಇರ್ತಾರೆ, ಆಲ್‌ಮೋಸ್ಟ್ ಇದ್ದೇ ಇರತಾರೆ. ಕೆಲವರು ಏನ ಮಾಡ್ತಾರೆ. ಅಂದರೆ ಸೀರಿಯು ನೋಡಿ ಮತ್ತಷ್ಟು ನಕಾರಾತ್ಮಕತೆಯನ್ನು ಬೆಳೆಸಿಕೊಳ್ಳುತ್ತಾರೆ. ಅದು ತಪ್ಪು ನಾವ್ ಕಲಾವಿದರು ಯಾವುದೇ ಪಾತ್ರ ಕೊಟ್ಟರು ಅದನ್ನು ತುಂಬಾ ಇನ್‌ವಾಲ್ವ ಆಗಿ ಆಕ್ಟ್ ಮಾಡಿರುತ್ತೇವೆ. ಅದನ್ನು ನಾವು ನಿಜ ಜೀವನಕ್ಕೆ ಅಳವಡಿಸಿಕೊಂಡು ನಡೆದುಕೊಳ್ಳಕ್ಕಾಗುತ್ತಾ, ಉದಾ: ಈಗ ಯಾವುದೋ ಫಿಲ್ಮ ಬಂತಲ್ಲಾ ದಂಡುಪಾಳ್ಯಾ ಅಂತ, ಆ ಫಿಲ್ಮ ನೋಡ್ಕೊಂಡು ಕೆಲವೊಂದು ಹುಡುಗರು ಅದೇ ತರಹ ನೀರುಕಳ್ಕೊಂಡು ಮನೆಗೆ ಹೋಗೊದು, ಹೆಂಗಸರನ್ನು ಕೊಲೆ ಮಾಡೊದನ್ನು ತೋರವಸ್ತೀದ್ದಾರಲ್ಲಾ. ಈಗ ಆ ತರಹ ಸುಮಾರು ಸಿರಿಯಲ್‌ಗಳಲ್ಲೂ ನಾವು ಕೇಳಿದೀವಿ. ನಿಮ್ಮ ಸೀರಿಯಲ್ ನೋಡಿ ನಮ್ಮನೇಲಿ ನಮ್ಮತ್ತೆ ಜಗಳ ಮಾಡ್ತಾಳೆ, ನೀನು ಹಂಗೇನೇ ಆ ಅತ್ತೆನೆ ಕರೆಕ್ಟು ಅಂತ ಜಗಳ ಮಾಡ್ತಾರೆ ಅಂತ ಹೇಳಿದ್ದಾರೆ, ಅದು ತಪ್ಪು ಅಂತ ಹೇಳಕ್ಕೆ ಇಷ್ಟಪಡ್ತೀನಿ, ನಮ್ಮ ಕಲಾವಿದರಿಗೆ ನಿಜ ಜೀವನದಲ್ಲಿ ಎಷ್ಟೋ ಕಷ್ಟಗಳಿವೆ. ನಾವು ಯ್ಯಾಕ್ಟ್ ಮಾಡಬೇಕಾದಾಗ ಆರ್ಟಿಫಿಷಿಯಲ್ ಒಡವೆಗಳನ್ನು ತಂದು ಹಾಕ್ಕೊಳ್ಳತ್ತೀವಿ. ಯ್ಯಾಕ್ಟ್ ಮಾಡ್ತೀವಿ. ಹಂಗೆ ನಾವು ನಿಜ ಜೀವನದಲ್ಲಿ ಮಾಡಕ್ಕಾಗಲ್ಲಾ ಅಲ್ವಾ

ನಾವು ನೀನಾ ನಾನಾ ಕಾರ್ಯಕ್ರಮಕ್ಕೆ ಹೋದಾಗಲೂ ಇದೇ ವಿಷಯಗಳೇ ಸೀರಿಯಲ್ಲು ನೋಡಿ ತುಂಬಾ ಜನ ಕೆಟ್ಟು ಹೋಗಿದ್ದಾರೆ ಅಂತ. ಹಾಗಾದರೆ ಸಿನ್ಮಾ ನೋಡಿ ಎಷ್ಟು ಜನ ಕೆಟ್ಟಿಲ್ಲಾ ಚೆಲುವಿನ ಚಿತ್ತಾರ ಸಿನ್ಮಾ ಬಂದಾಗ ಹತ್ತತ್ತನೇ ಕ್ಲಾಸ್ ಹುಡುಗರು, ಹುಡುಗಿರು ಲವ್ ಮಾಡಿ ಓಡಿ ಹೋಗಿಬಿಟ್ಟರು. ಸ್ಕೂಲ ಡ್ರೈಸಲ್ಲೇ ಹೋಗಿಬಿಟ್ಟರು. ಎಷ್ಟೋ ಜನ ಅದೂ ಪಿಚ್ಚರ್ ಮೇಲೆ ತಪ್ಪು ಹಾಕಿದರೂ, ಆದರೆ ನಾವು ಪಿಚ್ಚರ್ ಮೇಲೆ ಹಾಕೋದಲ್ಲಾ ಯಾವುದನ್ನೇ ಆಗಲಿ ಒಳ್ಳೆಯದನ್ನು ತಗೋಬೇಕು. ನಿಜ ಜೀವನವೇ ಬೇರೆ, ಈ ಬಣ್ಣದ ಜೀವನವೇ ಬೇರೆ, ಜಗತ್ತಿನಲ್ಲಿ ನಡೆಯುವುದನ್ನು ತೋರಿಸ್ತೀವಿ ಅಷ್ಟೇ. ಜಗತ್ತಿನಲ್ಲಿ ಒಳ್ಳೆ ಅತ್ತೇನೂ ಇರ್ತಾಳೆ. ಕೆಟ್ಟ ಅತ್ತೆನೂ ಇರ್ತಾಳೆ. ಒಳ್ಳೆ ಸೊಸೆನೂ ಇರುತ್ತಾಳೆ. ಕೆಟ್ಟ ಸೊಸೆನೂ ಇರತ್ತಾಳೆ. ಒಳ್ಳೆ ಮಕ್ಕು ಇರ್ತಾರೆ. ಕೆಟ್ಟ ಮಕ್ಕು ಇರ್ತಾರೆ. ಅಲ್ವಾ ಹಂಗಾಗಿ ಧಾರಾವಾಹಿಗಳಲ್ಲಾಗಲಿ, ಸಿನ್ಮಾಗಳಲ್ಲಾಗಲಿ ಒಳ್ಳೆಯದನ್ನು ತೆಗೆದುಕೊಂಡು ಒಳ್ಳೆ ಜೀವನ ಆರಿಸಿಕೊಳ್ಳಬೇಕೆಂದು ಹೇಳಲಿಕ್ಕೆ ಇಷ್ಟಪಡ್ತೀನಿ. ಯಾವುದೇ ಆದರೂ ವಿಕ್ಷಕರು ಅದನ್ನು ಜಾಣತನದಿಂದ ಆಯ್ಕೆ ಮಾಡಿಕೊಂಡು ಒಳ್ಳೆ ಜೀವನ ರೂಪಿಸಿಕೊಬೇಕು ಅಂತ ಅಂದಕೋತಿನಿ...

ಸಂ: ಇಲ್ಲಿವರೆಗೂ ಬಿಡುವಿಲ್ಲದ ಸಮಯದಲ್ಲಿ ಬಿಡುವು ಮಾಡಿಕೊಂಡು ತಮ್ಮ ಅನುಭವ ಮತ್ತು ಅನಿಸಿಕೆಗಳನ್ನು ಹಂಚಿಕೊಂಡಿದ್ದಕ್ಕೆ ಧನ್ಯವಾದಗಳೂ ಮೇಡಂ.

ಚಂ.ಮೋ: ಥ್ಯಾಂಕ್ಯು.

ಇದು ಚಂದ್ರಕಲಾ ಮೋಹನ ಕೃಷ್ಣ ರುಕ್ಮಿಣಿಯ ಗಯ್ಯಾಳಿ ಪಾತ್ರ ತಾಯವ್ವನ ಪಾತ್ರ ಮಾಡಿರುವಂತಹ ನಟಿಯೊಂದಿಗೆ ದಿನಾಂಕ: ೨೨-೮-೧೨ರಂದು ಮಾಡಿದ ಸಂದರ್ಶನವಾಗಿದೆ.

ಚಂದ್ರಕಲಾ ಮೋಹನ ಅವರು ಒಟ್ಟಾರೆಯಾಗಿ ಧಾರಾವಾಹಿಗಳಲ್ಲಿ ತೋರಿಸುವ ಜೀವನಕ್ಕೂ ವಾಸ್ತವ ಜೀವನಕ್ಕೂ ತುಂಬಾ ವ್ಯತ್ಯಾಸ ಇದ್ದು ನಾವು ಒಳ್ಳೆದನ್ನು ತೋರ್ಸ್ತೀವಿ, ಕೆಟ್ಟದನ್ನು ಅದರಲ್ಲಿ ಇರ್ತದೆ ಹಂಗಂತ ಒಳ್ಳೆಯದನ್ನು ಬಿಟ್ಟು ಕೆಟ್ಟದನ್ನ ಆಯ್ಕೆ ಮಾಡಿಕೊಳ್ಳಬಾರದು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹೆಣ್ಣಿಗೆ ಎಲ್ಲ ಕಷ್ಟಗಳನ್ನು ಧೈರ್ಯವಾಗಿ ಎದುರಿಸುವ ಶಕ್ತಿ ಸಾಮರ್ಥ್ಯ ಎರಡು ಇದೆ. ಆದರೆ ಪುರುಷರು ಅವಳನ್ನು ಮುಂದೆ ಬರಲಾರದ ಹಾಗೆ ಮೂಲೆಗುಂಪು ಮಾಡ್ತಾರೆ ಎಂದು ಅಭಿಪ್ರಾಯಪಡುತ್ತಿದ್ದಾರೆ.

ನಾವು ಸಮಾಜದಲ್ಲಿ ಪ್ರತಿನಿತ್ಯದ ಬದುಕಿನಲ್ಲಿ ಘಟಿಸುವ ಘಟನೆಗಳ ಕುರಿತ ಚರ್ಚೆ, ಚಿಂತನಮಂಥನ ಕೈಗೊಳ್ಳುವುಬನ್ನು ಅಲ್ಲಲ್ಲಿ ನಡೆಯುವುದನ್ನು ಕಾಣುತ್ತೇವೆ. ಇದು ದೂರದರ್ಶನದ ಅನೇಕ ಸುದ್ದಿವಾಹಿನಿಗಳಲ್ಲಿ ಈ ರೀತಿಯಾದ ಚಿಂತನ, ಮಂಥನಗಳಾಗುವುದನ್ನು ಕಾಣಬಹುದು. ಕೆಲವು ಸಂದರ್ಭಗಳಲ್ಲಿ ವಿಕ್ಷಕರು ಯಾವ ಬಗೆಯ ಯಾವುದೇ ಒಷದು ಕಾರ್ಯಕ್ರಮವನ್ನು ವಿಕ್ಷೀಸುವ ವಿಕ್ಷಕರು, ಆ ಕಾರ್ಯಕ್ರಮದ ಕುರಿತು ತಾವು ಹೊಂದಿರುವ ದೃಷ್ಟಿಕೋನದ ಬಗ್ಗೆ ಚರ್ಚೆಗಳಾಗುವುದಿಲ್ಲ. ಬಹುತೇಕವಾಗಿ ಚಿತ್ರಿತವಾಗುವ ಅಥವಾ ಪ್ರಸಾರವಾಗುವ ಕಾರ್ಯಕ್ರಗಳು. ಮುಖ್ಯವಾಗಿ ಸಮಾಜದಲ್ಲಿರುವ ಚಿತ್ರಣ ಕೊಡಲಾಗುತ್ತಿದೆ ಎಂಬ ವ್ಯಾಖ್ಯೆಯನ್ನು

ಹೇಳುತ್ತಾ, ವೀಕ್ಷಕರ ದಾರಿ ತಪ್ಪಿಸುವ ಕಾರ್ಯಗಳೇ ಆಗುತ್ತಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಹೀಗೆ ಪ್ರಸಾರವಾಗುವಂತಹ ಕಾರ್ಯಕ್ರಮಗಳು. ಅದು ರಿಯಾಲಿಟಿ ಶೋಗಳಾಗಿರಬಹುದು, ಧಾರಾವಾಹಿಗಳಾಗಿರಬಹುದು. ವೀಕ್ಷಕರ ಮನಸ್ಸಿನ ಮೇಲೆ ಬೀರುವ ಪ್ರಭಾವ ಎಂತಹದು ಎನ್ನುವ ಪ್ರಶ್ನೆಯೊಂದಿಗೆ ಆಯ್ದುಕೊಂಡ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಧಾರಾವಾಹಿಗಳು ಕಟ್ಟಿಕೊಡುವ ಮಹಿಳಾ ಪಾತ್ರಗಳ ಪ್ರತಿನಿಧೀಕರಣವನ್ನು ಅರ್ಥೈಸಿಕೊಳ್ಳಲು ತೊಡಗಿದಾಗ, ಮಹಿಳೆಯ ವಾಸ್ತವ ಬದುಕಿಗೂ, ಧಾರಾವಾಹಿಯಲ್ಲಿ ಕಟ್ಟಿಕೊಡಲಾಗುವ ಮಹಿಳಾ ಪಾತ್ರಗಳಿಗೂ, ಯಾವ ರೀತಿಯಾದ ಸಂಬಂಧ ಹೊಂದಿದೆ ಎಂಬ ಉದ್ದೇಶಕ್ಕೆ ಮಿಶ್ರ ಪ್ರತಿಕ್ರಿಯೆ ದೊರೆತಿದೆ. ಕ್ಷೇತ್ರಕಾರ್ಯದ ಸಮಯದಲ್ಲಿ, ಮಾಹಿತಿಗಾಗಿ ಮೂರು ತಲೆಮಾರಿನ ಮಹಿಳೆಯರು ನೋಡುವ ದೃಷ್ಟಿಕೋನವನ್ನು ಅರ್ಥೈಸಿಕೊಳ್ಳಲಾಯಿತು. ಸಂದರ್ಶಿಸಿದ ಆಯ್ದ ಭಾಗಗಳಲ್ಲಿ ಐದು ಸಂದರ್ಶನದ ಭಾಗಗಳನ್ನು ವಿವರಿಸಿದ್ದೇನೆ. ಮೊದಲನೆ ತಲೆಮಾರಿನ ಅಜ್ಜಿಯಂದಿರಿಗೆ, ದೂರದರ್ಶನದಲ್ಲಿ ಪ್ರಸಾರವಾಗುವ ಧಾರಾವಾಹಿಗಳಲ್ಲಿ ಮಹಿಳೆಯರ ಪಾತ್ರವನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾರೆ. ಸಾಂಪ್ರದಾಯಿಕ ಪಾತ್ರದಲ್ಲೇ ಹೆಣ್ಣಿನ ನಿರ್ವಚನವಾಗಬೇಕೆಂದು ಅಭಿಪ್ರಾಯ ಪಡುತ್ತಾರೆ. ಇದು ಅವರು ಆಧುನಿಕತೆಯಲ್ಲಿ ಚಿತ್ರಿತವಾಗುವ ಮಹಿಳಾ ಪಾತ್ರಗಳು. ಉದಾ: ಓದು, ಬರಹ ಗೊತ್ತಿರುವ ಉದ್ಯೋಗಿಯಾಗಿರುವ ಮಹಿಳೆಯರ ಚಿತ್ರಣವನ್ನು ಒಪ್ಪಿಕೊಳ್ಳದೇ ಹೋಗುತ್ತಾರೆ. ಅಂತಿಮವಾಗಿ ಹೆಣ್ಣಿನ ಅಸ್ತಿತ್ವ ವ್ಯಕ್ತಿತ್ವ ಗುರುತಾಗುವುದು ಕೌಟುಂಬಿಕ ಪಾತ್ರದಲ್ಲೇ ಎನ್ನುತ್ತಾರೆ. ಅವರು ಹೊಂದಿರುವ ಈ ಭಾವದಿಂದ ಸ್ಪಷ್ಟವಾದ ಮಾಹಿತಿ ಸಿಗುವುದೆಂದರೆ, ಹೆಣ್ಣು ಹೇಗೆ ಪಿತೃಪ್ರಧಾನತೆಯ ರೂಪಿಸಿ, ಸ್ಥಾಪಿಸಿದ ಈ ಪಾತ್ರಗಳನ್ನು ಒಪ್ಪಿಕೊಂಡಿರುವುದು. ಅವರು ತಮ್ಮ ಯೋಚನಾ ಕ್ರಮವನ್ನು ಪುರುಷನ ಯೋಚನಾ ಕ್ರಮದಿಂದಲೇ ಯೋಚಿಸುತ್ತಾರೆ. ಸ್ವತಂತ್ರವಾಗಿ ಯೋಚಿಸುವ ಪ್ರಯತ್ನದಲ್ಲೂ ವಿಫಲರಾಗುತ್ತಾರೆ. ಇದಕ್ಕೆ ಮೂಲಕಾರಣ ಅವರಲ್ಲಿ ಮನೆ ಮಾಡಿರುವ ಪುರುಷನಿಷ್ಠ ಚಿಂತನಾಕ್ರಮ. ಇದೇ ಚಿಂತನಾಕ್ರಮವನ್ನು ನಯವಾಗಿ ತಿರಸ್ಕರಿಸುವ, ಇರುವ ವ್ಯವಸ್ಥೆಗೆ ಬದಲಿ ವ್ಯವಸ್ಥೆಯನ್ನು ಬಯಸುವ ಚಿಂತನೆಯನ್ನು ಎರಡು ಮತ್ತು ಮೂರನೇ ತಲೆಮಾರಿನವರಲ್ಲಿ ಕಾಣಬಹುದು. ಇವರ ಚಿಂತನಾಕ್ರಮದಲ್ಲಿ ಸಮಾನತೆ ಇದೆ. ಲಿಂಗತಾರತಮ್ಯವಿಲ್ಲದಿರುವುದನ್ನು ಕಾಣುತ್ತೇವೆ. ಧಾರಾವಾಹಿಗಳಲ್ಲಿ ಕಟ್ಟಿಕೊಡುವ ಮಹಿಳಾ ಪಾತ್ರಗಳನ್ನು ತಿರಸ್ಕರಿಸುತ್ತಾರೆ. ಹೆಣ್ಣು ದೇಶವನ್ನಾಳುವ ಶಕ್ತಿ, ಸಾಮರ್ಥ್ಯ ಹೊಂದಿದ್ದಾಳೆ. ಆದರೆ ಪುರುಷರು ಅವಳ ಈ ಕಾರ್ಯಕ್ಕೆ ಅಡ್ಡಗಾಲಾಗಿದ್ದಾರೆ ಎಂದು ಮಾಹಿತಿ ನೀಡುವುದನ್ನು ಕಾಣಬಹುದು.

ಒಟ್ಟಾರೆಯಾಗಿ ಕ್ಷೇತ್ರಕಾರ್ಯದ ಮಾಹಿತಿಯಿಂದ ತಿಳಿದುಬರುವ ಅಂಶವೆಂದರೆ, ಧಾರಾವಾಹಿಗಳು ಮಹಿಳೆಯನ್ನು ಅದೇ ಸಾಂಪ್ರದಾಯಿಕ ಮಾದರಿಯಲ್ಲಿ ಕಟ್ಟಿಹಾಕುವ ಬದಲು, ಮಾನಸಿಕವಾಗಿ ಸ್ಥೈರ್ಯವಿರುವ ಹೆಣ್ಣಾಗಿ, ಚಿತ್ರಿಸಿದರೆ ಅದು ಸಮಾನತೆಯೆಡೆಗೆ ಸಾಗುವ ದಾರಿಯಾಗುತ್ತದೆ. ಅದಕ್ಕೆ ಧಾರಾವಾಹಿಗಳು ಸ್ಪಂದಿಸಬೇಕೆಂದು ವಿವರಿಸುತ್ತಾರೆ.

□□□

ಅಧ್ಯಾಯ : ಆರು

ಸಮಾರೋಪ

೬.೦. ಪೀಠಿಕೆ

೬.೧. ಅಧ್ಯಾಯಗಳ ಸಮೀಕ್ಷೆ

೬.೨. ಅಧ್ಯಯನದ ಫಲಿತಗಳು

೬.೩. ಅಧ್ಯಯನದ ಮುಂದಿನ ಸಾಧ್ಯತೆಗಳು

ಅಧ್ಯಾಯ : ಆರು

ಸಮಾರೋಪ

೬.೦. ಪೀಠಿಕೆ

ದೂರದರ್ಶನ ನೋಡುತ್ತಾ ಕುಳಿತರೆ ಮನೆಗೆ ಬಂದ ಅತಿಥಿಗಳತ್ತ ಲಕ್ಷ್ಯವಿಲ್ಲ. ಏನು ಬಂದೀರಿ, ಹದುಳವಿದ್ದೀರಾ ಎನ್ನಲು ಬಾಯಿಯಿಲ್ಲ, ಕಣ್ತುಂಬ ನೋಡಿ, ಮನದುಂಬಿ ಮಾತನಾಡುವಷ್ಟು ಸಮಯವಿಲ್ಲ. ನಮಗೆ ಧರ್ಮ ದರ್ಶನಕ್ಕಿಂತ ದೂರದರ್ಶನವೇ ಮುಖ್ಯವಾಯಿತೆಂದ ಚೆನ್ನಬಸವ". ಹೀಗೊಂದು ಸಾಲುಗಳನ್ನು ಟಿವಿ ಕುರಿತು ನಡೆದ ಉದಯ ಟಿವಿಯ ಹರಟೆ ಕಾರ್ಯಕ್ರಮದಲ್ಲಿ ಶ್ರೀಮತಿ ಇಂದುಮತಿ ಸಾಲಿಮಠ ಅವರು ದೂರದರ್ಶನದ ಮಾತುಕತೆಯ ಕುರಿತು ಮಾತನಾಡುತ್ತಾ ಈ ಮಾತುಗಳನ್ನು ಹೇಳಿದ್ದಾರೆ. ಇದು ದೂರದರ್ಶನದಲ್ಲಿ ಪ್ರಸಾರಗೊಳ್ಳುತ್ತಿರುವ ಧಾರಾವಾಹಿಗಳು ಜನರ ಮಾನಸಿಕ ಚಿಂತನೆಯ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿವೆ ಮತ್ತು ಬೀರುತ್ತಿವೆ ಎಂಬುವುದನ್ನು ವಿವರಿಸುತ್ತದೆ. ಪ್ರಸ್ತುತ ಧಾರಾವಾಹಿಗಳ ಅಧ್ಯಯನವು ಮಹಿಳಾ ಅಧ್ಯಯನದ ತಾತ್ವಿಕ ಚೌಕಟ್ಟಿನಲ್ಲಿ ನಡೆಸಲಾಗಿದೆ. ಧಾರಾವಾಹಿಗಳನ್ನು ಮತ್ತು ರಿಯಾಲಿಟಿ ಶೋಗಳನ್ನು ಒಟ್ಟು ಮೂರು ಆಧ್ಯಾಯಗಳಲ್ಲಿ ವಿಶ್ಲೇಷಣೆಗೊಳಪಡಿಸಿ, ಅಲ್ಲಿ ಪ್ರತಿನಿಧಿತವಾದ ಒಟ್ಟು ಲಿಂಗವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಧಾರಾವಾಹಿಗಳಲ್ಲಿ ಮುಖ್ಯವಾಗಿ ಕುಟುಂಬದಲ್ಲಿನ ಪಾತ್ರಗಳು ಮಹಿಳೆಯರನ್ನು ನಿರ್ವಚಿಸುವ ಸ್ವರೂಪವನ್ನು ಅರ್ಥಮಾಡಿಕೊಳ್ಳಲಾಗಿದೆ. ಧಾರಾವಾಹಿಗಳಲ್ಲಿ ಪ್ರತಿನಿಧೀಕರಣಗೊಂಡಿರುವ ಸಾಂಪ್ರದಾಯಿಕವಾದ ಸ್ಥಿರ ಮಾದರಿಯ ಪಾತ್ರಗಳಾದ ಯುವತಿ, ಹೆಂಡತಿ, ಗೃಹಿಣಿ, ತಾಯಿ ಈ ಪಾತ್ರಗಳನ್ನು ಧಾರಾವಾಹಿಯ ಕಥಾಸಾರಾಂಶವನ್ನು ವಿವರಿಸುವುದರ ಮೂಲಕ ವಿಶ್ಲೇಷಿಸಲಾಗಿದೆ. ಧಾರಾವಾಹಿಗಳು ಈ ಅಧ್ಯಯನದ ಮೂಲ ಆಕರಗಳಾಗಿರುವುದರಿಂದ ಅಧ್ಯಯನದ ಎಲ್ಲಾ ಅಧ್ಯಾಯಗಳಿಗೆ ಹಿನ್ನೆಲೆಯಾಗಿ ಧಾರಾವಾಹಿಗಳ ಸ್ವರೂಪ ತಿಳಿದುಕೊಳ್ಳಲಾಗಿದೆ. ಇದರ ಜೊತೆಗೆ ರಿಯಾಲಿಟಿ ಶೋಗಳನ್ನು ಅದರ ಒಟ್ಟಾರೆಯಾದ ಸ್ವರೂಪವನ್ನು ಸಹ ತಿಳಿದುಕೊಳ್ಳಲಾಗಿದೆ. ಅಧ್ಯಯನದ ಮುಖ್ಯ ಉದ್ದೇಶವಾದ ಮಹಿಳಾ ಪಾತ್ರಗಳ ಪ್ರತಿನಿಧೀಕರಣವನ್ನು ಧಾರಾವಾಹಿಗಳಲ್ಲಿ ಹೇಗೆ ಕಟ್ಟಲಾಗುತ್ತದೆ. ಅದರ ಸ್ವರೂಪವೇನು ಎಂದು ಅರ್ಥೈಸಿಕೊಳ್ಳಲಾಗಿದೆ. ಈ ಪ್ರಬಂಧದಲ್ಲಿ ಚರ್ಚಿತವಾದ ಅನೇಕ ವಿಷಯಗಳನ್ನು

ಸೂಕ್ಷ್ಮವಾಗಿ ಅವಲೋಕಿಸುವ ಮೂಲಕ, ವಿಶ್ಲೇಷಣೆ ಕೈಗೊಳ್ಳುವ, ಚಿಂತನೆ ನಡೆಸುವ ಪ್ರಯತ್ನ ಮಾಡಲಾಗಿದೆ. ಜೊತೆಗೆ ಅಧ್ಯಯನ ಹೊಂದಿದ ಒಟ್ಟು ಫಲಿತಗಳನ್ನು ಆನಂತರದ ಭಾಗದಲ್ಲಿ ನೀಡಲಾಗಿದೆ.

೬.೧. ಅಧ್ಯಾಯಗಳ ಸಮೀಕ್ಷೆ

ದೂರದರ್ಶನ ಪ್ರಾರಂಭದ ಕಾಲಘಟ್ಟದಲ್ಲಿ ಪ್ರಸಾರವಾದಂತಹ ಜನಪ್ರಿಯತೆಯ ಧಾರಾವಾಹಿಗಳಾದ 'ರಾಮಾಯಾಣ' ಮತ್ತು 'ಮಹಾಭಾರತ' ಧಾರಾವಾಹಿಗಳು ಇಂದಿನ ಕಾಲಘಟ್ಟಗಳನ್ನು ಗಣನೆಗೆ ತೆಗೆದುಕೊಂಡು ನೋಡಿದಾಗ ಪ್ರಸಾರಾವಾಗುತ್ತಿರುವ ಧಾರಾವಾಹಿಗಳಲ್ಲೆಲ್ಲಾ ಭಿನ್ನ ಮಾದರಿಯ ಧಾರಾವಾಹಿಗಳಿದ್ದು, ಪ್ರಸ್ತುತ ಅಧ್ಯಯನವು ಕೌಟುಂಬಿಕ ಮಾದರಿಯ ಧಾರಾವಾಹಿಗಳ ವಿಶ್ಲೇಷಣೆಯನ್ನು ಉದ್ದೇಶಿಸಿದೆ. ಪ್ರಸ್ತುತ ಅಧ್ಯಯನದ ವಿಷಯವಾದ ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣದ ಕುರಿತು ಸಂಶೋಧನೆ ಕೈಗೊಳ್ಳುವ ಪ್ರಯತ್ನವನ್ನು ಮಾಡಲಾಗಿದ್ದು, ಅಧ್ಯಯನದ ಪ್ರಸ್ತುತತೆಯನ್ನು ವಿವರಿಸಿ, ವಿಶ್ಲೇಷಣೆ ಕೈಗೊಳ್ಳಲು ಒಟ್ಟು ಆರು ಅಧ್ಯಾಯಗಳನ್ನಾಗಿ ವಿಭಾಗೀಕರಿಸಿಕೊಂಡು ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ವಿವರಿಸುವ ಭಾಗವಾಗಿದೆ. ಈ ಅಧ್ಯಾಯದಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ದೂರದರ್ಶನ ಧಾರಾವಾಹಿಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಹೆಚ್ಚು ಪ್ರಾತಿನಿಧ್ಯವನ್ನು ಪಡೆದುಕೊಂಡು, ಜನಪ್ರಿಯತೆಯನ್ನು ಗಳಿಸಿರುವ ಟಿವಿ ಧಾರಾವಾಹಿಗಳಾದ ರಾಮಾಯಾಣ ಮತ್ತು ಮಹಾಭಾರತದಂತಹ ಧಾರಾವಾಹಿಗಳಿಂದ ಹಿಡಿದು ಶಾಂತಿ, ಹಂತೋಗ, ಬುನಿಯಾದ, ಕಹಾನಿ ಘರ್ ಘರ್ ಕೀ, ಕಸೌಟಿ ಜಿಂದಗೀ ಕೀ, ಕ್ಯೂಂಕಿ ಸಾಸ್ ಭೀ ಕಭೀ ಬಹುಥೀ, ಕನ್ನಡದ ಧಾರಾವಾಹಿಗಳಾದ ಜನನಿ, ಮಾಯಾಮೃಗ, ಹೀಗೆ ಹಲವು ಧಾರಾವಾಹಿಗಳು ಪ್ರಸಾರಗೊಂಡಿರುವುದನ್ನು ಅರ್ಥೈಸಿಕೊಳ್ಳಲಾಗಿದೆ. ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಂತಹ ಈ ಧಾರಾವಾಹಿಗಳ ಚಾರಿತ್ರಿಕ ನೋಟವನ್ನು ತಿಳಿದುಕೊಳ್ಳುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ. ಧಾರಾವಾಹಿಗಳನ್ನು ಒಂದು ವರ್ಗದವರು ಜನರು ಒಪ್ಪಿಕೊಂಡರೇ, ಇನ್ನೊಂದು ವರ್ಗದವರು ನಿರಾಕರಿಸಲು ಕಾರಣಗಳೇನು? ಧಾರಾವಾಹಿಗಳ ಮೂಲ ಆಶಯ ಏನು? ಯಾರನ್ನು ಕೇಂದ್ರಬಿಂದುವಾಗಿಟ್ಟುಕೊಂಡು ನಿರ್ಮಾಣಗೊಳ್ಳುತ್ತವೆ ಎಂಬುದನ್ನು ವಿಶ್ಲೇಷಣೆ ಮಾಡಲಾಗಿದೆ. ಧಾರಾವಾಹಿಗಳಲ್ಲಿ ಪ್ರತಿನಿಧಿತವಾಗುವ ಕುಟುಂಬ, ವಿವಾಹ, ಸಂಪ್ರದಾಯ, ಆಚರಣೆಗಳನ್ನು ಧಾರಾವಾಹಿಗಳು ಹೇಗೆ ಕಟ್ಟಿಕೊಡುತ್ತವೆ.

ಸಾಂಪ್ರದಾಯಿಕ ಮೌಲ್ಯಗಳಾದ ಮತ್ತು ಸಮಾಜದಲ್ಲಿ ಅಸ್ತಿತ್ವ ಪಡೆದಿರುವ ಸ್ಥಿರ ಮಾದರಿಯ ಸ್ವರೂಪಗಳಾದ ಯುವತಿ, ತಾಯಿ, ಗೃಹಿಣಿ, ಹೆಂಡತಿ ಪಾತ್ರವನ್ನೇ ಸ್ಥಿರೀಕರಿಸುವುದನ್ನು ಈ ಅಧ್ಯಯನವು ಋಜುವಾತುಗೊಳಿಸುತ್ತದೆ. ಈ ಧಾರಾವಾಹಿಗಳಲ್ಲಿ ಮೂಡಿಬರುವ ಇಂತಹ

ಸ್ಥಿರಮಾದರಿಯ ಪಾತ್ರಗಳನ್ನು ವಿಶ್ಲೇಷಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಕ್ಷೇತ್ರಕಾರ್ಯ ಮಾಡುವುದರ ಮೂಲಕ ದೊರೆತ ಮಾಹಿತಿಗಳನ್ನು ವಿಶ್ಲೇಷಣೆ ಮಾಡಿ, ಪರಿಶೀಲಿಸಿ, ಪರಾಮರ್ಶನ ಚರ್ಚೆಗಳ ಮೂಲಕ ಅಧ್ಯಯನ ಕೈಗೊಳ್ಳಲಾಗಿದೆ. ಅಧ್ಯಯನದ ವ್ಯಾಪ್ತಿಯನ್ನಾಗಿ ಕನ್ನಡ ಚಾನೆಲ್‌ಗಳಾದ ಉದಯ, ಈಟಿವಿ ಕನ್ನಡ, ಸುವರ್ಣ, ಝೀ ಕನ್ನಡ ಮತ್ತು ಹಿಂದಿ ಚಾನೆಲ್‌ಗಳಾದ ಸ್ಟಾರ್‌ಪ್ಲಾಸ್ ಮತ್ತು ಕಲರ್ಸ್ ಚಾನೆಲ್‌ಗಳಲ್ಲಿ ಪ್ರಸಾರಗೊಳ್ಳುವ ದೈನಿಕ ಧಾರಾವಾಹಿಗಳನ್ನು ಅಧ್ಯಯನದ ವ್ಯಾಪ್ತಿಯಾಗಿ ಆಯ್ದು ಕೈಗೊಳ್ಳಲಾಗಿದೆ. ೨೦೦೯ ಜನವರಿಯಿಂದ, ೨೦೧೧ರ ಡಿಸೆಂಬರ್‌ರವರೆಗೆ ಈ ಕಾಲಾವಧಿಯಲ್ಲಿ ಪ್ರಸಾರವಾದಂತಹ ಧಾರಾವಾಹಿಗಳನ್ನು ಆಯ್ಕೆ ಮಾಡಲಾಗಿದೆ. ಸ್ಟಾರ್‌ಪ್ಲಾಸ್‌ನಲ್ಲಿ ಆಯ್ಕೆ ಮಾಡಿಕೊಂಡಂತಹ ಧಾರಾವಾಹಿಗಳಾದ ಕಹಾನಿ ಘರ್ ಘರ್ ಕೀ, ಕ್ಯೂಂಕಿ ಸಾಸ್ ಭೀ ಕಭೀ ಬಹು ಥೀ, ಕಸೌಟಿ ಜಿಂದಗೀ ಕೀ ಈ ಧಾರಾವಾಹಿಗಳು ಈಗಾಗಲೇ ಮುಗಿದಿವೆ. ಇಲ್ಲಿ ಈ ಧಾರಾವಾಹಿಗಳು ಇಪ್ಪತ್ತನೆಯ ಶತಮಾನದಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿ ಪ್ರಸಾರವಾಗಿ, ಅಧ್ಯಯನಕ್ಕೆ ಪೂರಕವಾಗಿ ಆಯ್ದುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಇದು ಅಧ್ಯಯನಕ್ಕೆ ಹಾಕಿಕೊಂಡ ಚೌಕಟ್ಟಾಗಿದೆ.

ಅಧ್ಯಯನದ ಮೂಲ ಆಕರಗಳಾದ ಧಾರಾವಾಹಿಗಳಲ್ಲಿ ಭಿನ್ನ ಮಾದರಿಯ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಕೌಟುಂಬಿಕ ಮಾದರಿಯ ಧಾರಾವಾಹಿಗಳನ್ನು ಆಯ್ದುಕೊಳ್ಳಲಾಗಿದೆ. ಇವುಗಳ ಜೊತೆಗೆ ಇತ್ತೀಚಿನ ದಿನಗಳಲ್ಲಿ ಧಾರಾವಾಹಿಗಳು ಪಡೆದುಕೊಳ್ಳುತ್ತಿರುವ ಜನಪ್ರಿಯತೆಯನ್ನೇ ಪಡೆದುಕೊಳ್ಳುತ್ತಿರುವ ರಿಯಾಲಿಟಿ ಶೋಗಳನ್ನು ಕೂಡಾ ವಿವರಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಪ್ರಸ್ತುತ ಅಧ್ಯಯನದ ವೈಧಾನಿಕತೆಯು ೭೦ರ ದಶಕದಲ್ಲಿ ಅಸ್ತಿತ್ವ ಪಡೆದಂತಹ ಸ್ತ್ರೀವಾದ, ಸ್ತ್ರೀವಾದಿ ಚಿಂತನೆಗಳ ತಳಹದಿಯಲ್ಲಿ ಇಡೀ ಅಧ್ಯಯನವು ನಿಂತಿದ್ದು, ಅಧ್ಯಯನಕ್ಕೆ ಸ್ತ್ರೀವಾದ ಮಹಿಳಾ ಅಧ್ಯಯನಗಳ ಹಿನ್ನೆಲೆಯಲ್ಲಿ ಈ ಧಾರಾವಾಹಿಗಳನ್ನು ಮತ್ತು ರಿಯಾಲಿಟಿ ಶೋಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಹೊಂದಿರುವ ಉದ್ದೇಶಗಳಿಗೆ ಉತ್ತರ ಕಂಡುಕೊಳ್ಳುವ ಉದ್ದೇಶದಿಂದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿದೆ. ಕ್ಷೇತ್ರಕಾರ್ಯಕ್ಕೆ ಅವಶ್ಯಕವಿರುವಂತಹ ಪ್ರಶ್ನಾವಳಿ ಮಾದರಿಯನ್ನು ಸಿದ್ಧಪಡಿಸಲಾಗಿದೆ. ಧಾರಾವಾಹಿಗಳು ಎಂದರೇನು? ಧಾರಾವಾಹಿಗಳನ್ನು ಯಾಕೆ ನೋಡುತ್ತಾರೆ? ಒಟ್ಟಾರೆಯಾದ ದೃಷ್ಟಿಕೋನ ಎಂತಹದು? ಎಂಬಿತ್ಯಾದಿ ಪ್ರಶ್ನೆಗಳ ಉತ್ತರ ಕಂಡುಕೊಳ್ಳುವ ಉದ್ದೇಶ ಹೊಂದಿದೆ. ವರ್ಗ, ಲಿಂಗ ವಯೋಮಾನದ ಆಧಾರದ ಮೇಲೆ ಅವರು ಧಾರಾವಾಹಿಗಳನ್ನು ಕುರಿತು ಹೊಂದಿರುವ ದೃಷ್ಟಿಕೋನವನ್ನು ವಿವರಿಸಿಕೊಳ್ಳಲು ಪ್ರಶ್ನಾವಳಿಯ ಮಾದರಿಯನ್ನು ಅನುಸರಿಸಲಾಗಿದೆ. ಪ್ರಶ್ನಾವಳಿಯ ಮೂಲಕ ಆಯ್ದುಕೊಂಡ ಮಾಹಿತಿದಾರರ ತಿಳುವಳಿಕೆಯನ್ನು ಸಹಭಾಗಿ ಅವಲೋಕನದ ಮೂಲಕ ಅರ್ಥೈಸಿಕೊಳ್ಳಲಾಗಿದೆ. ದೂರದರ್ಶನದಲ್ಲಿ ಚಿತ್ರಗೊಂಡಿರುವ ಧಾರಾವಾಹಿಗಳನ್ನು ಮೂಲ ಆಕರಗಳನ್ನಾಗಿ

ಇಟ್ಟುಕೊಂಡು, ಈ ಅಧ್ಯಯನ ಇವುಗಳನ್ನು ವೀಕ್ಷಿಸುತ್ತಿರುವ ನೋಟಕರನ್ನು ಕೂಡ ಮೂಲ ಆಕರವನ್ನಾಗಿ ಇಟ್ಟುಕೊಳ್ಳಲಾಗಿದೆ. ಇಲ್ಲಿ ಮುಖ್ಯವಾಗಿ ಪ್ರಶ್ನಾವಳಿಗಳು ಹಾಗೂ ಸಂದರ್ಶನಗಳ ವೈಧಾನಿಕತೆಗಳನ್ನು ಅನ್ವಯಿಸಲಾಗಿದೆ. ಅಧ್ಯಾಯಗಳ ವಿಭಾಗೀಕರಣ ಮಾಡಲಾಗಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಕೂಡಾ ಕೊನೆಯಲ್ಲಿ ಮಾಡಲಾಗಿದೆ.

ಅಧ್ಯಾಯ ಎರಡು; ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ ಸೈದ್ಧಾಂತಿಕ ಹಾಗೂ ಪರಿಕಲ್ಪನಾತ್ಮಕ ನಿರ್ವಚನದ ಭಾಗವಾಗಿದ್ದು, ಅಧ್ಯಯನಕ್ಕೆ ಸಂಬಂಧಪಟ್ಟಂತೆ ಸೈದ್ಧಾಂತಿಕ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ. ಸನಾತನ ಕಾಲದಿಂದಲೂ ಪುರುಷನ ಅಧೀನಳಾಗಿ ಬದುಕುತ್ತಿರುವ ಮಹಿಳೆಗೆ ಪುರುಷನ ಕಬಂಧ ಬಾಹುಗಳಿಂದ ಹಂತ ಹಂತವಾಗಿ ಬಿಡಿಸಿಕೊಳ್ಳುವ ಪ್ರಯತ್ನ ಮಾಡಿದ ಸ್ತ್ರೀವಾದ ಮತ್ತು ಸ್ತ್ರೀವಾದಿ ಚಿಂತನೆಗಳ ಪ್ರಸ್ತುತತೆಯನ್ನು ಇಲ್ಲಿ ವಿವರಿಸಿಕೊಳ್ಳಲಾಗಿದೆ. ಸಮಾಜದಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆಯಂತೆಯೇ ಧಾರಾವಾಹಿಗಳಲ್ಲಿರುವ ಪುರುಷ ಮಾನದಂಡ(Male Gaze)ವು ಹೇಗೆ ಮಹಿಳೆಯರನ್ನು ಆಧುನಿಕರನ್ನಾಗಿಸುತ್ತಲೇ ಸಾಂಪ್ರದಾಯಿಕತೆಯನ್ನು ಒಪ್ಪಿಕೊಳ್ಳುವಂತಹ ಚಿಂತನೆಗಳನ್ನು ಈ ಧಾರಾವಾಹಿಗಳ ಮೂಲಕ ಸಮಾಜಕ್ಕೆ ಒಪ್ಪಿಸಲಾಗುತ್ತಿರುವ ರಾಜಕಾರಣವನ್ನು ಅರ್ಥೈಸಿಕೊಂಡು, ಅಡಗಿರುವ ಪುರುಷ ರಾಜಕಾರಣವನ್ನು ಬಿಡಿಸಿಕೊಳ್ಳುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ. ಅಧ್ಯಯನದ ಮುಖ್ಯ ಪರಿಕಲ್ಪನೆಯಾದ ಪ್ರತಿನಿಧೀಕರಣವನ್ನು ನಿರ್ವಚಿಸಿಕೊಳ್ಳಲಾಗಿದೆ. ಹೆಣ್ಣು ಅಥವಾ ಮಹಿಳೆ ಎಂದು ಬಂದಾಗ ಅಲ್ಲಿ ವರ್ಗ, ಜಾತಿ, ವಯೋಮಾನ, ರೂಪ, ಗುಣ, ಕೌಟುಂಬಿಕ ಪರಿಸ್ಥಿತಿಗಳು, ಶಿಕ್ಷಣ, ಸಂಸ್ಕೃತಿ, ಧರ್ಮ, ವಿವಾಹಿತೆ-ಅವಿವಾಹಿತೆ, ಉದ್ಯೋಗ ಅನುಭವ ಈ ಭಿನ್ನತೆಯಲ್ಲಿ ಗುರುತಿಸಲಾಗುತ್ತದೆ. ಅದು ಎಲ್ಲಾ ಮಹಿಳೆಯರು ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಜೀವಿಸುತ್ತಿದ್ದಾಳೆ ಹಾಗೂ ಪುರುಷರು ಸ್ತ್ರೀಯರನ್ನು ನೋಡುವ ದೃಷ್ಟಿಕೋನ ಇವೆಲ್ಲ ಒಂದೇ ಆಗಿದೆ ಎಂಬುದನ್ನು ಇಲ್ಲಿ ಸೈದ್ಧಾಂತಿಕವಾಗಿ ವಿಶ್ಲೇಷಣೆಯನ್ನು ಮಾಡಲಾಗಿದೆ.

ಅಧ್ಯಯನದ ಮೂಲ ಆಕರವಾಗಿರುವ ಧಾರಾವಾಹಿಗಳ ಕುರಿತು ಸೈದ್ಧಾಂತಿಕ ವಿಶ್ಲೇಷಣೆಯನ್ನು ಮಾಡಿ ಈ ಅಧ್ಯಾಯದಲ್ಲಿ ಮಾಧ್ಯಮ ಪ್ರಸಾರವಾದ ಹಿನ್ನೆಲೆಯನ್ನು ಕುರಿತು ಒಂದು ಚಾರಿತ್ರಿಕ ನೋಟವನ್ನು (ಧಾರಾವಾಹಿಗಳ ಪ್ರಸಾರದ ಹಿನ್ನೆಲೆ) ಕೊಡಲಾಗಿದೆ. ಧಾರಾವಾಹಿಗಳಿಗೆ ಸಂಬಂಧಪಟ್ಟಂತೆ ಒಂದು ಧಾರಾವಾಹಿಯೂ ಯಶಸ್ವಿಯಾಗಬೇಕಾದರೆ ಅನುಸರಿಸುವ ತಂತ್ರಗಾರಿಕೆ ಏನು? ಎಂಬುದನ್ನು ಧಾರಾವಾಹಿಗಳ ವಿನ್ಯಾಸದ ವಿವರಣೆಯಲ್ಲಿ ಮಾಡಲಾಗಿದೆ. ಧಾರಾವಾಹಿಗಳು ಶೂಟಿಂಗ್ ಮನೆಗಳ ಕುರಿತು ಕಿರು ಮಾಹಿತಿಯ ಅವಶ್ಯಕತೆಯನ್ನು ಗಮನಿಸಿ, ಆ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಮುಂದೆ ಧಾರಾವಾಹಿಗಳಲ್ಲಿ ಪುರುಷ ಮಾನದಂಡದ(Male Gaze)ದ ಪರಿಕಲ್ಪನೆ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು

ಅರ್ಥೈಸಿಕೊಳ್ಳಲಾಗಿದೆ. ಧಾರಾವಾಹಿಗಳಲ್ಲಿ ಅಡಗಿರುವ ಪುರುಷ ಪ್ರಧಾನತೆಯನ್ನು ಖ್ಯಾತ ಸ್ತ್ರೀವಾದಿ ಚಿಂತಕಿಯಾದ ವರ್ಜೀನಿಯಾವುಲ್ಫ್ ವಿವರಿಸುವ "ಕನ್ನಡಕ"ಗಳ ಕುರಿತು ಇಲ್ಲಿ ವಿವರಿಸಲಾಗಿದೆ. ಪುರುಷ ಪ್ರಧಾನತೆಯು ತನ್ನ ದೃಷ್ಟಿಕೋನವನ್ನೇ ಕೇಂದ್ರೀಕರಿಸಿ, ಅದರ ನೇರಕ್ಕೆ ನೋಡುವ ನೋಟವನ್ನು ಮಹಿಳಾ ಪಾತ್ರಗಳಾಗಿ ಹೊರಹೊಮ್ಮುವುದನ್ನು ಈ ಚಿಂತಕಿ "ಕನ್ನಡಕ"ಗಳಿಗೆ ಹೋಲಿಸಿ ವಿವರಿಸುವುದನ್ನು ಹೇಳಲಾಗಿದೆ. ಕೊನೆಯ ಭಾಗದಲ್ಲಿ ದೃಶ್ಯ ಮಾಧ್ಯಮ, ಮುದ್ರಣ ಮಾಧ್ಯಮದಲ್ಲಿ ಪ್ರತಿನಿಧೀಕರಣಗೊಳ್ಳುವ ಮಹಿಳೆಯನ್ನು ನೋಡಲಾಗುವ ಭಾಗವನ್ನು ಉಪಶೀರ್ಷಿಕೆಯಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಮೂರು; ಧಾರಾವಾಹಿಗಳಲ್ಲಿ ಪ್ರತಿನಿಧಿತವಾದ ಮಹಿಳಾ ಪ್ರತಿನಿಧೀಕರಣದ ಸ್ವರೂಪ ವಿಶ್ಲೇಷಣೆ (ಸಂಗ್ರಹಿತ ಮಾಹಿತಿಯನ್ನು ಆಧರಿಸಿ)ಯಾಗಿದ್ದು; ಈ ಭಾಗದಲ್ಲಿ ಪ್ರಸ್ತುತ ಅಧ್ಯಯನದ ಮೂಲ ಆಕರಗಳಾದ ಧಾರಾವಾಹಿಗಳನ್ನು ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಆಯ್ದ ಕನ್ನಡ ಧಾರಾವಾಹಿಗಳಾದ ಕಲ್ಯಾಣಿ (ಉದಯ) ಅವಲಕ್ಕಿ ಪವಲಕ್ಕಿ (ಸುವರ್ಣ), ಲಕುಮಿ (ಸುವರ್ಣ), ಗೆಜ್ಜೆಪೂಜೆ, ಜೋಗುಳ (ಝೀ ಕನ್ನಡ), ಚಿತ್ರಲೇಖ (ಈಟಿವಿ ಕನ್ನಡ), ಇದ್ರ ಇರಬೇಕು ನಿನ್ಹಂಗ (ಸುವರ್ಣ) ಈ ಕೌಟುಂಬಿಕ ಧಾರಾವಾಹಿಗಳು ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಯನ್ನು ಮುಖ್ಯ ಕಥಾವಸ್ತುವಾಗಿ ಇಟ್ಟುಕೊಂಡು ಪ್ರಸಾರವಾದ ಧಾರಾವಾಹಿಗಳನ್ನು ಇಲ್ಲಿ ನಿರೂಪಿಸಿ ವಿಶ್ಲೇಷಣೆ ಮಾಡಲಾಗಿದೆ.

ಕನ್ನಡ ಧಾರಾವಾಹಿಗಳನ್ನು ನೋಡುವಂತೆ ಇತರ ಭಾಷೆಗಳನ್ನಾಡುವ ಜನರು ಮತ್ತು ಇತರ ಭಾಷೆಗಳಲ್ಲಿ ಪ್ರಸಾರವಾಗುವಂತಹ ಧಾರಾವಾಹಿಗಳನ್ನು ನೋಡುವ ವೀಕ್ಷಕರಿದ್ದು, ಈ ವೀಕ್ಷಕರು ಹಿಂದಿ ಧಾರಾವಾಹಿಗಳನ್ನು ನೋಡುವ ವೀಕ್ಷಕರಿದ್ದು, ಈ ವೀಕ್ಷಕರು ಹಿಂದಿ ಧಾರಾವಾಹಿಗಳನ್ನು ನೋಡುವ ನೋಟವನ್ನು ಈ ಭಾಗದಲ್ಲಿ ವಿಶ್ಲೇಷಣೆಗೆ ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ಕನ್ನಡ ಧಾರಾವಾಹಿಗಳ ಜೊತೆಗೆ ಹಿಂದಿ ಧಾರಾವಾಹಿಗಳಲ್ಲಿ ಚಿತ್ರಿತವಾಗಿರುವ ಅಥವಾ ಕಟ್ಟಿಕೊಡಲಾಗುವ ಕುಟುಂಬ, ಮಹಿಳೆ, ಸಂಪ್ರದಾಯ ಆಚರಣೆಗಳನ್ನು ವಿವರಿಸಿಕೊಳ್ಳಲಾಗಿದೆ. ಇಲ್ಲಿ ಆಯ್ದ ಹಿಂದಿ ಧಾರಾವಾಹಿಗಳಾದ ಸಾಥ್ ನಿಭಾನಾ ಸಾಥಿಯಾ (ಕೈ ಬಿಡದಂತೆ ಕಾಪಾಡು ಅಥವಾ ಜೊತೆಯಿರು), ದಿಯಾ ಔರ್ ಬಾತಿಹಮ್ (ಎಣ್ಣೆ ಮತ್ತು ದೀಪ), ಕಹಾನಿ ಘರ್ ಘರ್ ಕೀ (ಮನೆ ಮನೆಯ ಕಥೆ), ಕ್ಯೂಂಕಿ ಸಾಸ್ ಭೀ ಕಭೀ ಬಹು ಥೀ (ಅತ್ತೆಯೂ ಒಂದು ಕಾಲದಲ್ಲಿ ಸೊಸೆಯಾಗಿದ್ದಳು), ಕಸೌಟಿ ಜಿಂದಗೀ ಕೀ (ಜೀವನದ ಸಂಘರ್ಷ), (ಸ್ಟಾರ್‌ಪ್ಲಸ್) ಸಾಮಾಜಿಕ ಅನಿಷ್ಟ ಪದ್ಧತಿಯಾಗಿ ಸಮಾಜಕ್ಕೆ ಪಿಡುಗಾಗಿರುವ ಹೆಣ್ಣು ಶಿಶುಹತ್ಯೆ ಮತ್ತು ಹೆಣ್ಣು ಭ್ರೂಣಹತ್ಯೆಯ ವಿಷಯಗಳನ್ನು ಕುರಿತು ನಾ ಆನಾ ದೇಶ್ ಮೇರೆ ಲಾಡೋ (ದೇಶಕ್ಕೆ ಬರಬೇಡಾ ನನ್ನಿ ಕಂದ), ಧಾರಾವಾಹಿಯಲ್ಲಿ ಬರುವ ವಸ್ತುವಿಷಯವನ್ನು ವಿಶ್ಲೇಷಣೆ ಮಾಡಲಾಗಿದೆ. ಬಾಲ್ಯವಿವಾಹದಂತಹ ಸಮಸ್ಯೆಯನ್ನು ಕಥೆಯ ಮೂಲಕ ವಿವರಿಸಲು, ಬಾಲ್ಯವಿವಾಹದಿಂದ ಉಂಟಾಗುವಂತಹ ಸಾಧಕ

ಬಾಧಕಗಳನ್ನಿಟ್ಟುಕೊಂಡು ಪ್ರಸಾರವಾದಂತಹ ಧಾರಾವಾಹಿ ಬಾಲಿಕಾ ವಧು (ಚಿಕ್ಕವಯಸ್ಸಿನ ಹುಡುಗಿಯನ್ನು ಮದುಮಗಳಾಗಿ ಮಾಡಿರುವುದು) ಈ ಧಾರಾವಾಹಿಯಲ್ಲಿ ಹೆಣ್ಣಿನ ಅಸ್ತಿತ್ವದ ಪ್ರಶ್ನೆ ಬಂದಾಗ, ಅಲ್ಲಿ ಮತ್ತೆ ಅದೇ ಸಾಂಪ್ರದಾಯಿಕವಾದ ಚಿತ್ರಣದಲ್ಲಿಯೇ, ಅಧೀನವಾದ ಬದುಕಿನಲ್ಲಿಯೇ ನಿರೂಪಿಸಲಾಗುತ್ತದೆ. ಬಾಲ್ಯದಲ್ಲಿಯೇ ಮಾಡಲಾಗುವ ಮದುವೆಯು ಏನೂ ಅರಿಯದ ಮುಗ್ಧ ಮಗುವಿನ ಮನಸ್ಸಿನಲ್ಲಿ ತಾನಿನ್ನು ಒಬ್ಬನ ಹೆಂಡತಿ, ಒಬ್ಬರ ಸೊಸೆ, ಒಬ್ಬರ ಅಡಿಯಲ್ಲಿರುವ ಹೆಣ್ಣಾಗಿದ್ದಾಳೆ. ಹೆಜ್ಜೆ ಹೆಜ್ಜೆಗೂ ಸಾಂಪ್ರದಾಯಿಕತೆಯನ್ನು ಒತ್ತಿ ಹೇಳುವ ಅಜ್ಜಿ, ತನ್ನ ವೈಯಕ್ತಿಕವಾದ ಬದುಕಾಗಲಿ, ಭಾವನೆಗಳಾಗಲಿ ಇವುಗಳನ್ನು ಬಲಿಕೊಟ್ಟು ತನ್ನ ಬದುಕೆಲ್ಲಾ ಮನೆಯ ಸದಸ್ಯರ ಸೇವೆಗೆ ಮಾತ್ರ ಮೀಸಲು ಎಂಬುದನ್ನು ಇಲ್ಲಿ ಚಿತ್ರಿಸಿದ್ದಾರೆ. ಈ ಧಾರಾವಾಹಿ ಕಟ್ಟಿಕೊಡುವ ಚಿಂತನೆಗಳು ಮಹಿಳೆಯನ್ನು ಲಿಂಗ ತಾರತಮ್ಯದ ಶೋಷಣೆ ಹಾಗೂ ಪುರುಷಾಧೀನತೆಯ ನೆಲೆಯಲ್ಲಿಯೇ ವಿವರಿಸಿಕೊಳ್ಳುವ ಪ್ರಯತ್ನವನ್ನು ಧಾರಾವಾಹಿಯ ಉದ್ದಕ್ಕೂ ಮಾಡಲಾಗಿದೆ. ಮಹಿಳಾ ಅಧ್ಯಯನದ ಚಿಂತನೆಯಲ್ಲಿ ಈ ಧಾರಾವಾಹಿಗಳನ್ನು ವಿವರಿಸಿ, ವಿಶ್ಲೇಷಣೆ ಮಾಡಿಕೊಳ್ಳುವ ಪ್ರಯತ್ನ ಈ ಅಧ್ಯಾಯವೂ ಪೂರ್ಣಗೊಳಿಸಲಾಗಿದೆ.

ಅಧ್ಯಾಯ ನಾಲ್ಕು: ರಿಯಾಲಿಟಿ ಶೋಗಳಲ್ಲಿ ಪ್ರತಿನಿಧೀಕರಣವನ್ನು ಕುರಿತು ಚರ್ಚಿಸುವುದಾಗಿದೆ. ಪ್ರಸ್ತುತ ಅಧ್ಯಯನವು ಧಾರಾವಾಹಿಗಳನ್ನು ವಿಶ್ಲೇಷಣೆಗೆ ಕೈಗೆತ್ತಿಕೊಂಡರೂ ಇದಕ್ಕೆ ಪೂರಕವಾಗಿ ರಿಯಾಲಿಟೀ ಶೋಗಳು ಇಂದು ಹೆಚ್ಚು ವೀಕ್ಷಕರನ್ನು ತನ್ನತ್ತ ಸೆಳೆದುಕೊಂಡು ಪ್ರಸಾರವಾಗುತ್ತಿವೆ. ಹಾಗಾಗಿ ಇವುಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ರಿಯಾಲಿಟಿ ಶೋ ಎಂದು ಹೇಳುವ ಮೂಲಕ ಭ್ರಮಾತ್ಮಕವಾದ ಧೋರಣೆಗೆ ಒಳಗಾಗಿರುವುದನ್ನು ವಿವರಿಸಿಕೊಳ್ಳಲಾಗಿದೆ. ಈ ರಿಯಾಲಿಟಿ ಶೋಗಳು ಪಾಶ್ಚಿಮಾತ್ಯರಲ್ಲಿ ಪ್ರಸಾರಗೊಂಡು ನಂತರ ಭಾರತಕ್ಕೆ, ನಂತರ ಆಯಾ ಪ್ರಾದೇಶಿಕ ಭಾಷೆಗಳಿಗೆ ರೂಪಾಂತರಗೊಂಡಿರುವ ಇತಿಹಾಸವನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಸಾರವಾಗುವ ರಿಯಾಲಿಟಿ ಶೋಗಳಲ್ಲಿ ಬದುಕು ಜಟಕಾ ಬಂಡಿ, (ಝೀ ಕನ್ನಡ), ಕಥೆ ಅಲ್ಲ ಜೀವನ (ಸುವರ್ಣ), ಇದು ಯಾರು ಬರೆದ ಕಥೆಯೋ (ಕಸ್ತೂರಿ) ಈ ರಿಯಾಲಿಟಿ ಶೋಗಳು ಹೇಗೆ ವಾಸ್ತವದ ಚಿತ್ರಣವನ್ನು ಕೊಡುತ್ತವೆ ಎಂಬ ಭ್ರಮೆಯನ್ನು ಹೇಗೆ ಬಿತ್ತಲಾಗುತ್ತದೆ ಎಂಬುದನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ರಿಯಾಲಿಟಿ ಶೋಗಳಿಗೂ ಮತ್ತು ವಾಸ್ತವ ಬದುಕಿಗೂ ಇರುವ ಭಿನ್ನತೆಯ ಚಿತ್ರಣವನ್ನು ಕೊಡುವ ಪ್ರಯತ್ನವನ್ನು ಮಾಡಲಾಗಿದೆ. ರಿಯಾಲಿಟಿ ಶೋಗಳಿಗೆ ಮಹಿಳಾ ನಿರೂಪಕಿಯರನ್ನೇ ಯಾಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ? ಆಯ್ಕೆ ಹಿಂದಿರುವ ಮಾಪನಗಳಾವುವು? ಇದರ ಹಿಂದಿರುವ ರಾಜಕಾರಣ ಯಾವುದು? ಎಂಬುದನ್ನು ಪ್ರಶ್ನಿಸಿಕೊಂಡು ಉತ್ತರ ಹುಡುಕಲು ಪ್ರಯತ್ನಿಸಲಾಗಿದೆ. ರಿಯಾಲಿಟಿ ಶೋಗಳಿಗೂ ಮಹಿಳಾ ನಿರೂಪಕಿಯರನ್ನು ಕುರಿತಾಗಿ ಹೊಂದಿರುವ ದೃಷ್ಟಿಕೋನವು ಎಂತಹದ್ದು ಎಂದು ವಿವರಿಸಿಕೊಳ್ಳಲು ಮಾಧ್ಯಮ ಮತ್ತು

ಹೆಣ್ಣಿನ ದೇಹದ ನಿರ್ವಚನವನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ವಿವರಿಸಿಕೊಳ್ಳುವ ಪ್ರಯತ್ನವನ್ನು ಈ ಭಾಗದಲ್ಲಿ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಕ್ಷೇತ್ರಕಾರ್ಯದ ಮಾಹಿತಿಯ ವಿವರಣೆಯನ್ನು ಒಳಗೊಂಡಿರುತ್ತದೆ. ಅಧ್ಯಯನದ ಮೂಲ ಆಕರವಾದ ಧಾರಾವಾಹಿಗಳು ಮತ್ತು ರಿಯಾಲಿಟಿ ಶೋಗಳನ್ನು ಕುರಿತು ಹೊಂದಿರುವ ದೃಷ್ಟಿಕೋನವನ್ನು ವಿವರಿಸಿ; ಧಾರಾವಾಹಿಗಳು ಕಟ್ಟಿಕೊಡುವ ಸ್ಥಿರಮಾದರಿಯ ಪಾತ್ರಗಳ ಅನಾವರಣವನ್ನು ಮಾಡಲಾಗಿದೆ. ಧಾರಾವಾಹಿ ನೋಡುವ ವೀಕ್ಷಕರು ಇದನ್ನು ಹೇಗೆ ಅರ್ಥೈಸಿಕೊಳ್ಳುತ್ತಾರೆ? ಧಾರಾವಾಹಿಗಳನ್ನು ಕುರಿತು ಅವರು ಹೊಂದಿರುವಂತಹ ಒಟ್ಟಾರೆಯಾದ ನೋಟವನ್ನು ಇಲ್ಲಿ ಗ್ರಹಿಸಲಾಗಿದೆ. ಧಾರಾವಾಹಿಗಳನ್ನು ನೋಡುವ ವೀಕ್ಷಕರನ್ನು ಮಾಹಿತಿದಾರರನ್ನಾಗಿ ಆಯ್ದುಕೊಂಡು, ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿ ಸಂಗ್ರಹಣೆಯನ್ನು ಪ್ರಶ್ನಾವಳಿ ವಿಧಾನ ಮೂಲಕ ನಡೆಸಿ; ಅಲ್ಲಿ ಮಾಹಿತಿ ಸಂಗ್ರಹವನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಕೊನೆಯ ಸಂದರ್ಶನದ ಆಯ್ದ ಭಾಗಗಳನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರು ಸಮಾರೋಪವಾಗಿದ್ದು; ಇಲ್ಲಿ ಪ್ರಸ್ತುತ ಅಧ್ಯಯನವು ನಡೆಸಿಕೊಂಡು ಬಂದ ಅಧ್ಯಾಯಗಳ ವಿವರಣೆಯನ್ನು ಸಮೀಕ್ಷಾತ್ಮಕವಾಗಿ ಮತ್ತೊಮ್ಮೆ ಸ್ಥೂಲವಾಗಿ ಮುಖ್ಯಾಂಶಗಳ ರೂಪದಲ್ಲಿ ವಿವರಿಸಲಾಗಿದೆ. ಆನಂತರದಲ್ಲಿ ಪ್ರಸ್ತುತ ಅಧ್ಯಯನವು ಕಂಡುಕೊಂಡಿರುವ ಒಟ್ಟು ಫಲಿತಗಳನ್ನು ಇಲ್ಲಿ ವಿವರಿಸಲಾಗಿದೆ. ಅಧ್ಯಯನಕ್ಕಿರುವ ಮುಂದಿನ ಸಾಧ್ಯತೆಗಳ ಕುರಿತು ಸೂಕ್ಷ್ಮವಾಗಿ ಇಲ್ಲಿ ವಿವರಿಸಲಾಗಿದೆ.

ಅನುಬಂಧಗಳಲ್ಲಿ, ಸಂದರ್ಶನದಲ್ಲಿ ಬಳಸಲಾದ ಆಡುನುಡಿಯ ಪದಸೂಚಿಯನ್ನು ಕೊಡಲಾಗಿದೆ. ಸಂದರ್ಶನ ಕೈಗೊಂಡಾಗ ಒಳಸಲಾದ ಪ್ರಶ್ನಾವಳಿಯ ಮಾದರಿಯನ್ನು ಒದಗಿಸಿದೆ. ಆಯ್ದುಕೊಂಡ ಮಾಹಿತಿದಾರರ ವಿವರಣೆಯ ಜೊತೆಗೆ ಪರಾಮರ್ಶನ ಗ್ರಂಥಗಳ ಸೂಚಿಯನ್ನು ನೀಡಲಾಗಿದೆ. ಆಯ್ದ ಧಾರಾವಾಹಿಗಳ ಮತ್ತು ರಿಯಾಲಿಟಿ ಶೋಗಳ ಛಾಯಾಚಿತ್ರಗಳನ್ನು ಕೂಡಾ ಅನುಬಂಧದ ಕೊನೆಯ ಭಾಗದಲ್ಲಿ ಒದಗಿಸಿದೆ.

ಯಾವುದೇ ಒಂದು ಅಧ್ಯಯನವು ಒಂದು ಹಂತಕ್ಕೆ ಬಂದು ಮುಕ್ತಾಯ ಕಂಡರೆ ಅದು ವಾಸ್ತವದಲ್ಲಿ ಪೂರ್ಣ ರೂಪದಲ್ಲಿ ಮುಕ್ತಾಯವಾಗಿರುವುದಿಲ್ಲ. ಅಧ್ಯಯನಗಳ ಹೊಸ ಸಾಧ್ಯತೆಗಳಿಗೆ ತೆರೆದುಕೊಳ್ಳುವ ಅವಕಾಶಗಳು ಕೂಡ ಅಲ್ಲಿಂದ ಆರಂಭಗೊಳ್ಳುತ್ತವೆ. ಹಾಗಾಗಿ ಪ್ರಸ್ತುತ ಅಧ್ಯಯನವು ಕೂಡ ತನ್ನ ಮಿತಿಯೊಳಗೆ ಧಾರಾವಾಹಿಗಳ ಕುರಿತು ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದ್ದರೂ, ಒಂದು ಹಂತದವರೆಗಿನ ಅಧ್ಯಯನವಾಗಿ ಇದು ಪೂರ್ಣಗೊಂಡಿದೆ ಎಂದು ಹೇಳಬಹುದಾಗಿದೆ. ಅಧ್ಯಯನದ ಹೊಸ ಹೊಸ ಸಾಧ್ಯತೆಗಳನ್ನು ಈ ಮಹಾಪ್ರಬಂಧ ಬಯಸುವುದರಿಂದ ಈ ಅಧ್ಯಯನದ ಪ್ರಯತ್ನ ಅಂತ್ಯವಾಗಿರದೇ ಪ್ರಾರಂಭವೆಂತಲೂ ಇದನ್ನು ಗ್ರಹಿಸಬಹುದಾಗಿದೆ.

೬.೨. ಅಧ್ಯಯನದ ಫಲಿತಗಳು

೧. ಧಾರಾವಾಹಿಗಳ ಕಥಾವಸ್ತು ಮಧ್ಯಮ ವರ್ಗದ ಮನೆಯಲ್ಲಿ ನಡೆಯುವ ದಿನನಿತ್ಯದ ಮಹಿಳಾ ಬದುಕಿನ ಮತ್ತು ಪ್ರಸ್ತುತ ದಿನಗಳಲ್ಲಿ ನಡೆಯುತ್ತಿರುವಂತಹ ವಿದ್ಯಮಾನಗಳ ಅನಾವರಣವಾಗಿದ್ದು; ಅವುಗಳನ್ನು ವಿಶ್ಲೇಷಿಸುವುದು ಮತ್ತು ಆ ವಿಶ್ಲೇಷಣೆಯ ಮೂಲಕ ಸ್ಥಾಪಿತ ಪಿತೃಪ್ರಧಾನ ಮೌಲ್ಯಗಳನ್ನು ಹೇಗೆ ಸ್ಥಿರೀಕರಿಸಲಾಗುತ್ತದೆ ಎಂಬುದನ್ನು ಈ ಅಧ್ಯಯನವು ಪ್ರಕಟಿಸುತ್ತದೆ.

೨. ಧಾರಾವಾಹಿಗಳಲ್ಲಿ ಮುಖ್ಯವಾಗಿ ಮಧ್ಯಮ ವರ್ಗದ ಅಸಹಾಯಕ ಮಹಿಳೆಯ ಗೋಳಿನ ಕಥೆಯ ಚಿತ್ರಣ, ಕಥಾನಾಯಕಿಯನ್ನು ಸಾಧ್ಯವಾದಷ್ಟು ಕಷ್ಟಗಳನ್ನು ಕೊಡುವ ಖಳನಾಯಕಿ, ಅತ್ತೆ–ಸೊಸೆಯರ ಒಳಜಗಳಗಳು. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಸಂದೇಶಗಳನ್ನು ಈ ಮೂಲಕ ಕೊಡಲಾಗುತ್ತಿರುವ ವಿಪರ್ಯಾಸದ ಸಂಗತಿಯನ್ನು ಪ್ರಸ್ತುತ ಅಧ್ಯಯನವು ಬಯಲು ಮಾಡುತ್ತದೆ.

೩. ಮೇಲ್ವರ್ಗದ ಮನೆಯಲ್ಲಿ ನಡೆಯುವ ಅಣ್ಣ ತಮ್ಮರ ಶೀತಲ ಸಮರಗಳು. ಗಂಡ ಹೆಂಡತಿಯ ಜಗಳಗಳು, ಅನೈತಿಕ ಸಂಬಂಧಗಳು, ತಂತ್ರ ಕುತಂತ್ರಗಳು, ಒಬ್ಬಳನ್ನು ಕೆಳಗಿಳಿಸಲು ಇನ್ನೊಬ್ಬಳು ಸಂಚು ರೂಪಿಸುವುದು. ಮೋಸ, ವಂಚನೆ, ದರೋಡೆ. ಅಪಹರಣದಂತಹ ಚಿತ್ರಣವನ್ನು ನೀಡುವ ವೈವಿಧ್ಯದ ಮಹಿಳಾ ಶೋಷಣೆಗಳನ್ನು ಅರಿಯುವುದು.

೪. ಪುರುಷ ಪ್ರಧಾನ ಮಾಧ್ಯಮದಲ್ಲಿ ಸಮಾಜ ರೂಪಿಸಿದ, ಒಪ್ಪಿತವಾಗಿರುವ ಮೌಲ್ಯಗಳನ್ನೇ ಸ್ಥಿರೀಕರಿಸುವುದನ್ನು ಧಾರಾವಾಹಿಗಳನ್ನು ಸ್ತ್ರೀವಾದಿ ವಿಮರ್ಶೆಯ ಮೂಲಕ ಖಚಿತವಾಗಿ ವಿವರಿಸಿರುವುದು.

೫. ಧಾರಾವಾಹಿಗಳಲ್ಲಿ ಮಹಿಳೆಯ ಪ್ರತಿನಿಧೀಕರಣವನ್ನು ಕೌಟುಂಬಿಕ ಪಾತ್ರಗಳಾದ ಯುವತಿ, ತಾಯಿ, ಹೆಂಡತಿ, ಮಗಳು, ಅತ್ತಿಗೆ - ಹೀಗೆ ಸಾಂಪ್ರದಾಯಿಕ ಸ್ಥಿರಮಾದರಿಯ ಪಾತ್ರಗಳಲ್ಲಿಯೇ ಹೆಚ್ಚಾಗಿ ನಿರ್ವಚನಗೊಳಿಸಲಾಗುತ್ತದೆ. ಕೆಲವೇ ಕೆಲವು ಧಾರಾವಾಹಿಗಳಲ್ಲಿ ಕೌಟುಂಬಿಕೇತರ ಪಾತ್ರಗಳಲ್ಲಿ ನಿರ್ವಚನಗೊಂಡರೂ, ಅಲ್ಲಿ ಕೂಡಾ ಹೆಣ್ಣಿಗೆ ಅಂತಿಮ ವಾಗಿ ಕುಟುಂಬದ ಜೊತೆಗೆ ಸಮೀಕರಿಸಿ ನೋಡುವ ದೃಷ್ಟಿಕೋನವನ್ನು ಈ ಧಾರಾವಾಹಿಗಳ ಮೂಲಕ ಸಮಾಜಕ್ಕೆ ಒಪ್ಪಿಸಲಾಗುತ್ತಿದೆ ಎಂಬುದನ್ನು ಅನಾವರಣ ಮಾಡಲಾಗಿದೆ.

೬ ಧಾರಾವಾಹಿಗಳಿಗೆ ನಿಶ್ಚಿತವಾದ ಕಥೆಯೊಂದು ಇರುವುದಿಲ್ಲ (ಕೆಲವೊಂದು ಧಾರಾವಾಹಿಗಳನ್ನು ಹೊರತು ಪಡಿಸಿ) ಪ್ರಾರಂಭದಲ್ಲಿ ಎತ್ತಿದ ಪ್ರಶ್ನೆಗಳು. ಕಥೆಯು ಮಧ್ಯದ ಹಂತಕ್ಕೆ ತಲುಪಿದಾಗ ನಗಣ್ಯವಾಗುತ್ತದೆ. ಕಥೆಯಲ್ಲಿ ಹಲವು ಕಥೆಗಳು ಒಮ್ಮೆಗೆ ಪ್ರಸಾರವಾಗುತ್ತವೆ. ಎಲ್ಲಿ ಪ್ರಾರಂಭವಾಯ್ತು, ಎಲ್ಲಿ ಅಂತ್ಯವಾಯ್ತು ಎಂಬುದು ಅರಿವಿಗೆ ಬರುವುದಿಲ್ಲ.

ಕಥೆಯ ಮಧ್ಯೆ ಇದ್ದಕ್ಕಿದ್ದ ಹಾಗೆ ಪಾತ್ರಗಳ ಬದಲಾವಣೆಯಾಗುತ್ತದೆ. ಕಥೆಯಲ್ಲಿ ವಾಸ್ತವಕ್ಕೆ ದೂರವಾಗಿರುವ ಅಂಶಗಳನ್ನೇ ಹೆಚ್ಚಾಗಿ ತೋರಿಸಲಾಗುತ್ತದೆ. ಇದಕ್ಕೆ ಪುಷ್ಠಿಕೊಡುವಂತೆ "ಈ ಧಾರಾವಾಹಿಯಲ್ಲಿ ಬರುವ ಪಾತ್ರಗಳು ಹಾಗೂ ಸನ್ನಿವೇಶಗಳು ಕೇವಲ ಕಾಲ್ಪನಿಕವಾದದ್ದು, ಯಾವುದೇ ವ್ಯಕ್ತಿಗೇ ಸಂಬಂಧ ಪಟ್ಟಿರುವುದಿಲ್ಲ. ಒಂದು ವೇಳೆ ಸಂಬಂಧಪಟ್ಟಿದ್ದರೇ ಅದು ಕೇವಲ ಕಾಕತಾಳಿಯ" ಹೀಗೆ ಹೇಳುವ ಮೂಲಕ ಕಥೆಯ ಹೊರ ಮತ್ತು ಒಳ ಎರಡು ನೆಲೆಯಿಂದ ಜಾಣತನದಿಂದ ಜಾರಿಕೊಳ್ಳುವ ಪ್ರಯತ್ನ ಮಾಡುವುದನ್ನು ಈ ಅಧ್ಯಯನ ಹೊರಹಾಕುತ್ತದೆ.

೭ ಧಾರಾವಾಹಿಗಳನ್ನು ವೀಕ್ಷಿಸುವ ವೀಕ್ಷಕರ ವಿವೇಚನಾ ಶಕ್ತಿಯನ್ನೇ ಕಸಿದುಕೊಂಡು ಅವಾಸ್ತವಿಕತೆಯನ್ನು ಬಿಂಬಿಸುವಂತಹ ಧಾರಾವಾಹಿಗಳಾಗಿವೆ ಎಂಬುದನ್ನು ಬಯಲು ಮಾಡಲಾಗಿದೆ.

೮. ಧಾರಾವಾಹಿಗಳನ್ನು ಕೇವಲ ಕೂತೂಹಲಕ್ಕಾಗಿ ನೋಡಲಾಗುತ್ತದೆ ಮತ್ತು ಸಮಯ ಕಳೆಯಲು ನೋಡುವಂತಹ ಧಾರಾವಾಹಿಗಳಾಗಿವೆಯೇ ಹೊರತು ಇವುಗಳಿಂದ ಸಮಾಜಕ್ಕಾಗಲಿ, ಮಹಿಳೆಯರಿಗಾಗಲೀ ಯಾವುದೇ ಪ್ರಯೋಜನವಿಲ್ಲವೆಂಬುದನ್ನು ಈ ಅಧ್ಯಯನ ತನ್ನ ವಿಶ್ಲೇಷಣೆಯಲ್ಲಿ ಮಂಡಿಸಿದೆ.

೯. ಸಮಾಜದ ಅಂಚಿನಲ್ಲಿರುವ, ತಳಸಮುದಾಯದ, ಅಸಂಘಟಿತ ಕೂಲಿಕಾರ್ಮಿಕ ಮಹಿಳೆಯರ ಬದುಕಿಗೆ ಕೈಹಾಕದೆ, ಕೇವಲ ಮೇಲ್ವರ್ಗದ ಮಹಿಳೆಯರನ್ನೇ ಕೇಂದ್ರವಾಗಿಟ್ಟುಕೊಂಡು ಕಥೆಯನ್ನು ಹೆಣೆಯಲಾಗುತ್ತದೆ. ಕೇಲವೇ ಕೇಲವು ಧಾರಾವಾಹಿಗಳಲ್ಲಿ ಮಾತ್ರ ಈ ಜನರನ್ನು ಪ್ರತಿನಿಧಿಸಲಾಗುತ್ತದೆ. ಉಳಿದಂತೆ ಈ ಎಲ್ಲಾ ಸಮುದಾಯದವರ ಎಡೆಗೆ ಜಾಣ ಕುರುಡುತನ ಪ್ರದರ್ಶಿಸಲಾಗುತ್ತದೆಂಬುದನ್ನು ಈ ಅಧ್ಯಯನ ಗಂಭೀರ ವಾಗಿ ವಿಶ್ಲೇಷಿಸುತ್ತದೆ.

ಈ ಮೇಲಿನ ಒಂಬತ್ತು ಸ್ಥೂಲವಾದ ಫಲಿತಗಳನ್ನು ಪ್ರಸ್ತಾಪಿಸುತ್ತಾ; ಒಟ್ಟಾರೆ ಮಹಿಳಾ ಬದುಕಿನ ವಾಸ್ತವವನ್ನು ಉನ್ನತೀಕರಿಸುವ ಬದಲಾಗಿ, ಪುರುಷ ಪ್ರಧಾನ ಸಮಾಜ ವ್ಯವಸ್ಥೆಯ ಬದಲಾದ ಮುಖಗಳನ್ನು ಮತ್ತೇ ದೃಢೀಕರಿಸುತ್ತಾ ಆಧುನಿಕ ಕಾಲಕ್ಕೆ ಸ್ಥಿರೀಕರಿಸುವುದನ್ನು ಧಾರವಾಹಿಗಳು ಮತ್ತು ರಿಯಾಲಿಟಿ ಶೋಗಳು ಮಾಡಿರುವುದನ್ನು ಈ ಅಧ್ಯಯನ ಅನಾವರಣ ಮಾಡಿದೆ.

೬.೩. ಅಧ್ಯಯನದ ಮುಂದಿನ ಸಾಧ್ಯತೆಗಳು

ಯಾವುದೇ ಒಂದು ಅಧ್ಯಯನ ಅಥವಾ ಸಂಶೋಧನೆಯು ಪೂರ್ಣ ಪ್ರಮಾಣದ ಹಂತ ತಲುಪುವ ಸಾಧ್ಯತೆಗಳು ಕಡಿಮೆ. ಯಾವುದೇ ಅಧ್ಯಯನವು ಪರಿಪೂರ್ಣವಾಗಿರುವುದಿಲ್ಲ. ಅಧ್ಯಯನದ ಒಂದು ಭಾಗ ತಲುಪಿದರೆ ಅದರ ಇನ್ನೊಂದು ಭಾಗ ಉಳಿದು ಬಿಡುವ ಸಾಧ್ಯತೆಯಿರುವುದರಿಂದ ಅಧ್ಯಯನದ ಮಿತಿಯೊಳಗೆ ಪ್ರಸ್ತುತ ಅಧ್ಯಯನದ ಮಾಹಿತಿ

ಹಿನ್ನೆಲೆಯಲ್ಲಿ ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದ್ದು ಅವುಗಳನ್ನು ಕೆಳಗಿನಂತೆ ನೋಡಬಹುದಾಗಿದೆ.

೧. ಸಮೂಹ ಮಾಧ್ಯಮ ವಿಶಾಲವಾದ ಆಲದ ಮರವಿದ್ದಂತೆ. ಪ್ರತಿಯೊಂದು ಮಾಧ್ಯಮವು ಅಧ್ಯಯನ, ಚರ್ಚೆ, ವಿವರಣೆ, ಮತ್ತು ವಿಶ್ಲೇಷಣೆಯನ್ನು ಬಯಸುತ್ತದೆ. ಅದು ಪ್ರಸ್ತುತ ದಿನಗಳಿಗೆ ಸಮೀಕರಿಸಿ ನೋಡಿದಾಗ, ಅತಿ ಹೆಚ್ಚು ಜನರನ್ನು ತಲುಪುವ ಮತ್ತು ತಲುಪುತ್ತಿರುವ ಮಾಧ್ಯಮಗಳಾಗಿರುವುದರಿಂದ ಅಧ್ಯಯನವನ್ನು ಕೇವಲ ದೂರದರ್ಶನದ ಧಾರಾವಾಹಿಗಳಿಗೆ ಸೀಮಿತಗೊಳಿಸಿದ್ದು; ಇಲ್ಲಿ ಕೌಟುಂಬಿಕ ಮಾದರಿಯ ಆಯ್ದ ಧಾರಾವಾಹಿಗಳನ್ನು ವಿವರಿಸಿ, ಚರ್ಚೆ ಮಾಡಲಾಗಿದೆ. ಉಳಿದಂತೆ **ಹಾಸ್ಯಪ್ರಧಾನ. ಭಕ್ತಿ ಪ್ರಧಾನ. ಕ್ರೈಂ ಲೋಕಕ್ಕೆ ಸಂಬಂಧಿಸಿದ ಧಾರಾವಾಹಿಗಳು ಪ್ರಸಾರವಾಗುತ್ತಿದ್ದು ಅವುಗಳ** ಅಧ್ಯಯನವನ್ನು ಮುಂದಿನ ಅಧ್ಯಯನಗಳಲ್ಲಿ ಕೈಗೊಳ್ಳಬಹುದಾಗಿದೆ.

೨. ಕಾಲದ ಅಂತರವನ್ನಿಟ್ಟುಕೊಂಡು ದೂರದರ್ಶನದ ಪ್ರಾರಂಭದ ಧಾರಾವಾಹಿಗಳಿಗೂ ಈಗ ಪ್ರಸಾರವಾಗುತ್ತಿರುವ ಧಾರಾವಾಹಿಗಳಿಗೂ ಸಾಮ್ಯತೆ ಎಷ್ಟು ಭಿನ್ನತೆ ಎಷ್ಟು ಎಂಬುದರ ಕುರಿತು ಅಧ್ಯಯನ ಮಾಡಬಹುದು ಮತ್ತು ಧಾರಾವಾಹಿಗಳ ಕಾಲದ ಅಂತರವನ್ನಿಟ್ಟುಕೊಂಡು ತೌಲನಿಕವಾದ ಅಧ್ಯಯನ ಕೂಡಾ ಮಾಡಬಹುದಾಗಿದೆ.

೩. ಧಾರಾವಾಹಿಗಳ ಭಾಷೆ, ಸಂಭಾಷಣೆಯ ಜೊತೆಗೆ ಶೀರ್ಷಿಕೆ ಗೀತೆಗಳನ್ನಿಟ್ಟುಕೊಂಡು ಕೂಡಾ ಅಧ್ಯಯನ ಮಾಡಬಹುದಾಗಿದೆ

೪. ಧಾರಾವಾಹಿಗಳಲ್ಲಿ ಪಾತ್ರ ಮಾಡುವಂತಹ ಕಲಾವಿದರಲ್ಲಿ ಹವ್ಯಾಸಿ ಕಲಾವಿದರು ಮತ್ತು ರಂಗಭೂಮಿ ಕಲಾವಿದರಿದ್ದು ಅವರನ್ನು ಕುರಿತು ಅಧ್ಯಯನ ಮಾಡಬಹುದಾದ ಸಾಧ್ಯತೆಗಳಿವೆ.

ಒಟ್ಟಿನಲ್ಲಿ ಧಾರಾವಾಹಿಗಳು ಹೆಣ್ಣಿನ ಸಾಂಪ್ರದಾಯಿಕ ಮಾದರಿಗಳನ್ನೇ ಇನ್ನಷ್ಟು, ಮತ್ತಷ್ಟು ವೈಭವೀಕರಿಸಿ, ಅದನ್ನು ಮತ್ತೆ ಮತ್ತೆ ಸ್ಥಾಪಿಸುವ ಕಾರ್ಯವನ್ನು ಧಾರಾವಾಹಿಗಳ ಮೂಲಕ ಮಾಡಲಾಗುತ್ತದೆ. ಈ ಮೂಲಕ ಹೆಣ್ಣಿನ ಆಧುನಿಕ ಪಾತ್ರದ ಒಳಗೆ ಸಾಂಪ್ರದಾಯಿಕತೆಯನ್ನು ಒಪ್ಪಿಕೊಳ್ಳುವ ವ್ಯವಸ್ಥೆಯನ್ನು "ಸಿಸ್ಟ್‌ಮೆಟಿಕ್" ಆಗಿ ಕಟ್ಟಿಕೊಡಲಾಗುತ್ತಿದೆ. ಧಾರಾವಾಹಿಗಳು ಇಂದು ಎಲ್ಲಾ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ನೋಡುಗರಾಗಿರುವುದರಿಂದ ಆಧುನಿಕ ಬದುಕು. ಬದುಕುವ ನಾವೆಲ್ಲ ವೀಕ್ಷಕರಿಗೆ ಹೆಣ್ಣಿನ ಕುರಿತಾಗಿರುವ ಸಾಂಪ್ರದಾಯಿಕ ಮಾದರಿಯನ್ನು ಒಡೆದು. ಸಮಾನತೆಯಿರುವ. ಲಿಂಗತಾರತಮ್ಯವಿರದ ಪಾತ್ರಗಳನ್ನು ಚಿತ್ರಿಸಿ. ಸಮಾಜಕ್ಕೆ ಒಪ್ಪಿಸಿದರೆ ಮಹಿಳೆಯರು ಎದುರಿಸುತ್ತಿರುವ "ಸಾಮಾಜಿಕ ಹಿಂಜರಿಕೆ"ಯನ್ನು ಪ್ರಸ್ತುತ ಅಧ್ಯಯನದ ಮೂಲಕ ಮುರಿದು ಕಟ್ಟುವ ಪ್ರಯತ್ನ ಮಾಡಲಾಗಿದೆ.

□□□

ಅನುಬಂಧಗಳು

೧. ಸಂದರ್ಶನದಲ್ಲಿ ಬಳಸಲಾದ ಆಡುನುಡಿಯ ಪದಸೂಚಿ

೨. ಪ್ರಶ್ನಾವಳಿ ಮಾದರಿ

೩. ಮಾಹಿತಿದಾರರ ವಿವರ

೪. ಪರಾಮರ್ಶನ ಗ್ರಂಥಗಳು

೫. ಛಾಯಾಚಿತ್ರಗಳ

೧. ಸಂದರ್ಶನದಲ್ಲಿ ಬಳಸಲಾದ ಆಡುನುಡಿಯ ಪದಸೂಚಿ

೧. ಗಾಳಿ ಹೊಡಕೊಳಾದು	=	ಬೀಸಣಿಕೆ
೨. ತಾಸಿಗೊಂದು	=	ಘಂಟೆಗೊಮ್ಮೆ
೩. ಬಾರೆದಾಗ	=	ವಿಷಯದಲ್ಲಿ
೪. ಭಾಯಜಾನ	=	ಅಣ್ಣ
೫. ದೋನಸೆ	=	ಎರಡು ನೂರು ರೂಪಾಯಿ
೬. ಸರಿಹೋಗ್ಯಾರ	=	ನಿಧನರಾದರು
೭. ಎಕರಡೆ	=	ವಿಚಿತ್ರವಾಗಿ ವರ್ತಿಸು
೮. ಗಂಡಸಮಕ್ಕು	=	ಗಂಡುಮಕ್ಕಳು
೯. ಸಂಗಿನಕಡಿಂದು	=	ಸಂಘದ ಕಡೆಯಿಂದ
೧೦. ಜೀವಂದಾಗ	=	ಜೀವನದಾಗ
೧೧. ಜಬರದಸ್ತ	=	ಚೆನ್ನಾಗಿರು
೧೨. ಎದುಕುಬಿ	=	ಎದಕ್ಕಾದರೂ
೧೩. ದನಾಕಾಯೋ	=	ದನಮೇಯಿಸುವವರು
೧೪. ಲೂಕಸಾನ	=	ನಷ್ಟ
೧೫. ಪಾರಗೊಳು	=	ಹುಡುಗರು
೧೬. ಮಕ್ಕೋತಿನಿ	=	ಮಲಗುತ್ತೇನೆ
೧೭. ಕಿಮ್ಮತ್	=	ಮರ್ಯಾದೆ
೧೮. ಹಿರ್‍ಯಾಂವ	=	ಹಿರಿಯಮಗ
೧೯. ಸಲಾಮ	=	ನಮಸ್ಕಾರ.

೨೦. ಪಸಂದ	=	ಇಷ್ಟವಾಗು
೨೧. ಥಂತಾನ	=	ದಿನವಿಡಿ, ದಿನಪೂರ್ತಿ
೨೨. ಎಟರೇ	=	ಎಷ್ಟರೇ
೨೩. ಯ್ಯಾಪಾರ	=	ವ್ಯಾಪಾರ
೨೪. ಎಡ್ಡೆಡ್ಡು	=	ಎರಡೆರಡು
೨೫. ತಾಕಿತ	=	ಎಚ್ಚರಿಕೆ ಕೊಡು
೨೬. ಥಂಜಿಗೀ	=	ಸಂಜೆ
೨೭. ಹೊಂಟಾಳ	=	ಹೊರಟಿದ್ದಾಳೆ
೨೮. ಬಂದ್ದೋಟು	=	ಬಂದಷ್ಟು
೨೯. ರೇಡು	=	ರೇಡಿಯೊ
೩೦. ರೇಡವಿ	=	ರೇಡಿಯೊ
೩೧. ದೌಳೊರು	=	ಶ್ರೀಮಂತರು
೩೨. ಕರೀಂದು	=	ಕಪ್ಪು ಬಿಳುಪು (ಟೀವಿ)
೩೩. ಪೇಟ್ಯಾಗ	=	ಪೆಟ್ಟಿಗೆಯೊಳಗೆ
೩೪. ಪಾಲ್ಪ	=	ಪಾತ್ರ
೩೫. ಚುಕ್ಕೊಳು	=	ಮಕ್ಕಳು
೩೬. ಕಲ್ತೋರು	=	ಕಲಿತವರು
೩೭. ನೋಲ್ದಾಕ	=	ನೋಡಲಿಕ್ಕೆ
೩೮. ದಗದಾ	=	ಕೆಲಸಾ
೩೯. ಅನಪಡ	=	ಅನಕ್ಷರಸ್ಥರು
೪೦. ಕಲಗತಿ	=	ಜಗಳ
೪೧. ಇದ್ದರಬೀ	=	ಇದ್ದರೇ
೪೨. ನಾಅರೇ	=	ನಾನಂತರೂ
೪೩. ಕೂಡಕ್ಕಿ	=	ಕುಳಿತುಕೊಳ್ಳೊದು
೪೪. ಬಾರಾಬಡ್ಯಾತಂಕ	=	ಹನ್ನೆರಡುಗಂಟೆ ತನಕ

೪೫. ಇಟ = ಇಷ್ಟು

೪೬. ದಡ್ಡಲೆಕ್ಕ = ಅನಕ್ಷರತೆ

೪೭. ಪೀರೆ = ದುಬಾರಿ

೪೮. ಇದಮಾಯಿ = ದರಿದ್ರ

೪೯. ತೊಂದ್ರಿ = ತೊಂದರೇ

೫೦. ಉಸುರುಇಲ್ಲ = ಶಕ್ತಿಇಲ್ಲ

೫೧. ಘಟಾಸೋದು = ಪೋಣಿಸುವುದು

೫೨. ಹಿಡಸ್ಯಾವ = ಇಷ್ಟವಾಗಿವೆ

೫೩. ಬ್ಯಾಸರ = ಬೇಜಾರ

೫೪. ತ್ರಾಸ್ = ಕಷ್ಟ

೫೫. ರೊಕ್ಕ = ದುಡ್ಡು

೫೬. ಚಾಲು = ಟೀವಿ ಹಚ್ಚು, ಹಾಕು

೫೭. ಗೋಳಾ = ದುಃಖ

೫೮. ಮುತ್ಯಾ = ಅಜ್ಜ, ತಾತ

೫೯. ಖರೇ = ನಿಜ

೬೦. ಅಮ್ಮಿ = ಅಮ್ಮ

೬೧. ಅಬ್ಬು = ಅಪ್ಪ

೬೨. ಭಾಬಿ = ಅತ್ತಿಗೆ

೬೩. ಶಾಣ್ಯಾ = ಜಾಣ

೬೪. ಭಾಂಡಿ = ಪಾತ್ರೆ

೬೫. ಬಿಸ್ = ಇಪ್ಪತ್ತು

೬೬. ಪಂದ್ರಾ = ಹದಿನೈದು

೬೭. ಪಿರೆ = ದುಬಾರಿ

೬೮. ಸೋನಾ = ಬಂಗಾರ

೬೯. ಒಸೂ = ಒಟ್ಟು

೭೦. ಜಲ್ದಿ = ಬೇಗ

೭೧. ಜಡ್ಡ = ಅಸ್ವಸ್ಥ, ಅನಾರೋಗ್ಯ

೭೨. ಟಬಿ = ಟೀವಿ, ದೂರದರ್ಶನ

೭೩. ಟೇಮು = ಸಮಯ

೭೪. ಸಿನ್ಮಾ = ಸಿನೆಮಾ

೭೫. ಛಲೋ, ಛಲೋ = ಚೆನ್ನಾಗಿರುವ

೭೬. ರೊಕ್ಕಾ = ರೂಪಾಯಿ

೭೭. ನೆಗೆಣಿ = ಓರಗಿತ್ತಿ

೭೮. ರೂಪೈ = ರೂಪಾಯಿ

೭೯. ತೋಲಿ = ಗ್ರಾಂ, ತೊಲೆ

೮೦. ಜಾಸ್ತಿ = ಹೆಚ್ಚು

೮೧. ಮುಂಜಾನಿ = ಮುಂಜಾನೆ

೮೨. ಪೈಲ = ಮೊದಲು

೮೩. ಮಾಯ್ತಿ = ಮಾಹಿತಿ

೮೪. ನೆಂಪ್ಪ = ನೆನಪು

೮೫. ಆಜುಬಾಜು = ನೆರೆಮನೆಯವರು

೮೬. ಮಾರಿ = ಮುಖ

೮೭. ತಟ್ಟಿ = ಬಾಗಿಲು

೮೮. ಆಯಿ = ಅಜ್ಜಿ (ತಾಯಿ=ಮರಾಠಿ)

□□□

೨. ಪ್ರಶ್ನಾವಳಿಯ ಮಾದರಿ

೧. ಹೆಸರು :

೨. ವಯಸ್ಸು :

೩. ಧರ್ಮ :

೪. ಭಾಷೆ :

೫. ಕೌಟುಂಬಿಕ ವಿವರ : ೧. ಅವಿಭಕ್ತ ೨. ವಿಭಕ್ತ

೬. ವೈವಾಹಿಕ ಸ್ಥಾನಮಾನ : ೧. ವಿವಾಹಿತೆ ೨. ವಿಚ್ಛೇದಿತೆ ೩. ಅವಿವಾಹಿತೆ ೪. ವಿಧವೆ

ಕೌಟುಂಬಿಕ ಮಾಹಿತಿ

೭. ಕುಟುಂಬದ ಮುಖ್ಯ ತೀರ್ಮಾನಗಳನ್ನು ಯಾರು ತೆಗೆದುಕೊಳ್ಳುತ್ತಾರೆ?

೮. ಕುಟುಂಬದ ಮುಖ್ಯ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಮನೆಯ ಹೆಣ್ಣುಮಕ್ಕಳ ಅಭಿಪ್ರಾಯಗಳನ್ನು ಪಡೆಯಲಾಗುತ್ತದೆಯಾ? ಹೌದು/ಇಲ್ಲ ಕಾರಣಗಳೇನು?

೯. ಕೂಡು ಕುಟುಂಬಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

೧೦. ಕೂಡು ಕುಟುಂಬಗಳಲ್ಲಿನ ಹೆಣ್ಣುಮಕ್ಕಳಿಗೆ ಹೆಚ್ಚು ಸ್ವಾತಂತ್ರ್ಯ ಇರುವುದಿಲ್ಲವೆಂಬ ನಂಬಿಕೆ ಇದೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?

೧೧. ಈಗಿನ ಕುಟುಂಬಗಳ ಕುರಿತು ನಿಮ್ಮ ಅಭಿಪ್ರಾಯವೇನು?

ಆರ್ಥಿಕ

೧೨. ನಿಮ್ಮ ಮನೆಯಲ್ಲಿನ ಸದಸ್ಯರು ಯಾವ ಯಾವ ದುಡಿಮೆಗಳಲ್ಲಿ ತೊಡಗಿಸಿಕೊಂಡಿದ್ದಾರೆ?

೧೩. ಹೆಚ್ಚು ಆದಾಯ ಬರುವ ದುಡಿಮೆಗಳಲ್ಲಿ ಕುಟುಂಬದವರು ತೊಡಗಿಸಿಕೊಂಡಿದ್ದಾರಾ?

೧೪. ಕುಟುಂಬದ ಮಹಿಳೆಯರು ಯಾವ ಯಾವ ದುಡಿಮೆಗಳಲ್ಲಿ ತೊಡಗಿಸಿಕೊಂಡಿದ್ದಾರೆ?

೧೫. ದುಡಿಮೆಯಿಂದ ಬರುವ ಆದಾಯವನ್ನು ನಿಮ್ಮ ಸ್ವಂತಕ್ಕೆ ಬಳಸುತ್ತೀರಾ ಅಥವಾ ಕುಟುಂಬದ ನಿರ್ವಹಣೆಗೆ ಬಳಸುತ್ತೀರಾ?

೧೬. ದುಡಿಮೆಯಿಂದ ಬರುವ ಆದಾಯವನ್ನು ನಿಮ್ಮ ಗಂಡನ ಅಥವಾ ಮನೆಯ ಗಂಡಸರ ಕೈಯಲ್ಲಿ ತಂದುಕೊಡಬೇಕೆಂಬ ನಿಯಮ ಇದೆಯೇ?

೧೭. ಮನೆಯ ಪುರುಷರ ಕೂಲಿ/ಸಂಬಳ ನಿಮಗಿಂತ ಜಾಸ್ತಿ ಇದೆಯೇ? ಇದೆ / ಇಲ್ಲ?

೧೮. ನಿಮಗೆ ಕೃಷಿ ಭೂಮಿ ಇದೆಯೇ?

೧೯. ಯಾವ ಯಾವ ಬೆಳೆಗಳನ್ನು ಬೆಳೆಯುತ್ತೀರಿ?

೨೦. ಮನೆಯ ಹೆಣ್ಣುಮಕ್ಕಳೂ ಕೃಷಿ ದುಡಿಮೆಯಲ್ಲಿ ತೊಡಗಿಸಿಕೊಂಡಿದ್ದಾರೆಯೇ?

೨೧. ಕುಟುಂಬದ ಒಟ್ಟಾರೆಯ ಆದಾಯದಲ್ಲಿ ಹೆಂಗಸರ ದುಡಿಮೆ ಹೆಚ್ಚಾಗಿದೆಯೋ ಅಥವಾ ಗಂಡಸರದೋ?

ಶಿಕ್ಷಣ

೨೨. ನಿಮ್ಮ ಮನೆಯಲ್ಲಿ ಎಷ್ಟು ಜನ ಓದು ಬರಹ ಕಲಿತಿದ್ದಾರೆ?

೨೩. ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತೀರಾ?

೨೪. ನಿಮ್ಮ ವಿದ್ಯಾರ್ಹತೆ ಎಲ್ಲಿಯವರೆಗೆ ಆಗಿದೆ? ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ಪಿಯುಸಿ, ಪದವಿ, ಸ್ನಾತಕೋತರ

೨೫. ನೀವು ನಿರ್ವಹಿಸುವ ಸರ್ಕಾರಿ ಕೆಲಸ ಯಾವುದು?

೧. ಶಿಕ್ಷಕಿ

೨. ಅಂಗನವಾಡಿ ಕಾರ್ಯಕರ್ತೆ

೩. ಅಡುಗೆಯವಳು

೪. ದಾದಿ

೫. ಡಾಕ್ಟರ

೨೬. ಮಹಿಳೆಯಾಗಿ, ಮಹಿಳೆಯರು ಹೇಗಿರಬೇಕು ಎಂದು ನೀವು ಬಯಸುತ್ತೀರಿ?

೧. ಗೃಹಿಣಿಯಾಗಿರಬೇಕು

೨. ಉದ್ಯೋಗಸ್ಥೆಯಾಗಿರಬೇಕು

೩. ರಾಜಕಾರಣಿಯಾಗಿರಬೇಕು

೪. ಸಮಾಜ ಸೇವಕಿಯಾಗಿರಬೇಕು

ಮಾಧ್ಯಮ

೨೭. ನಿಮ್ಮ ಮನೆಯಲ್ಲಿ ವಿದ್ಯುತ್ ವ್ಯವಸ್ಥೆ ಇದೆಯಾ? ಇದೆ / ಇಲ್ಲ?

೨೮. ನಿಮ್ಮ ಮನೆಯಲ್ಲಿ ವಿದ್ಯುತ್ ಉಪಕರಣಗಳಿವೆಯಾ?

೨೯. ಇದ್ದರೆ ಅವು ಯಾವುವು?

೩೦. ನಿಮ್ಮ ಮನೆಯಲ್ಲಿ ಟಿವಿ ಇದೆಯಾ? ಇದೆ / ಇಲ್ಲ?

೩೧. ನಿಮ್ಮ ಮನೆಯ ಟಿವಿ ಗೆ ಕೇಬಲ ವ್ಯವಸ್ಥೆ ಇದೆಯಾ?

೩೨. ಯಾವ ಕೇಬಲ ವ್ಯವಸ್ಥೆಯಿದೆ? (ತಂತಿ ಅಥವಾ ಕೊಡೆ)

೩೩. ನೀವು ನೋಡುವ ಕಾರ್ಯಕ್ರಮಗಳು ಯಾವುವು?

೩೪. ನಿಮಗೆ ಇಷ್ಟವಾಗುವ ಚಾನೆಲ್ಲುಗಳು (ವಾಹಿನಿ) ಯಾವುವು?

೩೫. ಯಾವ ಯಾವ ಭಾಷೆಯ ಚಾನೆಲ್ಲುಗಳನ್ನು ವೀಕ್ಷಿಸುತ್ತೀರಿ?

೧. ಕನ್ನಡ ೨. ಹಿಂದಿ ೩. ತೆಲುಗು ೪. ಮರಾಠಿ

೩೬. ನೀವು ಧಾರವಾಹಿಗಳನ್ನು ನೋಡುತ್ತೀರಾ?

೩೭. ಯಾವ ಯಾವ ಧಾರವಾಹಿಗಳನ್ನು ನೋಡುತ್ತೀರಾ?

೩೮. ನಿಮಗೆ ಇಷ್ಟವಾಗುವ ಧಾರವಾಹಿಗಳು ಯಾವುವು?

೩೯. ನಿಮಗೆ ಇಷ್ಟವಾಗುವ ಇತರೆ ಕಾರ್ಯಕ್ರಮಗಳು ಯಾವುವು?

೪೦. ಟಿ.ವಿ ನೋಡಲು ದಿನದಲ್ಲಿ ಎಷ್ಟು ಗಂಟೆ ನಿಗದಿಪಡಿಸುತ್ತೀರಿ?

೪೧. ಕುಟುಂಬ ಸಮೇತ ಟಿ.ವಿ ನೋಡುತ್ತೀರಾ?

೪೨. ನಿಮ್ಮ ಮಕ್ಕಳಿಗೆ ಟಿ. ವಿ ನೋಡಲು ಎಷ್ಟು ಗಂಟೆ ನಿಗದಿಪಡಿಸುತ್ತೀರಿ?

೪೩. ನಿಮ್ಮ ಮಕ್ಕಳು ಯಾವ ಯಾವ ಕಾರ್ಯಕ್ರಮಗಳನ್ನು ನೋಡಬೇಕೆಂದು ನೀವು ಬಯಸುತ್ತೀರಿ?

೪೪. ನಿಮ್ಮ ಮಕ್ಕಳ ಬೆಳವಣಿಗೆಗೆ ಟಿ.ವಿ ಕಾರ್ಯಕ್ರಮಗಳು ಪೂರಕವೋ ಅಥವಾ ಮಾರಕವೋ?

೪೫. ಪೂರಕವಾಗಿದ್ದರೆ ಹೇಗೆ? ಮಾರಕವಾಗಿದ್ದರೆ ಹೇಗೆ?

೪೬. ಸಾಂಪ್ರದಾಯಿಕತೆ ಮತ್ತು ಆಧುನಿಕತೆ ಎರಡರಲ್ಲಿ ಯಾವುದಕ್ಕೆ ಬೆಂಬಲ ಕೊಡುತ್ತೀರಿ? ಮತ್ತು ಯಾಕೆ?

೪೭. ಧಾರಾವಾಹಿಗಳಲ್ಲಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆ ಯಾವುದನ್ನು ಹೆಚ್ಚಾಗಿ ತೋರಿಸಲಾಗುತ್ತದೆ?

೪೮. ಸದಾ ಅಳುವ ಹೆಣ್ಣನ್ನು ನೀವು ನೋಡಬಯಸುತ್ತೀರಾ? ಅಥವಾ ಎಲ್ಲ ಕಷ್ಟಗಳನ್ನು ಎದುರಿಸಿ ದಿಟ್ಟತನವನ್ನು ತೋರಿಸುವ ಹೆಣ್ಣನ್ನು ನೋಡಬಯಸುತ್ತೀರಾ?

೪೯. ಧಾರಾವಾಹಿಗಳಿಂದ ಸಮಾಜಕ್ಕೆ ಸಂದೇಶ ದೊರೆಯುತ್ತಿದೆ ಅಂತ ಅನಿಸುತ್ತದೆಯಾ?

೫೦. ಧಾರಾವಾಹಿಗಳನ್ನು ಯಾಕೆ ನೋಡುತ್ತೀರಾ?

೧. ಸಮಯ ಕಳೆಯಲು

೨. ಮನರಂಜನೆಗಾಗಿ

೩. ಹವ್ಯಾಸವಾಗಿರುವುದರಿಂದ

೪. ನೈಜತೆ ಇರುತ್ತದೆ

೫. ಜ್ಞಾನಾರ್ಜನೆಗೆ ಸಹಾಯಕ

೬. ಕುತೂಹಲಕ್ಕಾಗಿ

೭. ಕೇವಲ ಕಾಲ್ಪನಿಕವಾಗಿರುತ್ತದೆ

೫೧. ಧಾರಾವಾಹಿಗಳಲ್ಲಿ ಬರುವ ಮಹಿಳಾ ಪಾತ್ರಗಳ ಕುರಿತು ನಿಮ್ಮ ಅಭಿಪ್ರಾಯವೇನು?

೫೨. ಧಾರಾವಾಹಿಗಳು ಹೇಗಿದ್ದರೆ ಚೆನ್ನ?

೫೩. ಮನೋರಂಜನೆಯ ಜೊತೆಗೆ ಬುದ್ದಿಗೆ ಕೆಲಸ ಕೊಡುವಂತಹ ಯಾವುದಾದರು ಕಾರ್ಯಕ್ರಮಗಳಿದ್ದರೆ ವಿವರಿಸಿ?

೫೪. ಧಾರಾವಾಹಿಗಳನ್ನು ಹೊರತುಪಡಿಸಿ, ನೀವು ಇಷ್ಟಪಡುವ ಕಾರ್ಯಕ್ರಮಗಳು ಯಾವುವು?

೧. ಅಡುಗೆ ಮಾಡುವುದು

೨. ಮನೆಯ ಅಲಂಕಾರ

೩. ಸ್ವಂತ ಅಲಂಕಾರ

೪. ಉಡುಪುಗಳ ಬಗ್ಗೆ ಕಾಳಜಿ

೫. ಮಕ್ಕಳ ಕಾರ್ಯಕ್ರಮಗಳು

೬. ಕೃಷಿಗೆ ಸಂಬಂಧಿಸಿದ ಕಾರ್ಯಕ್ರಮಗಳು

೭. ವಾರ್ತೆಗಳು

೮. ರಿಯಾಲಿಟಿ ಶೋಗಳು

೯. ಜ್ಯೋತಿಷ್ಯ

೧೦. ಚಲನಚಿತ್ರ

೫೫. ಮಹಿಳೆಯರ ಅಭಿವೃದ್ದಿಗೆ ಧಾರವಾಹಿಗಳು ಸಹಾಯಕವಾಗಿವೆ?

೫೬. ಧಾರಾವಾಹಿಗಳಿಂದ ಸಮಾಜದಲ್ಲಿ ಸುಧಾರಣೆ ಸಾಧ್ಯವಿದೆಯೇ?

□□□

೩. ಮಾಹಿತಿ ನೀಡಿದವರ ವಿವರ

ಹೆಸರು	ವಯಸ್ಸು	ವೃತ್ತಿ	ಊರು
೧. ಶ್ರೀಮತಿ ನಿಂಗಮ್ಮ ಗಂಡ ಮರೆಪ್ಪ	೩೮	ಗೃಹಿಣಿ	ಮೂಡಬಾಳ ಯಾದಗಿರಿ ಜಿಲ್ಲೆ
೨. ರೇಣುಕಾ ಗಂಡ ಲಕ್ಷ್ಮಣ	೪೦	ಗೃಹಿಣಿ	"
೩. ಯಲ್ಲಮ್ಮ ಗಂಡ ಮಿಟ್ಟುನಾಯ್ಕ	೪೩	ಗೃಹಿಣಿ	"
೪. ಬಸಮ್ಮ ಗಂಡ ಯಶವಂತ	೫೦	ಸೂಲಗಿತ್ತಿ	"
೫. ಸುಲೋಚನಾ ಗಂಡ ಹಣಮಂತ	೩೩	ಗೃಹಿಣಿ	"
೬. ಯಮನಮ್ಮ ಗಂಡ ಅಂಬಣ್ಣ	೪೦	ತರಕಾರಿ ವ್ಯಾಪಾರಿ	"
೭. ತಾಯಮ್ಮ ಗಂಡ ಎರ್‍ರಪ್ಪ	೩೮	ತರಕಾರಿ ವ್ಯಾಪಾರಿ	"
೮. ಹನುಮಕ್ಕ ಗಂಡ ನಾಗೇಶ	೨೮	ತರಕಾರಿ ವ್ಯಾಪಾರಿ	"
೯. ಯಲ್ಲವ್ವ ಗಂಡ ನಾಗರಾಜ	೩೦	ತರಕಾರಿ ವ್ಯಾಪಾರಿ	"
೧೦. ಮರೆಮ್ಮ ಗಂಡ ಮಲ್ಲಯ್ಯ	೫೭	ತರಕಾರಿ ವ್ಯಾಪಾರಿ	ಮೂಡಬಾಳ ಯಾದಗಿರಿ ಜಿಲ್ಲೆ
೧೧. ಅಪ್ಜಲಬೀ ಗಂಡ ಖಾಜಾಪಟೇಲ	೬೦	ಸೂಲಗಿತ್ತಿ	ರಂಗಂಪೇಟೆ
೧೨. ರಸೂಲಬೀ ಗಂಡ ಮೆಹಬೂಬಸಾಬ	೬೦	ಸೂಲಗಿತ್ತಿ	"
೧೩. ಮರೆಮ್ಮ ಗಂಡ ಬಾಲಪ್ಪ	೫೮	ಸೂಲಗಿತ್ತಿ	"
೧೪. ರೇಷ್ಮಾ ಗಂಡ ಚಾಂದಪಾಷಾ	೨೮	ಸೂಲಗಿತ್ತಿ	"

೧೫. ಆಸ್ಮಾ ಗಂಡ ಹುಸೇನಸಾಬ	೨೫	ಟೇಲರಿಂಗ್	”
೧೬. ಅರ್ಷಿಯಾಬೇಗಂ ಗಂಡ ಸಲ್ಮಾನ	೨೫	ಟೇಲರಿಂಗ್	”
೧೭. ಸೋಫಿಯಾ ಬೇಗಂ ಗಂಡ ರಸೂಲಸಾಬ	೨೨	ಸೂಲಗಿತ್ತಿ	”
೧೮. ಮೆಹರುನ್ನಿಸಾ ಗಂಡ ಚಾಂದಪಟೇಲ	೨೮	ಸೂಲಗಿತ್ತಿ	ಮುದ್ನಾಳ ಗ್ರಾಮ
೧೯. ಸಾದಿಯಾಬೇಗಂ ಗಂಡ ರಸೂಲಸಾಬ	೨೭	ಸೂಲಗಿತ್ತಿ	”
೨೦. ರಿಯಾನಾಬೇಗಂ ಗಂಡ ಸಿರಾಜುದ್ದೀನ	೨೫	ಸೂಲಗಿತ್ತಿ	”
೨೧. ಫರ್ಹಾ ಗಂಡ ಗೌಸಸಾಬ	೩೫	ಖಾನಾವಳಿ	”
೨೨. ಖತಿಜಾಬೇಗಂ ಗಂಡ ಚಾಂದಸಾಬ	೩೦	ಖಾನಾವಳಿ	”
೨೩. ಹುಲಗಮ್ಮ ಗಂಡ ನಾಗರಾಜನಾಯ್ಕ	೪೪	ಶಿಕ್ಷಕಿ	”
೨೪. ಅನ್ನಪೂರ್ಣಮ್ಮ ಗಂಡ ಭೀಮಪ್ಪ	೪೮	ಶಿಕ್ಷಕಿ	”
೨೫. ಜ್ಯೋತಿಬಾಯಿ ಗಂಡ ಮರೆಪ್ಪ	೫೦	ವ್ಯವಸಾಯ	ಭೀಮರಾಯನಗುಡಿ
೨೬. ಶರಣಮ್ಮ ಗಂಡ ಬಸಯ್ಯ	೫೫	ಶಿಕ್ಷಕಿ	”
೨೭. ಸುನೀತಾ ಗಂಡ ಶರಣಯ್ಯ	೩೮	ಶಿಕ್ಷಕಿ	”
೨೮. ಮೋಹಿನಿ ಗಂಡ ಭದ್ರಯ್ಯ	೩೭	ಶಿಕ್ಷಕಿ	”
೨೯. ದಾಕ್ಷಾಯಿಣಿ ಗಂಡ ಇರಯ್ಯ	೩೪	ಶಿಕ್ಷಕಿ	”
೩೦. ಅಲಮೇಲು ಗಂಡ ಮನೋಹರ	೬೯	ಶಿಕ್ಷಕಿ	”
೩೧. ವೆಂಕಟಲಕ್ಷ್ಮಮ್ಮ ಗಂಡ ವಿಠೋಬಾ	೬೫	ಶಿಕ್ಷಕಿ	”
೩೨. ಸುನೀತಾ ಗಂಡ ಅರುಣದೇಸಾಯಿ	೩೬	ಶಿಕ್ಷಕಿ	”
೩೩. ಮಾಣಿಕಮ್ಮ ಗಂಡ ಮಾಣಿಕಪ್ಪ	೫೮	ವ್ಯವಸಾಯ	ಗುರುಮಠಕಲ
೩೪. ಪುಷ್ಪಾವತಿ ಗಂಡ ಆನಂದ	೩೮	ವ್ಯವಸಾಯ	”
೩೫. ಜ್ಯೋತಿ ಗಂಡ ಆನಂದ	೨೫	ವ್ಯವಸಾಯ	”
೩೬. ಸಾವಿತ್ರಿಬಾಯಿ ಗಂಡ ಶಾಣಪ್ಪ	೨೫	ವ್ಯವಸಾಯ	ಗೋಗಿಪೇಠ
೩೭. ಮಂಜುಳಾ ಗಂಡ ಹನುಮಂತರಾಯ	೩೫	ವ್ಯವಸಾಯ	”
೩೮. ರೇಣುಕಾ ಗಂಡ ಭಾಸ್ಕರ್	೩೪	ವ್ಯವಸಾಯ	”
೪೦. ವಿಜಯಲಕ್ಷ್ಮಿ ಗಂಡ ಪ್ರಹ್ಲಾದರಾವ	೬೦	ಗೃಹಿಣಿ	”
೪೧. ಲಕ್ಷ್ಮಿ ಗಂಡ ಕೃಷ್ಣಮೂರ್ತಿ	೪೮	ಗೃಹಿಣಿ	ಶಹಾಪುರ

೪೨. ಶೃತಿ ಗಂಡ ರಾಘವೇಂದ್ರ	೫೦	ಗೃಹಿಣಿ	”
೪೩. ಸುಶೀಲಾ ಗಂಡ ನಾಗರಾಜ	೫೧	ಗೃಹಿಣಿ	”
೪೪. ಅನುಸೂಯಾ ಗಂಡ ಭೀಮಶ್ಯಾ	೩೮	ಗೃಹಿಣಿ	”
೪೫. ಶ್ರೀಲತಾ ಗಂಡ ಗಿರಿಧರಶಾಸ್ತ್ರಿ	೨೫	ಅಡುಗೆಯವಳು	ಶಹಾಪುರ
೪೬. ಉಷಾಬಾಯಿ ಗಂಡ ಮರೆಪ್ಪ	೨೭	ಅಡುಗೆಯವಳು	”
೪೭. ಅನುಸುಯಮ್ಮ ಗಂಡ ಬೀರಪ್ಪನಾಯ್ಕ	೨೮	ವ್ಯವಸಾಯ	”
೪೮. ಲಕ್ಷ್ಮಿ ಗಂಡ ಹಣಮಂತ	೨೯	ಗೃಹಿಣಿ	ಗುಲಬರ್ಗಾ
೪೯. ರೇಣುಕಾ ಗಂಡ ವಾಮನರಾವ ಕುಲ್ಕರ್ಣಿ	೩೦	ಗೃಹಿಣಿ	”
೫೦. ಆಶಾರಾಣಿ ಗಂಡ ಮಹಾಂತೇಶ	೩೬	ಗೃಹಿಣಿ	”
೫೧. ಅಂಜಲಿ ಗಂಡ ರಾಮನಾಥ	೩೫	ಗೃಹಿಣಿ	”
೫೨. ದೀಪಾ ಗಂಡ ಅಭಯಶಾಸ್ತ್ರಿ	೨೯	ಗೃಹಿಣಿ	”
೫೩. ಜಿಬಾ ಗಂಡ ಅಲಿಖಾನ	೨೪	ಗೃಹಿಣಿ	”
೫೪. ಅಂಜುಂ ಗಂಡ ಪರ್ವೆಜ	೨೮	ಗೃಹಿಣಿ	”
೫೫. ರುಕ್ಸಾನಾ ಗಂಡ ಖಾಲಿದ	೨೧	ದಾದಿ	ಗುಲಬರ್ಗಾ

❑❑❑

೪. ಪರಾಮರ್ಶನ ಗ್ರಂಥಗಳು

೧. ಅಂದನೂರು ಶೋಭಾ ಮತ್ತು ಶ್ರೀಲಕ್ಷ್ಮಿ, **ಮಹಿಳೆಯ ಮುನ್ನಡೆ,** ವಿ.ಜಿ. ಮಾನಿನಿ ಪ್ರಕಾಶನ, ಬೆಂಗಳೂರು, ೧೯೮೮.

೨. ಅನುಸೂಯ ಕಾಂಬಳೆ, (ಸಂ) **ವಿಚಾರ ಸಾಹಿತ್ಯ ಮತ್ತು ಹೆಣ್ಣು,** ವೈಚಾರಿಕ ಸಾಹಿತ್ಯ ಪ್ರಕಾಶನ ಬೆಳಗಾವಿ, ೧೯೯೯.

೩. ಇಂದಿರಾ ಆರ್., **ಸ್ತ್ರೀವಾದಿ ದಿಕ್ಸೂಚಿ,** ಸಮತಾ ಅಧ್ಯಯನ ಕೇಂದ್ರ, ಮೈಸೂರು, ೧೯೯೫.

೪. ಇಂದಿರಾ ಕೃಷ್ಣಪ್ಪ, **ನಮ್ಮ ಮಗಳು ನಮ್ಮ ಶಕ್ತಿ,** ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ಬೆಂಗಳೂರು: ೨೦೦೪.

೫. ಏಂಗಲ್ಸ್ ಅನು: ಗೋಪಾಲಕೃಷ್ಣರಾವ್ ಕೆ.ಎಲ್., **ಕುಟುಂಬ, ಖಾಸಗಿ, ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ,** ಪ್ರಗತಿ ಪ್ರಕಾಶನ ಮಾಸ್ಕೋ, ೧೯೮೦.

೬. ಒಡೆಯರ್ ಡಿ. ಹೆಗಡೆ., ಎನ್.ಅನ್ನಪೂರ್ಣೇಶ್ವರಿ, **ಮಹಿಳಾ ಅಧ್ಯಯನ ಆರ್ಥಿಕ ನೆಲೆಗಳು ಮತ್ತು ಆಯಾಮಗಳು,** ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ ಮೈಸೂರು, ೨೦೦೩

೭. ಕಮಲಾ ಹಂಪನಾ, **ಬೊಗಸೆ ಮಹಿಳೆ ಸುತ್ತಮುತ್ತ,** ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

೮. ಕಿಶೋರಿನಾಯಕ: ಸ್ತ್ರೀವಾದ ನೆಲೆಗಳು ಮತ್ತು ನಿಲುವುಗಳು: ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ೧೯೯೯.

೯. ಕುಲಕರ್ಣಿ ಆರ್.ಜಿ. (ಅನು), **ಸ್ತ್ರೀಶಕ್ತಿ ಮಾಲಶ್ರೀ ಅರವಿಂದರು ಮತ್ತು ಶ್ರೀಮಾತೆ,** ದ.ರಾ. ಬೇಂದ್ರೆ, ಸ್ನೇಹಮಹಲ, ಬೆಂಗಳೂರು, ೧೯೯೮.

೧೦. ಗಾಂಧಿ ಎಂ.ಕೆ., **ಮಹಿಳೆಯರು: ಗಾಂಧಿಸ್ಮಾರಕ ನಿಧಿಯ ಕರ್ನಾಟಕ ಶಾಖೆ,** ೧೯೬೬.

೧೧. ಗಾಯಿತ್ರಿ ಎನ್., **ಮಹಿಳೆ ಬಿಡುಗಡೆಯ ಹಾದಿಯಲ್ಲಿ,** ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು, ೧೯೯೮.

೧೨. ಗಾಯಿತ್ರಿ ನಾವಡ, **ಮಹಿಳಾ ಸಂಕಥನ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೧೩. ಗಾಯಿತ್ರಿ ನಾವಡ, **ವಿರಚನೆ,** ಎನ್.ಆರ್.ಎ.ಎಮ್.ಎಚ್. ಪ್ರಕಾಶನ, ದಕ್ಷಿಣ ಕನ್ನಡ, ೧೯೯೭.

೧೪. ಗೋಪಾಲರಾವ ಪಂಡಿತ ವೈ.ಎಲ್., **ಭಾರತೀಯ ನಾರಿ ಅಂದು ಇಂದು,** ಭೈರವ ಪಬ್ಲಿಕೇಷನ್ಸ್, ಚಿಕ್ಕಮಂಗಳೂರು, ೨೦೦೦.

೧೫. ಗೌಡ ವಿ.ಎಚ್. ಶ್ರೀಮತಿ ಯಶೋಧಾ, **ಮಹಿಳೆ ಮತ್ತು ಕಾನೂನು,** ರಾಣಿಟ್ರಸ್ಟ್, ಮೈಸೂರು, ೨೦೦೪.

೧೬. ಚಂದ್ರಶೇಖರ ಟಿ.ಆರ್., **ಮಹಿಳೆ, ಆರ್ಥಿಕತೆ ಮತ್ತು ಅಭಿವೃದ್ಧಿ,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೧೭. ಚಂದ್ರಪೂಜಾರಿ ಎಂ., **ಸಮಾಜ ಸಂಶೋಧನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೮. ಚಂದ್ರಶೇಖರ ಬಿ.ಎಸ್., **ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಹಂಪಿ, ೨೦೦೧.

೧೯. ಚಂದ್ರಶೇಖರ ಬಿ.ಎಸ್., **ಸಂವಹನ ಮಾಧ್ಯಮಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

೨೦. ಜ್ಯೋತ್ಸ್ನಾಕಾಮತ್, **ಮಹಿಳೆ ಅಂದು-ಇಂದು,** ಪ್ರೇಮಸಾಯಿ ಪ್ರಕಾಶನ, ಬೆಂಗಳೂರು, ೨೦೦೧.

೨೧. ತೇಜಸ್ವಿನಿ ನಿರಂಜನ್, ಸೀಮಂತಿನಿ ನಿರಂಜನ (ಸಂ), **ಸ್ತ್ರೀವಾದಿ ಸಾಹಿತ್ಯ ವಿಮರ್ಶೆ,** ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೪.

೨೨. ಜ್ಯೋತಿ ಶಶಿಕುಮಾರ, **ಮಹಿಳಾ ಸಾಮಾಜಿಕತೆ,** ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೩. ನೀಲಮ್ಮ ಕತ್ನಳ್ಳಿ, **ಮಹಿಳೆ ಹಲವು ಮುಖಗಳು,** ಶ್ರೀ ರೇಣುಕಾ ಪ್ರಕಾಶನ, ಗುಲಬರ್ಗಾ, ೧೯೯೭.

೨೪. ನೇಮಿಚಂದ್ರ (ಸಂ), **ಮಹಿಳಾ ಲೋಕ,** ನವಕರ್ನಾಟಕ ಪ್ರಕಾಶನ, ೨೦೦೫.

೨೫. ನಾಯಕ ಡಿ.ಬಿ., **ಸಮೂಹ ಮಾಧ್ಯಮಗಳು ಮತ್ತು ಸಮಾಜ,** ಬಂಜಾರ ಪ್ರಕಾಶನ, ಗುಲಬರ್ಗಾ, ೨೦೦೩.

೨೬. ನಾಗರಾಜ ಕೆ.ವಿ, **ಸಮೂಹ ಮಾಧ್ಯಮಗಳು ಮತ್ತು ಸಮಾಜ,** ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ೧೯೯೭

೨೭. ನೇಮಿಚಂದ್ರ, **ಮಹಿಳಾ ಅಧ್ಯಯನ,** ಅಂಕಿತ ಪ್ರಕಾಶನ, ಬೆಂಗಳೂರು, ೨೦೦೧.

೨೮. ಪೂರ್ಣಿಮಾ ಟಿ.ಸಿ., **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨-೦೩.

೨೯. ಬರಗೂರು ರಾಮಚಂದ್ರಪ್ಪ, **ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ,** ಅಂಕಿತ ಪ್ರಕಾಶನ, ಬೆಂಗಳೂರು, ೨೦೦೧.

೩೦. ಬಸವರಾಜ ಸಬರದ, **ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೧೯೯೭

೩೧. ಪ್ರೀತಿಶುಭಚಂದ್ರ, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೩೨. ಮೀರಾ ಎಲ್.ಜಿ. (ಅನು), ಮಾನುಷೀಯಮಾತು (ಮೂಲ), **ಮಧುಕೇಶ್ವರ,** ಅಕ್ಷರ ಪ್ರಕಾಶನ, ೧೯೯೭

೩೩. ರೋಹಿಣಿ ಬಿ.ಎಂ., **ಸ್ತ್ರೀ ಸಂವೇದನೆ,** ಹೇಮಾಂಶು ಪ್ರಕಾಶನ, ಮಂಗಳೂರು, ೧೯೯೫.

೩೪. ರೋಹಿಣಿ ಬಿ.ಎಂ., **ಸ್ತ್ರೀ, ಸಂಸ್ಕೃತಿ, ಶಿಕ್ಷಣ,** ಹೇಮಾಂಶು ಪ್ರಕಾಶನ, ಮಂಗಳೂರು. ೨೦೦೦.

೩೫. ವೆಂಕಟಲಕ್ಷ್ಮೀ ಬಿ.ಎಸ್., **ಬದುಕುಬವಣೆ ಭರವಸೆ,** ಎನ್.ಟಿ.ಶಾಂ ಪ್ರಕಾಶನ, ಬೆಂಗಳೂರು.

೩೬. ವೆಂಕೋಬರಾವ ಡಿ., **ನ್ಯಾಯಕ್ಕಾಗಿ ಮಹಿಳೆಯರ ಹೋರಾಟ,** ದಿವ್ಯಾಚಂದ್ರ ಪ್ರಕಾಶನ, ಬೆಂಗಳೂರು, ೨೦೦೫.

೩೭. ವಿಜಯಶ್ರೀ ಸಬರದ (ಸಂ), **ಮಹಿಳೆ ಶೋಷಣೆ ಸವಾಲುಗಳು,** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೩೮. ವಿಜಯಾ, **ನಿಜಧ್ಯಾನ,** ಪ್ರೆಸ್‌ಕ್ಲಬ್ ಪ್ರಕಾಶನ, ಬೆಂಗಳೂರು, ೨೦೦೫.

೩೯. ಶಾಂತಾ ಇಮ್ರಾಪುರ, **ಧರ್ಮ ಮಹಿಳೆ ಮತ್ತು ಸಮಾಜ,** ಚೇತನ ಪ್ರಕಾಶನ, ಧಾರವಾಡ, ೨೦೦೧.

೪೦. ಶಾಂತಾ ಇಮ್ರಾಪುರ, **ಮಹಿಳೆ, ಸಾಹಿತ್ಯ ಸಂಸ್ಕೃತಿ,** ಚೇತನಾ ಪ್ರಕಾಶನ, ಧಾರವಾಡ

೪೧. ಶ್ರೀಮತಿ ಎಚ್.ಎಸ್., **ಹೆಣ್ಣುತನ ಎಂಬ ಕಣ್ಕಟ್ಟು,** ಪ್ರಗತಿ ಗ್ರಾಫಿಕ್ಸ್, ಬೆಂಗಳೂರು: ೨೦೧೦.

೪೨. ಶ್ರೀಮತಿ ಎಚ್.ಎಸ್., **ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

೪೩. ಶ್ರೀಮತಿ ಎಚ್.ಎಸ್., **ಸ್ತ್ರೀವಾದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೪೪. ಶೈಲಜಾ ಹಿರೇಮಠ, **ಸ್ತ್ರೀಕಥನ,** ಭುವನ ಪ್ರಕಾಶನ, ಹೊಸಪೇಟೆ, ೨೦೦೩.

೪೫. ಸರೋಜಾ ಕೆ., **ಮಹಿಳೆ ಮತ್ತು ಸಮೂಹ ಮಾಧ್ಯಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೪೬. ಸುನಂದಮ್ಮ ಆರ್., **ಮಹಿಳಾ ಸಂಸ್ಕೃತಿ,** ಸಮತಾ ಅಧ್ಯಯನ ಕೇಂದ್ರ, ಮೈಸೂರು, ೨೦೦೫.

೪೭. ಹಾ.ಮ. ನಾಗಾರ್ಜುನ (ಸಂ), **ಸ್ತ್ರೀವಾದಿ ಚಿಂತನೆಗಳು**(ಮೂಲ) ಕೇಶವಶರ್ಮ ಕೆ., ದೇಸಿ ಪ್ರಕಾಶನ ದೇಸಿ ಪುಸ್ತಕ ಪ್ರಕಾಶನ, ಬೆಂಗಳೂರು ೨೦೧೦

೪೮. ಗೀತಾ ಪ್ರಸಾದ್, **ಆಧುನಿಕ ಮಹಿಳಾ ಅಭಿವ್ಯಕ್ತಿ,** ಧಾತ್ರಿ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೯.

೪೯. ಲಕ್ಷ್ಮೀಪತಿ ಸಿ.ಜಿ., **ಕ್ಯಾಸ್ಟ್ ಕೆಮಿಸ್ಟ್ರಿ,** ಸಖಿ ಪ್ರಕಾಶನ, ಹೊಸಪೇಟೆ, ೨೦೦೭.

೫೦. ಜ ಹೊ ನಾ., **ಮನುಸ್ಮೃತಿ ಮತ್ತು ದಲಿತರು,** ಲಡಾಯಿ ಪ್ರಕಾಶನ, ಗದಗ, ೨೦೦೯.

೫೧. ಸುಜ್ಞಾನಮೂರ್ತಿ ಬಿ (ಅನು): **ಕುಟುಂಬ ವ್ಯವಸ್ಥೆ ಮಾರ್ಕ್ಸ್‌ವಾದಿ-ಸ್ತ್ರೀವಾದ** (ಮೂಲ), ಓಲ್ಗಾ ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೦.

೫೨. ಬಿ.ಕೆ.ರವಿ ಸತ್ಯಪ್ರಕಾಶ ಎಂ.ಆರ್.(ಸಂ), **ಮಾಧ್ಯಮ ಉದ್ಯಮ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

ಮಾಸಿಕ ಪತ್ರಿಕೆಗಳು

೧. **ನಮ್ಮ ಮಾನಸ,** ಸಂಪುಟ-೫, ಅಕ್ಟೋಬರ್ ೨೦೧೧. ಸಂಚಿಕೆ-೬

೨. **ಹೊಸತು ವಿಶೇಷ ಸಂಚಿಕೆ,** ಜನವರಿ ೨೦೧೦. ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩. **ಹೊಸತು**, ಮಾರ್ಚ್, ಜುಲೈ, ಆಗಸ್ಟ್, ಸೆಪ್ಟಂಬರ್ ತಿಂಗಳ ಸಂಚಿಕೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪. **ಹೊಸತು ವಿಶೇಷ ಸಂಚಿಕೆ,** ಜನವರಿ ೨೦೧೧.

ಸಂಚಿಕೆಗಳು

೧. **ಮಹಿಳಾ ಅಧ್ಯಯನ,** ಎಚ್.ಎಸ್.ಶ್ರೀಮತಿ (ಸಂ), ಪ್ರಸಾರಾಂಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨. **ಮಹಿಳಾ ಅಧ್ಯಯನ,** ವಿಶೇಷ ಸಂಚಿಕೆ, ಎಚ್.ಎಸ್.ಶ್ರೀಮತಿ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೩. **ಮಹಿಳಾ ಅಧ್ಯಯನ, ಸಂಪುಟ–೫, ಸಂಚಿಕೆ–೧-೨** ಎಂ.ಉಷಾ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೪. **ಮಹಿಳಾ ಅಧ್ಯಯನ, ಸಂಪುಟ–೬, ಸಂಚಿಕೆ–೧-೨,** ಶಿವಾನಂದ ಎಸ್ ವಿರಕ್ತಮಠ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೫. **ಮಹಿಳಾ ಅಧ್ಯಯನ, ಸಂಪುಟ–೯, ಸಂಚಿಕೆ–೨,** ಶೈಲಜಾ ಹಿರೇಮಠ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ತ್ರೈಮಾಸಿಕ

ತುಳುವ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೨೦೦೯.

ದಿನಪತ್ರಿಕೆಗಳು

ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ

ವಾರಪತ್ರಿಕೆ

ಸುಧಾ (೨೦೦೮-೨೦೦೯-೨೦೧೦ರ ಪತ್ರಿಕೆಗಳು) ತರಂಗ, ಕರ್ಮವೀರ, ಮಾಸಪತ್ರಿಕೆಗಳು ತರಂಗ, ಕರ್ಮವೀರ.

ಇಂಗ್ಲೀಷ್ ಪುಸ್ತಕಗಳು

1. **Text book of mass communication and media,** Uma joshi, anmol publication pvt ltd., New Delhi, 1999.

2. **The mass communication,** Arvindkumar, anmol publication, 1999.

3. **Questioning the media A Critical introduction,** (Ed) Johndowning, Alimohammadi, annabella sreberny mohammad.

4. **Media and Women,** N.K. Verma, Mohit publication Newdelhi, 2006.

5. **Modernity, Feminisum and women Empowerment,** (Ed) Abha avasthi, A.K. Srivastava.

6. **Indian women vol–3,** Anita Arya, Gyan publicationg house New Delhi, 2000.

7. **Encyclopaedia of Gender Equality & development, vol.-1,** (Ed), C.P. Yadav Anmol publications pvt ltd, New Delhi, 2008.

8. **Women & Media,** Pooja kataria, regal publications New Delhi, 2007.

9. **Mass communication in india,** Keval J. Kumar, Jaico publishing house, Mumbai, 2006.

❑❑❑

೫. ಛಾಯಾಚಿತ್ರಗಳು

ಆಯ್ದ ಕನ್ನಡ ಧಾರಾವಾಹಿಗಳು



ಕಲ್ಯಾಣಿ ಧಾರಾವಾಹಿ



ಗೆಜ್ಜೆಪೂಜೆ ಧಾರಾವಾಹಿ



ಲಕುಮಿ ಧಾರಾವಾಹಿ



ಇದ್ರ ಇರಬೇಕು ನಿನ್ನಂಗ ಧಾರಾವಾಹಿ



ಚಿತ್ರಲೇಖ ಧಾರಾವಾಹಿ



ಜೋಗುಳ ಧಾರಾವಾಹಿ



ಸಾಥ್ ನಿಭಾನಾ ಸಾಥಿಯಾ ಧಾರಾವಾಹಿ

ಆಯ್ದ ಹಿಂದಿ ಧಾರಾವಾಹಿಗಳು



ದಿಯಾ ಔರ್ ಬಾತಿ ಹಮ್ ಧಾರಾವಾಹಿ



ಕ್ಯೂಂಕಿ ಸಾಸ್ ಭೀ ಕಭೀ ಬಹು ಥೀ ಧಾರಾವಾಹಿ



ಕಹಾನಿ ಘರ್ ಘರ್ ಕೀ ಧಾರಾವಾಹಿ



ಕಸೌಟಿ ಜಿಂದಗೀ ಕೀ ಧಾರಾವಾಹಿ



ನಾ ಆನಾ ದೇಶ್ ಮೇರೆ ಲಾಡೋ ಧಾರಾವಾಹಿ



ಬಾಲಿಕಾ ವಧು ಧಾರಾವಾಹಿ

ರಿಯಾಲಿಟಿ ಶೋಗಳು



ಕಥೆ ಅಲ್ಲ ಜೀವನ ರಿಯಾಲಿಟಿ ಶೋ



ಬದುಕು ಜಟಕಾ ಬಂಡಿ ರಿಯಾಲಿಟಿ ಶೋ



ಇದು ಯಾರು ಬರೆದ ಕಥೆಯೋ ರಿಯಾಲಿಟಿ ಶೋ